ಕರ್ನಾಟಕ ಹಸ್ತಪ್ರತಿ ಭಂಡಾರಗಳು: ಪರಂಪರೆ ಮತ್ತು ವರ್ತಮಾನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ.) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಬಾಣದ ಮಂಜುನಾಥ

ಮಾರ್ಗದರ್ಶಕರು

ಡಾ. ಎಸ್.ಆರ್. ಚನ್ನವೀರಪ್ಪ

ಸಹ ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೭

837

837

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

ಶಂ.ಖಂ.ಕ.ಅಸ್ಪ.
837

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾ...ು.ಹಂಪಿ

AKSHARA GRANTHALAYA
ACC.NO. 135131

ಕರ್ನಾಟಕ ಹಸ್ತಪ್ರತಿ ಭಂಡಾರಗಳು:
ಪರಂಪರೆ ಮತ್ತು ವರ್ತಮಾನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ.,) ಪದವಿಗಾಗಿ
ಸಲ್ಲಿಸಿದ ಮಹಾಪ್ರಬಂಧ)

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಂಶೋಧಕರು
ಬಾಣದ ಮಂಜುನಾಥ

ಮಾರ್ಗದರ್ಶಕರು
ಡಾ. ಎಸ್.ಆರ್. ಚನ್ನವೀರಪ್ಪ
ಸಹ ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೧೭

135131

091.016
BAN K

ಮಾರ್ಗದರ್ಶಕರ ದೃಢೀಕರಣ ಪತ್ರ

ಕರ್ನಾಟಕ ಹಸ್ತಪ್ರತಿ ಭಂಡಾರಗಳು: ಪರಂಪರೆ ಮತ್ತು ವರ್ತಮಾನ ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಹಸ್ತಪ್ರತಿಶಾಸ್ತ್ರ ವಿಭಾಗದ ಮೂಲಕ **ಬಾಣದ ಮಂಜುನಾಥ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ಎಸ್.ಆರ್.ಚನ್ನವೀರಪ್ಪ
ಸಹ ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ:

ಸಂಶೋಧಕರ ಪ್ರಮಾಣ ಪತ್ರ

ಕರ್ನಾಟಕ ಹಸ್ತಪ್ರತಿ ಭಂಡಾರಗಳು: ಪರಂಪರೆ ಮತ್ತು ವರ್ತಮಾನ ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ **ಡಾ.ಎಸ್.ಆರ್.ಚನ್ನವೀರಪ್ಪ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

B. Ma

ಬಾಣದ ಮಂಜುನಾಥ
ಸಂಶೋಧಕ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ:

ಪರಿವಿಡಿ

ಅಧ್ಯಾಯ ಒಂದು ೦೧-೦೭

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ಎರಡು ೦೮-೩೯

ಹಸ್ತಪ್ರತಿ ಭಂಡಾರಗಳಲ್ಲಿ ಚಾರಿತ್ರಿಕ ಸಂಕಥನ

೨.೧. ಪ್ರಸ್ತಾವನೆ

೨.೨. ಗ್ರಂಥಾಲಯದ ಅರ್ಥ, ಉಗಮ ಮತ್ತು ವಿಕಾಸ

೨.೩. ಹಸ್ತಪ್ರತಿ ಭಂಡಾರದ ಅರ್ಥ ಮತ್ತು ಸ್ವರೂಪ

೨.೪. ಹಸ್ತಪ್ರತಿ ಭಂಡಾರಗಳ ಚಾರಿತ್ರಿಕ ಹಿನ್ನೆಲೆ

೨.೪.೧. ಪ್ರಾಚೀನ ಕಾಲ

೨.೪.೨. ಮಧ್ಯಯುಗದ ಕಾಲ

೨.೪.೩. ಆಧುನಿಕ ಕಾಲ

೨.೪.೩.೧. ಕರ್ನಲ್ ಮೆಕೆಂಜಿ

೨.೪.೩.೨. ಲಿಡಾನ್ ಸಂಗ್ರಹ

೨.೪.೩.೩. ಸಿ.ಪಿ. ಬ್ರೌನ್

೨.೪.೩.೪. ಬಿ.ಎಲ್. ರೈಸ್

೨.೪.೩.೫. ಜೆ.ಎಫ್. ಫ್ಲೀಟ್

೨.೪.೩.೬. ಪ್ರಸ್ತುತ ಸಂದರ್ಭ

ಅಧ್ಯಾಯ ಮೂರು ೪೦-೧೨೪

ಹಸ್ತಪ್ರತಿ ಭಂಡಾರಗಳ ವರ್ಗೀಕರಣ

೩.೧. ಸರಕಾರಿ ಹಸ್ತಪ್ರತಿ ಭಂಡಾರಗಳು

೩.೧.೧. ಸಾಂಸ್ಥಿಕ ಹಸ್ತಪ್ರತಿ ಭಂಡಾರಗಳು

೩.೧.೧.೧. ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಮೈಸೂರು

೩.೧.೧.೨. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ

೩.೧.೨. ಸಂಸ್ಕೃತ ಕಾಲೇಜು ಭಂಡಾರಗಳು

೩.೧.೨.೧. ಮೈಸೂರು ಸಂಸ್ಕೃತ ಮಹಾಪಾಠಶಾಲೆ

೩.೧.೨.೨. ಸಂಸ್ಕೃತ ಪಾಠಶಾಲೆ, ಮೇಲುಕೋಟೆ

೩.೧.೩. ವಿಶ್ವವಿದ್ಯಾನಿಲಯ ಹಸ್ತಪ್ರತಿ ಭಂಡಾರ
೩.೧.೩.೧. ಮೈಸೂರು ವಿಶ್ವವಿದ್ಯಾನಿಲಯ ಹಸ್ತಪ್ರತಿ ಭಂಡಾರ
೩.೧.೩.೨. ಕರ್ನಾಟಕ ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರ
೩.೧.೩.೩. ಗುಲ್ಬರ್ಗಾ ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರ
೩.೧.೩.೪. ಬೆಂಗಳೂರು ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರ
೩.೧.೩.೫. ಮಂಗಳೂರು ವಿಶ್ವವಿದ್ಯಾನಿಲಯ ಹಸ್ತಪ್ರತಿ ಭಂಡಾರ
೩.೧.೩.೬. ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರ

೩.೨. ಅರೆಸರ್ಕಾರಿ ಹಸ್ತಪ್ರತಿ ಭಂಡಾರಗಳು
೩.೨.೧. ಕೆಳದಿ ವಸ್ತುಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರ
೩.೨.೨. ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು
೩.೨.೩. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೩.೨.೪. ಮೇಲುಕೋಟೆ ಸಂಸ್ಕೃತ ಸಂಶೋಧನಾ ಸಂಸತ್
೩.೨.೫. ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ
೩.೨.೬. ಶ್ರೀ ಸಿದ್ಧಲಿಂಗೇಶ್ವರ ವೇದಸಂಸ್ಕೃತ ಪಾಠಶಾಲೆ, ಸಿದ್ಧಗಂಗಾಮಠ, ತುಮಕೂರು

೩.೩. ಖಾಸಗಿ ಹಸ್ತಪ್ರತಿ ಭಂಡಾರಗಳು
೩.೩.೧. ಜೈನ ಸಂಸ್ಥೆಗಳ ಭಂಡಾರಗಳು
೩.೩.೨. ವೀರಶೈವ ಸಂಸ್ಥೆಗಳ ಭಂಡಾರಗಳು
೩.೩.೩. ವೈದಿಕ ಸಂಸ್ಥೆಗಳ ಭಂಡಾರಗಳು
೩.೩.೪. ವೈಯಕ್ತಿಕ ಹಸ್ತಪ್ರತಿ ನೆಲೆಗಳು(ಸಂಗ್ರಹಕಾರರು)

ಅಧ್ಯಾಯ ನಾಲ್ಕು ೧೨೫–೧೫೫

ಹಸ್ತಪ್ರತಿ ಭಂಡಾರಗಳಲ್ಲಿ ಸಂರಕ್ಷಣೆ ಪ್ರಕ್ರಿಯೆ
೪.೧. ಹಸ್ತಪ್ರತಿಗಳಿಗೆ ಒದಗುವ ಅಪಾಯಗಳು
೪.೨. ಹಸ್ತಪ್ರತಿಗಳ ಪ್ರಾಥಮಿಕ ಸಂರಕ್ಷಣೆ
೪.೨.೧. ಪೂರ್ವಸಿದ್ಧತೆ
೪.೨.೨. ದಾಖಲೀಕರಣ(ರಿಜಿಸ್ಟರ್)
೪.೨.೩. ದಾನಿಗಳ ಸಂಪೂರ್ಣ ವಿವರಣೆ
೪.೨.೪. ಜೋಡಣೆ
೪.೨.೫. ನಿರಂತರ ಉಪಚಾರ

೪.೨.೬. ರಾಸಾಯನಿಕ ಪ್ರಧೂಮ್ನಕಾರ್ಯ
೪.೨.೭. ಬಳಕೆ ವಿಧಾನ
೪.೩. ಪ್ರಾಚೀನ ಸಂರಕ್ಷಣೆ
೪.೩.೧. ರಕ್ಷಾಕವಚ
೪.೩.೨. ಅರಿವೆ ಸುತ್ತುವುದು
೪.೩.೩. ಸಂದೂಕ(ಪೆಟ್ಟಿಗೆ)
೪.೩.೪. ಹೊಗೆ ಗೂಡು
೪.೩.೫. ಜಗಲಿ ಮೇಲಿರಿಸುವುದು/ಸರಸ್ವತಿ ಪೂಜೆ
೪.೪. ಆಧುನಿಕ ಸಂರಕ್ಷಣೆ
೪.೪.೧. ಮೈಕ್ರೋಫಿಲ್ಮಿಂಗ್
೪.೪.೨. ಕಂಪ್ಯೂಟರ್
೪.೪.೩. ಸ್ಕ್ಯಾನಿಂಗ್
೪.೪.೪. ಓ.ಸಿ.ಆರ್.
೪.೪.೫. ಝೆರಾಕ್ಸ್ ಯಂತ್ರ(ನೆರಳಚ್ಚು)
೪.೪.೬. ಫೋಟೋಶಾಪ್
೪.೪.೭. ವಿಡಿಯೋಗ್ರಫಿ/ಹ್ಯಾಂಡಿ ಕ್ಯಾಂ
೪.೪.೮. ಎಲೆಕ್ಟ್ರಾನಿಕ್ ದಾಖಲೀಕರಣ
೪.೪.೯. ನಕಲು ಕಾರ್ಯ
೪.೪.೧೦. ಸೂಚೀಕರಣ
೪.೪.೧೧. ಆನ್‌ಲೈನ್ ಅಧ್ಯಯನ

ಅಧ್ಯಾಯ ಐದು ೧೫೬–೧೮೮
ಹಸ್ತಪ್ರತಿ ಭಂಡಾರಗಳ ಮಹತ್ವ ಮತ್ತು ವಿಶೇಷತೆ

ಅಧ್ಯಾಯ ಆರು ೧೮೯–೧೯೫
ಸಮಾರೋಪ

ಪರಾಮರ್ಶನ ಗ್ರಂಥಗಳು ೧೯೬–೨೦೦

ಅನುಬಂಧ ೨೦೧–೨೩೪
ಛಾಯಾಚಿತ್ರಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ವ್ಯಕ್ತಿಯ ಬೌದ್ಧಿಕ ಹಸಿವುಗಳನ್ನು ನೀಗಿಸುವಲ್ಲಿ ಸಾಹಿತ್ಯವು ಮುಖ್ಯವಾದುದು. ಈ ಕಾರಣಕ್ಕಾಗಿಯೇ ಕೆಲವು ಅಧ್ಯಯನಕಾರರು ಹಲವು ಕೃತಿಗಳನ್ನು ಅಧ್ಯಯನ ಮಾಡತೊಡಗಿದರು. ಪ್ರಾಚೀನ ಕಾಲದಲ್ಲಿ ಎಲುಬು, ಮಣ್ಣು, ತಾಮ್ರ, ಬಿದಿರು, ಬಂಡೆ ಇನ್ನಿತರ ನಿಸರ್ಗದಲ್ಲಿ ದೊರೆಯುವ ಹಾಗೂ ಹೆಚ್ಚು ಬಾಳಿಕೆ ಬರುವ ವಸ್ತುಗಳ ಮೇಲೆ ಸಾಹಿತ್ಯದ ಬರವಣಿಗೆಗಳನ್ನು ಮಾಡತೊಡಗಿದರು. ಹೀಗೆ ಕಾಲದಿಂದ ಕಾಲಕ್ಕೆ ಮನುಷ್ಯ ಹೆಚ್ಚು ಕಾಲ ಬಾಳಿಕೆ ಬರುವ ಹಾಗೂ ಸ್ಪಷ್ಟವಾಗಿ ಕಾಣುವ ನಿಸರ್ಗದಲ್ಲಿ ದೊರೆಯುವ ವಸ್ತುಗಳ ಮೊರೆ ಹೋಗಿರುತ್ತಾನೆ. ಇಂತಹ ಸಂದರ್ಭದಲ್ಲಿ ಅವನ ಕಣ್ಣಿಗೆ ಬಿದ್ದಿರುವುದೇ ತಾಳೆಗರಿ, ಭೂರ್ಜಪತ್ರ, ಕೋರಿಕಾಗದ, ಕಡತ ಇತ್ಯಾದಿ ವಸ್ತುಗಳು. ಇವುಗಳ ಮೇಲೆ ಅಂದಿನ ಕಾಲದ ಸಾಹಿತ್ಯಿಕ ಹಾಗೂ ಇನ್ನಿತರ ಬರವಣಿಗೆಗಳನ್ನು ಪ್ರಾರಂಭಿಸಲಾಯಿತು. ಈ ಕಾರ್ಯವು ಮುದ್ರಣಯಂತ್ರ ಹಾಗೂ ಕಾಗದವನ್ನು ಕಂಡುಹಿಡಿಯುವವರೆಗೆ, ಅಂದರೆ ಸುಮಾರು ೧೭ನೆಯ ಶತಮಾನದವರೆಗೆ ನಡೆಯಿತು. ಅಲ್ಲಿಯವರೆಗೂ ಕೃತಿಗಳು, ಗ್ರಂಥಗಳು, ಆಡಳಿತಕ್ಕೆ ಸಂಬಂಧಿಸಿದ ದಾಖಲೆಗಳು, ಲೆಕ್ಕಪತ್ರ, ಹಾಗೂ ಇನ್ನಿತರ ಬರವಣಿಗೆ ಕಾರ್ಯಗಳು, ತಾಳೆಗರಿ, ಕೋರಿಕಾಗದ ಹಾಗೂ ಕಡತಗಳಂತಹ ಹಸ್ತಪ್ರತಿಗಳಲ್ಲಿ ನಡೆಯುತ್ತಿದ್ದವು. ಹೀಗಾಗಿ ಭಾರತೀಯ ಪ್ರಾಚೀನ ಸಾಹಿತ್ಯದ ಬಹುಪಾಲು ಬರವಣಿಗೆ ಹಸ್ತಪ್ರತಿಗಳಲ್ಲೇ ಬರಬೇಕಾಯಿತು. ಈ ಕಾರಣದಿಂದ ಹಸ್ತಪ್ರತಿಗಳು ಹೆಚ್ಚು ಹೊರಬರತೊಡಗಿದವು. ಕಾಲಾಂತರದಲ್ಲಿ ಅವುಗಳಲ್ಲಿ ಅದೆಷ್ಟೋ ಹಸ್ತಪ್ರತಿಗಳು ಜನತೆಯ ಮೂಢನಂಬಿಕೆಯಿಂದಾಗಿ, ಅಜ್ಞಾನದಿಂದಾಗಿ, ಪ್ರಕೃತಿವಿಕೋಪದಿಂದಾಗಿ ನಶಿಸಿಹೋಗಿವೆ. ಹೀಗಾಗಿ ಅಳಿದುಳಿದ ಹಸ್ತಪ್ರತಿಗಳ ಸಂಗ್ರಹಕಾರ್ಯ ೧೯ ಮತ್ತು ೨೦ನೆಯ ಶತಮಾನದಲ್ಲಿ ಪ್ರಾರಂಭವಾಯಿತು. ಅವುಗಳ ಮಹತ್ವವನ್ನು ಅರಿತು ಹಸ್ತಪ್ರತಿಗಳನ್ನು ಒಂದೆಡೆ ಸಂಗ್ರಹಿಸಿ, ಸಂರಕ್ಷಣೆ, ಪ್ರಕಟಣೆ, ಸೂಚೀಕರಣ ಮಾಡುವ ಕಾರ್ಯ ನಡೆಯಿತು. ಅಲ್ಲದೇ ಆಸಕ್ತರು ತಮಗೆ ಅದರಲ್ಲಿರುವ

ವಿಷಯವು ತಿಳಿದೋ ಅಥವಾ ತಿಳಿಯದೆಯೋ ಹಾಗೆಯೇ ವೈಯಕ್ತಿಕವಾಗಿ ಅವುಗಳನ್ನು ಸಂಗ್ರಹಿಸುತ್ತ ಬಂದರು. ಹೀಗೆ ಕಾಲದಿಂದ ಕಾಲಕ್ಕೆ ಅವುಗಳ ಮಹತ್ವ ಹೆಚ್ಚಿತು. ಈ ಕಾರಣದಿಂದ ಹಸ್ತಪ್ರತಿಗಳ ಸಂಗ್ರಹ, ಮಹತ್ವ ಹಾಗೂ ಅಧ್ಯಯನದ ಹಂಬಲ ಹೆಚ್ಚಾಗುತ್ತಾ ಹೋಯಿತು. ಹೀಗಾಗಿ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಭಾಷೆಯಲ್ಲಿ ಹಲವು ಬಗೆಯ ಹಸ್ತಪ್ರತಿಗಳು ರಚನೆಗೊಂಡವು. ಕ್ರಮೇಣ ಇಂತಹ ಹಸ್ತಪ್ರತಿಗಳನ್ನು ಒಂದೆಡೆ ಸಂಗ್ರಹಿಸಿ, ಸಂರಕ್ಷಿಸಿ ಸೂಚೀಕರಣಗೊಳಿಸಿ ಪ್ರಕಟಿಸುವ ಶೈಕ್ಷಣಿಕ ಚಟುವಟಿಕೆಗಳು ಮುನ್ನೆಲೆಗೆ ಬಂದವು. ಈ ಎಲ್ಲ ಕ್ರಿಯೆಗಳ ಕೇಂದ್ರವಾಗಿ ಹಸ್ತಪ್ರತಿ ಭಂಡಾರಗಳು ನಾಡಿನ ಹಲವು ಭಾಗಗಳಲ್ಲಿ ತೆರೆದುಕೊಂಡವು. ಅಲ್ಲಿನ ಸಿಬ್ಬಂದಿಯ ನೆರವು ಹಾಗೂ ವಿದ್ವಾಂಸರ ಪರಿಶ್ರಮದಿಂದ ಅನೇಕ ಹಸ್ತಪ್ರತಿಗಳು ಬೆಳಕಿಗೆ ಬಂದವು. ನಾಡಿನ ಚಿಂತಕರ ಗಮನ ಸೆಳೆದವು. ಹಸ್ತಪ್ರತಿ ಭಂಡಾರಗಳಿಗೂ ಇಂದಿನ ಮುದ್ರಿತ ಪುಸ್ತಕಗಳ ಗ್ರಂಥಾಲಯಕ್ಕೂ ತುಂಬ ವ್ಯತ್ಯಾಸವಿರುವುದನ್ನು ಕಾಣಬಹುದಾಗಿದೆ. ಇಂದು ಕರ್ನಾಟಕದಲ್ಲಿ ಹಸ್ತಪ್ರತಿ ಭಂಡಾರಗಳು ಕಡಿಮೆ ಪ್ರಮಾಣದಲ್ಲಿದ್ದು, ಅವುಗಳನ್ನು ಕುರಿತು ಸಣ್ಣಪುಟ್ಟ ಪರಿಚಯಾತ್ಮಕ ಅಧ್ಯಯನಗಳು ನಡೆದಿವೆಯಾದರೂ ಆಳವಾದ ಸಮಗ್ರ ಅಧ್ಯಯನವು ಇದುವರೆಗೆ ನಡೆದಿರುವುದಿಲ್ಲ. ಆದ್ದರಿಂದ ನಾಡಿನಲ್ಲಿರುವ ಹಸ್ತಪ್ರತಿ ಭಂಡಾರಗಳನ್ನು ಗುರುತಿಸಿ, ಅವುಗಳ ಕಾರ್ಯ ಚಟುವಟಿಕೆಗಳ ಬಗೆಗೆ ಅಧ್ಯಯನ ಮಾಡಲಾಗಿದೆ. ಅಲ್ಲದೇ ಹೊಸ ಹೊಸ ಹಸ್ತಪ್ರತಿಗಳನ್ನು ಸಂಗ್ರಹಿಸುವ ರೀತಿ, ಇರುವ ಹಸ್ತಪ್ರತಿಗಳನ್ನು ಸಂರಕ್ಷಿಸುವ ಪ್ರಾಚೀನ ವಿಧಾನಗಳ ಜೊತೆಗೆ ಆಧುನಿಕ ಸಂರಕ್ಷಣಾ ಕ್ರಮಗಳನ್ನು ಅಳವಡಿಸಿಕೊಂಡಿರುವ ಹಸ್ತಪ್ರತಿ ಭಂಡಾರಗಳ ವಿಶೇಷತೆ, ಹಸ್ತಪ್ರತಿ ಭಂಡಾರಗಳ ಕಾರ್ಯ ಚಟುವಟಿಕೆಗಳಿಗೆ ಸರಕಾರದ ಸ್ಪಂದನೆ ಯಾವ ರೀತಿ ಇದೆ ಎಂಬುದರ ಬಗ್ಗೆಯೂ ಪ್ರಸ್ತುತ ಮಹಾಪ್ರಬಂಧದಲ್ಲಿ ನಿರೂಪಿಸಿದೆ.

ಭಾರತದಲ್ಲಿ ಗ್ರಂಥಾಲಯದ ಹುಟ್ಟು ಮತ್ತು ಬೆಳವಣಿಗೆಯ ವಿಷಯ ಕುತೂಹಲಕಾರಿಯಾಗಿದೆ. ಪ್ರಾಚೀನ ಭಾರತದಲ್ಲಿ ಗುರುಕುಲ ಆಶ್ರಮ ಪದ್ಧತಿಯ ಅಭ್ಯಾಸ ಅವ್ಯಾಹತವಾಗಿ ನಡೆಯುತ್ತಿತ್ತು. ಗುರುಗಳ ಪಾಠ ಪ್ರವಚನಗಳು ಮೌಖಿಕವಾಗಿ ನಡೆಯುತ್ತಿದ್ದವು. ಹೀಗಾಗಿ ಜ್ಞಾನವು ಕೃತಿ ಮತ್ತು ಸ್ಮೃತಿ ಶಕ್ತಿಗಳನ್ನವಲಂಬಿಸಿ ಬೆಳೆದು ಕಾಲ ಗತಿಸಿದಂತೆ ಹಲವು ಬದಲಾವಣೆಯೊಂದಿಗೆ ಕ್ರಿ.ಶ.೮ನೆಯ ಶತಮಾನದ ಹೊತ್ತಿಗೆ ಅನೇಕ ಲೇಖನ ಸಾಮಗ್ರಿಗಳನ್ನು ಬಳಸಿ ಅವುಗಳ ಮೇಲೆ ಬರೆಯುವ ರೂಢಿ ಪ್ರಾರಂಭವಾಯಿತು.

ವೇದ, ಪುರಾಣ, ಖಂಡಕಾವ್ಯಗಳಲ್ಲದೆ ಧರ್ಮಶಾಸ್ತ್ರ, ಖಗೋಳಶಾಸ್ತ್ರ, ಗಣಿತಶಾಸ್ತ್ರ, ಜ್ಯೋತಿಷ್ಯಶಾಸ್ತ್ರ ತತ್ವಶಾಸ್ತ್ರ ಮೊದಲಾದ ವಿಷಯಗಳ ಮೇಲೆ ಹಲವು ವಿವಿಧ ಭಾಷೆಗಳಲ್ಲಿ ಗ್ರಂಥಗಳು ರಚನೆಯಾಗಿವೆ. ಪ್ರಾಚೀನ ಕಾಲದಲ್ಲಿ ಉತ್ತಮವಾದ ವಿಶ್ವವಿದ್ಯಾಲಯ ಹಾಗೂ ಗ್ರಂಥಾಲಯಗಳ ಉಲ್ಲೇಖವನ್ನು ಚೀನಾದ ಪ್ರವಾಸಿಗರು ಮಾಡಿದ್ದಾರೆ. ಅಂಥವುಗಳಲ್ಲಿ ಭಾರತದ ಕೆಲವು ವಿಶ್ವವಿದ್ಯಾಲಯಗಳು ಅಂದು ಜಗತ್ಪ್ರಸಿದ್ಧವಾಗಿದ್ದವು. ಅವುಗಳೆಂದರೆ ನಲಂದ, ತಕ್ಷಶಿಲಾ, ವಲ್ಲಭಿ, ವಿದ್ಯಾಕೇಂದ್ರ, ಉಜ್ಜಯಿನಿ, ಅಮರಾವತಿ, ಉದಂತಪುರ ಮೊದಲಾದ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ಬಗೆಯ ಹಲವು ಗ್ರಂಥಾಲಯಗಳಿದ್ದವೆಂದು ತಿಳಿದುಬಂದಿದೆ. ನಲಂದ ವಿಶ್ವವಿದ್ಯಾಲಯವು ಅಂದು ಜಗತ್ತಿನಲ್ಲಿಯೇ

ಅತಿ ದೊಡ್ಡ ಪ್ರಸಿದ್ಧಿ ಹೊಂದಿರುವ ಬೃಹತ್ ವಿಶ್ವವಿದ್ಯಾಲಯವಾಗಿತ್ತು. ಇಂತಹ ವಿಶ್ವವಿದ್ಯಾಲಯದಲ್ಲಿ ರತ್ನೋದಧಿ, ರತ್ನರಂಜಕ ಹಾಗೂ ರತ್ನಾಗಾರವೆಂಬ ಮೂರು ಭವ್ಯ ಭವನಗಳನ್ನು ನಿರ್ಮಿಸಲಾಗಿತ್ತು. ರತ್ನೋದಧಿ ಎಂಬ ಒಂಭತ್ತನೆಯ ಅಂತಸ್ತಿನಲ್ಲಿ ವಿಶ್ವವಿದ್ಯಾಲಯದ ಬೃಹತ್ ಗ್ರಂಥಾಲಯವನ್ನು ನಿರ್ಮಿಸಲಾಗಿತ್ತು. ಇದರಲ್ಲಿ ಹಲವು ವಿಷಯಗಳಿಗೆ ಸಂಬಂಧಿಸಿದ ಸಂಸ್ಕೃತ, ಕನ್ನಡ ಇನ್ನಿತರ ಹಲವು ಭಾಷೆಗಳಿಗೆ ಸಂಬಂಧಿಸಿದ ಸಾವಿರಾರು ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿತ್ತು.

ಪ್ರಸ್ತುತ ಸಂದರ್ಭದಲ್ಲಿ ಹಸ್ತಪ್ರತಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆಲವು ವಿದ್ವಾಂಸರ ಹೊರತು, ಜನಸಾಮಾನ್ಯರಿಗೆ ಹಸ್ತಪ್ರತಿ ಗ್ರಂಥಾಲಯಗಳ ಬಗೆಗೆ ಮಾಹಿತಿ ಇದ್ದಂತಿಲ್ಲ. ದೇಶದ ಬೇರೆ ಬೇರೆ ಭಾಗಗಳಲ್ಲಿ ಹಸ್ತಪ್ರತಿ ಭಂಡಾರಗಳು ಇವೆ. ಅದೇ ರೀತಿಯಾಗಿ ಕರ್ನಾಟಕದಲ್ಲಿ ಮೈಸೂರು, ಬೆಂಗಳೂರು, ಧರ್ಮಸ್ಥಳ, ಧಾರವಾಡ, ಕೆಳದಿ, ಬೆಳಗಾವಿ ಹಾಗೂ ನಾಡಿನ ಹಲವು ಮಠಗಳಲ್ಲಿ, ಮೂಡುಬಿದಿರೆ, ಮೇಲುಕೋಟೆ, ನಾಡಿನ ಹಲವು ವಿಶ್ವವಿದ್ಯಾಲಯದಡಿಯಲ್ಲಿ ಹಾಗೂ ಪ್ರತಿಷ್ಠಿತ ಸಂಘ, ಸಂಸ್ಥೆಗಳ ಪ್ರತಿಷ್ಠಾನದಡಿಯಲ್ಲಿ ಹಲವು ಹಸ್ತಪ್ರತಿ ಭಂಡಾರಗಳಿವೆ. ಈ ಹಸ್ತಪ್ರತಿ ಭಂಡಾರಗಳ ಸ್ಥಾಪನೆ, ಬೆಳವಣಿಗೆ, ಹಸ್ತಪ್ರತಿಗಳ ಸಂಗ್ರಹದ ಸ್ವರೂಪ, ಸೇವಾವಿಧಾನ, ಸಂರಕ್ಷಣೆ ಕ್ರಮ, ಸೂಚೀಕರಣ, ಪ್ರಕಟಣೆ, ಮಹತ್ವ, ಆಧುನಿಕ ಸಂರಕ್ಷಣೆಯ ರೀತಿ ನೀತಿ ಹೀಗೆ ಹಲವು ವಿಷಯಗಳನ್ನು ಸಂಶೋಧನಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನದ ವಿಷಯ 'ಕರ್ನಾಟಕ ಹಸ್ತಪ್ರತಿ ಭಂಡಾರಗಳು: ಪರಂಪರೆ ಮತ್ತು ವರ್ತಮಾನ'. ಪ್ರಾಚೀನ ಕೈಬರಹದ ಗ್ರಂಥಗಳ ಸಂಪಾದನ ಕಾರ್ಯಕ್ಕೆ ವಿದ್ವಾಂಸರ, ವಿಶೇಷ ಅಧ್ಯಯನದ ಅನುಕೂಲಕ್ಕಾಗಿ ಹಸ್ತಪ್ರತಿಗಳು ಸುಲಭವಾಗಿ ದೊರೆಯುವಂತಿರಬೇಕಾದುದು ಅತ್ಯಂತ ಅವಶ್ಯಕ. ಇದು ಸಾಧ್ಯವಾಗಬೇಕಾದರೆ ಪ್ರಮುಖ ಅಧ್ಯಯನಯೋಗ್ಯ ಸ್ಥಳದಲ್ಲಿ ಹಸ್ತಪ್ರತಿ ಭಂಡಾರಗಳ ಸ್ಥಾಪನೆಗೆ ಅವಕಾಶ ಕಲ್ಪಿಸುವುದರ ಮೂಲಕ ಹಲವು ಹಸ್ತಪ್ರತಿ ಭಂಡಾರಗಳ ವಿಷಯ–ವಿಚಾರಗಳ ವಿನಿಮಯಗಳಿಗೆ ಅನುವು ಮಾಡಿಕೊಟ್ಟಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಹಸ್ತಪ್ರತಿಗಾಗಿ ಪ್ರತ್ಯೇಕ ಇಲಾಖೆಯನ್ನು ಪ್ರಾರಂಭಿಸಬೇಕಾದ ಅವಶ್ಯಕತೆಯಿದೆ ಎಂಬುದನ್ನು ಈ ಅಧ್ಯಯನದಲ್ಲಿ ಪ್ರಸ್ತಾಪಿಸಲಾಗಿದೆ.

ಭಾರತದ ಪ್ರಥಮ ಸರ್ವೇಯರ ಜನರಲ್ ಆಗಿ ೧೮೧೭ರಲ್ಲಿ ಬಂದ ಕರ್ನಲ್ ಮೆಕಂಜಿ ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿಸಿದವರಲ್ಲಿ ಮೊದಲಿಗರು. ಇವರ ಸಂಗ್ರಹ ಕಾರ್ಯವೇ ಮದ್ರಾಸಿನ Oriental Manuscriptology Library ಸ್ಥಾಪನೆಗೆ ಕಾರಣವಾಯಿತು. ಇದೇ ರೀತಿಯಾಗಿ ನಾಡಿನ ಪ್ರಮುಖ ವೀರಶೈವ ವೈದಿಕ ಹಾಗೂ ಜೈನ ಮಠಗಳಲ್ಲಿ ಧರ್ಮದ ಹಿನ್ನೆಲೆಯಲ್ಲಿ ಸ್ಥಾಪಿತವಾಗಿರುವ ಹಸ್ತಪ್ರತಿ ಗ್ರಂಥಾಲಯಗಳು ಇರುವುವು. ~~ಇವುಗಳನ್ನು~~ ಗುರುತಿಸುವುದು ಹಾಗೂ ವರ್ತಮಾನದಲ್ಲಿ ಹಸ್ತಪ್ರತಿಗಳ ಕಾರ್ಯಚಟುವಟಿಕೆ ಯಾವ ಮಾರ್ಗದಲ್ಲಿ ಕಾರ್ಯ ನಿರ್ವಹಿಸುತ್ತಿರುವುವು ಎಂಬುದನ್ನು ಅರಿತು ಅಧ್ಯಯನದಲ್ಲಿ ನಿರೂಪಿಸಲಾಗಿದೆ. ಜೊತೆಗೆ ನಾಡಿನ ವಿವಿಧ ಸಂಘ–ಸಂಸ್ಥೆಗಳ–ಪ್ರತಿಷ್ಠಾನಗಳ,

ಹಲವು ವಿಶ್ವವಿದ್ಯಾಲಯದಡಿಯಲ್ಲಿ ಸ್ಥಾಪಿತವಾಗಿರುವ ಹಸ್ತಪ್ರತಿ ಭಂಡಾರಗಳನ್ನು ಗುರುತಿಸಿ ಅವುಗಳ ಕಾರ್ಯವೈಖರಿಯ ಬಗೆಗೆ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಹಸ್ತಪ್ರತಿ ಸಂರಕ್ಷಣೆ, ಸಂಗ್ರಹ ಸೂಚೀಕರಣ ಪ್ರಕಟಣೆ ಹಾಗೂ ವೈಜ್ಞಾನಿಕ ಸಂರಕ್ಷಣೆಯ ಕ್ರಮಗಳನ್ನು ಅಳವಡಿಸಿಕೊಂಡಿರುವ ರೀತಿ, ಅಲ್ಲದೇ ಸರಕಾರದ ವಿಭಿನ್ನ ಯೋಜನೆಗಳು, ನಾಡಿನ ವಿವಿಧ ಭಾಗಗಳಲ್ಲಿರುವ ಹಸ್ತಪ್ರತಿ ಭಂಡಾರಗಳ ಹೊಸ ಹೊಸ ಯೋಜನೆಗಳ ಕುರಿತು ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಹಸ್ತಪ್ರತಿಗಳನ್ನು ಸಂಗ್ರಹಿಸುವ ಬಗ್ಗೆ ಹಾಗೂ ಹಸ್ತಪ್ರತಿಗಳ ಸಂರಕ್ಷಣೆಗಾಗಿ ಸಂರಕ್ಷಣಾ ತರಬೇತಿಗಳನ್ನು, ಓದುವ ತರಬೇತಿಗಳನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಅಪ್ರಕಟಿತ ಕೃತಿಗಳ ಪ್ರಕಟಣೆಗೆ ಹಸ್ತಪ್ರತಿ ಗ್ರಂಥಾಲಯಗಳ ಪಾತ್ರವೇನು? ಹಾಗೂ ನಾಡಿನ ವಿವಿಧ ವಿದ್ವಾಂಸರೊಂದಿಗೆ 'ಹಸ್ತಪ್ರತಿ ಗ್ರಂಥಾಲಯಗಳ ಅಭಿವೃದ್ಧಿಗೆ ಯೋಜನೆಗಳನ್ನು ತಯಾರಿಸುವ ರೀತಿ ನೀತಿಗಳ ಬಗೆಗೆ ಅಧ್ಯಯನದಲ್ಲಿ ವಿವರಿಸಲಾಗಿದೆ. ಈ ಮೇಲಿನ ಎಲ್ಲ ಉದ್ದೇಶಗಳನ್ನು ಮಹಾಪ್ರಬಂಧದ ಮಿತಿಯಲ್ಲಿ ಹಸ್ತಪ್ರತಿ ಭಂಡಾರಗಳ ಕುರಿತಾಗಿ ಸ್ಥೂಲವಾಗಿ ವಿವೇಚನೆ ಮಾಡಲಾಗಿದೆ.

ಕ್ರೈಸ್ತ ಮಿಷನರಿಗಳಿಂದ ಹಸ್ತಪ್ರತಿಗಳ ಮಹತ್ವ ಹಾಗೂ ಸಂಗ್ರಹದ ಬಗ್ಗೆ ಪ್ರೇರಣೆಗೊಂಡು ನಮ್ಮಲ್ಲಿ ಇಂದು ನಾಡಿನ ವಿವಿಧ ಭಾಗಗಳಲ್ಲಿ ಆಸಕ್ತರು ವೈಯಕ್ತಿಕವಾಗಿ ಹಸ್ತಪ್ರತಿಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದಾರೆ. ಇವರನ್ನು ಗುರುತಿಸಿ ನಾಡಿನಲ್ಲಿರುವ ವಿವಿಧ ಸಂಘ ಸಂಸ್ಥೆ-ಪ್ರತಿಷ್ಠಾನಗಳು, ಮಠಗಳಲ್ಲಿರುವ ಹಸ್ತಪ್ರತಿ ಭಂಡಾರಗಳು ಇಂದಿನ ಕಾಲಘಟ್ಟದಲ್ಲಿ ಇವುಗಳ ಕಾರ್ಯ, ಸ್ವರೂಪ ಯಾವ ಮಾರ್ಗದಲ್ಲಿ ಸಾಗುತ್ತಿದೆ ಮತ್ತು ಸಾಹಿತ್ಯ ಚರಿತ್ರೆಗೆ ಈ ಭಂಡಾರಗಳ ಕೊಡುಗೆ ಏನು? ಎಂಬುದನ್ನು ತಿಳಿಯಪಡಿಸುವುದೇ ನನ್ನ ಅಧ್ಯಯನದ ಬಹು ಮುಖ್ಯ ಉದ್ದೇಶಗಳಲ್ಲೊಂದಾಗಿದೆ.

ಹೀಗೆ ಕರ್ನಾಟಕದ ಎಲ್ಲಾ ಹಸ್ತಪ್ರತಿ ಭಂಡಾರಗಳ ಸ್ವರೂಪವನ್ನು ಗುರುತಿಸಿ ಅವುಗಳ ವೈಶಿಷ್ಟ್ಯತೆ ಮತ್ತು ವೈವಿಧ್ಯತೆಗಳನ್ನು ವಿಶ್ಲೇಷಿಸುವುದು ಈ ಅಧ್ಯಯನದ ಮಹತ್ವದ ಉದ್ದೇಶವಾಗಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕರ್ನಾಟಕದಾದ್ಯಂತ ಪ್ರಮುಖ ವೀರಶೈವ, ವೈದಿಕ ಹಾಗೂ ಜೈನಮಠಗಳಿಗೆ ಹಾಗೂ ಹಸ್ತಪ್ರತಿಗಳನ್ನು ಸಂರಕ್ಷಣೆ ಮಾಡುತ್ತಿರುವ ಸಂಘ, ಸಂಸ್ಥೆಗಳು ಹಾಗೂ ಪ್ರತಿಷ್ಠಾನಗಳಿಗೆ ಭೇಟಿ ನೀಡುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಕ್ಷೇತ್ರಕಾರ್ಯ ಅಧ್ಯಯನದ ಒಂದು ಭಾಗವಾಗಿದ್ದು, ಅವಲೋಕನ, ಸಂದರ್ಶನ, ಪ್ರಶ್ನಾವಳಿ, ಸಹಭಾಗಿತ್ವ ಹಾಗೂ ವಿದ್ವಾಂಸರೊಂದಿಗೆ ಚರ್ಚೆ ಮಾಡುವುದರ ಮೂಲಕ ಮಾಹಿತಿಯನ್ನು ಪಡೆಯಲಾಗಿದೆ. ಹಸ್ತಪ್ರತಿ ಸಮ್ಮೇಳನಗಳು, ತರಬೇತಿ ಶಿಬಿರಗಳು ಹಾಗೂ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಹಾಗೂ ವಿಷಯಮಂಡನೆ ಮಾಡುವುದರ ಮೂಲಕ ಸೂಕ್ತ ಸಲಹೆ-ಸೂಚನೆಗಳನ್ನು ಪಡೆದು ಮಾಹಿತಿಯನ್ನು ಕಲೆ ಹಾಕಲಾಗಿದೆ. ಇದರ ಜೊತೆಗೆ ಸಂಶೋಧನೆಯ ವಿಷಯಕ್ಕೆ ಸಂಬಂಧಿಸಿದಂತೆ ಲಿಖಿತ ಮತ್ತು ಮೌಖಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಹಾಗೆಯೇ ಅಧ್ಯಯನಕ್ಕೆ ಪೂರಕವಾದ

ಆಕರಗಳನ್ನು ಬಳಸಿಕೊಂಡು ನಾಡಿನ ವಿವಿಧ ಹಸ್ತಪ್ರತಿ ಭಂಡಾರಗಳ ಛಾಯಾಚಿತ್ರಗಳನ್ನು ಸಂಗ್ರಹಿಸಿಕೊಂಡು ಅಲ್ಲಿನ ಹಸ್ತಪ್ರತಿತಜ್ಞರಿಂದ ಮಾಹಿತಿಯನ್ನು ಕ್ರೋಡೀಕರಿಸುವುದರ ಮೂಲಕ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ವ್ಯಾಪ್ತಿ

ಕರ್ನಾಟಕ ಹಸ್ತಪ್ರತಿ ಭಂಡಾರಗಳು: ಪರಂಪರೆ ಮತ್ತು ವರ್ತಮಾನ ಎಂಬ ಅಧ್ಯಯನ ಕುರಿತಂತೆ ನಾಡಿನ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿರುವ ಹಸ್ತಪ್ರತಿ ಭಂಡಾರಗಳು ಹಾಗೂ ಪ್ರಮುಖ ವೀರಶೈವ, ವೈದಿಕ ಮತ್ತು ಜೈನಮಠಗಳಲ್ಲಿ ಸ್ಥಾಪಿತವಾಗಿರುವ ಹಸ್ತಪ್ರತಿ ಗ್ರಂಥಾಲಯಕ್ಕೆ ಭೇಟಿ ನೀಡಿ ಮಾಹಿತಿ ಪಡೆಯಲಾಗಿದೆ. ವೈಯಕ್ತಿಕ ಸಂಗ್ರಹಕಾರರನ್ನು ನೇರವಾಗಿ ಸಂದರ್ಶಿಸಲಾಗಿದೆ. ಹಸ್ತಪ್ರತಿಗಳ ಸಂಗ್ರಹ ಹಾಗೂ ಸಂರಕ್ಷಣೆ ಕುರಿತು ಆಸಕ್ತಿ ತಳೆದ ನಾಡಿನ ಪ್ರಮುಖ ಸಂಘ, ಸಂಸ್ಥೆಗಳು, ಪ್ರತಿಷ್ಠಾನಗಳವರೆಗೂ ಅಧ್ಯಯನದ ವ್ಯಾಪ್ತಿ ವಿಸ್ತರಿಸಿಕೊಂಡಿದೆ. ಈ ಕಾರಣದಿಂದ ಅಧ್ಯಯನದ ವ್ಯಾಪ್ತಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ ಕರ್ನಾಟಕದ ಹಸ್ತಪ್ರತಿ ಗ್ರಂಥಾಲಯಗಳನ್ನು ಒಳಗೊಂಡಿದೆ.

ಅಧ್ಯಯನದ ಸ್ವರೂಪ

ಕರ್ನಾಟಕ ಹಸ್ತಪ್ರತಿ ಭಂಡಾರಗಳು: ಪರಂಪರೆ ಮತ್ತು ವರ್ತಮಾನ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವು ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದೆ.

ಮೊದಲನೆಯ ಅಧ್ಯಾಯ: ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪವನ್ನು ಒಳಗೊಂಡು ಅಧ್ಯಯನದ ಒಟ್ಟಾರೆ ಮಾಹಿತಿಯನ್ನು ನೀಡುತ್ತದೆ.

ಎರಡನೆಯ ಅಧ್ಯಾಯ: ಹಸ್ತಪ್ರತಿ ಭಂಡಾರಗಳ ಚಾರಿತ್ರಿಕ ಸಂಕಥನವನ್ನು ಕುರಿತಾಗಿದ್ದು, ಇದರಲ್ಲಿ ಗ್ರಂಥಾಲಯದ ಅರ್ಥ, ಉಗಮ, ವಿಕಾಸ ಹಾಗೂ ಹಸ್ತಪ್ರತಿ ಭಂಡಾರದ ಅರ್ಥ, ಸ್ವರೂಪ ಇದರ ಜೊತೆಗೆ ಹಸ್ತಪ್ರತಿ ಭಂಡಾರಗಳ ಚಾರಿತ್ರಿಕ ಹಿನ್ನೆಲೆಯನ್ನು ಪ್ರಾಚೀನ ಕಾಲ, ಮಧ್ಯಯುಗದ ಕಾಲ, ಆಧುನಿಕ ಕಾಲಗಳ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ.

ಮೂರನೆಯ ಅಧ್ಯಾಯ: ಹಸ್ತಪ್ರತಿ ಭಂಡಾರಗಳ ವರ್ಗೀಕರಣ

೧. ಸರಕಾರಿ ಹಸ್ತಪ್ರತಿ ಭಂಡಾರಗಳು

೨. ಅರೆಸರಕಾರಿ ಹಸ್ತಪ್ರತಿ ಭಂಡಾರಗಳು

೩. ಖಾಸಗಿ ಹಸ್ತಪ್ರತಿ ಭಂಡಾರಗಳೆಂದು ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ.

೧. ಸರಕಾರಿ ಹಸ್ತಪ್ರತಿ ಭಂಡಾರಗಳು

- ಸಾಂಸ್ಥಿಕ ಹಸ್ತಪ್ರತಿ ಭಂಡಾರಗಳು
- ಸಂಸ್ಕೃತ ಕಾಲೇಜು ಭಂಡಾರಗಳು
- ವಿಶ್ವವಿದ್ಯಾನಿಲಯ ಹಸ್ತಪ್ರತಿ ಭಂಡಾರಗಳೆಂದು ಗುರುತಿಸಲಾಗಿದೆ. ಇದೇ ರೀತಿಯಾಗಿ

೨. ಅರೆಸರಕಾರಿ ಹಸ್ತಪ್ರತಿ ಭಂಡಾರಗಳು

- ಬಿ.ಎಂ.ಶ್ರೀ. ಪ್ರತಿಷ್ಠಾನ
- ಕೆಳದಿ ವಸ್ತುಸಂಗ್ರಹಾಲಯ
- ಕನ್ನಡ ಸಾಹಿತ್ಯ ಪರಿಷತ್ತು
- ಕರ್ನಾಟಕ ವಿದ್ಯಾವರ್ಧಕ ಸಂಘವೆಂದು ವರ್ಗೀಕರಿಸಿಕೊಂಡು ಅವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲಾಗಿದೆ.

೩. ಖಾಸಗಿ ಹಸ್ತಪ್ರತಿ ಭಂಡಾರಗಳು

- ವೀರಶೈವ ಸಂಸ್ಥೆಗಳ ಭಂಡಾರಗಳು
- ಜೈನ ಸಂಸ್ಥೆಗಳ ಭಂಡಾರಗಳು
- ವೈದಿಕ ಸಂಸ್ಥೆಗಳ ಭಂಡಾರಗಳು

ಎಂದು ವರ್ಗೀಕರಿಸಿಕೊಂಡು ಅವುಗಳ ವರ್ತಮಾನದ ಕಾರ್ಯ ಚಟುವಟಿಕೆಗಳನ್ನು ಗಮನಿಸಲಾಗಿದೆ. ಇದರ ಜೊತೆಗೆ ವೈಯಕ್ತಿಕ ಹಸ್ತಪ್ರತಿ ಸಂಗ್ರಹಕಾರರನ್ನು ಗುರುತಿಸಲಾಗಿದೆ.

ನಾಲ್ಕನೆಯ ಅಧ್ಯಾಯ: ಹಸ್ತಪ್ರತಿ ಭಂಡಾರಗಳಲ್ಲಿ ಸಂರಕ್ಷಣಾ ಪ್ರಕ್ರಿಯೆ

- ಈ ಅಧ್ಯಾಯದಲ್ಲಿ ಹಸ್ತಪ್ರತಿಗಳಿಗೆ ಒದಗುವ ಅಪಾಯಗಳನ್ನು ಕುರಿತು ಚರ್ಚಿಸಲಾಗಿದೆ. ಹಸ್ತಪ್ರತಿಗಳ ಪ್ರಾಥಮಿಕ ಸಂರಕ್ಷಣೆ, ಪ್ರಾಚೀನ ಸಂರಕ್ಷಣೆ, ಆಧುನಿಕ ಸಂರಕ್ಷಣೆ, ಆನ್‌ಲೈನ್ ಅಧ್ಯಯನ ಇತ್ಯಾದಿ ವಿಷಯಗಳನ್ನು ಕುರಿತು ನಿರೂಪಿಸಲಾಗಿದೆ.

ಐದನೆಯ ಅಧ್ಯಾಯ: ಹಸ್ತಪ್ರತಿ ಭಂಡಾರಗಳ ಮಹತ್ವ ಹಾಗೂ ವಿಶೇಷತೆಯ ಜೊತೆಗೆ ನಾಡಿನ ಪ್ರಮುಖ ಭಂಡಾರಗಳ ವೈಶಿಷ್ಟತೆಯನ್ನು ಗಮನಿಸಲಾಗಿದೆ.

ಆರನೆಯ ಅಧ್ಯಾಯ: ಸಮಾರೋಪವಾಗಿದ್ದು, ಅಧ್ಯಯನದ ಫಲಿತಗಳನ್ನು ಇಲ್ಲಿ ವಿವರಿಸಲಾಗಿದೆ. ಅನುಬಂಧದಲ್ಲಿ ಪರಾಮರ್ಶನ ಗ್ರಂಥಗಳ ಸೂಚಿ ಹಾಗೂ ಛಾಯಾಚಿತ್ರಗಳನ್ನು ನೀಡಲಾಗಿದೆ.

* * *

ಅಧ್ಯಾಯ ಎರಡು

ಹಸ್ತಪ್ರತಿ ಭಂಡಾರಗಳಲ್ಲಿ ಚಾರಿತ್ರಿಕ ಸಂಕಥನ

೨.೧. ಪ್ರಸ್ತಾವನೆ

೨.೨. ಗ್ರಂಥಾಲಯದ ಅರ್ಥ, ಉಗಮ ಮತ್ತು ವಿಕಾಸ

೨.೩. ಹಸ್ತಪ್ರತಿ ಭಂಡಾರದ ಅರ್ಥ ಮತ್ತು ಸ್ವರೂಪ

೨.೪. ಹಸ್ತಪ್ರತಿ ಭಂಡಾರಗಳ ಚಾರಿತ್ರಿಕ ಹಿನ್ನೆಲೆ

- ೨.೪.೧. ಪ್ರಾಚೀನ ಕಾಲ
- ೨.೪.೨. ಮಧ್ಯಯುಗದ ಕಾಲ
- ೨.೪.೩. ಆಧುನಿಕ ಕಾಲ
  - ೨.೪.೩.೧. ಕರ್ನಲ್ ಮೆಕೆಂಜಿ
  - ೨.೪.೩.೨. ಲಿಡಾನ್ ಸಂಗ್ರಹ
  - ೨.೪.೩.೩. ಸಿ.ಪಿ. ಬ್ರೌನ್
  - ೨.೪.೩.೪. ಬಿ.ಎಲ್. ರೈಸ್
  - ೨.೪.೩.೫. ಜೆ.ಎಫ್. ಫ್ಲೀಟ್
  - ೨.೪.೩.೬. ಪ್ರಸ್ತುತ ಸಂದರ್ಭ

ಅಧ್ಯಾಯ ಎರಡು

ಹಸ್ತಪ್ರತಿ ಭಂಡಾರಗಳಲ್ಲಿ ಚಾರಿತ್ರಿಕ ಸಂಕಥನ

ಜ್ಞಾನಪರಂಪರೆಯನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿರುವ ಆಕರಗಳು ಯಾವುವು ಎಂಬ ಪ್ರಶ್ನೆಗೆ ಸ್ಪಷ್ಟವಾದ ಉತ್ತರ ಶಾಸನಗಳು, ಹಸ್ತಪ್ರತಿಗಳು, ಕೈಫಿಯತ್ತುಗಳು, ಬಖೈರುಗಳು, ಕಡತಗಳು ಮತ್ತು ನಾಣ್ಯಗಳು-ಇತ್ಯಾದಿ ಎಂಬ ಉತ್ತರ ದೊರೆಯುವುದು. ಈ ಅಮೂಲ್ಯ ಪ್ರಾಚೀನ ಜ್ಞಾನಸಂಸ್ಕೃತಿ ಸಾಮಗ್ರಿಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹೆಚ್ಚಿನ ಜ್ಞಾನದ ಮೌಲ್ಯಾಂಶಗಳನ್ನು ಅಡಗಿಸಿಕೊಂಡಿರುವ ಆಕರಗಳೆಂದರೆ 'ಹಸ್ತಪ್ರತಿಗಳು'. ಇಂತಹ ಹಸ್ತಪ್ರತಿಗಳಲ್ಲಿ ಏನಿಲ್ಲ ಎಂಬ ಪ್ರಶ್ನೆಗಿಂತ ಏನಿದೆ ಎಂಬ ಪ್ರಶ್ನೆಗೆ ಉತ್ತರವನ್ನು ಕೆದುಕುತ್ತಾ ಹೋದಾಗ ನಮಗೆ ಲಭಿಸುವ ಈ ಜ್ಞಾನದ ನಿಧಿಯಲ್ಲಿ(ಪ್ರಾಚೀನ ಕೈಬರಹಗಳಲ್ಲಿ) ಸಾಹಿತ್ಯ, ಸಂಸ್ಕೃತಿ, ಸಮಾಜ, ರಾಜಕೀಯ, ಆರ್ಥಿಕ, ವಿಜ್ಞಾನ, ತಂತ್ರಜ್ಞಾನ, ವಾಸ್ತುಶಿಲ್ಪ, ವೈದ್ಯ, ಸಂಗೀತ, ಚಿತ್ರಕಲೆ, ನಾಟ್ಯಶಾಸ್ತ್ರ, ಶಿಕ್ಷಣ, ಧಾರ್ಮಿಕ, ಜ್ಯೋತಿಷ್ಯ, ಖಗೋಳ, ಗಣಿತ ಇತ್ಯಾದಿ ಸಕಲ ಪ್ರಾಚೀನ ಜ್ಞಾನಶಾಖೆಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿದೆ. ಇಂತಹ ಪ್ರಾಚೀನ ಜ್ಞಾನದ ಉಸಿರನ್ನು ತನ್ನಲ್ಲಿ ಅಡಗಿಸಿರುವ ಈ ಪ್ರಾಚೀನ ಕೈ ಬರಹಗಳಾದ ಹಸ್ತಪ್ರತಿಗಳನ್ನು ಹಲವರ ಅನುಕೂಲದ ದೃಷ್ಟಿಯಿಂದ ಹಾಗೂ ಮುಂದಿನ ಪೀಳಿಗೆಗಾಗಿ ಹಾಗೂ ಅಧ್ಯಯನಕಾರರಿಗೆ ಪ್ರಯೋಜನದ ದೃಷ್ಟಿಯಿಂದ ಒಂದೆಡೆ ಸಂಗ್ರಹಿಸಿ ಸಂರಕ್ಷಿಸುವ ಸಂಸ್ಥೆ ಹಾಗೂ ಕೇಂದ್ರವನ್ನು 'ಹಸ್ತಪ್ರತಿ ಭಂಡಾರ ಹಾಗೂ ಹಸ್ತಪ್ರತಿ ಗ್ರಂಥಾಲಯ'ವೆಂದು ಹೇಳಲಾಗುವುದು. ಇಂತಹ 'ಹಸ್ತಪ್ರತಿ ಭಂಡಾರಗಳ ಚಾರಿತ್ರಿಕ ಕಥನ'ವನ್ನು ತಿಳಿಸುವುದು ನನ್ನ ಅಧ್ಯಯನದ ಉದ್ದೇಶವಾಗಿದೆ.

ಕರ್ನಾಟಕದ ಹಸ್ತಪ್ರತಿಗಳ ಬಹುಮುಖ್ಯ ನೆಲೆಗಳೆಂದರೆ ಅರಮನೆಗಳು, ದೇವಾಲಯಗಳು, ಮಠಗಳು, ವಿದ್ವಾಂಸರ ಮನೆಗಳು ಹಾಗೂ ಶೈಕ್ಷಣಿಕ ಕೇಂದ್ರಗಳಾಗಿದ್ದವು. ಆಯಾ ಧರ್ಮದ ಮಠಗಳಲ್ಲಿ ಆಯಾ ಧರ್ಮಕ್ಕೆ ಸಂಬಂಧಿಸಿದ ಶಿಕ್ಷಣವನ್ನು ನೀಡುತ್ತಿದ್ದುದರಿಂದ ಹಸ್ತಪ್ರತಿಗಳು ಸಂಗ್ರಹವಾಗುತ್ತಿದ್ದವು. ರಾಜಮಹಾರಾಜರು ತಮ್ಮ ಆಸ್ಥಾನದಲ್ಲಿ ಕವಿ, ಗಮಕಿಗಳು ಹಾಗೂ ವಾಗ್ಮಿಗಳಿಂದ

ಭೂಷಿತವಾಗಿರಬೇಕೆಂದು ಆಶಿಸಿದ್ದರಿಂದ ಕವಿಗಳಿಗೆ ಆಶ್ರಯ ನೀಡುತ್ತಿದ್ದರೂ ಇವರು ಸಾಹಿತ್ಯ ಪೋಷಕರಾಗಿರುತ್ತಿದ್ದರು. ಈ ಕಾರಣವಾಗಿಯೂ ಅರಮನೆಗಳಲ್ಲಿ ಹಾಗೂ ಸೂಕ್ತವಾದ ಸ್ಥಳಗಳಲ್ಲಿ ಗ್ರಂಥಾಲಯಗಳನ್ನು(ಭಂಡಾರ) ಸ್ಥಾಪಿಸುವುದರ ಮೂಲಕ ಜ್ಞಾನಸಂಸ್ಕೃತಿಗಳಾದ ಹಸ್ತಪ್ರತಿಗ್ರಂಥಗಳನ್ನು ಹಾಗೂ ಕೃತಿಗಳನ್ನು ಸಂಗ್ರಹಿಸುವುದರ ಜೊತೆಗೆ ಸಂರಕ್ಷಣೆಗೆ ಹೆಚ್ಚಿನ ಒತ್ತನ್ನು ನೀಡುತ್ತಿದ್ದರು. ಗ್ರಂಥಾಲಯಗಳಿಗಾಗಿ ಕೆಲವು ಕಡೆಗಳಲ್ಲಿ ಪ್ರತ್ಯೇಕ ಮಹಲುಗಳಿರುತ್ತಿದ್ದವು. ಹೀಗೆ ೧೫ನೇ ಶತಮಾನದ 'ಆಕಾಶಭೈರವಕಲ್ಪ'ವೆಂಬ ಹಸ್ತಪ್ರತಿಯಲ್ಲಿ ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದ ಕೆಲವು ಸಂಗತಿಗಳಿವೆ.[೧] ಆ ಕೃತಿಯ ೩೨ನೆಯ ಪಟಲದಲ್ಲಿ ಅರಮನೆಯ ಒಳಾಂಗಣ, ಒಳಕೊಠಡಿಗಳು ಹೇಗಿರಬೇಕೆಂಬುದನ್ನು 'ಜೊತೆಗೆ ಹಸ್ತಪ್ರತಿ ಗ್ರಂಥಾಲಯವನ್ನು ಯಾವ ರೀತಿ ನಿರ್ಮಾಣ ಮಾಡಬೇಕೆಂಬುವುದನ್ನು ವಿವರಿಸಲಾಗಿದೆ. "ಸರಸ್ವತಿ ಭಂಡಾರಗಳು ಅರಮನೆಯ ಐಶ್ವರ್ಯದ ಪ್ರತೀಕಗಳಾಗಿದ್ದವು" ಎಂಬುದನ್ನು ಹೆಚ್. ದೇವೀರಪ್ಪರವರು ಪ್ರಸ್ತಾಪಿಸಿದ್ದಾರೆ."[೨] ಹಸ್ತಪ್ರತಿಯ ಭಂಡಾರ ಎಂದರೇನು? ಮುದ್ರಿತ ಗ್ರಂಥಾಲಯ ಮತ್ತು ಇವುಗಳ ನಡುವಿನ ವ್ಯತ್ಯಾಸವೇನು? ಇದರ ಚಾರಿತ್ರಿಕ ಬೆಳವಣಿಗೆ ಯಾವ ರೀತಿಯಲ್ಲಿ ಸಾಗಿದೆ? ಇತ್ಯಾದಿ ಹಲವು ಮಾನ್ಯರ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನದ ಜೊತೆಗೆ 'ಬರವಣಿಗೆ' ಹೇಗೆ ಅಂಕುರ ಪಡೆಯುವುದು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಮಾನವನ ಬುದ್ಧಿಯ ಬೆಳವಣಿಗೆಯನ್ನು ಸಾಮಾನ್ಯವಾಗಿ ಮೂರು ವಿಧಗಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ ಮಾತನಾಡುವಿಕೆ, ರೇಖಾಚಿತ್ರಗಳನ್ನು ಬರೆಯುವಿಕೆ ಮತ್ತು ಬಣ್ಣದ ಚಿತ್ರಗಳನ್ನು ಬಿಡಿಸುವಿಕೆ. ಮಾತನಾಡಲು ಕಲಿತ ನಂತರ ಚಿತ್ರೀಕರಣ ಪ್ರಾರಂಭವಾಯಿತು. ಮಾತನಾಡಲು ಬಾರದಿದ್ದಾಗ ತಮ್ಮ ಅಭಿವ್ಯಕ್ತಿಯನ್ನು ಮತ್ತೊಬ್ಬರಿಗೆ ವಿಶದಪಡಿಸಲು ರೇಖಾ ಚಿತ್ರಗಳನ್ನು ಬರೆದು ತೋರುವುದರ ಮೂಲಕ ಆರಂಭವಾಯಿತೇ ಎಂಬುದು ಇಲ್ಲಿ ಪ್ರಕೃತವಲ್ಲ. ಮಾನವನು ಕಲಿತ ಮಾತನ್ನು, ಹೊಳೆದ ಭಾವನೆಯ ಅನುಭವವನ್ನು ಬರೆದಿಡಲು ಪ್ರಯತ್ನಿಸಿದನು. ಹೀಗೆ ಕಾಲದಿಂದ ಕಾಲಕ್ಕೆ ಒಂದೆಡೆಯಿಂದ ಮತ್ತೊಂದೆಡೆಗೆ ತಮ್ಮ ಅಭಿಪ್ರಾಯಗಳನ್ನು ಕಾಯ್ದಿಡುವಲ್ಲಿ ಅಥವಾ ವಿನಿಮಯ ಮಾಡಿಕೊಳ್ಳುವಲ್ಲಿ ಒಂದು ವಿಷಯವನ್ನು ಹಲವು ಜನ ಓದಿ ತಿಳಿಯುವಲ್ಲಿ ಬರವಣಿಗೆಯು ಸಾಧನವಾಗಿ ಬಂದು ಸೇರಿತು.

ಹೀಗೆ, ರಾಜಮಹಾರಾಜರು ತಾವು ಮಾಡಿದ ಕಾಯಿದೆ ಕಟ್ಟಳೆಗಳನ್ನು ದಾನ ಧರ್ಮಾದಿಗಳನ್ನು ಶಾಶ್ವತವಾಗಿರಿಸುವಲ್ಲಿ 'ಬರವಣಿಗೆಯ' ಅವಶ್ಯಕತೆ ಉಂಟಾಯಿತು. ಈ ಎಲ್ಲಾ ಪ್ರಯತ್ನದ ಫಲವಾಗಿ ವಿವಿಧ ರೂಪದ ವಸ್ತುಗಳಲ್ಲಿ ಬರವಣಿಗೆ ರೂಪುಗೊಂಡಿತು. ಹೀಗೆ ವಸ್ತುವಿನ ಮೇಲೆ ಕೈಯಿಂದ ಬರೆದ ಕೃತಿಗೆ ಅಥವಾ ಕೃತಿ ಭಾಗಕ್ಕೆ ಹಸ್ತಪ್ರತಿ ಎನ್ನಬಹುದು. ಇಂತಹ ಕೈಯಿಂದ ಬರೆದ ಪ್ರಾಚೀನ ಬರವಣಿಗೆಯು ಮೂಳೆಗಳ ಮೇಲೆ, ಕಬ್ಬಿಣದ ಮೇಲೆ, ಸುಟ್ಟ ಇಟ್ಟಿಗೆಯ ಮೇಲೆ, ಬಂಡೆಗಳ ಮೇಲೆ ಹಾಗೂ ತಾಳೆಗರಿಗಳು ಮತ್ತು ಭೂರ್ಜಪತ್ರಗಳು ಇತ್ಯಾದಿಗಳ ಮೇಲೆ ಬರವಣಿಗೆಯನ್ನು

ಬರೆಯಲಾಯಿತು. ಇವುಗಳಲ್ಲಿ ವಿಶೇಷವಾಗಿ ತಾಳೆಗರಿ, ಭೂರ್ಜಪತ್ರ, ಕಡತಗಳ ಮೇಲೆ ಬರೆದ ಪ್ರಾಚೀನ ಬರವಣಿಗೆಯನ್ನು 'ಹಸ್ತಪ್ರತಿ' ಎಂದು ಹೇಳಲಾಗುವುದು.

ಇಂತಹ ಹಸ್ತಪ್ರತಿಗಳನ್ನು ಮುಂದಿನ ಪೀಳಿಗೆಯ ಸಂಶೋಧಕರು, ಅಧ್ಯಯನಕಾರರು ಹಾಗೂ ಹವ್ಯಾಸಿಗರಿಗೆ ಸರಳವಾಗಿ ದೊರಕುವ ಉದ್ದೇಶದಿಂದ ಒಂದು ಸೂಕ್ತವಾದ ಸ್ಥಳದಲ್ಲಿ ಸೂಕ್ತವಾದ ಕಡತದಲ್ಲಿ ವ್ಯವಸ್ಥೆಗಳೊಂದಿಗೆ ಈ ಪ್ರಾಚೀನ ಕೈ ಬರಹಗಳಾದ ಹಸ್ತಪ್ರತಿಗಳನ್ನು ಸಂಗ್ರಹಿಸುವ ಹಾಗೂ ಸಂರಕ್ಷಿಸುವ ವ್ಯವಸ್ಥೆಗೆ ಹಸ್ತಪ್ರತಿ ಗ್ರಂಥಾಲಯಗಳು ಹಾಗೂ ಹಸ್ತಪ್ರತಿ ಭಂಡಾರಗಳೆಂದು ಕರೆಯಲಾಗುವುದು. ಈ ಗ್ರಂಥಾಲಯದಲ್ಲಿ ಸಂಗ್ರಹ ಸಂರಕ್ಷಣೆಯ ಜೊತೆಗೆ ಪ್ರಕಟಣೆ, ಪರಿಷ್ಕರಣೆ, ಸೂಚೀಕರಣ ಇತ್ಯಾದಿ ಕಾರ್ಯ ಚಟುವಟಿಕೆಗಳು ನಡೆಯುತ್ತವೆ. ಹೀಗೆ ಪ್ರಾಚೀನ ಕಾಲದಲ್ಲಿ ಬರವಣಿಗೆಯ ಸಾಧನಗಳು ಹೇಗೆ ರೂಪಗೊಳ್ಳುತ್ತಿದ್ದವೆಂಬುದನ್ನು ಪರಿಚಯಿಸುವ ಪ್ರಯತ್ನ ಮಾಡಲಾಗುತ್ತಿದೆ.

ಸಾಮಗ್ರಿಗಳನ್ನು ಬರವಣಿಗೆಗೆ ಈಗಿನಂತೆ ಕಾಗದ, ಲೇಖನಿಗಳು ದೊರೆಯದಿದ್ದಾಗ ತಮ್ಮ ಕೈಗೆ ಸಿಕ್ಕಿದ ಕೆಲವು ಸಾಮಗ್ರಿಗಳನ್ನು ಬರೆಯುವ ಸಾಧನಗಳನ್ನಾಗಿ ಜನರು ಬಳಸತೊಡಗಿದರು. ಹೀಗೆ ಜನರು ತಮ್ಮ ತಮ್ಮ ಬುದ್ಧಿ ಸಾಮರ್ಥ್ಯಕ್ಕನುಗುಣವಾಗಿ ಅವುಗಳನ್ನು ವಿವಿಧ ರೀತಿಯಲ್ಲಿ ಹದಗೊಳಿಸಿ ಬರೆಯಲು ಬಳಸತೊಡಗಿದರು. ಅವುಗಳಲ್ಲಿ 'ಈಜಿಪ್ಟ್ ದೇಶದ ನದಿ ಪ್ರದೇಶದಲ್ಲಿ ಬೆಳೆಯುತ್ತಿದ್ದ ಪಪ್ಯೆರಸ್(Papyras) ಎಂಬ ಜೊಂಡು ಜಾತಿಯ ಸಸ್ಯದಿಂದ ತಯಾರಿಸಿದ ಹಾಳೆಗಳನ್ನು ಯುರೋಪ್ ಪ್ರದೇಶಗಳಲ್ಲಿ ಹೆಚ್ಚಾಗಿ ಉಪಯೋಗಿಸುತ್ತಿದ್ದರು'[೩] ಹೀಗೆ ವಿದೇಶಗಳಲ್ಲಿ ತಮ್ಮ ತಮ್ಮ ಅನುಕೂಲತೆಗೆ ತಕ್ಕಂತೆ ವಸ್ತುಗಳನ್ನು ಬರವಣಿಗೆಗಾಗಿ ಬಳಸುತ್ತಿರಬಹುದು. ಆದರೆ ವಿಶೇಷವಾಗಿ ಭಾರತದಲ್ಲಿ ಉಪಯೋಗಿಸಿರುವ ವಸ್ತುಗಳಲ್ಲಿ ತಾಡಪತ್ರ ಅಥವಾ ತಾಳೆಗರಿ, ಭೂರ್ಜಪತ್ರ ಮತ್ತು ಕಾಗದಗಳು ಹೆಚ್ಚಾಗಿದ್ದವು. ಆದರೆ, ಉತ್ತರ ಭಾರತದಲ್ಲಿ ತಾಮ್ರಪತ್ರ, ಭೂರ್ಜಪತ್ರ ಉಪಯೋಗವಾಗಿದ್ದರೆ, ದಕ್ಷಿಣದಲ್ಲಿ ಓಲೆ ಅಥವಾ ತಾಳೆಗರಿಗಳು ಬಹುಪ್ರಸಿದ್ಧಿಯನ್ನು ಪಡೆದಿದ್ದವು. ಇವುಗಳ ಮೇಲೆ ಕಂಠದಿಂದ ಅಕ್ಷರಗಳನ್ನು ಕೊರೆದು ವಿವಿಧ ಗ್ರಂಥಗಳನ್ನಾಗಿ ರಚಿಸಿ ಬಹುಕಾಲ ಬಾಳಿಕೆ ಬರುವ ರೀತಿಯಲ್ಲಿ ಅಂದರೆ, ಪ್ರಸ್ತುತ ಸಂದರ್ಭದವರೆಗೂ ಬಾಳಿಕೆ ಬರುವುದರ ಜೊತೆಗೆ ಇಂದಿಗೂ ನಮಗೆ ಅವು ಮುಖ್ಯ ಆಕರಗಳಾಗಿವೆ. ಇಂತಹ ಪ್ರಾಚೀನ ಆಕರಗಳಲ್ಲಿ ಅಡಗಿರುವ ಸಂಸ್ಕೃತಿ, ಚರಿತ್ರೆ, ಸಕಲಜ್ಞಾನದ ಫಸಲನ್ನು ಮುಂದಿನ ಪೀಳಿಗೆಗಾಗಿ ಹಾಗೂ ಅಧ್ಯಯನದ ಅನುಕೂಲಕ್ಕಾಗಿ ಸೂಕ್ತ ಸ್ಥಳದಲ್ಲಿ ಸಂಗ್ರಹಿಸುವ ವ್ಯವಸ್ಥೆಗೆ ಹಸ್ತಪ್ರತಿ ಗ್ರಂಥಾಲಯವೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಹಸ್ತಪ್ರತಿ ಭಂಡಾರದ ಅರ್ಥ, ಬೆಳವಣಿಗೆ ಇತ್ಯಾದಿ ವಿಚಾರಗಳನ್ನು ಪರಿಚಯಿಸುವ ಪ್ರಯತ್ನ ಮಾಡಲಾಗುತ್ತಿದೆ.

೨. ಗ್ರಂಥಾಲಯದ ಅರ್ಥ

ಸಾಮಾನ್ಯವಾಗಿ 'ಭಂಡಾರ' ಮತ್ತು 'ಗ್ರಂಥಾಲಯ' ಎಂಬ ಎರಡು ಪದಗಳು ಒಂದೇ ಅರ್ಥ ನೀಡುತ್ತಿದ್ದರೂ ಬಳಕೆಯಲ್ಲಿ ಮಾತ್ರ ಬೇರೆ ಬೇರೆಯಾಗಿರುವುದು ಕಂಡುಬರುತ್ತವೆ. ಪ್ರಾಚೀನ

ಕಾಲದಲ್ಲಿ ಹಸ್ತಪ್ರತಿಗಳನ್ನು ಸಂಗ್ರಹಿಸುವ ಸ್ಥಳವನ್ನು 'ಭಂಡಾರ' ಎಂದು ಕರೆದರೆ ಪ್ರಸ್ತುತ ಸಂದರ್ಭದಲ್ಲಿ ಮುದ್ರಿತ ಪುಸ್ತಕಗಳನ್ನು ಸಂಗ್ರಹಿಸುವ ಸ್ಥಳಕ್ಕೆ ಗ್ರಂಥಾಲಯವೆಂದು ಕರೆಯಲಾಗುತ್ತಿದೆ. ಭಂಡಾರದಲ್ಲಿಯ 'ಭಂಡ' ಪದಕ್ಕೆ ಎರಡು ಅರ್ಥಗಳಿರುವವು. ಅವುಗಳೆಂದರೆ ೧. ಕರಗ್ರಹಣದಿಂದ ಬಂದ ರಾಜಕೋಶ, ರಾಜ್ಯಧನ, ೨. ವಣಿಜನ ಬಡ್ಡಿ ವ್ಯವಹಾರದ ಮೂಲಧನ(ಶಬ್ದಕಲ್ಪದ್ರುಮವ). ಬಂಡಲ: ಭಂಡ+ಆಗಾರ=ಭಂಡಾಗಾರ ಇಲ್ಲಿ 'ಗಾ' ಲೋಪ ಹೊಂದಿ 'ಭಂಡಾರ'ವೆಂಬ ಪ್ರಾಕೃತ ರೂಪ ಉಳಿದಿದೆ.[೪] ಸಾಮಾನ್ಯವಾಗಿ 'ಭಂಡಾರ' ಮತ್ತು 'ಗ್ರಂಥಾಲಯ'ವೆಂಬ ಎರಡು ಪದಗಳು ಒಂದೇ ಅರ್ಥವನ್ನು ನೀಡುತ್ತವೆ. ಆದರೆ ಇತ್ತೀಚಿನ ಗ್ರಂಥತ್ವದ ಅಧ್ಯಯನ ಮತ್ತು ಪ್ರಯೋಜನದ ದೃಷ್ಟಿಯಿಂದ ಗ್ರಂಥಾಲಯಶಾಸ್ತ್ರ(Library Science) ಹೆಸರಿನ ಹೊಸಶಾಸ್ತ್ರವೇ ಆಕಾರ ಪಡೆದಿದೆ. ದೇಶ–ವಿದೇಶಗಳ ಖ್ಯಾತ ವಿದ್ವಾಂಸರು ಹೊಸ ಹೊಸ ಸಿದ್ಧಾಂತಗಳನ್ನು ಶೋಧಿಸಿ 'ಗ್ರಂಥಾಲಯಶಾಸ್ತ್ರ'ವನ್ನು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ(Library and Information Science) ಅರ್ಥಕ್ಕೆ ಮುಟ್ಟಿಸಿರುತ್ತಾರೆ. ಇದರಿಂದ Library ಎಂಬ ಪದದ ಪ್ರತಿ ಅಕ್ಷರಕ್ಕೂ ಮೌಲಿಕವಾದ ಅರ್ಥವಿದೆ. ಅದೆಂದರೆ "you Literate by accessing reading and referring informative books" 'ಮಾಹಿತಿಯುಕ್ತ ಪುಸ್ತಕಗಳನ್ನು ಓದುವ, ಆಕರಿಸುವ ಹಾಗೂ ಅವಲೋಕಿಸುವ ಮೂಲಕ ಜ್ಞಾನಿಯಾಗು' ಎಂದು ಅರ್ಥೈಸಿರುವುದು[೫] ಸ್ಪಷ್ಟವಾಗಿದೆ. ಇಂತಹದೇ ಮಹತ್ವವಾದ ಜ್ಞಾನಸಂಗತಿಗಳನ್ನು ತನ್ನಲ್ಲಿ ಅಡಗಿಸಿಕೊಂಡಿರುವ ಗ್ರಂಥಾಲಯಕ್ಕೆ ಆಧಾರಸ್ತಂಭವಾಗಿರುವ ರಂಗನಾಥನ್ ಅವರು ವಿಜ್ಞಾನಕ್ಕೆ ಐನ್‌ಸ್ಟೀನ್ ಹೇಗೋ ಗ್ರಂಥಾಲಯ ಚಳುವಳಿಗೆ ಇವರು ಪ್ರಮುಖರು ಎಂಬ ಮಾತು ಸಮರ್ಥನೀಯ.

ಒಂದು ದೇಶಕ್ಕೆ ಗ್ರಂಥಾಲಯ ಎಷ್ಟು? ಮುಖ್ಯವೆಂಬುದನ್ನು ದೇಶದ ಮಹಾತ್ಮರು ತಮ್ಮದೇ ಆದ ರೀತಿಯಲ್ಲಿ ಬಿಂಬಿಸಿದ್ದಾರೆ. ಮೊದಲಿಗೆ ಮಹಾತ್ಮಗಾಂಧೀಜಿಯವರು: 'ಗ್ರಂಥವಿಲ್ಲದ ಕೋಣೆ ಆತ್ಮವಿಲ್ಲದ ದೇಹದಂತೆ' ಎಂದಿದ್ದಾರೆ. 'ಜವಹರ್‌ಲಾಲ್ ನೆಹರೂ ಅವರು: "A Library is the key to the knowledge of the world" ಎಂದು ತಿಳಿಸಿದ್ದಾರೆ[೬] ಹಾಗೆಯೇ ಥಾಮಸ್ ಬಾರ್ಥೋಲಿನ್ (ಡೆನ್ಮಾರ್ಕ್ ದೇಶದ ಗ್ರಂಥಪಾಲಕ) "ಗ್ರಂಥಗಳಿಲ್ಲದಿದ್ದಲ್ಲಿ ದೇವರೇ ಮೂಕನಾಗಿ ಬಿಡುತ್ತಾನೆ. ನ್ಯಾಯದೇವತೆ ನಿದ್ರಿಸುತ್ತಾಳೆ. ವಿಜ್ಞಾನ ದೇವತೆ ವಿಶ್ರಾಂತಿ ಪಡೆಯುತ್ತಾಳೆ. ತತ್ವಜ್ಞಾನ ಕುಂಟುತ್ತದೆ: ಸಾಹಿತ್ಯ ಬಾಯಿಗೆ ಬೀಗ ಹಾಕಿಕೊಂಡು ಬಿಡುತ್ತದೆ; ಉಳಿದುದೆಲ್ಲವೂ ಅಂಧಕಾರದಲ್ಲಿ ಅಡಗಿ ಬಿಡುತ್ತದೆ"[೭] ಎಂದು ತಿಳಿಸಿದ್ದಾರೆ. ಈ ವಿವಿಧ ಗಣ್ಯರ ಅನುಭವದ ನುಡಿಗಳಿಂದ ಭಂಡಾರಗಳು 'ಮನುಷ್ಯರು ಹಾಗೂ ನಾಡಿಗೆ' ಎಷ್ಟು ಅವಶ್ಯಕ ಎಂಬ ಮನವರಿಕೆಯಾಗುತ್ತದೆ. ಪ್ರಾಚೀನ ಕೈ ಬರವಣಿಗೆಗೆ(ತಾಳೆಗರಿ, ಭೂರ್ಜಪತ್ರ, ಕಡತ) ಸಂಬಂಧಿಸಿದ ಗ್ರಂಥಗಳನ್ನು ಒಂದು ವ್ಯವಸ್ಥಿತವಾದ ಸ್ಥಳದಲ್ಲಿ ಸಂಗ್ರಹಿಸಿ ಸಂರಕ್ಷಿಸುವ ಜೊತೆಗೆ ಸಂಶೋಧಕರಿಗೆ, ಅಧ್ಯಯನಕಾರರಿಗೆ ಅನುಕೂಲ ಕಲ್ಪಿಸುವ ವ್ಯವಸ್ಥೆ ಹಾಗೂ ಸಂಸ್ಥೆಗೆ 'ಹಸ್ತಪ್ರತಿ ಗ್ರಂಥಾಲಯ' ಹಾಗೂ 'ಹಸ್ತಪ್ರತಿ ಭಂಡಾರ' ಎಂದು ಕರೆಯಲಾಗುತ್ತಿದೆ. ಆಂಗ್ಲ ಭಾಷೆಯಲ್ಲಿ ಇದನ್ನು Manuscript Library ಎಂದು ಹೇಳಲಾಗುವುದು.

ಗ್ರಂಥಾಲಯಗಳ ಬೆಳವಣಿಗೆ

ಹಸ್ತಪ್ರತಿಗಳು ನಗರ, ಪಟ್ಟಣ, ಹಳ್ಳಿ, ಎಲ್ಲಾ ಕಡೆಗಳಲ್ಲಿಯೂ ಹರಡಿಕೊಂಡಿವೆ. ಪ್ರಾಚೀನ ಕರ್ನಾಟಕದ ಮಠ, ಮಂದಿರ, ಬಸದಿ, ಭವನ, ಮಹಾಮನೆ, ಅರಮನೆ, ಛತ್ರಗಳಲ್ಲಿ ಭಕ್ತಿ ಮತ್ತು ಅನ್ನದಾಸೋಹ ಮತ್ತು ಜ್ಞಾನದಾಸೋಹ ದಿನವೂ ನಡೆಯುತ್ತಲೇ ಇರುತ್ತಿದ್ದಿತು. ಗ್ರಂಥದಾನ ಮಾಡುವುದು, ಅನ್ನದಾನ, ಅಭಯದಾನ ಭೈಷಜ್ಯದಾನಗಳಂತೆ ಒಂದು ಪುಣ್ಯಕಾರ್ಯವೆಂಬ ನಂಬಿಕೆ ನಮ್ಮ ಪೂರ್ವಜರಲ್ಲಿ ರೂಢಿಗತವಾಗಿದ್ದಿತು. ಇದಕ್ಕೆ ಜೈನರು 'ಶಾಸ್ತ್ರದಾನ' ಎಂದು ಕರೆಯುತ್ತಿದ್ದರು. ಈಗಲೂ ಈ ಬಗೆಯ ದಾನ ಮಾಡುತ್ತಿರುವುದು ಗಮನಾರ್ಹ.

ಮುಖ್ಯವಾಗಿ ಪ್ರಜೆಗಳ ಸಂಖ್ಯೆ ಕಡಿಮೆ ಇದ್ದುದರಿಂದ ನಾಡಿನಲ್ಲಿ ಸುಖ-ಶಾಂತಿಗಳು ನೆಲೆಸಿದ್ದು ಜನರು ಬಹುಮಟ್ಟಿಗೆ ನೆಮ್ಮದಿಯಿಂದಿದ್ದರು. ಅವರಲ್ಲಿ ಧರ್ಮ, ನೀತಿ, ಸದಾಚಾರ, ಸಭ್ಯತೆಗಳಲ್ಲಿ ಅಪಾರವಾದ ಅಭಿಮಾನವಿದ್ದಿತು. ಎಲ್ಲಕ್ಕೂ ಮಿಗಿಲಾಗಿ ಸ್ವತಂತ್ರವಾಗಿ ಯೋಚನೆ ಮಾಡುವ ಶಕ್ತಿಯಿದ್ದಿತು. ಅತಿ ಮುಖ್ಯವಾಗಿ ರಾಜಕೀಯ ಗೊಂದಲಗಳಿರಲಿಲ್ಲ. ಆದುದರಿಂದ ಒಂದು ಹೊಸ ಕಾವ್ಯ ಹುಟ್ಟಿದ ಕೂಡಲೆ ಅದನ್ನು ವಾಚಿಸುವವರು, ಸಹೃದಯರು, ಲಿಪಿಕಾರರು, ಲಿಪ್ಯಂತರ ಮಾಡಿಸುವವರು ಹಲವರು ಇರುತ್ತಿದ್ದರು. ಈ ರೀತಿ ಸಾಮಾನ್ಯವಾಗಿ ಎಲ್ಲಾ ನೂತನ ಕನ್ನಡ ಕೃತಿಗಳಿಗೂ ಅನ್ವಯಿಸುತ್ತಿದ್ದಿತೆಂದು ತೋರುತ್ತದೆ. ಹೀಗೆ ಅರಮನೆ, ಗುರುಮನೆ, ಮಠ, ಮಂದಿರ ಬಸದಿಗಳಲ್ಲಿ ಸಾಹಿತ್ಯಾಭಿಮಾನಿಗಳಾದ ಅಧಿಕಾರಿಗಳು ಮತ್ತು ಶ್ರೀಮಂತರ ಮನೆಗಳಲ್ಲಿಯಂತೂ ಈ ಕೆಲಸಕ್ಕಾಗಿಯೇ ಲೇಖಕ, ವಾಚಕ, ವಾದಿಗಳ ಬಳಗವೇ ಇರುತ್ತಿತ್ತು. ಪುಸ್ತಕ ಭಂಡಾರಗಳಿಗಾಗಿ ಇಂತಹ ಕಡೆಗಳಲ್ಲೆಲ್ಲ ಪ್ರತ್ಯೇಕ ಮಹಲುಗಳಿರುತ್ತಿದ್ದವು. ೧೫ನೆಯ ಶತಮಾನದ 'ಆಕಾಶಭೈರವಕಲ್ಪ' ಎಂಬ ಹಸ್ತಪ್ರತಿ ಕೃತಿಯಲ್ಲಿ ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದ ಕೆಲವು ಸಂಗತಿಗಳಿವೆ. ಆ ಕೃತಿಯ ೩೦ನೆಯ ಪಟಲದಲ್ಲಿ ಅರಮನೆಯ ಒಳಾಂಗಣ, ಒಳಕೊಠಡಿಗಳು ಹೇಗಿರಬೇಕೆಂಬುದನ್ನು, ಹಸ್ತಪ್ರತಿ ಭಂಡಾರದ ಕಟ್ಟಡವು ಎಲ್ಲಿ ಹೇಗಿರಬೇಕೆಂಬುದನ್ನು ಸಂಪೂರ್ಣವಾಗಿ ವಿವರಿಸಲಾಗಿದೆ. ಸರಸ್ವತಿ ಭಂಡಾರಗಳು ಅರಮನೆಯ ಐಶ್ವರ್ಯದ ಪ್ರತೀಕಗಳಾಗಿದ್ದವು. ಕೆಲವು ಸಂದರ್ಭಗಳಲ್ಲಿ ನೂರಾರು ಆಕರ ಗ್ರಂಥಗಳಿಲ್ಲದೆ ಸಾಧ್ಯವಾಗುತ್ತಿದ್ದಿತೆ? ಹೀಗಾಗಿ ಗ್ರಂಥಕರ್ತೃಗಳು ತಮ್ಮ ಸ್ವಂತದ ಇಲ್ಲವೆ ಮಠಮಂದಿರಗಳ ಅರಮನೆಗಳ ಗ್ರಂಥಭಂಡಾರಗಳ ನೆರವನ್ನು ಪಡೆದಿರಲೇಬೇಕೆಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಗ್ರಂಥಭಂಡಾರಗಳ ಬೆಳವಣಿಗೆಯ ರೀತಿಯನ್ನು ಗಮನಿಸುವುದಾದರೆ ಭಂಡಾರದಲ್ಲಿಲ್ಲದ ಕೃತಿಗಳನ್ನು ಹಸ್ತಪ್ರತಿಗಳನ್ನು ಮಾಡಿಸಿ ತರಿಸುವುದು, ಸ್ಥಳೀಯ ಕೃತಿಕರ್ತರು ಗ್ರಂಥಗಳನ್ನು ನಕಲು ಮಾಡಿಸಿ ಬೇರೆ ಬೇರೆ ಭಂಡಾರಗಳಿಗೆ, ಸತ್ಪಾತ್ರರಿಗೆ ದಾನ ಮಾಡುವುದರ ಜೊತೆಗೆ ಹಳೆಯದಾಗಿ ಅನುಪಯುಕ್ತವಾಗಿದ್ದ ಪ್ರತಿಗಳಿಂದ ಹೊಸ ಪ್ರತಿಗಳನ್ನು ಮಾಡುವುದು ಇವೆಲ್ಲಾ ಅಂದಿನ ಗ್ರಂಥಭಂಡಾರಗಳ ಕಾರ್ಯಚಟುವಟಿಕೆಗಳಾಗಿದ್ದವು. ಈ ಮೇಲಿನ ಅಂಶಗಳನ್ನು ಗಮನಿಸಿದಾಗ

ಹಸ್ತಪ್ರತಿಭಂಡಾರಗಳ ಈ ಅಧ್ಯಾಯದಲ್ಲಿ ಬೆಳವಣಿಗೆ(Development) ದಿನದಿಂದ ದಿನಕ್ಕೆ ಹೇಗೆ ಬೆಳೆಯುತ್ತಾ ಬಂದಿರುವುದರ ಬಗ್ಗೆ ಸ್ಪಷ್ಟ ಚಿತ್ರಣ ಲಭಿಸುವುದರ ಜೊತೆಗೆ ಈ ವಿಚಾರಕ್ಕೆ ಒಂದು ಮಹತ್ವದ ಸಂಗತಿಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಕರ್ನಾಟಕದಲ್ಲಿ ದೊಡ್ಡ ಪ್ರಮಾಣದಲ್ಲಿ ಸಾಹಿತ್ಯದ ಪ್ರಸಾರ ಹಾಗೂ ಕಾರ್ಯ ನಡೆಯಿತೋ ಇಲ್ಲವೋ ತಿಳಿಯದು. ೧೧ನೆಯ ಶತಮಾನದಲ್ಲಿ ಒಂದು ಪ್ರಸಾರ ಕಾರ್ಯ 'ದಾನ ಚಿಂತಾಮಣಿ' ಅತ್ತಿಮಬ್ಬೆಯಿಂದ ನಡೆದಿತ್ತು. ಅತ್ತಿಮಬ್ಬೆಯು ಕವಿಚಕ್ರವರ್ತಿ ರನ್ನನಿಂದ 'ಅಜಿತತೀರ್ಥಕರ ಪುರಾಣ ತಿಲಕವನ್ನು' ಬರೆಯಿಸಿದಳು. ಹಾಗೆಯೇ ಪೊನ್ನ ಕವಿಯಿಂದ ಬರೆಯಿಸಿದ್ದ 'ಶಾಂತಿಪುರಾಣದ' ಸಾವಿರ ಪ್ರತಿಗಳನ್ನು ಮಾಡಿಸಿ ಅವನ್ನು ಸತ್ಪಾತ್ರರಿಗೆ ದಾನ ಮಾಡಿದ್ದು ಇವೆರಡೂ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಅವಿಸ್ಮರಣೀಯ ಘಟನೆಗಳು. ಜೊತೆಗೆ ಹಸ್ತಪ್ರತಿ ಭಂಡಾರಗಳ ಬೆಳವಣಿಗೆಯ ಮೇಲೆ ಇವು ಸ್ಪಷ್ಟವಾದ ಬೆಳಕನ್ನು ಚೆಲ್ಲುತ್ತವೆ. ನಂತರ ೧೮ನೆಯ ಶತಮಾನದಲ್ಲಿ ಬಿದನೂರ ಸಂಸ್ಥಾನದ ದೊರೆಯಾಗಿದ್ದ 'ಕೆಳದಿಯ ಬಸವಭೂಪಾಲನ ಧರ್ಮಾಭಿಮಾನ ಸಾಹಿತ್ಯಾಭಿಮಾನಗಳು ಅತ್ತಿಮಬ್ಬೆಯನ್ನು ಮರೆಸುವಂತಹವು ಮೀರಿಸಿರುವಂತಹವು; ಜಂಗಮ ಪರ್ವವನ್ನು ಏರ್ಪಡಿಸಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮ ಮೂರ್ತಿಗಳ್ಗೆ... ಸಂತುಷ್ಟಿಪಡಿಸಿಯವರ್ಗೆ ನಾನಾ ವಿಧ ವಿಚಿತ್ರತರ ವಸ್ತ್ರ ಕಂಬಳಿ ಕಂಥೆ 'ಆಗಮ ಶಿವಶಾಸ್ತ್ರ ಲಿಖಿತ ಪುಸ್ತಕ'... ಕೊಡಿಸಿ ಪೇಟೆಯಲ್ಲಿ ಆರಾಧನಾ ಪೂರ್ವಕಂ ಮಹೋತ್ಸವ ಮೆರವಣಿಗೆಗಳಂ ಮಾಡಿಸಿ ಶಾಶ್ವತ ಧರ್ಮ ಕೀರ್ತಿಗಳಂ ಸಂಪಾದಿಸಿ ರಾಜ್ಯಂಗೆಯ್ಯುತಿರ್ದ 'ಕೆಳದಿನೃಪ ವಿಜಯದ' ನಿರೂಪಣೆ' – ಈ ಆಗಮ ಶಿವಶಾಸ್ತ್ರ ಲಿಖಿತ ಪುಸ್ತಕಗಳನ್ನು ಕೊಟ್ಟದ್ದು ವೀರಶೈವರಲ್ಲಿಯೂ ಗ್ರಂಥದಾನ ಪದ್ಧತಿಯಿತ್ತೆಂಬುದಕ್ಕೆ ಪ್ರಮುಖ ಸಾಕ್ಷಿಯಾಗಿದೆ.

ಭೀಮಕವಿಯ 'ಬಸವಪುರಾಣದಿಂದ' ವ್ಯಕ್ತವಾಗುವ ಪ್ರಮುಖ ವಿಚಾರ ಲಿಂಗವಂತರ ಗ್ರಂಥದಾನ ನೀತಿಗೆ ಒಂದು ಭವ್ಯವಾದ ಪರಂಪರೆ ಇತ್ತು ಎಂಬುದಕ್ಕೆ ಕೆಲವು ಪ್ರಮಾಣಗಳೂ ಉಂಟು. ಕಲ್ಯಾಣ ಬಸವಣ್ಣನವರ ಮಹಾಮನೆಯಲ್ಲಿ 'ವಚನ ಭಂಡಾರವೆಂಬ' ಹಸ್ತಪ್ರತಿ ಸಂಗ್ರಹಾಲಯವಿದ್ದಿತ್ತೆಂದು ಕಲ್ಯಾಣದ ವಚನ ಭಂಡಾರಿ 'ಶಾಂತರಸರು' ಶರಣರು ನುಡಿದ ವಚನಗಳನ್ನು ಆಗಾಗಲೇ ಪ್ರತಿ ಮಾಡಿಸಿ ಆ ಭಂಡಾರದಲ್ಲಿಡುತ್ತಿದ್ದರೆಂದೂ 'ಶರಣ ಸಾಹಿತ್ಯದಿಂದ' ಮುಖ್ಯವಾಗಿ ಭೀಮಕವಿಯ ಬಸವಪುರಾಣದಿಂದ ವ್ಯಕ್ತವಾಗುತ್ತದೆ. ಆದರೆ, ವಚನಗಳನ್ನು ಬರೆಸಿ ಕಲ್ಯಾಣದಲ್ಲಿ ಮಾತ್ರ ಇಡುತ್ತಿದ್ದರೆ? ಜಯಸಿಂಹ ಸಿದ್ಧರಾಜನಂತೆ ಅವುಗಳ ಪ್ರತಿಗಳನ್ನು ಬರೆಸಿ ದೇಶದ ಬೇರೆಬೇರೆ ಭಾಗಗಳಿಗೆ ಕಳುಹಿಸುತ್ತಿದ್ದರೆ ಎಂಬುದಕ್ಕೆ ಸ್ಪಷ್ಟ ನಿದರ್ಶನಗಳು ಲಭಿಸಿಲ್ಲ.

ಇನ್ನೊಂದು ವಿಶೇಷ ಕಲ್ಯಾಣದ ವಚನ ಭಂಡಾರಿ ಶಾಂತರಸರ ಕೈ ಕೆಳಗೆ ಹಲವು ಜನ ಲಿಪಿಕಾರರಿದ್ದು ವಚನಗಳನ್ನು ನಕಲು ಮಾಡುತ್ತಿದ್ದಿರಬೇಕು. ಕೇಳಿಕೆಯ ಕಲೆಯಲ್ಲಿ ನಿಪುಣರಾದ ಮಾಹೇಶ್ವರರು ವಚನ ಪ್ರಚಾರ ಮಾಡುತ್ತ ಬಹುಶಃ ವಚನಗಳ ಹಸ್ತಪ್ರತಿಗಳನ್ನು ಮಾರಾಟ

ಮಾಡುತ್ತಾ ಸಂಚಾರ ಮಾಡುತ್ತಿದ್ದಿರಬೇಕು. ಇದರಿಂದ ಪುರಾತನರ ಮತ್ತು ಬಸವಣ್ಣನವರ ಹಸ್ತಪ್ರತಿಗಳ ಇರುವಿಕೆಗೆ ಈ ಊಹೆಯನ್ನು ಬಲಪಡಿಸುತ್ತದೆ.

ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದಾಗ ದೊರೆಯುವ ಸ್ಪಷ್ಟವಾದ ಮಾಹಿತಿ ಏನೆಂದರೆ ಕರ್ನಾಟಕದ ಮುಖ್ಯ ಪಟ್ಟಣಗಳಲ್ಲಿ, ದೊಡ್ಡ ದೊಡ್ಡ ಗ್ರಾಮಗಳಲ್ಲಿ, ಸಾಂಸ್ಕೃತಿಕ ಕೇಂದ್ರಗಳಲ್ಲಿ ಸಾವಿರಾರು ವರ್ಷಗಳ ಹಿಂದಿನಿಂದಲೂ ಹಲವು ಜನತಾ ವಿದ್ಯಾಲಯಗಳಲ್ಲಿ ಹಲವು 'ಗ್ರಂಥ ಭಂಡಾರಗಳು' ಇದ್ದವು. ಕನ್ನಡದಲ್ಲಿ ಗ್ರಂಥರಚನೆ, ಮಾಡಿರುವ ಕವಿಗಳು, ವಿದ್ವಾಂಸರು, ಶಾಸ್ತ್ರಜ್ಞರು ಅಧ್ಯಯನಕಾರರು ಇಂತಹ ಗ್ರಂಥ ಭಂಡಾರಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಉಪಕೃತ ರಾಗಿರುವರೆಂದು ಮನವರಿಕೆಯಾಗುತ್ತದೆ.

ಹೀಗೆ, ಸಮಾಜದಲ್ಲಿರುವ ಎಲ್ಲ ದಾನಗಳಲ್ಲಿ 'ಗ್ರಂಥದಾನವು' ಶ್ರೇಷ್ಠವೆಂದು ನಂಬಿದ್ದರು. ನಮ್ಮ ಪೂರ್ವಜರು ತಮ್ಮ ಗ್ರಂಥಧಾನದ ಅನುಕೂಲತೆಗಾಗಿ ಇಂತಹ ಗ್ರಂಥಭಂಡಾರಗಳಿಗೆ ನಾಂದಿ ಹಾಡಿರುವುದಕ್ಕೆ ಸ್ಪಷ್ಟ ನಿದರ್ಶನಗಳನ್ನು ತಿಳಿಸಲಾಗಿದೆ. ಈ ಗ್ರಂಥಭಂಡಾರವು ಕಾಲದಿಂದ ಕಾಲಕ್ಕೆ ತನ್ನ ಕಾರ್ಯ ಚಟುವಟಿಕೆಗಳನ್ನು ಬದಲಾಯಿಸುತ್ತಾ ಸಂರಕ್ಷಣೆಯ ಜೊತೆಗೆ ಸಂಗ್ರಹಣೆ, ಪ್ರಕಟಣೆ, ಪರಿಷ್ಕರಣೆ, ಸೂಚೀಕರಣ ಇತ್ಯಾದಿಯನ್ನು ಮೈಗೂಡಿಸಿಕೊಂಡು ಆಧುನಿಕ ಕಾಲದಲ್ಲಿ ಸಹ ತನ್ನ ಮೌಲ್ಯದ ಬೆಳಕನ್ನು ಮೂಡಿಸಲು ಪ್ರಯತ್ನಿಸುತ್ತಿದೆ. ಇದನ್ನು ತಿಳಿಯುವ ಮುನ್ನ ಹಸ್ತಪ್ರತಿ ಭಂಡಾರಗಳ ಅರ್ಥ ಮತ್ತು ಸ್ವರೂಪವನ್ನು ಪರಿಚಯಿಸುವ ಪ್ರಯತ್ನ ಮಾಡಲಾಗುತ್ತಿದೆ.

೩. ಹಸ್ತಪ್ರತಿ ಭಂಡಾರದ ಅರ್ಥ, ಸ್ವರೂಪ ಮತ್ತು ಬೆಳವಣಿಗೆ

ಪ್ರಾಚೀನ ಗ್ರಂಥಗಳ ಸಂಪಾದನಾ ಕಾರ್ಯಕ್ಕೆ, ಅಧ್ಯಯನಕಾರರಿಗೆ, ಸಂಶೋಧಕರಿಗೆ, ವಿದ್ವಾಂಸರಿಗೆ ಮತ್ತು ಆಸಕ್ತರಿಗೆ ಬೇಕಾದ ಹಸ್ತಪ್ರತಿಗಳು ಸುಲಭವಾಗಿ ದೊರೆಯುವಂತಿರಬೇಕಾದುದು ಅತ್ಯಂತ ಅವಶ್ಯಕ. ಇದು ಸಾಧ್ಯವಾಗಬೇಕಾರೆ 'ಹಸ್ತಪ್ರತಿ ಭಂಡಾರಗಳನ್ನು' ರೂಪಗೊಳಿಸುವುದು ಜೊತೆಗೆ ಕಾಪಾಡಿಕೊಂಡು ಹೋಗುವುದು ಅನಿವಾರ್ಯವಾಗಿದೆ.

ಸಾಹಿತ್ಯ ಸಂಸ್ಕೃತಿಯ ಮೂರ್ತ ಪ್ರತಿಬಿಂಬಗಳು ಸಂಯೋಜಿತ ಜ್ಞಾನ ಪರಂಪರೆಯೊಂದರ ಫಲಿತಗಳು ಹಸ್ತಪ್ರತಿಗಳು. ಅನೇಕ ಅನುಭವಗಳ ಲೋಕಗ್ರಹಿಕೆಗಳ ಸಮ್ಮಿಳನವನ್ನೊಳಗೊಂಡ ಚರಪಠ್ಯಗಳಾದ ಇವು ಹಲವಾರು ಶತಮಾನಗಳಿಂದ ಪ್ರತಿಗಳಾಗಿ, ಮರುಪ್ರತಿಗಳಾಗಿ ಬಂದ ಹಸ್ತಪ್ರತಿಗಳು. ಆದರೆ ದೊರೆತ ಹಸ್ತಪ್ರತಿಗಳು ವಿವಿಧೆಡೆಗಳಲ್ಲಿ ಸಂಗ್ರಹವಾಗಿ ಕೆಲವು ಉಪಯೋಗವಾದರೆ ಮತ್ತೆ ಕೆಲವು ಮೂಲೆಗುಂಪಾಗಿ ಹಾಳಾಗಿ ಹೋಗಿರುವುದುಂಟು. ಪ್ರಸ್ತುತ ಸಂದರ್ಭದಲ್ಲಿ ದೊರೆಯುವಷ್ಟನ್ನಾದರೂ ಸಂಗ್ರಹಿಸಿ ಸಂರಕ್ಷಿಸಬೇಕೆಂಬ ಬಯಕೆಯಿಂದ ನಾಡಿನ ಹಲವು ವಿಶ್ವವಿದ್ಯಾಲಯಗಳು, ಸಂಸ್ಥೆಗಳು, ಮಠಮಾನ್ಯಗಳು, ಆಸಕ್ತಿಯಿಂದ ಕೆಲಸ ಮಾಡುತ್ತಿವೆ. ಈ ಹಸ್ತಪ್ರತಿ ಭಂಡಾರಗಳು ವರ್ತಮಾನದಲ್ಲಿ ಯಾವ ಕಾರ್ಯ ಚಟುವಟಿಕೆಯ ಮೂಲಕ ಬೆಳಕನ್ನು ನೀಡುತ್ತಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ. 'ಹಸ್ತಪ್ರತಿ' ಪದದ ಅರ್ಥ ಹಾಗೂ ಭಂಡಾರ ಗ್ರಂಥಾಲಯ ಪದದ ಅರ್ಥವನ್ನು ಪರಿಚಯಿಸುವ ಪ್ರಯತ್ನ ಮಾಡಲಾಗುತ್ತಿದೆ.

ಹಸ್ತಪ್ರತಿಯ ಅರ್ಥ

'ಹಸ್ತಪ್ರತಿ' ಎಂಬ ಪದವನ್ನು ಆಂಗ್ಲಭಾಷೆಯಲ್ಲಿ Manuscript ಎಂದು ಹೇಳಲಾಗುವುದು. ಲ್ಯಾಟಿನ್ನಿನ Manus(ಕೈ) ಮತ್ತು Scriptum(ಬರವಣಿಗೆ) ಎಂಬ ಪದಗಳ ಸಂಯುಕ್ತ ರೂಪವಾದ manucriptus ಎಂದರೆ ಕೈ ಬರವಣಿಗೆ ಎಂದರ್ಥ. ಇದನ್ನು ಇಂಗ್ಲೀಷ್ ಭಾಷೆಯು Manuscript ಎಂದು ತದ್ಭವೀಕರಿಸಿಕೊಂಡಿತು. ನಮ್ಮ ವಿದ್ವಾಂಸರು 'ಕೈಬರವಣಿಗೆ'ಯನ್ನೇ 'ಹಸ್ತಪ್ರತಿ' ಎಂದು ಭಾಷಾಂತರಿಸಿಕೊಂಡರು. ಹಸ್ತಪ್ರತಿಯೆಂದರೆ ಕೈಯಿಂದ ರೂಪ ಪಡೆದ ಪ್ರಾಚೀನ ಬರವಣಿಗೆಯಾಗಿದೆ ಎಂದು ಕಲುಬುರ್ಗಿಯವರು ತಿಳಿಸಿರುವುದು ಸ್ಪಷ್ಟವಾಗಿದೆ. ಪ್ರಾಚೀನ ಕಾಲದಲ್ಲಿ ಹಸ್ತಪ್ರತಿಗೆ ಕವಳಿಗೆ, ಹೊತ್ತುಗೆ, ಗ್ರಂಥವೆಂದೂ ಕರೆಯುತ್ತಿದ್ದರು. ಇಂದು Manuscript ಎಂಬ ಪರಿಕಲ್ಪನೆಯ ಪ್ರಭಾವದಿಂದಾಗಿ 'ಹಸ್ತಪ್ರತಿ' ಎಂಬ ಒಂದೇ ಪದದಿಂದ ಗುರುತಿಸಲಾಗುತ್ತಿದೆ. 'ಹಸ್ತಪ್ರತಿಶಾಸ್ತ್ರ' ಎಂಬ ಪದವಾಗಲೀ ಇದರ ಇಂಗ್ಲಿಷ್ ಸಂವಾದಿಯಾದ Manuscriptology ಎಂಬ ಪದವಾಗಲೀ ಇತ್ತೀಚೆಗೆ ಸೃಷ್ಟಿಯಾಗಿದೆ. ಬಹುಶಃ ಮಂಡ್ಯದಲ್ಲಿ ಜರುಗಿದ 'ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ'(೧೯೭೪) ಆರ್.ಸಿ.ಹಿರೇಮಠ ಅವರು 'ಹಸ್ತಪ್ರತಿಗಳ ಸಂಗ್ರಹ ಅವುಗಳ ಸೂಚೀಕರಣ ಮೊದಲಾದವುಗಳನ್ನೊಳ ಗೊಂಡ Manuscriptology ಎಂಬ ಹೊಸ ಶಾಸ್ತ್ರವೇ ಬೆಳೆದು ಬರಬೇಕಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದೇ ರೀತಿ ಗದುಗಿನ ಶ್ರೀ ತೋಂಟದಾರ್ಯ ಮಠದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡ ಹಾ.ಮಾ.ನಾಯಕ ಅವರು ೧೯೮೧ನೆಯ ಇಸ್ವಿಯನ್ನು 'ಹಸ್ತಪ್ರತಿ ವರ್ಷವೆಂದು' ಸರಕಾರ ಘೋಷಿಸಬೇಕು ಎಂದು ಒತ್ತಾಯಿಸಿರುವುದು ಗಮನಾರ್ಹವೇ ಸರಿ.

ಹಸ್ತಪ್ರತಿ ಭಂಡಾರದ ಸ್ವರೂಪ

ನಾಡಿಗೆ ಪ್ರಾಚೀನ ಕೈಬರಹಗಳು ಸಾಂಸ್ಕೃತಿಕ ಸಾಹಿತ್ಯದ ವಿವಿಧ ಆಯಾಮಗಳನ್ನು ಪ್ರತಿಬಿಂಬಿಸುವ ನಕ್ಷತ್ರಗಳು. ಹಸ್ತಪ್ರತಿಗಳು ಜ್ಞಾನದ ಸಕಲ ವಿದ್ಯೆಗಳನ್ನು ತೊಡಗಿಸಿಕೊಂಡಿರುವುದರಿಂದ ಕನ್ನಡ ಸಾಹಿತ್ಯವನ್ನು ಪುನರ್ ಕಟ್ಟಲು ಸಾಧ್ಯವಾಗುವ ಆಕರಗಳನ್ನು ಹೊಂದಿವೆ. ಇಂತಹ ಅಮೂಲ್ಯ ಆಧಾರಗಳನ್ನು ಮುಂದಿನ ಪೀಳಿಗೆಗಾಗಿ ಸಂಗ್ರಹಿಸಿ, ಸಂರಕ್ಷಿಸುವ ಉದ್ದೇಶದಿಂದ ಸ್ಥಾಪನೆಯಾಗುವ ಸಂಸ್ಥೆಗೆ 'ಹಸ್ತಪ್ರತಿ ಭಂಡಾರ' ಎಂದು ಹೇಳುವುದು. ಇಂತಹ ಸರಸ್ವತಿ ಮಂದಿರಗಳ(ಹಸ್ತಪ್ರತಿ ಭಂಡಾರಗಳ) ಸ್ವರೂಪ ನಾನಾ ಬಗೆಯಲ್ಲಿವೆ.

ಹಸ್ತಪ್ರತಿ ಭಂಡಾರಗಳು ವಾಗೀಶ್ವರಿಯ ದೇವಾಲಯಗಳಾಗಿರಬೇಕು. ವಾಗ್ದೇವಿ ಶಾರದೆಯ ಮಂದಿರಗಳ ಪರಂಪರೆಯನ್ನು ಭಾರತೀಯ ಸಂಸ್ಕೃತಿಯ ಬೆಳವಣಿಗೆಯಲ್ಲಿ ಕಾಣುತ್ತೇವೆ. ಅವು ಸಮ್ಯಕ್‌ಜ್ಞಾನದ ಪ್ರತೀಕ. ಈ ಜ್ಞಾನದೇಗುಲಗಳಿಗೆ ರಾಜಾಶ್ರಯ ಮುಕ್ತಹಸ್ತವಾಗಿತ್ತು.

ಕುವೆಂಪು ಅವರು ಚಿತ್ರಿಸಿರುವ ಈ ಗ್ರಂಥರಾಶಿ ರೂಪ ಶಾರದೆಯ ಪೂಜೆ ಆಗಮಗಳಲ್ಲಿ ವಿಧಿಗೊಂಡಿರುವಂತೆಯೇ ಇದೆ. ಪೂರ್ವ ಕಾಲದಲ್ಲಿ ನಮ್ಮ ನಾಡಿನ ಹಿರಿಯರ ಮನೆ ಮನೆಗಳಲ್ಲಿ ಉತ್ಸವವಾಗಿ ಈ ಪೂಜೆ ನೆರವೇರುತ್ತಿತ್ತು. ಇದು ಕುರುಡು ಸಂಪ್ರದಾಯವಾಗಿರಲಿಲ್ಲ. ಆಗ ಆಸ್ತಿಕ

ಪ್ರಾಜ್ಞರ ಶ್ರದ್ಧಾನ್ವಿತ ಆಚರಣೆಯೆನಿಸಿತ್ತು. ಆದ್ದರಿಂದ ನಮ್ಮ ನಾಡಿನ ಅಮೂಲ್ಯ ಆಸ್ತಿಯಾದ ಹಸ್ತಪ್ರತಿಗಳು ಹಾಳಾಗದೆ ಉಳಿದುಕೊಂಡಿವೆ. ಹೀಗೆ ಹಸ್ತಪ್ರತಿ ಭಂಡಾರಗಳ ಸ್ವರೂಪವನ್ನು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

*** ಹಸ್ತಪ್ರತಿಗಳ ಯೋಗ್ಯತಾನಿರ್ಣಯ**

ಹಸ್ತಪ್ರತಿಗಳ ಯೋಗ್ಯತಾನಿರ್ಣಯ ಅತ್ಯಂತ ಕಷ್ಟಕರವಾದುದು. ಒಂದು ದಾಖಲೆಯ ಮೂಲ ಸ್ವರೂಪ, ಅದನ್ನು ಬರೆದಿರುವ ದಿನಾಂಕ ಅಥವಾ ಕಾಲ, ಅದನ್ನು ಬರೆಯಲು ಬಳಸಿರುವ ಸಾಮಗ್ರಿಯ ಬಾಳಿಕೆ, ಅದು ಒಳಗೊಂಡಿರುವ ವಿಷಯ ಇತ್ಯಾದಿ ಅಂಶಗಳ ಮೇಲೆ ಬೆಳಕು ಚೆಲ್ಲುವ ಕಾಗದ ಪತ್ರಗಳನ್ನು ಗ್ರಂಥಪಾಲಕನು ಆಳವಾಗಿ ಅಧ್ಯಯನ ಮಾಡಬೇಕು. ತನ್ನ ವೃತ್ತಿಯಲ್ಲಿ ಶಿಕ್ಷಣ, ಪರಿಣತಿ ಪಡೆದಿರುವವನು ಮಾತ್ರ ಜಾಣ್ಮೆಯಿಂದ ಸೂಕ್ಷ್ಮತೆಯಿಂದ ನಿರ್ಧಾರ ಕೈಕೊಳ್ಳಲು ಸಾಧ್ಯ.

*** ಜೋಡಣೆ**

ಹಸ್ತಪ್ರತಿಗಳ ಜೋಡಣೆ ಅಕಾರಾದಿಯಾಗಿರಬಹುದು, ಕಾಲಾನುಕ್ರಮವಾಗಿರಬಹುದು, ವಿಷಯಾನುಗುಣವಾಗಿರಬಹುದು, ದಾನಿಗಳ ಹೆಸರಿಗನುಗುಣವಾಗಿರಬಹುದು ಅಥವಾ ಇವೆಲ್ಲವುಗಳ ಮಿಶ್ರಣವಾಗಿ ಸೇರ್ಪಡೆಯಾದ ಕ್ರಮಸಂಖ್ಯಾನುಗುಣವಾಗಿರಬಹುದು. ಜೋಡಣೆಯ ಸಮಸ್ಯೆಗಳಿಗೆ ಪ್ರಮಾಣಭೂತವಾದ ಪರಿಹಾರಗಳು ಯಾವುದೂ ಇಲ್ಲ. ಸುಸಂಬದ್ಧತೆಯ ಗುಣಗಳು ಇವೆಯಾದರೂ ಒಂದು ನಿರ್ದಿಷ್ಟ ಸಂಗ್ರಹಕ್ಕೆ ಅತ್ಯುತ್ತಮ ಪರಿಹಾರ ಯಾವುದು ಎನ್ನುವುದರ ಆಧಾರದ ಮೇಲೆ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಸುಲಭವಾಗಿ ಸಿಕ್ಕುವಿಕೆ, ಪ್ರಸ್ತುತ ಇರುವ ವ್ಯವಸ್ಥೆಯ ಉಪಯುಕ್ತತೆ, ಸಂಗ್ರಹದ ಸ್ವಸಂಪೂರ್ಣತೆ, ಅದರ ಉಪಯೋಗದ ತೀವ್ರತೆ ಮುಂತಾದ ಅಂಶಗಳ ಮೇಲೆ ಪರಿಹಾರ ನಿಲ್ಲುತ್ತದೆ. ಒಟ್ಟಿನಲ್ಲಿ ಯಾವುದೇ ಕ್ರಮ ಅನುಸರಿಸಿದ್ದರೂ ಭಾಷೆ, ವಿಷಯ, ಲಿಪಿ ಭಿನ್ನವಾಗಿ ಗುರುತಿಸಲು ಬರುವಂತಿರಬೇಕು.

*** ಹಸ್ತಪ್ರತಿ ಬಳಕೆದಾರರು**

ಒಂದು ಘಟನೆಯ ಸಂಗತಿಯ ಸಂಶೋಧಕರು, ಅಭ್ಯಾಸಿಗಳು, ಗ್ರಂಥಸಂಪಾದಕರು ಪರಿಷ್ಕರಣ ಗೊಳಿಸುವವರು, ವೃತ್ತಿ ಪಂಡಿತರು ಹಾಗೂ ಶೈಕ್ಷಣಿಕ ಪ್ರವಾಸಿಗರು ಹೀಗೆ ವಿವಿಧ ಪದಗಳನ್ನು ಒಂದೇ ಅರ್ಥದಲ್ಲಿ ಕಾಣಲಾಗಿದೆ. ಸಾಮಾನ್ಯವಾಗಿ ಹಸ್ತಪ್ರತಿ ಗ್ರಂಥಾಲಯದಲ್ಲಿ ವಿವಿಧ ಕ್ಷೇತ್ರಗಳ ಸಂಶೋಧಕರಿಗೆ, ಸರಕಾರಿ ಅಧಿಕಾರಿಗಳಿಗೆ ಅನಿರ್ಬಂಧಿತವಾಗಿ ಹಸ್ತಪ್ರತಿಗಳು ದೊರಕುತ್ತವೆ. ಇದು ಪ್ರಾಚೀನ ಹಸ್ತಪ್ರತಿಗಳ ವಿಷಯದಲ್ಲಿ ಸರಿಯಾದ ಕ್ರಮ. ಬಳಕೆದಾರರು ಹಸ್ತಪ್ರತಿಗಳ ಉಪಯೋಗ ಮಾಡುವಲ್ಲಿ ಸೂಕ್ಷ್ಮವಾಗಿ ಕೈಗಳು ಕೆಲಸ ಮಾಡುತ್ತಿರಬೇಕು. ಮುದ್ರಿತ ಗ್ರಂಥಗಳನ್ನು ಬೇಕಾಬಿಟ್ಟಿ ಉಪಯೋಗಿಸಿದಂತೆ ಹಸ್ತಪ್ರತಿಗಳನ್ನು ಎಲ್ಲೆಂದರಲ್ಲಿ ಹೊತ್ತುಕೊಂಡು ಹೋಗಲು ಹಲವರ ಕೈಯಲ್ಲಿ ಕೊಡುತ್ತಿರಲಿಲ್ಲ. ಒಂದು ಹಸ್ತಪ್ರತಿಯನ್ನು ವಿರೂಪಗೊಳಿಸುವುದೆಂದರೆ ತನ್ನ ಸ್ವಾಧಿಯನ್ನು ಸಚ್ಚಾರಿತ್ರ್ಯವುಳ್ಳ ವ್ಯಕ್ತಿ ವಿರೂಪಗೊಳಿಸಿದಂತೆ ಎನ್ನುವ ಭಾವನೆ ಬಳಕೆದಾರನಲ್ಲಿರಬೇಕು. ಪವಿತ್ರವಾದ ಗುಣಗಳಿರಬೇಕು,

ಜಾಗರೂಕತೆಯಿಂದ ಉಪಯೋಗಿಸುವಂತಿರಬೇಕು. ಹಸ್ತಪ್ರತಿಗ್ರಂಥಾಲಯದಲ್ಲಿಯೇ ಹಸ್ತಪ್ರತಿಗಳ ಅಧ್ಯಯನ ಮಾಡುವ ಪರಿಪಾಟ ರೂಢಿ ಮಾಡಿಕೊಂಡಿರಬೇಕು. ಹಸ್ತಪ್ರತಿ ನಾಶವಾದರೆ ನಮ್ಮ ಸಮಾಜಕ್ಕೆ, ದೇಶಕ್ಕೆ ದ್ರೋಹ ಬಗೆದಂತೆ ಎಂಬ ಆದರ್ಶ ವಿಚಾರಗಳು ಒಡಮೂಡಿರಬೇಕು. ವೈಜ್ಞಾನಿಕ ರೀತಿಯಲ್ಲಿ ಅವುಗಳನ್ನು ಉಪಯೋಗಿಸಬೇಕು. ಹಸ್ತಪ್ರತಿಗಳನ್ನು ಗ್ರಂಥಪಾಲಕರ ಅನುಮತಿ ಮತ್ತು ಮಾರ್ಗದರ್ಶನಗಳಿಲ್ಲದೆ ಬಳಸಬಾರದು.

*** ಉಪಯೋಗಿಸುವ ವಿಧಾನ**

ಮುದ್ರಿತ ಗ್ರಂಥಗಳನ್ನು ಮತ್ತು ಹಸ್ತಪ್ರತಿಗಳನ್ನು ಉಪಯೋಗಿಸುವ ವಿಧಾನಗಳಲ್ಲಿ ಸಾಕಷ್ಟು ಭಿನ್ನತೆಯಿದೆ. ಸಾಹಿತ್ಯಿಕ ಹಕ್ಕುಗಳ ಮೇಲೆ ಸೂಕ್ತ ವಾಚನದ ಅಗತ್ಯಗಳಿಗೆ ತಕ್ಕಂತೆ ನಿರಂತರವಾದ ನಿಯಂತ್ರಣವನ್ನು ಇಟ್ಟುಕೊಳ್ಳುವ ಅನುಗುಣವಾದ ತಂತ್ರಗಳನ್ನು ಯೋಚಿಸಬೇಕು.

ಒಂದು ಹಸ್ತಪ್ರತಿ ಗ್ರಂಥಾಲಯವು ಹಕ್ಕುಗಳನ್ನು ನಿರಾಕರಿಸುವ ಅಥವಾ ಅನುಮತಿ ಕೊಡುವ ಹೊಣೆಗಾರಿಕೆಯನ್ನು ಪಡೆದುಕೊಳ್ಳಲಾರದು. ಅದು ಬಳಕೆದಾರನದೇ ಸಂಪೂರ್ಣ ಹೊಣೆಗಾರಿಕೆ. ಆದರೆ ಅವನಿಗೆ ಅವನ ಬಾಧ್ಯತೆಗಳ ಬಗ್ಗೆ ಅರಿವು ಮೂಡಿಸಬೇಕು.

ಒಂದು ಹಸ್ತಪ್ರತಿ ಗ್ರಂಥಾಲಯದ ಸಂಗ್ರಹಗಳು ವಿದ್ವಾಂಸರಿಗೆ ತುಂಬಾ ಉಪಯೋಗವಾಗಬೇಕಾದರೆ ಗ್ರಂಥಾಲಯ ಸೂಕ್ತವಾದ ಹುಡುಕು ಸಲಕರಣೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಲೇಬೇಕು. ಹಸ್ತಪ್ರತಿ ಗ್ರಂಥಾಲಯ ಮುಖ್ಯವಾಗಿ ಸಿದ್ಧ ಮಾಡಿಕೊಂಡಿರುವ ಉಪಯುಕ್ತ ಸಾಧನವೆಂದರೆ 'ಹಸ್ತಪ್ರತಿಗಳ ವಿಸ್ತೃತ ಸೂಚಿ' ಮತ್ತು ನಾಮಸೂಚಿ. ಅವುಗಳನ್ನು ಭಾಷಾನುಸಾರ, ವಿಷಯಾನುಸಾರ ವಿಂಗಡಿಸಿ ವಿವರಣಾತ್ಮಕ ಪಟ್ಟಿ ಸಿದ್ಧಪಡಿಸಬೇಕು. ವಿವರಣಾತ್ಮಕ ಸೂಚಿಯನ್ನು ಮುದ್ರಿಸಿ ಹಲವು ಪ್ರತಿಗಳನ್ನು ಮಾರಾಟಕ್ಕೆ ಇಟ್ಟರೆ ಅದು ಅತ್ಯಂತ ಪರಿಣಾಮಕಾರಿ ಹುಡುಕುವ ಸಲಕರಣೆಯಾಗುತ್ತದೆ. ಬಳಕೆದಾರನು ದೂರದ ಸ್ಥಳಗಳಿಂದಲೇ ತನ್ನ ವಿಷಯ ಗೊತ್ತುಪಡಿಸಿಕೊಂಡು ತೀವ್ರವಾಗಿ ಮಾಹಿತಿ ಪಡೆಯಬಹುದು. ಈ ರೀತಿ ವಿವರಣಾತ್ಮಕ ಸೂಚಿ ಮುದ್ರಿಸುವುದರಿಂದ ಹಸ್ತಪ್ರತಿ ಗ್ರಂಥಾಲಯದ ಸಂಗ್ರಹ ಪರಿಚಯವನ್ನು ಬೇಗನೆ ತಿಳಿದುಕೊಳ್ಳಲು ಸಾಧ್ಯವಿದೆ. ಅಲ್ಲದೆ ಆಯಾ ಕಪಾಟಿನಲ್ಲಿ ಹಸ್ತಪ್ರತಿಗಳ ಅಲ್ಪ ಪರಿಚಯ ಪಟ್ಟಿಗಳನ್ನು ಅಂಟಿಸಬೇಕು. ಸೂಕ್ಷ್ಮದರ್ಶಕಯಂತ್ರಗಳು, ಮೈಕ್ರೋಫಿಲ್ಮ್‌ಗಳು ಹಾಗೂ ಇತರ ವೈಜ್ಞಾನಿಕ ಸಲಕರಣೆಗಳನ್ನು ಇಟ್ಟಿರಬೇಕು. ಒಟ್ಟಾರೆ ಸ್ವರೂಪದ ಅಂಶಗಳಾಗಿ ಅವಲೋಕಿಸಿ ಕಾಲಕ್ಕೆ ತಕ್ಕಂತೆ, ಹೊಂದಾಣಿಕೆ ಸಹಕಾರ ಪ್ರೋತ್ಸಾಹ ಇತ್ಯಾದಿ ಅಂಶಗಳನ್ನು ಅಳವಡಿಸಿಕೊಂಡು ತನ್ನ ಸೇವೆಯನ್ನು ಆರಂಭಿಸಬೇಕು. ಹೀಗೆ ಹಸ್ತಪ್ರತಿ ಭಂಡಾರದ ಆಧುನಿಕ ಸಂದರ್ಭದಲ್ಲಿ ಕರ್ತವ್ಯ ಹಾಗೂ ಇರಬೇಕಾದ ವಿಭಾಗಗಳ ಪರಿಚಯವನ್ನು ಹೀಗೆ ಮಾಡಲಾಗಿದೆ.

ಹಸ್ತಪ್ರತಿ ಗ್ರಂಥಾಲಯದ ವಿಭಾಗಗಳು

ಕೈಬರಹದ ಸಂಗ್ರಹ ಕೇಂದ್ರಗಳು ಹಾಗೂ ಮುದ್ರಿತ ಪುಸ್ತಕಗಳ ಸಂಗ್ರಹ ಕೇಂದ್ರಕ್ಕೂ ತುಂಬಾ ವ್ಯತ್ಯಾಸವಿದೆ. ಹಲವು ಹಸ್ತಪ್ರತಿತಜ್ಞರು ಗುರುತಿಸಿದಂತೆ 'ಹಸ್ತಪ್ರತಿ ಭಂಡಾರ' ಎನ್ನಿಸಿಕೊಳ್ಳಬೇಕಾದರೆ

ಈ ಕೆಳಗಿನ ಅಂಶಗಳನ್ನು ಹೊಂದಿರಬೇಕೆಂದು ಸೂಚಿಸಿದ್ದಾರೆ.

೧. ಆಕರಣ ವಿಭಾಗ
೨. ತಾಂತ್ರಿಕ ವಿಭಾಗ
೩. ಸಂರಕ್ಷಣಾ ವಿಭಾಗ
೪. ಗ್ರಂಥಸಂಪಾದನೆ ವಿಭಾಗ
೫. ಗ್ರಂಥಪರಿಚಲನ ವಿಭಾಗ
೬. ಅಧ್ಯಯನ ವಿಭಾಗ
೭. ಗ್ರಂಥಾಲಯ ವಿಭಾಗ
೮. ಯಂತ್ರೋಪಕರಣ ವಿಭಾಗ
೯. ಪ್ರದರ್ಶನ ವಿಭಾಗ
೧೦. ಸಮಾಲೋಚನ ವಿಭಾಗ
೧೧. ಸಭಾಗೃಹ ವಿಭಾಗ
೧೨. ವಿಶ್ರಾಂತಿ ವಿಭಾಗ

ಈ ಮೇಲಿನ ಎಲ್ಲಾ ವಿಭಾಗಗಳು ಪರಿಪೂರ್ಣ ಹಸ್ತಪ್ರತಿ ಭಂಡಾರ ಎನಿಸುತ್ತವೆ. **ಹಸ್ತಪ್ರತಿ ಭಂಡಾರವು ಕೆಲವು ಕನಿಷ್ಠ ಅಗತ್ಯತೆಗಳನ್ನು ಹೊಂದಿರಲೇಬೇಕು.**

೧. ಇಡೀ ಆವರಣ ಅಗ್ನಿ ನಿರೋಧಕವಾಗಿರಬೇಕು.

೨. ಸಂಶೋಧಕರಿಗೆ ಹಸ್ತಪ್ರತಿಗಳು ಎಟುಕುವ ಸ್ಥಳದಲ್ಲಿರಬೇಕು ಅಥವಾ ವ್ಯವಸ್ಥಿತವಾದ ಒಂದು ಕ್ರಮದಲ್ಲಿ ದೊರಕುವಂತಿರಬೇಕು.

೩. ಸಿಬ್ಬಂದಿ ವರ್ಗದವರಿಗೆ ತಕ್ಕ ಅರ್ಹತೆಯಿರಬೇಕು. ಇದಕ್ಕಾಗಿಯೇ ಕೊಟ್ಟ ವಿಶೇಷ ಪರಿಣತಿ ಅವರಿಗೆ ಇರಬೇಕು.

೪. ಹಣಕಾಸಿನ ಪರಿಸ್ಥಿತಿ ಮೇಲಿನ ಮೂರು ಅಗತ್ಯಗಳನ್ನು ಪೂರೈಸುವಂತಿರಬೇಕು.

*** ಆಧುನಿಕ ಹಸ್ತಪ್ರತಿ ಗ್ರಂಥಾಲಯದ ಉದ್ದೇಶಗಳು**

ಆಧುನಿಕ ಹಸ್ತಪ್ರತಿ ಗ್ರಂಥಾಲಯವು ಪ್ರಮುಖವಾಗಿ ನಾಲ್ಕು ಕರ್ತವ್ಯಗಳನ್ನು ಒಳಗೊಂಡಿವೆ.

೧. ಎಲ್ಲಿಗೇ ಆಗಲಿ ಒಯ್ದು ಉಪಯೋಗಿಸಬಹುದಾದ ಹುಡುಕು ಸಲಕರಣೆಗಳನ್ನು ಒದಗಿಸಿ ವಿದ್ವಾಂಸರಿಗೆ ಸಂಗ್ರಹಗಳ ಬಗೆಗೆ ವಿವರಗಳನ್ನು ಒದಗಿಸಬೇಕು.

೨. ಮೂಲಮಾತೃಕೆಗಳನ್ನು ಪ್ರಕಟಿಸುವುದರ ಮೂಲಕ ವ್ಯಾಪಕವಾಗಿ ಅವು ವಿದ್ವಾಂಸರಿಗೂ ಸಾಮಾನ್ಯ ಜನರಿಗೂ ದೊರಕುವಂತೆ ಮಾಡುತ್ತವೆ.

೩. ತತ್ವಗಳು, ಕಾರ್ಯ ವಿಧಾನಗಳು ಮುಂತಾದವುಗಳ ಮೇಲೆ ಬೆಳಕು ಚೆಲ್ಲುವಂತೆ ಪ್ರಕಟಣೆಗಳ ಮೂಲಕ ಆ ನಿಟ್ಟಿನಲ್ಲಿ ಇತರ ಗ್ರಂಥಾಲಯಗಳಿಗೆ ಶಿಕ್ಷಣ ಕೊಡುತ್ತದೆ. ಹಾಗೆಯೇ ಹೊಸ ಹೊಸದಾಗಿ ಬರುವ ಸಿಬ್ಬಂದಿ ವರ್ಗಕ್ಕೆ ಆ ವಿವರಗಳನ್ನು ಒದಗಿಸಿದಂತಾಗುತ್ತದೆ.

೪. ದಾನಿಗಳು, ದಾನ ಮಾಡಲಿಚ್ಛಿಸುವವರು ಮತ್ತು ಬಳಕೆದಾರರು ಎಲ್ಲರಲ್ಲಿಯೂ ಸಾಮಾನ್ಯವಾಗಿ ಸದ್ಭಾವನೆ ಮೂಡುತ್ತದೆ. ಇದರಿಂದ ಪ್ರಕಟಣೆಗಳ ಮಹತ್ವ ಸಾರ್ವಜನಿಕ ಸಂಪರ್ಕದ ಕರ್ತವ್ಯವನ್ನು ನಿರ್ವಹಿಸುತ್ತವೆ.

೫. ಜೀರ್ಣವಾಗಲಿರುವ ಹಸ್ತಪ್ರತಿಗಳನ್ನು ತುರ್ತಾಗಿ ಮೈಕ್ರೋಫಿಲ್ಮ್ ಮಾಡುವುದು ಅವಶ್ಯ.

ಈ ಮೇಲಿನ ಅಂಶಗಳು ಒಂದಲ್ಲ ಒಂದು ರೀತಿಯ ಹಸ್ತಪ್ರತಿ ಗ್ರಂಥಾಲಯಗಳ ಸ್ವರೂಪದ ಅಂಶಗಳೇ ಆಗಿರುತ್ತವೆ. ಇಂತಹ ಅಂಶಗಳನ್ನು 'ಹಸ್ತಪ್ರತಿ ಭಂಡಾರಗಳು' ಅಳವಡಿಸಿಕೊಂಡರೆ ನಾಡಿನ ಅಧ್ಯಯನಕಾರರು ಹಾಗೂ ಸಂಶೋಧಕರಿಂದ ಪ್ರಾಚೀನ ಬರವಣಿಗೆಯಲ್ಲಿ ಅಡಗಿರುವ ಮಹತ್ವದ ಸಂಗತಿಗಳು ಬೆಳಕಿಗೆ ಬರುವ ಎಲ್ಲ ಸಾಧ್ಯತೆಗಳಿರುವವು.

೪. ಹಸ್ತಪ್ರತಿ ಭಂಡಾರಗಳ ಚಾರಿತ್ರಿಕ ಹಿನ್ನೆಲೆ

೪.೧. ಪ್ರಾಚೀನ ಗ್ರಂಥಾಲಯಗಳು

"ಕಷ್ಟೇನ್ ಲಿಖಿತಂ ಮಾಯಾ ಯತ್ನೇನ ಪರಿಪಾಲಯೇತ್" ಎಂದು ನಮ್ಮ ಹಸ್ತಪ್ರತಿ ಲಿಪಿಕಾರರು ಆಗಾಗ ಹೇಳುವುದುಂಟು. ಕಷ್ಟಪಟ್ಟು ಬರೆದಿದ್ದೇನೆ. ಪ್ರಯತ್ನಪೂರ್ವಕವಾಗಿ ರಕ್ಷಿಸಿರಿ ಎಂದು ಸಮಸ್ತ ಲಿಪಿಕಾರರ ಪ್ರತಿನಿಧಿಯಾಗಿ ಈ ಲಿಪಿಕಾರರು ಇಲ್ಲಿ ತಿಳಿಸಿದ್ದಾರೆ. ಇದರಂತೆ ಕೃತಿಕಾರರೂ

ಒರೆದಂಗೆ ಬರೆದಂಗೆ ವಾಚಿಪಂ।
ಗುರುತರಾನಂದದಿಂದಿದರ ತಾತ್ಪರ್ಯಮಂ ವಿಸ್ತರಿಸಿ ಪೇಳ್ದವಂಗೆ
ಪರಮಸದ್ಭಕ್ತಿಯಿಂದಾದರಿಸಿ ಕೇಳ್ದಂಗೆ॥

ಸಕಲ ಸೌಭಾಗ್ಯಗಳು ಒದಗಿ ಬರಲಿ ಎಂದು ಹಾರೈಸಿದ್ದಾರೆ. ಪ್ರತಿಗಳ ರಕ್ಷಣೆ ಎಂದರೆ ಕೃತಿಗಳ ರಕ್ಷಣೆ. ಕೃತಿಗಳ ರಕ್ಷಣೆಯೆಂದರೆ ಅಕ್ಷರ ರೂಪದಲ್ಲಿ ಸಂಸ್ಕೃತಿಯನ್ನು ಸಂರಕ್ಷಿಸುವುದಾಗಿದೆ. ಹೀಗಾಗಿ ದೇಶದ ತುಂಬ ಚದುರಿ ಹೋಗಿರುವ ಹಸ್ತಪ್ರತಿಗಳನ್ನು ವಿವಿಧ ಯೋಜನೆಗಳು ಹಾಗೂ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಹಾಗೂ ಸಂರಕ್ಷಣೆಯಲ್ಲಿರುವ ಜ್ಞಾನದ ಸಂಪತ್ತು ನಾಡಿಗೆ ತಿಳಿಸುವ ಸಂಪೂರ್ಣ ಜವಾಬ್ದಾರಿ ಹಸ್ತಪ್ರತಿ ಭಂಡಾರಗಳ ಮೇಲಿದೆ. ಇದರಿಂದ ಪ್ರಾಚೀನ ಕಾಲದಲ್ಲಿ ಕೆಲವು ವಿಶ್ವವಿದ್ಯಾಲಯಗಳಲ್ಲಿ ವಿವಿಧ ಗ್ರಂಥಾಲಯಗಳು ಇದ್ದವು. ಅವುಗಳ ಕಾರ್ಯಶೀಲತೆಯನ್ನು ಪರಿಚಯಿಸುವ ಕಿರು ಪ್ರಯತ್ನ ಮಾಡಲಾಗಿದೆ.

ಭಾರತದಲ್ಲಿ ಗ್ರಂಥಾಲಯದ ಹುಟ್ಟು ಮತ್ತು ಬೆಳವಣಿಗೆಯ ವಿಷಯ ಕುತೂಹಲಕಾರಿಯಾಗಿದೆ. ಪ್ರಾಚೀನ ಭಾರತದಲ್ಲಿ ಗುರುಕುಲ ಆಶ್ರಮದ ಪದ್ಧತಿಗೆ ಅನುಗುಣವಾಗಿ ಅಭ್ಯಾಸ ಅವ್ಯಾಹತವಾಗಿ ನಡೆಯುತ್ತಿತ್ತು. ಆಗ ಗುರುಗಳ ಪಾಠ ಪ್ರವಚನಗಳು ಮೌಖಿಕವಾಗಿ ನಡೆಯುತ್ತಿದ್ದವು. ಹೀಗಾಗಿ ಜ್ಞಾನವು ಶ್ರುತಿ ಮತ್ತು ಸ್ಮೃತಿ ಶಕ್ತಿಗಳನ್ನು ಅವಲಂಬಿಸಿ ಬೆಳೆದು ಉಳಿದುಬಂದಿದೆ. ಕ್ರಿ.ಶ.೮ನೆಯ ಶತಮಾನದಲ್ಲಿ ಸಾಧನೆ/ಸಾಮಗ್ರಿಗಳನ್ನು ಬಳಸಿ ಬರೆಯುವ ರೂಢಿ ಪ್ರಾರಂಭವಾಗಿ ವೇದ, ಪುರಾಣ, ಖಂಡಕಾವ್ಯಗಳೂ ಅಲ್ಲದೆ ಧರ್ಮಶಾಸ್ತ್ರ, ಖಗೋಳಶಾಸ್ತ್ರ, ಗಣಿತಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ತತ್ವಶಾಸ್ತ್ರ ಮೊದಲಾದ ವಿಷಯಗಳ ಮೇಲೆ ಗ್ರಂಥಗಳು ನಿರ್ಮಾಣವಾಗತೊಡಗಿದವು. ಇದರಿಂದ ಪ್ರಾಚೀನ ಕಾಲದಲ್ಲಿ ಭಾರತದಲ್ಲಿ ಅನೇಕ ಉತ್ತಮ ಪ್ರಸಿದ್ಧಿ ಪಡೆದ ವಿಶ್ವವಿದ್ಯಾಲಯಗಳು ಹಾಗೂ ಗ್ರಂಥಾಲಯಗಳ ಉಲ್ಲೇಖವನ್ನು ಚೀನಾದ ಪ್ರವಾಸಿಗರು ಮಾಡಿದ್ದಾರೆ. ಅಂದಿನ ಸಂದರ್ಭದಲ್ಲಿ ಭಾರತದ ಕೆಲವು

ವಿಶ್ವವಿದ್ಯಾಲಯಗಳು ಜಗತ್ಪ್ರಸಿದ್ಧವಾಗಿದ್ದವು. ಅವುಗಳೆಂದರೆ ನಲಂದ, ತಕ್ಷಶಿಲೆ, ವಿಕ್ರಮಶಿಲೆ, ವಲ್ಲಭಿ ವಿದ್ಯಾಕೇಂದ್ರ, ಉಜ್ಜಯಿನಿ, ಅಮರಾವತಿ, ಉದಯಂತಪುರ ಮೊದಲಾದ ಶಿಕ್ಷಣ ಸಂಸ್ಥೆಗಳಲ್ಲಿ ಗ್ರಂಥಾಲಯಗಳಿದ್ದವೆಂದು ಅಧ್ಯಯನದಿಂದ ತಿಳಿದುಬರುತ್ತದೆ. ಅಂದಿನ ಸಂದರ್ಭದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ನಲಂದ ವಿಶ್ವವಿದ್ಯಾಲಯವು ಜಗತ್ತಿನಲ್ಲಿಯೇ ಅತಿ ಪ್ರಸಿದ್ಧ ಹಾಗೂ ವಿಸ್ತಾರವಾದ ವಿಶ್ವವಿದ್ಯಾಲಯವಾಗಿತ್ತು.

ಇದೇ ರೀತಿ ಕರ್ನಾಟಕದ ಪ್ರಾಚೀನ ಇತಿಹಾಸ ಕೂಡ ಇಲ್ಲಿ ಅನೇಕ ವಿಶ್ವವಿದ್ಯಾಲಯಗಳು ಹಾಗೂ ಅವುಗಳಿಗೆ ಅನುಕೂಲವಾಗುವ ದೃಷ್ಟಿಯಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಿ ಅವುಗಳನ್ನು ಚೆನ್ನಾಗಿ ಪೋಷಿಸಲಾಗುತ್ತಿತ್ತು ಎಂದು ಹಲವು ಅಧ್ಯಯನಗಳಿಂದ ದೃಢಪಟ್ಟಿದೆ. ಕನ್ನಡ ನಾಡನ್ನಾಳಿದ ಕದಂಬ, ರಾಷ್ಟ್ರಕೂಟರು, ಚಾಲುಕ್ಯರು ಹಾಗೂ ಹೊಯ್ಸಳ ರಾಜರು ತಮ್ಮ ಆಳ್ವಿಕೆಯ ಕಾಲದಲ್ಲಿ ಹಲವು ವಿದ್ಯಾಪೀಠಗಳನ್ನು ಕಟ್ಟಿ ಪೋಷಿಸಿದರು. ಅವರೊಟ್ಟಿಗೆ ಗ್ರಂಥಪ್ರಿಯರೂ ವಿದ್ಯಾಪಕ್ಷಪಾತಿಗಳು ಆದ "ಮಾಂಡಲಿಕರು" ಈ ಕಾರ್ಯದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದರು. ಇವರು ವೈಯಕ್ತಿಕವಾಗಿ ಹಾಗೂ ಸಾಂಘಿಕವಾಗಿ ಶ್ರಮಿಸಿದ್ದರು. ಇವರ ಫಲವಾಗಿ ತಾಳಗುಂದದ, ಪಾವಟ್ಟಿಗೆ (ಸಾಲೋಟಗಿ) ನಾಗಾ, ಬಳ್ಳಿಗಾವಿ, ಕುಪ್ಪಟೂರು, ಐಹೊಳೆ, ಪಟ್ಟದಕಲ್ಲು ಮುಂತಾದ ಸ್ಥಳಗಳಲ್ಲಿ ಹಲವು ವಿಶ್ವವಿದ್ಯಾಲಯಗಳ ಜೊತೆಗೆ ಹಲವು ಗ್ರಂಥಾಲಯಗಳು ಬೆಳೆದು ಬಾಳಿದವೆಂದು ಇಂದಿಗೂ ಹಲವು ಕುರುಹುಗಳು ಸಾರುತ್ತವೆ. 'ವಿಜಯನಗರ' ಅರಸರ ಕಾಲದಲ್ಲಿ ಬುಕ್ಕರಾಯನು 'ಶೃಂಗೇರಿ ಮಠಕ್ಕೆ' ಗ್ರಂಥಾಲಯವನ್ನು ನಿರ್ಮಿಸಲು ಸಹಾಯ ಕಲ್ಪಿಸಿರುವುದಕ್ಕೆ ಅನೇಕ ಕುರುಹುಗಳಿವೆ. ಈ ಹಿನ್ನೆಲೆಯಲ್ಲಿ ಪ್ರಾಚೀನ ಭಾರತದಲ್ಲಿದ್ದ ಹಲವು ವಿಶ್ವವಿದ್ಯಾಲಯಗಳ ಸ್ಥೂಲ ಪರಿಚಯವನ್ನು ಮಾಡಲಾಗುತ್ತಿದೆ.

*** ನಲಂದ ವಿಶ್ವವಿದ್ಯಾಲಯ**

ಇಂದಿನ ಬಿಹಾರ ರಾಜ್ಯದಲ್ಲಿಯ 'ಬಾರಾಗಾಂವ್' ಎಂಬ ಹಳ್ಳಿಯಲ್ಲಿ ನಲಂದ ವಿಶ್ವವಿದ್ಯಾಲಯವು ಸ್ಥಾಪಿತವಾಗಿತ್ತು. ಕ್ರಿ.ಶ.೫೦೦ರಲ್ಲಿ 'ಬಾಲಾದಿತ್ಯನೆಂಬ' ಮಗಧರಾಜನು ಇಲ್ಲೊಂದು ಬೌದ್ಧ ವಿಹಾರವನ್ನು ಕಟ್ಟಿಸಿದ್ದನು. ಮುಂದೆ ಸುಮಾರು ಒಂದೂವರೇ ಶತಮಾನದ ಕಾಲದವರೆಗೆ ಈ ಬೌದ್ಧ ವಿಹಾರವು ವಿಶ್ವವಿಖ್ಯಾತವಾದ ವಿಶ್ವವಿದ್ಯಾಲಯವಾಗಿ ಬೆಳೆದು ತುಂಬ ಪ್ರಸಿದ್ಧಿಯನ್ನು ಪಡೆದಿದೆ. ಆಗ ವಿಶ್ವವಿದ್ಯಾಲಯವಿದ್ದ ಸಂಪೂರ್ಣ ಭಾಗವನ್ನು 'ಧರ್ಮಗಂಜ' ಎಂದು ಕರೆಯಲಾಗುತ್ತಿದೆ.

ವಿಶ್ವವಿದ್ಯಾಲಯದ ರತ್ನೋದಧಿ, ರತ್ನರಂಜಕ ಹಾಗೂ ರತ್ನಗಾರ ಎಂಬ ಮೂರು ಭವ್ಯ ಭವನಗಳನ್ನು ನಿರ್ಮಿಸಲಾಗಿತ್ತು. 'ರತ್ನೋದಧಿ' ಎಂಬ ಒಂಬತ್ತನೆಯ ಅಂತಸ್ತಿನಲ್ಲಿ ವಿಶ್ವವಿದ್ಯಾಲಯದ ಗ್ರಂಥಾಲಯವನ್ನು ನಿರ್ಮಿಸಲಾಗಿತ್ತು. ಕ್ರಿ.ಶ.೭ನೇ ಶತಮಾನದಲ್ಲಿ ನಲಂದಕ್ಕೆ ಭೇಟಿ ನೀಡಿದ ಚೀನಾದೇಶದ ಪ್ರವಾಸಿ 'ಹ್ಯೂಯನ್‌ತ್ಸಾಂಗ್' ಅಲ್ಲಿ ಸುಮಾರು ಹತ್ತು ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರೆಂದು ತಿಳಿಸಿರುತ್ತಾರೆ. ತನ್ನ ವ್ಯಾಸಂಗ ಪೂರೈಸಿ ಆತ ಅಲ್ಲಿಂದ ಮರಳುವಾಗ ಚಕ್ಕಡಿಗಳ

ತುಂಬಾ ಬೆಲೆಯುಳ್ಳ ಗ್ರಂಥಗಳನ್ನು(ತಾಳೆಗರಿ, ಹಸ್ತಪ್ರತಿಗಳು) ಪ್ರತಿ ಮಾಡಿಸಿ ಕೊಂಡೊಯ್ದನೆಂಬುದು ಉಲ್ಲೇಖನೀಯ.[೧೧]

ಅನಂತರ ಮೂವತ್ತು ವರ್ಷಗಳ ನಂತರ ಭಾರತಕ್ಕೆ ಆಗಮಿಸಿದ ಮತ್ತೋರ್ವ ಚೀನಿ ಪ್ರವಾಸಿ 'ಇತ್ಸಿಂಗ್' ಐದು ಲಕ್ಷ ಸಂಸ್ಕೃತ ಶ್ಲೋಕಗಳನ್ನು ಹಾಗೂ ನಾಲ್ಕು ನೂರು ಸಂಸ್ಕೃತ ಗ್ರಂಥಗಳ ಪ್ರತಿಗಳನ್ನು ತಯಾರಿಸಿಕೊಂಡು ಹೋಗಿದ್ದಾನೆ. ಹೀಗೆ ದಿನದಿಂದ ದಿನಕ್ಕೆ ಪ್ರವರ್ಧಮಾನಗೊಳ್ಳುತ್ತಿದ್ದ ನಲಂದ ವಿಶ್ವವಿದ್ಯಾಲಯ ಹಾಗೂ ಅದರ ವಿವಿಧ ಗ್ರಂಥಾಲಯಗಳು ಸುಮಾರು ೯ನೆಯ ಶತಮಾನದವರೆಗೂ ಅತ್ಯಂತ ಊರ್ಜಿತಾವಸ್ಥೆಯನ್ನು ಮುಟ್ಟಿತ್ತು. 'ಬಲಪುತ್ರದೇವನೆಂಬ' ಜಾವ ದೇಶದ ದೊರೆ ಈ ವಿಶ್ವವಿದ್ಯಾಲಯಕ್ಕಾಗಿ ಒಂದು ಮಠವನ್ನು ನಿರ್ಮಿಸಿದ್ದನು. ತನ್ನ ಮಿತ್ರನಾದ ಬಂಗಾಳದ ದೊರೆಯಾದ ದೇವ ಪಾಲನಿಗೆ ಭಿನ್ನವಿಸಿ ವಿಶ್ವವಿದ್ಯಾಲಯಕ್ಕೆ ಐದು ಹಳ್ಳಿಗಳನ್ನು ದಾನವಾಗಿ ಕೊಡಲು ವ್ಯವಸ್ಥೆ ಮಾಡಿದ್ದನೆಂದು ಇತಿಹಾಸದಿಂದ ತಿಳಿದುಬಂದಿದೆ. ಈ ವಿಶ್ವವಿದ್ಯಾಲಯದಲ್ಲಿ ವಿಶೇಷವಾಗಿ ಧರ್ಮಪ್ರಧಾನ ವಿಷಯಗಳಿಗೆ ಹೆಚ್ಚು ಪ್ರಾಶಸ್ತ್ಯವಿತ್ತೆಂದು ಅಧ್ಯಯನದಿಂದ ತಿಳಿದುಬರುತ್ತದೆ.

*** ತಕ್ಷಶಿಲೆ; ವಾರಣಾಸಿ**

ತಕ್ಷಶಿಲೆ ಹಾಗೂ ವಾರಣಾಸಿಯ ವಿಶ್ವವಿದ್ಯಾಲಯಗಳು ನಲಂದ ವಿಶ್ವವಿದ್ಯಾಲಯದ ಸಮಕಾಲೀನ ವಿದ್ಯಾಸಂಸ್ಥೆಗಳಾಗಿದ್ದವು, ಅಲ್ಲದೇ ಅಂಥದೇ ಖ್ಯಾತಿಯನ್ನು ಗಳಿಸಿದ್ದವು. ನಾಡಿನ ಪ್ರಾಚೀನ ಪಂಡಿತರು ಹಾಗೂ ವೈಯಾಕರಣಿಗಳಾದ ಪಾಣಿನಿ, ಕೌಟಿಲ್ಯ ಅಲ್ಲದೇ, ಆಯುರ್ವೇದ ಪಂಡಿತರಾದ ಚರಕ, ಶುಶ್ರುತರು, ತಕ್ಷಶಿಲೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಾಗಿದ್ದರು. ಇಂತಹ ಪ್ರಸಿದ್ಧ ವಿದ್ವಾಂಸರಾಗಿ ನಿರ್ಮಾಣ ಆಗುವುದಕ್ಕೆ ಅಂದಿನ ವಿದ್ಯಾರ್ಜನೆಯ ವ್ಯವಸ್ಥೆ ಹಾಗೂ ಯೋಗ್ಯ ಪಂಡಿತರೇ ಕಾರಣ. ಮುಖ್ಯವಾಗಿ ಅಂದಿನ ಸಂದರ್ಭದಲ್ಲಿ ಸ್ಥಾಪಿಸಲಾಗಿರುವ ಗ್ರಂಥಾಲಯಗಳು ಹಾಗೂ ಅಲ್ಲಿನ ಸೂಕ್ತ ವ್ಯವಸ್ಥೆ, ಗ್ರಂಥಗಳ ಸೌಲಭ್ಯ ಇತ್ಯಾದಿ ಕಾರಣದಿಂದ ಆ ಸಂದರ್ಭದಲ್ಲಿ ತುಂಬಾ ಪ್ರಸಿದ್ಧಿ ಗಳಿಸಿರುವ ವಿಶ್ವವಿದ್ಯಾಲಯಗಳಲ್ಲಿ ಇದೂ ಒಂದಾಗಿತ್ತು.

*** ವಲ್ಲಭಿ ವಿಶ್ವವಿದ್ಯಾಲಯ**

ಸೌರಾಷ್ಟ್ರ ಹಿಂದಿನಿಂದಲೂ ವಿದ್ಯಾಪ್ರೇಮಿಗಳ ನಾಡಾಗಿತ್ತು. ಅಲ್ಲದೆ ವಿದ್ಯಾಪ್ರೇಮಿಯಾದ 'ಭೋಜರಾಜನ' ಕಾರ್ಯಕ್ಷೇತ್ರವಾಗಿತ್ತು. ಈ ನೆಲದಲ್ಲಿ ವಿದ್ಯಾಪ್ರೇಮದ ಗುಣ ಬಹು ಹಿಂದಿನಿಂದಲೂ ಬೆಳೆದುಬಂದಿದೆ. ಕ್ರಿ.ಶ.೪೮೦ರಿಂದ ೭೭೪ರವರೆಗೆ ವಿದ್ಯಾಪಕ್ಷಪಾತಿಗಳಾದ 'ಮೈತ್ರಕವಂಶದ' ಅರಸರ ಆಡಳಿತಕ್ಕೆ ಸೌರಾಷ್ಟ್ರ ಒಳಗಾಗಿತ್ತು.[೧೨] ಇವರು ವಲ್ಲಭಿಯಲ್ಲಿ ವ್ಯವಸ್ಥಿತವಾದ ಒಂದು ವಿಶ್ವವಿದ್ಯಾಲಯದ ಜೊತೆಗೆ ಉತ್ತಮವಾದ ಗ್ರಂಥಾಲಯ ಸ್ಥಾಪನೆಗೆ ಹೆಚ್ಚಿನ ಮಹತ್ವ ನೀಡಿದ್ದರು. ಇದರ ಜೊತೆಗೆ ರಕ್ಷಣೆಗೆ ಹೆಚ್ಚಿನ ಒತ್ತನ್ನು ನೀಡಲಾಗಿತ್ತೆಂಬುದು ಗಮನಾರ್ಹ.

ಹೀಗೆ ಪ್ರಾಚೀನ ಆಂಧ್ರಪ್ರದೇಶದಲ್ಲೂ ಹಲವು ವಿಶ್ವವಿದ್ಯಾಲಯಗಳು, ಗ್ರಂಥಾಲಯಗಳು ಪ್ರಾಚೀನ ಜ್ಞಾನಪ್ರಸಾರದ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವು. ಕೃಷ್ಣಾ ತೀರದಲ್ಲಿನ ಧನಕಟಕ (ಅಮರಾವತಿ) ಹಾಗೂ ಗುಂಟೂರು ಜಿಲ್ಲೆಯಲ್ಲಿನ ಪಾರವಾಟ ವಿಹಾರಗಳು ಆಗಿನ ಕಾಲದ ಶ್ರೇಷ್ಠ ವಿದ್ಯಾಕೇಂದ್ರಗಳಾಗಿದ್ದವು. ಪಾರವಾಟ ವಿಹಾರದಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದ ನಾಗಾರ್ಜುನ ವಿದ್ಯಾಪೀಠದ ವರ್ಣನೆಯನ್ನು ಫಾಹಿಯಾನ್ ಮತ್ತು ಹ್ಯೂಯನ್ ತ್ಸಾಂಗ್ ಮಾಡಿದ್ದಾರೆ. ಅಂದಿನ ಸಂದರ್ಭದಲ್ಲಿ ನಾಗಾರ್ಜುನನ(೭ನೇ ಶತಮಾನ) ಗ್ರಂಥಾಲಯವು ಅಧ್ಯಯನಕಾರರ ಮೇಲೆ ತುಂಬಾ ಪ್ರಭಾವ ಬೀರಿದ್ದವು. ಈ ಗ್ರಂಥಾಲಯದಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳಿರುವುದನ್ನು ಕಾಣಬಹುದು. ತ್ರಿಪಿಟಕಗಳು ಹಾಗೂ ಸಸ್ಯಶಾಸ್ತ್ರ, ಭೂಗೋಳ, ವೈದ್ಯಶಾಸ್ತ್ರ, ಖನಿಜಶಾಸ್ತ್ರ ಇತ್ಯಾದಿ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳಿರುವುದನ್ನು ಕಾಣಬಹುದು.

೪.೨. ಮಧ್ಯಯುಗದಲ್ಲಿ

ಮುದ್ರಣಯಂತ್ರ ಪ್ರವೇಶದಿಂದ ಪುಸ್ತಕಗಳ ಮುದ್ರಣಕಾರ್ಯಕ್ಕೆ ಚಾಲನೆ ದೊರೆಯಿತು. ಆದರೂ ಕೂಡ ಗ್ರಂಥ ಸಂಗ್ರಹಣೆ ಮತ್ತು ಉಪಯೋಗಕ್ಕೆ ಕೆಲವೇ ವರ್ಗದವರಿಗೆ ಅವಕಾಶ ಕಲ್ಪಿಸಲಾಗಿತ್ತು. ದೇವಸ್ಥಾನ, ಅರಮನೆ ಮತ್ತು ಗುರುಕುಲದ ಜನರಿಗೆ ಮಾತ್ರ ಅವಕಾಶವಿತ್ತು. ಪಾಶ್ಚಿಮಾತ್ಯ ದೇಶಗಳಲ್ಲಿ ಚರ್ಚುಗಳು ಮತ್ತು ರಾಜರ ಅರಮನೆಗಳು ಗ್ರಂಥಾಲಯಗಳು ಹೊಂದಿರುತ್ತಿದ್ದವು.

ಭಾರತದ ಮೇಲೆ ಮುಸ್ಲಿಮರ ಆಕ್ರಮಣದಿಂದ 'ಭಕ್ತಿಯಾರ್ ಖಿಲ್ಜಿಯು' ಅಂದಿನ ಪ್ರಸಿದ್ಧ ನಲಂದ ಮತ್ತು ವಿಕ್ರಮಶಿಲೆಯ ಗ್ರಂಥಾಲಯಗಳನ್ನು ಸುಟ್ಟನೆಂದು ಇತಿಹಾಸ ಹೇಳುತ್ತದೆ. ಆದರೆ ಮುಂದೆ ಬಂದ ಮೊಗಲರು ಹೆಚ್ಚು ಪುಸ್ತಕಪ್ರಿಯರಾಗಿದ್ದರು. ಪುಸ್ತಕಗಳ ಸಂಗ್ರಹಣೆಗೆ ಅಪಾರವಾದ ಆಸಕ್ತಿಯನ್ನು ತೋರಿಸಿದ್ದರು. 'ಬಾಬರನಿಂದ ಹಿಡಿದು ಔರಂಗಜೇಬನ' ತನಕ ಎಲ್ಲರೂ ಗ್ರಂಥಾಲಯಗಳ ಬಗ್ಗೆ ತುಂಬಾ ಆಸಕ್ತಿಯನ್ನು ಹೊಂದಿದ್ದರು.

ದಕ್ಷಿಣ ಭಾರತದಲ್ಲಿ ಬಹಮನಿ ಅರಸರ ಕಾಲದಲ್ಲಿ ಎರಡನೇ ಮಹಮದ್‌ಶಾ ಬಹಮನಿಯ ಪ್ರಸಿದ್ಧ ಮಂತ್ರಿಯಾಗಿದ್ದ ಮಹಮದ್ ಗವಾನನು ಒಂದು ಕಾಲೇಜನ್ನು ಮತ್ತು ಗ್ರಂಥಾಲಯವನ್ನು ನಿರ್ಮಿಸಿ ಸುಮಾರು ೩೦೦೦ ಹಸ್ತಪ್ರತಿಗಳ ಗ್ರಂಥಗಳನ್ನು ಸಂಗ್ರಹಿಸಿದ್ದನು. ಆದರೆ ಔರಂಗಜೇಬನು ಬಿಜಾಪುರದ ಮೇಲೆ ಆಕ್ರಮಣ ನಡೆಸುವ ಸಂದರ್ಭದಲ್ಲಿ ಅದನ್ನು ನಾಶಪಡಿಸಿದನೆಂದು ತಿಳಿದುಬರುತ್ತದೆ.

ದಕ್ಷಿಣ ಭಾರತಕ್ಕೆ ಪ್ರಪ್ರಥಮವಾಗಿ ದಾಳಿಯಿಟ್ಟ ಅಲ್ಲಾವುದ್ದೀನ್ ಖಿಲ್ಜಿಯ ಆಜ್ಞಾಧಾರಕ ದಂಡನಾಯಕನಾಗಿದ್ದ ಮಲ್ಲಿಕ್‌ಕಾಫರ್‌ನೆಂಬುವನು ಕ್ರಿ.ಶ.೧೩೧೧ರಲ್ಲಿ ದ್ವಾರಸಮುದ್ರಕ್ಕೆ ದಾಳಿಯಿಟ್ಟು ಅದನ್ನು ಹಾಳುಗೆಡವಿದನು. ಹೊಯ್ಸಳೇಶ್ವರ ದೇವಾಲಯವು ದೇಗುಲವಾದುದು ಅವನಿಂದಲೇ. ಅವನ ಸಿಪಾಯಿಗಳು ತಮಗೆ ಸಿಕ್ಕಿದ ತಾಳೆಯೋಲೆಯ ಗ್ರಂಥಗಳನ್ನು ಕುದುರೆಗಳಿಗೆ ಹುರುಳಿ ಬೇಯಿಸುವುದಕ್ಕಾಗಿ ಬಳಸಿಕೊಂಡರೆಂದು ಇತಿಹಾಸದಿಂದ ತಿಳಿದುಬರುತ್ತದೆ.

ಬಹಮನಿ ಸುಲ್ತಾನರ ಸೈನ್ಯವು ಕ್ರಿ.ಶ.೧೫೬೫ರಲ್ಲಿ ವಿಜಯನಗರ ರಾಜಧಾನಿಯನ್ನು ಧ್ವಂಸಗೊಳಿಸಿದ ದಾರುಣ ಕಥೆ ಸಮಸ್ತರಿಗೂ ತಿಳಿದೇ ಇದೆ. ಅವರು ವಿಜಯವಿಠ್ಠಲನ ಗುಡಿಗೆ ಬೆಂಕಿಯಿಟ್ಟು ಸಿಡಿಸಿದಂತೆ ತಮ್ಮ ಕೈಗೆ ಸಿಕ್ಕಿದ ಗ್ರಂಥ ಭಂಡಾರವನ್ನು ನಾಶ ಮಾಡಿದ್ದಾರೆ. ಇಕ್ಕೇರಿಯ ಅರಸರಿಗೂ ಬಾಳೆಹಳ್ಳಿಯ ವೀರಶೈವ ಮಠದವರಿಗೂ ಮನಸ್ತಾಪ ಉಂಟಾಗಿತ್ತು. ಆದ ಕಾರಣ ದೊರೆಗಳು ಮಠವನ್ನು ಸುಡಿಸಿ ನಾಶಪಡಿಸಿದ್ದರು. ಇನ್ನೊಂದು ವಿಶೇಷ ಸಂಗತಿಯೆಂದರೆ ಟಿಪ್ಪು ಸುಲ್ತಾನನು ಕ್ರಿ.ಶ.೧೭೮೬ನೆಯ ವರ್ಷದ ನವೆಂಬರ್ ತಿಂಗಳಲ್ಲಿ ಮೈಸೂರಿನ ಕೋಟೆ ಮತ್ತು ಪೇಟೆಗಳಲ್ಲಿ ವಾಸಿಸುವರು ತತ್‌ಕ್ಷಣವೇ ಅಲ್ಲಿಂದ ಹೊರಡಬೇಕೆಂಬ ಆಜ್ಞೆ ಹೊರಡಿಸಿದರಿಂದ ಪೇಟೆ ಕೋಟೆಗಳನ್ನು ಕೆಡಹಿಸಿ ನೆಲಸಮ ಮಾಡಿಸಿದರು. ಇದರಿಂದ ಮೈಸೂರಿನ ಅರಮನೆಯಲ್ಲಿಯೂ, ವಿದ್ವಾಂಸರ ಮನೆಗಳಲ್ಲಿಯೂ ಇದ್ದ ಹಸ್ತಪ್ರತಿಗಳ ಪಾಡು ತಿಳಿದೇ ಇದೆ. ಓಡಿಹೋಗುವವರು ಓಲೆಗರಿಗಳನ್ನೇಕೆ ಒಯ್ದಾರು? ಅವು ಇದ್ದಲ್ಲಿಯೇ ಮಣ್ಣು ತಿಂದು, ದೂಳು ತಿಂದು ಇಲ್ಲವಾಗಿರಬೇಕು ಎಂಬ ಅಭಿಪ್ರಾಯವನ್ನು ಬಿಮಲ್ ಕುಮಾರ ದತ್ತ ತಿಳಿಸಿರುವುದು ಸ್ಪಷ್ಟ.

ಮೇಲಿನ ಅಂಶಗಳನ್ನು ಅವಲೋಕಿಸಿದಾಗ ಮಧ್ಯಯುಗದಲ್ಲಿ ಹಸ್ತಪ್ರತಿ ಗ್ರಂಥಾಲಯಗಳಿಗೆ ಸಾಮ್ರಾಜ್ಯದ ನಾಯಕರು ಎಷ್ಟು ಒತ್ತನ್ನು ನೀಡಿದ್ದರು ಎಂಬುದು ತಿಳಿಯುತ್ತದೆ. ಆ ಸಂದರ್ಭದಲ್ಲಿ ಕಲೆ, ಸಾಹಿತ್ಯ, ಕವಿಗಳು ಹಾಗೂ ವಿವಿಧ ಗ್ರಂಥಗಳ ರಚನೆ ಇತ್ಯಾದಿ ವಿಷಯಗಳ ಸಮೃದ್ಧಿಯಾಗಿ ನಾಡಿಗೆ ಜ್ಞಾನದ ಬೆಳಕನ್ನು ಎಲ್ಲೆಡೆ ಮೂಡಿಸಿತ್ತು ಎಂಬುದಕ್ಕೆ ಮೇಲಿನ ವಿಚಾರಗಳು ಸ್ಪಷ್ಟವಾದ ಕುರುಹುಗಳಾಗಿವೆ.

ಮಧ್ಯಯುಗದ ಗ್ರಂಥಾಲಯಗಳಲ್ಲಿ ಹೆಸರಿಸಬೇಕಾದ ಹಸ್ತಪ್ರತಿ ಗ್ರಂಥಾಲಯವೆಂದರೆ ತಂಜಾವೂರಿನ ಸಂಸ್ಕೃತಿ ಮಹಲ್ ಗ್ರಂಥಾಲಯ. ಇದನ್ನು ೧೬ನೇ ಶತಮಾನದಲ್ಲಿ ಸ್ಥಾಪಿಸಲಾಯಿತು. ೧೮ನೇ ಶತಮಾನದಲ್ಲಿ ಮರಾಠರು ಈ ಭಾಗವನ್ನು ಗೆದ್ದುಕೊಂಡು ಈ ಗ್ರಂಥಾಲಯವನ್ನು ಮತ್ತಷ್ಟು ಅಭಿವೃದ್ಧಿಪಡಿಸಿದರು. ೧೮೨೦-೩೦ರ ಅವಧಿಯಲ್ಲಿ ಈ ಗ್ರಂಥಾಲಯವು ಹೆಚ್ಚು ಅಭಿವೃದ್ಧಿಗೊಂಡು, ಈಗ ಅಲ್ಲಿ ಸುಮಾರು ೩೦.೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳ ಸಂಗ್ರಹವಿರುವುದು ಗಮನಾರ್ಹ. ೧೮ನೆಯ ಶತಮಾನದಲ್ಲಿ ಸ್ಥಾಪಿತಗೊಂಡ ಇನ್ನೊಂದು ಪ್ರಸಿದ್ಧವಾದ ಗ್ರಂಥಾಲಯವೆಂದರೆ ಉತ್ತರ ಪ್ರದೇಶದ ರಾಮಪುರದ ರಾಜಾಗ್ರಂಥಾಲಯ(ನವಾಬ್ ಕಾಲ್ಬೆ ಅಲಿಖಾನ್ ಗ್ರಂಥಾಲಯ) ೧೮೫೭ರಲ್ಲಿ ಮೊಗಲ್ ರಾಜವಂಶದ ಖಾಸಗಿ ಗ್ರಂಥಾಲಯಗಳು ಲೂಟಿ ಮಾಡಲ್ಪಟ್ಟವು. ಈ ಸಮಾಚಾರ ನವಾಬ್ ಖಿಲ್ಜಿ ಅಲಿಖಾನಗೆ ತಿಳಿದಕೂಡಲೆ ತನ್ನ ಆಪ್ತರನ್ನು ಹೊರದೇಶಕ್ಕೆ ಕಳುಹಿಸಿ ಅಲ್ಲಿ ಸಿಕ್ಕ ಎಲ್ಲ ಹಸ್ತಪ್ರತಿಗಳನ್ನು ಎಷ್ಟೇ ಬೆಲೆಯಾದರೂ ನೀಡಿ ತನ್ನ ಖಾಸಗಿ ಗ್ರಂಥಾಲಯಕ್ಕೆ ಸೇರಿಸಿಕೊಂಡರು. ಇದರಿಂದ ಆ ಸಂದರ್ಭದಲ್ಲಿ 'ಸಾಹಿತ್ಯ'ಕ್ಕೆ ಯಾವ ರೀತಿ ಪ್ರೋತ್ಸಾಹ ನೀಡುತ್ತಿದ್ದರು ಎಂಬುದಕ್ಕೆ ಇದು ಸ್ಪಷ್ಟವಾದ ಸಾಕ್ಷಿಯಾಗಿರುತ್ತದೆ. ಅಳಿವಿನ ಸ್ಥಿತಿಯಲ್ಲಿದ್ದ ಈ ಗ್ರಂಥಾಲಯವನ್ನು ೧೯೭೫ರಲ್ಲಿ ಅಂದಿನ ವಿದ್ಯಾಮಂತ್ರಿಯಾದ ನೂರುಲ್‌ಹಸನ್ ಅವರು ದಿವಂಗತ ಇಂದಿರಾ ಗಾಂಧಿಯವರ

ಗಮನಕ್ಕೆ ತಂದು ಅದನ್ನು ರಾಷ್ಟ್ರೀಯ ಸ್ಮಾರಕ ಗ್ರಂಥಾಲಯವೆಂದು ನಾಮಕರಣ ಮಾಡಿದರೆಂದು ತಿಳಿದುಬರುತ್ತದೆ.

ಮೇಲಿನ ಎಲ್ಲಾ ವಿಚಾರಗಳನ್ನು ಗಮನಿಸಿದಾಗ ಮಧ್ಯಯುಗದ ಕಾಲದಲ್ಲಿ ವಿವಿಧ ಅರಸರು ಹಾಗೂ ಆಸಕ್ತರು ಜೋಪಾನ ಮಾಡಿಕೊಂಡು ಬಂದಿರುವ ವಿವಿಧ ವಿಶ್ವವಿದ್ಯಾಲಯಗಳು ಹಾಗೂ ಗ್ರಂಥಾಲಯವನ್ನು ಈ ಮಧ್ಯಯುಗದಲ್ಲಿ ಜೋಪಾನಕ್ಕಿಂತ ದಾಳಿಕೋರರ ಸ್ವಾರ್ಥದಿಂದ ಜ್ಞಾನಸಂಪತ್ತಿನ ಗಣಿಗಳನ್ನು ಲೂಟಿ ಮಾಡುವುದರ ಜೊತೆಗೆ ನಾಶ ಮಾಡಲಾಗಿತ್ತು. ಒಂದು ವೇಳೆ ಈ ಜ್ಞಾನದ ಸಿರಿ(ಹಸ್ತಪ್ರತಿ ಗ್ರಂಥಾಲಯಗಳು) ಹಾಗೆಯೇ ಇದ್ದಿದ್ದರೆ ಜ್ಞಾನದ ಪರಂಪರೆ ಮುಗಿಲಿನೆತ್ತರಕ್ಕೆ ತಲುಪುತ್ತಿತ್ತು ಎಂಬುದರಲ್ಲಿ ಸಂಶಯವಿಲ್ಲ. ಒಟ್ಟಾರೆ ಅಳಿದುಳಿದ ಪ್ರಾಚೀನ ಜ್ಞಾನಸಂಪತ್ತನ್ನು ಕಾಪಾಡಿಕೊಂಡು ಹೋಗುವ ಸಂಪೂರ್ಣ ಜವಾಬ್ದಾರಿ ನಮ್ಮೆಲ್ಲರ ಹೊಣೆಯಾಗಿದೆ.

೪.೩. ಆಧುನಿಕ ಕಾಲ

ಸುಮಾರು ಒಂದೂವರೆ ಸಾವಿರ ವರ್ಷಗಳ ಹಿಂದಿನಿಂದಲೂ ಭರತಖಂಡದ ಧಾರ್ಮಿಕ, ಸಾಂಸ್ಕೃತಿಕ ಕೇಂದ್ರಗಳಲ್ಲಿಯೂ, ಅರಮನೆಗಳಲ್ಲಿಯೂ, ವಿದ್ವಾಂಸರ ಮತ್ತು ವಿದ್ಯಾಭಿಮಾನಿಗಳ ಮನೆಗಳಲ್ಲಿಯೂ ಹಸ್ತಪ್ರತಿ ಭಂಡಾರಗಳು ಇದ್ದವು. ಅವುಗಳ ಪ್ರಯೋಜನವನ್ನು ಬಯಸಿದವರೆಲ್ಲರೂ ಪಡೆಯಬಹುದಾಗಿದ್ದಿತು. ಸಾಮಾನ್ಯವಾಗಿ ಆದರೆ ಇಂದಿನ ಅರ್ಥದಲ್ಲಿ ಅವು ಸಾರ್ವಜನಿಕ ಗ್ರಂಥಭಂಡಾರಗಳಲ್ಲ. ಅಂತಹ ಒಂದು ಆಧುನಿಕ ಕನ್ನಡ ಹಸ್ತಪ್ರತಿ ಭಂಡಾರವು ಇತರ ಭಾಷೆಗಳ ಪ್ರತಿಗಳೊಂದಿಗೆ ಮದರಾಸಿನಲ್ಲಿ ಪ್ರಾರಂಭವಾಯಿತು. ಅದರ ತಾಯಿ ಬೇರು ಹಿಂದೆ ಹೇಳಿದಂತೆ ಕರ್ನಲ್ ಮೆಕೆಂಜಿಯ ಸಂಗ್ರಹ. ಅದರಲ್ಲಿದ್ದ ಕನ್ನಡ ಹಸ್ತಪ್ರತಿಗಳ ಸಂಖ್ಯೆ, ಸ್ಥಳಪುರಾಣ ಸ್ಥಳೀಯ ವೃತ್ತಾಂತಗಳನ್ನು ಬಿಟ್ಟರೆ ಸುಮಾರು ೧೫೦. ಸಿ.ಪಿ.ಬ್ರೌನ್ ಮೊದಲಾದವರಿಂದ ಈ ಸಂಖ್ಯೆ ೧೫೪೦ಕ್ಕೆ ಏರಿತು. ಸಂಸ್ಥೆಯು ಆರಂಭವಾದಂದಿನಿಂದ ಸುಮಾರು ೭೦ ವರ್ಷಗಳ ಕಾಲ ಕೈ ಬರಹಗಳನ್ನು ಸಂಗ್ರಹಿಸುವ ಮತ್ತು ಸಂರಕ್ಷಿಸುವ ಕಾರ್ಯ ಬಹು ತೃಪ್ತಿಕರವಾಗಿ ನಡೆದಿರಬಹುದೆಂದು ಅಧ್ಯಯನದಿಂದ ತಿಳಿದುಬಂದಿದೆ.

ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದಾಗ ಯಾವ ಕಾರಣಕ್ಕಾಗಿ ದೇಶೀಯ ವಿದ್ವಾಂಸರಿಗಿಂತ ಮುಂಚಿತವಾಗಿ ಬ್ರಿಟಿಷ್ ಅಧಿಕಾರಿಗಳು ಹಸ್ತಪ್ರತಿಗಳ ಸಂಗ್ರಹಕ್ಕೆ ಏಕೆ ಆಸಕ್ತಿ ವಹಿಸಿದ್ದರು ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೋದರೆ ದೊರೆಯುವ ಸ್ಪಷ್ಟ ಮಾಹಿತಿ ಅದರಲ್ಲಿ ಅಡಗಿರಿರುವ ಜ್ಞಾನ ಸಂಸ್ಕೃತಿಯನ್ನು ಸೂಕ್ಷ್ಮವಾಗಿ ಗುರುತಿಸುವುದಾಗಿದೆ. ಅಂದಿನ ಬ್ರಿಟಿಷ್ ಅಧಿಕಾರಿಗಳು ತಮ್ಮ ಆಡಳಿತಕ್ಕೆ ಅನುಕೂಲದ ದೃಷ್ಟಿಯಿಂದ ಹಲವು ವಿದ್ಯಾಸಂಸ್ಥೆಗಳನ್ನು ಹಾಗೂ ಬಾಂಬೆ, ಕಲ್ಕತ್ತಾ ಮತ್ತು ಮದರಾಸುಗಳಲ್ಲಿ ವಿಶ್ವವಿದ್ಯಾಲಯಗಳನ್ನು ತೆರೆದರು. ಇದರ ಜೊತೆಗೆ ಹಲವು ಗ್ರಂಥಾಲಯಗಳು ಸ್ಥಾಪಿತಗೊಂಡವು. ಬ್ರಿಟಿಷ್ ಅಧಿಕಾರಿಗಳು ಮತ್ತು ಅವರ ಜನರ ಅನುಕೂಲಕ್ಕಾಗಿ ಅಲ್ಲಲ್ಲಿ ಗ್ರಂಥಾಲಯಗಳು ಪ್ರಾರಂಭಗೊಂಡವು. ಈ ಗ್ರಂಥಾಲಯಗಳು ಬ್ರಿಟಿಷರ ಆರ್ಥಿಕ ಸಹಾಯದಿಂದ ಮತ್ತು ಬ್ರಿಟಿಷರು ಹೆಚ್ಚಾಗಿ ವಾಸಿಸುವ ಸ್ಥಳಗಳಲ್ಲಿ ಸ್ಥಾಪಿಸಲಾಗಿತ್ತು.

ಕನ್ನಡ ಹಸ್ತಪ್ರತಿಗಳ ಸಂಗ್ರಹ ಕಾರ್ಯಕ್ಕೆ ಶ್ರೀಕಾರ ಹಾಕಿದ ಪ್ರಥಮ ವ್ಯಕ್ತಿ ಕರ್ನಲ್ ಮೆಕಂಜಿ. ಇವರು ಬ್ರಿಟಿಷ್ ಸರಕಾರದ ಅಧಿಕಾರಿಯಾಗಿ ಬಂದರೂ ಇಲ್ಲಿಯ ಸಾಹಿತ್ಯ ಸಂಸ್ಕೃತಿಯ ಬಗೆಗಿನ ಆಕರ ಸಾಮಗ್ರಿಗಳನ್ನು ನೋಡಿ ಉತ್ಸಾಹಿತರಾದರು. ನಾಡಿನ ಜನತೆಗೆ ಹಸ್ತಪ್ರತಿಗಳನ್ನು ಪರಿಚಯಿಸಬೇಕೆಂಬ ಹಂಬಲದಿಂದ ಇವುಗಳ ಸಂಗ್ರಹ, ಸಂರಕ್ಷಣೆ ಹಾಗೂ ಅಧ್ಯಯನದ ಕಡೆಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದರು. ಜೊತೆಗೆ ದೇಶೀಯ ವಿದ್ವಾಂಸರನ್ನು ತಮ್ಮ ಸಹಾಯಕ್ಕೆ ನೇಮಿಸಿಕೊಂಡು ಹೆಚ್ಚಿನ ಆಸಕ್ತಿ ಕುತೂಹಲದಿಂದ ನಾಣ್ಯ, ಕೈಫಿಯತ್ತು, ವಿಗ್ರಹ, ಶಾಸನ, ಭೂಪಟ, ಹಸ್ತಪ್ರತಿಗಳನ್ನು ರಾಶಿರಾಶಿಯಾಗಿ ಸಂಗ್ರಹಿಸಿದರು. ಈ ಕೆಲಸಕ್ಕೆ ಕರ್ನಲ್ ಮೆಕಂಜಿ ಅಲ್ಲದೆ ಬಿ.ಎಲ್.ರೈಸ್, ಫ್ಲೀಟ್, ಸಿ.ಪಿ.ಬ್ರೌನ್, ಲಿಡಾನ್, ಆರ್.ನರಸಿಂಹಾಚಾರ್, ರೆ.ಉತ್ತಂಗಿ ಚೆನ್ನಪ್ಪ, ಪರ್ಡಿನೆಂಡ್ ಕಿಟೆಲ್, ಎಂ.ಎ.ರಾಮಾನುಜಯ್ಯಂಗಾರ್, ಎಂ.ಮರಿಯಪ್ಪ ಭಟ್ಟ, ಇತ್ಯಾದಿ ಹಲವರು ಸಾಹಿತ್ಯದ ಕೃಷಿಯಲ್ಲಿ ಹೆಚ್ಚಿನ ಶ್ರಮ ವಹಿಸಿದ್ದಾರೆಂದು ತಿಳಿದುಬರುತ್ತದೆ.

೪.೩.೧. ಕರ್ನಲ್ ಕೋಲಿನ್ ಮೆಕೆಂಜಿ

೧೮ನೆಯ ಶತಮಾನದ ಕೊನೆಯವರೆಗೆ ಎಲ್ಲ ಬಗೆಯ ಕನ್ನಡ ವಾಙ್ಮಯವೂ ಅಡೆತಡೆಗಳಿಲ್ಲದೆ ಬೆಳೆಯುತ್ತಲೇ ಇತ್ತು. ಈ ಹಿಂದೆಯೇ ತಿಳಿಸಿರುವಂತೆ ಬೇರೆ ಬೇರೆ ಕಾರಣಗಳಿಂದಾಗಿ ಅಳಿಯುತ್ತ ಇದ್ದುವಾದರೂ ಒಟ್ಟು ಸಂಖ್ಯಾ ಪ್ರಮಾಣದಲ್ಲಿ ಹೆಚ್ಚುತ್ತಲೇ ಇದ್ದವು. ಕರ್ನಲ್ ಮೆಕೆಂಜಿ ಎಂಬ ಆಂಗ್ಲ ಮಹಾಶಯರ ಆಗಮನದಿಂದಾಗಿ ಕನ್ನಡ ಕೈಬರಹಗಳ ಇತಿಹಾಸದಲ್ಲಿಯೇ ಏಕೆ, ಇಡೀ ಭರತಖಂಡದ ಕೈಬರಹಗಳ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವೇ ಪ್ರಾರಂಭವಾಯಿತು. ಇಲ್ಲಿ ಅವರ ವಿಷಯವಾಗಿ ಮುಖ್ಯವಾಗಿ ಕನ್ನಡ ಹಸ್ತಪ್ರತಿಗಳ ಅನ್ವೇಷಣೆಗೆ ಸಂಬಂಧಿಸಿದಂತೆ ಕೆಲವು ಮಹತ್ವದ ವಿಚಾರಗಳು ಲಭ್ಯ.

ಇವರ ಪೂರ್ತಿ ಹೆಸರು ಕರ್ನಲ್ ಕೋಲಿನ್ ಮೆಕೆಂಜಿ. ಸ್ಕಾಟ್ಲಾಂಡಿಗೆ ಹೊಂದಿಕೊಂಡಿರುವ ಲೆವಿಸ್ ದ್ವೀಪದಲ್ಲಿ ಕ್ರಿ.ಶ.೧೭೫೩ರಲ್ಲಿ ಇವರ ಜನನ. ಇವರಿಗೆ ಗಣಿತಶಾಸ್ತ್ರದಲ್ಲಿ ಅತಿಶಯವಾದ ಆಸಕ್ತಿಯಿತ್ತಂತೆ. ಆದುದರಿಂದ ಇಂಗ್ಲಿಷ್, ವಿಶ್ವಗಣಿತಕರ್ತರಾದ ಜಾನ್ ನೇಪಿಯರರ ಜೀವನ ಚರಿತ್ರೆಯನ್ನು ಅವರ ವಂಶಸ್ಥರಾದ ಫ್ರಾನ್ಸಿಸ್ ಮಹಾಶಯರು ಬರೆಯಲಿಚ್ಚಿಸಿ ಇವರನ್ನು ಭಾರತೀಯ ಗಣಿತಶಾಸ್ತ್ರಕ್ಕೆ ಸಂಬಂಧಪಟ್ಟ ಮಾಹಿತಿ ಸಂಗ್ರಹಿಸುವುದಕ್ಕಾಗಿ ನೇಮಿಸಿಕೊಂಡಿದ್ದರು. ಕೆಲಸ ಮುಗಿಯುವುದರೊಳಗೆ ಫ್ರಾನ್ಸಿಸ್ ತೀರಿಕೊಂಡರು. ಅಷ್ಟು ಹೊತ್ತಿಗೆ ಮೆಕೆಂಜಿಗೆ ಭಾರತೀಯ ಗಣಿತ ಶಾಸ್ತ್ರವನ್ನು ಕೂಲಂಕಷವಾಗಿ ಅಧ್ಯಯನ ಮಾಡಬೇಕೆಂಬ ಅಭಿಲಾಷೆ ಉಂಟಾಗಿತ್ತು. ಇದೇ ಉದ್ದೇಶದಿಂದ ಇವರು ಅಂದಿನ ಈಸ್ಟ್ ಇಂಡಿಯಾ ಕಂಪನಿಯ ಮದರಾಸು ವಿಭಾಗದಲ್ಲಿ ಕ್ಯಾಡೆಟ್ ಇಂಜಿನಿಯರ್ ಹುದ್ದೆಗೆ ಸೇರಿದರು.

ದಿನಾಂಕ ೨.೯.೧೭೮೩ರಲ್ಲಿ ಮದರಾಸಿಗೆ ಬಂದು ಕೆಲಸಕ್ಕೆ ಸೇರಿದ ಕೋಲಿನ್ ಮೆಕೆಂಜಿಯ ಗಮನ ಭಾರತೀಯ ಗಣಿತಶಾಸ್ತ್ರದತ್ತಲೇ ಹರಿಯುತ್ತಿದ್ದಿತು. ಇವರಂತೆಯೇ ನೇಪಿಯರರ ಜೀವನ

ಚರಿತ್ರೆಗಾಗಿ ಮಾಹಿತಿ ಸಂಗ್ರಹ ಮಾಡುತ್ತಿದ್ದ ಶ್ರೀಮತಿ ಜೋನ್ಸ್ಟ ಎಂಬುವರ ಮೂಲಕ ಮದುರೆ ನಗರದಲ್ಲಿದ್ದ ವಿದ್ವಾಂಸರ ಪರಿಚಯ ಮಾಡಿಕೊಂಡರು. ಆಗಲೂ ಸಹ ಮದುರೆಯಲ್ಲಿ, ವೇದಾಂತ ಶಾಸ್ತ್ರಗಳಲ್ಲದೆ, ಗಣಿತಶಾಸ್ತ್ರ, ಖಗೋಳಶಾಸ್ತ್ರ, ಮುಂತಾದ ಲೌಕಿಕ ಶಾಸ್ತ್ರಗಳಲ್ಲಿಯೂ ಪರಿಣತರಾದ ಸಂಸ್ಕೃತ ವಿದ್ವಾಂಸರಿದ್ದರು. ಕೋಲಿನ್ ಮೆಕೆಂಜಿಗೆ ಅವರ ಸಂಪರ್ಕ ಗಾಢವಾದಂತೆಲ್ಲಾ ಭರತ ಖಂಡದ ಸಕಲ ಸದ್ವಿದ್ಯೆಗಳ ವಿಸ್ತಾರ ವೈವಿಧ್ಯ, ವೈಭವಗಳ ಅರಿವು ಬೆಳೆಯಲಾರಂಭಿಸಿತ್ತು. ಗಣಿತಶಾಸ್ತ್ರವೊಂದೇ ಏಕೆ, ಇಲ್ಲಿಯ ವೇದಶಾಸ್ತ್ರ, ಪುರಾಣ, ಇತಿಹಾಸ, ವಿಜ್ಞಾನಗಳಿಗೆ ಸಂಬಂಧಿಸಿದ ಸಾಹಿತ್ಯವನ್ನೆಲ್ಲ ಸಂಗ್ರಹಿಸಬೇಕು ಎಂಬ ಮಹದಾಕಾಂಕ್ಷೆ ಉಂಟಾಯಿತು. ಸರಕಾರಿ ಕಾರ್ಯದ ಒತ್ತಡದಿಂದಾಗಿ ಆ ಉದ್ದೇಶ ೧೭೯೬ರವರೆಗೆ ಈಡೇರಲಿಲ್ಲ.

೧೭೯೬ರಿಂದ ೧೮೧೧ರ ವರೆಗೆ ಇವರ ಕಾರ್ಯಕ್ಷೇತ್ರ ದಕ್ಷಿಣ ಭಾರತವಾಗಿತ್ತು. ಮೈಸೂರು ಸೇರಿದಂತೆ ದಖ್ಖನ್ನಿನ ಮೇಲ್ಮೈ ಲಕ್ಷಣವನ್ನು ಪರಿವೀಕ್ಷಿಸಿ ನಕ್ಷೆಗಳನ್ನು ಭೂಪಟಗಳನ್ನು ತಯಾರಿಸುವ ಕಾರ್ಯ ಇವರ ಮೇಲ್ವಿಚಾರಣೆಯಲ್ಲಿ ನಡೆಯಿತು. ಈ ಸಮಯದಲ್ಲಿ ಬಿಡುವು ದೊರೆತಾಗಲೆಲ್ಲಾ ಇವರು ದೇಶೀಯ ವಿದ್ವಾಂಸರ ನೆರವಿನಿಂದ ಸಾವಿರಾರು ಹಸ್ತಪ್ರತಿಗಳನ್ನು ಪ್ರಾಚ್ಯವಸ್ತುಗಳನ್ನು ಹೆಚ್ಚಾಗಿ ಸಂಗ್ರಹಿಸಿದರು. ಇವರಿಗೆ ನೆರವು ನೀಡಿದ ಕಾವಲಿ ವೆಂಕಟಬೋರಯ್ಯ ಎಂಬ ವಿದ್ವಾಂಸರನ್ನು ಇವರು ಬಹುವಾಗಿ ಕೊಂಡಾಡಿದ್ದಾರೆ. ವೆಂಕಟ ಬೋರಯ್ಯ ೧೮೦೩ರಲ್ಲಿ ಮರಣ ಹೊಂದಿದ ಮೇಲೆ ಅವರ ತಮ್ಮ ಕಾವಲಿ ವೆಂಕಟಲಕ್ಷ್ಮಯ್ಯನ ಸಹಾಯ ಸಹಕಾರಗಳನ್ನು ಪಡೆಯುತ್ತಾರೆ. ಇವರ ಹುದ್ದೆಯ ಹೆಸರು "Head Interpriter" (ಪ್ರಧಾನ ವ್ಯಾಖ್ಯಾನಕಾರ). ಇವರಲ್ಲದೆ, ಧರ್ಮಯ್ಯ ಪುರುಷೋತ್ತಮಯ್ಯ ಎಂಬ ಜೈನ ವಿದ್ವಾಂಸ, ವೆಂಕಟರಾವ್ ಎಂಬ ಬ್ರಾಹ್ಮಣ ಪಂಡಿತ ಹಾಗೂ ತಮಿಳು, ಕನ್ನಡ ಭಾಷೆ ಬಲ್ಲ ನಾರಾಯಣ ರಾವ್ ಮತ್ತು ರಾಮದಾಸ್, ಮರಾಠಿ ಪಂಡಿತ ಬಾಬೂರಾವ್ ಶೆಂದಮಿಳ್, ಬಲ್ಲ ಅಪ್ಪಾವು ಮತ್ತು ಗುಂಡಪ್ಪ ಅಬ್ದುಲ್ ಅಜೂರ್ ಎಂಬ ಪರ್ಷಿಯನ್ ಮುನ್ಷಿ ಇವರು ಮೆಕೆಂಜಿಯ ಸಿಬ್ಬಂದಿಗಳಾಗಿದ್ದರು.

ಭರತ ಖಂಡದ ಭೂಗೋಳ, ಇತಿಹಾಸ, ನಡೆ–ನುಡಿ, ನಂಬಿಕೆ–ಪುರಾಣ, ಶಾಸ್ತ್ರ, ಧಾರ್ಮಿಕ ಪದ್ಧತಿಗಳು ಮುಂತಾದವುಗಳ ಸಂಕ್ಷಿಪ್ತ ಪರಿಚಯವನ್ನು ಪಡೆಯುವುದು ಅಂದಿನ ಕಂಪನಿ ಸರ್ಕಾರದ ಉದ್ದೇಶವಾಗಿತ್ತು. ಇದು ಬಹುಮಟ್ಟಿಗೆ ಈಡೇರಿದುದು ಕೊಲಿನ್ ಮೆಕೆಂಜಿಯಿಂದ. ಆದುದರಿಂದ ಮೊದಮೊದಲು ಈ ಸಂಬಂಧದ ಸಂಚಯನ ಕಾರ್ಯಕ್ಕೆ ಸಂಬಂಧಪಟ್ಟ ಅಂಚೆ ವೆಚ್ಚ ಹಾಗೂ ಸಾಗಾಣಿಕೆ ವೆಚ್ಚವನ್ನು ಮಾತ್ರ ಕಂಪನಿ ಸರ್ಕಾರ ವಹಿಸಿಕೊಳ್ಳಲು ಒಪ್ಪಿತು. ಕೆಲವು ಕಾಲಾನಂತರ ಸಿಬ್ಬಂದಿಯ ಸಂಬಳ ಸಾರಿಗೆಗಳನ್ನು ಕೊಡಲು ಒಪ್ಪಿಕೊಂಡಿತು. ಆದರೆ ಪ್ರಾಚ್ಯವಸ್ತುಗಳನ್ನು ಕೊಳ್ಳುವುದಕ್ಕಾಗಿ ಮೆಕೆಂಜಿಯೇ ತನ್ನ ಕೈಯಿಂದ ೧೫ ಸಾವಿರ ಪೌಂಡುಗಳನ್ನು ಖರ್ಚು ಮಾಡಿದ್ದರು.

ಕರ್ನಲ್ ಮೆಕೆಂಜಿಯ ಸಂಗ್ರಹದಲ್ಲಿ ಅಮೂಲ್ಯ ಹಸ್ತಪ್ರತಿಗಳು, ಸಾಂಸ್ಕೃತಿಕ ಮೌಲ್ಯದ ಪ್ರಾಚ್ಯವಸ್ತುಗಳಿದ್ದವು. ದಕ್ಷಿಣ ಭಾರತದ ಶಾಸನಗಳ ನಕಲುಗಳ ಸಂಖ್ಯೆ ೧೯೭೬. ಬರ್ಮೀ ಮತ್ತು

ಜಾಪನೀಸ್ ಭಾಷೆಗಳೂ ಸೇರಿ ೧೩ ಭಾಷೆಗಳ ೧೫೬೮ ಹಸ್ತಪ್ರತಿಗಳು. Local Tracts ಎಂಬ ಸ್ಥಳ ಪುರಾಣ, ಕೈಫಿಯತ್ತು, ಬಖೈರ್, ರಾಜರ ವಂಶಾವಳಿ ಮುಂತಾದವುಗಳನ್ನು ಒಳಗೊಂಡ ೨೬೪ ಬೃಹತ್ ಸಂಪುಟಗಳು(ಒಟ್ಟು ೨೦೭೦ ವೃತ್ತಾಂತಗಳು). ಅವುಗಳ ಅನುವಾದಗಳನ್ನೊಳಗೊಂಡ ೭೫ ಸಂಪುಟಗಳು. ನಕ್ಷೆಗಳು ೭೯, ಚಿತ್ರಗಳು ೨೬೩೦, ಬೇರೆ ಬೇರೆ ಕಾಲದ ದೇಶೀಯ ಮತ್ತು ವಿದೇಶೀಯ ಚಿನ್ನದ ಬೆಳ್ಳಿಯ ತಾಮ್ರದ ನಾಣ್ಯಗಳು ೬೨೧೮. ಬೆಳ್ಳಿ, ಕಂಚು, ಹಿತ್ತಾಳೆ, ತಾಮ್ರದ ೧೦೬ ಮೂರ್ತಿಗಳು, ಅನೇಕ ಶಿಲಾಮೂರ್ತಿಗಳು. ಅಮರಾವತಿಯಲ್ಲಿದ್ದ ಒಂದು ಹಳಗನ್ನಡ ಶಿಲಾಶಾಸನ, ತಾಮ್ರ ಶಾಸನಗಳು, ಹಳೆಯ ಕಾಲದ ತೂಕದ ಬಟ್ಟುಗಳು, ಮಣಿ, ಉಂಗುರ, ಉಂಡಿಗೆ ಮುಂತಾದ ಸಮಗ್ರ ಜ್ಞಾನಸಂಪತ್ತಿಗೆ ಬೆಳಕನ್ನು ಮೂಡಿಸಿದರು.

ಏಷಿಯಾ ಮತ್ತು ಯುರೋಪುಗಳಲ್ಲಿ ಭಾರತೀಯ ಪ್ರಾಚ್ಯವಸ್ತು ಸಂಗ್ರಹಕಾರರು ಅನೇಕರಿದ್ದರು. ಆದರೆ ಅವರಾರೂ ಇಷ್ಟು ಬೆಲೆ ಬಾಳುವ ಅತ್ಯುಪಯುಕ್ತ ವಸ್ತುಗಳನ್ನು ಸಂಗ್ರಹಿಸಲಿಲ್ಲ. ಈ ಸಂಗ್ರಹದ ಇನ್ನೊಂದು ಹೆಚ್ಚುಗಾರಿಕೆಯೇನೆಂದರೆ ಕರ್ನಲ್ ಮೆಕೆಂಜಿಯೇ ಕೃಷ್ಣಾನದಿಯಿಂದ ಕನ್ಯಾಕುಮಾರಿಯವರೆಗೆ ಮೋಜಣಿ(ಕಾರ್ಯ ನಿಮಿತ್ತ ಸಂಚಾರ) ಮಾಡುತ್ತಿದ್ದಾಗ ಪ್ರತಿಯೊಂದು ಸುಪ್ರಸಿದ್ಧ ಕ್ಷೇತ್ರಕ್ಕೂ ಪ್ರಾಚೀನ ವಿದ್ಯಾಕೇಂದ್ರಕ್ಕೂ ತಾವೇ ಹೋಗಿ ಈ ವಸ್ತುಗಳನ್ನು ಹಾಗೂ ಹಸ್ತಪ್ರತಿಗಳನ್ನು ಸಂಗ್ರಹಿಸಿದನು. ಈ ಕಾರ್ಯ ಪೂರೈಸದಿದ್ದರೆ ವಸ್ತುಗಳು ಹಾಗೂ ಹಸ್ತಪ್ರತಿಗಳಲ್ಲಿ ಅಡಗಿರುವ ಜ್ಞಾನವು ಕಣ್ಮರೆಯಾಗಿ ಬಿಡುತ್ತಿತ್ತು ಎಂಬುದರಲ್ಲಿ ಸಂಶಯವಿಲ್ಲ.

ಇವರ ಕಾರ್ಯಕ್ಷೇತ್ರವು ಭಾರತಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ೧೮೧೧ರಿಂದ ೧೮೧೩ರ ವರೆಗೆ ಜಾವಾದಲ್ಲಿ ಮಿಲಿಟರಿ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸಿದ. ಅಲ್ಲಿಯೂ ಇವರು ವಸ್ತುಸಂಗ್ರಹ ಕಾರ್ಯವನ್ನು ನಡೆಸಿದರು. ೧೮೧೫ರವರೆಗೆ ಜಾವಾಕ್ಕೆ ಸಂಬಂಧಿಸಿದ ವರದಿಯನ್ನು ಸಿದ್ಧಪಡಿಸುವುದಕ್ಕಾಗಿ ಬಂಗಾಳದಲ್ಲಿಯೇ ವಸತಿ, ಮತ್ತೆ ಮದ್ರಾಸಿಗೆ ಆಗಮಿಸಿ ೧೮೧೭ರಲ್ಲಿ ಭಾರತದ ಪ್ರಪ್ರಥಮ ಸರ್ವೇಯರ್ ಜನರಲ್ ಆಗಿ ನೇಮಕಗೊಂಡು ಕಲ್ಕತ್ತಾಕ್ಕೆ ಹೋಗಬೇಕಾಯಿತು. ತಾವು ಸಂಗ್ರಹಿಸಿದ ಸಕಲ ಸಾಮಗ್ರಿಯೂ ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿಯೂ ಅವರೊಂದಿಗೆ ಅಲ್ಲಿಗೆ ಹೋಗಬೇಕಾಯಿತು. ಆ ಸಂದರ್ಭದಲ್ಲಿ ದಖ್ಖನ್ನಿನ ಇತಿಹಾಸದ ಭೂವಿವರಣೆಗಳಿಗೆ ಸಂಬಂಧಿಸಿದ ೭ ಸಂಪುಟಗಳನ್ನು ಲಂಡನ್ನಿಗೆ ಸಾಗಿಸಲಾಯಿತು.

ಕಲ್ಕತ್ತೆಯಲ್ಲಿ ಹಸ್ತಪ್ರತಿಗಳ ಸೂಚಿ ಪತ್ರಗಳನ್ನು ತಯಾರಿಸುವುದು ಮತ್ತು ಇತರ ಪ್ರಾಚ್ಯವಸ್ತುಗಳ ವಿವರಣಾತ್ಮಕ ಪಟ್ಟಿಕೆಗಳನ್ನು ಮಾಡುವುದು ಆರಂಭವಾಗಬೇಕಿದ್ದಿತು. ಆದರೆ ಅಷ್ಟು ಹೊತ್ತಿಗೆ ಕರ್ನಲ್ ಮೆಕೆಂಜಿಯ ಆರೋಗ್ಯ ಹದಗೆಟ್ಟಿತ್ತು. ೩೮ ವರ್ಷಗಳ ಕಾಲ ಒಂದು ದಿನವೂ ರಜಾ ತೆಗೆದುಕೊಳ್ಳದೆ ಕೆಲಸ ನಿರ್ವಹಿಸಿದ್ದರು. ಮಿಲಿಟರಿ ಕಾರ್ಯಾಲಯದಲ್ಲಿರಲಿ, ರಣರಂಗದಲ್ಲಿರಲಿ, ಮೋಜಣಿ ಕೆಲಸದಲ್ಲಿರಲಿ ಈತ ಒಂದು ಗಳಿಗೆಯನ್ನು ಪೋಲು ಮಾಡಲಿಲ್ಲ. ಕಂಪನಿಯ ಸೇವಕನಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾಗ ಬಿಡುವು ಸಿಕ್ಕಾಗಲೆಲ್ಲ ಪ್ರಾಚ್ಯವಸ್ತು ಸಂಗ್ರಹದ ಕೆಲಸ ಪೂರೈಸುತ್ತಿದ್ದರು.

ಆದ ಕಾರಣ ಮೂರು ವರ್ಷ ಗಳಿಕೆಯ ರಜಾ ಪಡೆದು ಇಂಗ್ಲೆಂಡಿಗೆ ಹೋಗಿ ಆರೋಗ್ಯ ಸುಧಾರಿಸಿದ ಮೇಲೆ ತಾವು ಸಂಗ್ರಹಿಸಿದ್ದ ಅಮೂಲ್ಯ ಸಾಮಗ್ರಿಯನ್ನು ಆಧರಿಸಿ ಪ್ರಮಾಣಭೂತವಾದ ಗ್ರಂಥರಚನೆ ಮಾಡಬೇಕೆಂಬುದು ಆತನ ಉದ್ದೇಶವಾಗಿದ್ದಿತು. ಕಂಪನಿ ಸರ್ಕಾರ ರಜಾ ಮಂಜೂರು ಮಾಡುವುದರಲ್ಲಿತ್ತು. ಅಷ್ಟರಲ್ಲಿಯೇ ಇವರು ಹೂಗ್ಲೀ ನದಿಯ ದಡದಲ್ಲಿ ೮.೫.೧೮೨೧ರಲ್ಲಿ ಅಸುನೀಗಿದನು. ಭರತಮಾತೆ ಈತನನ್ನು ಇಂಗ್ಲೆಂಡಿಗೆ ಹೋಗಗೊಡದೆ ತನ್ನಲ್ಲಿಯೇ ಎಡೆ ಮಾಡಿಕೊಟ್ಟಿರಬೇಕು. ಭರತಖಂಡದ ಸಾಂಸ್ಕೃತಿಕ ಮೋಜಣಿ ಮಾಡಿದವರಲ್ಲಿ ಇವರೇ ಮೊದಲಿಗರೆಂದರೆ ತಪ್ಪಾಗಲಿಕ್ಕಿಲ್ಲ.

ಕರ್ನಲ್ ಮೆಕೆಂಜಿಯ ಮರಣದ ತರುವಾಯ "ಈಸ್ಟ್ ಇಂಡಿಯಾ ಕಂಪನಿಯವರು ಅವರ ಸಂಗ್ರಹವನ್ನು ೧೦ ಸಾವಿರ ಪೌಂಡುಗಳಿಗೆ ಖರೀದಿಸಿದರು. ೧೮೨೩ರಿಂದ ೧೮೩೫ರವರೆಗೆ ಮೂರು ಕಂತುಗಳಲ್ಲಿ ಸಂಸ್ಕೃತ, ಪರ್ಷಿಯನ್, ಅರೇಬಿಕ್, ಜಾಪನೀಸ್ ಮತ್ತು ಬರ್ಮೀಯ ಹಸ್ತಪ್ರತಿಗಳನ್ನು ಇತರೆ ಬೆಲೆಬಾಳುವ ವಸ್ತುಗಳನ್ನು(ನಾಣ್ಯಗಳು, ಮೂರ್ತಿಗಳು, ನಕ್ಷೆಗಳು ಇತ್ಯಾದಿ) ಲಂಡನ್ನಿಗೆ ರವಾನಿಸಿದರು. ದಕ್ಷಿಣ ಭಾರತದ ಭಾಷೆಗಳಲ್ಲಿದ್ದ ಹಸ್ತಪ್ರತಿಗಳು, ಶಾಸನಗಳ ನಕಲುಗಳು, ಕೈಫಿಯತ್ತು, ಬಖೈರು, ಪೂರ್ವೋತ್ತರ, ವಂಶಾವಳಿ ವೃತ್ತಾಂತಗಳು ಎಲ್ಲೆಲ್ಲಿಯೋ ಬಿದ್ದಿದ್ದು ಅನಾದರ, ಔದಾಸೀನ್ಯಕ್ಕೆ ಒಳಗಾಗಿ ಕಡೆಗೆ ೧೮೫೮ರಂದು ಸ್ಥಾಪನೆಗೊಂಡ 'ಗವರ್ನಮೆಂಟ್ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ'(ಮದರಾಸು ಸರ್ಕಾರದ ಪ್ರಾಚೀನ ಹಸ್ತಪ್ರತಿ ಭಂಡಾರ)ವನ್ನು ಸೇರಿದವು ಈ ಸಂಗ್ರಹದಲ್ಲಿದ್ದ ಕನ್ನಡ ಹಸ್ತಪ್ರತಿಗಳ ವಿವರ ವಿಲ್ಸನ್ ಅವರ ಕ್ಯಾಟಲಾಗ್ ಪ್ರಕಾರ ಇಂತಿದೆ.

ಜೈನ ಸಾಹಿತ್ಯ	–	೨೧
ಹಳಗನ್ನಡ ಗ್ರಂಥಗಳು	–	೪೮
ಸ್ಥಳಪುರಾಣ, ಜೀವನ ಚರಿತ್ರೆ	–	೧೭
ಕಥೆ, ಕವನ, ನೀತಿ, ಧರ್ಮ	–	೧೮
ವ್ಯಾಕರಣ, ಜ್ಯೋತಿಷ್ಯ, ವೈದ್ಯ ಇತ್ಯಾದಿ	–	೧೬
ಕಡತಗಳಲ್ಲಿ ಚರಿತ್ರೆ, ಕೈಗಾರಿಕೆ, ವಂಶಾವಳಿ ಇತ್ಯಾದಿ	–	೩೨
	ಒಟ್ಟು	೧೫೨[೧೩]

ಆದರೆ ಅದೇ ಕ್ಯಾಟ್‌ಲಾಗಿನ ಸೇರಿಕೆಯ ೧೮ನೆಯ ಪುಟದ ಕೊನೆಯಲ್ಲಿರುವ ಪಟ್ಟಿಯಲ್ಲಿರುವಂತೆ ಕನ್ನಡ ಕೈಬರಹಗಳ ಸಂಖ್ಯೆ ೨೦೭, ಅದೇ ಸೇರಿರುವ ಸ್ಥಳೀಯ ವೃತ್ತಾಂತಗಳು(Local Tracts etc.,), ಶಾಸನಗಳ ನಕಲುಗಳು(Inscriptions), ಆಂಗ್ಲಾನುವಾದಗಳು(Translations etc.,), ಇವುಗಳಲ್ಲಿ ಕರ್ನಾಟಕದ ಇತಿಹಾಸಕ್ಕೆ ನೇರವಾಗಿ ಸಂಬಂಧಪಟ್ಟಿವೆ.

ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದರೆ ಕನ್ನಡದ ಹಸ್ತಪ್ರತಿಗಳನ್ನು, ಶಾಸನಗಳರೆ ನಕಲುಗಳನ್ನು, ಇತರೆ ಪ್ರಾಚ್ಯವಸ್ತುಗಳನ್ನು ಸಂಗ್ರಹಿಸಿದವರಲ್ಲಿ ಕರ್ನಲ್ ಮೆಕೆಂಜಿಯೇ ಮೊದಲಿಗರೆಂದು ತಿಳಿಯುತ್ತದೆ. '೧೮೫೮ರಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾದ ಸರ್ಕಾರಿ ಹಸ್ತಪ್ರತಿ ಭಂಡಾರಕ್ಕೆ ಸೇರ್ಪಡೆಯಾದ ಮೆಕೆಂಜಿ ಸಂಗ್ರಹವೇ ಪ್ರಥಮ ಕನ್ನಡ ಹಸ್ತಪ್ರತಿ ಭಂಡಾರ' ಎಂದು ಎಚ್.ದೇವೀರಪ್ಪನವರು ತಿಳಿಸಿದ್ದಾರೆ.[೧೪]

ಒಟ್ಟಾರೆ ಕರ್ನಲ್ ಮೆಕೆಂಜಿಯವರು ಇಡೀ ಭಾರತೀಯರಿಗೆ ಆದರ್ಶ ವ್ಯಕ್ತಿಯಾಗಿ, ಕರ್ತವ್ಯ ನಿಷ್ಠೆ ಹಾಗೂ ದೇಶದ ಭವಿಷ್ಯವನ್ನು ರೂಪಿಸುವ ಹಸ್ತಪ್ರತಿ ಸಂಗ್ರಹಕ್ಕಾಗಿಯೇ ತಮ್ಮ ಆರೋಗ್ಯವನ್ನು ಗಮನಿಸದೇ ಇರುವುದು ಇನ್ನೊಂದು ವಿಶೇಷ. ಅಲ್ಲದೆ ತಮ್ಮ ಸಹಾಯಕ್ಕೆ ಸ್ಥಳೀಯರನ್ನು ನೇಮಿಸಿಕೊಂಡು ತಮ್ಮ ಜೊತೆಗೆ ಅವರನ್ನು ಬೆಳೆಸುವ ಮುಂದಾಲೋಚನೆಯನ್ನು ಹೊಂದಿರುವ ಮಹಾನ್ ವ್ಯಕ್ತಿತ್ವವನ್ನು ಹೊಂದಿದ್ದರು.

೪.೩.೨. ಲಿಡಾನ್ ಸಂಗ್ರಹ(ಈಸ್ಟ್ ಇಂಡಿಯಾ ಹೌಸ್ ಸಂಗ್ರಹ)

ಸುಮಾರು ೧೮೩೦ರಲ್ಲಿ ಮದ್ರಾಸ್ ಸಿವಿಲ್ ಸರ್ವಿಸ್‌ಗೆ ಸೇರಿದ್ದ ಸಿ.ಪಿ. ಬ್ರೌನ್ ಇಂಡಿಯಾ ಹೌಸ್ ಲೈಬ್ರರಿಯಲ್ಲಿ ತಮಿಳು, ತೆಲಗು, ಕನ್ನಡ ಕೃತಿಗಳ ಹಸ್ತಪ್ರತಿಗಳಿದ್ದದ್ದು ಕಂಡರು. ಈ ಹಸ್ತಪ್ರತಿಗಳನ್ನು ಭಾಷಾಶಾಸ್ತ್ರಜ್ಞ ಲಿಡಾನ್ ಸಂಗ್ರಹಿಸಿದ್ದಾಗಿದ್ದವು. ಲಿಡಾನ್ ಮರಣಾನಂತರ ಅವರು ಸಂಗ್ರಹಿಸಿದ ಹಸ್ತಪ್ರತಿಗಳನ್ನು ಈಸ್ಟ್ ಇಂಡಿಯಾ ಕಂಪನಿ ಕೊಂಡುಕೊಂಡಿತು. ಆ ಸಂಗ್ರಹವನ್ನು ೧೮೪೪ರಲ್ಲಿ 'ಮದ್ರಾಸ್ ಲಿಟರರಿ ಸೊಸೈಟಿ'ಗೆ ಸಾಗಿಸಲಾಯಿತು. ಸಿ.ಪಿ.ಬ್ರೌನ್ ಈ ಸಂಗ್ರಹದ ಸೂಚಿಯನ್ನು ಮಾಡಿ ಲಿಟರರಿ ಸೊಸೈಟಿಯ ೧೮೪೦ರ ೩೩ನೆಯ ನಂಬರಿನ ಜರ್ನಲ್‌ನಲ್ಲಿ ಪ್ರಕಟಿಸಿದ್ದಾರೆ. ಇದರಿಂದ ಹಸ್ತಪ್ರತಿ ಭಂಡಾರದ ಪರಂಪರೆಗೆ ನಾಂದಿ ಹಾಡಿದ ಮಹಾತ್ಮರಲ್ಲಿ ಇವರು ಒಬ್ಬರಾಗಿದ್ದಾರೆ.

೪.೩.೩. ಸಿ.ಪಿ.ಬ್ರೌನ್

ಕರ್ನಾಟಕ ಹಸ್ತಪ್ರತಿಗಳ ಪರಂಪರೆಗೆ ಶ್ರೀಕಾರ ಹಾಕಿದವರಲ್ಲಿ ಇವರು ಒಬ್ಬರು. ಇವರು ಭಾರತಕ್ಕೆ ಆಗಮಿಸಿದ ಉದ್ದೇಶವೇ ಬೇರೆ. ಆದರೆ, ಇವರ ಆಸಕ್ತಿ ಅಭಿಲಾಷೆಯಿಂದ ಹಾಗೂ ಪ್ರಾಚೀನ ಕೈಬರಹಗಳ ಮಹತ್ವವನ್ನು ಅರಿತ ಹಲವು ಸಂಗ್ರಹಕಾರರಲ್ಲಿ ಇವರು ಒಬ್ಬರಾಗಿದ್ದಾರೆ.

'ಈಸ್ಟ್ ಇಂಡಿಯಾ ಹೌಸ್ ಸಂಗ್ರಹ'ದ ಸೂಚಿ ತಯಾರಿಸಿದ ಸಿ.ಪಿ. ಬ್ರೌನ್ ತಮ್ಮ ವೈಯಕ್ತಿಕ ಹಸ್ತಪ್ರತಿಗಳನ್ನು ಈಸ್ಟ್ ಇಂಡಿಯಾ ಕಂಪನಿಗೆ ಕಾಣಿಕೆಯಿತ್ತರು. ಇವರು ಸಂಗ್ರಹಿಸಿದುದು ತೆಲುಗು ಮತ್ತು ಸಂಸ್ಕೃತ ಹಸ್ತಪ್ರತಿಗಳು ಮಾತ್ರ. ಇವೆಲ್ಲ ಕಾಗದಪ್ರತಿಗಳಾಗಿದ್ದವು. ಸಿ.ಪಿ. ಬ್ರೌನ್ ಅವರು ಮರಳಿ ಇಂಗ್ಲೆಂಡಿಗೆ(೧೮೫೫) ತಲುಪುವವರೆಗೂ ದಕ್ಷಿಣ ಭಾರತದಲ್ಲಿ ಹಸ್ತಪ್ರತಿಗಳನ್ನು ಸಂಗ್ರಹಿಸಲು ಶ್ರಮಿಸಿದ್ದಾರೆ.

ಮೆಕೆಂಝಿ, ಇಂಡಿಯಾ ಹೌಸ್ ಲೈಬ್ರರಿ, ಸಿ.ಪಿ.ಬ್ರೌನ್ ಇವರ ಸಂಗ್ರಹವನ್ನು ೧೮೭೦ರಲ್ಲಿ ಚೆನ್ನೈನಲ್ಲಿರುವ ಪ್ರೆಸಿಡೆನ್ಸಿ ಕಾಲೇಜಿಗೆ ರವಾನಿಸಲಾಯಿತು. ಆಗ ಅಲ್ಲಿಯ ಸಂಸ್ಕೃತ ಪ್ರಾಧ್ಯಾಪಕರಾದ 'ಪಿಕಫಾರ್ಡ್' ಎಂಬುವರಿಂದ ಸಂರಕ್ಷಿಸಲ್ಪಟ್ಟಿತು. ಇದು ಈಗಿರುವ ಮದ್ರಾಸ್ ವಿಶ್ವವಿದ್ಯಾಲಯ ಗ್ರಂಥಾಲಯ ಕಟ್ಟಡದಲ್ಲಿ ಪ್ರತ್ಯೇಕವಾಗಿ "ಗವರ್ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರರಿ" ಎಂದು ಸ್ಥಾಪಿತವಾಗಿದೆ. ಹೀಗೆ ಸಣ್ಣ ಪ್ರಮಾಣದಲ್ಲಿ ಪ್ರಾರಂಭಗೊಂಡ ಲೈಬ್ರರಿ ಈಗ ಬೃಹದಾಕಾರವಾಗಿ ಹಸ್ತಪ್ರತಿಗಳನ್ನು ಸಂಗ್ರಹಿಸಿದೆ. ೩೧.೩.೧೯೯೩ನೇ ದಿನದ ಪ್ರಕಾರ ತಾಡೋಲೆಗಳು ೪೯.೩೪೫ ಮತ್ತು

ಕಾಗದ ಹಸ್ತಪ್ರತಿಗಳು ೨೧.೮೩೫ ಹೀಗೆ ಒಟ್ಟು ೭೧.೧೮೦ ಹಸ್ತಪ್ರತಿಗಳು ಒಳಗೊಂಡಿದೆ. ಇವು ನಾಡಿನ ಸಾಂಸ್ಕೃತಿಕ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತಿವೆ.

೪.೩.೪. ಬಿ.ಎಲ್. ರೈಸ್(೧೮೩೩-೧೯೨೭)

ಬಿ.ಎಲ್.ರೈಸ್ ಅವರು ಆಗಿನ ಕಾಲದ ಹುರುಪನ್ನು ಮನಗಂಡು ಶಾಸನಗಳನ್ನು ಅಭ್ಯಾಸ ಮಾಡಿ ಕನ್ನಡ ಗ್ರಂಥಗಳನ್ನು ಪ್ರಕಟಿಸಿ, ಕನ್ನಡಿಗರನ್ನು ಋಣಿಯಾಗಿ ಮಾಡಿದ್ದಾರೆ. ಬಿ.ಎಲ್. ರೈಸ್ ಮತ್ತು ಫ್ಲೀಟರು ಶಾಸನಗಳ ಮತ್ತು ಹಸ್ತಪ್ರತಿಗಳನ್ನು ಅಭ್ಯಾಸ ಮತ್ತು ಅವುಗಳ ಸಹಾಯದಿಂದ ಹಲವು ಗ್ರಂಥಗಳನ್ನು ಮತ್ತು ಕರ್ನಾಟಕ ಇತಿಹಾಸವನ್ನು ರಚಿಸದಿದ್ದರೆ ಈಗಿನವರೆಗೆ ಗೊತ್ತಿದ್ದ ಕರ್ನಾಟಕದ ಇತಿಹಾಸವು ತಿಳಿಯುತ್ತಿರಲಿಲ್ಲ. ಈ ಬ್ರಿಟಿಷ್ ಅಧಿಕಾರಿಗಳು ಹಲವು ಗ್ರಂಥಗಳನ್ನು ಮತ್ತು ಕರ್ನಾಟಕದ ಇತಿಹಾಸವನ್ನು ಬರೆದವರಲ್ಲಿ ಮೊದಲಿಗರು. ಅವರು ಮಾಡಿದ ಕೆಲಸಗಳು ಇಂದಿಗೂ ಮಹತ್ವಪೂರ್ಣವಾಗಿವೆ.

ಜನನ

ಬೆಂಜಮಿನ್ ಲೂಯಿ ರೈಸ್ ೧೮೩೭ನೇ ಜುಲೈ ೧೭ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಬೆಂಗಳೂರಿನಲ್ಲಿ ಧರ್ಮೋಪದೇಶಕರಾಗಿದ್ದರು. ಬಿ.ಎಲ್.ರೈಸ್ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಹೋದರು. ಅಲ್ಲಿ ಬಿ.ಎ. ಪಾಸಾಗಿ ಕೆಲವು ವರ್ಷಗಳ ಕಾಲ ಅಲ್ಲೇ ಕೆಲಸ ನಿರ್ವಹಿಸಿದರು. ನಂತರ ೧೮೬೦ರಲ್ಲಿ ಭಾರತಕ್ಕೆ ಮರಳಿ ಬಂದ ಮೇಲೆ ಬೆಂಗಳೂರಿನ ಸೆಂಟ್ರಲ್ ಹೈಸ್ಕೂಲಿನಲ್ಲಿ ಮುಖ್ಯಗುರುಗಳಾಗಿ ಹಾಗೂ ೧೮೬೫-೬೮ರ ನಡುವೆ ಮೈಸೂರು ಹಾಗೂ ಕೊಡಗುಗಳಲ್ಲಿ ಶಾಲೆಯ ಇನ್ಸ್‌ಪೆಕ್ಟರ್ ಆಗಿ ಕಾರ್ಯ ನಿರ್ವಹಿಸಿದರು. ೧೮೮೨ರಲ್ಲಿ ಹಂಟರ್ ಕಮಿಷನ್ ಕಾರ್ಯದರ್ಶಿಯಾಗಿ, ೧೮೮೩ರಲ್ಲಿ ಸರಕಾರದ ವಿದ್ಯಾಖಾತೆಯ ಕಾರ್ಯದರ್ಶಿಯಾಗಿ ಹಾಗೂ ೧೮೮೪ರಲ್ಲಿ ಮೈಸೂರು ಸಂಸ್ಥಾನದಲ್ಲಿ ಪ್ರಾಚ್ಯವಸ್ತು ಇಲಾಖೆಯು ಪ್ರಾರಂಭವಾದ ಕೂಡಲೆ ಅದರ ನಿರ್ದೇಶಕರು ಹಾಗೂ ಇನ್ನಿತರೆ ಹಲವು ಉನ್ನತ ಹುದ್ದೆಗಳನ್ನು ಅಲಂಕರಿಸಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದರು. ಆದ್ದರಿಂದ ಅವರಲ್ಲಿದ್ದ ಹುಮ್ಮಸ್ಸನ್ನು ಗುರುತಿಸಿದ ಅಂದಿನ ಸರಕಾರಗಳು ಪ್ರಾಚ್ಯವಸ್ತು ಸಂಶೋಧನೆಯಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಹೆಚ್ಚಿನ ಜವಾಬ್ದಾರಿಯನ್ನು ನೀಡಿದವು ಎಂಬುದು ಅಧ್ಯಯನದಿಂದ ತಿಳಿದುಬಂದಿದೆ.

ಎಲ್.ಡಿ.ಬಾರ್ನೆಟ್ ಎಂಬ ವಿದ್ವಾಂಸರು ರೈಸ್ ಬಗ್ಗೆ ಈ ರೀತಿ ವ್ಯಕ್ತಪಡಿಸಿದ್ದಾರೆ. 'ರೈಸ್ ಅವರು ಸತ್ಯದ ಶೋಧನೆಗಾಗಿ ಅಮಿತೋತ್ಸಾಹದಿಂದ ಮತ್ತು ವಿಶೇಷ ಆಸ್ಥೆಯಿಂದ ಕೆಲಸ ಮಾಡುವ ವ್ಯಕ್ತಿಯಾಗಿದ್ದರು. ದಕ್ಷಿಣ ಭಾರತದ ಇತಿಹಾಸ ಮತ್ತು ಸಾಹಿತ್ಯದ ಅಭ್ಯಾಸಗೈಯ್ದು ಜ್ಞಾನ ವಿತರಣೆಗೆ ಅಪಾರ ಸೇವೆ ಮಾಡಿದ್ದಾರೆ' ಎಂದಿದ್ದಾರೆ.

೧೮೮೪ರಲ್ಲಿ ಅವರು ಪ್ರಾಚ್ಯವಸ್ತು ಇಲಾಖೆಯ ಮುಖ್ಯಸ್ಥರಾದ ಕೂಡಲೇ ಮೈಸೂರು ಸಂಸ್ಥಾನದ ಎಲ್ಲಾ ಶಾಸನಗಳನ್ನು ಜಿಲ್ಲೆಗಳ ಪ್ರಕಾರ ಶಾಸ್ತ್ರೀಯವಾಗಿ ಸಂಗ್ರಹಿಸಿ ಅಭ್ಯಸಿಸಿ ಪ್ರಕಟಿಸಬೇಕೆಂಬ

ಘನ ಯೋಜನೆಯನ್ನು ಹಾಕಿಕೊಂಡರು. ಅವರು ಶಾಸನಗಳನ್ನು ಸಂಗ್ರಹಿಸುವ ಕಾರ್ಯದ ಜೊತೆಗೆ ನೂರಾರು ಹಸ್ತಲಿಖಿತ ಗ್ರಂಥಗಳನ್ನು, ಸ್ಥಾನಿಕ ಪರಂಪರೆಗಳನ್ನು ಮತ್ತು ಐತಿಹಾಸಿಕ ದಾಖಲೆಗಳನ್ನು ಸಂಗ್ರಹಿಸಿದರು. ಅವರಿಗಿದ್ದ ಅನುಭವದಿಂದ ಮತ್ತು ಅವರಲ್ಲಿದ್ದ ಸಾಮಗ್ರಿಯಿಂದ ಅವರು ೧೮೭೭-೭೮ರಲ್ಲಿ ಮೈಸೂರು ಗ್ಯಾಝಿಟಿಯರುಗಳ ಎರಡು ಸಂಪುಟಗಳನ್ನು ಸಿದ್ಧಮಾಡಿ ಪ್ರಕಟಿಸಿದರು. ಜೊತೆಗೆ ಈ ಸಂಪುಟಗಳ ಎರಡನೆಯ ಆವೃತ್ತಿಯನ್ನು ೧೮೯೭ರಲ್ಲಿ ಪ್ರಕಟಿಸಲಾಯಿತು. ಹಾಗೆಯೇ ೧೮೮೧ರಲ್ಲಿ ಮೈಸೂರು ಸಂಸ್ಥಾನದ ಮೊದಲನೆಯ ಜನಗಣತಿಯ ವರದಿಯನ್ನು ತಯಾರಿಸಿದರು. ಬಿ.ಎಲ್.ರೈಸ್ ಕನ್ನಡ, ತೆಲುಗು, ತಮಿಳು ಮತ್ತು ಸಂಸ್ಕೃತ ಭಾಷೆಗಳನ್ನು ಅಭ್ಯಸಿಸಿದ್ದರು. ಜೊತೆಗೆ "ಮೈಸೂರು ಆ್ಯಂಡ್ ಕೂರ್ಗ್ ಫ್ರಮ್ ಇನ್‌ಸ್ಕ್ರಿಪ್ಷನ್ಸ್‌ನಲ್ಲಿ ಶಾಸನಗಳ ಸಾರಾಂಶವನ್ನು ಪರಿಚಯಿಸುವುದರ ಜೊತೆಗೆ ಹಳೇ ಮೈಸೂರು ಸಂಸ್ಥಾನದಲ್ಲಿದ್ದ ರಾಜ್ಯಾಡಳಿತದ ವಿವರಗಳನ್ನು, ಜನರ ಸ್ವಭಾವ ಮತ್ತು ವೇಷಭೂಷಣಗಳನ್ನು ಕಲೆ, ಸಾಹಿತ್ಯ ಮತ್ತು ಧರ್ಮಗಳ ಬಗ್ಗೆ ಮಾಹಿತಿ ಪಡೆದು ಪ್ರಕಟಿಸಿದ್ದಾರೆ.

'ಎಫಿಗ್ರಾಫಿಯಾ ಕರ್ನಾಟಿಕದ ೧೨ ಸಂಪುಟಗಳನ್ನು ಪ್ರಕಟಿಸಲು ರೈಸ್ ಅವರು ಯೋಜನೆಯನ್ನು ರೂಪಿಸಿದ್ದರು. 'ಬಿಬ್ಲಿಯೋಥಿಕಾ ಕರ್ನಾಟಿಕ ಮಾಲೆ' ಈ ಮೊದಲೇ ಹೇಳಿದಂತೆ ರೈಸ್ ಮೈಸೂರು ಸಂಸ್ಥಾನದಲ್ಲಿದ್ದ ಸಾವಿರಾರು ಹಸ್ತಲಿಖಿತ ಗ್ರಂಥಗಳನ್ನು ಸಂಗ್ರಹಿಸಿ ಅವುಗಳ ಸಲುವಾಗಿಯೇ ಪ್ರಾರಂಭಿಸಿದ 'ಮೈಸೂರು ಗವರ್ನ್‌ಮೆಂಟ್ ಓರಿಯಂಟಲ್ ಲೈಬ್ರರಿಯಲ್ಲಿಟ್ಟರು.' ಜೊತೆಗೆ ಅಧ್ಯಯನಕ್ಕೆ ವಿಶೇಷ ಆಸಕ್ತಿ ವಹಿಸಿ ಕರ್ನಾಟಕ ಭಾಷಾಭೂಷಣ(೧೮೮೪), ಕರ್ನಾಟಕ ಶಬ್ದಾನುಶಾಸನ(೧೮೯೦) ಪಂಪಭಾರತ ಅಥವಾ ವಿಕ್ರಮಾರ್ಜುನವಿಜಯ(೧೮೯೮), ಪಂಪರಾಮಾಯಣ(೧೮೯೨) ಕವಿರಾಜಮಾರ್ಗ(೧೮೯೮) ಮತ್ತು ಕಾವ್ಯಾವಲೋಕನ ಎಂಬ ಅತಿ ಮಹತ್ವದ ಕನ್ನಡ ಗ್ರಂಥಗಳನ್ನು ಸಂಪಾದಿಸಿ ಬಿಬ್ಲಿಯೋಥಿಕಾ ಕರ್ನಾಟಿಕ ಮಾಲೆಯಲ್ಲಿ ಪ್ರಕಟಿಸಿದ್ದಾರೆ.[೧೫] ಜೊತೆಗೆ ಕರ್ನಾಟಕ ಶಬ್ದಾನುಶಾಸನವು ಒಂದು ವ್ಯಾಕರಣ ಗ್ರಂಥ. ಅದಕ್ಕೆ ಮುನ್ನುಡಿಯು ಬರೆಯುವುದರ ಮೂಲಕ ಸುಮಾರು ನೂರರಿಂದ ನೂರಾ ಐವತ್ತು ಕನ್ನಡ ಕವಿಗಳು ಮತ್ತು ಅವರ ಗ್ರಂಥಗಳ ವಿಷಯವಾಗಿ ವಿವೇಚಿಸಿದ್ದಾರೆ. ಇವರ ಇನ್ನೊಂದು ವಿಶೇಷವೆಂದರೆ ಸುಮಾರು ೪೫೦ ಕವಿಗಳ ಯಾದಿಯನ್ನು ಅಕ್ಷರಾನುಕ್ರಮಣಿಕೆಯಲ್ಲಿ ಸಿದ್ಧಪಡಿಸಿ ಸಮರ್ಪಿಸಿದ್ದಾರೆ. ಇವರಲ್ಲಿ ಇನ್ನೊಂದು ಮಹತ್ವದ ಸಂಗತಿಯೆಂದರೆ ಸಂಸ್ಕೃತ ಭಾಷೆಯ ಹಸ್ತಲಿಖಿತ ಗ್ರಂಥಗಳನ್ನು ಸಂಗ್ರಹಿಸಿ ವೇದ, ವೇದಾಂಗ, ಕಾವ್ಯ, ನಾಟಕ, ಜೈನಧರ್ಮ, ವೀರಶೈವ ಎಂದು ವರ್ಗೀಕರಿಸಿದ್ದಾರೆ. ಜೊತೆಗೆ ಭಾರತ ಸರಕಾರದ ಯೋಜನೆಯ ಪ್ರಕಾರ ಹಲವು ಮಹತ್ವದ ಪುಸ್ತಕಗಳನ್ನು ಸಂಗ್ರಹಿಸುವ ಕೆಲಸ ಮಾಡಿದ್ದಾರೆ. ೧೮೮೯ರಲ್ಲಿ ಆರ್.ನರಸಿಂಹಾಚಾರ್ಯರು ಪ್ರಾಚ್ಯವಸ್ತು ಇಲಾಖೆಯಲ್ಲಿ ಸಹಾಯಕರಾಗಿ ಬಂದ ಮೇಲೆ ರೈಸ್‌ರಿಗೆ ಸಂಶೋಧನೆ ಕೆಲಸ ಕಾರ್ಯಚಟುವಟಿಕೆಯಲ್ಲಿ ಹೆಚ್ಚಿನ ಪುಷ್ಟಿ ದೊರೆಯಿತು. ಆದಕಾರಣ ಸುಪ್ರಸಿದ್ಧ ಸಂಶೋಧನೆಗಳ ಸುಮಾರು ೫೦ ಬಿಡಿ ಲೇಖನಗಳನ್ನು ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ್ದಾರೆ.

* **ಕೊನೆಯ ದಿನಗಳು**

ಬಿ.ಎಲ್.ರೈಸ್ ಅವರು ಮೈಸೂರು ಸಂಸ್ಥಾನದ "ಡೈರೆಕ್ಟರ್ ಆಫ್ ಆರ್ಕಿಯಾಲಾಜಿಕಲ್ ರಿಸರ್ಚಸ್" ಎಂಬ ಹುದ್ದೆಯಿಂದ ೧೯೦೬ರಲ್ಲಿ ನಿವೃತ್ತಿ ಹೊಂದಿ ಇಂಗ್ಲೆಂಡಿಗೆ ಹೋಗಿ ಅಲ್ಲಿ ಹ್ಯಾರೋದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಅಲ್ಲಿಂದಲೇ ಅವರು ಕರ್ನಾಟಕವನ್ನು ಕುರಿತು ಅನೇಕ ಲೇಖನಗಳನ್ನು ಬರೆದರು. ಅವರು ತಮ್ಮ ೯೦ನೆಯ ವಯಸ್ಸಿನಲ್ಲಿ ೧೯೨೭ನೇ ಜುಲೈ ೧೧ರಂದು ಮರಣ ಹೊಂದಿದರು.

೪.೩.೫. ಜೆ.ಎಫ್. ಫ್ಲೀಟ್(೧೮೪೭–೧೯೧೭)

ಜಾನ್ ಫೇಥ್‌ಫುಲ್ ಫ್ಲೀಟರು ಭಾರತದ ಶ್ರೇಷ್ಠ ಇತಿಹಾಸ ಸಂಶೋಧಕರಲ್ಲಿ ಒಬ್ಬರು. ಅವರು ಐದು ಮಹತ್ವದ ಗ್ರಂಥಗಳು ಮತ್ತು ೪೫೩ ಲೇಖನಗಳನ್ನು ಪ್ರಕಟಿಸಿದ್ದಾರೆ. ಆ ಗ್ರಂಥಗಳು ಹಾಗೂ ಲೇಖನಗಳಲ್ಲಿ ಲಿಪಿಶಾಸ್ತ್ರ, ಶಾಸನಶಾಸ್ತ್ರ, ಕಾಲಗಣನಾಶಾಸ್ತ್ರ, ಸಂಖ್ಯೆಗಳು, ಐತಿಹಾಸಿಕ ಭೂಗೋಳ, ನಾಣ್ಯಗಳು, ಐತಿಹಾಸಿಕ ಲಾವಣಿಗಳು, ಶಬ್ದಗಳು, ಕೈಬರಹಗಳು ಮೊದಲಾದ ವಿಷಯಗಳನ್ನೊಳಗೊಂಡಿವೆ. ಅವರು ಪಾಲಿ, ಸಂಸ್ಕೃತ, ಕನ್ನಡ, ಮರಾಠಿ, ಮುಂತಾದ ಹಲವು ಭಾಷೆಗಳನ್ನು ಕಲಿತಿದ್ದರು. ಅಲ್ಲದೆ ಮುಂಬೈ ಇಲಾಖೆಯಲ್ಲಿ ಅದರಲ್ಲಿ ಮುಖ್ಯವಾಗಿ ಕರ್ನಾಟಕದಲ್ಲಿ ಹೆಚ್ಚಿನ ಸೇವೆ ಸಲ್ಲಿಸಿವುದರ ಜೊತೆಗೆ ಉತ್ತರ ಕರ್ನಾಟಕದ ಇತಿಹಾಸವನ್ನು ರಚಿಸುವಲ್ಲಿ ಅಗ್ರಗಣ್ಯರಾಗಿದ್ದಾರೆ. ಇವರು ಬರೆದ 'ಮುಂಬೈ ಪ್ರಾಂತದ ಕನ್ನಡ ಜಿಲ್ಲೆಗಳ ರಾಜಮನೆತನಗಳು' ಎಂಬ ಪುಸ್ತಕವನ್ನು ೧೮೯೬ರಲ್ಲಿ ಪ್ರಕಟಿಸಲಾಗಿತ್ತು. ಇಂದಿಗೂ ಕರ್ನಾಟಕ ಇತಿಹಾಸವನ್ನು ಅಭ್ಯಸಿಸುವವರಿಗೆ ಅದು ಅತಿಮುಖ್ಯ ಹಾಗೂ ಮಹತ್ವದ ಆಧಾರ ಗ್ರಂಥವಾಗಿ ಇಂದಿಗೂ ಉಳಿದಿದೆ. ಆದರೆ ಕರ್ನಾಟಕ ಶಾಸನಶಾಸ್ತ್ರಕ್ಕೆ ಭದ್ರ ಬುನಾದಿ ಹಾಕಿರುವ ಕೀರ್ತಿ ಇವರಿಗೆ ಸಲ್ಲುತ್ತದೆ. ಆದುದರಿಂದ ಇವರನ್ನು 'ಕರ್ನಾಟಕ ಶಾಸನಶಾಸ್ತ್ರದ ಪಿತಾಮಹರೆಂದು' ಕರೆಯಲಾಗುತ್ತಿದೆ.

ಫ್ಲೀಟರಿಗೆ ಕರ್ನಾಟಕ ಇತಿಹಾಸ, ಭಾಷೆ, ಸಂಸ್ಕೃತಿಯ ಮೇಲೆ ಅಪಾರ ಆಸಕ್ತಿ ಇತ್ತು. ಅವರು ನಾಡಿನ ಇತಿಹಾಸವನ್ನು ಶಾಸನ, ಪುರಾಣ, ಐತಿಹ್ಯ, ನಾಣ್ಯ ಮತ್ತು ಸಾಹಿತ್ಯಿಕ ಗ್ರಂಥಗಳ ಸಹಾಯದಿಂದ ರಚಿಸಿದರು. ಅಲ್ಲದೆ ಧಾರವಾಡದಲ್ಲಿದ್ದ ಕರ್ನಾಟಕ ವಿದ್ಯಾವರ್ಧಕ ಸಂಘದವರಿಗೆ ಪತ್ರವನ್ನು ಬರೆದು ಶಾಸನಗಳ ಪ್ರಕಟಣಾಕಾರ್ಯ ಕೈಗೊಳ್ಳಲು ತಿಳಿಸಿದ್ದರು. ಜೊತೆಗೆ ದೇಶೀಯ ವಿದ್ವಾಂಸರ ಗಮನವನ್ನು ಶಾಸನಗಳು ಹಾಗೂ ಪ್ರಾಚೀನ ಕೈಬರಹ ಸಂಗ್ರಹ ಹಾಗೂ ಅಭ್ಯಾಸದ ಕಡೆಗೆ ಸೆಳೆದರು. ಅವರು ಬೆಳಗಾವಿ ಮತ್ತು ಸೊಲ್ಲಾಪುರಗಳಲ್ಲಿ ಸರ್ಕಾರಿ ಹೈಸ್ಕೂಲುಗಳಲ್ಲಿ ಶಿಕ್ಷಕರಾಗಿದ್ದ ಕೆ.ಬಿ.ಪಾಠಕ್ ಅವರನ್ನು ತಮ್ಮ ಕಡೆಗೆ ಕೆಲಸಕ್ಕೆ ಬರಲು ಆಹ್ವಾನಿಸಿದ್ದರು. ಆದರೆ ಹುಬ್ಬಳ್ಳಿಯವರೇ ಆದ ಪಾಠಕರು ಯಾವುದೋ ಕಾರಣದಿಂದ ಬೆಂಗಳೂರಿಗೆ ಬಂದು ಬಿ.ಎಲ್.ರೈಸರ ಸಹಾಯಕರಾಗಿ 'ಕವಿರಾಜಮಾರ್ಗ' ಎಂಬ ಗ್ರಂಥವನ್ನು ಸಂಪಾದಿಸಿದ್ದರು. ಹೀಗೆ ಫ್ಲೀಟ್ ಅವರ ಕಾರ್ಯ ಚಟುವಟಿಕೆಗಳ ಪಟ್ಟಿ ಕೆಳಗಿನಂತಿದೆ.

* ೧೯೦೭ರಲ್ಲಿ ಭಾರತೀಯ ಶಾಸನಶಾಸ್ತ್ರವೆಂಬ ಪುಸ್ತಕವನ್ನು ರಚಿಸಿದ್ದಾರೆ.

* 'ಡೈನಾಸೀಜ್ ಆಫ್ ಕ್ಯಾನರೀಜ್ ಡಿಸ್ಟ್ರಿಕ್ಟ್ಸ್' ಫ್ಲೀಟರು ೧೮೯೬ರಲ್ಲಿ ಸಿದ್ಧಪಡಿಸಿದ ಗ್ರಂಥವು ಮುಂಬೈ ಗ್ಯಾಝಿಟಿಯರಿನ ೧ನೆಯ ಸಂಪುಟದ ಎರಡನೆಯ ಭಾಗದಲ್ಲಿ ಪ್ರಕಟಿಸಲಾಗಿದೆ. ಫ್ಲೀಟರ ಶಾಸನಗಳ ಸಂಗ್ರಹ ಮಾಡುವುದರ ಜೊತೆಗೆ ಐತಿಹಾಸಿಕ ಲಾವಣಿಗಳನ್ನು ಸಂಗ್ರಹಿಸಿದರು.

* ಜೀವನ

ಜೆ.ಎಫ್.ಫ್ಲೀಟ್ ಕ್ರಿ.ಶ.೧೮೪೭ರಲ್ಲಿ ಇಂಗ್ಲೆಂಡಿನ ಚಿಸ್ವಿಕ್‌ದಲ್ಲಿ ಜನಿಸಿದರು. ಇವರ ತಂದೆ ಜಾರ್ಜ್ ಫ್ಲೀಟ್, ತಾಯಿ ಎಸ್ತರ್ ಫೇಥ್‌ಪುಲ್ ಫ್ಲೀಟರ್. ಇವರ ವಿದ್ಯಾಭ್ಯಾಸವು ಲಂಡನ್ನಿನ 'ಮರ್ಚಂಟ್ ಟೇಲರ್' ಶಾಲೆಯಲ್ಲಿ ನಡೆಯಿತು. ನಂತರ ಇಂಡಿಯನ್ ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ೧೮೬೫ರಲ್ಲಿ ಪಾಸಾದರು. ಲಂಡನ್ ಮಹಾವಿದ್ಯಾಲಯದಲ್ಲಿ ಗೋಲ್ಡ್‌ಸ್ಟಕರ್ ಎಂಬ ವಿದ್ವಾಂಸರ ಹತ್ತಿರ ಸಂಸ್ಕೃತ ವಿದ್ಯಾಭ್ಯಾಸ ಮಾಡಿದರು. ೧೮೬೭ರಲ್ಲಿ ಮುಂಬೈ ಸರಕಾರದ ಕಂದಾಯ ಇಲಾಖೆಯಲ್ಲಿ ಸೇವೆಯನ್ನು ಕೈಗೊಂಡರು. ನಂತರ ವಿವಿಧ ಪ್ರಮುಖ ಹುದ್ದೆಗಳನ್ನು ಅಲಂಕರಿಸಿ ೧೮೯೭ರಲ್ಲಿ ನಿವೃತ್ತರಾದರು. ಅನಂತರ ಅವರು ಇಂಗ್ಲೆಂಡಿಗೆ ಹೋಗಿ ಈಲಿಂಗಿನಲ್ಲಿ ವಾಸ ಮಾಡಿದರು. ಅವರು ೧೯೧೭ರಲ್ಲಿ ಮರಣ ಹೊಂದಿದರು.

ಒಟ್ಟಾರೆ ಅವರ ಕಾರ್ಯಚಟುವಟಿಕೆಯನ್ನು ಈ ರೀತಿಯಾಗಿ ಗುರುತಿಸಲಾಗಿದೆ.

* ೧೯೦೭ರಲ್ಲಿ 'ಭಾರತೀಯ ಶಾಸನ ಶಾಸ್ತ್ರ' ಎಂಬ ಪುಸ್ತಕವನ್ನು ಬರೆದರು.

* ಡಯನಾಸ್ಟೀಜ್ ಆಫ್ ಕ್ಯಾನರೀಜ್ ಡಿಸ್ಟ್ರಿಕ್ಟ್ಸ್ ಫ್ಲೀಟರು ೧೮೯೬ರಲ್ಲಿ ಸಿದ್ಧಪಡಿಸಿದ ಈ ಗ್ರಂಥವನ್ನು ಮುಂಬೈ ಗ್ಯಾಝಿಟಿಯರಿನ ೧ನೆಯ ಸಂಪುಟದ ಎರಡನೆಯ ಭಾಗದಲ್ಲಿ ಪ್ರಕಟಿಸಲಾಗಿದೆ.[೯]

* ಫ್ಲೀಟರು ಶಾಸನಗಳ ಸಂಗ್ರಹ ಮಾಡುವುದರ ಜೊತೆಗೆ ಐತಿಹಾಸಿಕ ಲಾವಣಿಗಳನ್ನು ಸಂಗ್ರಹಿಸಿದರು. ಜೊತೆಗೆ ಪ್ರಾಚೀನ ಕೈಬರಹಗಳಾದ ಹಸ್ತಪ್ರತಿಗಳನ್ನು ಸಹ ಸಂಗ್ರಹಿಸುವ ಹಾಗೂ ಸಂರಕ್ಷಿಸುವ ಕಾರ್ಯ ಕೈಗೊಂಡರು.

* ಫ್ಲೀಟರ ಶೋಧನೆಗೆ ದೇಶೀಯ ವಿದ್ವಾಂಸರಿಂದ ನೆರವು

ಫ್ಲೀಟರು ಭಾರತಕ್ಕೆ ಬಂದ ಒಂದೆರಡು ವರ್ಷಗಳಲ್ಲಿ ಸಂಸ್ಕೃತ ಮತ್ತು ಕನ್ನಡ ಶಾಸನಗಳನ್ನು ಓದತೊಡಗಿದರು. ಶಾಸನಗಳನ್ನು ಓದುವುದರಲ್ಲಿ ಅವರು ವೆಂಕಟರಂಗೋಕಟ್ಟಿ, ಗಂಗಾಧರ ಮಡಿವಾಳೇಶ್ವರ ತುರಮರಿ ಮತ್ತು ಶಾಂತವೀರ ರಾಚಿದೇವ, ಕಿತ್ತೂರ ಮೊದಲಾದ ಕನ್ನಡ ಪಂಡಿತರ ಸಹಾಯ ಸಹಕಾರವನ್ನು ಪಡೆದಿದ್ದರು. ಅವರು ಹೋದ ಊರುಗಳಲ್ಲೆಲ್ಲಾ ಶಾಸನಗಳಿರುವುದರ ಬಗ್ಗೆ ವಿಚಾರಿಸುತ್ತಿದ್ದರು ಮತ್ತು ಅವು ಇದ್ದರೆ ಆ ಸ್ಥಳದಲ್ಲಿದ್ದ ವಯಸ್ಸಾದ ಜನರನ್ನು ಕರೆಯಿಸಿ ಆ ಶಾಸನಗಳನ್ನು ಓದಬಲ್ಲಿರಾ ಎಂದು ಕೇಳುತ್ತಿದ್ದರಂತೆ. ಇಂಥ ಒಂದು ಪ್ರಸಂಗ 'ಹಲಿಗೆ' ಎಂಬ ಊರಿಗೆ ಹೋದಾಗಲು ನಡೆಯಿತಂತೆ. ಚುಳಕಿಯ ಶಾನುಭೋಗ ಮನೆತನದ ರಾಮಪ್ಪನವರು ಆಗ ಅಲ್ಲಿ ಉಪಸ್ಥಿತರಿದ್ದರು. ಶಾಸನವನ್ನು ಓದಬಲ್ಲಿರಾ ಎಂದು ಫ್ಲೀಟರು ಅವರನ್ನು ಕೇಳಿದಾಗ ಅವರು

ಅದನ್ನು ಓದಿ ತೋರಿಸಿದರಂತೆ. ಹೀಗೆ ಇತ್ತೀಚಿನ ಕನ್ನಡ ಶಾಸನಗಳನ್ನು ಓದಬಲ್ಲ ಜನರು ಫ್ಲೀಟರು ಕಾಲಕ್ಕೆ ಕೆಲವರಿದ್ದರು. ಹೀಗೆ ಫ್ಲೀಟರು ದೇಶೀಯ ವಿದ್ವಾಂಸರ ನೆರವನ್ನು ಪಡೆದು ಪ್ರಾಚೀನ ಆಕರಗಳಾದ ಹಸ್ತಪ್ರತಿಗಳು ಮತ್ತು ಶಾಸನಗಳು ಮುಂದಿನ ಪೀಳಿಗೆಗೆ ಎಷ್ಟು ಮಹತ್ವ, ಎಷ್ಟು ಅವಶ್ಯಕತೆ ಎಂಬುದನ್ನು ತೋರಿಸಿಕೊಟ್ಟು ನಂತರ ಅದರಲ್ಲಿ ಅಡಗಿರುವ ಜ್ಞಾನ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲಿದ ಮಹಾನ್ ವ್ಯಕ್ತಿಗಳಲ್ಲಿ ಇವರು ಒಬ್ಬರಾಗಿದ್ದರು.

ಇವರ ಕಾರ್ಯ ಚಟುವಟಿಕೆಗಳಲ್ಲಿ ಸಂಗ್ರಹಿಸಿದ ಹಲವು ಗ್ರಂಥಗಳು ಹಾಗೂ ಹಸ್ತಪ್ರತಿಗಳು. ಶಾಸನಗಳು ಪ್ರಸ್ತುತ ಸಂದರ್ಭದಲ್ಲಿ ಸಹ ತುಂಬ ಪ್ರಭಾವ ಬೀರುತ್ತವೆ. ಜೊತೆಗೆ ಹೊಸ ಜ್ಞಾನದ ಸೃಷ್ಟಿಗೆ ಪ್ರಮುಖವಾಗಿ ಆಧಾರವಾಗಿರುವುದನ್ನು ತಿಳಿಯಬಹುದು.

೪.೩.೬. ಪ್ರಸ್ತುತ

ಹೀಗೆ ಮೇಲಿನ ಎಲ್ಲಾ ಅಂಶಗಳನ್ನು ಅವಲೋಕಿಸಿದಾಗ 'ಹಸ್ತಪ್ರತಿ ಭಂಡಾರಗಳ ಪರಂಪರೆ' ೧೮೫೮ರಲ್ಲಿ ಸ್ಥಾಪಿತವಾದ 'ಮದರಾಸ್ ಸರ್ಕಾರಿ ಹಸ್ತಪ್ರತಿ ಭಂಡಾರಕ್ಕೆ' ಸೇರ್ಪಡೆಯಾದ ಮೆಕೆಂಜಿ ಸಂಗ್ರಹವೇ ಪ್ರಪ್ರಥಮ ಕನ್ನಡ ಹಸ್ತಪ್ರತಿ ಭಂಡಾರ ಎಂದು ಎಚ್.ದೇವೀರಪ್ಪನವರು ಹೇಳಿದ್ದಾರೆ. ನಂತರ ಮೈಸೂರಿನಲ್ಲಿ ೧೮೯೧ರಲ್ಲಿ ಸ್ಥಾಪಿತವಾದ ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ, ಮೈಸೂರು ಕರ್ನಾಟಕದಲ್ಲಿ ಹಸ್ತಪ್ರತಿಗಳನ್ನು ಸಂಗ್ರಹಿಸುವ ಸರಕಾರದ ಮೊದಲ ಸಂಸ್ಥೆಯಾಯಿತು. ಇದನ್ನು ಬಿಟ್ಟರೆ ಹಸ್ತಪ್ರತಿಗಳನ್ನು ಸಂಗ್ರಹಿಸುವ ಮತ್ತೊಂದು ಸಂಸ್ಥೆಯೆಂದರೆ ೧೯೩೯ರಲ್ಲಿ ಸ್ಥಾಪಿತವಾದ 'ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ.' ಆರ್.ಎಸ್.ಪಂಚಮುಖಿಯವರು ಪ್ರಥಮ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡು ಅಂದಿನಿಂದಲೇ ಹಸ್ತಪ್ರತಿಗಳನ್ನು ಸಂಗ್ರಹಿಸುವ ಅನ್ಯ ಭಂಡಾರಗಳಲ್ಲಿರುವ ಪ್ರಸಿದ್ಧ ಹಸ್ತಪ್ರತಿಗಳನ್ನು ನಕಲು ಮಾಡಿಸಿ ಸಂರಕ್ಷಿಸುವ ಕಾರ್ಯ ಆರಂಭಿಸಲಾಯಿತು.

ನಂತರ ಹಸ್ತಪ್ರತಿಗಳನ್ನು ಸಂಗ್ರಹಿಸಲು ಕರ್ನಾಟಕದಲ್ಲಿ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯವನ್ನು ೧೯೫೪ರಲ್ಲಿ ಸ್ಥಾಪಿಸಲಾಯಿತು. ಕನ್ನಡ ಅಧ್ಯಯನ ಸಂಸ್ಥೆ, ಅರಮನೆಗೆ ಸೇರಿದ 'ಸರಸ್ವತೀ ಭಂಡಾರ' ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಧಾರವಾಡದ ಕನ್ನಡ ಅಧ್ಯಯನ ಪೀಠ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಗಳು ಪ್ರಮುಖವಾದವು. ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನವು ೧೯೮೮ರಲ್ಲಿ ಜನ್ಮ ಪಡೆಯಿತು. ಇದರ ಜೊತೆಯಲ್ಲಿ ಕೆಳದಿ ವಸ್ತುಸಂಗ್ರಾಹಾಲಯವು ೧೯೬೦ರಲ್ಲಿ ಕೆಳದಿ ಗುಂಡಾ ಜೋಯಿಸರಿಂದ ಅಸ್ತಿತ್ವಕ್ಕೆ ಬಂದಿತು. ಹಾಗೆಯೇ ೧೯೦೮ರಲ್ಲಿ 'ಹಾನಗಲ್ಲ ಕುಮಾರ ಸ್ವಾಮಿಗಳು ಶಿವಯೋಗ ಮಂದಿರ ಸಂಸ್ಥೆಯನ್ನು ಸ್ಥಾಪಿಸಿದರು. ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಪಾಠಶಾಲೆ, ಸಿದ್ಧಗಂಗಾಮಠ, ೧೯೭೭ರಲ್ಲಿ ಅಕಾಡೆಮಿ ಆಫ್ ಸಂಸ್ಕೃತ ರಿಸರ್ಚ್, ಮೇಲುಕೋಟೆಯಲ್ಲಿ ಪ್ರಾರಂಭಿಸಲಾಯಿತು. ಮೂರು ಸಾವಿರ ಮಠದ ಹಸ್ತಪ್ರತಿ ಭಂಡಾರ ಹುಬ್ಬಳ್ಳಿ, ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ, ಬೆಳಗಾವಿ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ,

ಉಡುಪಿ, ಅಲ್ಲದೆ ಮಂಡ್ಯ ಶ್ರವಣಬೆಳಗೊಳ, ಹೊಂಭುಜ ವರಾಂಗ, ಮೂಡುಬಿದಿರೆ ಕಾರ್ಕಳಗಳಲ್ಲಿನ ಜೈನ ಮಠಗಳು ಹಾಗೂ ಮೂಡಬಿದರೆ ವೀರವಾಣಿ ಸಿದ್ಧಾಂತ ಭವನ, ಶೃಂಗೇರಿ, ಉಡುಪಿ ಮೇಲುಕೋಟೆ, ಸಿರಿಗೆರೆ, ಚಿತ್ರದುರ್ಗ, ಬಳ್ಳಾರಿ ಹೊಸಪೇಟೆಯ ಶ್ರೀ ಕೊಟ್ಟೂರುಸ್ವಾಮಿ ಮಠ ಹಾಗೂ ಇತ್ಯಾದಿ ನಾಡಿನ ಹಲವು ಕಡೆಗಳಲ್ಲಿ ಹಸ್ತಪ್ರತಿ ಭಂಡಾರಗಳ ಪರಂಪರೆ ಹರಡಿಕೊಂಡಿದೆ. ಹಂಪಿಯ ಬಳಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕನ್ನಡ ಕನ್ನಡಿಗರ ಕರ್ನಾಟಕ ಸಂಸ್ಕೃತಿಯ ಶೋಧ ಮತ್ತು ಪ್ರಸಾರಕ್ಕಾಗಿ ಅಸ್ತಿತ್ವಕ್ಕೆ ಬಂದುದು ಗಮನಾರ್ಹ. ಇದು ಪ್ರಾಚೀನ ಆಕರ ಸಾಮಗ್ರಿಗಳನ್ನು ಸಂಗ್ರಹಿಸುವ ಕಾರ್ಯವನ್ನು ನಿರಂತರವಾಗಿ ಮಾಡುತ್ತ ಬರುತ್ತಿದೆ. ಅಂತವುಗಳಲ್ಲಿ ಹಸ್ತಪ್ರತಿಗಳು ಮುಖ್ಯವಾದವು. ೧೯೯೬ರಲ್ಲಿ ಅಸ್ತಿತ್ವಕ್ಕೆ ಬಂದ ಹಸ್ತಪ್ರತಿ ವಿಭಾಗವು ಇಡೀ ಕರ್ನಾಟಕದಲ್ಲಿಯೇ ಹಸ್ತಪ್ರತಿಗಾಗಿ ಪ್ರತ್ಯೇಕ ವಿಭಾಗ ಸ್ಥಾಪನೆಯಾಗಿರುವುದು ಶ್ಲಾಘನೀಯ. ಇದರ ಕಾರ್ಯ ಚಟುವಟಿಕೆಯು ತುಂಬಾ ಪ್ರಮುಖವಾದುದಾಗಿದೆ.

ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಾಡಿನ ಹಸ್ತಪ್ರತಿತಜ್ಞರು ಮತ್ತು ಚಂದ್ರಶೇಖರಕಂಬಾರರು ಹಾಗೂ ಎಂ.ಎಂ. ಕಲಬುರ್ಗಿಯವರ ವಿಶೇಷ ಆಸಕ್ತಿಯಿಂದ ೧೯೯೬ರಲ್ಲಿ ಈ ಹಸ್ತಪ್ರತಿಶಾಸ್ತ್ರ ವಿಭಾಗವನ್ನು ತೆರೆಯಲಾಯಿತು. ಅಂದಿನಿಂದ ಇಂದಿನವರೆಗೂ ಈ ವಿಭಾಗವು ಹಿರಿಯ ಕಿರಿಯ ಭೇದವನ್ನರಿಯದೆ ಅವರ ಸಲಹೆ ಸೂಚನೆಗಳನ್ನು ಪಡೆಯುತ್ತ ವಿವಿಧ ಯೋಜನೆಗಳನ್ನು ತಯಾರಿಸಿಕೊಂಡು ಸುಮಾರು ೧೦,೦೦೦ಕ್ಕೂ ಅಧಿಕ ಹಸ್ತಪ್ರತಿಗಳನ್ನು ನಾಡಿನಾದ್ಯಂತ ಕ್ಷೇತ್ರಕಾರ್ಯ ಕೈಗೊಂಡು ಸಂಗ್ರಹಿಸಲಾಗಿದೆ. ಇಂತಹ ಪ್ರಾಚೀನ ಕೈಬರಹಗಳನ್ನು ಸಂಗ್ರಹಿಸುವ ಹಾಗೂ ಸೂಚೀಕರಿಸುವ, ಪ್ರಕಟಿಸುವ, ಸಂರಕ್ಷಿಸುವ ಇತ್ಯಾದಿ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ವಿಶ್ವವಿದ್ಯಾಲಯದ ಅಧ್ಯಾಪಕರಾದ ಎಫ್.ಟಿ. ಹಳ್ಳಿಕೇರಿ, ವೀರೇಶ ಬಡಿಗೇರ, ಕೆ. ರವೀಂದ್ರನಾಥ, ಎಸ್.ಆರ್. ಚನ್ನವೀರಪ್ಪ, ಎಸ್.ಎಸ್. ಅಂಗಡಿ ಹಾಗೂ ಹಾಗೂ ವಿವಿಧ ಸಂಶೋಧಕರು, ವಿಭಾಗದ ಕಾರ್ಯಚಟುವಟಿಕೆಗಳನ್ನು ಯಶಸ್ವಿಯಾಗಿ ಪೂರೈಸಿ ಅನೇಕ ಸಂಶೋಧಕರಿಗೆ ಮಾರ್ಗದರ್ಶಕರಾದರು. ಅಲ್ಲದೆ ನಾಡಿಗೆ ಕೀರ್ತಿ ಒದಗಿಸಿದ್ದಾರೆಂದರೆ ತಪ್ಪಾಗಲಿಕ್ಕಿಲ್ಲ.

ವಿಭಾಗವು ಹಸ್ತಪ್ರತಿಗಳನ್ನು ಸಂಗ್ರಹಿಸಿರುವ ೪೦೦ ಕಟ್ಟುಗಳಂತೆ ಒಟ್ಟು ೫ ಹಸ್ತಪ್ರತಿ ಸೂಚಿ ಸಂಪುಟಗಳನ್ನು ಪ್ರಕಟಿಸಿದೆ. ಹಸ್ತಪ್ರತಿ ಭಂಡಾರದಲ್ಲಿ ಕನ್ನಡದ ಜೊತೆಗೆ ತೆಲುಗು, ತಮಿಳು, ಸಂಸ್ಕೃತ, ಮರಾಠಿ, ಮಲೆಯಾಳಿ ಹಸ್ತಪ್ರತಿಗಳಿರುವುದನ್ನು ಕಾಣಬಹುದು.

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಹಸ್ತಪ್ರತಿಗಳ ಸಂರಕ್ಷಣೆಯ ಜೊತೆಗೆ ವಿಭಾಗದ ಅಧ್ಯಾಪಕರಿಂದ ವೈಯಕ್ತಿಕ ಹಾಗೂ ಸಾಂಸ್ಥಿಕ ಯೋಜನೆಯನ್ನು ಕೈಗೊಂಡಿದೆ. ಆ ಮೂಲಕ ಜಿಲ್ಲಾವಾರು ಹಸ್ತಪ್ರತಿಗಳ ಸರ್ವೇಕ್ಷಣೆ ಸಂಗ್ರಹ ಮತ್ತು ಸೂಚಿರಚನೆಯು ವಿಭಾಗದ ಸಾಂಸ್ಥಿಕ ಯೋಜನೆಯಾಗಿದೆ. ಹಾಗೆಯೇ ಪ್ರತಿಯೊಬ್ಬ ಅಧ್ಯಾಪಕರು ಮತ್ತು ಪ್ರಾಧ್ಯಾಪಕರು ವೈಯಕ್ತಿಕ ಯೋಜನೆಯ ಮೂಲಕ ೩೫ ಯೋಜನೆಗಳನ್ನು ಪೂರೈಸಿದ್ದಾರೆ. ಅವುಗಳೆಂದರೆ ಕನ್ನಡ ದಾಖಲು

ಸಾಹಿತ್ಯ, ಬಸವಯುಗದ ವಚನೇತರ ಸಾಹಿತ್ಯ, ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ, ಹಳೆಯ ಲಾವಣಿಗಳು ಇತ್ಯಾದಿ ಕೃತಿಗಳನ್ನು ಲೋಕಾರ್ಪಣೆ ಮಾಡಲಾಗಿದೆ. ಹಸ್ತಪ್ರತಿಗಳ ಭಾಷಿಕ ಅಧ್ಯಯನದ ಮೂಲಕ ಸ್ವರವಚನ ತರಂಗಗಳಂಥ ಕೃತಿಗಳು ವಿಭಾಗದಿಂದ ಪ್ರಕಟವಾಗಿವೆ.

ವಿಭಾಗವು ಶೈಕ್ಷಣಿಕ ಯೋಜನೆಗಳ ಜೊತೆಗೆ ಹಸ್ತಪ್ರತಿಗಳ ಬಗ್ಗೆ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಶಿಕ್ಷಕರಿಗೆ, ಸಾರ್ವಜನಿಕರಿಗೆ ಅಭಿರುಚಿ ಮೂಡಿಸಲು 'ಹಸ್ತಪ್ರತಿ ತರಬೇತಿ' ಹಾಗೂ 'ಜಾಗೃತಿ ಶಿಬಿರ' ಹಾಗೆಯೇ ವಿಶೇಷವಾಗಿ ಹಳಗನ್ನಡ ಸಾಹಿತ್ಯ ಅಧ್ಯಯನ ಆಸಕ್ತಿಗಾಗಿ ಕನ್ನಡ ಅಧ್ಯಾಪಕರಿಗಾಗಿ 'ಹಳಗನ್ನಡ ಬೋಧನ ತರಬೇತಿ ಶಿಬಿರ' ಆಯೋಜಿಸುವುದರ ಮೂಲಕ ಈ ಕ್ಷೇತ್ರದ ಪರಂಪರೆ ಇಂದಿಗೂ ಪುನರ್‌ಜನ್ಮ ಪಡೆದು ಮುಂದಿನ ಪೀಳಿಗೆಗಾಗಿ ನಾಡಿನ ಪ್ರಾಚೀನ ಸಂಸ್ಕೃತಿಗೆ ವಿಶಿಷ್ಟ ಕೊಡುಗೆಯನ್ನು ನೀಡುವ ಮೂಲಕ ಈ ಕ್ಷೇತ್ರ ಪ್ರಸ್ತುತ ಸಂದರ್ಭದಲ್ಲಿ ಕೂಡ ಜೀವಂತವಾಗಿದೆ ಎಂಬುದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಹಸ್ತಪ್ರತಿಶಾಸ್ತ್ರ ವಿಭಾಗವು ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ವಿದ್ವಾಂಸರನ್ನು ಹಾಗೂ ವಿಷಯ ವೈವಿಧ್ಯತೆಯನ್ನು ಪರಿಚಯಿಸುವ ಸಲುವಾಗಿ 'ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನ'ವನ್ನು ವಿಭಾಗವು ಆಯೋಜಿಸಿಕೊಂಡು ಬರುತ್ತಿದೆ. ಇಲ್ಲಿಯವರೆಗೆ ಒಟ್ಟು ೧೧ ಹಸ್ತಪ್ರತಿ ಸಮ್ಮೇಳನಗಳನ್ನು ನಾಡಿನ ವಿವಿಧ ಊರುಗಳಲ್ಲಿ ಆಯೋಜಿಸಲಾಗಿದೆ. ಹಾಗೆಯೇ ಗಣ್ಯರು ವಿದ್ವಾಂಸರು ಹಾಗೂ ಆಸಕ್ತರು ಅಧ್ಯಯನಕಾರರ ಸಮಕ್ಷಮದಲ್ಲಿ ಯಶಸ್ವಿಯಾಗಿ ಸಮ್ಮೇಳನಗಳನ್ನು ಆಚರಿಸಲಾಗಿರುವುದು. ಇನ್ನೊಂದು ವಿಶೇಷವಾಗಿದೆ. 'ಹಸ್ತಪ್ರತಿ ಅಧ್ಯಯನ' ಎಂಬ ಹೆಸರಲ್ಲಿ ನಿಯತಕಾಲಿಕೆಯನ್ನು ವಿಭಾಗವು ಸಂಪಾದಿಸಿದೆ. ಹಸ್ತಪ್ರತಿಗಳಂಥ ಐತಿಹಾಸಿಕ, ರಾಷ್ಟ್ರೀಯ ಸಂಪತ್ತುಗಳ ಸಂರಕ್ಷಣೆಗಾಗಿ ಪ್ರತಿವರ್ಷ 'ಐತಿಹಾಸಿಕ ಪರಂಪರೆ ಉಳಿಸಿ' ಎಂಬ ಸಪ್ತಾಹವನ್ನು ಆಚರಿಸುವ ಮೂಲಕ ಕರ್ನಾಟಕ ಹಸ್ತಪ್ರತಿಗಳ ಪರಂಪರೆ ಪುನರ್ ಸೃಷ್ಟಿಸಿದ ಕೀರ್ತಿ ತನ್ನದಾಗಿಸಿಕೊಂಡಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಅವಲೋಕಿಸಿದಾಗ ಹಸ್ತಪ್ರತಿ ಭಂಡಾರಗಳ ಚಾರಿತ್ರಿಕ ಬೆಳವಣಿಗೆಯು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಮೈಗೂಡಿಸಿಕೊಂಡು ಹಸ್ತಪ್ರತಿ ಭಂಡಾರಗಳು ಆಧುನಿಕ ತಂತ್ರಜ್ಞಾನದೊಂದಿಗೆ ನಾಡಿಗೆ ಪ್ರಾಚೀನ ಜ್ಞಾನಪರಂಪರೆಯನ್ನು ಮರುಶೋಧಿಸಿ ಕಾಣಿಕೆಯಾಗಿ ನೀಡುವ ಪ್ರಯತ್ನದಲ್ಲಿದೆ.

ಆಂಗ್ಲ ಅಧಿಕಾರಿಗಳಾದ ಮೆಕೆಂಝಿ, ಫ್ಲೀಟ್, ಬಿ.ಎಲ್.ರೈಸ್ ಹಾಗೂ ದೇಶೀಯ ವಿದ್ವಾಂಸರ ಅಪಾರ ಶ್ರಮದಿಂದ ಜ್ಞಾನಪರಂಪರೆಯ ಕೃಷಿಯನ್ನು ಕೈಗೊಂಡು ಉತ್ತಮ ಫಸಲನ್ನು ನಾಡಿಗೆ ಅರ್ಪಿಸಿರುವುದನ್ನು ಗಮನಿಸಬಹುದಾಗಿದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನ ಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿ ಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ಪರಿಸರ, ಮುಂತಾದ

ಅಧ್ಯಯನ ವಿಷಯಗಳನ್ನು ಒಟ್ಟಾರೆ ಕನ್ನಡ ಸಾಹಿತ್ಯವು ಹಸ್ತಪ್ರತಿಗಳನ್ನು ಪ್ರಮುಖ ಆಕರಗಳಾಗಿ ಇಟ್ಟುಕೊಂಡು ಪುನಾರಚಿಸುವ ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆದಕಾರಣ ಮೊದಲು ನಾಡಿನಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಹಸ್ತಪ್ರತಿ ಭಂಡಾರಗಳಿಗೆ ಕಾಯಕಲ್ಪ ನೀಡುವ ಅವಶ್ಯಕತೆ ಇದೆ. ಅವುಗಳನ್ನು ಗುರುತಿಸುವ ಕೆಲಸ ನನ್ನ ಅಧ್ಯಯನದಲ್ಲಿ ನಡೆಯುತ್ತಿರುವುದರ ಜೊತೆಗೆ ಭಂಡಾರಗಳ ಚಾರಿತ್ರಿಕ ಬೆಳವಣಿಗೆಯನ್ನು ಪರಿಚಯಿಸುವ ಹಸ್ತಪ್ರತಿ ಭಂಡಾರಗಳ ಅಭಿವೃದ್ಧಿಗೆ ಸರಕಾರದ ಜೊತೆಗೆ ಸಂಘ, ಸಂಸ್ಥೆಗಳು, ಬುದ್ಧಿಜೀವಿಗಳು ಇನ್ನಿತರರು ಕೈ ಜೋಡಿಸುವ ಅವಶ್ಯಕತೆ ಇದೆ. ಇಂತಹ ಮಹತ್ವ ಸಂಗತಿಗಳನ್ನು ಈ ಅಧ್ಯಯನದಲ್ಲಿ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

ಕನ್ನಡ ಸಾಹಿತ್ಯವು ಸುಮಾರು ಒಂದೂವರೆ ಸಾವಿರ ವರ್ಷಗಳ ಹಿಂದೆಯೇ ಹುಟ್ಟಿ, ಬೆಳೆದು, ಶಾಖೋಪಶಾಖೆಗಳಾಗಿ ಹರಡಿಕೊಂಡಿತೆಂದು ಹಲವು ಇತಿಹಾಸಕಾರರ ಅಭಿಪ್ರಾಯವಾಗಿದೆ. ೧೮೯೯ರಿಂದ ಹಿಂದೆ ಕನ್ನಡ ಪುಸ್ತಕಗಳು ಎಲ್ಲಿದ್ದವು? ಹೇಗಿದ್ದವು? ಅವುಗಳನ್ನು ಯಾರು? ಹೇಗೆ? ತಯಾರುಮಾಡುತ್ತಿದ್ದರು? ಯಾವ ರೀತಿ ಸಂಗ್ರಹಿಸುತ್ತಿದ್ದರು? ಹೇಗೆ ಸಂರಕ್ಷಿಸುತ್ತಿದ್ದರು? ಇಂತಹ ಕಾರ್ಯ ಚಟುವಟಿಕೆಗಳಲ್ಲಿ ಭಂಡಾರಗಳ ಪಾತ್ರವೆಷ್ಟು? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸ ನನ್ನ ಅಧ್ಯಯನದಲ್ಲಿ ಮಾಡಲಾಗಿದೆ.

ಕೊನೆಟಿಪ್ಪಣಿಗಳು

೧. ದೇವೀರಪ್ಪ ಎಚ್., ೧೯೭೭, ಕನ್ನಡ ಹಸ್ತಪ್ರತಿಗಳ ಇತಿಹಾಸ, ಪುಟ ೩೯.

೨. ಅದೇ, ಪುಟ ೪೦.

೩. ಸಣ್ಣಯ್ಯ ಬಿ.ಎಸ್., ೧೯೯೨, ಹಸ್ತಪ್ರತಿಶಾಸ್ತ್ರ ಪರಿಚಯ, ಪುಟ.೨

೪. ರವೀಂದ್ರನಾಥ ಕೆ., ಎಫ್.ಟಿ.ಹಳ್ಳಿಕೇರಿ(ಸಂ), ೨೦೦೨, ಹಸ್ತಪ್ರತಿವ್ಯಾಸಂಗ(೨), ಪುಟ ೧೩.

೫. ಕೊಟ್ರೇಶ್ ಉತ್ತಂಗಿ ಎನ್., ೧೯೯೮, ಸಾಮಾಜಿಕ ಸ್ವಾಸ್ಥ್ಯ ಗ್ರಂಥಾಲಯ ಮತ್ತು ಮಠ ಮಂದಿರಗಳು, ಪುಟ ೧೩.

೬. ಮಂಜುನಾಥ ನಿಂಗೋಜಿ, ೨೦೦೮, ಗ್ರಂಥಾಲಯ ವಿಜ್ಞಾನ, ಪುಟ ೨.

೭. ಉಮೇಶ ಹಡಗಲಿ, ಪಿಎಚ್.ಡಿ. ಮಹಾಪ್ರಬಂಧ, ಪುಟ ೧೭೨.

೮. ದೇವೀರಪ್ಪ ಎಚ್., ೧೯೭೭, ಕನ್ನಡ ಹಸ್ತಪ್ರತಿಗಳ ಇತಿಹಾಸ, ಪುಟ ೪೧.

೯. ಕಲಬುರ್ಗಿ ಎಂ.ಎಂ., ೧೯೩೩, ಕನ್ನಡ ಹಸ್ತಪ್ರತಿಗಳ ಇತಿಹಾಸ, ಪುಟ ೯೪.

೧೦. ಅದೇ, ಪುಟ ೯೪.

೧೧. ಗುಂಜಾಳ ಎಸ್.ಆರ್., ೨೦೦೨, ದಕ್ಷಿಣ ಭಾರತದಲ್ಲಿಯ ಹಸ್ತಪ್ರತಿ ಗ್ರಂಥಾಲಯಗಳು, ಪುಟ ೩ ಮತ್ತು ೪.

೧೨. ಅದೇ, ಪುಟ ೪.

೧೩. ದೇವೀರಪ್ಪ ಹೆಚ್., ೧೯೭೭, ಕನ್ನಡ ಹಸ್ತಪ್ರತಿಗಳ ಇತಿಹಾಸ, ಪುಟ ೧೦೦.

೧೪. ಅದೇ, ಪುಟ ೧೦೧.

೧೫. ಅಣ್ಣಿಗೇರಿ ಎಂ.ಎಂ., ೨೦೦೦, ಕರ್ನಾಟಕ ಇತಿಹಾಸ ಸಂಶೋಧಕರು, ಪುಟ

೧೬. ಅಣ್ಣಿಗೇರಿ ಎಂ.ಎಂ., ೧೯೮೩, ಜೆ.ಎಫ್.ಫ್ಲೀಟ್, ಪುಟ

* * *

ಅಧ್ಯಾಯ ಮೂರು

ಹಸ್ತಪ್ರತಿ ಭಂಡಾರಗಳ ವರ್ಗೀಕರಣ

೩.೧. ಸರಕಾರಿ ಹಸ್ತಪ್ರತಿ ಭಂಡಾರಗಳು

೩.೧.೧. ಸಾಂಸ್ಥಿಕ ಹಸ್ತಪ್ರತಿ ಭಂಡಾರಗಳು

೩.೧.೧.೧. ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಮೈಸೂರು

೩.೧.೧.೨. ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ

೩.೧.೨. ಸಂಸ್ಕೃತ ಕಾಲೇಜು ಭಂಡಾರ

೩.೧.೨.೧. ಮೈಸೂರು ಸಂಸ್ಕೃತ ಮಹಾಪಾಠಶಾಲೆ

೩.೧.೨.೨. ಸಂಸ್ಕೃತ ಪಾಠಶಾಲೆ, ಮೇಲುಕೋಟೆ

೩.೧.೩. ವಿಶ್ವವಿದ್ಯಾನಿಲಯ ಹಸ್ತಪ್ರತಿ ಭಂಡಾರ

೩.೧.೩.೧. ಮೈಸೂರು ವಿಶ್ವವಿದ್ಯಾನಿಲಯ ಹಸ್ತಪ್ರತಿ ಭಂಡಾರ

೩.೧.೩.೨. ಕರ್ನಾಟಕ ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರ

೩.೧.೩.೩. ಗುಲ್ಬರ್ಗಾ ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರ

೩.೧.೩.೪. ಬೆಂಗಳೂರು ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರ

೩.೧.೩.೫. ಮಂಗಳೂರು ವಿಶ್ವವಿದ್ಯಾನಿಲಯ ಹಸ್ತಪ್ರತಿ ಭಂಡಾರ

೩.೧.೩.೬. ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರ

೩.೨. ಅರೆಸರ್ಕಾರಿ ಹಸ್ತಪ್ರತಿ ಭಂಡಾರ

೩.೨.೧. ಕೆಳದಿ ವಸ್ತುಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರ

೩.೨.೨. ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು

೩.೨.೩. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೩.೨.೪. ಮೇಲುಕೋಟೆ ಸಂಸ್ಕೃತ ಸಂಶೋಧನಾ ಸಂಸತ್

೩.೨.೫. ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ

೩.೨.೬. ಶ್ರೀ ಸಿದ್ಧಲಿಂಗೇಶ್ವರ ವೇದಸಂಸ್ಕೃತ ಪಾಠಶಾಲೆ, ಸಿದ್ಧಗಂಗಾಮಠ, ತುಮಕೂರು

೩.೩. ಖಾಸಗಿ ಹಸ್ತಪ್ರತಿ ಭಂಡಾರಗಳು

೩.೩.೧. ಜೈನ ಸಂಸ್ಥೆಗಳ ಹಸ್ತಪ್ರತಿ ಭಂಡಾರಗಳು

೩.೩.೨. ವೀರಶೈವ ಸಂಸ್ಥೆಗಳ ಹಸ್ತಪ್ರತಿ ಭಂಡಾರಗಳು

೩.೩.೩. ವೈದಿಕ ಸಂಸ್ಥೆಗಳ ಹಸ್ತಪ್ರತಿ ಭಂಡಾರಗಳು

೩.೩.೪. ವೈಯಕ್ತಿಕ ಹಸ್ತಪ್ರತಿ ನೆಲೆಗಳು(ಸಂಗ್ರಹಕಾರರು)

ಅಧ್ಯಾಯ ಮೂರು

ಹಸ್ತಪ್ರತಿ ಭಂಡಾರಗಳ ವರ್ಗೀಕರಣ

'ಗ್ರಂಥಗಳು ಬಾಳನ್ನು ಬೆಳಗಿಸುವ ಅಮೃತ ಸಂಜೀವಿನಿ. ಜೀವಿಗಳಿಗೆ ಆಹಾರವಿದ್ದಂತೆ ಮನುಷ್ಯನಿಗೆ ಗ್ರಂಥಗಳು' ಎಂಬ ಡಿ.ವಿ.ಜಿ.ಯವರ ಮಾತು ಸಮರ್ಥನೀಯ.[೧] ಇಂತಹ ಗ್ರಂಥಗಳು ಹಾಗೂ ಮಹತ್ವದ ವಿಚಾರಗಳು ಪ್ರಾಚೀನ ಕಾಲದಲ್ಲಿ ನಿಸರ್ಗದಲ್ಲಿ ದೊರೆಯುವ ಹಾಗೂ ಹೆಚ್ಚು ಬಾಳಿಕೆ ಬರುವುದನ್ನು ಗಮನಿಸಿ ಅಂತಹ ವಸ್ತುಗಳಾದ 'ತಾಳೆಗರಿಗಳ' ಮೇಲೆ ಬರೆಯಲು ಪ್ರಾರಂಭಿಸಿದರು. ಬರೆಯುವುದರ ಜೊತೆಗೆ ಸಂರಕ್ಷಣೆಗೆ ಅಷ್ಟೇ ಮಹತ್ವವನ್ನು ನೀಡುತ್ತಾ ಬರುತ್ತಿದ್ದರು. ಮುಂದಿನ ಪೀಳಿಗೆಗಾಗಿ ಅಮೂಲ್ಯ ಕೊಡುಗೆ ನೀಡುವ ಉದ್ದೇಶ ನಮ್ಮ ಪ್ರಾಚೀನರಲ್ಲಿ ಕೇಂದ್ರೀಕರಿಸಿತ್ತು.

ಪ್ರಾಚೀನ ಜ್ಞಾನ ಸಾಮಗ್ರಿಗಳಾದ ಹಾಗೂ ಕೈಬರಹದ ಸಾಮಗ್ರಿಗಳಾದ ಹಸ್ತಪ್ರತಿಗಳ ಸಂಗ್ರಹಕಾರ್ಯವು ಭಾರತದಲ್ಲಿ ಕ್ರಿ.ಶ.ಮೂರನೆಯ ಶತಮಾನದಲ್ಲಿ ಆರಂಭವಾಗಿತ್ತೆಂಬುದು ಅನೇಕ ಕುರುಹುಗಳಿಂದ ತಿಳಿದುಬಂದಿದೆ. ಈ ಹೊತ್ತಿಗೆ ಬೌದ್ಧಧರ್ಮ ಚೀನಾ, ಜಪಾನ್ ಮುಂತಾದ ದೇಶಗಳಲ್ಲಿ ನೆಲೆಯೂರಿತ್ತು. ಬುದ್ಧನ ಜೀವನ ಸಾಧನೆಗಳನ್ನು ಕುರಿತು ಮತ್ತು ಅವನ ಧರ್ಮ ತತ್ವಗಳನ್ನು ಕುರಿತು ಮಾಹಿತಿ ಮತ್ತು ಗ್ರಂಥಗಳನ್ನು ಸಂಗ್ರಹಿಸಲು ಅನೇಕ ವಿದೇಶಿಯರು ಭಾರತಕ್ಕೆ ಆಗಮಿಸಿದರು. ಅಂತಹವರಲ್ಲಿ ಚೀನಾ ದೇಶದ ಫಾಹಿಯಾನ್ ಮುಖ್ಯವಾದವನು.

ಸುಮಾರು ಆರನೆಯ ಶತಮಾನದಿಂದ ಕನ್ನಡದಲ್ಲಿ ಬರೆದ ಶಾಸನಗಳು ದೊರೆಯುತ್ತವೆ. ಹೀಗೆ ೯ನೆಯ ಶತಮಾನದಲ್ಲಿ ಗ್ರಂಥರಚನೆ ಆರಂಭವಾದುದು ತಮಿಳಿನಲ್ಲಿ ಹೊರತು ಮತ್ತಾವ ದ್ರಾವಿಡ ಭಾಷೆಯಲ್ಲಿಯೂ ಇಲ್ಲವೆಂದು ಹೇಳಬಹುದು[೨] ಎಂಬ ಹೇಳಿಕೆ ಕೂಡ ಇದನ್ನೇ ಸಮರ್ಥಿಸುತ್ತದೆ. ಕವಿರಾಜಮಾರ್ಗದಲ್ಲಿ ಉಲ್ಲೇಖಗೊಂಡಿರುವ ಕವಿಗಳ ಕಾಲ ಹೊರಬಿದ್ದರೆ ಇನ್ನೂ ಅನೇಕ ಪ್ರಾಚೀನ ಕನ್ನಡ ಸಾಹಿತ್ಯದ ಮೇಲೆ ಬೆಳಕು ಚೆಲ್ಲುವುದರಲ್ಲಿ ಸಂದೇಹವಿಲ್ಲ.

ಕನ್ನಡ ನಾಡಿನ ಅನೇಕ ರಾಜಧಾನಿಗಳ ಅರಮನೆಗಳಲ್ಲಿ, ದೇವಾಲಯಗಳಲ್ಲಿ, ಮಠಮಾನ್ಯಗಳಲ್ಲಿ ಹಸ್ತಪ್ರತಿಗಳು ಇದ್ದ ಬಗ್ಗೆ ಅನೇಕ ಮಾಹಿತಿಗಳು ದೊರೆಯುತ್ತವೆ. ಈ ದೇವಾಲಯಗಳು, ಮಠಮಾನ್ಯಗಳೇ ಅಂದಿನ ಪ್ರಮುಖ ಶಿಕ್ಷಣ ಸಂಸ್ಥೆಗಳೂ ಆಗಿದ್ದವೆಂಬುದು ಗಮನಾರ್ಹ. ನಮ್ಮ ನಾಡಿನ ಅನೇಕ ರಾಜಾಸ್ಥಾನಗಳು ಕವಿಗಳಿಂದ ತುಂಬಿರುತ್ತಿದ್ದವು. ಅತ್ತಿಮಬ್ಬೆ ರನ್ನನ ಅಜಿತನಾಥ ಪುರಾಣದ ಸಾವಿರ ಪ್ರತಿ ಮಾಡಿಸಿ ಶಾಸ್ತ್ರದಾನ ಮಾಡಿರುವುದು ಸ್ಮರಣಾರ್ಹ. ಒಂದು ಗ್ರಂಥದ ಸಾವಿರ ಹಸ್ತಪ್ರತಿಗಳನ್ನು ತಯಾರಿಸಲು ಅನೇಕರು ಲಿಪಿಕಾರರು ಬೇಕಾಗುತ್ತಿತ್ತು. ಅರಮನೆಗಳಲ್ಲಿ, ಧಾರ್ಮಿಕ ಕೇಂದ್ರಗಳಲ್ಲಿ, ದೇವಾಲಯಗಳಲ್ಲಿ ಗ್ರಂಥಗಳನ್ನು ಪ್ರತಿ ಮಾಡುವ ಅನೇಕ ಲಿಪಿಕಾರರನ್ನು ನೇಮಿಸಿಕೊಳ್ಳಲಾಗುತ್ತಿತ್ತು ಎಂಬುವುದಕ್ಕೆ ವಿಪುಲವಾದ ಆಧಾರಗಳಿವೆ. ಈಗ ದೊರೆತಿರುವ ಸಾವಿರಾರು ಹಸ್ತಪ್ರತಿಗಳ ಕೊನೆಯಲ್ಲಿ ದೊರೆಯುವ ಲಿಪಿಕಾರರ ವಿವರಗಳನ್ನು ಗಮನಿಸಿದರೆ ಇವರ ಸಂಖ್ಯೆ ಎಷ್ಟಿತ್ತೆಂದು ತಿಳಿಯುತ್ತದೆ. ಪ್ರತಿ ಮಾಡಿದ ಗ್ರಂಥಗಳನ್ನು ಈಗಿನವರು ಮುದ್ರಿತ ಗ್ರಂಥಗಳನ್ನು ಸಂಗ್ರಹಿಸಿಡುವಂತೆ ರಾಜ ಮಹಾರಾಜರಿಂದ ಹಿಡಿದು ಆಸಕ್ತರ ಅನುಕೂಲಸ್ಥರವರೆಗೆ ಸಂಗ್ರಹಿಸಿಡುತ್ತಿದ್ದರು. ಇದರಿಂದಾಗಿ ಅರಮನೆ, ಗುರುಮನೆ, ಮಠಮಾನ್ಯ ಮತ್ತು ದೇವಾಲಯಗಳಲ್ಲಿ ಹಸ್ತಪ್ರತಿ ಭಂಡಾರಗಳು ನಿರ್ಮಾಣ ಹೊಂದುತ್ತ ಬೆಳೆಯತೊಡಗಿದವು.

ಚಕ್ರವರ್ತಿಗಳು, ರಾಜಮಹಾರಾಜರು, ಸಾಮಂತರು ತಮ್ಮ ಆಸ್ಥಾನಗಳಲ್ಲಿ ಕವಿಗಳನ್ನು ನೇಮಿಸಿಕೊಳ್ಳುತ್ತಿದ್ದ ಸಂಗತಿ ಇತಿಹಾಸ ಪ್ರಸಿದ್ಧವಾದುದು. ಯಾವ ಚಕ್ರವರ್ತಿ ರಾಜಮಹಾರಾಜ ಅನೇಕ ಹೆಸರಾಂತ ಕವಿಗಳನ್ನು ತನ್ನ ಆಸ್ಥಾನದಲ್ಲಿ ಹೊಂದಿರುವನೋ ಅವನ ಘನತೆ ನಾಡಿನ ತುಂಬ ಪಸರಿಸುತ್ತಿತ್ತೆಂಬುದು ಅವರ ನಂಬಿಕೆಯಾಗಿತ್ತು. ಕಾಳಿದಾಸನನ್ನು ಪ್ರೋತ್ಸಾಹಿಸಿದ ಭೋಜರಾಜನ ಕಥೆ ಇಂದಿಗೂ ಎಷ್ಟೊಂದು ಪ್ರಚಲಿತವಿದೆ. ಕನ್ನಡ ನಾಡಿನ ಅರಿಕೇಸರಿ, ತೈಲಪರು ಪಂಪರನ್ನರಿಗೆ ಆಶ್ರಯವಿತ್ತು ಅಮರರಾಗಿದ್ದಾರೆ. ಆಗ ಅರಮನೆಯ ಆಸ್ಥಾನಗಳು ಧರ್ಮ, ಸಾಹಿತ್ಯ, ಕಲೆಗಳ ಚರ್ಚಾಕೇಂದ್ರಗಳೂ ಆಗಿರುತ್ತಿದ್ದವು. ದೇಶ ವಿದೇಶಗಳ ಕವಿಗಳು, ಕಲಾವಿದರು, ಧಾರ್ಮಿಕ ಮುಖಂಡರನ್ನು ಆಹ್ವಾನಿಸಿ ಚರ್ಚೆ ನಡೆಸಲಾಗುತ್ತಿತ್ತು. ನಡೆಯುವ ಎಲ್ಲ ಅಧ್ಯಯನ ಚರ್ಚೆಗಳಿಗಾಗಿ ರಾಜಾಸ್ಥಾನಗಳಲ್ಲಿ ಈ ಸಂಬಂಧವಾದ ಸಾವಿರಾರು ಗ್ರಂಥಗಳನ್ನು ಸಂಗ್ರಹಿಸಲಾಗುತ್ತಿತ್ತು. ಯಾವ ಆಸ್ಥಾನದ ಗ್ರಂಥಾಲಯ ಅತ್ಯಂತ ಹೆಚ್ಚು ಗ್ರಂಥಗಳನ್ನು ಹೊಂದಿರುತ್ತಿತ್ತೋ ಅದು ಮನ್ನಣೆಗೆ ಪಾತ್ರವಾಗುತ್ತಿತ್ತು, ಜನಪ್ರಿಯವಾಗುತ್ತಿತ್ತು. ಆದುದರಿಂದ ರಾಜರು ತಮ್ಮ ತಮ್ಮ ಅರಮನೆಗಳಲ್ಲಿ ಪ್ರತ್ಯೇಕವಾಗಿ ಹಸ್ತಪ್ರತಿ ಭಂಡಾರಗಳನ್ನು ಹೊಂದಿರುತ್ತಿದ್ದರು.

ಹ.ಕ.ರಾಜೇಗೌಡ ಅವರ ಸಾಹಿತ್ಯ ಕೋಶ ಕೃತಿಯ "ಕರ್ನಾಟಕದಲ್ಲಿ ಹಸ್ತಪ್ರತಿ ಗ್ರಂಥಾಲಯಗಳು' ಎಂಬ ಲೇಖನದಲ್ಲಿ ಪ್ರಾಚೀನ ಹಸ್ತಪ್ರತಿ ಭಂಡಾರಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

೧. ಅರಮನೆಯ ಹಸ್ತಪ್ರತಿ ಭಂಡಾರಗಳು

೨. ಮಠಮಾನ್ಯ, ದೇವಾಲಯ ಹಸ್ತಪ್ರತಿ ಭಂಡಾರಗಳು

೩. ಖಾಸಗಿ ಹಸ್ತಪ್ರತಿ ಭಂಡಾರಗಳು[೩]

ನಾಡಿನ ಹಸ್ತಪ್ರತಿ ಭಂಡಾರಗಳನ್ನು ಗ್ರಂಥಗಳು ಕಾಲದಿಂದ ಕಾಲಕ್ಕೆ ಸಂಗ್ರಹಣೆಯಾಗುವ ಸಂಖ್ಯೆ ಹಾಗೂ ಸಂರಕ್ಷಣೆ ಹೊರೆಯ ಕಾಳಜಿಯಿಂದ ಅಧ್ಯಯನದ ದೃಷ್ಟಿಯಿಂದ ಹಾಗೂ ಅಲ್ಲಿನ ಕಾರ್ಯ ಚಟುವಟಿಕೆಗಳಿಂದ ಕೆಳಗಿನಂತೆ ವರ್ಗೀಕರಿಸಲಾಗಿದೆ.

೩.೧. ಸರಕಾರಿ ಹಸ್ತಪ್ರತಿ ಭಂಡಾರಗಳು

ಸರಕಾರಿ ಹಸ್ತಪ್ರತಿ ಭಂಡಾರದ ಇತಿಹಾಸ ಪ್ರಾರಂಭವಾಗುವುದು ಬ್ರಿಟಿಷ್ ಅಧಿಕಾರಿಗಳಾದ ಕರ್ನಲ್ ಮೆಕಂಜಿ, ಸಿ.ಪಿ.ಬ್ರೌನ್ ಮುಂತಾದವರ ಮೂಲಕ. ಇವರು ಪಾಶ್ಚಿಮಾತ್ಯ ದೇಶಗಳಿಂದ ವ್ಯಾಪಾರಕ್ಕಾಗಿ ಬಂದು ಇಲ್ಲಿನ ರಾಜರು ಮತ್ತು ಜನರ ಒಡಕನ್ನು ಉಪಯೋಗಿಸಿಕೊಂಡು ಭಾರತದಲ್ಲಿ ಅಧಿಕಾರ ಗದ್ದುಗೆ ಏರಿದರು. ಈಸ್ಟ್ ಇಂಡಿಯಾ ಕಂಪನಿ ಚಕ್ರವರ್ತಿಯ ಆಡಳಿತವಾಗಿ ಪರಿವರ್ತನೆಯಾದ ಮೇಲೆ ಬ್ರಿಟಿಷರು ಜನೋಪಯೋಗಿ ಕೆಲಸಗಳ ಬಗೆಗೆ ಅನಿವಾರ್ಯವಾಗಿ ಗಮನ ಹರಿಸಬೇಕಾಯಿತು. ಇಂತಹ ಅನೇಕ ಕೆಲಸಗಳಿಗಾಗಿ ಬಂದ ಬ್ರಿಟಿಷ್ ಅಧಿಕಾರಿಗಳು ಮೊದಲು ಹಸ್ತಪ್ರತಿಗಳ ಸಂಗ್ರಹಣೆಯ ಕೆಲಸ ಮಾಡತೊಡಗಿದರು. ಮುಂದೆ ಅಧಿಕಾರಿಗಳು ಸಹ ಹಸ್ತಪ್ರತಿ ಸಂಗ್ರಹಣೆಯತ್ತ ಗಮನ ಹರಿಸಿದರು. ಮುಂದೆ ಸರಕಾರ ಈ ಪ್ರಾಚ್ಯ ವಸ್ತುಗಳಿಗೆ ರಕ್ಷಣೆಯೊದಗಿಸುವ ಕೆಲಸಗಳಿಗೂ ತೊಡಗಿತು. ಅಳಿದುಳಿದ ಪ್ರಾಚ್ಯವಸ್ತು ಸಂಗ್ರಹ ಸಂಶೋಧನೆ ಮತ್ತು ಸಂರಕ್ಷಣೆಗೆ ಅನೇಕರು ತೊಡಗಿದರು. ಇದೇ ಸಂದರ್ಭದಲ್ಲಿ **'ಪಂಡಿತ ರಾಧಾಕೃಷ್ಣರು ಕ್ರಿ.ಶ.೧೮೬೮ ಮೇ'**ನಲ್ಲಿ ವಿಕ್ಟೋರಿಯಾ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದು ಈ ಬಗೆಗಿನ ಕಾಳಜಿಗೆ ವ್ಯವಸ್ಥಿತ ಇಲಾಖೆಯೊಂದರ ಸ್ಥಾಪನೆ ಮಾಡಲು ಸಲಹೆಯನ್ನು ನೀಡಿದರು. ಇದನ್ನು ಸ್ವೀಕರಿಸಿದ ಅಂದಿನ ಸರ್ಕಾರ ತಜ್ಞರ ಸಮಿತಿಯೊಂದನ್ನು ನೇಮಿಸಿತಲ್ಲದೆ ೧೮೭೦ರಲ್ಲಿ 'ಗೌರ್ನ್‌ಮೆಂಟ್ ಓರಿಯೆಂಟಲ್ ಮ್ಯಾನ್‌ಸ್ಕ್ರಿಪ್ಟ್ ಲೈಬ್ರರಿ' ಎಂಬ ಸಂಸ್ಥೆಯನ್ನು ಮದ್ರಾಸಿನಲ್ಲಿ ಅಧಿಕೃತವಾಗಿ ತೆರೆದು ಆವರೆಗಿನ ಎಲ್ಲಾ ಸಂಗ್ರಹವನ್ನು ಸಂಸ್ಥೆಯಲ್ಲಿ ವ್ಯವಸ್ಥಿತಗೊಳಿಸಿದರು. ಇದೇ ಭಾರತದಲ್ಲಿ ಪ್ರಾರಂಭವಾದ ಪ್ರಪ್ರಥಮ ಸರ್ಕಾರಿ ಹಸ್ತಪ್ರತಿ ಭಂಡಾರವಾದರೂ ವಾರಣಾಸಿಯ ಸಂಸ್ಕೃತ ಕಾಲೇಜಿನ ಸರಸ್ವತಿ ಭವನ ಲೈಬ್ರರಿ ಇದಕ್ಕೂ ಮೊದಲೇ ೧೮೯೧ರಲ್ಲಿ ಸ್ಥಾಪನೆಯಾಗಿ ಸಂಸ್ಕೃತ ಹಸ್ತಪ್ರತಿಗಳನ್ನು ಆಧುನೀಕರಣಗೊಳಿಸಿರುವುದು ಗಮನಾರ್ಹ.

ಕನ್ನಡ ನಾಡಿನ ಹಸ್ತಪ್ರತಿ ಗ್ರಂಥಾಲಯಗಳಿಗೆ ಸಂಬಂಧಿಸಿದಂತೆ ಮೈಸೂರು ರಾಜರ 'ಅರಮನೆಯ ಸರಸ್ವತಿ ಭಂಡಾರ'ವೆಂಬ ಹಸ್ತಪ್ರತಿ ಗ್ರಂಥಾಲಯವನ್ನು ನೆನೆಯಬೇಕು. ಇದು ರಣಧೀರ ಕಂಠೀರವ ನರಸರಾಜನ ಕಾಲದಲ್ಲಿ ಆರಂಭವಾಯಿತು. ರಣಧೀರನ ಆಸ್ಥಾನದಲ್ಲಿ ಅನೇಕ ಕವಿಗಳು, ಗಮಕಿಗಳು ಇದ್ದರೆಂದು ತಿಳಿದುಬರುತ್ತದೆ. ನಂಜನೆಂಬುವನು ಆಸ್ಥಾನ ಕವಿ. ಇವನು 'ಕಂಠೀರವ ನರಸರಾಜ ವಿಜಯ'ವೆಂಬ ಕಾವ್ಯವನ್ನು ರಚಿಸಿದ್ದಾನೆ. ಇದು ರಣಧೀರನ ಜೀವನ ಚರಿತ್ರೆಯೇ ಆಗಿದೆ. ಮುಂದೆ ಚಿಕ್ಕದೇವರಾಜನ ಕಾಲದಲ್ಲಿ ಈ ಹಸ್ತಪ್ರತಿ ಗ್ರಂಥಾಲಯ ಬೆಳೆಯಿತು. ಚಿಕ್ಕದೇವರಾಜ ಸ್ವತಃ ಕವಿಯಾಗಿದ್ದನಲ್ಲದೆ ಸಂಚಿ ಹೊನ್ನಮ್ಮ, ತಿರುಮಲಾರ್ಯ, ರಂಗರಾಯ, ಷಡಕ್ಷರಿ, ವಿಶಾಲಾಕ್ಷಿ ಪಂಡಿತ ಮುಂತಾದವರು ಈತನ ಆಸ್ಥಾನದಲ್ಲಿದ್ದರು. ಈತನ ಕಾಲದಲ್ಲಿ ಅರಮನೆಯ ಹಸ್ತಪ್ರತಿ

ಗ್ರಂಥಾಲಯದಲ್ಲಿ ಅಪಾರ ಸಂಖ್ಯೆಯ ಹಸ್ತಪ್ರತಿ ಗ್ರಂಥಗಳಿದ್ದವು. ಮುಂದೆ ಅಧಿಕಾರಕ್ಕೆ ಬಂದ ಹೈದರಾಲಿ ಮತ್ತು ಟಿಪ್ಪು ಇವುಗಳನ್ನೆಲ್ಲ ನಾಶ ಮಾಡಿದನೆಂದು ಅಧ್ಯಯನದಿಂದ ತಿಳಿದುಬರುತ್ತದೆ.

'೧೭೯೯ರಲ್ಲಿ ಟಿಪ್ಪುವಿನ ಪಥನಾನಂತರ ರಾಜಧಾನಿಯನ್ನು ಮೈಸೂರಿಗೆ ವರ್ಗಾಯಿಸಲಾಯಿತು. ಮೈಸೂರು ಬ್ರಿಟಿಷರ ಅಧೀನ ಪ್ರಾಂತವಾಯಿತು. ಆಡಳಿತ ಕ್ಲೇಷಗಳಿಲ್ಲದ್ದರಿಂದ ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ಜೀವಿತದ ಹೆಚ್ಚು ಕಾಲವನ್ನು ಸಾಹಿತ್ಯಕ್ಕಾಗಿ ವಿನಿಯೋಗಿಸಿದರು. ಇವರು ಸ್ವತಃ ಕವಿಯಾಗಿದ್ದುದಲ್ಲದೆ ಅವರ ಆಸ್ಥಾನದಲ್ಲಿ ನೂರಾರು ಕವಿಗಳಿದ್ದರು. ಇವರ ಕಾಲದಲ್ಲಿ ಅರಮನೆಯ ಹಸ್ತಪ್ರತಿ ಗ್ರಂಥಾಲಯ ಮೈತುಂಬಿಕೊಂಡು ಬೆಳೆಯಿತು. ಮುಂದೆ ಚಾಮರಾಜರು ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಇದಕ್ಕೆ ಮತ್ತಷ್ಟು ಗ್ರಂಥಗಳನ್ನು ಸೇರಿಸಲಾಯಿತು. ಆದರೆ ದುರದೃಷ್ಟವಶಾತ್ ಗ್ರಂಥಾಲಯಕ್ಕೆ ಬೆಂಕಿ ಬಿದ್ದಿತು. ನಾಲ್ವಡಿ ಕೃಷ್ಣರಾಜರ ತಂಗಿಯೊಬ್ಬಳ ಮದುವೆಯಲ್ಲಿ ಸಂಭವಿಸಿದ ಬೆಂಕಿ ಅನಾಹುತದಲ್ಲಿ ಮರದಿಂದ ನಿರ್ಮಿತವಾಗಿದ್ದ ಅರಮನೆಯು ಸುಟ್ಟು ಹೋದಾಗ ಅಲ್ಲಿದ್ದ ಹಸ್ತಪ್ರತಿ ಗ್ರಂಥಾಲಯವೂ ನಾಶವಾಯಿತೆಂದು ಹೇಳುತ್ತಾರೆ. ಮುಂದೆ ಈ ಗ್ರಂಥಾಲಯಕ್ಕೆ ಸ್ವಲ್ಪಮಟ್ಟಿನ ಗ್ರಂಥಗಳು ಸೇರಿದವಾದರೂ ಅದು ಅರಮನೆಯ ಪೂಜಾ ಸಾಮಗ್ರಿಯಾಗಿಯೇ ನಿಂತು ಬಿಟ್ಟಿತು. ಪ್ರಸ್ತುತ ಸಂದರ್ಭದಲ್ಲಿ ಹಾಗೆಯೇ ಇರುವುದನ್ನು ಕಾಣಬಹುದು'.[೪] ಒಟ್ಟಾರೆ ಮೈಸೂರಿನ ಓರಿಯಂಟಲ್ ಲೈಬ್ರರಿ ಕನ್ನಡ ನಾಡಿನ ಆಧುನಿಕ ಸರಕಾರಿ ಹಸ್ತಪ್ರತಿ ಸಂಗ್ರಹಾಲಯಗಳಲ್ಲಿ ಒಂದು ಮೈಲಿಗಲ್ಲೆವೆಂದು ಹೇಳಲಾಗುವುದು. ಇದರ ಪ್ರಸ್ತುತ ಸಂದರ್ಭದ ಕಾರ್ಯ ಚಟುವಟಿಕೆಯನ್ನು ಕುರಿತು ನನ್ನ ಅಧ್ಯಯನದಲ್ಲಿ ಹೇಳಲಾಗಿದೆ.

೩.೧.೧. ಸಾಂಸ್ಥಿಕ ಹಸ್ತಪ್ರತಿ ಭಂಡಾರಗಳು

೩.೧.೧.೧. ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್(ಓಆರ್‌ಐ)– ಮೈಸೂರು

ಮಹಾರಾಜ ಚಾಮರಾಜ ಒಡೆಯರ್ ಅವರು ಬಿ.ಎಲ್. ರೈಸ್ ಅವರ ನೇತೃತ್ವದಲ್ಲಿ ಸ್ಥಾಪಿಸಿದ ಪುರಾತತ್ವ ಇಲಾಖೆ ೧೮೮೮ರಲ್ಲೇ ಅಸ್ತಿತ್ವದಲ್ಲಿದ್ದರೂ ಹಸ್ತಪ್ರತಿಗಳಿಗಾಗಿಯೇ ೧೮೯೧ರಲ್ಲಿ ಗವರ್ನಮೆಂಟ್ 'ಓರಿಯಂಟಲ್ ಲೈಬ್ರರಿ' ಹೆಸರಿನಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದರು. 'ಆಗ ಇದರ ಮುಖ್ಯ ಉದ್ದೇಶ ಹಸ್ತಪ್ರತಿಗಳನ್ನು ಸಂಗ್ರಹಿ ಪರಿಶೋಧಿಸಿ ಪ್ರಕಟಿಸುವುದಾಗಿದ್ದರೂ ಈ ಸಂಸ್ಥೆಗೆ 'ಆರ್ಕಿಯಾಜಿಕಲ್ ವಿಭಾಗವು ಸೇರ್ಪಡೆಯಾಗಿತ್ತು. ಪಂಡಿತ ಎ. ಮಹದೇವಶಾಸ್ತ್ರಿ ಇದರ 'ಪ್ರಥಮ ಕ್ಯುರೇಟರ್' ಆಗಿದ್ದರು. ಕೌಟಿಲ್ಯನ ಅರ್ಥಶಾಸ್ತ್ರ'ದ ಅಮೂಲ್ಯ ಹಸ್ತಪ್ರತಿಯನ್ನು ಪ್ರಕಟಿಸಿದ ಅರ್ಥಶಾಸ್ತ್ರದ ಖ್ಯಾತಿಯ ಡಾ.ಆರ್. ಶಾಮಾಶಾಸ್ತ್ರಿಯವರು ತಮ್ಮ ಪ್ರಕಟಣೆಗಳನ್ನು ಆರಂಭಿಸಿದರು. ೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಆರಂಭವಾದಾಗ ಅದರ ಒಂದು ಭಾಗವಾಗಿ ಈ ಲೈಬ್ರರಿ ಸೇರ್ಪಡೆಯಾಗಿತ್ತು. ೧೯೪೩ರಲ್ಲಿ ಇದನ್ನು 'ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್'(ಪ್ರಾಚ್ಯ ವಿದ್ಯಾ ಸಂಶೋಧನಾಲಯ) ಎಂದು ಹೆಸರಿಸಿ ಇದನ್ನೊಂದು ಅಧಿಕೃತವಾಗಿ ಸಂಶೋಧನಾ ಸಂಸ್ಥೆಯಾಗಿ ಪರಿವರ್ತಿಸಲಾಯಿತು. ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಹಸ್ತಪ್ರತಿ ವಿಭಾಗವನ್ನೂ ತೆರೆಯಲಾಯಿತು. ನಂತರ ಈ ಸಂಸ್ಥೆ ವಿಶ್ವವಿದ್ಯಾಲಯದ ಸಂಸ್ಕೃತ

ವಿಭಾಗದ ಭಾಗವಾಗಿ ಸಂಸ್ಕೃತ ಹಸ್ತಪ್ರತಿಗಳ ಸಂಗ್ರಹಾಲಯವಾಗಿ ಕಾರ್ಯ ನಿರ್ವಹಿಸುತ್ತಿದೆ. **‘ಕೌಟಿಲ್ಯನ ಅರ್ಥಶಾಸ್ತ್ರವನ್ನು ದೇಶಕ್ಕೆ ಕೊಟ್ಟ ಕೀರ್ತಿ ಈ ಸಂಸ್ಥೆಯದು’**. ಪಾಳಿ, ಪ್ರಾಕೃತ, ಉರ್ದು, ಪರ್ಶಿಯನ್ ಮುಂತಾದ ಅನ್ಯ ಭಾಷೆಯ ೧೦೦೦ ಅಪೂರ್ವ ಹಸ್ತಪ್ರತಿಗಳೊಂದಿಗೆ ಸಂಸ್ಕೃತದ ೨೫ ಸಾವಿರಕ್ಕೂ ಅಧಿಕ ಹಸ್ತಪ್ರತಿಗಳನ್ನು ಹೊಂದಿರುವ ದೇಶದ ಅತಿ ದೊಡ್ಡ ಹಸ್ತಪ್ರತಿ ಭಂಡಾರವೆನಿಸಿದೆ. ಕರ್ನಾಟಕದಲ್ಲಿನ ‘ಏಕೈಕ ಮೈಕ್ರೋ ಫಿಲಂ ಯೂನಿಟ್’ ಹೊಂದಿರುವ ಭಂಡಾರವೂ ಇದಾಗಿದೆ. ಇದರಲ್ಲಿ ಶ್ರೀ ತತ್ವನಿಧಿಯಂತಹ ಅಪೂರ್ವ ಚಿತ್ರಮಯ ಹಸ್ತಪ್ರತಿಗಳೂ ಇವೆ. ಈ ಸಂಸ್ಥೆ ಪ್ರಕಟಿಸಿರುವ ಸೂಚಿಗಳೆಂದರೆ ೧೭ ವ್ಯಾಲ್ಯುಂ ೧೯ ವರ್ಣನಾತ್ಮಕ ಸೂಚಿಗಳನ್ನು ಪ್ರಕಟಿಸಿದೆ(೨೦೧೪) ಸಂಶೋಧಿಸಿ ಸಂಪಾದಿಸಿರುವ ಕೃತಿಗಳು ಕನ್ನಡ ಮತ್ತು ಸಂಸ್ಕೃತ ಸೇರಿ ೧೦೦ಕ್ಕೂ ಹೆಚ್ಚು ಬಿ.ಎಲ್.ರೈಸ್ ಅವರು ಅಧಿಕಾರಿಗಳಾಗಿದ್ದಾಗ ಪ್ರಾರಂಭಿಸಿದ ಮಾಲೆ ‘ಬಿಬ್ಲಿಯೋಥಿಕಾ ಕರ್ನಾಟಕದ ಮೂಲಕ ಪಂಪಭಾರತ (೧೮೮೮), ಭಾಷಾಭೂಷಣ(೧೮೪೪), ಶಬ್ದಾನುಶಾಸನ(೧೮೯೦), (೧೯೧೨ರಿಂದ ೧೯೪೩) ಮುಂತಾದ ಅನೇಕ ಪ್ರಮುಖ ಗ್ರಂಥಗಳನ್ನು ಪ್ರಕಟಿಸುವುದರ ಜೊತೆಗೆ ಕುಮಾರವ್ಯಾಸ ಭಾರತದ ಬಿಡಿ ಬಿಡಿ ಪರ್ವಗಳು(೧೯೧೨ರಿಂದ ೧೯೪೩) ಕವಿರಾಜಮಾರ್ಗ(ಪಾಠಕ್ ೧೮೯೧), ಗದಾಯುದ್ಧ(೧೯೨೪), ಆದಿಪುರಾಣ(೧೯೦೦) ಇನ್ನೂ ಅನೇಕ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಲಾಗಿದೆ.[೫] ಇದರ ಜೊತೆಗೆ ಈ ಕೇಂದ್ರದಲ್ಲಿ ಹೆಚ್ಚಾಗಿ ಸಂಸ್ಕೃತಕ್ಕೆ ಸಂಬಂಧಿಸಿದ ಹಸ್ತಪ್ರತಿಗಳು ಇರುವುದನ್ನು ಕಾಣಬಹುದು. ವಿಶೇಷವಾಗಿ ಈ ಸಂಸ್ಥೆಯು ‘ಆಪಸ್ತಂಬ ಗೃಹ್ಯಸೂತ್ರ’ ಮುಂತಾದ ಅನೇಕ ಪ್ರಮುಖ ಸಂಸ್ಕೃತ ಗ್ರಂಥಗಳನ್ನು ಪ್ರಕಟಿಸಲಾಗಿದೆ.

ಪ್ರಕಟಣೆಗಳು

ಸಂಶೋಧನಾ ಕಾರ್ಯಕ್ಕೆ ಮುಖ್ಯ ಅಂಗವಾದ ಒಂದು ಷಾಣ್ಮಾಸಿಕ ಪತ್ರಿಕೆ ಮೈಸೂರು ಓರಿಯಂಟಲಿಸ್ಟ್ ಎಂಬ ಶಿರೋನಾಮೆಯಲ್ಲಿ ೧೯೬೮ರಿಂದ ಹೊರಬರುತ್ತಿದೆ.

ಬಿ.ಎಲ್.ರೈಸ್ ಅವರಿದ್ದಾಗಲೇ ಬಿಬ್ಲಿಯೋಥಿಕಾ ಕರ್ನಾಟಕ ವೆಂಬ ಗ್ರಂಥಮಾಲೆಯನ್ನು ಪ್ರಾರಂಭಿಸಲಾಯಿತು. ಪಂಪಭಾರತ, ಕವಿರಾಜಮಾರ್ಗ ಮುಂತಾದ ಮಹತ್ವದ ಕೃತಿಗಳನ್ನು ಈ ಮಾಲೆಯಲ್ಲಿ ಪ್ರಕಟಿಸಲಾಗಿದೆ.

ಮೈಸೂರಿನ ಓರಿಯಂಟಲ್ ಲೈಬ್ರರಿಯ ಮುಖ್ಯಾಧಿಕಾರಿಗಳು ಮತ್ತು ಅವರ ಅವಧಿಯಲ್ಲಿ ಸಂಪಾದಿತ ಕೃತಿಗಳ ವಿವರ

ಅಧಿಕಾರಿಗಳ ಹೆಸರು	ಸಂಸ್ಕೃತ	ಕನ್ನಡ	
ಎ.ಮಹದೇವಶಾಸ್ತ್ರಿ	೫೦	೭	೧
ಎ.ಆರ್. ರಾಘವೇಂದ್ರಾಚಾರ್	೨	-	-
ಆರ್. ರಾಮಾಶಾಸ್ತ್ರಿ	೧೯	೬	-
ಡಿ. ಶ್ರೀನಿವಾಸಾಚಾರ್	೭	೫	-

ಎಂ.ಎಸ್.ಬಸವಲಿಂಗಯ್ಯ	೪	೩	೧
ಎಚ್.ಆರ್.ರಂಗಸ್ವಾಮಿ ಅಯ್ಯಂಗಾರ್	೧೧	೬	೩
ಎಚ್. ದೇವೀರಪ್ಪನವರು	೧೭	೧೨	೨
ಜಿ. ಮರುಳಸಿದ್ದಯ್ಯ	೮	–	೨

ದೇವಿಕ್ಕಿ ಹೆಚ್.ಪಿ. ೨೨೦ ಪುಸ್ತಕಗಳು ಪ್ರಕಟಣೆ, ಸಂಸ್ಕೃತಕ್ಕೆ ಸಂಬಂಧಿಸಿದಂತೆ ವೀರ ಮಹೇಶ್ವರ ಚಾರು ಸಂಗ್ರಹದ, ೧ ವ್ಯಾಲ್ಯುಂ ಪ್ರಕಟಣೆ ಮಾಡಲಾಗಿದೆ.

೧೯೬೮ ಮೇ ೧, ೨ ಮತ್ತು ೩ರಂದು ಕಾಲಪ್ರವಾಹದಲ್ಲಿ ಸಂಸ್ಕೃತ'ವೆಂಬ ವಿಷಯದಲ್ಲಿ ಸಂಸ್ಕೃತ ಮತ್ತು ಇಂಗ್ಲಿಷ್‌ನ ಅಮೋಘವಾದ ವಿದ್ವದ್ಗೋಷ್ಠಿಗಳು ನಡೆದವು. ಅಂದಿನ ಕುಲಪತಿಗಳಾಗಿದ್ದ ಶ್ರೀಮಾಲಿಯವರ ಅಧ್ಯಕ್ಷತೆಯಲ್ಲಿ ಖ್ಯಾತ ವಿದ್ವಾಂಸರಾದ ವಿ. ರಾಘವನ್ ಅವರಿಂದ ಉದ್ಘಾಟಿಸಲ್ಪಟ್ಟಿತ್ತು. ಇಲ್ಲಿ ಮಂಡಿಸಿದ ಪ್ರಬಂಧಗಳನ್ನು(ಸಂಸ್ಕೃತ್ ಲರ್‌ನಿಂಗ್ ಥ್ರೋ ದಿ ಏಜಸ್)ವೆಂಬ ಶಿರೋನಾಮೆಯಲ್ಲಿ ಪ್ರಕಟಿಸಲಾಗಿದೆ.

ಪ್ರಸ್ತುತ ಸಂದರ್ಭದಲ್ಲಿ: ದಿನಾಂಕ ೧೧.೯.೨೦೧೪ರಂದು ಓ.ಆರ್.ಐ ಗ್ರಂಥಾಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ದೊರೆತ ಮಾಹಿತಿಯ ಪ್ರಕಾರ ಗ್ರಂಥಾಲಯದಲ್ಲಿ ಒಟ್ಟು ೨೫,೦೦೦ಕ್ಕೂ ಅಧಿಕ ಹಸ್ತಪ್ರತಿಗಳಿವೆ. ಇದರಲ್ಲಿ ೧೭,೦೦೦ ತಾಳೆಪ್ರತಿಗಳು ಹಾಗೂ ೭೦೦೦ರಿಂದ ೮೦೦೦ ಕಾಗದಪ್ರತಿಗಳು, ಕಡತಗಳ ೨ ಕಾಗದ ಹಸ್ತಪ್ರತಿಗಳು, ೯ ವ್ಯಾಲ್ಯುಂನಷ್ಟು ಇರುವುವು. ಇವು ಒಳಾಂಗಣ ಕ್ರೀಡೆಗೆ ಸಂಬಂಧಿಸಿದ ಹಾಗೂ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಸಂಬಂಧಿಸಿದ ರೇಖಾಚಿತ್ರಗಳು, ಗಿರಿಜಾಕಲ್ಯಾಣ, ಹವ್ಯಾಸದ ಚಿತ್ರಗಳು, ತಂತ್ರಮಂತ್ರ ಇನ್ನಿತರ ಹಲವು ವಿಷಯಗಳಿಗೆ ಸಂಬಂಧಿಸಿದ ವಿಶೇಷವಾಗಿ ಸಂಸ್ಕೃತಕ್ಕೆ ಸಂಬಂಧಿಸಿದ ಹಸ್ತಪ್ರತಿಗಳು ಮಾತ್ರ ಇರುವುದನ್ನು ಕಾಣಬಹುದು. ೧೭ ವ್ಯಾಲ್ಯುಂನಲ್ಲಿ ಸುಮಾರು ೧೯ ವರ್ಣನಾತ್ಮಕಸೂಚಿ ತಯಾರಿಸಲಾಗಿದೆ.

೨೨೦ ಪುಸ್ತಕಗಳು ಪ್ರಕಟಣೆಗಳಾಗಿವೆ. ಅಲ್ಲದೆ ಒಟ್ಟಾರೆಯಾಗಿ ಸುಮಾರು ೩೯,೦೦೦ಕ್ಕಿಂತ ಹೆಚ್ಚಿನ ಪುಸ್ತಕಗಳಿವೆ. ಇವು ಸಂಸ್ಕೃತ ಭಾಷೆಗೆ ಸಂಬಂಧಿಸಿವೆ.

ಭಂಡಾರದಲ್ಲಿರುವ ವಿಶೇಷ ಹಸ್ತಪ್ರತಿಯೆಂದರೆ 'ವೀರಮಹೇಶ್ವರ ಚಾರು ಸಂಗ್ರಹ'. ಇದು ಒಂದು ಮೀಟರ್‌ಗಿಂತ ಸ್ವಲ್ಪ ಕಡಿಮೆ ಇರುವುದು. ಇದರ ಒಂದು ವ್ಯಾಲ್ಯುಂ ಪ್ರಕಟಣೆ ಆಗಿದೆ.

ಗ್ರಂಥಾಲಯದಲ್ಲಿ 'ಆಧುನಿಕ ತಂತ್ರಜ್ಞಾನ' ಅಳವಡಿಸಲಾಗಿದೆ. ವೇದಗಳು, ವೇದಾಂಗಗಳು, ಪ್ರಯೋಗಗಳು, ಧರ್ಮಶಾಸ್ತ್ರ, ಸ್ಮೃತಿಗಳು, ಕಥೆ, ಪುರಾಣಗಳು, ಇತಿಹಾಸ, ದರ್ಶನಶಾಸ್ತ್ರ, ನಿಘಂಟು, ನಿಬಂಧನೆಗಳು, ನೀತಿಗ್ರಂಥಗಳು ಹಾಗೂ ಇನ್ನಿತರೆ ವಿಷಯಕ್ಕೆ ಸಂಬಂಧಿಸಿದ ಹಸ್ತಪ್ರತಿಗಳನ್ನು ಭಂಡಾರದಲ್ಲಿ ಕಾಣಬಹುದು. ಈ ಗ್ರಂಥಾಲಯಕ್ಕೆ ಮದ್ರಾಸ್, ಮೇಲುಕೋಟೆ, ರಾಷ್ಟ್ರೀಯ ಸಂಸ್ಕೃತದ ಸಂಶೋಧನಾ ವಿದ್ಯಾರ್ಥಿಗಳು, ವಿದೇಶಿ ವಿದ್ವಾಂಸರು(ಜಪಾನ್, ಕೆನಡಾ) ಇನ್ನಿತರ ನಾಡಿನ ವಿದ್ವಾಂಸರು, ಅಧ್ಯಯನಕಾರರು, ಸಂಶೋಧಕರು ಭೇಟಿ ನೀಡಿ ಇದರ ಸದುಪಯೋಗ ಪಡೆದುಕೊಂಡಿದ್ದಾರೆ. ಇಲ್ಲಿ ಸಂರಕ್ಷಣೆಗೆ ವಿಶೇಷವಾಗಿ ಜಾಗೃತಿ ವಹಿಸಲಾಗಿದೆ.

೩.೧.೧.೨. ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ

ದಕ್ಷಿಣ ಕರ್ನಾಟಕದಲ್ಲಿ ಆದ 'ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್' ಪ್ರಭಾವದಿಂದ ಇದೇ ಬಗೆಯ ಚಟುವಟಿಕೆಗಳಿಗಾಗಿ ಉತ್ತರ ಕರ್ನಾಟಕದಲ್ಲಿ ಈ ಸಂಸ್ಥೆ ಸ್ಥಾಪನೆಯಾಗಿದೆ. ಸಂಶೋಧನೆ ಹಾಗೂ ಅಧ್ಯಯನ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದೆ. ಆಗಿನ ಬ್ರಿಟಿಷ್ ಸರಕಾರದ ಆಡಳಿತ ವ್ಯವಸ್ಥೆಯಲ್ಲಿ ಉತ್ತರ ಕರ್ನಾಟಕವು 'ಮುಂಬೈ ಪ್ರೆಸಿಡೆನ್ಸಿ ವಿಭಾಗಕ್ಕೆ ಸೇರಿದ್ದುದರಿಂದ ಈ ಭಾಗದ ಹಲವು ಪ್ರಮುಖ ವಿದ್ವಾಂಸರ ಹಾಗೂ ಅಧ್ಯಯನಕಾರರ ಬೇಡಿಕೆಯಂತೆ ಮುಂಬೈ ಸರಕಾರ ೧೯೩೯ರಲ್ಲಿ ಧಾರವಾಡದಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿತು. ವಿಶೇಷವಾಗಿ ಆರ್.ಎಸ್. ಪಂಚಮುಖಿ ಅವರ ಪರಿಶ್ರಮ ಇದರ ಹಿಂದೆ ಇತ್ತು. ಸರಕಾರ ಇವರನ್ನೇ ಇದರ ಪ್ರಥಮ ನಿರ್ದೇಶಕರನ್ನಾಗಿ ನೇಮಿಸಿತು. ನಂತರ ೧೯೪೮ರಲ್ಲಿ ಬಿ.ಎ. ಸಾಲೆತೋರೆ ಅವರ ನಿರ್ದೇಶಕರಾದರು. ಆದಕಾರಣ ಈ ಭಾಗದಲ್ಲಿ ವಿದ್ವಾಂಸರ ಹಾಗೂ ಅಧ್ಯಯನಕಾರರ ಸಂಶೋಧನಾ ಆಸಕ್ತಿ ಹೆಚ್ಚಾಯಿತು.

ಹೀಗೆ ಆರ್.ಎಸ್. ಪಂಚಮುಖಿಯವರ ಕಾಳಜಿಯಿಂದ ಧಾರವಾಡದ ಈ ಸಂಸ್ಥೆಯನ್ನು ಓ.ಆರ್.ಐ. ಆಗಿ ಪರಿವರ್ತಿಸಿದರೆಂದರೆ ಅತಿಶಯೋಕ್ತಿಯಲ್ಲ. ಈ ವೇಳೆಗಾಗಲೇ ಫ.ಗು. ಹಳಕಟ್ಟಿಯವರಿಂದ ಹಸ್ತಪ್ರತಿ ಸಂಗ್ರಹ–ಸಂಪಾದನೆ–ಪ್ರಕಟಣೆಯ ಒಂದು ಯೋಜನೆಯ ರೂಪದಲ್ಲಿ ಈ ಭಾಗದಲ್ಲಿ ಆಗಿದ್ದುದರಿಂದ ಅದನ್ನು ಮುಂದುವರಿಸುವುದು ಕನ್ನಡ ಸಂಶೋಧನ ಸಂಸ್ಥೆಯ ಪ್ರಮುಖ ಚಟುವಟಿಕೆಯಾಗಿತ್ತು. ೩೦೦೦ಕ್ಕೂ(ಮೂರು ಸಾವಿರಕ್ಕೂ), ಅಧಿಕ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಲ್ಲದೆ, ೧೪ ಸೂಚಿಗಳನ್ನು, ಅದರಲ್ಲಿ ಕವಿಜಿಹ್ವಾಬಂಧನ(೧೯೫೦). ಸಮಯ ಪರೀಕ್ಷೆ(೧೯೫೪) ಗಳಂತಹ ಹಲವಾರು ಪ್ರಮುಖ ಗ್ರಂಥಗಳನ್ನು ಪ್ರಕಟಿಸಿದ ಕೀರ್ತಿ ಈ ಸಂಸ್ಥೆಗೆ ಸಲ್ಲುತ್ತದೆ.

ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಪ್ರಾರಂಭವಾದ ಬಳಿಕ ಅಲ್ಲಿಯ ಕನ್ನಡ ವಿಭಾಗದ ಕನ್ನಡ ಅಧ್ಯಯನ ಪೀಠದಲ್ಲಿ ವ್ಯವಸ್ಥಿತವಾದ ಹಸ್ತಪ್ರತಿ ಸಂಗ್ರಹದ ಚಟುವಟಿಕೆ ಆರಂಭವಾಯಿತು. ಆರಂಭದಲ್ಲಿ ಕನ್ನಡ ಸಂಶೋಧನ ಸಂಸ್ಥೆಯ ಕಾರ್ಯಚಟುವಟಿಕೆ ಮಂದಗತಿಯಲ್ಲಿ ಸಾಗಿತು. ಇದನ್ನು ಗಮನಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ನಿರ್ದೇಶಕರಾಗಿದ್ದ ಎಂ.ಎಂ. ಕಲಬುರ್ಗಿಯವರು ೧೯೭೨ರಲ್ಲಿ ಸಂಶೋಧನೆ ಸಂಸ್ಥೆಯ ಎಲ್ಲಾ ಹಸ್ತಪ್ರತಿಗಳನ್ನು ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗಕ್ಕೆ ಸೇರಿಸಲಾಯಿತು. ಆ ನಂತರ ಈ ಸಂಸ್ಥೆಯ ಕಾರ್ಯಚಟುವಟಿಕೆಯನ್ನು ನಿಲ್ಲಿಸಲಾಯಿತು.

೩.೧.೨. ಸಂಸ್ಕೃತ ಕಾಲೇಜು ಭಂಡಾರಗಳು

ಭಾರತದಲ್ಲಿ ಹಸ್ತಪ್ರತಿಗಳ ಪ್ರಾಚೀನ ಸಂಗ್ರಹಾಲಯಗಳಾಗಿ ಸಂಸ್ಕೃತ ಕಾಲೇಜುಗಳ ಸ್ಥಾನ ಪಡೆದರೂ ಅವುಗಳ ವ್ಯವಸ್ಥಿತ ವೈಜ್ಞಾನಿಕ ಸಂರಕ್ಷಣೆಯು ಮಂದಗತಿಯಲ್ಲಿ ಸಾಗುತ್ತಿರುವುದನ್ನು ಕಾಣಬಹುದು. ಅಧ್ಯಯನದ ಉದ್ದೇಶದಿಂದಷ್ಟೇ ಪ್ರಾರಂಭದಲ್ಲಿ ಓಲೆಗರಿ ಮತ್ತು ಕಾಗದ ಹಸ್ತಪ್ರತಿಗಳನ್ನು ಹೊಂದಿದ್ದರೂ ಅವುಗಳ ಮುದ್ರಿತ ಗ್ರಂಥಗಳ ಆಗಮನದಿಂದ ಈ ಪ್ರಾಚೀನ ಬರಹಗಳಾದ ಹಸ್ತಪ್ರತಿಗಳೆಲ್ಲ ಮೂಲೆ ಸೇರಿದವು. ತಮ್ಮಲ್ಲಿರುವ ಈ ಸಂಗ್ರಹಗಳನ್ನು ಉಳಿಸಿಕೊಂಡು ಬರುವುದಷ್ಟೆ

ಕೆಲಸವಾಗುತ್ತೇ ವಿನಾ ಅವುಗಳನ್ನು ಸಂರಕ್ಷಿಸವುದಾಗಲಿ, ಸೂಚೀಕರಿಸುವುದಾಗಲಿ, ಸಂಪಾದಿಸುವುದಾಗಲಿ ಈ ಯಾವ ಕಾರ್ಯವನ್ನು ಈ ಕಾಲೇಜು ಹಸ್ತಪ್ರತಿ ಭಂಡಾರಗಳು ಮಾಡಲಿಲ್ಲ.

ಕರ್ನಾಟಕದಲ್ಲಿ ಮೈಸೂರು ಸರಕಾರದಿಂದ ಆರಂಭವಾಗಿದ ಮೂರು ಸಂಸ್ಕೃತ ಕಾಲೇಜುಗಳಿವೆ. ಅವುಗಳಲ್ಲಿಲ ಎರಡು ಕಾಲೇಜುಗಳಲ್ಲಿ ಓಲೆಗರಿ ಹಸ್ತಪ್ರತಿಗಳ ಸಂಗ್ರಹವಿದೆ. ಆದರೆ ಬೆಂಗಳೂರಿನಲ್ಲಿರುವ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಹಸ್ತಪ್ರತಿಗಳ ಸಂಗ್ರಹವಿಲ್ಲ.

೩.೧.೨.೧. ಮೈಸೂರು ಸಂಸ್ಕೃತ ಮಹಾ ಪಾಠಶಾಲೆ

೧೮೭೬ರಲ್ಲಿ ಚಾಮರಾಜ ಒಡೆಯರ್ ಅವರ ಆಸಕ್ತಿಯಿಂದ ಆರಂಭವಾದ ಈ ಪಾಠಶಾಲೆಗೆ ಆಗ ಬ್ರಿಟಿಷ್ ಅಧಿಕಾರಿಯಾಗಿದ್ದ ಕರ್ನಲ್ ಬಿ.ಬಿ. ಮ್ಯಾಸನ್‌ನಿಂದ ಅರಮನೆಯ ಭಂಡಾರದಲ್ಲಿದ್ದ ಪ್ರಾಚೀನ ಹಸ್ತಪ್ರತಿಗಳು ವರ್ಗಾವಣೆಯಾಗಿ 'ಸರಸ್ವತಿ ಭಂಡಾರ' ಎಂಬ ಹೆಸರಲ್ಲಿ ಸ್ಥಾಪನೆಯಾಯಿತು. ಇದು ಅರಮನೆಯ ಆಶ್ರಯದಲ್ಲೇ ನಡೆಯುತ್ತಿದ್ದುದರಿಂದ ಇದನ್ನು **ಪ್ಯಾಲೆಸ್ ಸರಸ್ವತಿ ಭಂಡಾರ'** ಎಂತಲೂ ಕರೆಯಲಾಗುತ್ತಿತ್ತು. ಪಂಪಭಾರತದ ಪ್ರಾಚೀನ ಹಸ್ತಪ್ರತಿಯನ್ನು ಹೊಂದಿರುವ ಈ ಭಂಡಾರದಲ್ಲಿ ಪ್ರಭುಲಿಂಗಲೀಲೆ ಮುಂತಾದ ಪ್ರಮುಖ ಕನ್ನಡ ಕೃತಿಗಳೂ ಇವೆ. ಸುಮಾರು ೨೫೦೦ ಹಸ್ತಪ್ರತಿಗಳು ಈ ಭಂಡಾರದಲ್ಲಿದ್ದು ಅದರಲ್ಲಿ ಸುಮಾರು ೨೫೦ ಕನ್ನಡ ಹಸ್ತಪ್ರತಿಗಳಿವೆ. 'ಎ ಕ್ಲಾಸಿಫೈಡ್ ಕ್ಯಾಟ್‌ಲಾಗ್ ಆಫ್ ಸಂಸ್ಕೃತ' ಆ್ಯಂಡ್ ಕನ್ನಡ ಮ್ಯಾನುಸ್ಕ್ರಿಪ್ಟ್ ಇನ್ ದಿ ಸರಸ್ವತಿ ಭಂಡಾರಮ್' ಎಂಬ ೨೦೦ ಹಸ್ತಪ್ರತಿಗಳ ಸೂಚಿಯಿದೆ. ೧೯೦೫ರಲ್ಲಿ 'ದಿ ಲೀಸ್ಟ್ ಆಫ್ ಅನ್‌ಪ್ರಿಂಟೆಡ್ ಸಂಸ್ಕೃತ ಆ್ಯಂಡ್ ಕನ್ನಡ ಮ್ಯಾನುಸ್ಕ್ರಿಪ್ಟ್ ಇನ್ ದಿ ಪ್ಯಾಲೆಸ್ ಸರಸ್ವತಿ ಭಂಡಾರ'[೬] ವೆಂಬ ಹೆಸರಿನಲ್ಲಿ ೧೦೩ ಹಸ್ತಪ್ರತಿಗಳ ಸೂಚಿ ೧೯೪೩ರಲ್ಲಿ ಅಚ್ಚಾಗಿರುವುದನ್ನು ಬಿಟ್ಟರೆ ಈವರೆಗೆ ಯಾವುದೇ ರೀತಿಯ ಪ್ರಗತಿ ಆಗದಿರುವುದು ಕಂಡುಬಂದಿಲ್ಲ.

೩.೧.೨.೨. ಸಂಸ್ಕೃತ ಪಾಠಶಾಲೆ–ಮೇಲುಕೋಟೆ

೧೮೮೪ರಷ್ಟು ಹಿಂದೆಯೇ ಆರಂಭವಾದ ಈ ಸರಕಾರಿ ಸಂಸ್ಕೃತ ಕಾಲೇಜಿನಲ್ಲಿ ೧೦೦೦ಕ್ಕೂ ಅಧಿಕ ಹಸ್ತಪ್ರತಿಗಳಿದ್ದು ೧೦೦ಕ್ಕೂ ಅಧಿಕ ಕನ್ನಡ ಹಸ್ತಪ್ರತಿಗಳಿರುವುದು ಕಂಡುಬಂದಿದೆ. ಈವರೆಗೆ ಇದರ ಸೂಚಿಯಾಗಲಿ, ಯಾವುದೇ ಅಪ್ರಕಟಿತ ಗ್ರಂಥವಾಗಲಿ ಪ್ರಕಟವಾಗಿಲ್ಲ. ಇರುವ ಹಸ್ತಪ್ರತಿಗಳನ್ನು ಸರಿಯಾಗಿ ಸಂರಕ್ಷಿಸಿಲ್ಲ.

ಒಟ್ಟಾರೆಯಾಗಿ ಈ ಎರಡೂ ಸಂಸ್ಕೃತ ಕಾಲೇಜು ಹಸ್ತಪ್ರತಿ ಭಂಡಾರಗಳು ನಿರ್ಲಕ್ಷಿತ ಭಂಡಾರಗಳಾಗಿವೆ. ಇವುಗಳ ಆಡಳಿತ ವಿದ್ಯಾ ಇಲಾಖೆಗೆ ಒಳಪಡುವುದರಿಂದ ವಿದ್ಯಾ ಇಲಾಖೆಯಲ್ಲಿ ಹಸ್ತಪ್ರತಿ ಭಂಡಾರಗಳ ನಿರ್ವಹಣೆಯ ಕಲ್ಪನೆಯೇ ಇಲ್ಲ. ಈ ಕಾಲೇಜು ಭಂಡಾರಗಳನ್ನು ಎಲ್ಲಾ ಶಾಲೆಗಳ ಗ್ರಂಥಾಲಯಗಳಂತೆ ಮಾತ್ರ ಕಾಣಲಾಗುತ್ತಿದೆ. ಈ ಭಂಡಾರಗಳ ಪ್ರಾಂಶುಪಾಲರಿಗೂ ಹಸ್ತಪ್ರತಿಗಳ ಸಂರಕ್ಷಣೆಯತ್ತ ವಿಶೇಷ ಗಮನ ಕೊಡುವ ವ್ಯವಧಾನವಿರುವುದಿಲ್ಲ. ಅವರಿಗೆ ಬೇಕಾಗಿರುವ ಗ್ರಂಥಗಳೆಲ್ಲ ಮುದ್ರಿತ ಮಾಧ್ಯಮದಲ್ಲೇ ದೊರೆಯುವುದರಿಂದ ಹಸ್ತಪ್ರತಿಗಳು ಅವರಿಗೆ ಒಂದು ರೀತಿಯಲ್ಲಿ ಬೇಡದ ವಸ್ತುಗಳೇ ಆಗಿವೆ. ಸರಕಾರಕ್ಕೂ ಇದರ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ. ಈ ರೀತಿ

ಆಗುವುದಕ್ಕೆ ಪ್ರಮುಖ ಕಾರಣ ಸರ್ಕಾರದಲ್ಲೂ ಈ ಹಸ್ತಪ್ರತಿಗಳಿಗೆ ಪ್ರತ್ಯೇಕ ಏಕೀಕೃತ ಸ್ವತಂತ್ರ ಇಲಾಖೆ ಇಲ್ಲದಿರುವುದರಿಂದ ಈ ಬಗ್ಗೆ ವಿಚಾರ ಮಾಡುವವರು ಹಾಗೂ ಆಸಕ್ತರು ಇಲ್ಲವಾಗಿದೆ. ಸರ್ಕಾರಿ ಇಲಾಖೆಗಳಲ್ಲಿ ಬೇಡದ ವಸ್ತುವಾದರೂ ಲೆಕ್ಕಕ್ಕೆ ದಾಖಲೆಗೆ ಅವು ಇರಬೇಕೆ ವಿನಾ ಬೇಕಾದವರಿಗೆ ಕೊಡುವಂತಿಲ್ಲ. ಹೀಗಾಗಿ ಈ ಮೇಲಿನ ಎರಡು ಹಸ್ತಪ್ರತಿ ಭಂಡಾರಗಳು ಆಸಕ್ತಿಯನ್ನು ಸೆಳೆಯುವಲ್ಲಿ ಸೋತಿರುವುದು ಗಮನಾರ್ಹ.

೩.೧.೩. ವಿಶ್ವವಿದ್ಯಾಲಯಗಳ ಹಸ್ತಪ್ರತಿ ಭಂಡಾರ

೩.೧.೩.೧. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ

ಕರ್ನಾಟಕ ಹಸ್ತಪ್ರತಿ ಭಂಡಾರಗಳಲ್ಲಿ ಬಹುಪ್ರಸಿದ್ಧವಾಗಿರುವ ಭಂಡಾರವೆಂದರೆ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರ. ಇದಕ್ಕೆ ಶತಮಾನದ ಇತಿಹಾಸವಿದೆ. ತನ್ನ ಸುದೀರ್ಘ ಪಯಣದಲ್ಲಿ ಹಲವು ತಿರುವುಗಳನ್ನು ಪಡೆಯುತ್ತ ಮುನ್ನಡೆದಿದೆ. ಈ ಭಂಡಾರವು ಜನ್ಮ ತಳೆದಿದ್ದು ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ. ಹೀಗೆ ಪ್ರಾಚೀನ ಆಕರಗಳ ಕೆಲಸ-ಕಾರ್ಯ ಚಟುವಟಿಕೆಗಳು ಸಾಗುತ್ತಿರುವಾಗ ಕನ್ನಡಪರ ಚಟುವಟಿಕೆಗಳ ಕೇಂದ್ರವಾಗಿ ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗವು ಕನ್ನಡ ಅಧ್ಯಯನ ಸಂಸ್ಥೆಯಾಗಿ ರೂಪುಗೊಂಡಿತು. ಈ ಸಂದರ್ಭದಲ್ಲಿ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿದ್ದ ಕನ್ನಡ ಹಸ್ತಪ್ರತಿ ಭಂಡಾರವು ದೇಜಗೌ ಅವರ ಆಸಕ್ತಿ ಮತ್ತು ಪ್ರಯತ್ನದಿಂದಾಗಿ ಕನ್ನಡ ಅಧ್ಯಯನ ಸಂಸ್ಥೆಯೊಂದಿಗೆ ವಿಲೀನವಾಯಿತು. ಈ ಭಂಡಾರವು ತನ್ನ ನೆಲೆಯನ್ನು ಇಲ್ಲಿ ಕಂಡುಕೊಂಡು ಮುಂದುವರಿಯಿತು. ಹೀಗೆ ಕ್ರಮೇಣ ಕನ್ನಡ ಅಧ್ಯಯನ ಸಂಸ್ಥೆಯು ಹಸ್ತಪ್ರತಿ ಭಂಡಾರವೆಂದು ಹೆಸರು ಪಡೆಯಿತು.

ಈ ಭಂಡಾರದಲ್ಲಿ ಸುಮಾರು ೮೦೦೦ಕ್ಕೂ ಅಧಿಕ ಹಸ್ತಪ್ರತಿಗಳಿವೆ. ಈ ಪೈಕಿ ಓಲೆ ಪ್ರತಿಗಳು ೨೬೨೬.

ದೊಡ್ಡ ಆಕಾರದ ಕಾಗದದ ಪ್ರತಿಗಳು ೬೨೧

ಸಣ್ಣ ಆಕಾರದ ಕಾಗದ ಪ್ರತಿಗಳು ೮೨೦

ಮೈಕ್ರೋಫಿಲಂ ಪ್ರತಿಗಳು ೧೧೮೬

ಇತರೆ ಹಲವು ಕಡತಗಳು, ಉದ್ಧರಣೆ ಪಟಲಗಳು ಇವೆ.

ಇಷ್ಟು ದೊಡ್ಡ ಪ್ರಮಾಣದಲ್ಲಿ ಹಸ್ತಪ್ರತಿಗಳನ್ನು ಕಲೆ ಹಾಕುವಲ್ಲಿ ರೈಸ್ ಅವರು ಹಾಗೂ ಟೂರಿಂಗ್ ಪಂಡಿತ್ ಹುದ್ದೆಯಲ್ಲಿದ್ದ ಪಂಡಿತರು ಕ್ಷೇತ್ರಕಾರ್ಯ ಮಾಡಿ ಅರಮನೆ, ಗುರುಮನೆ, ದೇವಾಲಯ, ಬಸದಿ, ವಿದ್ವಾಂಸರು ಜೋಯಿಸರುಗಳ ಮನೆಗಳಲ್ಲಿದ್ದ ವಿವಿಧ ಬಗೆಯ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಲೀನಗೊಂಡ ಬಳಿಕ ಇಲ್ಲಿನ ಸಂಪಾದನ ವಿಭಾಗದ ವಿದ್ವಾಂಸರು ಮತ್ತಷ್ಟು ಹಸ್ತಪ್ರತಿಗಳನ್ನು ಕಲೆಹಾಕಿದರು. ಇವುಗಳಲ್ಲಿ ಬಿ.ಎಸ್. ಸಣ್ಣಯ್ಯನವರು

ಶ್ರೀಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶೋಧಿಸಿದ ಇಮ್ಮಡಿ ನಾಗವರ್ಮನ 'ವರ್ಧಮಾನ ಪುರಾಣದ' ಪ್ರತಿ ಸೇರಿದೆ. ಇವರು ಕನ್ನಡ ಹಸ್ತಪ್ರತಿಗಳನ್ನು ಮೈಕ್ರೋಫಿಲಂಗೆ ಅಳವಡಿಸಿ ತಂದಿದ್ದು ಕೂಡ ಗಮನಾರ್ಹವಾಗಿದೆ.

ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ಕನ್ನಡದ ಉಪಲಬ್ಧ ಆದಿಗ್ರಂಥ ಕವಿರಾಜಮಾರ್ಗದಿಂದ ಹಿಡಿದು ೧೯೪೪ರಲ್ಲಿದ್ದ ಹನುಮಾನ್ ವೆಂಕಟರಾಯರ ಕೃತಿಗಳವರೆಗೆ ರಚಿಸಿದ ಗ್ರಂಥಗಳಿವೆ. ಹಾಗೆಯೇ ಹನ್ನೆರಡನೆಯ ಶತಮಾನದಿಂದ ಇಪ್ಪತ್ತನೆಯ ಶತಮಾನದವರೆಗೆ ಸುಮಾರು ಎಂಟು ಶತಮಾನಗಳಲ್ಲಿ ರಚಿತಗೊಂಡ ಹಸ್ತಪ್ರತಿಗಳಿವೆ. ಇಲ್ಲಿನ ಪ್ರತಿಗಳಲ್ಲಿ ಅತ್ಯಂತ ಪ್ರಾಚೀನವಾದುದೆಂದರೆ ಶಾಲಿವಾಹನ ಶಕವರ್ಷ ೧೦೫೩ನೆಯ ಸೌಮ್ಯ ಸಂವತ್ಸರದ ಮೂರು ಬಹುಳ ಗುರುವಾರದಲ್ಲು ಅಂದರೆ ೬.೨.೧೧೩೦ರಲ್ಲಿ ಪ್ರತಿಯಾದ ಕೆ.೨೮೨ ಸಂಖ್ಯೆ ನಾಮಲಿಂಗಾನುಶಾಸನ 'ಟೀಕುಗ್ರಂಥ'. ಇದರ ಜೊತೆಗೆ ಕವಿಯ ಸ್ವಹಸ್ತಾಕ್ಷರ ಪ್ರತಿಯಾದ ಪಂಚಬಾಣದ 'ಭುಜಬಲಿಚರಿತೆ' ಮತ್ತು ಚಂದ್ರಸಾಗರವರ್ಣಿಯ(ಕೆ.೧೮೦೩) 'ಜಿನಭಕ್ತಿಸಾರ' ಕೃತಿಗಳು ಭಂಡಾರದಲ್ಲಿ ಸಂಗ್ರಹಗೊಂಡಿವೆ.

135131

ಭಂಡಾರದ ಹಸ್ತಪ್ರತಿಗಳನ್ನು ವೀಕ್ಷಿಸಿದಾಗ ಇಲ್ಲಿನ ಹಸ್ತಪ್ರತಿಗಳು ವಿವಿಧ ಧರ್ಮದ ಸಂಸ್ಕೃತಿಯ ಅಕ್ಷರಸ್ಥರು ಪ್ರತಿ ಮಾಡಿರಬಹುದೆಂದು ಊಹಿಸಬಹುದು. ಉದಾಹರಣೆಗೆ ಕನಕದಾಸರ ನಳಚರಿತೆಯ (ಕೆ.೧೬೨೦) ಹಸ್ತಪ್ರತಿಯ ಕಡೆಯಲ್ಲಿ ಬಂದಿರುವ ಚಿಪ್ಪಲಿಗ ತಿಮ್ಮಯ್ಯನ ಮಗ ರಂಗಯ್ಯನಿಗೆ ನಳಚರಿತ್ರೆ ಪೊಸ್ತುಕವನ್ನು ಮಂಗಲದ ಶೇಷೀಮಗ ನಾಗಯ್ಯ ಬರೆದುಕೊಟ್ಟ ನಳಚರಿತ್ರೆ ಪೊಸ್ತುಕಕ್ಕೆ ಜಯಮಂಗಳ ಮಹಾಶ್ರೀ ಮೇಲಿನ ಬರಹದಿಂದ ಲಿಪಿಕಾರ ಮತ್ತು ಪ್ರತಿ ಮಾಡಿಸಿದವ ಇಬ್ಬರೂ ತಳವರ್ಗಕ್ಕೆ ಸೇರಿದವರೆಂಬುದು ತಿಳಿಯುತ್ತದೆ. ಇಲ್ಲಿ ಧರ್ಮವೇ ಪ್ರಧಾನ. ಹಾಗಾಗಿ ಜೈನ, ವೀರಶೈವ ಮತ್ತು ವೈದಿಕ ಧರ್ಮಗಳಿಗೆ ಸೇರಿದ ಹಲವು ಪ್ರತಿಗಳಿವೆ. ಹೆಚ್ಚಿನವು ಚೈತ್ಯಾಲಯದಲ್ಲಿ ಮಠಗಳಲ್ಲಿ ದೇವಾಲಯಗಳಲ್ಲಿ ಸಿದ್ಧವಾಗಿರುವಂಥವು. ಧರ್ಮಾಮೃತದ ಕೆ.೧೭೭೬ ಸಂಖ್ಯೆಯ ಹಸ್ತಪ್ರತಿಯನ್ನು ಶ್ರೀ ವೀರವರ್ಧಮಾನ ಸ್ವಾಮಿಯವರ ಚೈತ್ಯಾಲಯದಲ್ಲಿ ಪದುಮಣ್ಣ ಎಂಬಾತ ಪ್ರತಿ ಮಾಡಿದ್ದನ್ನು ನೋಡಬಹುದು.

ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದರೆ ಹಸ್ತಪ್ರತಿ ಭಂಡಾರದಲ್ಲಿರುವ ಗ್ರಂಥಗಳು ಈಗಾಗಲೇ ಗಮನಿಸಿದಂತೆ ಬಹುಬಗೆಯ ವಸ್ತುವಿನಿಂದ ಗಮನ ಸೆಳೆಯುವಂತಿವೆ. ಕನ್ನಡ ಸಾಹಿತ್ಯದಲ್ಲಿ ಕಾಲದಿಂದ ಕಾಲಕ್ಕೆ ನಡೆದಂಥ ಸಾಹಿತ್ಯ ಚಳುವಳಿಗೆ ಇಲ್ಲಿನ ಹಲವು ಹಸ್ತಪ್ರತಿಗಳು ಸಾಕ್ಷಿಯಾಗಿವೆ ಎನಿಸುತ್ತಿದೆ.

ಮೊದಲಿಗೆ ಜೈನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಆದಿನಾಥ, ಅಜಿತನಾಥ, ಮಲ್ಲಿನಾಥ, ನೇಮಿನಾಥ, ಚಂದ್ರಪ್ರಭ, ಶಾಂತಿನಾಥ, ಧರ್ಮನಾಥ, ಅನಂತನಾಥ, ಪಾರ್ಶ್ವನಾಥ, ವರ್ಧಮಾನ ಮೊದಲಾದ ತೀರ್ಥಂಕರ ಚರಿತ್ರೆಗಳು, ವಡ್ಡಾರಾಧನೆ, ಪುಣ್ಯಾಸ್ರವ, ರಾಜಾವಳಿಕಥೆ ಮೊದಲಾದ ಕಥಾಸಂಕಲನಗಳು, ಅನುಪ್ರೇಕ್ಷೆ, ಅಹಿಂಸಾಚರಿತೆ, ಶ್ರಾವಕಾಚಾರ ಮುಂತಾದ ತಾತ್ವಿಕ ಗ್ರಂಥಗಳು, ಪಂಪಭಾರತ, ಗದಾಯುದ್ಧ, ಪಂಪರಾಮಾಯಣ, ಜೀವಂಧರಚರಿತೆ, ನಾಗಕುಮಾರಚರಿತೆ ಇತ್ಯಾದಿ ಕಾವ್ಯಗಳು, ಜೈನಧರ್ಮದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಲವು ಹಸ್ತಪ್ರತಿಗಳು ಭಂಡಾರದಲ್ಲಿ ಸಂಗ್ರಹಗೊಂಡಿವೆ.

ಜೈನ ಧರ್ಮದಂತೆ ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದ ಹಸ್ತಪ್ರತಿಗಳಿಗೂ ಇಲ್ಲಿ ಕೊರತೆಯಿಲ್ಲ. ಕೊಂಡಗುಳಿ ಕೇಶಿರಾಜನ ಕೃತಿಗಳಿಂದ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ, ಮೊದಲಾದ ಶರಣರ ಮೂರು ಸಾವಿರ ವಚನಗಳಿರುವ ಕಟ್ಟು ಹಾಗೂ ಬಿಡಿ ಪ್ರತಿಗಳು, ಷಟ್ಥ್ಸಲ ವಚನಗಳು, ಶೂನ್ಯ ಸಂಪಾದನೆಗಳು, ಸ್ವರವಚನಗಳು, ಬಸವಪುರಾಣ, ಪದ್ಮರಾಜ ಪುರಾಣ, ಚನ್ನಬಸವ ಪುರಾಣ, ಸಿದ್ಧೇಶ್ವರ ಪುರಾಣ ಮೊದಲಾದ ಪುರಾಣ ಕಾವ್ಯಗಳು ಹಾಗೂ ಹರಿಹರನ ರಗಳೆಗಳು, ಶಿವತತ್ತ್ವ ರತ್ನಾಕರ, ಸಿದ್ಧರಾಮ ಚರಿತ್ರೆ, ಗುರುರಾಜ ಚಾರಿತ್ರ್ಯ, ಮರುಳು ಸಿದ್ಧಸಾಂಗತ್ಯ, ನನ್ನಯ್ಯಗಳ ಚಾರಿತ್ರದಂಥ ಕಾವ್ಯಗಳು, ಅಷ್ಟಾವರಣ, ಷಟ್ಥ್ಸಲತಿಲಕಾದಿ ಸೈದ್ಧಾಂತಿಕ ಗ್ರಂಥಗಳ ಹಸ್ತಪ್ರತಿಗಳು ವೀರಶೈವ ಸಾಹಿತ್ಯದ ವಿವಿಧ ಮುಖಗಳನ್ನು ಪ್ರತಿನಿಧಿಸುತ್ತವೆ.

ಹಾಗೆಯೇ ವೈದಿಕ ಸಾಹಿತ್ಯಕ್ಕೆ ಸಂಬಂಧಿಸಿದ ಹಲವು ಹಸ್ತಪ್ರತಿಗಳು ಭಂಡಾರದಲ್ಲಿವೆ. ತೊರವೆ ರಾಮಾಯಣ, ಅಧ್ಯಾತ್ಮ ರಾಮಾಯಣ, ಕೌಶಿಕ ರಾಮಾಯಣ, ಆನಂದ ರಾಮಾಯಣ ಮೊದಲಾದ ರಾಮಾಯಣಗಳು ಹಾಗೂ ಜಗನ್ನಾಥ ವಿಜಯ, ಕುಮಾರವ್ಯಾಸ ಭಾರತ, ವಿಷ್ಣುಪುರಾಣ, ಭೈರವ ಪುರಾಣ, ಒಡೆಯರ ಕಾಲದ ಸಾಹಿತ್ಯಿಕ ಕೃತಿಗಳ ಹಸ್ತಪ್ರತಿಗಳು ಗಮನಾರ್ಹವಾಗಿವೆ. ಕಂಠೀರವ ನರಸರಾಜವಿಜಯ ಕೆಳದಿ ನೃಪವಿಜಯ, ಕೈಫಿಯತ್ತುಗಳು, ಯಕ್ಷಗಾನ ಕೃತಿಗಳು, ಸ್ತೋತ್ರ ಸಾಹಿತ್ಯ, ಮಹಾತ್ಮೆಗಳು ಟೀಕುಗಳು, ಅಷ್ಟಕಗಳು, ಶತಕಗಳು, ಗಂಜೀಫ(ವಿವಿಧಾಕಾರದ ಚಿತ್ರ ಹಾಗೂ ಸಂಖ್ಯೆಗಳಿಂದ ಕೂಡಿದ ಕಾಗದದ ಎಲೆಗಳಿರುವ ಕಟ್ಟು), ಜ್ಯೋತಿಷ್ಯಶಾಸ್ತ್ರ, ಅಲಂಕಾರಶಾಸ್ತ್ರ, ಕಾಮಶಾಸ್ತ್ರ, ಛಂದಶ್ಯಾಸ್ತ್ರ, ನಾಟ್ಯಶಾಸ್ತ್ರ, ಆಯುರ್ವೇದ, ಪ್ರಶ್ನೆಶಾಸ್ತ್ರ, ಜನವಶ್ಯದಂಥ ಕಾಮಶಾಸ್ತ್ರ, ಸೂಪಶಾಸ್ತ್ರ, ನಿಘಂಟುಗಳು ಹಸ್ತಪ್ರತಿಗಳು ಇತ್ಯಾದಿ ಬಗೆಯ ಹಸ್ತಪ್ರತಿಗಳು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿವೆ ಎಂಬುದು ಕ್ಷೇತ್ರಾಧ್ಯಯನದಿಂದ ತಿಳಿದುಬಂದಿದೆ.

ವಿಶೇಷ ಹಸ್ತಪ್ರತಿಗಳು

* ರನ್ನನ ಗದಾಯುದ್ಧ ಕಾವ್ಯದ ಕೆ.೨೫೭ ಸಂಖ್ಯೆ ಪ್ರತಿಯು ತುಂಬ ಪ್ರಾಚೀನವಾದ ಗದಾಯುದ್ಧದ ಪ್ರತಿ. ಇದರಲ್ಲಿ 'ಶಕ ಸಮಗತಿ ರುತು ಯುಗ ಶಶಿ ನಿಕರಾಂಕಂ ಚಿತ್ರಭಾನು ಕಾರ್ತಿಕ ಶಿತಸಪ್ತಮಿ ಸುಕರಂ ಬುಧಸೇವ್ಯಮಾಯ್ತು ರನ್ನನ ಕಾವ್ಯಂ' ಎಂದು ಹಸ್ತಪ್ರತಿಯಲ್ಲಿ ದಾಖಲಾಗಿದೆ. ಇದರಿಂದ ಇದು ಕ್ರಿ.ಶ.೧೩೪೨ರಲ್ಲಿ ಪ್ರತಿಯಾಗಿರುವುದು ತಿಳಿಯುತ್ತದೆ.

* ಅಧ್ಯಯನ ಸಂಸ್ಥೆಯ ಕೆ.೨೦೫ ಸಂಖ್ಯೆಯ ಓಲೆ ಪ್ರತಿಯು ಕ್ರಿ.ಶ.೧೫೫೪ ಅವಧಿಯಾಗಿದ್ದು ಕುಮಾರವ್ಯಾಸ ಭಾರತದ ಪ್ರತಿಗಳಲ್ಲಿಯೇ ಹಳೆಯದು. ಇದರ ಮತ್ತೊಂದು ವೈಶಿಷ್ಟ್ಯವೆಂದರೆ ಪ್ರತಿ ಓಲೆಯ ರಂಧ್ರಕ್ಕೂ ತೆಳುವಾದ ಬೆಳ್ಳಿಯ ಕಟ್ಟನ್ನು ಅಳವಡಿಸಲಾಗಿದೆ ಹಾಗೂ ಪ್ರತಿ ಪರ್ವದ ಆರಂಭ ಮತ್ತು ಅಂತ್ಯದಲ್ಲಿ ರೇಖಾಚಿತ್ರವನ್ನು ಬಿಡಿಸಲಾಗಿದೆ.

* ನಾಗವರ್ಮನು ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಕರ್ಣಾಟಕ ಭಾಷಾಭೂಷಣ ಎಂಬ ಹೆಸರಿನಿಂದ ರಚಿಸಿದ್ದಾನೆ. ಇದರ ಕೆ೪೧ ಸಂಖ್ಯೆಯ ಹಸ್ತಪ್ರತಿ ಕೂಡ ವೈಶಿಷ್ಟ್ಯಪೂರ್ಣವಾಗಿದೆ. ಇಲ್ಲಿ ಸಂಸ್ಕೃತ ಭಾಷೆಯಲ್ಲಿರುವ ಕನ್ನಡ ವ್ಯಾಕರಣವನ್ನು ತಿಗಳಾರಿ ಲಿಪಿ ಬಳಸಿ ಬರೆಯಲಾಗಿದೆ.

* ಮುಮ್ಮಡಿ ಕೃಷ್ಣರಾಜರು ನಿರೂಪಿಸಿದ ಗಂಜೀಫು ಆಟವನ್ನು ಕೆ.ಬಿ.೫೧೫ ಸಂಖ್ಯೆ ಹಸ್ತಪ್ರತಿಯಲ್ಲಿ ಬಣ್ಣದ ಚಿತ್ರಸಹಿತ ನಿರೂಪಿಸಿರುವ ರೀತಿ ಕಲಾತ್ಮಕವಾಗಿದೆ. ಈ ಪ್ರತಿಯಲ್ಲಿಯೇ ೧೭೯೮–೧೮೫೯ರ ಅವಧಿಯ ೬೧ ವರ್ಷಗಳ ಕ್ಯಾಲೆಂಡರ್ ಹಾಗೂ ೧೮೪೯ರಲ್ಲಿ ಭೂಕಂಪವಾದ ಸುದ್ದಿ ದಾಖಲಾಗಿದೆ.
* ಅಶ್ವಪರೀಕ್ಷೆಗೆ ಸಂಬಂಧಿಸಿದ ಕೆ.ಎ.೫೭ ಸಂಖ್ಯೆಯ ಕಾಗದದ ಪ್ರತಿಯಲ್ಲಿ ೧೦೫ ಕುದುರೆಗಳ ಚೆಲುವಾದ ವರ್ಣಚಿತ್ರವಿದ್ದು ಅವುಗಳ ಪರೀಕ್ಷೆ, ಸುಳಿ ಮೊದಲಾದವನ್ನು ಸಚಿತ್ರವಾಗಿ ವಿವರಿಸಲಾಗಿದೆ. ಇದು ಭಂಡಾರದಲ್ಲಿ ವಿಶಿಷ್ಟವಾದ ವಿಶೇಷ ಹಸ್ತಪ್ರತಿಯಾಗಿದೆ.
* ಹತ್ತೊಂಬತ್ತನೆಯ ಶತಮಾನದಲ್ಲಿ ರಚಿತವಾದ ಎ ಗ್ರಾಮರ್ ಆಫ್ ಕರ್ನಾಟಕ ಲಾಂಗ್ವೇಜ್, ಮೋಗ್ಲಿಂಗ್‌ನ ಕನ್ನಡ ಗಾದೆಗಳು ಮತ್ತು ಸೌಗಂಧಿಕಾ ಪರಿಣಯವೆಂಬ ಕೃತಿಗಳ ಕಲ್ಲಚ್ಚಿನ ಪ್ರತಿಗಳನ್ನು ಭಂಡಾರದಲ್ಲಿ ಸಂಗ್ರಹಿಸಲಾಗಿದೆ.

ಎರಡನೆಯ **ನಾಗವರ್ಮನ ವರ್ಧಮಾನ ಪುರಾಣವನ್ನು** ಶೋಧಿಸಿ ಸಂಪಾದಿಸಿ ಪ್ರಕಟಿಸಿದ ಕೀರ್ತಿ ಈ ಸಂಸ್ಥೆಯದು. ಇನ್ನೊಂದು ವಿಶೇಷ ಹಸ್ತಪ್ರತಿಯಾದ 'ಅಶ್ವಶಾಸ್ತ್ರ'ವೆಂಬುದು ಈ ಭಂಡಾರದ ವಿಶೇಷ ಹಸ್ತಪ್ರತಿಯಾಗಿದೆ. ಇದರ ಜೊತೆಗೆ ೧೫೦ಕ್ಕೂ ಹೆಚ್ಚು ಗ್ರಂಥಗಳ ಸಂಪಾದನಾ ಕಾರ್ಯ ಇಲ್ಲಿ ನಡೆದಿದೆ. ಎಚ್.ದೇವೀರಪ್ಪ, ಎನ್. ಬಸವಾರಾಧ್ಯ ಬಿ.ಎಸ್.ಸಣ್ಣಯ್ಯ, ಮೈಲಹಳ್ಳಿ ರೇವಣ್ಣ, ಕೆ.ಆರ್. ಶೇಷಗಿರಿ, ಎನ್.ಎಸ್. ಕೃಷ್ಣಜೋಯಿಸ್, ಜಿ.ಜಿ.ಮಂಜುನಾಥನ್, ಮಂಜಪ್ಪ ಶೆಟ್ಟಿ, ವೈ.ಸಿ.ಭಾನುಮತಿ ಮುಂತಾದ ತಜ್ಞರು ಈ ಭಂಡಾರದ ಹಾಗೂ ಸಂಶೋಧನಾ ವಿಭಾಗದ ಮುಖ್ಯಸ್ಥರಾಗಿ, ಸಂಪಾದಕರಾಗಿ ಅನೇಕ ಗ್ರಂಥಗಳನ್ನು ಪ್ರಕಟಿಸಿದರು. ವೈ.ಸಿ.ಭಾನುಮತಿಯವರು ಕೂಡ ನಿವೃತ್ತಿ ಹೊಂದಿರುವುದರಿಂದ ಸಂಸ್ಥೆ ಅನಾಥವಾಗಿರುವುದು. ಶಬ್ದಮಣಿದರ್ಪಣ, ರಾಜಾವಳಿ ಕಥೆ, ನೇಮಿನಾಥ ಪುರಾಣ, ಆರಾಧ್ಯ ಚರಿತ್ರೆ, ಚಾಮುಂಡೇಶ್ವರಿ ನಿಧಿಗಳಿಗೆ ಸಂಬಂಧಿಸಿದ ಅನೇಕ ಹಸ್ತಪ್ರತಿಗಳು ಕಾವ್ಯಗಳು, ಪದ್ಯಗಳು ಮುಂತಾದವು ಮುಖ್ಯವಾಗಿವೆ. ಪ್ರಾಚ್ಯ ವಿದ್ಯಾ ಇಲಾಖೆ ಆರಂಭಿಸಿದ್ದ "ಕುಮಾರವ್ಯಾಸ ಭಾರತ ಪರ್ವವಾರು" ಪ್ರಕಟಣೆಯನ್ನು ಮುಂದುವರಿಸಿದ್ದಲ್ಲದೇ ಇಡೀ ಕಾವ್ಯವನ್ನು ಇಡಿಯಾಗಿ ಪ್ರಕಟಿಸಿರುವುದರಿಂದ ಸಂಸ್ಥೆಯ ಸಾಧನೆಗಳಲ್ಲಿ ಒಂದಾಗಿದೆ.

ದಾಸ ಸಾಹಿತ್ಯ ಪ್ರಕಟಣಾ ಯೋಜನೆಯೊಂದನ್ನು ಕೈಗೊಂಡು ದಾಸ ಸಾಹಿತ್ಯ ಹಸ್ತಪ್ರತಿಗಳನ್ನು ಶೋಧಿಸಿ ಪರಿಶೋಧಿಸಿ ವಾದಿರಾಜರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಮುಂತಾದ ದಾಸರ ಸಮಗ್ರ ಕೀರ್ತನೆ ಸಂಪುಟಗಳನ್ನು ಪ್ರಕಟಿಸಿದ್ದಲ್ಲದೆ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮ ಮುಂತಾದ ಹೊಸ ಕೀರ್ತನೆಕಾರರನ್ನು ಪರಿಚಯಿಸಲಾಗಿದೆ. ಕೀರ್ತನ ಸಾಹಿತ್ಯದ ಬಗೆಗೆ ಹಲವು ವಿಚಾರ ಪೂರ್ಣ ಗ್ರಂಥಗಳನ್ನು ಪ್ರಕಟಿಸಿದುದು ಈ ಸಂಸ್ಥೆಯ ಹೆಗ್ಗಳಿಕೆಯಾಗಿದೆ. ಈ ಸಂಸ್ಥೆಯಲ್ಲಿ ಇದನ್ನೇ ಒಂದು ಪ್ರತ್ಯೇಕ ವಿಭಾಗವಾಗಿ ರೂಪಿಸಿಕೊಂಡಿದ್ದು ಇದರ ಮುಖ್ಯಸ್ಥರಾಗಿ ಜಿ. ವರದರಾಜರಾವ್ ಮತ್ತು ವೈ.ಸಿ. ಭಾನುಮತಿಯವರು ಕೆಲಸ ನಿರ್ವಹಿಸಿ ನಿವೃತ್ತಿಯಾಗಿರುವುದರಿಂದ ಈ ವಿಭಾಗ ಅನಾಥವಾಗಿರುವುದು.

ಈ ಸಂಸ್ಥೆ ತನ್ನಲ್ಲಿರುವ ಎಲ್ಲ ಹಸ್ತಪ್ರತಿಗಳ ಸೂಚಿಗಳನ್ನು ಪ್ರಕಟಿಸಿರುವುದು ಗಮನಾರ್ಹ ಸಾಧನೆಯಾಗಿದೆ. ಒಟ್ಟು ೯ ವರ್ಣನಾತ್ಮಕ ಸೂಚಿಯನ್ನು ಪ್ರಕಟಿಸಿದ್ದಾರೆ. ಐದು ವರ್ಣನಾತ್ಮಕ ಸೂಚಿಗೆ ಯೋಜನೆ ಸಿದ್ಧವಾಗಿರುವುದರ ಜೊತೆಗೆ ೩೯ ಕಡತಗಳು ೫೦ ಅಲಂಕಾರಿಕ ಬರವಣಿಗೆಗಳಿವೆ. ಪ್ರಾಚ್ಯ ವಿದ್ಯಾ ಇಲಾಖೆಯಲ್ಲಿ ಆರಂಭವಾಗಿದ್ದ ಈ ಸೂಚಿ ಪ್ರಕಟನಾ ಕಾರ್ಯ ಈ ಸಂಸ್ಥೆಯಲ್ಲಿ ಮುಂದುವರಿಯುತ್ತಿದೆ. ಅಲ್ಲಿ ನಾಲ್ಕು ಸಂಪಟುಗಳಲ್ಲಿ ೨೦೭೩ ಕೃತಿಗಳ ಸೂಚಿಯಾಗಿದ್ದು ಇಲ್ಲಿ ೫ನೇ ಸಂಪುಟದಿಂದ ೯ನೇ ಸಂಪುಟದವರೆಗೆ ೫ ಸಂಪುಟಗಳಲ್ಲಿ ೨೬೪೩ ಕೃತಿಗಳ ಸೂಚಿಯಾಗಿವೆ. ಇದರ ಜೊತೆಗೆ ರಾಜ್ಯದ ಮತ್ತು ಹೊರರಾಜ್ಯದ ಎಲ್ಲ ಭಂಡಾರಗಳಲ್ಲಿರುವ ಪ್ರಮುಖ ಕನ್ನಡ ಹಸ್ತಪ್ರತಿಗಳ ಮೈಕ್ರೋಫಿಲಂ ಪ್ರಿಂಟ್‌ಗಳನ್ನು ತೆಗೆದು 'ಕನ್ನಡ ಹಸ್ತಪ್ರತಿ ಮೈಕ್ರೋಫಿಲಂ ಸೂಚಿ' (೧೯೮೮)ಯೊಂದನ್ನು ಈ ಸಂಸ್ಥೆ ಪ್ರಕಟಿಸಿದೆ. ಓ.ಆರ್.ಐ.ನಲ್ಲಿರುವ ಮೈಕ್ರೋಫಿಲಂ ಯೂನಿಟ್ ಅನ್ನು ಸಂಚಾರಿ ಯೂನಿಟನ್ನಾಗಿ ಪರಿವರ್ತಿಸಿ ಒಂದು ಯೋಜನೆಯ ರೂಪದಲ್ಲಿ ಆಯಾ ಭಂಡಾರಗಳಿಗೇ ಹೋಗಿ ಹಸ್ತಪ್ರತಿಗಳ ಮೈಕ್ರೋ ಫಿಲಂ ತೆಗೆದದ್ದು ಕನ್ನಡ ಹಸ್ತಪ್ರತಿ ಅಧ್ಯಯನ ಇತಿಹಾಸದಲ್ಲಿಯೇ ಮಹತ್ತರ ಸಾಧನೆಯಾಗಿದೆ. ಹೈದ್ರಾಬಾದ್, ಮಹಾರಾಷ್ಟ್ರ, ಕರ್ನಾಟಕದ ಹಲವು ಖಾಸಗಿ ಭಂಡಾರಗಳಲ್ಲೂ ಮಠ, ಸಂಸ್ಥೆಗಳ ಸಂಗ್ರಹಗಳಲ್ಲೂ ಇದ್ದ ೧೩೭೪ ಹಸ್ತಪ್ರತಿಗಳನ್ನು ಇದರಲ್ಲಿ ಸೂಚೀಕರಿಸಲಾಗಿದೆ. ಈ ಸಾಧನೆಗಳ ಹಿಂದೆ ಬಿ.ಎಸ್.ಸಣ್ಣಯ್ಯ ಹಾಗೂ ವೈ.ಸಿ.ಭಾನುಮತಿ ಯವರ ಕಾರ್ಯಕ್ಷಮತೆಯೇ ಕಾರಣ ಎಂಬುದರಲ್ಲಿ ಸಂದೇಹವಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಭಂಡಾರಗಳಲ್ಲಿ ವಿಶೇಷ ಹಾಗೂ ಅಮೂಲ್ಯ ಹಸ್ತಪ್ರತಿಗಳಿರುವುದು ಕಾಣಬಹುದು. ಓಲೆಗರಿ ಹಸ್ತಪ್ರತಿಗಳಲ್ಲೇ ಅತ್ಯಂತ ಪ್ರಾಚೀನ ಹಸ್ತಪ್ರತಿಯಾದ "ನಾಮಲಿಂಗಾನು ಶಾಸನ ಟೀಕೆ(ಕ್ರಿ.ಶ.೧೧೩೦).

* ಗುಣವರ್ಮನ ಪುಷ್ಪದಂತ ಪುರಾಣದ ಪ್ರಾಚೀನ ಹಸ್ತಪ್ರತಿ(ಕ್ರಿ.ಶ.೧೪೧೬)
* ಕುಮಾರವ್ಯಾಸನ ಮಹಾಭಾರತದ ಪ್ರಾಚೀನ ಹಸ್ತಪ್ರತಿ(ಕ್ರಿ.ಶ.೧೫೫೪)ಗಳು

ಈ ಭಂಡಾರದ ಆಸ್ತಿಯಾಗಿವೆ. ಕಾಗದದ ಹಸ್ತಪ್ರತಿಯಲ್ಲಿಯೇ ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನ ಹಸ್ತಪ್ರತಿಯಾದ "ಏಕೋತ್ತರ ಶತಸ್ಥಲ ಟೀಕುವಿನ(ಕ್ರಿ.ಶ.೧೫೦೦) ಜೊತೆಗೆ ಆದಿಪುರಾಣ, ವಡ್ಡಾರಾಧನೆ, ಗದಾಯುದ್ಧ, ಸರ್ವಜ್ಞನ ವಚನಗಳ ಪ್ರಾಚೀನ ಹಸ್ತಪ್ರತಿಗಳೂ ಇಲ್ಲಿರುವವು. ಅನೇಕ ಪ್ರಮುಖ ಕೃತಿಗಳ ಹಸ್ತಪ್ರತಿಗಳೊಂದಿಗೆ ಹಲವು ಏಕೈಕ ಹಸ್ತಪ್ರತಿಗಳು ಈ ಭಂಡಾರದಲ್ಲಿವೆ. ಕೆಲವು **ವಿಶೇಷ ಹಸ್ತಪ್ರತಿಗಳೂ** ಇದರಲ್ಲಿವೆ. ಅವುಗಳೆಂದರೆ 'ಕುಮಾರವ್ಯಾಸ ಭಾರತ'ದ ಹಸ್ತಪ್ರತಿಯ ಪ್ರತಿ ಗರಿಯದಾರ ರಂಧ್ರಗಳಿಗೂ ಬೆಳ್ಳಿಯ ಉಂಗುರವನ್ನು ತೊಡಿಸಿರುವುದು ವಿಶೇಷವಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್, ಅಳಿಯ ಲಿಂಗರಾಜ ಮುಂತಾದವರ ೧೮೫೦ರ ಕಾಲದ ಸ್ವಹಸ್ತಾಕ್ಷರ ಹಸ್ತಪ್ರತಿಗಳು ಓಲೆಗರಿಯಲ್ಲಿರುವುದು ಇನ್ನೊಂದು ಮಹತ್ವದ ವಿಶೇಷ. ನಂಜುಂಡ ಕವಿಯ ಕೃತಿಗೆ ಅಂದವಾದಂತಹ ಕೆತ್ತನೆಯ ಪೆಟ್ಟಿಗೆ ಇದೆ. ಅನೇಕ ಹಸ್ತಪ್ರತಿಗಳಿಗೆ ದಂತ, ಶ್ರೀಗಂಧ ಕೆತ್ತನೆಯ ಪಟ್ಟಿಕೆಗಳಿರುವುದು ಮತ್ತು ಅನೇಕ ಚಿತ್ರಮಯ ಹಸ್ತಪ್ರತಿಗಳು ಈ ಭಂಡಾರದ ಮಹತ್ವವನ್ನು

ಹೆಚ್ಚಿಸಿವೆ. ನಾಡಿನಲ್ಲಿರುವ ಎಲ್ಲಾ ಹಸ್ತಪ್ರತಿ ಭಂಡಾರಗಳಿಗಿಂತ ಹೆಚ್ಚಿನ ಪ್ರಾಚೀನತೆಯನ್ನು ಹೊಂದಿದೆ. ಆದರೂ ಪ್ರಸ್ತುತ ಸಂದರ್ಭದಲ್ಲಿ ಹಸ್ತಪ್ರತಿ ವಿದ್ವಾಂಸರ ಕೊರತೆ ಅನುಭವಿಸುತ್ತಿರುವುದು ಕಂಡುಬಂದಿದೆ.

೩.೧೩.೨. ಕರ್ನಾಟಕ ವಿಶ್ವವಿದ್ಯಾಲಯದ ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠ ೧೯೬೨ರಲ್ಲಿ ವಚನ ಸಾಹಿತ್ಯ ಪ್ರಕಟನಾ ಯೋಜನೆಯೊಂದನ್ನು ಕೈಗೆತ್ತಿಕೊಂಡು ಅದರ ಅಂಗವಾಗಿ ಹಸ್ತಪ್ರತಿ ಸಂಗ್ರಹಕಾರ್ಯವನ್ನು ನಡೆಸಿರುವುದು ಕಂಡುಬರುತ್ತದೆ. ಸುಮಾರು ಹತ್ತು ವರ್ಷ ಸತತವಾಗಿ ಉತ್ತರಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ನಡೆಸಿ ೫೦೦೦ ಅಧಿಕ ಹಸ್ತಪ್ರತಿಗಳನ್ನು ಸಂಗ್ರಹಿಸಿರುವ ವಿಭಾಗವು ಫ.ಗು.ಹಳಕಟ್ಟಿ ಅವರು ಸಂಗ್ರಹಿಸಿದ್ದ ೧೦೦೦ ಹಸ್ತಪ್ರತಿಗಳನ್ನು ಅವರ ಮಕ್ಕಳಿಂದ ಪಡೆಯುವ ಮೂಲಕ ಭಂಡಾರದ ಮೌಲ್ಯ ಹೆಚ್ಚಿಸಲಾಗಿದೆ. ೧೯೯೨ರಲ್ಲಿ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ದೂಳು ಹಿಡಿಯುತ್ತಿದ್ದ ಸುಮಾರು ೩೦೦೦ಕ್ಕೂ ಅಧಿಕ ಹಸ್ತಪ್ರತಿಗಳನ್ನು ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರಕ್ಕೆ ಸೇರ್ಪಡೆ ಗೊಳಿಸಿದೆ. ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರದ ಹಸ್ತಪ್ರತಿ ಸಂಖ್ಯೆ ಒಟ್ಟು ೭೮೫೦ಕ್ಕೂ ಅಧಿಕವಾಗಿವೆ. ಇದರಲ್ಲಿ ೩೦೫೩ ತಾಳೆಪ್ರತಿಗಳು ಹಾಗೂ ೪೭೯೭ ಕಾಗದ ಪ್ರತಿಗಳಿವೆ.

ವಿಭಾಗದ ಮುಖ್ಯಸ್ಥರಾದ ಆರ್.ಸಿ. ಹಿರೇಮಠ, ಎಂ.ಎಸ್. ಸುಂಕಾಪುರ, ಎಂ.ಎಂ.ಕಲಬುರ್ಗಿ ಮುಂತಾದ ವಿದ್ವಾಂಸರ ಕಾರ್ಯಸಾಧನೆಗಳಿಂದ ಈ ಹಸ್ತಪ್ರತಿ ವಿಭಾಗವು ಉತ್ತಮವಾದ ಸ್ಥಾನ ಪಡೆದಿದೆ. ಈ ಭಂಡಾರದ ಒಟ್ಟು ಸಂಗ್ರಹ ಇಂತಿದೆ.

ಕನ್ನಡ – ೪೩೬೦

ಸಂಸ್ಕೃತ – ೫೬೫

ಮರಾಠಿ – ೩೫

ತೆಲುಗು – ೩೮

ತಮಿಳು – ೬

ಇವುಗಳಲ್ಲಿ ವಚನ ಸಾಹಿತ್ಯಕ್ಕೆ ಸಂಬಂಧಪಟ್ಟ ಕೃತಿಗಳ ಸಂಖ್ಯೆ ಹೆಚ್ಚಾಗಿದೆ. ಕಡತ, ಲೇಖನ ಸಾಮಗ್ರಿಗಳು ಇಲ್ಲಿವೆ. ಪ್ರಾಚೀನ ಹಸ್ತಪ್ರತಿಗಳ ಸಂಪಾದನೆ ಮತ್ತು ಪ್ರಕಟಣಾ ಕಾರ್ಯವು ಚಳುವಳಿಯೋಪಾದಿಯಲ್ಲಿ ನಡೆದಿದೆ. ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಯನ ಸಂಸ್ಥೆಗೆ ಸಂವಾದಿಯಾಗಿ ಈ ಅಧ್ಯಯನ ಪೀಠ ಪ್ರಾಚೀನ ಗ್ರಂಥಗಳ ಸಂಪಾದನೆ ಮತ್ತು ಪ್ರಕಟಣೆಯಲ್ಲಿ ಪ್ರತಿಸ್ಪರ್ಧೆಯೋಪಾದಿಯಲ್ಲಿ ಕಾರ್ಯ ನಿರ್ವಹಿಸಿದೆ. ಈ ಸಂಸ್ಥೆಯು ವಚನ ಸಾಹಿತ್ಯವನ್ನು ಕೇಂದ್ರವಾಗಿಟ್ಟುಕೊಂಡು ಎಲ್ಲಾ ಪ್ರಮುಖ ವಚನಕಾರರ ವಚನಗಳನ್ನು ಸಮಗ್ರವಾಗಿ ಪರಿಶೋಧಿಸಿ ಪ್ರಕಟಿಸಿದೆ. ಅಲ್ಲದೆ ಅನೇಕ ಹೊಸ ಹೊಸ ವಚನಕಾರರ ವಚನ ಸಂಪುಟಗಳನ್ನು ಬೆಳಕಿಗೆ ತಂದ ಕೀರ್ತಿಗೆ ಭಾಜನವಾಗಿದೆ. ಶಿವಶರಣೆಯರ ವಚನಗಳು, ಬಸವಣ್ಣನವರ ಟೀಕಿನ ವಚನಗಳು, ಸಕಲ

ಪುರಾತನರ ವಚನಗಳು, ಶೂನ್ಯ ಸಂಪಾದನೆಯ ಬೇರೆ ಬೇರೆ ಆವೃತ್ತಿಗಳನ್ನು ಒಳಗೊಂಡ ಸುಮಾರು ೨೦ಕ್ಕೂ ಹೆಚ್ಚು ವಚನ ಸಂಪುಟಗಳನ್ನು ಈ ಅಧ್ಯಯನ ಪೀಠದಿಂದ ಪ್ರಕಟಿಸಲಾಗಿದೆ. ತ್ರಿಷಷ್ಟಿ, ಪುರಾತನ ಪುರಾಣ, ರಾಜಶೇಖರವಿಳಾಸ, ಹರಿಹರನ ರಗಳೆಗಳ ಸಮಗ್ರ ಸಂಪುಟಗಳು ಹಾಗೂ ಪ್ರಮುಖ ವೀರಶೈವ ಸಾಹಿತ್ಯ ಕೃತಿಗಳೊಂದಿಗೆ ಅನಂತನಾಥ ಪುರಾಣ, ಮಲ್ಲಿನಾಥ ಪುರಾಣ, ಧರ್ಮಾಮೃತ, ಮೋಹನ ತರಂಗಿಣಿಗಳಂತಹ ಮುಖ್ಯ ಕೃತಿಗಳನ್ನು ವಿಭಾಗದಿಂದ ಪ್ರಕಟಿಸಲಾಗಿದೆ.

ಹಸ್ತಪ್ರತಿ ಸಂಪಾದನೆ ಮತ್ತು ಪ್ರಕಟಣಾ ಕಾರ್ಯಕ್ಕಾಗಿ ಅನುಕೂಲದ ದೃಷ್ಟಿಯಿಂದ ವೀರಶೈವ ಜೈನ, ಬ್ರಾಹ್ಮಣ ಶಾಖೆಗಳನ್ನೇ ತೆರೆದು ಈ ಶಾಖೆಗಳ ಪರಸ್ಪರ ಸ್ಪರ್ಧಾತ್ಮಕ ದೃಷ್ಟಿಯಿಂದ ಪ್ರಾಚೀನ ಸಾಹಿತ್ಯದ ಪ್ರಕಟಣೆಯಲ್ಲಿ ತೊಡಗಿರುವುದನ್ನು ಸಾಹಿತ್ಯದ ಕೃಷಿಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯಾಗಿದೆ.

ಪ್ರಸ್ತುತ ಈ ಸಂಸ್ಥೆಯಲ್ಲಿರುವ ಹಸ್ತಪ್ರತಿಗಳಲ್ಲಿ ಈವರೆಗೆ ೧೦೦೦ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು ಮಾತ್ರ ಸಿದ್ಧವಾಗಿದ್ದು, ಉಳಿದ ಹೊಸ ಕಾಗದದ ಹಸ್ತಪ್ರತಿಸೂಚಿ ತಯಾರಿಸುವ ಕಾರ್ಯ ನಡೆದಿದೆ. ಈಗಾಗಲೇ ಸಂಸ್ಥೆಯಿಂದ ಸೂಚಿಗಳು ೧೦ ಸಂಪುಟದಲ್ಲಿದ್ದು, ಪ್ರತಿ ಸಂಪುಟದಲ್ಲಿ ತಲಾ ೧೦೦ ಕಟ್ಟುಗಳ ಸೂಚಿಗಳಿವೆ. ಬಿ.ಆರ್. ಹಿರೇಮಠ ಮತ್ತು ವಿ.ಬಿ.ಶಿರೂರ ಅವರು ಎಂ.ಎಂ.ಕಲಬುರ್ಗಿ ಅವರ ಮಾರ್ಗದರ್ಶನದಲ್ಲಿ ಈ ಸಂಪುಟಗಳನ್ನು ಸಂಪಾದಿಸಿದ್ದಾರೆ. ೧ ಮತ್ತು ೬ರಿಂದ ೧೦ನೇ ಸಂಪುಟಗಳು ೧೯೯೨ರಲ್ಲಿ ಪ್ರಕಟವಾಗಿವೆ. ಉಳಿದವು ಇನ್ನೂ ಪ್ರಕಟವಾಗಬೇಕಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಭಂಡಾರದಲ್ಲಿ ಧರ್ಮಶಾಸ್ತ್ರ, ಜ್ಯೋತಿಷ್ಯ, ವೈದ್ಯಕೀಯ, ವ್ಯಾಕರಣ ಹಾಗೂ ಗಣಿತ ಚಿತ್ರಸಹಿತ ಹಸ್ತಪ್ರತಿ, ತಾರಾವಳಿ, ಕಿಟೆಲ್‌ರವರೆಗೆ ಸಂಬಂಧಿಸಿದ ಹಸ್ತಪ್ರತಿಗಳು, ಚನ್ನಬಸವ ಪುರಾಣ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳಿರುವುವು. ೨೦೧೧ನೇ ಸಾಲಿನ ಅನುದಾನದಲ್ಲಿ ಭಂಡಾರಕ್ಕೆ ೩೫ ಲಕ್ಷ ರೂ.ಗಳಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಸೂಚಿಕಾರ್ಯ ನಡೆಯುತ್ತಿದೆ. ಭಂಡಾರಕ್ಕೆ ದಿನದಿಂದ ದಿನಕ್ಕೆ ಸರಕಾರದ ಆಸಕ್ತಿ ಕೊರತೆ ಹಾಗೂ ದಾನಿಗಳ ಆಸಕ್ತಿ ಕೊರತೆ ಕಂಡುಬರುತ್ತಿದೆ. ಮುಂದಿನ ದಿನಗಳಲ್ಲಿ ವಿದ್ವಾಂಸರ, ಸಂಶೋಧಕರ, ಅಧ್ಯಯನಕಾರರ ಸಹಾಯ ಮತ್ತು ಸಹಕಾರ ಪ್ರೋತ್ಸಾಹ ತುರ್ತಾಗಿ ಆಗಬೇಕಾಗಿರುವುದು ಅನಿವಾರ್ಯವಾಗಿದೆ.

೩.೧.೩.೩. ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೧೯೭೦ರಿಂದ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾಗಿ ಗುಲ್ಬರ್ಗಾ ವಿಶ್ವವಿದ್ಯಾಲಯ ಕಾರ್ಯ ನಿರ್ವಹಿಸುತ್ತಿತ್ತು. ಸ್ವತಂತ್ರ್ಯ, ಅಸ್ತಿತ್ವ, ಅಗತ್ಯ ಮತ್ತು ಅನುಕೂಲಗಳು ಲಭ್ಯವಾದ ನಂತರ ೧೯೮೦ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗವನ್ನು ಆರಂಭಿಸಲಾಯಿತು. ಆಗ ಕನ್ನಡ ವಿಭಾಗದಲ್ಲಿ ೧೯೮೫ರಿಂದ ಗ್ರಂಥಸಂಪಾದನೆಯೊಂದಿಗೆ

ಹಸ್ತಪ್ರತಿಶಾಸ್ತ್ರವನ್ನು ಸೇರಿಸಿ ೧೦೦ ಅಂಕಗಳ ಒಂದು ಪೂರ್ಣ ಪತ್ಯಪತ್ರಿಕೆಯ ವ್ಯಾಸಂಗವನ್ನು ಎಂ.ಎ. ಹಂತದಲ್ಲಿ ಆರಂಭ ಮಾಡಲಾಯಿತು. ಈ ವಿಭಾಗ ಹಸ್ತಪ್ರತಿ ಸಂಗ್ರಹ ಕಾರ್ಯವನ್ನು ಕೈಗೊಂಡು ಉಪೇಕ್ಷೆಗೊಂಡಿದ್ದ ಹೈದರಾಬಾದ್ ಕರ್ನಾಟಕದ ಹಲವು ಭಾಗಗಳಿಂದ ಹಸ್ತಪ್ರತಿಗಳನ್ನು ಸಂಗ್ರಹಿಸಿತು. ಈವರೆಗೆ ಸುಮಾರು ೬೦೦೦ಕ್ಕೂ ಹೆಚ್ಚಿನ ಹಸ್ತಪ್ರತಿಗಳು ಸಂಗ್ರಹವಾಗಿದೆ.

ಇದರಲ್ಲಿ ೧೮೦ರಿಂದ ೨೫೦ರವರೆಗೆ ತಾಳೆಪ್ರತಿಗಳು ಈ ಭಂಡಾರದಲ್ಲಿ ಕಾಗದದ ಹಸ್ತಪ್ರತಿಗಳಿವೆ. ಓಲೆಯ ಪ್ರತಿಗಳಿವೆ, ಇವುಗಳ ಜೊತೆಗೆ ಬಟ್ಟೆಯನ್ನೇ ಓಲೆಯಂತೆ ಮಾಡಿ ಓಲೆಯಂತೆಯೇ ಕತ್ತರಿಸಿ ಓಲೆಯೇನೋ ಎಂಬ ಭ್ರಮೆ ಬರುವಂತೆ ಮಾಡಲಾಗಿರುವ ಹಸ್ತಪ್ರತಿಯೂ ಇದೆ. ಅದನ್ನು ಕಡತದ ವರ್ಗಕ್ಕೆ ಸೇರಿಸಲಾಗಿದೆ. ಭಂಡಾರದಲ್ಲಿರುವ ಹಸ್ತಪ್ರತಿಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

* ಕಡತ - ೧

* ಸಚಿತ್ರ ಹಸ್ತಪ್ರತಿಗಳಲ್ಲಿ ಬೃಹತ್ ಉದ್ಧರಣಾ ಪಟಲವಿದೆ.

* ಈಗಾಗಲೇ 'ತಾಡೋಲೆ ಸಂಪುಟ-೧ ವರ್ಣನಾತ್ಮಕಸೂಚಿ ತಯಾರಿಸ'ಲಾಗಿದೆ. ತಾಡೋಲೆ ಸಂಪುಟ-೨ ತಯಾರಿಸಲು ಯೋಜನೆ ರೂಪಿಸಲಾಗಿದೆ. ತಾಡೋಲೆ ಸಂಪುಟ-೧ ವರ್ಣನಾತ್ಮಕಸೂಚಿ ಸಂಪುಟಕ್ಕೆ ಸಂಬಂಧಿಸಿದ ಮಾಹಿತಿ ಈ ಕೆಳಗಿನಂತೆ ಇದೆ. ಇದರ ಸಂಪಾದಕರು ಕೆ.ಜಿ. ನಾರಾಯಣ ಪ್ರಸಾದ್. ಓಲೆ ಪ್ರತಿಗಳದ್ದೇ ಸುಮಾರು ಮೂರು ಸಂಪುಟಗಳಷ್ಟಾಗುವ ಸಾಧ್ಯತೆಯಿದೆ. ಇವುಗಳ ಪೈಕಿ ಈಗ ಈ ಮೊದಲ ಸಂಪುಟ ಹೊರಬಂದಿರುತ್ತದೆ. ಇದರಲ್ಲಿ ೧ರಿಂದ ೪೦ರವರೆಗಿನ ಒಟ್ಟು ಐವತ್ತು ಕಟ್ಟುಗಳ ವಿವರಣೆಯಿದೆ. ಒಟ್ಟಾರೆ ೪೮೧ ಕೃತಿಗಳು ಇದರಲ್ಲಿ ಸೇರಿವೆ. ಇವುಗಳಲ್ಲಿ ಬಹುತೇಕ ಎಲ್ಲವೂ ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದವೇ ಆಗಿವೆಯೆನ್ನಬಹುದು. ಭಟ್ಟಾಕಳಂಕ ಕೇಶಿರಾಜರಂತಹವರ ಶಾಸ್ತ್ರಗ್ರಂಥಗಳನ್ನು ಹೊರತುಪಡಿಸಿದರೆ ಇಲ್ಲಿ ಜೈನಕೃತಿಗಳು ಒಂದೂ ಇಲ್ಲವೆಂಬುದು ಗಮನಿಸಬೇಕಾದ ಸಂಗತಿಯಾಗಿದೆ.

* ಒಂದು ಕಟ್ಟಿನಲ್ಲಿ ಬರುವ ಎಲ್ಲ ಕೃತಿಗಳನ್ನು ಒಂದೆಡೆ ಕೊಡಲಾಗಿದೆ.[೮]

*** ಗುಲ್ಬರ್ಗಾ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿರುವ ಹಸ್ತಪ್ರತಿಗಳು ವಿವಿಧ ವಿಷಯಗಳನ್ನು ಹೊಂದಿವೆ. ಅವು ಈ ರೀತಿ ಇವೆ.**

* ಪ್ರತಿ ಸಂಖ್ಯೆ ೧೬೬೦ ಜ್ಯೋತಿಷ್ಯಶಾಸ್ತ್ರದ ಕಾಗದಪ್ರತಿ

* ಪ್ರತಿ ಸಂಖ್ಯೆ ೪೩೫ ಚೋರಬಸವನ ಚರಿತ್ರೆಯ ಕಾಗದಪ್ರತಿ

* ಪ್ರತಿ ಸಂಖ್ಯೆ ೬೮೧ ಸಿದ್ಧೇಶ್ವರ ಪುರಾಣದ ಕಾಗದಪ್ರತಿ

* ಪ್ರತಿ ಸಂಖ್ಯೆ ೩೫೬ ಬೋಧಾಮೃತದ ಕಾಗದ ಪ್ರತಿ

ಈ ಭಂಡಾರದಲ್ಲಿ ಹಲವು ವಿಷಯಗಳಿಗೆ ಸಂಬಂಧಿಸಿದ ಕಾಗದ ಪ್ರತಿಗಳಿರುವುವು. ಹಾಗೆಯೇ ತಾಳೆಗರಿಯ ಕೆ.೫ ಕಟ್ಟಿನಲ್ಲಿ-ಭಿಕ್ಷಾಟನೆ ಚರಿತ್ರೆ ಹಾಗೂ

ಹಂಪೆಯ ಹರೀಶ್ವರನ ಗಿರಿಜಾ ಕಲ್ಯಾಣ

ಮುರಿಗೆ ದೇಸಿಕೇಂದ್ರರ ಹಮ್ಮೀರ ಕಾವ್ಯ

ಗುಬ್ಬಿ ಮಲ್ಲಣಾರ್ಯನ ಭಾವಚಿಂತಾರತ್ನ

ಷಡಕ್ಷರ ದೇವನ ಶಬರಶಂಕರ ವಿಳಾಸ

ಒಂದು ಕಟ್ಟಿನಲ್ಲಿ ಇಷ್ಟೊಂದು ಕೃತಿಗಳು ಇರುವುದನ್ನು ಕಾಣಬಹುದು. ಹಾಗೆಯೇ ತಾಳೆ ಪ್ರತಿಗಳು ಮತ್ತು ಕಾಗದ ಪ್ರತಿಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ ಸಂರಕ್ಷಣೆ ಮಾಡಲಾಗಿದೆ. ಭಂಡಾರಕ್ಕೆ ನಾಡಿನ ಹಲವರು ವಿದ್ವಾಂಸರು ಭೇಟಿ ನೀಡಿದ್ದಾರೆ. ಇದಲ್ಲದೆ ವಿದೇಶದಿಂದ Nicole Murcy ಎಂಬುವವರು ಫ್ರಾನ್ಸ್‌ದಿಂದ ದಿನಾಂಕ: ೧೦.೨.೨೦೧೪ರಂದು ಭೇಟಿ ನೀಡಿದ್ದರು. ಇವರು ಸ್ವಾತಂತ್ರ್ಯಾನಂತರ ಸುರಪುರ ವೆಂಕಟಪ್ಪನಾಯಕನ ಕಾಲದ ಚಿತ್ರಕಲೆಗೆ ಸಂಬಂಧಿಸಿದ ಮಾಹಿತಿ ಕಲೆ ಹಾಕುವ ಉದ್ದೇಶ ಹೊಂದಿದ್ದರು. ಹಾಗೆಯೇ ಎನ್.ಎಸ್. ಬಿರಾದಾರ್ ಅವರ ಮುಖ್ಯಸ್ಥರಾಗಿದ್ದ ಅವಧಿಯಲ್ಲಿ ನಾಡಿನ ವಿವಿಧ ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯದ ಮೂಲಕ ಹಸ್ತಪ್ರತಿಗಳನ್ನು ಸಂಗ್ರಹಿಸಲಾಯಿತು. ಪ್ರಸ್ತುತ ಸಂದರ್ಭದಲ್ಲಿ ಶಿವಪುತ್ರ ಸಿದ್ರಾಮ ಅವರು ಭಂಡಾರದಲ್ಲಿನ ಹಸ್ತಪ್ರತಿ ಸಂರಕ್ಷಣೆ ಕೆಲಸ ನಿರ್ವಹಿಸುತ್ತಿದ್ದಾರೆ. ದಿನಾಂಕ.. ದಿಂದ .. ರವರೆಗೆ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗವು ಹಸ್ತಪ್ರತಿ ತರಬೇತಿ ಜಾಗೃತಿ ಶಿಬಿರದ ಕಾರ್ಯಕ್ರಮ ಆಯೋಜಿಸಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಸಹಯೋಗದಲ್ಲಿ ನಡೆಸಿರುವುದರಿಂದ ಹಸ್ತಪ್ರತಿ ಕ್ಷೇತ್ರದ ಬಗ್ಗೆ ಇನ್ನೂ ಹೆಚ್ಚಿನ ಆಸಕ್ತಿ ಮೂಡತೊಡಗಿದೆ.

೩.೧.೩.೪. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಲ್ಲಿ ಹಸ್ತಪ್ರತಿ ಭಂಡಾರಗಳಿವೆ. ಅವು ಅನೇಕ ವೈವಿಧ್ಯತೆಯಿಂದ ಕೂಡಿದೆ. ಅಂಥ ವೈವಿಧ್ಯತೆಗೆ ಪ್ರಸಿದ್ಧಿಯಾಗಿರುವುದರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರವೂ ಒಂದು. ಇದು ಹಂತ ಹಂತವಾಗಿ ವಿಸ್ತಾರಗೊಳ್ಳುತ್ತಾ ಸಮೃದ್ಧವಾಗುತ್ತಾ ತನ್ನ ವೈವಿಧ್ಯತೆಯನ್ನು ಹೆಚ್ಚಿಸಿಕೊಂಡಿದೆ. ಪ್ರಾಚೀನ ಕರ್ನಾಟಕದ ಸಾಹಿತ್ಯ, ಸಂಸ್ಕೃತಿ, ಜನಜೀವನದ ವೈವಿಧ್ಯತೆಯನ್ನು ತಿಳಿಸುವ ಆಕರಗಳಾದ ಇಲ್ಲಿನ ಹಸ್ತಪ್ರತಿಗಳು ಪ್ರಾಜ್ಞರ ಆಸಕ್ತಿಯಿಂದ ಇಲ್ಲಿ ಸಂಗ್ರಹಿತವಾಗಿ ಸಂರಕ್ಷಿತಗೊಂಡಿವೆ. ಕನ್ನಡ ನಾಡಿನ ಅನೇಕ ವಿದ್ವಾಂಸರು ಈ ಹಸ್ತಪ್ರತಿ ಭಂಡಾರದ ನೆರವಿನಿಂದ ಬಹಳ ಮೌಲ್ಯಯುತವಾದ ಪ್ರಾಚೀನ ಸಾಹಿತ್ಯ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯವು ೧೯೬೪ರಲ್ಲಿಯೇ ಅಸ್ತಿತ್ವಕ್ಕೆ ಬಂದಿದೆಯಾದರೂ ಕನ್ನಡ ಅಧ್ಯಯನ ಕೇಂದ್ರದಲ್ಲಿ ಹಸ್ತಪ್ರತಿ ವಿಭಾಗವು ಅಸ್ತಿತ್ವಕ್ಕೆ ಬಂದದ್ದು ೧೯೭೧ರಲ್ಲಿ. ಇದಕ್ಕೆ ಮುಖ್ಯ ಕಾರಣ ಕರ್ತರೆಂದರೆ ಬಿ.ಶಿವಮೂರ್ತಿಶಾಸ್ತ್ರಿಗಳು. ಇವರು ೧೯೭೧ ೭ನೇ ಸೆಪ್ಟೆಂಬರ್ ತಿಂಗಳಲ್ಲಿ ತಮ್ಮ ಬಳಿಯಲ್ಲಿ ಇದ್ದಂಥ ಜೈಮಿನಿ ಭಾರತ, ಚನ್ನಬಸವಣ್ಣನವರ ಅನುಭಾವದ ವಚನಗಳು, ಬಸವ ಪುರಾಣ, ದೀಪದ ಕಲಿಯರ ಕಾವ್ಯ(ಸಾಂಗತ್ಯ), ಷಟ್ಸ್ಥಲಜ್ಞಾನ ಸಾರಾಮೃತ, ಶಿವಯೋಗ

ಪ್ರದೀಪಿಕೆ(ಸಂಸ್ಕೃತ), ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯ ಸಂಪಾದನೆ, ವೈದ್ಯ ವಗೈರೆ, ಶಿವಾನಂದ ಲಹರಿ(ಕರ್ನಾಟಕ ಟೀಕಾ ಸಮೇತ), ಸಿದ್ಧಾಂತ ಶಿಖಾಮಣಿ(ಕರ್ನಾಟಕ ಟೀಕಾಯುಕ್ತ) ಇತ್ಯಾದಿ ಹಸ್ತಪ್ರತಿಗಳನ್ನು ಅಧ್ಯಯನ ಕೇಂದ್ರಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಈ ಹಿನ್ನಲೆಯಲ್ಲಿ ಹಸ್ತಪ್ರತಿ ವಿಭಾಗವು ಅಧ್ಯಯನ ಕೇಂದ್ರದಲ್ಲಿ ರೂಪುಗೊಳ್ಳಲು ಕಾರಣವಾಯಿತು. ಅಂದಿನಿಂದ ಇಂದಿನವರೆಗೆ ಈ ಹಸ್ತಪ್ರತಿ ವಿಭಾಗ ೩೦೦೦ಕ್ಕೂ ಅಧಿಕ ಹಸ್ತಪ್ರತಿಗಳಲ್ಲಿ ೫೦೦೦ಕ್ಕೂ ಹೆಚ್ಚು ಕವಿಕೃತಿಗಳನ್ನು, ೧೫೦೦ಕ್ಕೂ ಹೆಚ್ಚು ಹಸ್ತಪ್ರತಿ ಕಡತಗಳನ್ನು ಹಾಗೂ ತಾಳೆಪ್ರತಿಗಳನ್ನು, ೨೦೦೦ರಿಂದ ೨೨೦೦, ಕಾಗದ ಪ್ರತಿಗಳನ್ನು ೬೦೦, ತಾಮ್ರಪ್ರತಿಗಳು, ೭೦ರಿಂದ ೭೫ ಇವೆ. ಸಚಿತ್ರ ಹಸ್ತಪ್ರತಿಗಳು ೫ರಿಂದ ೬ ಇರುವವು. ಇವುಗಳಲ್ಲದೆ ಬಖೈರು, ನಾಮೆಗಳು, ಮೋಡಿಲಿಪಿ ಇತರೆ ಕಾಗದ ಪ್ರತಿಗಳು ಸಂಗ್ರಹಗೊಂಡಿವೆ.

ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರದಲ್ಲಿ ನಮ್ಮ ಸಾಹಿತ್ಯ ಸಂಸ್ಕೃತಿಯ ಸಾವಿರಾರು ವರ್ಷದ ಇತಿಹಾಸವೇ ಅಡಗಿದೆ ಎಂದರೆ ಅತಿಶಯೋಕ್ತಿಯಲ್ಲ. ಇಲ್ಲಿನ ಹಸ್ತಪ್ರತಿಗಳಲ್ಲಿ ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವೈವಿಧ್ಯಪೂರ್ಣ ವಿವರಗಳು ಕಂಡುಬರುತ್ತವೆ. ಅಂದರೆ ಪ್ರಾಚೀನ ಕರ್ನಾಟಕದ ಸಾಹಿತ್ಯ, ಸಂಗೀತ, ರಾಜಕೀಯ, ಆರ್ಥಿಕ ಸ್ಥಿತಿಗತಿ, ವಿಜ್ಞಾನ, ತಂತ್ರಜ್ಞಾನ, ವಾಸ್ತುಶಿಲ್ಪ, ವೈದ್ಯ, ಆಯುರ್ವೇದ, ಸಂಗೀತ, ಚಿತ್ರಕಲೆ, ನಾಟ್ಯಶಾಸ್ತ್ರ, ಧರ್ಮ ಜ್ಯೋತಿಷ್ಯ, ಖಗೋಳ, ಗಣಿತ ಯಂತ್ರ–ಮಂತ್ರ ಶಕುನ, ನಿಘಂಟು, ಕಾಲಜ್ಞಾನ, ಗೀಗಿ ಪದಗಳು, ಸೋಬಾನೆ ಪದಗಳು, ಖಡ್ಗಶಾಸ್ತ್ರ, ಗಜಶಾಸ್ತ್ರ ಮುಂತಾದ ಜ್ಞಾನಶಾಖೆಗಳಿಗೆ ಸಂಬಂಧಿಸಿದ ಮಾಹಿತಿಗಳು ದೊರೆಯುತ್ತವೆ.

ವಿಶೇಷ ಹಸ್ತಪ್ರತಿಗಳು

ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಕವಿ ಸ್ವಹಸ್ತಾಕ್ಷರ ಪ್ರತಿ ದೊರೆಯುವುದು ದುರ್ಲಭ. ಆದರೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ವಿಭಾಗದಲ್ಲಿ ಮುದ್ದಣನ ಕೈಬರಹದ 'ರಾಮಾಶ್ವಮೇಧ', ಬಸವಪ್ಪಶಾಸ್ತ್ರಿಗಳ ಕೈಬರಹದ ಶಂಕರಶತಕ ಹಸ್ತಪ್ರತಿಗಳು, ಅಪರೂಪದ ಕವಿಗಳ ಅಮೂಲ್ಯವಾದ ಸ್ವಹಸ್ತಾಕ್ಷರ ಕೃತಿಗಳು ಸಂಗ್ರಹಿಸಲ್ಪಟ್ಟಿರುವುದು ವಿಶೇಷ. ಇವುಗಳ ಜೊತೆಗೆ ಏಕೈಕ ಮತ್ತು ಅಪ್ರಕಟಿತ ಹಸ್ತಪ್ರತಿಗಳು ಅನೇಕವಿವೆ. ಅವುಗಳಲ್ಲಿ 'ಚಂದ್ರಮ ಕವಿಯ ಗಣಿತಸಾರ ಕೃತಿ' ಒಂದಾಗಿದೆ.

ಕ್ರಿ.ಶ.೧೫೭೬೩ರ ಬಿಜ್ಜಾವರ ಮಠದಲ್ಲಿದ್ದ ಸಂರಕ್ಷಿತ ಏಕೈಕ ಹಸ್ತಪ್ರತಿಯಾದ 'ಮಲ್ಲಿಕಾರ್ಜುನ ರಾಮಾಯಣ ಸಾರಟೀಕೆ' ಇಂತಹ ಅಪರೂಪದ ಹಸ್ತಪ್ರತಿಗಳು ಈ ಭಂಡಾರದಲ್ಲಿ ಸಂರಕ್ಷಿಸಲ್ಪಟ್ಟಿವೆ. ಇವು ಸಂಗ್ರಹಗೊಂಡಿದ್ದು ಎಸ್. ಶಿವಣ್ಣನವರ ಕಾಲದಲ್ಲಿ. ಇಲ್ಲಿ ಸಂಗ್ರಹಗೊಂಡಿರುವ ಹಸ್ತಪ್ರತಿಗಳು ಕನ್ನಡ, ಸಂಸ್ಕೃತ, ಅರವ, ತಿಗಳಾರಿ, ಮೋಡಿ, ನಾಗರಿ, ತಮಿಳು, ತೆಲುಗು, ಇತ್ಯಾದಿ ಲಿಪಿಯಲ್ಲಿವೆ.

* ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರದಲ್ಲಿ ದೊರೆಯುವ ಹಸ್ತಪ್ರತಿಗಳಲ್ಲಿ ಅತಿ ಚಿಕ್ಕ ಹಸ್ತಪ್ರತಿ ಎಂದರೆ ರಾಮಚಂದ್ರ ಪ್ರಶ್ನಿ ಎಂಬ ಪ್ರಶ್ನಾಶಾಸ್ತ್ರ(ಕೆ.೨೦೮)ಕ್ಕೆ ಸಂಬಂಧಿಸಿದ ಹಸ್ತಪ್ರತಿ. ಇದು ಕೇವಲ ಮೂರು ಇಂಚು ಉದ್ದ ಮಾತ್ರ ಇದೆ. ಇದನ್ನು ಎಂ.ವಿ.

ಸೀತಾರಾಮಯ್ಯನವರು ಅಧ್ಯಯನ ಕೇಂದ್ರಕ್ಕೆ ದಾನವಾಗಿ ನೀಡಿದ್ದಾರೆ ಎಂಬುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

* ಹಾಗೆಯೇ ಅತಿ ಚಿಕ್ಕ ಅಕ್ಷರ ಅಥವಾ ಬರಹದ ಹಸ್ತಪ್ರತಿಯೆಂದರೆ ಚಿಕ್ಕ ಬರೆಹದ ನಿಜಲಿಂಗಯ್ಯ ಬರೆದ ಕೈವಲ್ಯಪದ್ಧತಿ. ಅಂದರೆ ಲಿಪಿಕಾರನ ಹೆಸರಿನ ವಿಶೇಷಣವೇ ಚಿಕ್ಕ ಬರೆಹ ಎಂಬುದು ವಿಶೇಷ
* ಇದೇ ಭಂಡಾರದಲ್ಲಿರುವ ಅತಿ ದೊಡ್ಡ ಹಸ್ತಪ್ರತಿಯೆಂದರೆ ತೆಲುಗು ಭಾಷೆಯಲ್ಲಿರುವ ಪೋತನ ಭಾಗವತ(ಕೆ.೧೪, ೨೪) ಎನ್ನುವ ಹಸ್ತಪ್ರತಿ. ಇದು ಸುಮಾರು ೨೮ ಇಂಚು ಉದ್ದದ ಹಸ್ತಪ್ರತಿಯಾಗಿದೆ.

ಇಲ್ಲಿಯ ಹಸ್ತಪ್ರತಿಯೊಂದರ ಎರಡು ಗರಿಗಳಲ್ಲಿ ಕೊರೆದಿರುವ ಗಣೇಶ ಮೂರ್ತಿ ಬಹಳ ಸೂಕ್ಷ್ಮವಾದ ಅಷ್ಟೇ ಅಪರೂಪ ಚಿತ್ರವಾಗಿದೆ.

ಕೆಲವು ಹಸ್ತಪ್ರತಿಗಳ ಗರಿಗಳಲ್ಲಿ ದೇವಾಲಯದ ಚಿತ್ರಗಳು, ದೇವತೆಗಳು, ಚಿತ್ರಗಳು ಕೊರೆಯಲ್ಪಟ್ಟಿವೆ. ಅದರಲ್ಲಿಯೂ ಗರ್ಭಗುಡಿಯ ವಿನ್ಯಾಸ, ಗರುಡಗಂಬ ಬಿಡಿಸಿರುವುದನ್ನು ಕಾಣಬಹುದು.

ಬಟ್ಟೆಯಿಂದ ತಯಾರಿಸಲ್ಪಟ್ಟಿರುವ ಒಂದು ಅಡಿ ಅಗಲ ಮತ್ತು ಮೂವತ್ತು ಅಡಿ ಉದ್ದದ ಉದ್ಧರಣ ಪಟಲವು ನಾನಾ ವಿಶೇಷತೆಗಳನ್ನು ಹೊಂದಿದೆ.

* ಚಿತ್ರಕಾವ್ಯಕ್ಕೆ ಸಂಬಂಧಿಸಿದ ಒಂದು ಚಿತ್ರಪಟಲವೂ ಇದೆ. ಶಾಲಿವಾಹನ ಶಕ ೧೭೪೯ರಲ್ಲಿ ರಚಿತವಾದ ವೀರಶೈವ ಧರ್ಮಕ್ಕೆ ಸೇರಿದ ಒಂದು ಉದ್ಧರಣ ಪಟಲ ಮನಮೋಹಕವಾಗಿದೆ. ಇವುಗಳ ಜೊತೆಗೆ ಪದಬಂಧ, ಕಲ್ಲಚ್ಚಿನ ಪ್ರತಿಗಳು ಹಾಗೂ ಕಾಗದದ ಪ್ರತಿಗಳೂ ಇಲ್ಲಿವೆ. ಹಾಗಾಗಿ ಈ ಹಸ್ತಪ್ರತಿ ಭಂಡಾರ ವಿಶ್ವವಿದ್ಯಾಲಯಕ್ಕೆ, ಸಂದರ್ಶಕರಿಗೆ ಸಂಶೋಧಕರಿಗೆ, ಗ್ರಂಥಸಂಪಾದನಾಕಾರರಿಗೆ ಪ್ರಮುಖ ಆಕರ್ಷಕ ಕೇಂದ್ರವಾಗಿದೆ.

ಭಂಡಾರದಲ್ಲಿ ಸಂಗ್ರಹಗೊಂಡ ಇತರೆ ದಾಖಲೆಗಳು

ಹಸ್ತಪ್ರತಿಗಳ ಜೊತೆಗೆ ವಿವಿಧ ದಾಖಲು ಸಾಹಿತ್ಯದ ಪ್ರಕಾರಗಳಿಗೆ ಸೇರಿದ ಅಮೂಲ್ಯ ದಾಖಲೆಗಳ ಸಂಗ್ರಹವೂ ಈ ಭಂಡಾರದಲ್ಲಿದೆ. ಕವಲೇದುರ್ಗದ ವೀರಶೈವ ಮಠಕ್ಕೆ ಸೇರಿದ ಸುಮಾರು ೭೩ ತಾಮ್ರಪಟಗಳು ಇಲ್ಲಿವೆ. ಇವುಗಳನ್ನು ಮಠವೇ ಕನ್ನಡ ಅಧ್ಯಯನ ಕೇಂದ್ರಕ್ಕೆ ಜಿ.ಎಸ್.ಎಸ್. ಅವರ ಕಾಲದಲ್ಲಿ ದಾನ ನೀಡಿದೆ. ಇವೆಲ್ಲವೂ ಕೆಳದಿಯ ಅರಸರಿಗೆ ಸೇರಿದವುಗಳಾಗಿವೆ.

ಕೆಳದಿಯ ಶಿವಪ್ಪನಾಯಕ ವೆಂಕಟಾದ್ರಿ ಮುಂತಾದವರು ನೀಡಿದ ದಾನದತ್ತಿ, ನ್ಯಾಯ ತೀರ್ಮಾನವು, ದೇವಾಲಯದ ಮಾನ್ಯ ಇತ್ಯಾದಿ ವಿವರಗಳನ್ನು ಇವು ನೀಡುತ್ತವೆ.

ಕ್ರಿ.ಶ.೮ನೇ ಶತಮಾನಕ್ಕೆ ಸೇರಿದ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಸಂತೆ ಕಲ್ಲಹಳ್ಳಿಯಲ್ಲಿ ದೊರೆತ ಸುಟ್ಟ ಮಣ್ಣಿನ ಮಡಕೆಯ ಚೂರು ಇಲ್ಲಿದೆ. ಇದರ ಮೇಲೆ ಶಾಸನವೂ

ಇರುವುದರಿಂದ ಇಟ್ಟಿಗೆ ಬರಹದ ವಸ್ತುವಾಗಿತ್ತು ಅಥವಾ ಲೇಖನ ಸಾಮಗ್ರಿಯಾಗಿ ಬಳಕೆಯಲ್ಲಿತ್ತು ಎಂಬುದನ್ನು ಇದು ತಿಳಿಸುವುದರಿಂದ ಇದು ತುಂಬಾ ಅಪರೂಪದ ದಾಖಲೆಯಾಗಿದೆ.

ವಿಜಯನಗರ ಅರಸರ ಕಾಲಕ್ಕೆ ಸೇರಿದ ಎರಡು ರಾಜಮುದ್ರೆಗಳು, ಮೈಸೂರು ಒಡೆಯರ ಹಾಗೂ ಬ್ರಿಟಿಷ್ ಅಧಿಕಾರಿಗಳಿಗೆ ಸೇರಿದ ಮತ್ತು ಪೋರ್ಚುಗೀಸರ ಕಾಲದ ಕೆಲವು ನಾಣ್ಯಗಳನ್ನು ಸಹ ಇಲ್ಲಿ ಸಂರಕ್ಷಿಸಿ ಇಡಲಾಗಿದೆ. ಬೆಳಗುತ್ತಿಯ ಮೂರು ಶ್ರೀಮುಖಗಳು, ಕೆಲವು ಸನ್ನದುಗಳನ್ನು ಕೂಡ ಸಂಗ್ರಹಿಸಲಾಗಿದೆ. ಆನೆಗೊಂದಿ ಸಂಸ್ಥಾನಕ್ಕೆ ಸೇರಿದ ಮೋಡಿಲಿಪಿ ಅಥವಾ ಮೋಡಿ ಅಕ್ಷರಗಳಿಂದ ರಚಿತವಾದ ಎರಡು ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದೆ.

ಇವುಗಳ ಜೊತೆಗೆ ೧೮೪೯ಕ್ಕೆ ಸೇರಿದ ಆಂಗ್ಲರ ಕೆಲವು ಪತ್ರಗಳು, ಮೈಸೂರು ಅರಸರಾದ ಕೃಷ್ಣರಾಜ ಒಡೆಯರಿಗೆ ಸೇರಿದ ನಿರೂಪಗಳು, ಕಡತಗಳು, ನಾಮೆಗಳು, ಕೈಫಿಯತ್ತುಗಳು ಮುಂತಾದ ದಾಖಲು ಸಾಹಿತ್ಯದ ಆಕರಗಳನ್ನು ಇಲ್ಲಿ ಸಂಗ್ರಹಿಸಿ ಸಂರಕ್ಷಿಸಲಾಗುತ್ತಿದೆ.

ವರ್ಣನಾತ್ಮಕ ಹಸ್ತಪ್ರತಿಸೂಚಿ

ಹಸ್ತಪ್ರತಿ ವಿಭಾಗದಲ್ಲಿ ದೊರಕುವ ಹಸ್ತಪ್ರತಿಗಳ 'ಸಮಗ್ರ ಮಾಹಿತಿ ಕೋಶದ ಹಸ್ತಪ್ರತಿ ಸೂಚಿಯನ್ನು ಎಸ್.ಶಿವಣ್ಣನವರು ಸಂಪಾದಿಸಿದ್ದಾರೆ. ಇದರಲ್ಲಿ ಒಟ್ಟು ಸುಮಾರು ೪೮೯ ಕೃತಿಗಳ ಕುರಿತ ವಿವರವಾದ ಮಾಹಿತಿ ಇದೆ.

ವಿಭಾಗದ ವಿದ್ವಾಂಸರಿಂದ ಇಲ್ಲಿಯ ಹಸ್ತಪ್ರತಿಗಳ ನೆರವಿನೊಂದಿಗೆ ಸಂಪಾದನೆಗೊಂಡು ಪ್ರಕಟವಾದ ಕೃತಿಗಳು

ನಾಡಿನ ಪ್ರಮುಖ ಸಾಹಿತಿಗಳು ಇಲ್ಲಿಯ ಹಸ್ತಪ್ರತಿಗಳ ನೆರವಿನಿಂದ ಮಹತ್ವದ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳೆಂದರೆ ಚನ್ನಬಸವ ಪುರಾಣ, ಚನ್ನಬಸವಣ್ಣನ ವಚನಗಳು, ಶಂಕರ ದೇವರ ಸ್ವರವಚನಗಳು. ಇವು ಕ್ರಮವಾಗಿ ೧೩೦೮ನೇ ಓಲೆಪ್ರತಿ ೧೦೬೭/೩ ಹಾಗೂ ೧೩೮೮ನೇ ಹಸ್ತಪ್ರತಿಗಳನ್ನು ಆಧರಿಸಿ ಸಂಪಾದಿಸಿ ಪ್ರಕಟಿಸಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟವಾಗಿರುವ ಸಮಗ್ರ ವಚನ ಸಂಪುಟ–೧೧ನ್ನು ಎಸ್. ಶಿವಣ್ಣನವರೇ ಸಂಪಾದಿಸಿಕೊಟ್ಟಿದ್ದಾರೆ.

ಇಲ್ಲಿಯ ಹಸ್ತಪ್ರತಿ ವಿಭಾಗದ ೩ ಓಲೆಯ ಪ್ರತಿಗಳ ಆಧಾರದಿಂದ ತೋಂಟದ ಸಿದ್ಧಲಿಂಗ ಯತಿಗಳ ೭೦೧ ವಚನಗಳು ಪ್ರಕಟಗೊಂಡಿವೆ. ಹಾಗೆಯೇ ೩ ಓಲೆ ಮತ್ತು ಕಾಗದಪ್ರತಿಗಳ ನೆರವಿನಿಂದ ಘನಲಿಂಗಿ ದೇವರ ೬೬ ವಚನಗಳು ಸಂಪಾದನೆಗೊಂಡು ಪ್ರಕಟವಾಗಿವೆ.

ಸ್ವತಂತ್ರ ಸಿದ್ಧಲಿಂಗರ ೪೩೦ ವಚನಗಳು ಹಾಗೂ ಇಮ್ಮಡಿ ಗುರುಸಿದ್ಧಸ್ವಾಮಿಗಳ ೨೦೯ ವಚನಗಳು ಪ್ರಕಟಗೊಂಡಿವೆ. ಅಂದರೆ ಒಟ್ಟು ೧೪೨೩ ವಚನಗಳು ಇಲ್ಲಿಯ ಹಸ್ತಪ್ರತಿಗಳ ನೆರವಿನಿಂದ ಪ್ರಕಟಗೊಂಡಿವೆ.

ಎಸ್. ಶಿವಣ್ಣ ಮತ್ತು ಎಸ್. ವಿದ್ಯಾಶಂಕರ ಅವರು ಸಂಪಾದಿಸಿರುವ ಕೆಂಭಾವಿ ಬೋಗಣ್ಣನ ಸಾಂಗತ್ಯ, ಹಂಪನಾ ಮತ್ತು ಎಸ್. ಶಿವಣ್ಣನವರ ಸಂಪಾದಕತ್ವದಲ್ಲಿ 'ಚಂದ್ರಸಾಗರ ವರ್ಣಿಯ

ಅಪ್ರಕಟಿತ ೧೮ ಕೃತಿಗಳು ಪ್ರಕಟವಾಗಿವೆ. ಹಾಗೆಯೇ ಕಾಮನ ಪದ್ಯ, ಚಾವುಂಡರಾಯ ಯಾಗಕೃತಿ, ಬೆಳಗುಳದ ಮಸ್ತಕಾಭಿಷೇಕ, ಬೆಟ್ಟಧರ್ಮರಾಯನ ಚರಿತೆ, ವಸಂತತಿಲಕಚರಿತೆ, ಪಾರ್ಶ್ವನಾಥ ಪಂಚಕಲ್ಯಾಣ, ಚಂದ್ರಸಾಗರ ಸ್ವಪ್ನ ಜೀವದಯಾಷ್ಟಮಿ ನೋಂಪಿಕೃತಿ, ಕೃಷ್ಣ ಪ್ರತಿಷ್ಠೆ ಚರಿತೆ ವರ್ಣನೆ ಕೃತಿ, ವಸಂತತಿಲಕಚರಿತೆ, ಹಿಮಶೀತಳರಾಮನಕಥೆ, ಆಗಮದೋಗಟೆ ಪದ್ಯಕೃತಿ, ಸಂಸಾರದ ಸುಖಕಷ್ಟ ಮುಂತಾದ ಹಲವಾರು ಕೃತಿಗಳು ಇಲ್ಲಿನ ಹಸ್ತಪ್ರತಿಗಳ ನೆರವಿನಿಂದ ಪ್ರಕಟವಾಗಿವೆ.

ಇವುಗಳ ಜೊತೆಗೆ ಇನ್ನೂ ಹಲವಾರು ಗಮನಿಸಬೇಕಾದ ಮಹತ್ವದ ಕೃತಿಗಳು ಸಂಪಾದನೆಯಾಗಿವೆ. ಅವುಗಳಲ್ಲಿ ಪ್ರಮುಖವಾಗಿರುವವು ಈ ಕೆಳಗಿನಂತಿವೆ.

ಹಂಪನಾ ಅವರು ಸಂಪಾದಿಸಿದ ನಾಗಕುಮಾರ ಷಟ್ಪದಿಯ ಕೃತಿ. ಇದು ಕ್ರಿ.ಶ.೧೮೦೦ರಲ್ಲಿದ್ದ ಕವಿ ಬೊಮ್ಮಣ್ಣನಿಂದ ರಚಿತವಾದ ಕೃತಿಯಾಗಿದೆ.

ಹಾಗೆಯೇ ಹಂಪನಾ ಅವರು ಪ್ರಕಟಿಸಿರುವ ಮಹತ್ವದ ಕೃತಿ ಎಂದರೆ 'ಸಾಳ್ವ ಭಾರತ'. ಇದು ಇಲ್ಲಿ ದೊರೆತ ಏಕೈಕ ಹಸ್ತಪ್ರತಿಯ ನೆರವಿನಿಂದ ಸಂಪಾದನೆಗೊಂಡ ಕೃತಿ. ಕ್ರಿ.ಶ.೧೫೦೦ರಲ್ಲಿ ಬದುಕಿದ್ದ ಕವಿ ಸಾಳ್ವನಿಂದ ರಚಿತವಾದ ೧೬ ಪರ್ವಗಳನ್ನುಳ್ಳ ಕೃತಿ ಇದಾಗಿದೆ.

ಸರ್ಪಭೂಷಣ ಶಿವಯೋಗಿಗಳ 'ಕೈವಲ್ಯಕಲ್ಪವಲ್ಲರಿ' ಸುಮಾರು ೭೬ ಹಾಡುಗಳನ್ನು ಒಳಗೊಂಡ ಕೃತಿಯಾಗಿದೆ.

ಕನ್ನಡ ಅಧ್ಯಯನ ಕೇಂದ್ರವು ಮಾಡಿರುವ ಉತ್ತಮ ಕೆಲಸವೆಂದರೆ ಹೊರಗಿನ ಆಸಕ್ತ ವಿದ್ವಾಂಸರಿಗೂ ಸಹ ಇಲ್ಲಿನ ಹಸ್ತಪ್ರತಿಗಳನ್ನು ಸಂಪಾದನೆಗಾಗಿ, ಪ್ರಕಟಣೆಗಾಗಿ ನೀಡಿದೆ. ಇಲ್ಲಿನ ಹಸ್ತಪ್ರತಿಗಳನ್ನು ಎರವಲಾಗಿ ಪಡೆದು ಮೈಸೂರು ವಿಶ್ವವಿದ್ಯಾನಿಲಯ ಸುಮಾರು ೩೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದೆ. ಹಾಗೆಯೇ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ವಿದ್ವಾಂಸರೂ ಸಹ ಇಲ್ಲಿನ ಹಸ್ತಪ್ರತಿಗಳ ನೆರವಿನಿಂದ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಇತ್ತೀಚೆಗೆ ಕನ್ನಡ ಸಂಸ್ಕೃತಿ ಇಲಾಖೆಯ ಭಾಷಾಭಿವೃದ್ಧಿ ಯೋಜನೆಯ ಅಡಿ ಸುಮಾರು ೨೦ ಹಸ್ತಪ್ರತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯ ಜರೂರಾಗಿ ನಡೆಯುತ್ತಿದೆ.

ಆಗಬೇಕಾದ ಕಾರ್ಯಗಳು

ಈ ಮುಂಚೆ ಎಸ್. ಶಿವಣ್ಣ ಮತ್ತು ಜಿ.ಎಸ್.ಶಿವರುದ್ರಪ್ಪನವರ ನೇತೃತ್ವದಲ್ಲಿ ಬೆಳೆದುಬಂದ ಹಸ್ತಪ್ರತಿ ವಿಭಾಗದ ಸಾಧನೆಯು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕುಲಪತಿಯಾಗಿ ಬಂದ ಡಾ.ಕೆ.ಸಿದ್ಧಪ್ಪನವರ ಗಮನ ಸೆಳೆಯಿತು. ಅವರ ಆಸಕ್ತಿ ಮತ್ತು ಮುಂದಾಲೋಚನೆಯ ಫಲವಾಗಿ ವಿಭಾಗದ ಹಸ್ತಪ್ರತಿ ಸಂಗ್ರಹಾಲಯ ಆಧುನೀಕರಣಗೊಂಡಿತು. ಸುಸಜ್ಜಿತ ಸಂಗ್ರಹಾಲಯವಾಯಿತು. ಹಾಗಾಗಿ ಹಸ್ತಪ್ರತಿಗಳನ್ನು ವಿಶೇಷ ತಂತ್ರಜ್ಞಾನದಿಂದ ತಯಾರಿಸಲಾದ ಪಾರದರ್ಶಕವಾದ ಗಾಜು ಮತ್ತು ಮರದ ಕಪಾಟಿನಲ್ಲಿ ಸಂಗ್ರಹಿಸಡಲಾಯಿತು. ಹಾಗೆಯೇ ಹಸ್ತಪ್ರತಿಗಳಿಗೆ ರಾಸಾಯನಿಕ ಚಿಕಿತ್ಸೆ ನೀಡುವ ವೈಜ್ಞಾನಿಕ ಸಾಧನ ಫ್ಯೂಮಿಗೇಷನ್ ಛೇಂಬರ್(ಪ್ರಧೂಮ ಕಪಾಟು) ಇದೆ. ಹಸ್ತಪ್ರತಿ

ಸಂರಕ್ಷಣೆಗೆ ಬೇಕಾದ ಮಸಿದಾರ, ಕೆಂಪು ಬಟ್ಟೆ ಮತ್ತು ಸಿಟ್ರನಲ್ ಆಯಿಲ್, ಥೈಮೇಲ್, ಸಿಲಿಕಾನ್ ಜೆಲ್‌ಗಳು ಮುಂತಾದ ಆಧುನಿಕ ಸೌಲಭ್ಯಗಳಿವೆ.

೧. ಇವೆಲ್ಲವೂ ಇಂದು ಹಾಳಾಗಿವೆ. ಇನ್ನೂ ಎಷ್ಟೋ ಹಸ್ತಪ್ರತಿಗಳ ಕಟ್ಟು ರಾಶಿರಾಶಿಯಾಗಿ ಮೂಲೆಯಲ್ಲಿ ಒಟ್ಟಲ್ಪಟ್ಟಿವೆ. ಹಾಗಾಗಿ ಜರೂರಾಗಿ ಇನ್ನೂ ಹಲವಾರು ಪಾರದರ್ಶಕ ಗಾಜು ಮತ್ತು ಮರದ ಕಪಾಟುಗಳ ಅವಶ್ಯಕತೆ ಇದೆ.

೨. ರಾಶಿರಾಶಿಯಾಗಿ ಬಿದ್ದಿರುವ ಹಸ್ತಪ್ರತಿ ಕಟ್ಟುಗಳ ವಿಂಗಡಣೆ, ಜೋಡಣೆ, ರಕ್ಷಣೆ ಜರೂರಾಗಿ ಆಗಬೇಕಾಗಿದೆ.

೩. ಹವಾನಿಯಂತ್ರಿತ ಕೊಠಡಿಯಲ್ಲಿ ಮಾತ್ರ ಈ ಹಸ್ತಪ್ರತಿಗಳನ್ನು ಹೆಚ್ಚು ದಿನ ಸಂರಕ್ಷಿಸಬಹುದು. ಹಾಗಾಗಿ ಅದರ ಸೌಲಭ್ಯ ಆದಷ್ಟು ಶೀಘ್ರವಾಗಿ ಆಗಬೇಕಿದೆ.

೪. ಹಸ್ತಪ್ರತಿಗಳಿಗೆ ರಾಸಾಯನಿಕ ಚಿಕಿತ್ಸೆಯಿಂದ ವೈಜ್ಞಾನಿಕವಾದ ಫ್ಯೂಮಿಗೇಷನ್ ಛೇಂಬರ್ (ಪ್ರಧೂಷಣ ಕಪಾಟು) ವ್ಯವಸ್ಥೆ ಅವಶ್ಯವಿದೆ. ಇಲ್ಲವಾದರೆ ಹಸ್ತಪ್ರತಿಗಳಿಗೆ ಹುಳು ಬಿದ್ದು ಬೇಗ ನಾಶವಾಗುತ್ತದೆ.

೫. ಹಸ್ತಪ್ರತಿಗಳ ಗಣಕೀಕರಣ ಮತ್ತು ಮತ್ತೊಂದು ವರ್ಣಾನಾತ್ಮಕ ಹಸ್ತಪ್ರತಿಸೂಚಿ ಆಗಬೇಕಿದೆ.

೬. ವಿಶ್ವವಿದ್ಯಾಲಯ ಇದಕ್ಕಾಗಿ ಪ್ರತ್ಯೇಕ ಅನುದಾನವನ್ನು ನಿಗದಿಗೊಳಿಸಬೇಕಾಗಿದೆ. ಜೊತೆಗೆ ಈ ವಿಭಾಗದಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಸೂಕ್ತ ಭದ್ರತೆ ಒದಗಿಸುವ ಅಗತ್ಯವಿದೆ.

ಇಲ್ಲಿ ಎಸ್. ಶಿವಣ್ಣನವರು ಮಾಡಿದ ಕಾರ್ಯ ಮಹತ್ವಪೂರ್ಣವಾದುದಾಗಿದೆ. ಎಲ್ಲ ಭಾಷೆಗಳ ಹಸ್ತಪ್ರತಿಗಳು ಇಲ್ಲಿವೆ. ಮುದ್ದಣನ ರಾಮೇಶ್ವಮೇಧದ ಸ್ವಹಸ್ತಪ್ರತಿ ಇಲ್ಲಿರುವುದು ಮಹತ್ವದ ಸಂಗತಿಯಾಗಿವೆ. ಎಸ್. ಶಿವಣ್ಣನವರು ಭಂಡಾರದ ವರ್ಣಾನಾತ್ಮಕ ಸೂಚಿ ತಯಾರಿಸುವುದನ್ನು ಬಿಟ್ಟರೇ ಮತ್ತೆ ಯಾವುದೇ ಸೂಚಿ ತಯಾರಿಸುವ ಯೋಜನೆ ವಿಶ್ವವಿದ್ಯಾಲಯ ಹಾಕಿಕೊಂಡಿರುವುದಿಲ್ಲ. ವಿಶ್ವವಿದ್ಯಾಲಯದ ಅನುದಾನದಲ್ಲಿ ಇರುವ ಹಸ್ತಪ್ರತಿಗಳ ಸಂರಕ್ಷಣೆಯ ಕಾರ್ಯ ನಡೆಯುತ್ತಿದೆ. ಆಧುನಿಕ ತಂತ್ರಜ್ಞಾನದಿಂದ ಸಂರಕ್ಷಣೆ ಮಾಡುವ ಯೋಜನೆ ಪ್ರಾರಂಭಿಸುವ ಹಂತದಲ್ಲಿರುವುದು ಕಂಡುಬಂದಿದೆ. ವಿಶ್ವವಿದ್ಯಾಲಯದ ವಿದ್ವಾಂಸರೇ ಸಂಪಾದಿಸಿ ಸಂಶೋಧಿಸಿ ಪ್ರಕಟಿಸಿದ ಕೃತಿಗಳು ೪೦ಕ್ಕೂ ಹೆಚ್ಚು ಇರುವುದನ್ನು ಕಾಣಬಹುದು. ಒಟ್ಟಾರೆ ಪ್ರಸ್ತುತ ಸಂದರ್ಭದಲ್ಲಿ ಈ ಕ್ಷೇತ್ರದಲ್ಲಿ ಆಸಕ್ತರ ಕೊರತೆ ಹಾಗೂ ಸಿಬ್ಬಂದಿಯ ಕೊರತೆಯಿದೆ. ಆದಕಾರಣ ಪ್ರಮುಖವಾಗಿ ಸರಕಾರದ, ವಿದ್ವಾಂಸರ, ಅಧ್ಯಯನಕಾರರ ಹಾಗೂ ಸಂಶೋಧಕರ ಆಸಕ್ತಿ ಮತ್ತು ಪ್ರೋತ್ಸಾಹದ ಅವಶ್ಯಕತೆ ಇದೆ.

೩.೧.೩.೫. ಮಂಗಳೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಗ್ರಂಥಾಲಯ

ಶ್ರೀನಿವಾಸ ಹಾವನೂರ ಅವರು ೧೯೮೭ರ ಏಪ್ರಿಲ್ ತಿಂಗಳಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡರು. ಅವರು ಕನ್ನಡ ವಿಭಾಗದಲ್ಲೇ ವಿಭಾಗೀಯ ಗ್ರಂಥಾಲಯದ ಮೂಲಕ ವಾಙ್ಮಯ

ಮಾಹಿತಿಕೇಂದ್ರವು ಅಧ್ಯಾಪನ, ಸಂಶೋಧನೆಗೆ ಆಕರ ಸಾಮಗ್ರಿಯನ್ನು ಒದಗಿಸುವ ದೃಷ್ಟಿಯಿಂದ ವಿವಿಧ ನೆಲೆಯಲ್ಲಿ ರೂಪುಗೊಂಡಿದೆ. ವಿಭಾಗದ ಅಧ್ಯಾಪಕರು, ವಿದ್ಯಾರ್ಥಿಗಳು, ಸಂಶೋಧಕರ ಸಂಶೋಧನೆಗೆ ಪರಾಮರ್ಶನಕ್ಕೆ ಅನುಕೂಲವಾಗುವಂತೆ ಕನ್ನಡ, ತುಳು ಕೊಡವ ಭಾಷೆ, ಸಾಹಿತ್ಯ, ಇತಿಹಾಸ, ಜಾನಪದ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಕಡತಗಳನ್ನು ತಯಾರಿಸಲಾಗಿದೆ. ಈಗಾಗಲೇ ವಿವಿಧ ವಿಶ್ವವಿದ್ಯಾನಿಲಯಗಳ ವೈಯಕ್ತಿಕ ದಾನಿಗಳ ಉದಾರ ಕೊಡುಗೆಯಿಂದ ವಿಭಾಗೀಯ ಗ್ರಂಥಾಲಯವನ್ನು ಅಭಿವೃದ್ಧಿಪಡಿಸಲಾಗಿದೆ. ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಕಟಗೊಳ್ಳುತ್ತಿದ್ದ ನವಯುಗ, ಸ್ವದೇಶಾಭಿಮಾನಿ, ಕಂಠೀರವ, ಬಾಲಚಂದ್ರ ಮುಂತಾದ ಹಳೆಯ ಪತ್ರಿಕೆಗಳಲ್ಲದೆ, ಸುಮಾರು ೨೦೦ಕ್ಕೂ ಮೇಲ್ಪಟ್ಟು ತಾಡವೋಲೆ ಇತರೆ ಗ್ರಂಥಗಳನ್ನು ಸಂಗ್ರಹಿಸಿರುವುದು ಕಂಡುಬಂದಿದೆ.

ಯೋಜನೆಗಳು: ತಾಡವೋಲೆಗಳ ಸಂಗ್ರಹ, ಸಂರಕ್ಷಣೆ ಮತ್ತು ಪ್ರಕಟಣೆ

ಭಾರತ ಸರ್ಕಾರದ ಸಂಸ್ಕೃತಿ ಇಲಾಖೆ, ನವದೆಹಲಿ, ಇವರಿಂದ ೧೯೮೩-೮೪ನೇ ಸಾಲಿನಲ್ಲಿ ಹಸ್ತಪ್ರತಿ ಸಂರಕ್ಷಣೆ ಯೋಜನೆಗಾಗಿ ಕನ್ನಡ ವಿಭಾಗವು ರೂ.೨೫,೦೦೦/- ಆರ್ಥಿಕ ನೆರವನ್ನು ಪಡೆಯಿತು. ಈ ಯೋಜನೆಯಲ್ಲಿ ವಿಭಾಗದ ಅಧ್ಯಾಪಕರ ವಿದ್ಯಾರ್ಥಿಗಳ ನೆರವಿನಿಂದ ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಮನೆಗಳಿಂದ ಸುಮಾರು ೮೫ ತಾಡವೋಲೆ ಗ್ರಂಥಗಳನ್ನು ಮತ್ತು ಕನ್ನಡದ ಪ್ರಮುಖ ಕವಿಗಳ ಕೈಬರಹದ ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದೆ.

ಸಂಗ್ರಹಿಸಿದ ತಾಡವೋಲೆಗಳನ್ನು ಉಡುಪಿಯ ಎಂ.ಜಿ.ಎಂ. ಕಾಲೇಜು ನಿವೃತ್ತ ಪ್ರಾಧ್ಯಾಪಕರಾದ ಎಂ.ರಾಜಗೋಪಾಲಾಚಾರ್ಯ ಅವರಲ್ಲಿ ಓದಿಸಿ ಅವುಗಳ ವಿವರಗಳನ್ನು ದಾಖಲಿಸಿಕೊಳ್ಳಲಾಗಿದೆ. ಜೊತೆಗೆ ತಾಡವೋಲೆಗಳ ಸಂರಕ್ಷಣೆಗೆ ಬೇಕಾದ ಎಲ್ಲ ಏರ್ಪಾಟುಗಳನ್ನು ಮಾಡಲಾಗಿದೆ.

ಸಂಗ್ರಹಿತ ತಾಡವೋಲೆಗಳು

ಕನ್ನಡ ಭಾಷೆ ಲಿಪಿಯ ೧೭ ತಾಡವೋಲೆಗಳು

ತುಳು ಭಾಷೆ ಲಿಪಿಯ ೩ ತಾಡವೋಲೆಗಳು

ಸಂಸ್ಕೃತ ಭಾಷೆ ತುಳು ಲಿಪಿಯ ೬೩ ತಾಡವೋಲೆಗಳು

ಸಂಸ್ಕೃತ ಭಾಷೆ ಕನ್ನಡ ಲಿಪಿಯ ೨ ತಾಡವೋಲೆಗಳು

ಇವುಗಳಲ್ಲಿ ಪಶ್ಚಿಮ ಕರಾವಳಿಯ ಮಧ್ಯಕಾಲೀನ ಸಾಂಸ್ಕೃತಿಕ ವಿವರಗಳನ್ನು ತಿಳಿಸುವ 'ಗ್ರಾಮ ಪದ್ಧತಿ' ಮತ್ತು ಕ್ರಿ.ಶ.೧೭ನೇ ಶತಮಾನದಲ್ಲಿ ತುಳು ಭಾಷೆ, ಲಿಪಿಯಲ್ಲಿ ಬರೆದಿರುವ 'ಶ್ರೀ ಭಾಗವತೋ ಮಹಾಕಾವ್ಯ' ಪ್ರಮುಖವಾಗಿರುವುದು ಕಾಣಬಹುದು.

ಕೈಬರಹದ ಹಸ್ತಪ್ರತಿಗಳು

ಮಂಜೇಶ್ವರ ಗೋವಿಂದ ಪೈಗಳು ಬರೆದಿರುವ ಇತಿಹಾಸವನ್ನು ಕುರಿತ ಅಪ್ರಕಟಿತ ಲೇಖನಗಳು

ಯರ್ಮುಂಜೆ ರಾಮಚಂದ್ರ ಅವರ ಕೈಬರಹದ ಪತ್ರಿಕೆಗಳು

ಪಂಜೆ ಮಂಗೇಶರಾಯ ಅವರ ಕೈಬರಹದ ಪತ್ರಿಕೆಗಳು

ಪಂಜೆ ಮಂಗೇಶರಾಯರ ಅಪ್ರಕಟಿತ ಪಠ್ಯಕ್ರಮಗಳು

ಎಂ.ಎನ್. ಕಾಮತರ ಅಪ್ರಕಟಿತ ಕವನಗಳು

ಕೊಡವ ಕುಲಾಚಾರ ಮತ್ತು ಅಪ್ಪಚ್ಚು ಕವಿಯ ಆತ್ಮಚರಿತ್ರೆ ಇತ್ಯಾದಿ ಪ್ರಕಟಣೆಗಳು ಗಮನಾರ್ಹ.

೧. ೧೭ನೇ ಶತಮಾನದಲ್ಲಿ ರಚಿತವಾದುದೆಂದು ಗುರುತಿಸಲಾದ ತುಳು ಭಾಷೆ ಲಿಪಿಯಲ್ಲಿ ಬರೆದ ವಿಷ್ಣು ತುಂಗ ವಿರಚಿತ 'ಶ್ರೀ ಭಾಗವತೋ' ಎಂಬ ತುಳುವಿನ ಮೊದಲ ಮಹಾಕಾವ್ಯವನ್ನು ಪ್ರಕಟಿಸಲಾಯಿತು. ಶ್ರೀನಿವಾಸ ಹಾವನೂರ ಅವರು ಆರಂಭಿಸಿದ ಈ ಪ್ರಕಟಣೆಯ ಕೆಲಸವನ್ನು ಬಿ.ಎ.ವಿವೇಕ ರೈ ಅವರು ಮುಗಿಸಿದ್ದಾರೆ.

ಶ್ರೀ ವಿಷ್ಣು ತುಂಗ ವಿರಚಿತ 'ಶ್ರೀ ಭಾಗವತೋ': ಸಂಪಾದಕರು ವೆಂಕಟರಾಜ ಪುಣಿಂಚಿತ್ತಾಯ ೧೯೮೪, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ.

೨. ಭಾರತ ಸರಕಾರದ ಪತ್ರಾಗಾರ ಇಲಾಖೆ, ನವದೆಹಲಿ ಇವರಿಂದ ೧೯೮೫-೮೬ನೇ ಸಾಲಿನಲ್ಲಿ 'Listing Cataloguing, evalvation and publication of Manuscript' ಯೋಜನೆಯಲ್ಲಿ ಕನ್ನಡ ವಿಭಾಗವು ರೂ.೨೫,೦೦೦/-ಗಳ ಆರ್ಥಿಕ ನೆರವನ್ನು ಪಡೆಯಿತು. ಈ ಯೋಜನೆಯಲ್ಲಿ ಒಟ್ಟು ೧೦೦ ತಾಡವೋಲೆಗಳನ್ನು ಓದಿಸುವ, ಮೌಲ್ಯಮಾಪನಗೊಳಿಸುವ ಮತ್ತು ಪ್ರಕಟಣೆಯ ಕೆಲಸವನ್ನು ಕೈಗೊಳ್ಳಲಾಯಿತು.

ಮೌಲ್ಯಮಾಪನಗೊಳಿಸಿದ ತಾಡವೋಲೆಗಳು

ಕನ್ನಡ ಭಾಷೆ ಲಿಪಿಯ ೧೭ ತಾಡವೋಲೆಗಳು

ಸಂಸ್ಕೃತ ಭಾಷೆ ನಂದಿನಾಗರಿ ಲಿಪಿಯ ೨೨ ತಾಡವೋಲೆಗಳು

ಸಂಸ್ಕೃತ ಭಾಷೆ ಕನ್ನಡ ಲಿಪಿಯ ೮ ತಾಡವೋಲೆಗಳು

ಸಂಸ್ಕೃತ ಭಾಷೆ ತುಳು ಲಿಪಿಯ ೫೮ ತಾಡವೋಲೆಗಳು

ಇವುಗಳಲ್ಲಿ ತೊರವೆ ರಾಮಾಯಣ, ಜೈಮಿನಿ ಭಾರತ, ಕನ್ನಡ ಭಾಗವತ, ಕನ್ನಡ ಭಾರತ, ಕುಮಾರವ್ಯಾಸ ಭಾರತ ಕಾವ್ಯಗಳಲ್ಲದೆ ಯಕ್ಷಗಾನ ಪ್ರಸಂಗಗಳಿಂದ ಕುಶಲವರ ಕಾಳಗ, ಒಡ್ಡೋಲಗ ಲವಕುಶರ ಕಾಳಗ, ಗ್ರಂಥಗಳು ಪ್ರಮುಖವಾಗಿವೆ.

ಪ್ರಕಟಣೆಗಳು

'ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡ ಕವಿ ಕಡೆಂಗೋಡ್ಲು ಶಂಕರಭಟ್ಟರ ಅಪ್ರಕಟಿತ ಕೃತಿಗಳ ಸಮಗ್ರ ಸಂಪುಟವನ್ನು(ಕಡೆಂಗೋಡ್ಲು ಸಾಹಿತ್ಯ- ಕಡೆಂಗೋಡ್ಲು ಶಂಕರಭಟ್ಟರ ಅಪ್ರಕಟಿತ ಕೃತಿಗಳ ಸಮಗ್ರ ಸಂಪುಟ: ಸಂ. ಬಿ.ಎ. ವಿವೇಕ ರೈ ೧೯೮೭, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ) ಈ ಯೋಜನೆಯಲ್ಲಿ ಪ್ರಕಟಿಸಲಾಯಿತು. ಸುಮಾರು ೮೦೦ ಪುಟಗಳ ಈ ಗ್ರಂಥದಲ್ಲಿ ಕಡೆಂಗೋಡ್ಲು ಅವರ ಅಪ್ರಕಟಿತ ಕವನ ಕಥೆ, ನಾಟಕ, ಕಾದಂಬರಿಯನ್ನು ಪ್ರಕಟಿಸಲಾಗಿದೆ.

ಪ್ರಸ್ತುತ ಆಧುನಿಕ ಉಪಕರಣಗಳ ಆರ್ಥಿಕ ಸಂಕಷ್ಟ ಹಾಗೂ ಆಸಕ್ತರ ಕೊರತೆಯನ್ನು ಗ್ರಂಥಾಲಯ ಅನುಭವಿಸುತ್ತಿರುವುದನ್ನು ಕಾಣಬಹುದು'.[೯]

೩.೧.೩.೬. ಕನ್ನಡ ವಿಶ್ವವಿದ್ಯಾಲಯ, ಹಂಪಿ(ಹಸ್ತಪ್ರತಿಶಾಸ್ತ್ರ ವಿಭಾಗ)

೧೯೯೧ ಅಕ್ಟೋಬರ್ ೨೩ರಂದು ಕರ್ನಾಟಕದ ಶೈಕ್ಷಣಿಕ-ಸಾಂಸ್ಕೃತಿಕ ಲೋಕದಲ್ಲಿ ಒಂದು ಮಹತ್ವದ ದಿನವಾಗಿದೆ. ಅಂದು ಕನ್ನಡ-ಕನ್ನಡಿಗ ಕರ್ನಾಟಕ ಸಮಗ್ರ ಸಂಸ್ಕೃತಿಯ ಶೋಧ ಮತ್ತು ಪ್ರಸಾರಗಳಿಗಾಗಿ ಕನ್ನಡ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದಿತು. ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾಗಿದ್ದ ಚಂದ್ರಶೇಖರ ಕಂಬಾರ ಅವರ ಹಲವು ಕನಸುಗಳ ಫಲವಾಗಿ ವಿಶ್ವವಿದ್ಯಾಲಯದಲ್ಲಿ ವಿನೂತನ ವಿಭಾಗಗಳು ತಲೆಯೆತ್ತಿದ್ದವು. ಅವುಗಳಲ್ಲಿ ೧೯೯೬ರಲ್ಲಿ ಆರಂಭವಾದ ಹಸ್ತಪ್ರತಿ ವಿಭಾಗವು ಪ್ರಮುಖವಾದುದು. ಅದರ ಒಂದು ಅಂಗ 'ಹಸ್ತಪ್ರತಿ ಭಂಡಾರ'.

ಪ್ರಾರಂಭದ ದಿನಗಳಲ್ಲಿ ಒಬ್ಬ ಪ್ರಾಧ್ಯಾಪಕರೊಂದಿಗೆ ಕಾರ್ಯ ನಿರ್ವಹಿಸಿದ ಈ ವಿಭಾಗ ಈಗ ಪೂರ್ಣ ಪ್ರಮಾಣದ ಸಿಬ್ಬಂದಿಯನ್ನು ಹೊಂದಿದೆ. ಎ.ವಿ.ನಾವಡ ಅವರು ಪ್ರಾಧ್ಯಾಪಕರು, ಪ್ರವಾಚಕರಾಗಿ ವೀರೇಶ ಬಡಿಗೇರ, ಎಫ್.ಟಿ.ಹಳ್ಳಿಕೇರಿ, ಅಧ್ಯಾಪಕರಾಗಿ ಎಸ್.ಎಸ್.ಅಂಗಡಿ, ಕೆ.ರವೀಂದ್ರನಾಥ ಮತ್ತು ಎಸ್.ಆರ್. ಚನ್ನವೀರಪ್ಪ ಅವರು ವಿಭಾಗದ ಬೆಳವಣಿಗೆಗಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮುಖ್ಯವಾಗಿ ಹಸ್ತಪ್ರತಿಗಳ ಸರ್ವೇಕ್ಷಣೆ, ಸಂಗ್ರಹಣೆ, ಸೂಚೀರಚನೆ, ಸಂಪಾದನೆ, ಅಧ್ಯಯನ ಮತ್ತು ಪ್ರಕಟಣೆ ಎಂಬ ಆರು ಹಂತಗಳಲ್ಲಿ ಇಲ್ಲಿ ಕಾರ್ಯ ಪೂರೈಸಲಾಗುತ್ತಿದೆ. ೧೯೯೮ರಲ್ಲಿ ಕುಲಪತಿಗಳಾಗಿ ಬಂದ ಎಂ.ಎಂ.ಕಲಬುರ್ಗಿಯವರು ಈ ವಿಭಾಗಕ್ಕೆ ಸ್ಪಷ್ಟವಾದ ಸ್ವರೂಪವನ್ನು ಹಾಕಿಕೊಟ್ಟರು. ಅಲ್ಲದೆ ಜನವರಿ ೪, ೧೯೯೯ರಂದು ನಡೆದ ನುಡಿಹಬ್ಬದ ಸಂದರ್ಭದಲ್ಲಿ ಅಂದಿನ ಸ್ಥಳೀಯ ಶಾಸಕರಾದ ಜಿ. ಶಂಕರಗೌಡ ಅವರಿಂದ ಸುಸಜ್ಜಿತವಾದ ಹಸ್ತಪ್ರತಿ ಭಂಡಾರವು ವಿಧ್ಯುಕ್ತವಾಗಿ ಉದ್ಘಾಟನೆಗೊಂಡಿತು. ಇಂದಿಗೂ ನಾಡಿನ ವಿದ್ವಾಂಸರು, ಸಂಶೋಧಕರು ಅಧ್ಯಯನಕಾರರ ಸಹಾಯ ಸಹಕಾರದಿಂದ ಇಂದಿಗೂ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಮತ್ತು ಸಂಶೋಧನ ಕಾರ್ಯ ವ್ಯಾಪಕವಾಗಿ ನಡೆಯುತ್ತಿದೆ.

ಕಾರ್ಯಚಟುವಟಿಕೆ

ಈಗ ವಿಭಾಗಕ್ಕೆ ಇಪ್ಪತ್ತರ ಪ್ರಾಯ. ಕರ್ನಾಟಕದಲ್ಲಿರುವ ಹಸ್ತಪ್ರತಿಗಳ ಸಂಗ್ರಹ, ಸಂಪಾದನೆ ಅಧ್ಯಯನ, ಸೂಚೀಕರಣ, ಗಣಕೀಕರಣ ಮತ್ತು ಪ್ರಕಟಣೆ ಎನ್ನುವ ವಿವಿಧ ಹಂತದ ಕಾರ್ಯಚಟುವಟಿಕೆಯ ಸ್ವರೂಪವನ್ನು ಹಸ್ತಪ್ರತಿಶಾಸ್ತ್ರ ವಿಭಾಗವು ಒಳಗೊಂಡಿದೆ. ಇದಲ್ಲದೆ ವಿಚಾರಸಂಕಿರಣ, ಹಸ್ತಪ್ರತಿ ಸಮ್ಮೇಳನ, ಹಸ್ತಪ್ರತಿ ತರಬೇತಿ ಶಿಬಿರ, ಹಳಗನ್ನಡ ಬೋಧನಾ ತರಬೇತಿ ಶಿಬಿರ, ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ, ವಿಶೇಷ ಉಪನ್ಯಾಸಗಳು, ಹಳೆಯ ಹೊನ್ನು, ಹಸ್ತಪ್ರತಿ ಅಧ್ಯಯನ ಪತ್ರಿಕೆ(ಅರ್ಧವಾರ್ಷಿಕ) ಇತ್ಯಾದಿ ರಚನಾತ್ಮಕ ಕಾರ್ಯಯೋಜನೆಗಳನ್ನು ಹಮ್ಮಿಕೊಂಡಿದೆ. ನಿರ್ಜೀವ ಆಕರಗಳಂತೆ ಬಳಕೆಯಾಗುತ್ತಿದ್ದ ಹಸ್ತಪ್ರತಿಗಳನ್ನು ಸಮಕಾಲೀನ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ತಾಂತ್ರಿಕ ಸವಾಲುಗಳೊಂದಿಗೆ ಪುನಾರಚಿಸುವ ಕೆಲಸವನ್ನು ಯಶಸ್ವಿಯಾಗಿ

ಮಾಡುತ್ತ ಬರಲಾಗಿದೆ. ವಿಭಾಗವು ಇಲ್ಲಿಯವರೆಗೆ ಒಟ್ಟು ಆರು ವರ್ಣಾನಾತ್ಮಕ ಹಸ್ತಪ್ರತಿಸೂಚಿಗಳು ೧೩ ಹಸ್ತಪ್ರತಿ ವ್ಯಾಸಂಗಗಳು, ೨೦ಕ್ಕೂ ಹೆಚ್ಚು ಅಪ್ರಕಟಿತ ಹಾಗೂ ಉಪೇಕ್ಷಿತ ಸಾಹಿತ್ಯ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಲಾಗಿದೆ.

ಹಸ್ತಪ್ರತಿ ಸೂಚಿಸಂಪುಟ-೧: ೧ರಿಂದ ೪೦೦ ಕಟ್ಟುಗಳಲ್ಲಿ ೭೩ ಕನ್ನಡ ಕೃತಿಗಳ ವಿವರಗಳಿವೆ. ಈ ಕೃತಿಯ ಸಂಪಾದಕರು: ಎಫ್.ಟಿ.ಹಳ್ಳಿಕೇರಿ ಹಾಗೂ ಕೆ. ರವೀಂದ್ರನಾಥ.

ಹಸ್ತಪ್ರತಿಸೂಚಿ ಸಂಪುಟ-೨: ೪೦೦ರಿಂದ ೮೦೦ ಕಟ್ಟುಗಳಲ್ಲಿ ೫೪೫ ಕೃತಿಗಳನ್ನು ಒಳಗೊಂಡಿದೆ. ಇದರ ಸಂಪಾದಕರು ವೀರೇಶ ಬಡಿಗೇರ ಹಾಗೂ ಎಸ್.ಆರ್. ಚನ್ನವೀರಪ್ಪ.

ಹಸ್ತಪ್ರತಿಸೂಚಿ ಸಂಪುಟ-೩: ೮೦೧ರಿಂದ ೧೨೦೦ ಕ್ರಮಾಂಕದ ಕಟ್ಟುಗಳಲ್ಲಿ ಅಡಕಗೊಂಡಿರುವ ೯೯೫ ಕನ್ನಡ ಕೃತಿಗಳ ವಿವರಣಾತ್ಮಕ ಸೂಚಿಯನ್ನೊಳಗೊಂಡಿದೆ. ಸಂಸ್ಕೃತ ಕೃತಿಗಳ ಸೂಚಿಯನ್ನು ಪ್ರತ್ಯೇಕ ಸಂಪುಟಗಳಲ್ಲಿ ಪ್ರಕಟಿಸಲಾಗುವುದರಿಂದ ಅಂಥ ಕೃತಿಗಳನ್ನು ಕೈ ಬಿಟ್ಟು ಕೇವಲ ಕನ್ನಡ ಕೃತಿಗಳ ಸೂಚಿಯನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಇದರ ಸಂಪಾದಕರು: ಎಫ್.ಟಿ.ಹಳ್ಳಿಕೇರಿ ಹಾಗೂ ಕೆ. ರವೀಂದ್ರನಾಥ.

ಹಸ್ತಪ್ರತಿಸೂಚಿ ಸಂಪುಟ-೪: ಇದರಲ್ಲಿ ೧೨೦೧ರಿಂದ ೧೬೦೦ ಕಟ್ಟುಗಳಲ್ಲಿ ೫೭೫ ಕೃತಿಗಳನ್ನು ಗರ್ಭೀಕರಿಸಿಕೊಂಡಿದೆ. ಇಲ್ಲಿ ಸಹ ಕನ್ನಡ ಕೃತಿಗಳಿಗೆ ಪ್ರಾಮುಖ್ಯತೆ ಕೊಟ್ಟಿರುವುದು. ಹೀಗೆ ೧ರಿಂದ ೫೭೫ರವರೆಗಿನ ಸೂಚಿ ಕನ್ನಡ ಕೃತಿಗಳ ಅನುಬಂಧಗಳು ಈ ರೀತಿ ವಿಭಜಿಸಲಾಗಿದೆ.

೧. ಕವಿಸೂಚಿ-೪೩೭

೨. ಸ್ಥಳನಾಮ ಸೂಚಿ-೪೪೨

೩. ಲಿಪಿಕಾರರ ಸೂಚಿ-೪೪೪

೪. ಬರೆಸಿದವರ ಸೂಚಿ-೪೪೫

೫. ದಾನಿಗಳ ಸೂಚಿ-೪೪೬ ಇರುವುದನ್ನು ಕಾಣಬಹುದು.

ಹಸ್ತಪ್ರತಿಸೂಚಿ ಸಂಪುಟ-೫: ಎಂ.ಆರ್.ಸಿ/ಎಂ.ಸಿ.ಸಿ.ಯಿಂದ ಸಂಗ್ರಹಿಸಿದ ಹಸ್ತಪ್ರತಿ ಭಂಡಾರದಲ್ಲಿರುವ ೨,೪೦೦ರಿಂದ ೨,೮೦೦ರ ವರೆಗಿನ ಕಟ್ಟುಗಳ ೬೬೮ ಕೃತಿಗಳನ್ನು ಇದು ಒಳಗೊಂಡಿದೆ. ಇಲ್ಲಿ ಕನ್ನಡ ಕೃತಿಗಳಿಗೆ ಮಾತ್ರ ಪ್ರಾಮುಖ್ಯತೆ ಕೊಟ್ಟಿರುವ ಈ ಸಂಪುಟವು ಅಷ್ಟೂ ಕೃತಿಗಳ ವಿವರಣಾತ್ಮಕ ಸೂಚಿಯನ್ನು ಒಳಗೊಂಡಿದೆ. 'ಸ್ವರೂಪದ ದೃಷ್ಟಿಯಿಂದ ಹೇಳುವುದಾದರೆ ಮೊದಲು ಕೃತಿ ಪರಿಚಯ ಮಾಡಿ, ನಂತರ ಪ್ರತಿ ಪರಿಚಯ ಮಾಡಲಾಗಿದೆ.' ಇದನ್ನು ಮಧ್ಯದಲ್ಲಿ ಚುಕ್ಕೆ(*) ಬಳಸುವ ಮೂಲಕ ಬೇರ್ಪಡಿಸಲಾಗಿದೆ.[೧೦]

ಪ್ರಸ್ತುತ ಸಂಗ್ರಹದ ಭೌಗೋಳಿಕ ವ್ಯಾಪ್ತಿ ಬಳ್ಳಾರಿ, ಕೊಪ್ಪಳ, ಬೆಳಗಾವಿ, ಬಾಗಲಕೋಟೆ, ರಾಯಚೂರು, ಗುಲ್ಬರ್ಗಾ ಹಾಗೂ ಗದಗ ಜಿಲ್ಲೆಗಳಿಗೆ ಸೀಮಿತವಾಗಿದೆ. ಈ ಜಿಲ್ಲೆಗಳ ಸಾಂಸ್ಕೃತಿಕ ಅನುಭವ ಭಿನ್ನವಾದದ್ದು. ಈ ಭಾಗದಲ್ಲಿ ದೊರೆತ ವೈವಿಧ್ಯಮಯವಾದ ಹಸ್ತಪ್ರತಿಗಳಿಂದಲೇ ಈ ಸಂಗತಿಯು ವೇದ್ಯವಾಗುತ್ತದೆ. ಈ ಹಸ್ತಪ್ರತಿಗಳ ವೈಶಿಷ್ಟ್ಯಗಳೆಂದರೆ ಇವು ಶರಣರು ಹಾಗೂ

ವೀರಶೈವ ಧರ್ಮ ಹಾಗೂ ಸಿದ್ಧಾಂತಗಳಿಗೆ ಸಂಬಂಧಿಸಿದವು. ಕರಣಹಸಿಗೆ, ಮಿಶ್ರಾರ್ಪಣ, ಪಂಚೀಕರಣ, ಹಿರಿಯ ಮಂತ್ರಗೋಪ್ಯ, ಷಟ್ಸ್ಥಲಜ್ಞಾನ ಸಾರಾಮೃತ, ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ, ವಿವೇಕ ಚಿಂತಾಮಣಿ, ಚಾಮರಸನ ಪ್ರಭುಲಿಂಗಲೀಲೆ ಈ ಕೃತಿಗಳು ಬಹುಸಂಖ್ಯೆಯಲ್ಲಿ ದೊರೆತಿವೆ. ಇದರಿಂದ 'ವೀರಶೈವ ಮಠೀಯ ಪರಂಪರೆಯ ಪ್ರಾಬಲ್ಯವನ್ನು ಈ ಸಂಪುಟದಲ್ಲಿ ಗುರುತಿಸಲಾಗಿದೆ.'

ಇಲ್ಲಿನ ಹೆಚ್ಚಿನ ಸಂಗ್ರಹಗಳು ಮಧ್ಯಕಾಲೀನ ಸಂದರ್ಭದ ಪಠ್ಯಗಳೇ ಆಗಿವೆ. ವಚನಕಾರರ ಪ್ರಯುಕ್ತ ಬಯಲಿಗೆ ಬಂದ ಬಹುಭಾಷಿಕವಾದ ಬಹುರೂಪಿ ಕಥನ ಮಾದರಿಗಳು ಇಲ್ಲಿ ಸಂಗ್ರಹಿಸಲಾಗಿದೆ.

ಹಸ್ತಪ್ರತಿ ಭಂಡಾರದಲ್ಲಿ ಕನ್ನಡದ ಜೊತೆಗೆ ತೆಲುಗು, ತಮಿಳು, ಸಂಸ್ಕೃತ, ಮರಾಠಿ, ಮಲಯಾಳಿ ಹಸ್ತಪ್ರತಿಗಳು ಇವೆ.

ವಿಭಾಗದ ಪ್ರಾಧ್ಯಾಪಕರು ವೈಯಕ್ತಿಕ ಹಾಗೂ ಸಾಂಸ್ಥಿಕ ಎಂಬ ಎರಡು ರೀತಿಯ ಯೋಜನೆಯನ್ನು ನಿರ್ವಹಿಸುತ್ತಾರೆ. ಜಿಲ್ಲಾವಾರು ಹಸ್ತಪ್ರತಿ ಸರ್ವೇಕ್ಷಣೆ, ಸಂಗ್ರಹ, ಸೂಚೀರಚನೆ, ಇದು ವಿಭಾಗದ ಸಾಂಸ್ಥಿಕ ಯೋಜನೆ. ಇದಲ್ಲದೆ ಪ್ರತಿಯೊಬ್ಬ ಪ್ರಾಧ್ಯಾಪಕರು ವೈಯಕ್ತಿಕ ಯೋಜನೆಯನ್ನು ತೆಗೆದುಕೊಂಡು ಪೂರೈಸಿದ್ದಾರೆ. ಈಗಾಗಲೇ ವಿಭಾಗವು ೪೮ಕ್ಕೂ ಹೆಚ್ಚು ವೈಯಕ್ತಿಕ ಯೋಜನೆಗಳು ಪ್ರಕಟವಾಗಿವೆ.

ಪ್ರಾಧ್ಯಾಪಕರ ವೈಯಕ್ತಿಕ ಯೋಜನೆ ಹಸ್ತಪ್ರತಿ ಭಂಡಾರದಲ್ಲಿಯ ಅಪ್ರಕಟಿತ ಹಸ್ತಪ್ರತಿಗಳನ್ನು ಪ್ರಕಟಿಸುವ ಹಿನ್ನೆಲೆಯಲ್ಲಿ ಈಗಾಗಲೇ ೩೫ಕ್ಕೂ ಹೆಚ್ಚು ಮಹತ್ವದ ಕೃತಿಗಳು ಪ್ರಕಟಿತವಾಗಿವೆ. ಕನ್ನಡ ದಾಖಲು ಸಾಹಿತ್ಯ, ಬಸವಯುಗದ ವಚನೇತರ ಸಾಹಿತ್ಯ, ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ, ಹಳೆಯ ಲಾವಣಿಗಳು, ಹಸ್ತಪ್ರತಿಗಳ ಭಾಷಿಕ ಅಧ್ಯಯನ, ಸ್ವರವಚನ ತರಂಗಳಂಥ ಕೃತಿಗಳು ಹಾಗೂ ಬಸವಕಲ್ಪಧ್ರುವಂ ಎಂಬ ಕೃತಿಗಳನ್ನು ಪ್ರಕಟಿಸಿದೆ.

ಹಸ್ತಪ್ರತಿಶಾಸ್ತ್ರ ವಿಭಾಗವು ವರ್ಷದಿಂದ ವರ್ಷಕ್ಕೆ ಸಾಹಿತ್ಯದ ಸಾಧನೆಯು ಉತ್ತಮ ರೀತಿಯಲ್ಲಿ ಕೈಗೊಂಡಿರುವುದನ್ನು ಕಾಣಬಹುದು. ಇಡೀ ದೇಶದಲ್ಲೇ ಹಸ್ತಪ್ರತಿಗಳಿಗಾಗಿ ಇರುವ ಪ್ರತ್ಯೇಕ ವಿಭಾಗ ಇದಾಗಿದೆ. ಇಂತಹ ವಿಭಾಗಕ್ಕೆ ನಾಡಿನ ವಿದ್ವಾಂಸರು, ಆಸಕ್ತರ ಹಾಗೂ ಅಧ್ಯಯನಕಾರರ ಸಹಕಾರ ಅತ್ಯಗತ್ಯವಾಗಿ ಬೇಕಾಗಿದೆ.

೩.೨. ಅರೆಸರಕಾರಿ ಹಸ್ತಪ್ರತಿ ಭಂಡಾರಗಳು

ನಾಡಿನ ಅಮೂಲ್ಯ ಸಂಪತ್ತುಗಳಾದ ಹಸ್ತಪ್ರತಿಗಳ ಹಾಗೂ ಸಂಗ್ರಹ ಮತ್ತು ಸಂರಕ್ಷಣೆಗಾಗಿ, ಇನ್ನಿತರ ಕಾರ್ಯ ಚಟುವಟಿಕೆಗಳಿಗೆಗಾಗಿ ಸರಕಾರದ ಜೊತೆಗೆ ಖಾಸಗಿ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕೈಗೊಂಡ ಕಾರ್ಯ ಮೆಚ್ಚುವಂತದ್ದಾಗಿದೆ.

ನಾಡಿನ ಹಲವು ಸಂಘ ಸಂಸ್ಥೆಗಳು ಹಸ್ತಪ್ರತಿಗಳ ಕಾರ್ಯ ಚಟುವಟಿಕೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಕ್ಷೇತ್ರದ ಅನುಭವಿ ತಜ್ಞರ ನೇತೃತ್ವದಲ್ಲಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಸಂಸ್ಥೆಗಳು ಪ್ರತಿ ವರ್ಷಕ್ಕೆ ಹಾಗೂ ಐದು ವರ್ಷಕ್ಕೆ ಒಮ್ಮೆ ನಿರ್ದಿಷ್ಟ ಕ್ರಿಯಾಯೋಜನೆಯನ್ನು ರೂಪಿಸಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುತ್ತದೆ. ಸರಕಾರವು ಸೂಕ್ತ

ತಜ್ಞರಿಂದ ಅವಲೋಕಿಸಿ 'ಉತ್ತಮ ಯೋಜನೆ' ಎಂದು ಅನುಮೋದಿಸಿದ ಬಳಿಕವೇ ಸರಕಾರ ಅನುದಾನವನ್ನು ಮಂಜೂರು ಮಾಡುತ್ತದೆ. ಇದರಿಂದ ಸಂಸ್ಥೆಗಳು ಹಸ್ತಪ್ರತಿಗಳಿಗೆ ಸಂಬಂಧಿಸಿದ ಕಾರ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಕೆಲವೇ ಕೆಲವು ಸಂಘ ಸಂಸ್ಥೆಗಳು ಅನುದಾನವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಂಡು ಉತ್ತಮವಾಗಿ ಯೋಜನೆಯನ್ನು ಪೂರೈಸುತ್ತಿವೆ. ಆದರೆ ಕೆಲವು ಸಂಘ ಸಂಸ್ಥೆಗಳು ಸರಕಾರದ ಅನುದಾನವನ್ನು ದುರುಪಯೋಗ ಮಾಡಿಕೊಳ್ಳುತ್ತಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದ ಸಂಗತಿಯಾಗಿದೆ.

ಸರಕಾರದ ಅನುದಾನವನ್ನು ಬಳಸಿಕೊಂಡು ಹಸ್ತಪ್ರತಿ ಕ್ಷೇತ್ರದ ಕಾರ್ಯ ಚಟುವಟಿಕೆ ಕೈಗೊಂಡಿರುವ ಸಂಘ/ಸಂಸ್ಥೆಗಳು ಈ ಕೆಳಗಿನಂತಿವೆ.

೧. ಕೆಳದಿ ವಸ್ತುಸಂಗ್ರಹಾಲಯ – ಕೆಳದಿ

೨. ಬಿ.ಎಂ.ಶ್ರೀ. ವಸ್ತುಸಂಗ್ರಹಾಲಯ – ಬೆಂಗಳೂರು

೩. ಕರ್ನಾಟಕ ಇತಿಹಾಸ ಸಂಶೋಧನೆ ಮಂಡಳಿ – ಧಾರವಾಡ

೪. ಚಿತ್ರದುರ್ಗ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಗಂಡುಗಲಿ ಮ್ಯೂಸಿಯಂ – ಚಿತ್ರದುರ್ಗ

೫. ಕನ್ನಡ ಸಾಹಿತ್ಯ ಪರಿಷತ್ತು – ಬೆಂಗಳೂರು

೬. ಸಿದ್ಧಲಿಂಗೇಶ್ವರ ಸಂಸ್ಕೃತ ಮತ್ತು ವೇದ ಪಾಠಶಾಲೆ – ತುಮಕೂರು

೭ ಸಂಸ್ಕೃತ ಸಂಶೋಧನೆ ಕೇಂದ್ರ – ಮೇಲುಕೋಟೆ

೮. ಕರ್ನಾಟಕ ವಿದ್ಯಾವರ್ಧಕ ಸಂಘ – ಧಾರವಾಡ

೯. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ– ಗದಗ

೧೦. ಅನಾಥ ಸೇವಾಶ್ರಮ ಟ್ರಸ್ಟ್ – ಮಲ್ಲಾಡಿಹಳ್ಳಿ

ಮೇಲಿನ ಎಲ್ಲಾ ಸಂಸ್ಥೆಗಳು ಹಾಗೂ ಇನ್ನಿತರ ಹಲವು ಸಂಸ್ಥೆಗಳು ಹಸ್ತಪ್ರತಿಗಳ ಕಾರ್ಯ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಅವುಗಳಲ್ಲಿ ಕೆಲವು ಸಂಸ್ಥೆಗಳ ಕಾರ್ಯ ಚಟುವಟಿಕೆಯ ವಿವರಣೆಯನ್ನು ಕೆಳಗಿನಂತೆ ಗಮನಿಸಬಹುದು.

೩.೨.೧. ಕೆಳದಿ ವಸ್ತುಸಂಗ್ರಹಾಲಯ–ಕೆಳದಿ

ಕಲೆ, ಸಾಹಿತ್ಯ, ಸಂಸ್ಕೃತಿಗಳ ಬೀಡಾಗಿದ್ದ ಕೆಳದಿ ಸಂಸ್ಥಾನವು ಹೈದರಾಲಿಯ ದಾಳಿಗೆ ಸಿಕ್ಕಿ ತನ್ನಲ್ಲಿದ್ದ ಅಮೂಲ್ಯ ಹಸ್ತಪ್ರತಿ ಭಂಡಾರವನ್ನು ಕಳೆದುಕೊಂಡಿತ್ತು. ಅಳಿದುಳಿದ ತಾಡೋಲೆ ಹಸ್ತಪ್ರತಿಗಳು, ಕಡತಗಳು, ಇತರ ಐತಿಹಾಸಿಕ ಮೌಲ್ಯವುಳ್ಳ ಪುರಾತನ ಅವಶೇಷಗಳು ಅಲ್ಲಲ್ಲಿ ಚದುರಿ ಹಾಳಾಗುವುದನ್ನು ತಪ್ಪಿಸಿ ಅವುಗಳನ್ನು ಕಲೆಹಾಕಿ ರಕ್ಷಿಸುವ ಉದ್ದೇಶದಿಂದ ೧೯೭೮ರಲ್ಲಿ ಕೆಳದಿ ಪ್ರಾಚ್ಯವಸ್ತು ಮತ್ತು ಇತಿಹಾಸ ಸಂಶೋಧನಾ ಸಂಸ್ಥೆ ಜನ್ಮ ತಾಳಿತು.

ಸ್ವಂತ ಪರಿಶ್ರಮ, ದುಡಿಮೆ ಹಾಗೂ ವಿದ್ವತ್ತಿನಿಂದ ಅದುವರೆಗೆ ಸಂಗ್ರಹಿಸಿ ರಕ್ಷಿಸಿಕೊಂಡು ಬಂದಿದ್ದ ಅಮೂಲ್ಯ ಹಸ್ತಪ್ರತಿಗಳ ಸಂಗ್ರಹಗಳನ್ನು ಕೆಳದಿ ಗುಂಡಾಜೋಯಿಸರು ಈ ಸಂಸ್ಥೆಗೆ

ದೇಣಿಗೆಯಾಗಿ ನೀಡಿದರು. ವಸ್ತುಸಂಗ್ರಹಾಲಯವು ಪ್ರಾರಂಭದಲ್ಲಿ ಸಣ್ಣ ಕೋಣೆಯಲ್ಲಿತ್ತು. ನಂತರ ಭಾರತೀಯ ಸಮುದ್ರ ಸಂಶೋಧಕ ಶ್ರೇಷ್ಠರಾದ ಎಸ್.ಆರ್. ರಾವ್ ಅವರ ಅಧ್ಯಕ್ಷತೆಯಲ್ಲಿ ವಿಶ್ವಸ್ಥ ಸಮಿತಿಯು ರಚನೆಯಾಯಿತು. ಜೋಯಿಸರು ದಾನವಾಗಿ ನೀಡಿದ ನಿವೇಶನದಲ್ಲಿ ಕರ್ನಾಟಕ ಸರಕಾರವು ಪ್ರಾಚ್ಯ ವಸ್ತು ಇಲಾಖೆಯ ಮೂಲಕ ಹೊಸ ಕಟ್ಟಡ ನಿರ್ಮಿಸಿಕೊಟ್ಟಿತು. ಅಂದಿನಿಂದ ಅದು ತನ್ನ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳುತ್ತಾ ಬಂದಿದೆ. ಹೊಸ ಕಟ್ಟಡವನ್ನು ಆಗಿನ ಮುಖ್ಯಮಂತ್ರಿಗಳಾಗಿದ್ದ ಎಂ.ವೀರಪ್ಪ ಮೊಯಿಲಿಯವರು ಉದ್ಘಾಟಿಸಿದರು. ೧೯೯೫ರಲ್ಲಿ ಕುವೆಂಪು ವಿಶ್ವವಿದ್ಯಾಲಯವು ಈ ಸಂಸ್ಥೆಗೆ ಸಂಶೋಧನಾ ಕೇಂದ್ರವೆಂದು ಮಾನ್ಯತೆ ನೀಡಿ ವಿಲೀನಗೊಳಿಸಿಕೊಂಡಿತ್ತು.

೨. ಹಸ್ತಪ್ರತಿಗಳ ಸಂಗ್ರಹ

ಕೆಳದಿ ವಸ್ತು ಸಂಗ್ರಹಾಲಯದಲ್ಲಿರುವ ಒಟ್ಟು ಹಸ್ತಪ್ರತಿಗಳು ೪೦೦೦ಕ್ಕಿಂತ ಹೆಚ್ಚಾಗಿವೆ. ಇವುಗಳಲ್ಲಿ ತಾಡೋಲೆಗೆ ವಿಶಿಷ್ಟ ಸ್ಥಾನವಿದೆ. ಇದರ ಜೊತೆಗೆ ಕಾಗದ ಹಸ್ತಪ್ರತಿ, ಇತಿಹಾಸ ದಾಖಲೆ, ಪತ್ರಗಳು ಸೇರುತ್ತವೆ. ಕನ್ನಡ, ತೆಲುಗು, ಸಂಸ್ಕೃತ, ತಮಿಳು, ತಿಗಳಾರಿ ಭಾಷೆಗಳ ಸುಮಾರು ೧೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳಿವೆ. ಸಾಹಿತ್ಯ, ಕಲೆ, ಧರ್ಮ, ಚರಿತ್ರೆ, ಜ್ಯೋತಿಷ್ಯ, ಖಗೋಳ, ವೇದ, ಗಣಿತಶಾಸ್ತ್ರಗಳಿಗೆ ಸಂಬಂಧಿಸಿದ ಅಪರೂಪದ ತಾಡೋಲೆ ಹಸ್ತಪ್ರತಿಗಳು ಸಾಂಸ್ಕೃತಿಕ ಮಹತ್ವವನ್ನು ಹೊಂದಿರುವುದು ಗಮನಾರ್ಹ.

ಸಂಸ್ಕೃತ ಸಾಹಿತ್ಯದ ಜಯಸೇನ ಕವಿಯು 'ಗೀತಗೋವಿಂದ' ಕೃತಿಗೆ ಟಿಪ್ಪಣಿ ಬರೆದರು. ಇದರೊಂದಿಗೆ ಸಂದೇಹ ಭೇದಿಕಾ ಎಂಬ ಗ್ರಂಥ ಮಹತ್ವವಾದದು. ಸಂಸ್ಕೃತ ವ್ಯಾಕರಣಕ್ಕೆ ಸಂಬಂಧಿಸಿದಂತೆ ಸಂಗೀತ ಚೂಡಾಮಣಿ, ಪದವೃತ್ತಿ ಸಹಿತವಾದ 'ಅವಕೋಶದ ಪ್ರತಿ', ಭರತನ ನಾಟ್ಯಶಾಸ್ತ್ರದಲ್ಲಿ ತಾಳೋತ್ಪತ್ತಿ, ಜ್ಯೋತಿಷ್ಯ, ಖಗೋಳ ಕುರಿತು ಅಷ್ಟಕ ವರ್ಗೋಧ್ಯಾಯ, ಗಾಳಿಫಲ, ಆಯುರ್ವೇದವನ್ನು ಕುರಿತು ಅಜರಾಮರತ್ವ, ಆಯುರ್ವೇದ ಭಸ್ಮ, ವ್ರಣವೇದ್ಯ, ನಾಡಿನ ನಿಧಾನ ಆಯುರ್ವೇದ ಗಿಡ ಮೂಲಿಕೆಗಳು ಮೊದಲಾದ ಹಸ್ತಪ್ರತಿಗಳು ಸೇರಿವೆ.

ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಜನಪ್ರಿಯ ರಾಮಾಯಣ, ಮಹಾಭಾರತ, ಜೈಮಿನಿ ಭಾರತ, ಕುಮಾರವ್ಯಾಸ ಭಾರತ, ದಾಸಸಾಹಿತ್ಯ, ತರಂಗ ಭಾರತ ಕುರಿತ ಹಸ್ತಪ್ರತಿಗಳು ಅಲ್ಲದೇ ಅಪರೂಪದ ಕಳಲೆ ನಂಜರೂಪ ಕವಿಯ 'ಬದಿರಾಚಲ ಮಹಾತ್ಮ', ನಳಚಕ್ರವರ್ತಿಕಥೆ, ಬಸವಪುರಾಣ, ಗಿರಿಜಾ ಸಂವಾದ, ಶಬರಶಂಕರವಿಲಾಸ, ಮೊದಲಾದ ವೀರಶೈವ ಧರ್ಮಕ್ಕೆ ಸಂಬಂಧಿಸಿದ ಕೃತಿಗಳು ಹಾಗೂ ಅನೇಕ ಹರಿದಾಸ ಪದಗಳು, ಕೆಳದಿ ವೆಂಕಣ್ಣನ ಕೀರ್ತನೆಗಳು, ಕೆಳದಿ ಲಿಂಗಣ್ಣನ ಕೃತಿಗಳ ಹಸ್ತಪ್ರತಿಗಳು ತುಂಬಾ ಮಹತ್ವದ್ದಾಗಿವೆ. ಸರ್ವಜ್ಞನ ಮಾತಾ ಪಿತೃವಿನ ಅಂಕಿತವಿರುವ ತ್ರಿಪದಿಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ವಿಶಿಷ್ಟವಾಗಿವೆ.

ವಿಶೇಷ ಹಸ್ತಪ್ರತಿ: ಕೆಳದಿಯಲ್ಲಿ ಸಹಜವಾಗಿಯೇ ಯಕ್ಷಗಾನಕ್ಕೆ ಸಂಬಂಧಿಸಿದ ಹಸ್ತಪ್ರತಿಗಳು ವಿಶೇಷವಾಗಿ ದೊರತಿವೆ.

ಅಭಿಮನ್ಯು ಕಾಳಗ, ಕನಕಾಂಗಿ ಕಲ್ಯಾಣ, ಶ್ರೀಕೃಷ್ಣಾರ್ಜುನರ ಕಾಳಗ, ಶ್ರೀ ಕೃಷ್ಣ ಚಾರಿತ್ರ್ಯ, ಸೋಮಶೇಖರ ಕಥಾಕಾವ್ಯ ಇತ್ಯಾದಿ ಹಸ್ತಪ್ರತಿಗಳು ಉಲ್ಲೇಖನಾರ್ಹ. ಹೀಗೆ ಇತಿಹಾಸ ದಾಖಲೆಗಳಲ್ಲಿ ರಾಜಾರಾಮನು ಕೆಳದಿಯ ಮೂರನೆಯ ರಾಜಧಾನಿ ನಗರಗಳಲ್ಲಿ ನಿರ್ಮಿಸಿದ ಪಾರ್ವತಿ ದೇವಾಲಯಕ್ಕೆ ಸಂಬಂಧಿಸಿದ ದಾಖಲೆ, ಕೆಳದಿ ಚನ್ನಮ್ಮಾಜಿಯ ಶಿವಮೊಗ್ಗ ಸಮೀಪ ಗಾಜನೂರಿನ ಹತ್ತಿರ ನಿರ್ಮಿಸಿದ ಕುಸ್ಕೂರು ಅಗ್ರಹಾರ ಕುರಿತಾದ ದಾಖಲೆಗಳು, ಜಯಚಾಮರಾಜೇಂದ್ರ ಒಡೆಯರ್, ಸರ್ ಮಿರ್ಜಾ ಇಸ್ಮಾಯಿಲ್, ಸರ್.ಎಂ.ವಿಶ್ವೇಶ್ವರಯ್ಯ, ರಾಜಗೋಪಾಲಾಚಾರ್ಯ, ಪೀಟರ್ ಮಂಡಿ, ಪಿತ್ತೋಡಲ್ಲಾವಲ್ಲೆ ಮೊದಲಾದವರ ಪತ್ರಗಳು, ದಾಖಲೆಗಳು, ಇತಿಹಾಸದ ಮೇಲೆ ಹೊಸಬೆಳಕನ್ನು ಚೆಲ್ಲಲು ಸಹಕಾರಿಯಾಗಿವೆ. ಇದರಿಂದ ಪ್ರಾಚೀನ ಜ್ಞಾನ ಪರಂಪರೆ ಸಂರಕ್ಷಣೆ ಕಾರ್ಯದಲ್ಲಿ ಕೀರ್ತಿ ಹೊಂದಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಈ ಸಂಗ್ರಹಾಲಯದಲ್ಲಿ ಸುಮಾರು ೧೫೦ಕ್ಕೂ ಹೆಚ್ಚು ಕಡತಗಳು ಇರುವುದನ್ನು ಕಾಣಬಹುದು (ಕವತಿದುರ್ಗಾಮಠ ಹಾಗೂ ಕಳಸ ದೇವಾಲಯದ ಕಡತಗಳು).

ಸಂಶೋಧನಾ ಮಾಹಿತಿ: ಕೆಳದಿ ವಸ್ತುಸಂಗ್ರಹಾಲಯದದಿಂದ ಅನೇಕ ದೇಶಿಯ ಹಾಗೂ ವಿದೇಶಿ ವಿದ್ವಾಂಸರು ತಮ್ಮ ಸಂಶೋಧನೆಗಾಗಿ ಮಾಹಿತಿಯನ್ನು ಪಡೆದುಕೊಂಡಿದ್ದಾರೆ. ಕೆಲವರು ಸಂಶೋಧನಾಲಯದ ಸಹಾಯದಿಂದ ಪಿಎಚ್.ಡಿ ಪದವಿಯನ್ನು ಪಡೆದುಕೊಂಡಿರುವರಲ್ಲದೇ ತಮ್ಮ ಸಂಶೋಧನಾ ಲೇಖನ ಪ್ರಕಟಣೆಗಳಿಗೆ ಈ ವಸ್ತುಸಂಗ್ರಹಾಲಯದ ಸಹಕಾರ ಪಡೆದುಕೊಂಡಿದ್ದಾರೆ.

ಕೆಳದಿ ವಸ್ತುಸಂಗ್ರಹಾಲಯದಲ್ಲಿ ಆಧುನಿಕ ತಂತ್ರಜ್ಞಾನದ ಮೂಲಕ ಗಣಕಯಂತ್ರ ಹಾಗೂ ಸ್ಕ್ಯಾನಿಂಗ್ ಇನ್ನಿತರ ತಂತ್ರಜ್ಞಾನಗಳನ್ನು ಅಳವಡಿಸಲಾಗಿದೆ. ಜೊತೆಗೆ ಭಂಡಾರದಲ್ಲಿ ಹೆಚ್ಚಾಗಿ ತಿಗಳಾರಿ ಹಸ್ತಪ್ರತಿಗಳು ಇರುವುದರ ಜೊತೆಗೆ ಮಲೆನಾಡಿನ ಸುತ್ತ ಮುತ್ತ ಕ್ಷೇತ್ರಕಾರ್ಯದ ಮೂಲಕ ವಿವಿಧ ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದೆ. ಸಂಗ್ರಹಾಲಯಕ್ಕೆ ಸುಮಾರು ಶೇ.೮೦ರಷ್ಟು ಹಸ್ತಪ್ರತಿಗಳನ್ನು ಗುಂಡಾಜೋಯಿಸರು ದಾನವಾಗಿ ನೀಡಿದ್ದಾರೆ. ಇನ್ನುಳಿದ ಶೇ.೨೦ರಷ್ಟು ವಿವಿಧ ವ್ಯಕ್ತಿಗಳಿಂದ ಸಂಸ್ಥೆ ಹಾಗೂ ಮಠಗಳಿಂದ ಸಂಗ್ರಹಿಸಲಾಗಿದೆ.

ವಸ್ತುಸಂಗ್ರಹಾಲಯದ ಪ್ರಕಟಣೆಗಳು

೧. ಕೆಳದಿ ವಸ್ತುಸಂಗ್ರಹಾಲಯದ ಹಸ್ತಪ್ರತಿಸೂಚಿ(ಕನ್ನಡ ಆಂಗ್ಲ ಭಾಷೆಯಲ್ಲಿ)

೨. ತಿಗಳಾರಿ ಹಸ್ತಪ್ರತಿಸೂಚಿ

೩. ಶೃಂಗೇರಿ ಮಠದ ಹಸ್ತಪ್ರತಿಸೂಚಿ(ಕನ್ನಡ)

೪. ಶೃಂಗೇರಿ ಮಠದಲ್ಲಿನ ಕೆಳದಿ ದಾಖಲೆಗಳು(ಕನ್ನಡ)

೫. ಕಳಸ ದೇವಾಲಯದ ಕಡತಗಳ ಸೂಚಿ

೬. ಕವಲೇದುರ್ಗ ಮಠದ ಕಡತಗಳ ಸೂಚಿ

ಇನ್ನಿತರ ಹಲವು ಗ್ರಂಥಗಳನ್ನು ಪ್ರಕಟಿಸಲಾಗಿದೆ. ಕೆಲವು ಹಸ್ತಪ್ರತಿಗಳು ಪ್ರಕಟಣೆಗೆ ತಯಾರಿಯಾಗುತ್ತಿವೆ. ಒಟ್ಟಾರೆ ಸಂಗ್ರಹಾಲಯದಲ್ಲಿ ಉತ್ತಮ ರೀತಿಯ ಕಾರ್ಯಯೋಜನೆ ಸಂರಕ್ಷಣೆ ಹಾಗೂ ಪ್ರಕಟಣೆ ಮಾಡಲಾಗುತ್ತಿದೆ. ಇದಕ್ಕೆ ಕಾರಣ ವೆಂಕಟೇಶ ಜೋಯಿಸರ ಆಸಕ್ತಿ ಹಾಗೂ ಮುಂದಾಲೋಚನಾಕ್ರಮದಿಂದ, ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಮನಗಾಣಬಹುದಾಗಿದೆ.

ಗಣ್ಯವ್ಯಕ್ತಿಗಳ ಅಭಿಪ್ರಾಯ

ಮ್ಯಾಗ್ಸೆಸೆ ಪ್ರಶಸ್ತಿ ವಿಜೇತರಾದ ಕೆ.ವಿ.ಸುಬ್ಬಣ್ಣನವರು ಬಹಳ ಅಚ್ಚುಕಟ್ಟಾಗಿ ಮತ್ತು ಶಾಸ್ತ್ರೀಯವಾಗಿ ಸಂಗ್ರಹಣೆ – ಪ್ರದರ್ಶನ ಮಾಡಿರುವ ಈ ಸ್ಥಳೀಯ ಮ್ಯೂಸಿಯಂ ನೋಡಿ ಸಂತಸವಾಗಿದೆ. ಇಂತಹ ಕಿರು ಮ್ಯೂಸಿಯಂಗಳು ನಿಜವಾಗಿ ದೊಡ್ಡ ಮ್ಯೂಸಿಯಂಗಳಿಗಿಂತ ತುಂಬಾ ಉಪಯುಕ್ತ. ಈ ಕಾರ್ಯಕ್ಕಾಗಿ ಅಭಿನಂದನೆ ಹೇಳುವೆ ಎಂದು ಮಾಹಿತಿ ಪುಸ್ತಕದಲ್ಲಿ ದಾಖಲಿಸಿದ್ದಾರೆ.

ಪುಟ್ಟಣ್ಣ ಕಣಗಾಲ್(ಚಲನಚಿತ್ರ ನಿರ್ದೇಶಕರು)

ಕೆಳದಿ ಅರಸರ ಕಾಲದ ನಾಡಿನ ಸಂಪತ್ತು ಶೌರ್ಯ, ಸಾಹಸಗಳ ಬಗ್ಗೆ ನನಗೆ ಹೆಚ್ಚಿನ ಅರಿವು ಮೂಡಿಸಿತು ಎಂದಿದ್ದಾರೆ.

ಚಂದ್ರಶೇಖರ ಕಂಬಾರ(ಹಿರಿಯ ಸಾಹಿತಿ)

ವಸ್ತುಸಂಗ್ರಹಾಲಯ ಚೆನ್ನಾಗಿದೆ. ನೋಡಿ ತುಂಬಾ ಪ್ರಭಾವಿತನಾದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ವೀರೇಂದ್ರ ಹೆಗ್ಗಡೆ, ಧರ್ಮಸ್ಥಳ

ಮೆಚ್ಚುಗೆಯ ಕೆಲಸ– ಶ್ರೀ ಮಂಜುನಾಥನು ಅವರಿಗೆ ಒಳ್ಳೆಯದು ಮಾಡಲಿ ಎಂದು ಹಾರೈಸಿದ್ದಾರೆ.

ಇನ್ನಿತರ ನಾಡಿನ ಅನೇಕ ಗಣ್ಯ ಸಾಹಿತಿಗಳು, ವಿಜ್ಞಾನಿಗಳು, ರಾಜಕಾರಣಿಗಳು, ಮ್ಯೂಸಿಯಂಗೆ ಭೇಟಿ ನೀಡಿ ಮ್ಯೂಜಿಯಂನ ಕಾರ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

೩.೨.೨. ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು

ಕನ್ನಡದ ಕಣ್ವ, ನವೋದಯ ಸಾಹಿತ್ಯದ ಆಚಾರ್ಯ, ಯುಗಪ್ರವರ್ತಕ ಬಿ.ಎಂ.ಶ್ರೀಕಂಠಯ್ಯನವರ ಹೆಸರಿನಲ್ಲಿ ಅವರ ಶಿಷ್ಯರಾದ ಎಂ.ವಿ.ಸೀತಾರಾಮಯ್ಯನವರು ಸ್ಥಾಪಿಸಿದ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ರಾಷ್ಟ್ರಕವಿ ಕುವೆಂಪು ಅವರಿಂದ ೧೯೭೦ರಲ್ಲಿ ವಿಧ್ಯುಕ್ತವಾಗಿ ಉದ್ಘಾಟನೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಪ್ರತಿಷ್ಠಾನದ ಗೌರವಾಧ್ಯಕ್ಷರಾಗಿ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ನಿಟ್ಟೂರು ಶ್ರೀನಿವಾಸರಾಯರು ಸಂಸ್ಥೆಯ ಅಭಿವೃದ್ಧಿಗೆ ನಿರಂತರ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ. ಹೆಸರಾಂತ ಸಾಹಿತಿಗಳಾದ ಎಲ್.ಎಸ್.ಶೇಷಗಿರಿರಾಯರು ಪ್ರತಿಷ್ಠಾನದ ಕಾರ್ಯಾಧ್ಯಕ್ಷರಾಗಿ

ಗಣನೀಯ ಕಾರ್ಯವನ್ನು ನಿರ್ವಹಿಸಿದ್ದಾರೆ. ಇವರಾದ ಮೇಲೆ ಎನ್. ಬಸವಾರಾಧ್ಯರು ಕಾರ್ಯಾಧ್ಯಕ್ಷರಾಗಿ ಒಂಬತ್ತು ವರ್ಷಗಳ ಕಾಲ ಭವನದ ನಿರ್ಮಾಣ ಕಾರ್ಯ ಪೂರೈಸಿದ್ದಾರೆ.

ಈ ಸಂಸ್ಥೆಯ ಹಸ್ತಪ್ರತಿ ಭಂಡಾರ ಸಂಸ್ಥಾಪಕ ಎಂ.ವಿ. ಸೀತಾರಾಮಯ್ಯನವರ ಬಳಿ ಇದ್ದ ಮೂವತ್ತು ಹಸ್ತಪ್ರತಿಗಳಿಂದ ಆರಂಭವಾಗಿ ಸಂಸ್ಥೆಯ ಮೂವತ್ತು ವರ್ಷಗಳ ಅವಿರತ ಪ್ರಯತ್ನದಿಂದ ಇಂದು ಮೂರು ಸಾವಿರ ಹಸ್ತಪ್ರತಿಗಳುಳ್ಳ ಸುಸಜ್ಜಿತ ಭಂಡಾರವಾಗಿದೆ.

ವಿಶೇಷ ಹಸ್ತಪ್ರತಿ

ಭಂಡಾರದಲ್ಲಿ ಹಲವು ಅಮೂಲ್ಯ ಹಸ್ತಪ್ರತಿಗಳಿವೆ. ಅವುಗಳಲ್ಲಿ ಇಲ್ಲಿರುವ ಹಸ್ತಪ್ರತಿಗಳಲ್ಲೇ ಅತ್ಯಂತ ಉದ್ದವಾದ ಹಸ್ತಪ್ರತಿ ಸಂರಕ್ಷಿಸಿದೆ. ಅದೆಂದರೆ ಶ್ರೀಮದ್ಭಾಗವತ ಭಾವಾರ್ಥ ದೀಪಿಕಾ', ಶ್ರೀ ಹರೀಯ ವ್ಯಾಖ್ಯಾನ' ಇದು ಓಲೆಗರಿಯ ಹಸ್ತಪ್ರತಿಯಾಗಿದ್ದು ಇದುವರೆಗೆ ದೊರೆತಿರುವ ಹಸ್ತಪ್ರತಿಗಳಲ್ಲೆಲ್ಲ ಅತ್ಯಂತ ಉದ್ದದ ಹಸ್ತಪ್ರತಿಯಾಗಿದೆ. ಇದರ ಉದ್ದ ಸರಿಯಾಗಿ ೩ ಅಡಿ ಇದ್ದು ೫ ಸೆಂ.ಮೀ. ಅಗಲವಿದೆ. ಅತ್ಯಂತ ಸ್ಫುಟವಾದ ಬರವಣಿಗೆಯಾಗಿದ್ದು ಸಂಸ್ಕೃತ ಭಾಷೆ, ನಾಗರಿ ಲಿಪಿಯಲ್ಲಿದೆ. ಪ್ರತಿ ಗರಿಯಲ್ಲಿ ಸರಾಸರಿ ೯ ಸಾಲುಗಳಿದ್ದು ಪ್ರತಿ ಸಾಲಿನಲ್ಲಿ ೧೯೫ ಅಕ್ಷರಗಳಿವೆ. ಸದ್ಯದ ಮಟ್ಟಿಗೆ ಕರ್ನಾಟಕದ ಹಸ್ತಪ್ರತಿ ಭಂಡಾರಗಳಲ್ಲಿರುವ ಹಸ್ತಪ್ರತಿಗಳಲ್ಲೆಲ್ಲ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿರುವ ಈ ಹಸ್ತಪ್ರತಿಯೇ ಅತ್ಯಂತ ಉದ್ದವಾದ ಹಸ್ತಪ್ರತಿಯಾಗಿದೆ. ಇಂತಹ ಅಮೂಲ್ಯ ಹಸ್ತಪ್ರತಿಗಳನ್ನು ಸಂರಕ್ಷಿಸುವ ಹೊಣೆ ನಮ್ಮೆಲ್ಲರದಾಗಿದೆ. ಉದ್ದನೆಯ ಹಸ್ತಪ್ರತಿ ಯಾರ ಗಮನಕ್ಕೂ ಬಂದಿಲ್ಲ.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಅದರ ಸಂಸ್ಥಾಪಕರಾದ ಎಂ.ವಿ.ಸೀತಾರಾಮಯ್ಯನವರ ಮನೆಯಲ್ಲಿಯೇ ಕಾರ್ಯ ನಿರ್ವಹಿಸುತ್ತಿತ್ತು. ಆಮೇಲೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಮನೆಯಲ್ಲಿ ಸ್ವಲ್ಪಕಾಲವಿದ್ದು, ತರುವಾಯ ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಗೆ ಸೇರಿಸಲಾಯಿತು. ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಸ್ವಂತ ಕಟ್ಟಡ ಇರಲಿಲ್ಲ. ಎಂ.ವಿ.ಸೀತಾರಾಮಯ್ಯನವರು ಸಂಸ್ಥೆಯ ಕಟ್ಟಡಕ್ಕಾಗಿ, 'ನರಸಿಂಹರಾಜ ಕಾಲೋನಿಯಲ್ಲಿ ಬೆಂಗಳೂರು ನಗರ ಪಾಲಿಕೆಯಿಂದ ಎರಡು ನಿವೇಶನಗಳನ್ನು ಸ್ವಾಧೀನಪಡಿಸಿಕೊಂಡರು. ಎಂ. ವೀರಪ್ಪ ಮೊಯಿಲಿ ಅವರು ಮುಖ್ಯಮಂತ್ರಿ ಗಳಾಗಿದ್ದಾಗ ಈ ನಿವೇಶನದಲ್ಲಿ ನಿರ್ಮಾಣಗೊಳ್ಳಲಿರುವ ಶ್ರೀ ಭವನದ ಶಂಕುಸ್ಥಾಪನೆಯನ್ನು ಪರಮಪೂಜ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿಗಳು ಅಂದು ನೆರವೇರಿಸಿಕೊಟ್ಟರು. ಶ್ರೀಗಳವರು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಮಹಾಪೋಷಕರು. ಬಿ.ಎಂ.ಶ್ರೀ. ಅವರ ಹುಟ್ಟೂರಾದ ಬೆಳ್ಳೂರಿನಲ್ಲಿ ಮಂಡ್ಯ ಜಿಲ್ಲಾ ಪರಿಷತ್ತಿನ ವತಿಯಿಂದ ಕೆ. ಸಿಂಗಾರಿಗೌಡರು ಅಧ್ಯಕ್ಷರಾಗಿದ್ದಾಗ ನಿರ್ಮಾಣವಾದ ಶ್ರೀ ಭವನದ ಉದ್ಘಾಟನಾ ಕಾರ್ಯವನ್ನು ಶ್ರೀಗಳವರಿಂದ ನೆರವೇರಿಸಲಾಗಿದೆ.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ಸಂವರ್ಧನೆಗೆ ಮೀಸಲಾದ ಸಂಸ್ಥೆ. ಪ್ರಧಾನವಾಗಿ ಸಂಶೋಧನೆಗೆ ಸಂಬಂಧಿಸಿದ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ.

ದೇಶದಲ್ಲಿ ಹಾಳಾಗಿ ಹೋಗುವ ಗ್ರಂಥಗಳನ್ನೆಲ್ಲ ಶೇಖರಿಸಿ ಅಚ್ಚು ಹಾಕಿಸುವ ಕಾರ್ಯ ಮಾಡಲಾಗಿದೆ. ಅಲ್ಲದೆ ಅಚ್ಚಾದ ಮೇಲೆ ಎಲ್ಲವನ್ನು ಶೋಧಿಸಿ ಹೊಸದಾಗಿ ಕಾಲಕ್ಕೆ ತಕ್ಕಂತೆ ರಚಿಸುವುದು ಎಂಬ ಶ್ರೀವಾಣಿಯನ್ನು ಅಕ್ಷರಶಃ ಪ್ರತಿಪಾಲಿಸಿಕೊಂಡು ಬರಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ ೧೧೯೨ಕ್ಕೂ ಹೆಚ್ಚಿನ ಹಸ್ತಪ್ರತಿಗಳು ಇರುವುದನ್ನು ಕಾಣಬಹುದು. ಇವುಗಳಲ್ಲಿ ತಾಳೆಪ್ರತಿಗಳು ೮೦೦, ಕಾಗದ ಪ್ರತಿಗಳು ೩೫೦ಕ್ಕಿಂತ ಹೆಚ್ಚಾಗಿವೆ. ಹಾಗೆಯೇ ಕಡತಗಳು–೬, ಸಚಿತ್ರ ಹಸ್ತಪ್ರತಿಗಳು ೮ರಿಂದ ೧೦ ಇತ್ಯಾದಿ ಪ್ರತಿಗಳು ಇರುವುದನ್ನು ಕಾಣಬಹುದು. ಈ ಹಸ್ತಪ್ರತಿಗಳನ್ನು ಓದುವುದು, ಸಂರಕ್ಷಿಸುವುದು, ಪ್ರಾಚೀನ ಗ್ರಂಥಗಳನ್ನು ಶಾಸ್ತ್ರೀಯವಾಗಿ ಸಂಪಾದಿಸುವುದು ಈ ಸಂಬಂಧವಾಗಿ ತರಗತಿಗಳನ್ನು ನಡೆಸಿ ಆಸಕ್ತರಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಅಲ್ಲದೆ ಇಂತಹ ಉತ್ತಮ ಕಾರ್ಯ ಚಟುವಟಿಕೆಯಲ್ಲಿ ತನ್ನನ್ನು ತೊಡಗಿಸುವ ಸಂಸ್ಥೆಯಾಗಿದೆ ಎನ್ನಬಹುದು.

ನಾಡಿನ ವಿವಿಧ ಪ್ರದೇಶಗಳಾದ ಹಾಸನ, ಉಡುಪಿ, ಅಲ್ಲದೆ ಕೆಲವು ವಿಶೇಷವಾಗಿ ಮಿಥಿಕ್ ಸೊಸೈಟಿ ಬೆಂಗಳೂರು ಇಲ್ಲಿ ಸಂಗ್ರಹಿಸಿರುವ ಹಸ್ತಪ್ರತಿಗಳನ್ನು ಸಂರಕ್ಷಣೆ ದೃಷ್ಟಿಯಿಂದ ಹಾಗೂ ಇನ್ನಿತರ ದೃಷ್ಟಿಯಿಂದ ಈ ಸಂಸ್ಥೆಗೆ ವರ್ಗಾಯಿಸಲಾಗಿದೆ.

ಭಂಡಾರದಲ್ಲಿ ಜ್ಯೋತಿಷ್ಯ, ಕಾವ್ಯ, ರಾಮಾಯಣ, ಶಾಸ್ತ್ರಗ್ರಂಥಗಳು ವೈದ್ಯಗ್ರಂಥಗಳು ಹಾಗೂ ಕೋರಿಕಾಗದದಲ್ಲಿ ಬರೆದ ಅಪರೂಪವಾದ ತಿಳಿ ನೀಲಿ ಬಣ್ಣದ ಹಾಳೆಯ ಪುಸ್ತಕವೊಂದಿದೆ. ಜೊತೆಗೆ ಅಪರೂಪದ ಚಿತ್ರಹಸ್ತಪ್ರತಿ 'ಸ್ತೋತ್ರ ರತ್ನಾಕರ' ಕಾ.ಚಿ. ೧೩ನೇ ಸಂಖ್ಯೆಯಲ್ಲಿದೆ. ಹಸ್ತಪ್ರತಿ ಕಲ್ಲಚ್ಚಿನ ಮುದ್ರಣವಾಗಿದ್ದು ಚಿತ್ರಗಳಿಗೆ ಬಣ್ಣಗಳನ್ನು ತುಂಬಲಾಗಿದೆ. ಚಿತ್ರಗಳಲ್ಲಿ ಮೂಲತಃ ರೇಖಾಚಿತ್ರಗಳಾಗಿದ್ದು, ಈ ರೇಖಾಚಿತ್ರಗಳೊಂದೊಂದಕ್ಕೂ ಒಂದೊಂದು ದೀರ್ಘಸ್ತೋತ್ರಗಳಿವೆ. ಈ ಸ್ತೋತ್ರಗಳು ಕನಿಷ್ಠ ೫೦ರಿಂದ ಗರಿಷ್ಠ ೧೦೦ ಸಾಲುಗಳವರೆಗೂ ಇವೆ. ಈ ಶ್ಲೋಕಗಳು ಮತ್ತು ರೇಖಾಚಿತ್ರಗಳ ಗ್ರಂಥ ಸು.೬೦೦ ಪುಟಗಳಿದ್ದು ಸ್ತೋತ್ರಗಳಿವೆ. ಒಂದೊಂದು ಅಷ್ಟೋತ್ತರಕ್ಕೂ ಒಂದೊಂದು ಚಿತ್ರಗಳಂತೆ ಚಿತ್ರಗಳಿವೆ. ಈ ಚಿತ್ರಗಳಿಗೆ ಬಣ್ಣಗಳನ್ನು ತುಂಬಲಾಗಿದೆ.

ಭಂಡಾರದಲ್ಲಿ ೨ ಲಿಪಿಗಳಿಗೆ ಸಂಬಂಧಿಸಿದ(ಕನ್ನಡ, ಸಂಸ್ಕೃತ, ನಂದಿನಾಗರಿ, ತಿಗಳಾರಿ, ತಮಿಳು, ತೆಲಗು ಇತ್ಯಾದಿ) ಹಸ್ತಪ್ರತಿಗಳು ಇವೆ. ಇಲ್ಲಿ ಹೆಚ್ಚಾಗಿ ವರ್ಣಾತ್ಮಕ ಸೂಚಿಗಳನ್ನು ಅಳವಡಿಸಲಾಗಿದೆ. ಒಟ್ಟು ೩೫೦ರಿಂದ ೪೦೦ ಸೂಚಿಗಳನ್ನು ತಯಾರಿಸಲಾಗಿದೆ. ಸೂಚಿ ತಯಾರಿಸುವ ವಿಧ ಕೆಲವು **ಭಾಷೆ ಆಧಾರದ ಮೇಲೆ** ವಿಂಗಡಿಸಲಾಗಿದೆ. ವಿಶ್ವವಿದ್ಯಾಲಯ ಸೂಚಿಗಳಿಗೂ ಹಾಗೂ ಈ ಸೂಚಿಗಳಿಗೂ ವ್ಯತ್ಯಾಸವಿರುವುದನ್ನು ಕಾಣಬಹುದು. ಕನ್ನಡ ೫೦ ಸೂಚಿಗಳು, ಸಂಸ್ಕೃತ–೫೦ರಿಂದ ೬೫, ಕನ್ನಡ ಲಿಪಿ–ಸಂಸ್ಕೃತ ಭಾಷೆ ೨೦ರಿಂದ ೩೦ ಸೂಚಿ, ಸಂಸ್ಕೃತ ಭಾಷೆಯ ಲಿಪಿ–೫೦ಕ್ಕಿಂತ ಹೆಚ್ಚು, ಕನ್ನಡ ಭಾಷೆ ಲಿಪಿ–೭೦ರಿಂದ ೮೦, ತೆಲುಗು–ತಿಗಳಾರಿ ಲಿಪಿಗಳು–೨೦, ಸ್ಕ್ಯಾನ್ ಮಾಡಲಾರದ ಹಸ್ತಪ್ರತಿಗಳು ೨೦ರಿಂದ ೩೦ ಇವೆ.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು 'ಲೋಚನ'ವೆಂಬ ಷಾಣ್ಮಾಸಿಕ ಸಂಶೋಧನ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಪ್ರಸ್ತುತ ಪ್ರತಿಷ್ಠಾನ ೫೦ಕ್ಕೂ ಹೆಚ್ಚಿನ ಮೌಲಿಕ ಗ್ರಂಥಗಳನ್ನು ಹೊರತಂದಿರುವುದನ್ನು ಮನಗಾಣಬಹುದಾಗಿದೆ.

ಕನ್ನಡ ನಾಡು ನುಡಿಗಳಿಗಾಗಿ ದುಡಿದು ಮಡಿದಿರುವ ಮಹನೀಯರ ಬದುಕು ಬರಹಗಳನ್ನು ಕುರಿತು 'ಸಾಹಿತ್ಯೋಪಾಸಕರು' ಎಂಬ ಉಪನ್ಯಾಸ ಮಾಲಿಕೆಯನ್ನು ಪ್ರಾರಂಭಿಸಿ ಮೂವತ್ತಕ್ಕೂ ಅಧಿಕ ಪುಣ್ಯಪುರುಷರ ಪರಿಚಯವನ್ನು ಮಾಡಿಕೊಡಲಾಗಿದೆ.

ಪ್ರತಿಷ್ಠಾನದಲ್ಲಿ ಸುಮಾರು ಇಪ್ಪತ್ತು ಸಾವಿರ ಪುಸ್ತಕಗಳ ಒಂದು ಸುಸಜ್ಜಿತ ಗ್ರಂಥ ಭಂಡಾರವಿದೆ. ಇಂತಹ ಸಾರಸ್ವತ ಸಂಸ್ಥೆಯನ್ನು ಉಳಿಸಿ ಬೆಳೆಸಿ ಸಂರಕ್ಷಿಸುವ ಕಾರ್ಯ ಕನ್ನಡ ಜನತೆ, ಯುವ ಸಂಶೋಧಕರು ಹಾಗೂ ಅಧ್ಯಯನಕಾರರ ಆದ್ಯ ಕರ್ತವ್ಯವಾಗಿದೆ.

ಪ್ರತಿಷ್ಠಾನದ ಪ್ರಮುಖ ಕಾರ್ಯಚಟುವಟಿಕೆಗಳು

ಎಂ.ವಿ.ಸೀತಾರಾಮಯ್ಯನವರಿಗೆ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಅತ್ಯಂತ ಪ್ರಿಯವಾದ ಕಾರ್ಯವಾಗಿತ್ತು. ಈ ಸಂಬಂಧವಾಗಿ ವಚನ ಪಿತಾಮಹ ಫ.ಗು.ಹಳಕಟ್ಟಿ ಜನ್ಮಶತಮಾನೋತ್ಸವದ ಅಂಗವಾಗಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿ ಒಂದು ವಿಚಾರಸಂಕಿರಣವನ್ನು ಏರ್ಪಡಿಸಿ ಹಳಕಟ್ಟಿ ಅವರ ಬದುಕು-ಬರಹ ಮತ್ತು ಹಸ್ತಪ್ರತಿಶಾಸ್ತ್ರಕ್ಕೆ ಸಂಬಂಧಿಸಿದಂತೆ ನಾಡಿನ ವಿದ್ವಾಂಸರಿಂದ ಪ್ರಬಂಧಗಳನ್ನು ಬರೆಸಿ ವಿಚಾರಸಂಕಿರಣದಲ್ಲಿ ಅವನ್ನು ಮಂಡಿಸಿದ ಮೇಲೆ ಅವೆಲ್ಲವನ್ನು 'ಮಣಿಹ' ವೆಂಬ ಹಳಕಟ್ಟಿ ಸಂಸ್ಮರಣ ಸಂಪುಟದಲ್ಲಿ ಪ್ರಕಟಿಸಲಾಗಿದೆ. ಅಲ್ಲದೆ

ಕಾಲೇಜು ವಿದ್ಯಾರ್ಥಿಗಳಿಗಾಗಿ ಹಸ್ತಪ್ರತಿ ಸಂರಕ್ಷಣೆ ತರಬೇತಿ, ಹಸ್ತಪ್ರತಿಗಳ ಅಧ್ಯಯನದ ತಂಡವನ್ನು ರಚಿಸಿ ಆನ್‌ಲೈನ್ ಅಧ್ಯಯನಕ್ಕೆ ವಿಶೇಷ ಮಹತ್ವ ನೀಡಲಾಗುತ್ತಿದೆ. ತರಬೇತಿ ಆಸಕ್ತರಿಗೆ ಪ್ರೋತ್ಸಾಹಧನ ನೀಡುವುದು. ಹಾಗೆಯೇ ಪ್ರತಿ ವರ್ಷ ರಾಜ್ಯಮಟ್ಟದ ಹಸ್ತಪ್ರತಿ ಸಮಾವೇಶಗಳನ್ನು ಆಯೋಜಿಸಲಾಗುತ್ತಿದೆ(ಹಸ್ತಪ್ರತಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಹಿರಿಯ ಕಿರಿಯ ಸಂಶೋಧಕರು ಬರೆದಿರುವ ಲೇಖನಗಳು ಸೇರಿವೆ).

ಎಂ.ವಿ. ಸೀತಾರಾಮಯ್ಯ ಸಂಶೋಧನಾ ಕೇಂದ್ರವು ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ಪಡೆದಿದೆ. ಅಲ್ಲಿ ಪಿಎಚ್.ಡಿ. ಹಾಗೂ ಎಂ.ಫಿಲ್. ತರಗತಿಗಳನ್ನು ನಡೆಸಲಾಗುತ್ತಿದೆ.

ಹಸ್ತಪ್ರತಿ ವಿಜ್ಞಾನ ಮತ್ತು ಹಳಗನ್ನಡ ಅಧ್ಯಯನ ತರಗತಿಗಳನ್ನು ಪ್ರತಿಷ್ಠಾನ ನಡೆಸುತ್ತಿವೆ.

ಪ್ರತಿಷ್ಠಾನ ತ್ರೈಮಾಸಿಕ ವಾರ್ತಾಪತ್ರವನ್ನು ಹಾಗೂ ಅರ್ಧವಾರ್ಷಿಕ ವಿದ್ವತ್‌ಪತ್ರಿಕೆ 'ಕರ್ನಾಟಕ ಲೋಚನವನ್ನು' ಪ್ರಕಟಿಸಲಾಗುತ್ತಿದೆ. ಈ ರೀತಿಯ ಕಾರ್ಯ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ ನಾಡಿನ ಹಸ್ತಪ್ರತಿ ಕ್ಷೇತ್ರಕ್ಕೆ ಪ್ರಮುಖ ಕೊಡುಗೆ ನೀಡುತ್ತಿರುವುದನ್ನು ಕಾಣಬಹುದಾಗಿದೆ.

೩.೨.೩. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ತು ಎಂಬತ್ತೈದು ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿದೆ. ಕನ್ನಡನಾಡು, ನುಡಿಯ ಕೈಂಕರ್ಯವನ್ನು ಅವಿರತವಾಗಿ ನಡೆಸಿಕೊಂಡು ಬರುತ್ತಿರುವ ಐಕ್ಯಕ

ಪ್ರಾತಿನಿಧಿಕ ಸಂಸ್ಥೆಯಾಗಿದೆ. ಅನೇಕ ಹಿರಿಯ ವಿದ್ವಾಂಸರ ಕ್ರಿಯಾಶೀಲ ನೇತೃತ್ವದಲ್ಲಿ ಬೆಳೆದ ಕನ್ನಡ ಸಾಹಿತ್ಯ ಪರಿಷತ್ತಿನ ಹಸ್ತಪ್ರತಿ ವಿಭಾಗ, ಸಂಶೋಧನಾ ವಿಭಾಗ ಸ್ಥಿರ ಪುಸ್ತಕ ಪ್ರದರ್ಶನದಂತಹ ವಿವಿಧ ವಿಭಾಗಗಳ ಮೂಲಕ ಕನ್ನಡದ ಸೇವೆ ಸಲ್ಲಿಸುತ್ತಿದೆ. ಅದರಲ್ಲಿ ಪ್ರಮುಖವಾದ ಮತ್ತು ಉಪಯುಕ್ತವಾದ ಒಂದು ವಿಭಾಗವೆಂದರೆ ಪ್ರಾಚೀನ ತಾಳೆಗರಿ ಗ್ರಂಥಗಳೂ ಸೇರಿದ ಹಸ್ತಪ್ರತಿ ಸಂಗ್ರಹ ವಿಭಾಗ.

ಮೊಟ್ಟ ಮೊದಲು ಪರಿಷತ್ತಿಗೆ ಹಸ್ತಪ್ರತಿ ಸಂಗ್ರಹ ಮಾಡುವ ಕಾರ್ಯವನ್ನು ಆರಂಭಿಸಿದವರು ಎಂ.ಎಂ. ಅಣ್ಣಿಗೇರಿಯವರು. ಪರಿಷತ್ತಿಗೆ ಕೆಲವು ದಾನಿಗಳು ನೀಡಿದ ಹಸ್ತಪ್ರತಿ ಹಾಗೂ ಓಲೆಗರಿಗಳನ್ನು ಮತ್ತು ಈ ಹಿಂದೆ ಪರಿಷತ್ತಿನ ದಾಸ್ತಾನು ವಿಭಾಗದಲ್ಲಿ ಅಡಗಿದ್ದ ಹಸ್ತಪ್ರತಿಗಳನ್ನು ಸಂರಕ್ಷಿಸುವ ಆಶಯದಿಂದ ಈ ವಿಭಾಗವನ್ನು ಆರಂಭಿಸಲಾಯಿತು. ನಂತರ ೧೯೭೦ಲರಲ್ಲಿ ಇದಕ್ಕೆ ಒಂದು ರೂಪು ಕೊಟ್ಟವರು ಡಾ.ದೇವರಕೊಂಡಾರೆಡ್ಡಿ ಅವರು. ಇವರು ಅಲ್ಲಲ್ಲಿದ್ದ ಹಸ್ತಪ್ರತಿಗಳನ್ನು ಒಂದೆಡೆ ಸೇರಿಸಿ ಆ ಹಸ್ತಪ್ರತಿಗಳಿಗೆ ವಿವರಣಾತ್ಮಕ ಸೂಚಿಯನ್ನು ಸಿದ್ಧಪಡಿಸಿದರು. ನಂತರ ಕೇಂದ್ರ ಸಾಹಿತ್ಯ ಅಕಾಡೆಮಿ ಧನಸಹಾಯದಿಂದ ಪ್ರತ್ಯೇಕವಾಗಿ ಒಂದು ವಿಭಾಗವನ್ನು ಪ್ರಾಚೀನ ಹಸ್ತಪ್ರತಿ ಸಂಗ್ರಹ ಮತ್ತು ಸಂರಕ್ಷಣಾ ಯೋಜನೆಯ ಆಶ್ರಯದಲ್ಲಿ ತೆರೆಯಲಾಯಿತು. ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಮತ್ತು ಸಂರಕ್ಷಣ ಕಾರ್ಯ ಈ ಯೋಜನೆಯ ಮುಖ್ಯ ಉದ್ದೇಶವಾಗಿತ್ತು. ಸಂಗ್ರಹ ಕಾರ್ಯಕ್ಕೆ ಪರಿಷತ್ತು ಪತ್ರಿಕೆಗಳಲ್ಲಿ ಜಾಹೀರಾತು ನೀಡಿದಾಗ ಕೆಲವರು ತಮ್ಮ ಮನೆಗಳಲ್ಲಿದ್ದ ಪ್ರಾಚೀನ ಹಸ್ತಪ್ರತಿಗಳನ್ನು ಉಚಿತವಾಗಿ ಮತ್ತೆ ಕೆಲವರು ಹಣ ಪಡೆದುಕೊಂಡು ಪರಿಷತ್ತಿಗೆ ನೀಡಲು ಮುಂದೆ ಬಂದರು. ಹೀಗೆ ಸುಮಾರು ೨೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಪರಿಷತ್ತು ಸಂಗ್ರಹಿಸಿದೆ. ಅಲ್ಲದೆ ಯೋಜನೆಯ ಆಶ್ರಯದಲ್ಲಿದ್ದ ಕ್ಷೇತ್ರ ಕಾರ್ಯಕರ್ತರು ಹಳ್ಳಿ ಹಳ್ಳಿಗಳನ್ನು ಸುತ್ತಿ ಶ್ರದ್ಧೆ ಹಾಗೂ ನಿಷ್ಠೆಯಿಂದ ಹಸ್ತಪ್ರತಿ ಸಂಗ್ರಹಕಾರ್ಯ ನಡೆಸಿದ್ದಾರೆ. ಪ್ರಸ್ತುತ ಈಗ ಪರಿಷತ್ತಿನ ಹಸ್ತಪ್ರತಿ ವಿಭಾಗದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಪ್ರತಿಗಳು ಇವೆ. ಇವುಗಳನ್ನು ಒಂದು ಕಪಾಟಿನಲ್ಲಿ ಜೋಡಿಸಲಾಗಿದೆ. ಸಂಗ್ರಹ ಕಾರ್ಯದ ಜೊತೆಗೆ ನಡೆಸಿರುವ ಮತ್ತೊಂದು ಮಹತ್ವದ ಕಾರ್ಯವೆಂದರೆ, ಸಂಗ್ರಹಿಸಿದ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿಗಳನ್ನು ತಯಾರಿಸಲಾಗಿದೆ.

ಪರಿಷತ್ತಿನ ಈ ಹಸ್ತಪ್ರತಿ ಸಂಗ್ರಹದಲ್ಲಿ ಪಂಪನ **ಆದಿಪುರಾಣ** ಒಂದು ಹೊಸ ಬೆಳಕನ್ನು ಚೆಲ್ಲುವ ವಿಶಿಷ್ಟ ಹಸ್ತಪ್ರತಿಯಾಗಿದೆ. ಆರು ಪದ್ಯಗಳುಳ್ಳ ಈ ತಾಳೆಯೋಲೆ ಪ್ರತಿ ಸಿದ್ಧಾರ್ಥ ಬ. ಇಂದ್ರ ಬಿದರೂರು, ಸಾಗರ ತಾಲ್ಲೂಕು ಇವರಿಂದ ದೊರೆತಿದೆ. ಇಂತಹ ಅಮೂಲ್ಯ ಹಸ್ತಪ್ರತಿಯನ್ನು ಪರಿಷತ್ತಿನ ಹಸ್ತಪ್ರತಿ ಸಂಗ್ರಹಕ್ಕೆ ಪಡೆಯಲು ಲಕ್ಷ್ಮಣ್ ತೆಲಗಾವಿ ಮತ್ತು ಆರ್. ಶೇಷಶಾಸ್ತ್ರಿ ಮುಖ್ಯರಾದವರು ಎಂದು ತಿಳಿದುಬಂದಿದೆ.

ಆದಿಪುರಾಣದ ಈ ಪದ್ಯಗಳನ್ನು ಕುರಿತು(ಕನ್ನಡ ಸಾಹಿತ್ಯ ಪರಿಷತ್ತು ಪತ್ರಿಕೆ, ಸಂ.೬೯, ಸಂ.೧, ಜೂನ್ ೧೯೮೪) ಲೇಖನದಲ್ಲಿ ಬರೆಯಲಾಗಿದೆ.

ಈ ವಿಭಾಗದ ಮತ್ತೊಂದು ಬೆಳವಣಿಗೆ ಹಂತವೆಂದರೆ ಈ ಸಂಗ್ರಹದಲ್ಲಿದ್ದ ಏಕೈಕ ಹಸ್ತಪ್ರತಿ **ಸುಜ್ಞಾನ ದರ್ಪಣ ಕೃತಿಯ ಪ್ರಕಟಣೆ.** ಈ ಅಪ್ರಕಟಿತ ಕೃತಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಪತ್ರಿಕೆ ಸಂಪುಟ ೪೯, ಸಂ.೧, ೧೯೬೪ರಲ್ಲಿ ಇಡಿಯಾಗಿ ಪ್ರಕಟಿಸಲಾಗಿದೆ.

ವಡ್ಡಾರಾಧನೆ, ರಾಮಚಂದ್ರಚರಿತ ಪುರಾಣ, ವಿಕ್ರಮಾರ್ಜುನ ವಿಜಯ, ನೋಂಪಿಯ ಕಥೆಗಳು, ಬತ್ತೀಸಪುತ್ಥಳಿ ಕಥೆಗಳು, ತಮಿಳು ತೆಲುಗು ಸಂಸ್ಕೃತ ಭಾಷೆಗಳ ಹಸ್ತಪ್ರತಿಗಳನ್ನು ಹೊಂದಿರುವ ಪರಿಷತ್ತಿನ ಓಲೆಗರಿ ವಿಭಾಗವು ಭಾಷಾ ಅಧ್ಯಯನಕ್ಕೆ ಒಳ್ಳೆಯ ಗ್ರಾಸವನ್ನು ಒದಗಿಸುತ್ತದೆ. ಸಾಹಿತ್ಯ, ವಿಜ್ಞಾನ, ವ್ಯಾಕರಣ, ನಿಘಂಟು, ಜ್ಯೋತಿಷ್ಯ, ಸ್ತೋತ್ರಗೀತೆ, ಶಕುನ ಪ್ರಪಂಚ, ಶತಕ ಸಾಹಿತ್ಯ, ಅಷ್ಟಕಗಳು, ಇತಿಹಾಸ, ಜಾನಪದ, ಯಕ್ಷಗಾನ, ಆದಿಪುರಾಣ, ಬಸವಪುರಾಣ, ವೃಷಭೇಂದ್ರ ವಿಜಯ, ಪ್ರಭುಲಿಂಗ ಲೀಲೆ, ಭರತೇಶ ವೈಭವ, ಜೈಮಿನಿ ಭಾರತ, ಕರ್ಣಾಟ ಭಾರತ ಕಥಾಮಂಜರಿ, ಬಸವಣ್ಣನವರ ಷಟ್ಥ್ಸಲ ವಚನಗಳು, ಅಖಂಡೇಶ್ವರ ವಚನಗಳ ಹಸ್ತಪ್ರತಿಗಳೇ ಅಲ್ಲದೇ, ಶಾಸ್ತ್ರ ಸಾಹಿತ್ಯ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ಧಾರ್ಮಿಕ ಹಾಗೂ ಲೌಕಿಕ ಕೃತಿಗಳ ಪ್ರತಿಗಳು ಪರಿಷತ್ತಿನ ಸಂಗ್ರಹದಲ್ಲಿ ಸಂರಕ್ಷಿಸಲಾಗಿದೆ.

ಸಂಗ್ರಹದಲ್ಲಿ ಭಾಷೆಯ ವಿವಿಧ ಸ್ವರೂಪಗಳಿಗೆ ಕೈಗನ್ನಡಿಯಾಗುವಂತಹ ಹಸ್ತಪ್ರತಿಗಳಿವೆ. ಇದರಲ್ಲಿ ಭಾಷೆ ಮತ್ತು ಲಿಪಿ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ. ಭಾಷಾಶಾಸ್ತ್ರ, ಗ್ರಂಥ ಸಂಪಾದನ ಶಾಸ್ತ್ರದ ದೃಷ್ಟಿಯಿಂದಲೂ ಇಲ್ಲಿರುವ ಹಸ್ತಪ್ರತಿ ವಿಭಾಗವು ಹೆಚ್ಚು ವೈಶಿಷ್ಟ್ಯ ಪೂರ್ಣವಾಗಿದೆಯೆಂದು ಹೇಳಬಹುದು.

೧. ೧೯೭೬ರಲ್ಲಿ ಈ ವಿಭಾಗದ ಆರಂಭ.

೨. ಜಿ. ನಾರಾಯಣ ಅವರು ಅಧ್ಯಕ್ಷರಾಗಿದ್ದರು.

೩. ಹಸ್ತಪ್ರತಿಗಳು(ಕಾಗದ) ಮತ್ತು ತಾಳೆಗರಿಗಳು ಬೇರೆ ಬೇರೆ ಕಪಾಟಿನಲ್ಲಿವೆ.

೪. ಸುಮಾರು ನೂರಕ್ಕು ಹೆಚ್ಚು ದಾನಿಗಳಿದ್ದಾರೆ. ರಿಜಿಸ್ಟರ್‌ನಲ್ಲಿ ಹೆಸರುಗಳು ಮತ್ತು ವಿಳಾಸಗಳು ದಾಖಲಾಗಿವೆ.

೫. ಸಂಗ್ರಹದಲ್ಲಿರುವ ಹಸ್ತಪ್ರತಿಗಳ ಸಂಖ್ಯೆ ಹೀಗಿದೆ.

ತಾಳೆಗರಿ ಹಸ್ತಪ್ರತಿಗಳ ಸಂಖ್ಯೆ – ೬೯೫

ಕಾಗದ ಹಸ್ತಪ್ರತಿ ಸಂಖ್ಯೆ – ೩೪೬ ಇವೆ.

೬. ಈ ವಿಭಾಗದ ಪ್ರಯೋಜನವನ್ನು ಆಗಾಗ್ಗೆ ಕೆಲವು ಶಾಸನತಜ್ಞರು, ವಿದ್ಯಾರ್ಥಿಗಳು ಪಡೆದಿದ್ದಾರೆ. ಹಸ್ತಪ್ರತಿಗಳ ವಿಭಾಗದಲ್ಲಿರುವ ಭಾಗವತ(ಭಾಷೆ ಸಂಸ್ಕೃತ, ಲಿಪಿ ಕನ್ನಡ) ಕೃತಿಯನ್ನು ಬಿ.ಜಿ. ಇನ್‌ಸ್ಟಿಟ್ಯೂಟ್ ಆಫ್ ಲರ್ನಿಂಗ್ ಅಂಡ್ ರಿಸರ್ಚ್, ಅಹಮದಾಬಾದ್ ಅವರು ಜೆರಾಕ್ಸ್ ಮಾಡಿಕೊಂಡಿದ್ದಾರೆ. ಸಂಶೋಧನಾ ವಿದ್ಯಾರ್ಥಿಗಳು ಕೆಲವು ಪ್ರಾಚೀನ ಓಲೆಗರಿ ಹಸ್ತಪ್ರತಿಗಳನ್ನು ಪರಿಶೀಲಿಸಿ ಜೆರಾಕ್ಸ್ ಪ್ರತಿ ಮಾಡಿಸಿಕೊಂಡಿದ್ದಾರೆ. 'ಕುಮಾರವ್ಯಾಸನ ಭಾರತ' ಎಂಬ

ಓಲೆಗರಿ ಗ್ರಂಥವನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಎಂ.ವಿ. ವರದರಾಜನ್(ಸಂಶೋಧನಾ ವಿದ್ಯಾರ್ಥಿ) ಅವರು ಕುಮಾರವ್ಯಾಸ ಭಾರತ ಪರಿಷ್ಕೃತ ಆವೃತ್ತಿ ಯೋಜನೆಯಲ್ಲಿ ಉಪಯೋಗಿಸಿಕೊಳ್ಳಲು ಎರವಲು ಪಡೆದಿದ್ದಾರೆ'.[೧೧]

ಆರಂಭದಲ್ಲಿ ವಿಭಾಗದ ಮುಖ್ಯಸ್ಥರಾಗಿ ಎಂ.ಎಂ. ಅಣ್ಣಿಗೇರಿ, ನಂತರ ದೇವರಕೊಂಡಾರೆಡ್ಡಿ, ಡಾ.ಆರ್. ಶೇಷಶಾಸ್ತ್ರಿ, ಸಿ. ನಾಗರಾಜು, ಅಮರನಾಥ್, ಚಕ್ರಪಾಣಿ ಇವರು ಸೇವೆ ಸಲ್ಲಿಸಿದ್ದಾರೆ. ಈಗ ಕೆ. ನಾಗವೇಣಿ ಅವರು ಸೇವೆ ಸಲ್ಲಿಸುತ್ತಿದ್ದಾರೆ. ವಿಭಾಗವು ಸಂಪೂರ್ಣವಾಗಿ ಸ್ಥಗಿತವಾಗಿದೆ. ಹೆಚ್ಚಾಗಿ ಮುದ್ರಣದ ಪುಸ್ತಕಗಳ ಕಡೆ ಗಮನ ಹರಿಸಲಾಗುತ್ತದೆ.

೩.೨.೪. ಸಂಸ್ಕೃತ ಸಂಶೋಧನಾ ಸಂಸತ್ತು, ಮೇಲುಕೋಟೆ

ಅಕಾಡೆಮಿ ಆಫ್ ಸಂಸ್ಕೃತ ರಿಸರ್ಚ್ ೧೯೭೭ರಲ್ಲಿ ಸ್ಥಾಪನೆಯಾಯಿತು. ಇದೊಂದು ಸಂಸ್ಕೃತ ಸಂಶೋಧನಾ ಶೈಕ್ಷಣಿಕ ಕೇಂದ್ರ, ಇದು ಸರಕಾರದಿಂದ ಮಾನ್ಯತೆ ಪಡೆದಿದೆ. ಇಲ್ಲಿ ಸುಮಾರು ೮೦೦೦ ಹಸ್ತಪ್ರತಿಗಳಿರುವವು. ಅವೆಲ್ಲ ಸಂಸ್ಕೃತ ಭಾಷೆಯಲ್ಲಿದ್ದು ಗ್ರಂಥಾಲಯದಲ್ಲಿ ನಂದಿಗರಿ, ಕನ್ನಡ, ತೆಲುಗು, ತಮಿಳು ಲಿಪಿಗಳಲ್ಲಿವೆ. ಈ ಸಂಗ್ರಹದಲ್ಲಿ ಮಣಿಪ್ರವಲಾ, ಪ್ರಾಕೃತ, ಕನ್ನಡ, ತಮಿಳು, ಟಿಬೆಟಿಯನ್ ಹಸ್ತಪ್ರತಿಗಳಿವೆ. ಈ ಭಂಡಾರದಲ್ಲಿ ವಿಶೇಷವಾಗಿ ಕುಮಾರವ್ಯಾಸ ಭಾರತ, ಜೈಮಿನಿ ಭಾರತ ಪ್ರತಿಗಳೇ ಅಧಿಕ ಸಂಖ್ಯೆಯಲ್ಲಿವೆ. ಹಸ್ತಪ್ರತಿಗಳನ್ನು ಇಲ್ಲಿ **ದಾನಿಗಳ ಹೆಸರಿನ ಪ್ರಕಾರ ಜೋಡಿಸಿಡಲಾಗಿದೆ.** ಜೊತೆಗೆ ಪತ್ರಕಸೂಚಿಯನ್ನು ಸಿದ್ಧಪಡಿಸಲಾಗಿದೆ. 'ಡಿಸ್ಕ್ರಿಪ್ಟಿವ್ ಕ್ಯಾಟಲಾಗ್ ಆಫ್ ವಿಶಿಷ್ಟಾದ್ವೈತ ವರ್ಕ್ಸ್ ಸಂಪುಟ–೧, ದ್ರಾವಿಡಿಯನ್ ವರ್ಕ್ಸ್ ಸಂಪುಟ–೨, ಈ ರೀತಿ ಸೂಚಿಗಳನ್ನು ಪ್ರಕಟಿಸಲಾಗಿದೆ. ಇಲ್ಲಿ ಅಧ್ಯಯನಕಾರರಿಗೆ ಸಂಶೋಧಕರಿಗೆ ಮುಕ್ತ ಅವಕಾಶವಿದೆ. ಹಸ್ತಪ್ರತಿಗಳನ್ನು ಮೈಕ್ರೋಫಿಲ್ಮ್ ಮಾಡಲಾಗಿದೆ. ವೈಜ್ಞಾನಿಕ ತಂತ್ರಗಳಿಂದ ಹಸ್ತಪ್ರತಿಗಳನ್ನು ಸಂರಕ್ಷಿಸಲಾಗಿದೆ. ತೈಲಲೇಪನ ವ್ಯವಸ್ಥೆ ಕೂಡ ಮಾಡಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಇದರ ಕಾರ್ಯ ಚಟುವಟಿಕೆ ಮಂದಗತಿಯಲ್ಲಿ ಸಾಗುತ್ತಿರುವುದನ್ನು ಕಾಣಬಹುದಾಗಿದೆ.

೩.೨.೫. ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ

ಮುಂಬೈ ಸರಕಾರ ತನ್ನ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ಪ್ರದೇಶದ ಸಂಶೋಧನೆಗಾಗಿ ೧೯೩೮ರಲ್ಲಿ ಕನ್ನಡ ಸಂಶೋಧನ ಸಂಸ್ಥೆಯ ಸ್ಥಾಪನೆಗಾಗಿ ನಿರ್ಣಯವನ್ನು ಕೈಗೊಂಡಿತು. ೧೯೩೯ರಲ್ಲಿ ಆರ್.ಎಸ್. ಪಂಚಮುಖಿಯವರು ಇದರ ಪ್ರಥಮ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡರು. ಅಂದಿನಿಂದಲೇ ಹಸ್ತಪ್ರತಿಗಳನ್ನು ಸಂಗ್ರಹಿಸುವ, ಹಾಗೂ ಅನ್ಯ ಭಂಡಾರಗಳಲ್ಲಿರುವ ಪ್ರಸಿದ್ಧ ಹಸ್ತಪ್ರತಿಗಳನ್ನು ನಕಲು ಮಾಡಿಸಿ ಸಂರಕ್ಷಿಸುವ ಕೆಲವನ್ನು ಪ್ರಾರಂಭಿಸಲಾಯಿತು. ಈವರೆಗೆ ಇಲ್ಲಿ ಸಂಗ್ರಹಿಸಲ್ಪಟ್ಟ ಹಸ್ತಪ್ರತಿಗಳ ಸಂಖ್ಯೆ ಸುಮಾರು ೩೦೦೦ ಎಂದು ಕ್ಷೇತ್ರಾಧ್ಯಯನದಿಂದ ತಿಳಿದುಬಂದಿದೆ.

ಈ ಸಂಸ್ಥೆ ಪ್ರಾಚೀನ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿ ಹೆಸರಿನಲ್ಲಿ ೧೪ ಸಂಪುಟಗಳನ್ನು ಪ್ರಕಟಿಸಿದ್ದು, ಇವೆಲ್ಲ ಸೇರಿ ೮೮೮ ಪ್ರತಿಗಳ ವಿವರ ಒದಗಿಸುತ್ತವೆ. ೫೦ ವರ್ಷಗಳ ಅವಧಿಯಲ್ಲಿ ಇಷ್ಟು ಕೃತಿಗಳ ಸೂಚಿಯನ್ನು ರಚಿಸಿದುದು ಕಡಿಮೆಯೆಂದೇ ಹೇಳಬೇಕು.

ಈ ಸಂಸ್ಥೆಯಿಂದ ಕವಿಜಿಹ್ವಾಬಂಧನ, ಮದನತಿಲಕ, ಸಮಯ ಪರೀಕ್ಷೆ, ಚಾವುಂಡರಾಯ ಪುರಾಣ ಮೊದಲಾದ ಗ್ರಂಥಗಳನ್ನು ಪ್ರಕಟಿಸಿದ್ದರೂ ಕಾಲಮಾನ ದೃಷ್ಟಿಯಿಂದ ಈ ಸಂಖ್ಯಾಪ್ರಮಾಣ ಕಡಿಮೆಯೆನಿಸುತ್ತದೆ. ಇದನ್ನೆಲ್ಲ ಮನಗಂಡು ಸಂಸ್ಥೆಯ ಹಸ್ತಪ್ರತಿಗಳನ್ನು ಎಂ.ಎಂ. ಕಲಬುರ್ಗಿಯವರ ಪ್ರಯತ್ನದಿಂದಾಗಿ ಕನ್ನಡ ಅಧ್ಯಯನ ಪೀಠಕ್ಕೆ ವರ್ಗಾಯಿಸಲಾಗಿದೆ.

೩.೨.೬. ಶ್ರೀ ಸಿದ್ಧಲಿಂಗೇಶ್ವರ ವೇದಸಂಸ್ಕೃತ ಪಾಠಶಾಲೆ, ಸಿದ್ಧಗಂಗಾಮಠ, ತುಮಕೂರು

ಈ ಪಾಠಶಾಲೆಯು ೧೯೧೭ರಲ್ಲಿ ಸ್ಥಾಪನೆಗೊಂಡು ಸಂಸ್ಕೃತ ಶಿಕ್ಷಣ ನೀಡುವಲ್ಲಿ ಪ್ರಸಿದ್ಧಿಯಾಗಿದೆ. ಇಲ್ಲಿ ಅಮೂಲ್ಯವಾದ ಹಸ್ತಪ್ರತಿಗಳಿವೆ. ಕನ್ನಡ ೮೯, ತೆಲುಗು-೧, ಸಂಸ್ಕೃತ-೧೨ ಹೀಗೆ ಒಟ್ಟು ೧೦೨ ಹಸ್ತಪ್ರತಿಗಳಿವೆ. ಇವುಗಳ ಸೂಚಿಕಾರ್ಯ ನಡೆಯಬೇಕಿದೆ. ಇಲ್ಲಿ ಆಧುನಿಕ ಸಂರಕ್ಷಣಾ ಕ್ರಮಗಳ ಅಳವಡಿಸಿಕೊಳ್ಳುವ ಅಗತ್ಯವಿದೆ.

೩.೩. ಖಾಸಗಿ ಹಸ್ತಪ್ರತಿ ಭಂಡಾರಗಳು(ಮಠಮಾನ್ಯಗಳು)

ಕನ್ನಡ ಸಾಹಿತ್ಯ-ಸಂಸ್ಕೃತಿ ಸಂಶೋಧನೆಯ ಆಕರ ಸಾಮಗ್ರಿಗಳಲ್ಲಿ ಹಸ್ತಪ್ರತಿಗಳು ಬಹುಮುಖ್ಯವಾಗಿವೆ. ತಾಡೋಲೆ, ಕೋರಿಕಾಗದ ಕಡತ ಹಾಗೂ ಆಧುನಿಕ ಕಾಗದ ರೂಪದಲ್ಲಿರುವ ಇವುಗಳನ್ನು ಪ್ರಾಚೀನ ಕಾಲದಿಂದಲೂ ವ್ಯಕ್ತಿ ಹಾಗೂ ಸಾಂಸ್ಥಿಕ ನೆಲೆಗಳಲ್ಲಿ ಸಂಗ್ರಹಿಸಿ, ಸಂರಕ್ಷಣೆ ಮಾಡುತ್ತಾ ಬರಲಾಗುತ್ತಿದೆ. ಆಹಾರ, ಅಭಯ, ಭೋಷಜ್ಯ ಹಾಗೂ ಶಾಸ್ತ್ರ(ಗ್ರಂಥ) ದಾನಗಳು ಕನ್ನಡಿಗರ ಆದರ್ಶಗಳು. ಈ ಆದರ್ಶಗಳಲ್ಲಿ ಶಾಸ್ತ್ರದಾನ ಪ್ರಮುಖವಾದುದಾಗಿದೆ. ಕವಿಗಳಿಗೆ ನಿರಂತರವಾಗಿ ಪೋಷಣೆ-ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ. ಈ ಮೂಲಕ ಸಾಹಿತ್ಯ ಸಂಸ್ಕೃತಿ ಸಂವರ್ಧನೆಗೆ ಕಾರಣವಾಗಿರುವುದು ಕಂಡುಬಂದಿದೆ. ಈ ಕಾರಣವಾಗಿ ಕವಿಗಳು ವೈವಿಧ್ಯಮಯ ಕೃತಿಗಳನ್ನು ರಚಿಸಿದರು. ಕವಿ ಬರೆದ ಒಂದು ಕೃತಿಯ ಹಲವು ಪ್ರತಿಗಳನ್ನು ಹಸ್ತಪ್ರತಿಗಳಲ್ಲಿ ಬರೆಯಲಾಗಿದೆ. ಇಂಥ ಹಸ್ತಪ್ರತಿಗಳನ್ನು ಜನಸಮುದಾಯಕ್ಕೆ ತಲುಪಿಸುವ ಕಾರ್ಯವನ್ನು ಲಿಪಿಕಾರರು ಅಥವಾ ಪ್ರತಿಕಾರರು ಚಾಚೂ ತಪ್ಪದೇ ಮುನ್ನಡೆಸಿಕೊಂಡು ಬಂದಿದ್ದಾರೆ. ಇದರ ಪರಿಣಾಮವಾಗಿ ನೂರಾರು ಕವಿಗಳು ರಚಿಸಿದ ಸಾವಿರಾರು ಕೃತಿಗಳ ಹಸ್ತಪ್ರತಿಗಳು ಸಂರಕ್ಷಣೆಗೊಂಡಿವೆ. ನಾಡಿನಾದ್ಯಂತ ಪ್ರಸಾರಗೊಂಡಿವೆ. ವಿಶೇಷವಾಗಿ ಧಾರ್ಮಿಕ ಕೇಂದ್ರಗಳಾದ ಮಠ ಮಾನ್ಯಗಳು ಇವುಗಳನ್ನು ಸಂಗ್ರಹಿಸಿ ಸೂಚೀಕರಣ ಮಾಡಿವೆ. ಹೀಗೆ ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿಸುವ, ಕಾರ್ಯ ಚಟುವಟಿಕೆಯಲ್ಲಿ ಕರ್ನಾಟಕದ ಜೈನ, ವೀರಶೈವ, ವೈದಿಕ ಮಠಮಾನ್ಯಗಳ ಸಾಧನೆಯನ್ನು ಗುರುತಿಸುವುದು ಹಾಗೂ ಅವಲೋಕಿಸುವುದು. ನನ್ನ ಮಹಾಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಒಂದು ಕಾಲದಲ್ಲಿ ಮಠಗಳು ಶಿಕ್ಷಣ ನೀಡುವ ಬಹುಮುಖ್ಯ ಕೇಂದ್ರಗಳಾಗಿದ್ದವು. ಇಲ್ಲಿ ಓದು ಬರಹದ ಜೊತೆಗೆ ವಸತಿ-ಪ್ರಸಾದದ ವ್ಯವಸ್ಥೆಯನ್ನು ಶಿಕ್ಷಣಾರ್ಥಿಗಳಿಗೆ ಕಲ್ಪಿಸಲಾಗುತ್ತಿತ್ತು. ಅಂಥ ಪರಂಪರೆ ಇಂದಿಗೂ ಅನೇಕ ಮಠಗಳಲ್ಲಿ ನಾವು ನೋಡುತ್ತೇವೆ. ಪ್ರಾಚೀನ ಕಾಲದಲ್ಲಿ ಇಂಥ ಮಠಗಳಿಗೆ ಸಾಲಿಮಠ, ಓದಿಸೋಮಠ, ಟೀಕಿನ ಮಠ, ಓಲೆಮಠ, ಕಂತೆಮಠ, ಹಿರಿಯ ಮಠ ಮೊದಲಾದ ಹೆಸರಿನಿಂದ ಕರೆಯಲಾಗುತ್ತಿತ್ತು.

"....ಘಳಿಗೆಗೆ ಓದಿಸುವ ಬಿದಿರಹಳ್ಳಿಯ ಮಠದಲ್ಲಿ ಕುಳಿತು ಮುಗಿಯಬರದ ಮಲ್ಲಪ್ಪ ದೇವರ ಹಸ್ತಾಂತರ. ಚಂದ್ರಚರ ನಗರರೆಂಬ ತ್ರೈಲೋಕ್ಯಕ್ಕೆ ಮುಖ್ಯರಾದ ಹುಲಿಗೆರೆಯ ಸಿಂಹಾಸನಕ್ಕೆ ಕರ್ತರಾದ ಪೊಡೆವಿಡಿಯ ಬಗೆಯ ಹಿರೇಮಠದ ಕಾಶಿದೇವರ ಶಿಷ್ಯರಾದ ಓದಿಸುವ ಮಲ್ಲಪ್ಪದೇವರು, ಪುತ್ರಮಿತ್ರಕಳತ್ರಧನದಾನ್ಯ ಸಮೃದ್ಧಿಯಾಗಲೆಂದು ಹರಸಿ ಬರದುದ್ದಕ್ಕೆ ಶುಭಮಸ್ತು.[೧೨]

"ಕಸಬೆ ಧಾರವಾಡ ಮಂಗಳವಾರ ಪೇಟೆ ವಿರಕ್ತಮಠದಲ್ಲಿ ಬರೆಯಿಸಿದ ಪುರಾಣವು ಸಮಾಪ್ತವಾಯಿತು"[೧೩]

ನಾಡಿನ ಅನೇಕ ಮಠಗಳು, ಮಠಾಧಿಪತಿಗಳು ಹಾಗೂ ಅವರ ಶಿಷ್ಯ-ಪ್ರಶಿಷ್ಯ ಬಳಗವು ಹಸ್ತಪ್ರತಿಗಳ ರಚನೆಯಲ್ಲಿ ತೊಡಗುತ್ತಿದ್ದರು. ಇನ್ನು ಕೆಲವು ಮಠಾಧಿಪತಿಗಳು ಲಿಪಿಕಾರರಿಂದ ತಮಗೆ ಬೇಕಾದ ಕಾವ್ಯಪುರಾಣಗಳನ್ನು ಪ್ರತಿ ಮಾಡಿಸಿಕೊಳ್ಳುತ್ತಿದ್ದರು. ಮಠಾಧಿಪತಿಗಳು ಭಕ್ತರ ಮನೆಗೆ ಪಾದ ಪೂಜೆ ಅಥವಾ ಭಿನ್ನಕ್ಕೆ ಹೋದಾಗ ಜಗುಲಿಯ ಮೇಲೆ ಪೂಜೆಗೊಳ್ಳುತ್ತಿದ್ದ ಹಸ್ತಪ್ರತಿಗಳನ್ನು ತಂದು ಮಠದಲ್ಲಿ ಸಂರಕ್ಷಣೆ ಮಾಡಲಾಗಿದೆ. ಹಾಗೆಯೇ ಸ್ವತಃ ಭಕ್ತಾದಿಗಳೇ ಸ್ವ-ಇಚ್ಛೆಯಿಂದ ತಮ್ಮಲ್ಲಿದ್ದ ಹಸ್ತಪ್ರತಿಗಳನ್ನು ಮಠಕ್ಕೆ ಒಪ್ಪಿಸಿರುವುದಕ್ಕೆ ಸಾಕಷ್ಟು ನಿದರ್ಶನಗಳಿರುವುದನ್ನು ಮನಗಾಣಬಹುದಾಗಿದೆ.

"ಸಂವತ್ಸರದ ಕಾರ್ತಿಕ ಶು.೫ ಸೋಮವಾರ ಚಂದ್ರಸಾಗರವರ್ಣಿ ಬರೆದು ಬೆಳ್ಗುಳದ ಮಠಕ್ಕೆ ವಪ್ಪಿಸಿದ ಭವ್ಯಜನ ಚಿಂತಾಮಣಿ ಸಂಪೂರ್ಣ ಮಂಗಲ ಮಹಾಶ್ರೀಶ್ರೀಶ್ರೀ[೧೪]

"ಪರಿಧಾವಿನಾಮ ಸಂವತ್ಸರದ ಆಶ್ವೀಜ ಶುದ್ಧ ೨ ಬಿದಿಗೆವರಿಗೆ ಬಸವೇಶ್ವರ ದೇವರ ವಚನ ಬುಧವಾರ ಪ್ರಾತಃಕಾಲಕ್ಕೆ ಮುಗಿಯಿತ್ತು. ಯಿದ ಬರೆಸಿದವರು ಯಾರೂಯೆಂದರೆ ಕಾನಮೊಡುವಿನ ಚಾಕೀಮಠದ ದಾಸೋಹ ಮೂರ್ತಿಗಳು ಶರಣರು ಚಂದ ಬಸವೇಶ್ವರ ದೇವರ ಬರೆಸಿದ್ದು. ಬರೆದವರು ಯಾರೂ ಅಂದರೆ ಕಲ್ಲಕೆರೆ ಮಠದ ಬಸವನಕೊಠೆ ಮಠದ ಶಿವಪ್ಪದೇವರು ಕುಮಾರು ಚಂನ ಬಸಪ್ಪ ದೇವರು ಅವರ ಕುಮಾರು ಶಿವಪ್ಪದೇವರು ಅವರ ಕುಮಾರು ವೀರಪ್ಪದೇವರು ಅವರ ಮಗ ಚಂನ ವೀರಪ್ಪನೂ ಬರದ ಬಸವೇಶ್ವರ ವಚನ... ಮಂಗಳ ಮಹಾಮಸ್ತು."[೧೫]

ಇಂಥ ಮಹತ್ವದ ಉಲ್ಲೇಖಗಳನ್ನು ಗಮನಿಸಿದಾಗ ಹಸ್ತಪ್ರತಿಗಳ ಸಂಗ್ರಹ, ಉತ್ಪಾದನೆ, ಸಂರಕ್ಷಣೆ ಹಾಗೂ ಪ್ರಸಾರಕ್ಕಾಗಿ ನಾಡಿನ ವಿವಿಧ ಮಠಮಾನ್ಯಗಳು ತಮ್ಮ ಪಾಲಿನ ಕರ್ತವ್ಯ ಹಾಗೂ ಸೇವೆ ಎಷ್ಟಿತ್ತೆಂದು ತಿಳಿದುಬರುತ್ತದೆ. ಇದರಿಂದಾಗಿ ಹಸ್ತಪ್ರತಿಗಳ ಸಂಗ್ರಹಕ್ಕಾಗಿಯೇ ಭಂಡಾರಗಳು ಮಠಗಳಲ್ಲಿ ಅಸ್ತಿತ್ವಕ್ಕೆ ಬಂದವು. ಇವುಗಳನ್ನು ಆಯಾ ಧರ್ಮಕ್ಕನುಗುಣವಾಗಿ ಈ ರೀತಿಯಾಗಿ ವಿಂಗಡಿಸಲಾಗಿದೆ.

೩.೩.೧. ಜೈನ ಮಠಗಳು

೩.೩.೨. ವೀರಶೈವ ಮಠಗಳು

೩.೩.೩. ವೈದಿಕ ಮಠಗಳು

೩.೩.೪. ವೈಯಕ್ತಿಕ ಹಸ್ತಪ್ರತಿ(ಸಂಗ್ರಹಕಾರರು)

೩.೩.೧. ಜೈನ ಮಠಗಳು

ಕರ್ನಾಟಕದಲ್ಲಿ ಮೊದಲು ತಲೆಯೆತ್ತಿದುದು ಜೈನ ಸಾಹಿತ್ಯ. ಆಮೇಲೆ ವೀರಶೈವ ಸಾಹಿತ್ಯ, ಕೊನೆಗೆ ಬ್ರಾಹ್ಮಣ ಸಾಹಿತ್ಯ. ಈ ನಾಡಿನಲ್ಲಿ ಇದೇ ಕಾಲಕ್ರಮದಲ್ಲಿ ಹಸ್ತಪ್ರತಿಗಳು ಹುಟ್ಟಿ ಬೆಳೆದು ಬಂದಿವೆ ಎಂಬುದು ಗಮನಾರ್ಹ.

ಜೈನಧರ್ಮದ ಪ್ರಕಾರ ಚತುರ್ವಿದ ದಾನಗಳಲ್ಲಿ ಒಂದಾದ ಶಾಸ್ತ್ರ(ಗ್ರಂಥ)ದಾನ ಅತ್ಯಂತ ಶ್ರೇಷ್ಠವಾದುದು. ಈ ಕಾಯಕ "ಕವಿಗಳ ಪ್ರತಿಭೆಗೆ ಶಾಸ್ತ್ರಕಾರರ ವಿದ್ವತ್ತಿಗೆ, ದೊರೆ, ಧರ್ಮದರ್ಶಿ ಹಾಗೂ ಶ್ರಾವಕಾದಿಗಳ ಶ್ರದ್ಧೆಗೆ ಎಲ್ಲಕ್ಕೂ ಮಿಗಿಲಾದ ಅವಕಾಶವನ್ನೀಯುತ್ತ ಬಂದರು. ಜೈನರು ಈ ದಾನವನ್ನು ಒಂದು ಧಾರ್ಮಿಕ ಕಾರ್ಯವೆಂಬಂತೆ ಪರಂಪರಾನುಗತವಾಗಿ ನಡೆಸಿಕೊಂಡು ಬಂದಿದ್ದಾರೆ. ಇದಕ್ಕೆ ಅತ್ಯುತ್ತಮ ನಿದರ್ಶನವೆಂದರೆ ನಯಸೇನನು ರಾಜ್ಯಕ್ಕೆ ಚತುರಂಗಮುಂ, ಮಂತ್ರಕ್ಕೆ ಚತುರ್ವಿಧೋಪಾಯಮುಮೊಪ್ಪುವಂತಾ ದಾನಕ್ಕೆ ಶಾಸ್ತ್ರಾದಿದಾನ ಚತುಷ್ಟಯಮೊಪ್ಪುಗುಮಿಂತು: ಎಂದಿದೆ.

ಪರಮಾಗಮದಿಂದಲ್ಲದೆ
ಪರತ್ರೆಯಂ ಪಡೆವುಪಾಯಮಿಲ್ಲದರಿಂದಂ
ವರಶಾಸ್ತ್ರಂ ಮಿಗಿಲೆಂದಾ।
ದರದಿಂ ಮಾಡುವುದು ಶಾಸ್ತ್ರದಾನಮನಳಿಪಿಂ॥

ಶ್ರುತವನಿತೆಯ ಮುಕ್ತಿಶ್ರೀ।
ಸತಿಯಲ್ಲಿಗೆ ಜೀಗಮುಯ್ವ ದೂದವಿಯೆಂಬೀ॥
ಮತಮನರಿದೋತು ಮಾಡುವು॥
ದತಿಶಯದಿಂ ಶಾಸ್ತ್ರದಾನಮಂ ಪದಪಿಂದಂ॥

ಶ್ರುತಭಾವನೆಯೊಳಮತಿಮನ
ಶ್ರುತಿ ನಿರ್ಮಲ ಮನದಿನಘಹರಂ ತದ್ದುರಿತ
ಕ್ಷತಿಯಿಂ ಕೈವಲ್ಯಶ್ರೀ
ಸತಿ ಸಾರ್ಗುಂ ಶಾಸ್ತ್ರದಾನದುನ್ನತಿ ಕಿರಿದೇ।[೧೬]

ಎನ್ನುವ ಶಾಸ್ತ್ರ, ಅನ್ನ, ಅಭಯ, ಭೈಷಜ ಎಂಬ ನಾಲ್ಕು ದಾನಗಳಲ್ಲಿ ಶಾಸ್ತ್ರದಾನದ ಮಹತ್ವ ಏನೆಂಬುದನ್ನು ಈ ಪದ್ಯಗಳಲ್ಲಿ ಸ್ಪಷ್ಟಪಡಿಸಲಾಗಿದೆ.

ಧರ್ಮಶಾಸ್ತ್ರದಿಂದಲ್ಲದೆ ಮೋಕ್ಷ ಸಾಧ್ಯವಿಲ್ಲ. ಕಾರಣ ಶಾಸ್ತ್ರಗಳೇ ಶ್ರೇಷ್ಠವೆಂದು ತಿಳಿದು, ಶಾಸ್ತ್ರದಾನ ಮಾಡಬೇಕು. ಈ ಶಾಸ್ತ್ರವನಿತೆಯೇ ನಮ್ಮನ್ನು ಮುಕ್ತಿಸ್ತ್ರೀ ಹತ್ತಿರ ಒಯ್ಯುತ್ತಾಳೆ. ಶ್ರುತಭಾವನೆಯಿಂದ ಮನಶುದ್ಧಿ, ಮನಶುದ್ಧಿಯಿಂದ ಪಾಪನಿವಾರಣೆ, ಪಾಪನಿವಾರಣೆಯಿಂದ ಕೈವಲ್ಯಸಿದ್ಧಿ. ಹೀಗಾಗಿ ಶಾಸ್ತ್ರದಾನ ಸರ್ವಶ್ರೇಷ್ಠವಾದುದು ಎಂದು ಈ ಪದ್ಯಗಳಲ್ಲಿ ತಿಳಿಸಲಾಗಿದೆ.

ಈ ಕಾರಣಕ್ಕಾಗಿ ಜೈನ ಪುರುಷರೂ–ಮಹಿಳೆಯರೂ ಶಾಸ್ತ್ರದಾನ ಕಾರ್ಯವನ್ನು ಭಕ್ತಿಯಿಂದ ಪೂರೈಸುತ್ತಾ ಬಂದಿದ್ದಾರೆ. "ಅಹಾರಾಭಯ ಭೈಷಜ್ಯ ಶಾಸ್ತ್ರದಾನ ವಿನೋದೆಯಂ"[೧೭] ಆಹಾರಾಭಯ

ಭೈಷಜ್ಯ ಶಾಸ್ತ್ರದಾನ ದತ್ತಾವಧಾನನುಂ[೧೮] ಎಂಬಂಥ ವಿಶೇಷಣಗಳನ್ನು ಹೊತ್ತ ನೂರಾರು ಸ್ತ್ರೀ-ಪುರುಷರು ಶಾಸನಗಳಲ್ಲಿ ಕಂಡುಬಂದಿದ್ದಾರೆ. ಈ ಶಾಸ್ತ್ರದಾನವನ್ನು ವ್ಯಕ್ತಿಗಳಿಗೂ ಬಸದಿಗಳಿಗೂ ಮಾಡಿದ ಅನೇಕ ಉದಾಹರಣೆಗಳು ದೊರೆಯುತ್ತವೆ. "ವರ್ಧಮಾನಕ್ಕಗಳು ಸೇನಗಣದ ನೇಮಕ್ಕಗಳಿಗೆ ಶಾಸ್ತ್ರದಾನವಾಗಿ ಬರೆದುಕೊಟ್ಟ ಧನ್ಯಕುಮಾರಚರಿತ" ಎಂಬಂಥ ಉಲ್ಲೇಖಗಳು ವ್ಯಕ್ತಿಗೆ ನೀಡಿದ ಶಾಸ್ತ್ರದಾನಕ್ಕೆ ಉತ್ತಮ ಉದಾಹರಣೆ[೧೯] ಎನಿಸಿವೆ.

"ಚಂದ್ರಸಾಗರ ವರ್ಣಿ ಬೆಳಗುಳ ಮಠಕ್ಕೆ ಬರೆದು ಒಪ್ಪಿಸಿದ ಚಂಪೂಭಾರತ ಸಂಪೂರ್ಣ"[೨೦] ಎಂಬಂಥ ನೂರಾರು ಹೇಳಿಕೆಗಳು ಬಸದಿಗಳಿಗೆ ನೀಡಿದ ಗ್ರಂಥದಾನವನ್ನು ತಿಳಿಸುತ್ತವೆ.

ಕರ್ನಾಟಕದ ಹೆಮ್ಮೆಯ ಹಸ್ತಪ್ರತಿಗಳಾದ **ಧವಲಾ, ಜಯಧವಲಾ, ಮಹಾಧವಲಾಗಳು** ಗ್ರಂಥದಾನಕ್ಕೆ ಪರಮಾವಧಿ ನಿದರ್ಶನವೆನಿಸಿವೆ. ದೇವಿಯಕ್ಕನುಶ್ರುತ ಪಂಚಮಿ ನೋಂಪಿಯನ್ನು ನೋಂತು, ಬನ್ನಿಗೆರೆಯ ಉತ್ತುಂಗ ಚೈತ್ಯಾಲಯದ ಆಚಾರ್ಯ ಶುಭಚಂದ್ರಸಿದ್ಧಾಂತ ದೇವರಿಗೆ ಧವಲಗ್ರಂಥದ ಪ್ರತಿಯನ್ನು ಅಣ್ಣ ಶ್ರೇಷ್ಠೆಯ ಪದ್ಮಸೇನ ಮುನೀಂದ್ರರಿಗೆ ಜಯಧವಲದ ಪ್ರತಿಯನ್ನು, ಶ್ರೀಮತಿಯು ಶ್ರೀ ಪಂಚಮಿ ಉದ್ಯಾಪನಾ ಸಂದರ್ಭದಲ್ಲಿ ಮಾಘನಂದಿ ಆಚಾರ್ಯರಿಗೆ ಮಹಾಧವಲಾ ಪ್ರತಿಯನ್ನು ಗ್ರಂಥದಾನವಾಗಿ ಅರ್ಪಿಸಿದ್ದಾರೆ.[೨೧] ಮುನಿಗಳಿಗೆ ನೀಡಲಾಗಿದ್ದರೂ ಇವು ಬಸದಿಗಳ ಭಂಡಾರಕ್ಕೆ ಅರ್ಪಿಸಿದುದು ವಿಶೇಷ. ಹೀಗೆ ಅರ್ಪಿತವಾದ ಹಾಗೂ ಸಂಗ್ರಹಿಸಿದ ಹಸ್ತಪ್ರತಿಗಳಿಂದ ಬೆಳೆದ ಪ್ರಾಚೀನ ಜೈನ ಹಸ್ತಪ್ರತಿ ಭಂಡಾರಗಳು. ಇವು ಪ್ರಸ್ತುತ ನಾಡಿನಲ್ಲಿ ಅತ್ಯಂತ ಆಸಕ್ತಿಯಿಂದ ಉತ್ಸಾಹದಿಂದ ನಾಡಿನ ಕ್ಷೇತ್ರತಜ್ಞರ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಜೈನರಲ್ಲಿ ಗ್ರಂಥಸಂಪತ್ತನ್ನು ಬೆಳೆಯಿಸುವ ಇಂತಹದೇ ಇನ್ನೊಂದು ಕಡ್ಡಾಯವನ್ನೆಬಹುದಾದ ಸಂದರ್ಭವೆಂದರೆ 'ಮೃತರು ಮೋಕ್ಷಕ್ಕೆ ಹೋಗಬೇಕೆಂಬ ಉದ್ದೇಶದಿಂದ ಗ್ರಂಥದಾನ ಮಾಡುವುದು. ಇದನ್ನು 'ಪರೋಕ್ಷ ವಿನಯ' ಎಂದು ಕರೆಯುತ್ತಿದ್ದರು.[೨೨] ಅತ್ತಿಮಬ್ಬೆ ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಬರೆಯಿಸಿದುದು ಪರೋಕ್ಷ ವಿನಯಕ್ಕೆ ಉತ್ತಮ ಉದಾಹರಣೆಯಾಗಿದೆ.

ಜೈನರಲ್ಲಿ ವಿವಿಧ ನೋಂಪಿ(ವ್ರತ)ಗಳ ಆಚರಣೆ, ಇನ್ನಿತರ ಹಲವು ವಿಧಿವಿಧಾನಗಳ ಮೂಲಕ ನಾಡಿನ ಜೈನಮಠಗಳಲ್ಲಿ ಹಸ್ತಪ್ರತಿ ಸಂಗ್ರಹಗೊಂಡು ಉತ್ತಮ ರೀತಿಯಲ್ಲಿ ನಾಡಿನ ಹಸ್ತಪ್ರತಿತಜ್ಞರ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಅವುಗಳೆಂದರೆ ಶ್ರವಣಬೆಳಗೊಳ, ಮೂಡುಬಿದರೆ, ಕಾರ್ಕಳ, ಹೊಂಬುಜ, ಧರ್ಮಸ್ಥಳ, ಅಲಿಯೂರು, ಜೈನಮಠಗಳು ವ್ಯವಸ್ಥಿತವಾದ ಹಸ್ತಪ್ರತಿ ಭಂಡಾರಗಳನ್ನು ಹೊಂದಿವೆ. ಅಷ್ಟೇ ಏಕೆ, ನೆರೆಯ ರಾಜ್ಯದ ಮಹಾರಾಷ್ಟ್ರದ ಕೊಲ್ಲಾಪುರ, ಉತ್ತರ ಭಾರತದ ಬಿಹಾರದ ಅರಾಗಳಲ್ಲಿಯೂ ಕನ್ನಡ ಹಸ್ತಪ್ರತಿ ಭಂಡಾರಗಳಿರುವುದು ಗಮನಾರ್ಹ.

೧. ಶ್ರವಣಬೆಳಗೊಳದ ಆಗಮ ದರ್ಶನ ಹಸ್ತಪ್ರತಿ ಭಂಡಾರ

ಭಾರತದ ಪ್ರಮುಖ ಜೈನಕೇಂದ್ರಗಳಲ್ಲಿ ಹಾಸನ ಜಿಲ್ಲೆಯ ಶ್ರವಣಬೆಳಗೊಳವು ಒಂದು. "ಧವಲತೀರ್ಥಂ"ನಲ್ಲಿ **'ರಾಷ್ಟ್ರೀಯ ಪ್ರಾಕೃತ ಮತ್ತು ಸಂಶೋಧನಾ ಕೇಂದ್ರ'** ಸ್ಥಾಪಿಸಲಾಗಿದೆ. ಈ ಸಂಶೋಧನ ಸಂಸ್ಥೆ ೧೯೮೧ರಲ್ಲಿ ಶ್ರವಣಬೆಳಗೊಳದ ಜೈನಮಠದ ಮಠಾಧೀಶರಾದ **ಸ್ವಸ್ತಿಶ್ರೀ**

ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳ ಇಚ್ಛೆಯಂತೆ ಸ್ಥಾಪನೆಯಾಗಿದೆ. ಈ ಸಂಶೋಧನಾ ಕೇಂದ್ರದ ಉದ್ದೇಶ ಪ್ರಾಕೃತ ಭಾಷೆಯ ಅಧ್ಯಯನ, ಪ್ರಕಾಶನ, ಅನುವಾದ ಹಾಗೂ ಶ್ರುತ ಸಂಸ್ಕರಣೆ ಮತ್ತು ಪ್ರಸಾರ ಮಾಡುವುದಾಗಿದೆ. ಅಲ್ಲದೆ, ಪ್ರಾಕೃತ ಭಾಷೆಯನ್ನು ಬೆಳಕಿಗೆ ತರುವಲ್ಲಿ ಗ್ರಂಥ ಸಂಶೋಧನೆಗೆ ವಿದ್ವಾಂಸರನ್ನು ತೊಡಗಿಸುವ ಹಾಗೂ ಪ್ರಾಚೀನ ಜ್ಞಾನದ ಆಕರಗಳ ರಕ್ಷಣೆ ಮಾಡುವುದಾಗಿದೆ.

ಈ ಸಂಶೋಧನ ಸಂಸ್ಥೆ ೫೦ ಎಕರೆಯಲ್ಲಿ ಸ್ಥಾಪಿತವಾಗಿದ್ದು, ಶ್ರವಣಬೆಳಗೊಳದಿಂದ ೫ ಕಿ.ಮೀ. ಅಂತರದಲ್ಲಿ ಬೆಂಗಳೂರು ರಸ್ತೆಯಲ್ಲಿದೆ. ಭವ್ಯವೂ ಸುಂದರವೂ ಆದ ಸ್ವತಂತ್ರ ಕಟ್ಟಡ ಹೊಂದಿದೆ. ಈ ಭಂಡಾರದಲ್ಲಿ ಕನ್ನಡ, ಸಂಸ್ಕೃತ, ಪ್ರಾಕೃತ ಭಾಷೆಯ ಪ್ರಾಚೀನ ಕಾಲದ ೫೦೦೦ಕ್ಕೂ ಹೆಚ್ಚು ತಾಳೆಗರಿ ಹಸ್ತಪ್ರತಿಗಳೊಂದಿಗೆ ೫೦೦ಕ್ಕೂ ಹೆಚ್ಚು ಹಳೆಯ ಕಾಗದದ ಪ್ರತಿಗಳು ಸುರಕ್ಷಿತವಾಗಿ ಸಂರಕ್ಷಿಸಲ್ಪಟ್ಟಿವೆ. ಕೀಟಗಳಿಂದ ರಕ್ಷಿಸಲು ರಾಸಾಯನಿಕ ತೈಲವನ್ನು ಉಪಯೋಗಿಸಲಾಗುತ್ತಿದೆ. ಮೈಕ್ರೋಫಿಲಂ ಕೂಡ ಮಾಡಲಾಗಿದೆ. ಸಂಶೋಧಕರು ಪರಾಮರ್ಶಿಸಲು ೨೦ ಸಾವಿರಕ್ಕೂ ಹೆಚ್ಚು ಗ್ರಂಥಗಳನ್ನು ಸಂಗ್ರಹಿಸಲಾಗಿದೆ. ಜೈನ ಧಾರ್ಮಿಕ ಕೇಂದ್ರವಾಗಿದ್ದ ಕಾರಣ ಇಲ್ಲಿ ಪ್ರಾಕೃತ ಮತ್ತು ಸಂಸ್ಕೃತ ಹಸ್ತಪ್ರತಿಗಳ ಸಂಗ್ರಹದತ್ತ ಹೆಚ್ಚು ಗಮನ ಕೊಟ್ಟಿರುವುದು ಸಹಜವಾಗಿದೆ. ವಿಶೇಷವಾಗಿ ಜೈನ ಹಸ್ತಪ್ರತಿಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಆದರೂ ಕನ್ನಡ ಹಸ್ತಪ್ರತಿಗಳ ಸಂಖ್ಯೆ ಅತ್ಯಂತ ಕಡಿಮೆಯಾಗಿವೆ. ಚಾವುಂಡರಾಯ ಪುರಾಣ, ಅಗ್ಗಳನ 'ಚಂದ್ರಪ್ರಭೆಪುರಾಣ', ನಯಸೇನನ 'ಧರ್ಮಾಮೃತ', ಪೊನ್ನನ 'ಶಾಂತಿಪುರಾಣ', ಪಾರ್ಶ್ವಪಂಡಿತನ 'ಪಾರ್ಶ್ವನಾಥ ಪುರಾಣ', ಬ್ರಹ್ಮಶಿವನ 'ಸಮಯ ಪರೀಕ್ಷೆ', ವೃತ್ತವಿಲಾಸನ 'ಧರ್ಮಪರೀಕ್ಷೆ', ನಾಗರಾರ್ಯನ 'ಪುಣ್ಯಾಶ್ರಮ ಕಥಾಕೋಶ', ರತ್ನಾಕರವರ್ಣಿಯ 'ಭರತೇಶ ವೈಭವ', ನಾಗಚಂದ್ರನ 'ಪಂಪ ರಾಮಾಯಣ', ಆಂಡಯ್ಯನ 'ಕಬ್ಬಿಗರ ಕಾವ್ಯ', ಮೂರನೆಯ ಮಂಗರಸನ 'ನೇಮಿಜಿನೇಶ ಸಂಗತಿ' ಮುಂತಾದ ನೂರಾರು ಹಸ್ತಪ್ರತಿಗಳು ಇಲ್ಲಿವೆ.

* **ಸೂಚಿಗಳ ವಿವರ**

೧. ಶ್ರೀ ಜೈನಮಠದ ತಾಡಪ್ರತಿಯ ಗ್ರಂಥಗಳಸೂಚಿ; ೧೯೮೦(ದೇವಕುಮಾರಶಾಸ್ತ್ರಿಯವರಿಂದ)
೨. ಕನ್ನಡ ಹಸ್ತಪ್ರತಿಗಳ ವರ್ಣಾನಾತ್ಮಕಸೂಚಿ ಸಂಪುಟ–೧–೧೯೯೭
೩. ಪ್ರಾಕೃತ ಹಸ್ತಪ್ರತಿಗಳ ವರ್ಣಾನಾತ್ಮಕಸೂಚಿ ಸಂಪುಟ–೨–೧೯೯೮
೪. ಕನ್ನಡ ಹಸ್ತಪ್ರತಿಗಳ ವರ್ಣಾನಾತ್ಮಕಸೂಚಿ ಸಂಪುಟ–೩– ೨೦೦೩ ಜೊತೆಗೆ
೫. ಪ್ರಾಕೃತ ಪರಿಮಳ'ವೆಂಬ ಸ್ಮರಣ ಸಂಚಿಕೆಯನ್ನು ಹೊರತರುತ್ತಿದೆ.

'ಪ್ರಾಕೃತ ಪರಿಮಳ'ದ ನಾಲ್ಕು ಸಂಪುಟಗಳನ್ನು ಈಗಾಗಲೇ ಪ್ರಕಟಿಸಲಾಗಿದೆ. ಮುಂಬರುವ ದಿನಗಳಲ್ಲಿ ಸಂಸ್ಕೃತ ಮತ್ತು ಇತರೆ ಭಾಷೆಯ ಹಸ್ತಪ್ರತಿಸೂಚಿ ಸಂಪುಟಗಳನ್ನು ಪ್ರಕಟಿಸುವ ಯೋಜನೆಯನ್ನು ಶ್ರೀಮಠವು ಹಾಕಿಕೊಂಡಿದೆ.[೨]

ಜೊತೆಗೆ 'ಭುಜಬಲಿಚರಿತೆ', 'ಜೈನಭಾರತ' ಸಂಗ್ರಹಗಳಂಥ ಅಪ್ರಕಟಿತ ಕೆಲವು ಕೃತಿಗಳನ್ನು ಪ್ರಕಟಿಸಿ ಜೈನ ಸಾಹಿತ್ಯ ಚರಿತ್ರೆಗೆ ತನ್ನದೇ ಆದ ಕೊಡುಗೆಯನ್ನು ಸಲ್ಲಿಸುತ್ತಿದೆ. ಪ್ರಸ್ತುತ ಸಂದರ್ಭದಲ್ಲಿ 'ಧವಲತ್ರಯ' ಗ್ರಂಥಗಳನ್ನು ಪ್ರಾಕೃತದಿಂದ ಕನ್ನಡ ಭಾಷೆಗೆ ತರ್ಜುಮೆ ಮಾಡುವ ಕಾರ್ಯ ಕೈಗೆತ್ತಿಕೊಂಡಿದೆ.

ಸಂಗ್ರಹಗೊಂಡ ಹಸ್ತಪ್ರತಿಗಳು ಶ್ರವಣಬೆಳಗೊಳದಲ್ಲಿಯೇ ಬರೆದುವಲ್ಲದೆ ದೂರದ ತೋವಿನಕೆರೆ, ಬಿದುರೆ, ಅಮ್ಮಯ್ಯನಬಾವಿ, ತೇರದಾಳಗಳಿಂದ ಬಂದಿರುವ ಹಸ್ತಪ್ರತಿಗಳು ಇಲ್ಲಿವೆ. ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಮಾರ್ಗದರ್ಶನ ಹಾಗೂ ಪ್ರೋತ್ಸಾಹದಿಂದ ಸ್ಥಾಪಿತವಾದ ಶ್ರವಣಬೆಳಗೊಳದ ಹಸ್ತಪ್ರತಿ ಭಂಡಾರ ಕೇಂದ್ರ ಸರ್ಕಾರದ 'ರಾಷ್ಟ್ರೀಯ ಹಸ್ತಪ್ರತಿ ಅಭಿಯಾನ'ದಿಂದ ಮಾನ್ಯತೆಯನ್ನು ಪಡೆದಿದೆ. ಶ್ರೀ ಮಠದ ಆಡಳಿತ ಮಂಡಳಿಯವರ ಸಹಕಾರ, ಹಸ್ತಪ್ರತಿ ತಜ್ಞರಾದ ಬಿ.ಎಸ್. ಸಣ್ಣಯ್ಯನವರ ಅಪಾರ ಶ್ರದ್ಧೆ, ಕಾಳಜಿಯಿಂದಾಗಿ ನಾಡಿನಲ್ಲಿಯೇ ಇದೊಂದು ಉತ್ತಮ ಭಂಡಾರವಾಗಿ ಬೆಳೆಯುತ್ತಿರುವ ಸಂಸ್ಥೆಗಳಲ್ಲಿ ಒಂದಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

೨. ಮೂಡುಬಿದಿರೆಯ ದಿಗಂಬರ ಜೈನಮಠ

ಜೈನಧರ್ಮದ ದಕ್ಷಿಣ ಕಾಶಿಯೆಂದು ಪ್ರಸಿದ್ಧವಾದ ಈ ಮಠವು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೂಕಿನ ಮೂಡುಬಿದಿರೆಯಲ್ಲಿದೆ. ಇಲ್ಲಿನ ದಿಗಂಬರ ಜೈನಮಠ, ಸಾಸಿರ ಕಂಬಗಳ ಬಸದಿ, ಸಿದ್ಧಾಂತ ಬಸದಿಗಳು ಜೈನಧರ್ಮದ ಕಲೆ ಮತ್ತು ಸಂಸ್ಕೃತಿಯ ದ್ಯೋತಕವಾಗಿವೆ. ಇಲ್ಲಿನ ದಿಗಂಬರ ಜೈನಮಠದಲ್ಲಿ ಒಂದು ಹಸ್ತಪ್ರತಿ ಸಂಗ್ರಹವಿದೆ. ಈ ಕ್ಷೇತ್ರದ ಇತಿಹಾಸವನ್ನು ತಿಳಿಯಲು ಶಾಸನಗಳು, ತಾಮ್ರಶಾಸನಗಳು, ಸಾಹಿತ್ಯಕೃತಿಗಳು, ಜೈನ ಬಸದಿಗಳು, ದೇವಾಲಯಗಳು, ಮಠಗಳು, ಹಸ್ತಪ್ರತಿಗಳು ವಿಪುಲವಾಗಿ ಸಿಗುವುದರಿಂದ ಸ್ಪಷ್ಟವಾದ ದಾಖಲೆಗಳನ್ನು ಒದಗಿಸುತ್ತವೆ. ಮೂಡುಬಿದಿರೆಯನ್ನು ಹಲವಾರು ಹೆಸರುಗಳಿಂದ ಕರೆಯಲಾಗಿದೆ. ಮೂಡುಬಿದಿರೆಯೆಂದರೆ 'ಪೂರ್ವದಲ್ಲಿ ಬಿದಿರು ಬೆಳೆಯುವ ಕ್ಷೇತ್ರ ಎಂಬ ಕಾರಣಕ್ಕಾಗಿ ಮೂಡುಬಿದಿರೆ' ಎಂಬ ಹೆಸರಿದೆ. ಹಾಗೆಯೇ ಮೂಡುಬಿದಿರೆಯನ್ನು 'ಮೂಲ ಭದ್ರಿ ಸಿಂಹವೇಣಿಪುರ' ಎಂದು ಕರೆಯುತ್ತಾರೆ. ಇದನ್ನು ಸಂಸ್ಕೃತದಲ್ಲಿ ವಂಶಪುರ, ವೇಣುಪುರ, ಕ್ಷೇಮವೇಣುಪುರ ಮತ್ತು ಪ್ರಾಗ್ವೇಣುಪುರ ಎಂಬ ಹೆಸರುಗಳಿಂದಲೂ ಕರೆಯಲಾಗುತ್ತಿದೆ. ಆದರೆ ಕ್ರಿ.ಶ.೧೦-೧೧ನೇ ಶತಮಾನದ ಹೊತ್ತಿಗೆ ಮೂಡುಬಿದಿರೆ ಬೃಹತ್ ಜೈನ ಕೇಂದ್ರವಾಗಿ ರೂಪುಗೊಂಡಿತು ಎಂಬುದು ಕ್ಷೇತ್ರಾಧ್ಯಯನದಿಂದ ತಿಳಿದುಬಂದಿದೆ.

'ಜೈನಮಠದ ಹಸ್ತಪ್ರತಿ ಸಂಗ್ರಹಾಲಯದಲ್ಲಿರುವ ಹಸ್ತಪ್ರತಿಗಳು ವಿವಿಧ ವಿಷಯ ಹಾಗೂ ಲಿಪಿಗಳಿಂದ ಕೂಡಿರುತ್ತವೆ. ಅವುಗಳೆಂದರೆ 'ಸಿದ್ಧಾಂತ-೧೬೪, ಅಧ್ಯಾತ್ಮ-೧೧೯, ಧರ್ಮ-೪೭೮, ಯೋಗಶಾಸ್ತ್ರ-೧೬, ಪ್ರತಿಷ್ಠಾನ-೨೪, ವ್ರತವಿಧಾನ ೭೫, ನ್ಯಾಯ-೧೬೦, ವ್ಯಾಕರಣ-೧೧೨, ಕೋಶ-೫೪, ಕಾವ್ಯ-೧೬೦, ನಾಟಕ-೫, ಅಲಂಕಾರ-೩೦, ಛಂದಸ್ಸು-೧೭, ನೀತಿ ಸುಭಾಷಿತ-೨೫, ಪುರಾಣ-೮೬, ಚರಿತ್ರೆ-೮೭, ಕಥಾ-೫೫, ಇತಿಹಾಸ-೯, ಆಯುರ್ವೇದ-೧೬, ಜ್ಯೋತಿಷ್ಯ-೨೧, ಗಣಿತ-೯, ಮಂತ್ರಶಾಸ್ತ್ರ-೧೪, ಲೋಕವಿಜ್ಞಾನ-೨೫, ಶಿಲ್ಪಶಾಸ್ತ್ರ-೪, ಲಕ್ಷಣ-ಕ್ರಿಯಾಕಾಂಡ-೬೯, ಸ್ತೋತ್ರ-೧೮೨, ಭಜನಾಗೀತೆ-೧೫, ಪ್ರಕೀರ್ಣಕ-೨೦. ಹೀಗೆ ಭಂಡಾರದಲ್ಲಿ ವಿಭಿನ್ನ ವೈವಿಧ್ಯಮಯ ವಿಷಯಗಳನ್ನೊಳಗೊಂಡ ೨೦೬೯ ಪ್ರತಿಗಳನ್ನು ಸಂಗ್ರಹಿಸಲಾಗಿದೆ. ಇಲ್ಲಿ ದೊರೆತ ಇಮ್ಮಡಿ ನಾಗವರ್ಮನ 'ವರ್ಧಮಾನ ಪುರಾಣ' ಜೈನ ಹಸ್ತಪ್ರತಿ ಭಂಡಾರಗಳಲ್ಲಿಯೇ ದೊಡ್ಡದೆಂದು ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯಪಟ್ಟಿದ್ದಾರೆ'.[೨೪]

ವಿಶೇಷವಾಗಿ ಸಿದ್ಧಾಂತ ಬಸದಿಯಲ್ಲಿರುವ ಧವಲ–ಜಯಧವಲ–ಮಹಾಧವಲ ಎಂಬ ಜೈನ ಸಿದ್ಧಾಂತ ಗ್ರಂಥದ ಹಸ್ತಪ್ರತಿಗಳು, ಭಾರತದಲ್ಲಿಯೇ ಏಕೈಕ ಹಸ್ತಪ್ರತಿಗಳಾಗಿ ಸಂರಕ್ಷಿಸಲ್ಪಟ್ಟಿವೆ. ಕನ್ನಡ ಲಿಪಿ, ಅರ್ಧಮಾಗಧಿ ಭಾಷೆಯಲ್ಲಿದ್ದು ೭೭(ಧವಲ), ೫೧೮(ಜಯಧವಲ), ೨೧೯(ಮಹಾಧವಲ) ತಾಡೋಲೆ ಪ್ರತಿಗಳಿವೆ. ಚಾವುಂಡರಾಯನ ಗುರು ನೇಮಿಚಂದ್ರ ಸಿದ್ಧಾಂತಿಗಳು "ಇಂತು ಮಹಾಧವಲ ಸಿದ್ಧಾಂತಮಂ ರಚಿಸಿರ್ದ ಪುಸ್ತಕಂಗಳಂ ರಕ್ಷಿಸಲು ಸಿದ್ಧಾಂತ ಬಸ್ತಿಯಂ ಮಾಡಿಸಿ, ಅಲ್ಲಿ ಸ್ಥಾಪಿಸಿ ಪೂಜಿಸುತ್ತಂ" ವೆಂಬ ದೇವಚಂದ್ರ ಕವಿಯು ತನ್ನ 'ರಾಜಾವಳಿ ಕಥೆ'ಯಲ್ಲಿ ಹೇಳಿದ್ದಾನೆ. ಹೀಗಾಗಿ ೧೦ನೆಯ ಶತಮಾನದ ಹೊತ್ತಿಗೆ ಈ ಗ್ರಂಥಗಳು ಶ್ರವಣಬೆಳಗೊಳದಿಂದ ಮೂಡುಬಿದಿರೆಗೆ ಸಾಗಿಸಲ್ಪಟ್ಟಿರಬೇಕೆಂದು ಡಾ.ಎಂ.ಎಂ.ಕಲಬುರ್ಗಿಯವರು ತಿಳಿಸಿದ್ದಾರೆ.[೨೫]

೧೯೭೦ರಲ್ಲಿ ಬಿ.ಎಸ್.ಸಣ್ಣಯ್ಯನವರು ಇಲ್ಲಿನ ಕೆಲವು ಹಸ್ತಪ್ರತಿಗಳನ್ನು ಮೈಕ್ರೋಫಿಲಂ ಮಾಡಿಸುವುದರ ಮೂಲಕ ಅವುಗಳ ಸಂಗ್ರಹ, ಸಂರಕ್ಷಣೆಗೆ ನಾಂದಿ ಹಾಡಿದ್ದಾರೆ. ಇದೇ ಸಂದರ್ಭದಲ್ಲಿ ಕನ್ನಡದ ಪ್ರಸಿದ್ಧ ಜೈನಕವಿಯಾದ ಎರಡನೆಯ ನಾಗವರ್ಮನ **'ವರ್ಧಮಾನ ಪುರಾಣವು'** ಸಣ್ಣಯ್ಯನವರಿಂದ ಶೋಧಗೊಂಡದ್ದು, ಹಸ್ತಪ್ರತಿ ಇತಿಹಾಸದಲ್ಲೊಂದು ಮೈಲುಗಲ್ಲಾಗಿದೆ ಎನ್ನಬಹುದು.

ಇದುವರೆಗೆ ಯಾರಿಗೂ ತಿಳಿಯದಿದ್ದ 'ಬಂಧುವರ್ಮನ" 'ಸತಿಧರ್ಮಸಾರ'ವೆಂಬ ಸಾಂಗತ್ಯ ಕೃತಿಯು ಇವರ ಪರಿಶ್ರಮದಿಂದ ಶೋಧವಾಗಿದೆ. ಸಮಂತ **ಭದ್ರಾಚಾರ್ಯರ 'ರತ್ನಕರಂಡಕ ಶ್ರಾವಕಾಚರ'** ಕೃತಿಯು ಉತ್ತಮ ರೀತಿಯಲ್ಲಿ ಸಂರಕ್ಷಣೆಗೊಂಡದ್ದು, ಇಲ್ಲಿನ ಒಂದು ಹಸ್ತಪ್ರತಿಯ ನೆರವಿನಿಂದ ಸುಗುಣಾಶೆಟ್ಟಿ ಅವರು ಮೂಡುಬಿದಿರೆ ಬಸದಿಗಳಲ್ಲಿರುವ "ಬಿಂಬಗಳ ಲೆಕ್ಕ ಪುಸ್ತಕ" ಎಂಬ ಕೃತಿಯನ್ನು ಪರಿಶೋಧಿಸಿ ೨೦೦೭ರಲ್ಲಿ ಕರ್ನಾಟಕ ಸರಕಾರದ ಪತ್ರಾಗಾರ ಇಲಾಖೆಯಿಂದ ಪ್ರಕಟಿಸಲಾಗಿದೆ. ಈ ಹಸ್ತಪ್ರತಿ ಭಂಡಾರದ ವಿಶೇಷತೆಗಳಲ್ಲಿ ಒಂದಾಗಿದೆ.

೧೯೪೮ರಲ್ಲಿ ಇಲ್ಲಿನ ಹಸ್ತಪ್ರತಿಗಳ ವಿವರಗಳನ್ನು ಹೊಂದಿರುವ **'ಕನ್ನಡ ಪ್ರಾಂತೀಯ ತಾಡಪ್ರತಿಯ ಗ್ರಂಥಸೂಚಿ'**ಯನ್ನು ಕೆ. ಭುಜಬಲಿಶಾಸ್ತ್ರಿಗಳು ಸಿದ್ಧಪಡಿಸಿ ಅಧ್ಯಯನಕಾರರು ಮತ್ತು ಸಂಶೋಧಕರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ.

ಭಂಡಾರದಲ್ಲಿಯ ಸಂರಕ್ಷಣೆಯ ವಿವಿಧ ಕ್ರಮಗಳನ್ನು ಅನುಸರಿಸಿ ಸಿಟ್ರಿನಲ್ ಎಣ್ಣೆಯನ್ನು ಲೇಪನ ಮಾಡಲಾಗುತ್ತಿದೆ. ಜೊತೆಗೆ ಸೂಚಿ ತಯಾರಿಸುವ ವಿವಿಧ ಯೋಜನೆಗಳನ್ನು ತಯಾರಿಸಲಾಗುತ್ತಿದೆ. ಈ ಕಾರಣಕ್ಕಾಗಿಯೇ ನಾಡಿನ ಉತ್ತಮ ಹಸ್ತಪ್ರತಿ ಭಂಡಾರವೆಂದು ಹೇಳಲಾಗಿದೆ.

೩. ಹೊಂಬುಜದ ಜೈನಮಠ

ಜೈನಧರ್ಮದ ಮತ್ತೊಂದು ಕ್ಷೇತ್ರ. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಹೊಂಬುಜ. ಇದು ಹಚ್ಚ ಹಸಿರಿನ ಮಲೆನಾಡಿನ ಮಡಿಲಿನಲ್ಲಿರುವ ಒಂದು ಭವ್ಯವಾದ ಚಾರಿತ್ರಿಕ ಪ್ರದೇಶವಾಗಿದೆ. ಹಾಗೆಯೇ ಇದೊಂದು ಅತಿಶಯ ಕ್ಷೇತ್ರವಾಗಿದೆ. ಹೊಂಬುಜವು ತುಂಬಾ ಪ್ರಾಚೀನ ಇತಿಹಾಸವನ್ನು ತನ್ನ ಒಡಲೊಳಗೆ ಬಚ್ಚಿಟ್ಟುಕೊಂಡಿದೆ. ಹಲವಾರು ರಾಜಮನೆತನಗಳು ಈ ಕ್ಷೇತ್ರದಲ್ಲಿ ಆಳ್ವಿಕೆ ನಡೆಸಿದ ಕುರುಹುಗಳಾಗಿ ಹಲವಾರು ದೇವಾಲಯ, ಬಸದಿಗಳು, ಮಠಗಳನ್ನು ಕಾಣಬಹುದಾಗಿದೆ.

ಜೈನಮಠದಲ್ಲಿರುವ ಹಸ್ತಪ್ರತಿ ಭಂಡಾರವು ಕೇವಲ ಸಂಗ್ರಹಗೊಂಡ ಹಸ್ತಪ್ರತಿಗಳು ಒಂದು ಕೋಣೆಗೆ ಮಾತ್ರ ಸೀಮಿತವಾಗಿರುವುದನ್ನು ಕಾಣಬಹುದು. ಸಂಗ್ರಹಗೊಂಡ ಹಸ್ತಪ್ರತಿಗಳಲ್ಲಿ ಒಂದೊಂದು ಕನ್ನಡ ಕೃತಿಗಳು ಸುಮಾರು ೨೦-೩೦ ಪ್ರತಿಗಳು ಲಭ್ಯವಾಗಿವೆ. ಹಿಂದಿ, ಮರಾಠಿ, ಸಂಸ್ಕೃತ, ತಮಿಳು, ತೆಲುಗು, ಕೃತಿಗಳಿಗೂ ಇಲ್ಲಿ ಆಶ್ರಯ ದೊರೆತಿದೆ. ಒಂದೊಂದು ಕೃತಿಯ ಭಾಷೆ ಪ್ರಾಕೃತ ಇಲ್ಲವೇ ಸಂಸ್ಕೃತದಲ್ಲಿದ್ದರೆ ಅದರ ಲಿಪಿ ಹಳಗನ್ನಡ ಇಲ್ಲವೇ ತಮಿಳಿನಲ್ಲಿರುವುದು ಕಂಡುಬರುತ್ತದೆ.

ವಿಶೇಷವಾಗಿ ಜೈನ ತೀರ್ಥಂಕರರ ಚರಿತ್ರೆಗಳು, ಕಾವ್ಯಪುರಾಣಗಳು, ಪ್ರಾಕೃತ ಭಾಷೆಯ ತಾಡೋಲೆ, ಕೋರಿಕಾಗದದ ಹಸ್ತಪ್ರತಿಗಳು ಇಲ್ಲಿನ ಭಂಡಾರದಲ್ಲಿ ಅಧಿಕ ಸಂಖ್ಯೆಯಲ್ಲಿರುವುದನ್ನು ಕಾಣುತ್ತೇವೆ. ಪ್ರತಿಯೊಂದು ಕಟ್ಟುಗಳನ್ನು ಕೆಂಪು ಬಟ್ಟೆಯಿಂದ ಕಟ್ಟಿ ಸಂರಕ್ಷಿಸಲಾಗಿದೆ. ಆದರೆ ಭಂಡಾರದ ಪ್ರಮುಖ ಕೊರತೆಯೆಂದರೆ ಸಮಗ್ರ ಹಸ್ತಪ್ರತಿಗಳ ವಿವರಣಾತ್ಮಕಸೂಚಿ ಸಿದ್ಧಪಡಿಸಲಾಗಿಲ್ಲ. ಮುಂದಿನ ದಿನಗಳಲ್ಲಿ ವಿವರಣಾತ್ಮಕ ಸೂಚಿ ತಯಾರಿಸುವ ಯೋಜನೆ ತಯಾರಿಸಿ ಜರೂರಾಗಿ ಕಾರ್ಯರೂಪಕ್ಕೆ ತರಬೇಕಾಗಿದೆ.

೪. ಕಾರ್ಕಳದ ಜೈನಮಠ

ಮೂಡುಬಿದಿರೆಯ ತಾಲೂಕು ಕೇಂದ್ರವಾದ ಕಾರ್ಕಳದ ಜೈನಮಠದಲ್ಲಿ ವ್ಯಾಕರಣ, ಆರಾಧನೆ, ಚರಿತ್ರೆ, ಶಾಸ್ತ್ರ, ಅಲಂಕಾರ, ಅಧ್ಯಾತ್ಮ ವಿಷಯವನ್ನು ಒಳಗೊಂಡ ಒಟ್ಟು ೨೨೪ ಹಸ್ತಪ್ರತಿಗಳ ಸಂಗ್ರಹವಿದೆ. ಇಲ್ಲಿ ಸಹ ವರ್ಣನಾತ್ಮಕಸೂಚಿ ತಯಾರಿಸುವ ಕೊರತೆ ಕಂಡುಬಂದಿದೆ. ಇಲ್ಲಿಯೂ ಕೆಂಪು ಬಟ್ಟೆಯಿಂದ ಸುತ್ತಿ ಹಸ್ತಪ್ರತಿಗಳನ್ನು ಸಂರಕ್ಷಣೆ ಮಾಡಲಾಗಿದೆ.

೫. ಅಲಿಯೂರಿನ ಆದಿನಾಥ ಗ್ರಂಥಭಂಡಾರ

ಇದು ಸಹ ಜೈನ ಕೇಂದ್ರ, ಇಲ್ಲಿ ಹಸ್ತಪ್ರತಿ ಸಂಗ್ರಹವಿದೆ. ೨೬ ಪ್ರತಿಗಳನ್ನೊಳಗೊಂಡ ಈ ಗ್ರಂಥಭಂಡಾರದಲ್ಲಿ ಲೋಕವಿಜ್ಞಾನ, ಶಿಲ್ಪಶಾಸ್ತ್ರ, ಭಜನೆ, ಆರಾಧನೆ, ಕೋಶಗಳಂತಹ ಕೃತಿಗಳಿರುವುದನ್ನು ಕಾರ್ಕಳ ಮತ್ತು ಅಲಿಯೂರಿನ ಈ ಹಸ್ತಪ್ರತಿಗಳ ವಿವರಗಳು ಕನ್ನಡ ಪ್ರಾಂತೀಯ ತಾಡಪ್ರತಿಯ ಗ್ರಂಥಸೂಚಿಯಲ್ಲಿವೆ.

೬. ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ

ಧರ್ಮಾಧಿಕಾರಿಗಳಾದ ಪೂಜ್ಯಶ್ರೀ ವೀರೇಂದ್ರ ಹೆಗ್ಗಡೆ ಅವರ ಪ್ರೋತ್ಸಾಹ ಹಾಗೂ ಹಸ್ತಪ್ರತಿ ವಿದ್ವಾಂಸರಾದ ಗೌ.ಮ.ಉಮಾಪತಿಶಾಸ್ತ್ರಿಯವರ ವಿದ್ವತ್ತು ಮತ್ತು ಸತತ ಪರಿಶ್ರಮದಿಂದಾಗಿ ಪ್ರಾಚೀನ ಹಸ್ತಪ್ರತಿಗಳು, ಮುದ್ರಿತ ಪುಸ್ತಕಗಳ ಸಂಗ್ರಹ, ಸಂರಕ್ಷಣೆ, ಸಂಶೋಧನೆ, ಸಂಪಾದನೆ ಹಾಗೂ ಪ್ರಕಾಶನಗಳ ಬೃಹತ್ ಯೋಜನೆಯನ್ನು ೨೩ ವರ್ಷಗಳ ಹಿಂದೆ ಹಮ್ಮಿಕೊಂಡಿದ್ದರು. ಅದರ ಅಂಗವಾಗಿ ರಾಷ್ಟ್ರಕವಿ ಕುವೆಂಪು ಅವರಿಂದ ೨೦.೮.೧೯೮೮ರಂದು ನಾಮಕರಣಗೊಂಡ ಪ್ರಾಚ್ಯ ವಿದ್ಯಾಸಂಸ್ಥೆ **'ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ'** ಎಂಬ ಹೆಸರಲ್ಲಿ ನಾಮಕರಣಗೊಂಡಿದೆ. ಪ್ರತಿಷ್ಠಾನದ ಹಸ್ತಪ್ರತಿ ಭಂಡಾರವು ರಾಜ್ಯದಲ್ಲಿಯೇ ಒಂದು ಮಾದರಿ

ಹಸ್ತಪ್ರತಿ ಭಂಡಾರವಾಗಿ ರೂಪುಗೊಂಡಿದೆ. ಸಂರಕ್ಷಣೆಯ ದೃಷ್ಟಿಯಿಂದಂತೂ ವಿನೂತನ ಕ್ರಮಗಳನ್ನು ಇಲ್ಲಿ ಅನುಸರಿಸಲಾಗಿದೆ.

ಪ್ರತಿಷ್ಠಾನದಲ್ಲಿ ಸುಮಾರು ಕ್ರಿ.ಶ.೧೪೦೦ರಿಂದ ಕ್ರಿ.ಶ.೧೮೦೦ರವರೆಗಿನ ಸಂಸ್ಕೃತ ಹಸ್ತಪ್ರತಿಗಳ ಸಂಗ್ರಹವಿದೆ. ಸಂಸ್ಕೃತ ಭಾಷೆ ಒಂದಾದರೂ ಭಾರತದ ಆಯಾ ಪ್ರದೇಶಗಳವರು ಅದನ್ನು ಬರೆಯಲು ವಿವಿಧ ಲಿಪಿಗಳನ್ನು ಬಳಸಿದ್ದಾರೆ. ದಕ್ಷಿಣ ಭಾರತದಲ್ಲಿ ಕನ್ನಡ, ತೆಲುಗು, ಗ್ರಂಥ, ನಂದಿನಾಗರಿ, ತುಳು ಮತ್ತು ಮಲೆಯಾಳ ಹೀಗೆ ವಿವಿಧ ಲಿಪಿಗಳಲ್ಲಿ ಸಂಸ್ಕೃತ ಕೃತಿಗಳಿದ್ದು ಪ್ರಸ್ತುತ ಪ್ರತಿಷ್ಠಾನದಲ್ಲಿ ಸಂಗ್ರಹವಾಗಿರುವ ಸಂಸ್ಕೃತ ಹಸ್ತಪ್ರತಿಗಳ ಸಂಖ್ಯೆ ೨೨೯೬ ಮತ್ತು ಅವುಗಳಲ್ಲಿ ಅಡಕವಾಗಿರುವ ವಿಷಯ ಸಂಖ್ಯೆ ೭೭೦೬. ಇದರಲ್ಲಿ ೩೦೦೯ ವಿಷಯಗಳ ಸಂಸ್ಕೃತ ಹಸ್ತಪ್ರತಿಯನ್ನು ಸೂಚಿ ೨೦೦೯ರಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ ಪ್ರಕಟಿಸಿದ್ದು ಉಳಿದ ೪೬೯೭ ವಿಷಯಗಳನ್ನು ಈಗ ಅದೇ ಇಲಾಖೆ 'ಸಂಸ್ಕೃತ ಹಸ್ತಪ್ರತಿಗಳ ಸೂಚಿ ಭಾಗ-೨' ಪುಸ್ತಕ ರೂಪದಲ್ಲಿ ಮುದ್ರಿಸಿ ಪ್ರಕಟಿಸಲಾಗಿದೆ.

ಪ್ರಸ್ತುತ ಗ್ರಂಥಭಂಡಾರದಲ್ಲಿ ತಾಡೋಲೆ ಹಾಗೂ ಕಾಗದ ಹಸ್ತಪ್ರತಿಗಳ ಒಟ್ಟು ಸಂಖ್ಯೆ ೫೪೯೮ ಇವೆ. ಅವುಗಳಲ್ಲಿ

೨೦೬೦ ಕನ್ನಡ ತಾಡೋಲೆ ಗ್ರಂಥಗಳು

೮೯೩ ಕಾಗದ ಹಸ್ತಪ್ರತಿಗಳು

೯೦ ಕನ್ನಡ ಕಲ್ಲಚ್ಚು ಪ್ರತಿಗಳು

೬ ಉದ್ಧರಣೆ ಪಟಲಸಾಹಿತ್ಯ

೫೧ ಕಡತಗಳ ಸಂಖ್ಯೆ

ಹೀಗೆ ಇವುಗಳ ಒಟ್ಟು ಕೃತಿ ವಿಷಯಗಳು ೬೩೦೦ ಆಗಿವೆ. ಸನದು, ರಹದಾರಿ, ರಾಯಸಪತ್ರ, ನಿರೂಪಗಳು ಹೀಗೆ ದಾಖಲೆ ಪತ್ರಗಳ ಸಂಖ್ಯೆ ೧೧೦೦ ಮತ್ತು ಚಂದ್ರೋದಯ, ಸ್ವಾತಿ, ಮೈಸೂರು ಸ್ಟಾರ್, ವೀರವಾಣಿ, ನಡೆಗನ್ನಡಿ ಈ ಮೊದಲಾದ ನೂರು ವರ್ಷ ಹಿಂದಿನ ಪತ್ರಿಕೆಗಳ ಅಪೂರ್ವ ಸಂಗ್ರಹ ಇಲ್ಲಿದೆ.

ಹಸ್ತಪ್ರತಿ ಭಂಡಾರದ ಸಂಗ್ರಹಗಳಲ್ಲಿರುವ ಕನ್ನಡ ಹಸ್ತಪ್ರತಿಗಳು: ಕಾವ್ಯ, ಯಕ್ಷಗಾನ, ವಚನ ಸಾಹಿತ್ಯ, ಸ್ತೋತ್ರ, ವ್ಯಾಕರಣ, ನಿಘಂಟು, ಅಲಂಕಾರ, ಛಂದಸ್ಸು, ವೈದ್ಯ, ಜ್ಯೋತಿಷ್ಯ, ಗಣಿತ, ಶಕುನ, ಮಂತ್ರ-ಯಂತ್ರ, ಸೂಪಶಾಸ್ತ್ರ, ಶಿಲ್ಪ ಇತ್ಯಾದಿ ವಿಷಯಗಳನ್ನು ಹೊಂದಿದ್ದು, ಅವು ಜೈನ, ಶೈವ, ವೀರಶೈವ, ವೈದಿಕ ಮೊದಲಾದ ಧರ್ಮಗ್ರಂಥಗಳ ಸಂಗ್ರಹಗಳನ್ನೊಳಗೊಂಡಿವೆ.

ಈ ಹಸ್ತಪ್ರತಿಗಳನ್ನು ವೈಜ್ಞಾನಿಕವಾಗಿ ರಕ್ಷಿಸುವುದರ ಜೊತೆಗೆ ಅವುಗಳ ಸಂಶೋಧನೆ-ಸಂಪಾದನೆ ಕಾರ್ಯವು ವ್ಯವಸ್ಥಿತವಾಗಿ ನಡೆಯುತ್ತಿದೆ. ಪ್ರತಿಷ್ಠಾನದ ಸಂಗ್ರಹದಲ್ಲಿರುವ ೨೦೦ಕ್ಕೂ ಹೆಚ್ಚು ಯಕ್ಷಗಾನ ಗ್ರಂಥಗಳ ವರ್ಣನಾತ್ಮಕ ಸೂಚಿ, ಕನ್ನಡ ಕಲ್ಲಚ್ಚಿನ ಸೂಚಿ, ಕನ್ನಡ ಹಸ್ತಪ್ರತಿಗಳ ಸೂಚಿಯನ್ನು ಗೌ.ಮ.ಉಮಾಪತಿಶಾಸ್ತ್ರಿಗಳು ಸಂಪಾದಿಸಿ ಪ್ರಕಟಿಸಿದ್ದಾರೆ. 'ತುಳುಲಿಪಿ ಹಸ್ತಪ್ರತಿಗಳ

ಸೂಚಿ' ಭಾಗವತಾಂತರ್ಗತ 'ತುಳು ರಾಮಾಯಣ' ಗ್ರಂಥವನ್ನು ಎಸ್.ಆರ್.ವಿಘ್ನರಾಜ ಅವರ ಸಂಪಾದನೆಯಲ್ಲಿ ಪ್ರಕಟಗೊಂಡಿದೆ.

ಪ್ರತಿಷ್ಠಾನದಲ್ಲಿ ಸಿಗುವ ಇನ್ನೊಂದು 'ಲೇಖ್ಯಾವಸ್ತು ಕಡತ' ಸಾಮಾನ್ಯವಾಗಿ ಕಡತಗಳಲ್ಲಿ ಭೂಮಿಯ ಲೆಕ್ಕ, ಭಿನ್ನವತ್ತಳೆ, ಮಠದ ಲೆಕ್ಕ ನಿರೂಪಗಳನ್ನು ತಿಳಿಸುತ್ತದೆ. ಇಲ್ಲಿ ಲಭ್ಯವಿರುವ ಕಡತಗಳಲ್ಲಿ ಶ್ರೀ ಮಂಜುನಾಥಸ್ವಾಮಿಯ ಸ್ತುತಿ, ಕೃಷ್ಣನ ಜಲಕ್ರೀಡೆ, ರಾಮಾಯಣ ಹಾಡು, ಶಿವಭಕ್ತಿ ಸಾರಗಳನ್ನು ಕಾಣಬಹುದಾಗಿದೆ.

ಅ.ನ.ಕೃ. ಶಿವರಾಮ ಕಾರಂತ, ಮಾಸ್ತಿ, ಎಂ.ವಿ. ಸೀತಾರಾಮಯ್ಯ, ಸಿದ್ಧಯ್ಯ ಪುರಾಣಿಕ, ರಂ.ಶ್ರೀ. ಮುಗಳಿ, ಹಾ.ಮಾ.ನಾಯಕ ಮೊದಲಾದ ಕನ್ನಡ ಸಾಹಿತ್ಯ ದಿಗ್ಗಜರ ಬರಹಗಳ ಸಂಗ್ರಹಗಳು ಈ ಪ್ರತಿಷ್ಠಾನದಲ್ಲಿವೆ. ಹಾಗೇನೆ ವಿವಿಧ ವಿಷಯಗಳಿಗೆ ಸಂಬಂಧಪಟ್ಟ ಕನ್ನಡ ಮುದ್ರಿತ ಪುಸ್ತಕಗಳ ಸಂಗ್ರಹಗಳಿವೆ. ಇವುಗಳಲ್ಲಿ ನೂರು ವರ್ಷಗಳಷ್ಟು ಹಳೆಯ ಪುಸ್ತಕಗಳಿವೆ. ಈ ಗ್ರಂಥಾಲಯದ ಸದುಪಯೋಗವನ್ನು ನಾಡಿನ ಅನೇಕ ವಿದ್ವಾಂಸರು, ಸಂಶೋಧಕರು, ವಿದ್ಯಾರ್ಥಿಗಳು ಪಡೆಯುತ್ತಿದ್ದು ಒಂದು ಮಾದರಿ ಪ್ರಾಚ್ಯ ವಿದ್ಯಾಸಂಸ್ಥೆಯಾಗಿ ರೂಪುಗೊಂಡಿದೆ. ಪ್ರಸ್ತುತ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಸಂರಕ್ಷಣೆ ಹಾಗೂ ಸೂಚೀಕಾರ್ಯ ನಡೆಯುತ್ತಿದೆ. ವಿಶೇಷವಾಗಿ 'ಫ್ಯೂಮಿಗೇಷನ್ ಛೇಂಬರ್'ನಿಂದ ಹಸ್ತಪ್ರತಿಗಳನ್ನು ಸಂರಕ್ಷಿಸಲಾಗುತ್ತಿದೆ. ಹಾಗೆಯೇ ಸಿಟ್ರನಲ್ ಎಣ್ಣೆ ಹಾಗೂ ಕೆಂಪುವಸ್ತ್ರದಿಂದ ಹಸ್ತಪ್ರತಿಗಳನ್ನು ಸಂರಕ್ಷಿಸಲಾಗಿದೆ.

ಪ್ರತಿಷ್ಠಾನದಲ್ಲಿನ ವಿಶಿಷ್ಟವಾದ ಹಸ್ತಪ್ರತಿಗಳು

೧. ಕನ್ನಡ ವಾಲ್ಮೀಕಿ ರಾಮಾಯಣ : ಈ ಕೃತಿಯ ಉದ್ದವು ೮೫ ಸೆಂ.ಮೀ. ಮತ್ತು ಅಗಲ ೫ ಸೆ.ಮೀ. ಇದ್ದು ರಕ್ಷಣಾ ಕವಚ ವರ್ಣಮಯ ಚಿತ್ರಗಳಿಂದ ಕೂಡಿದೆ.

೨. ಕುಮಾರವ್ಯಾಸ ಭಾರತ: ಈ ಕೃತಿಯ ಉದ್ದವು ೮೪ ಸೆಂ.ಮೀ. ಮತ್ತು ಅಗಲ ೫ ಸೆಂ.ಮೀ. ಇದ್ದು ಅತಿ ಚಿಕ್ಕದಾಗಿರುವ ಕಾಗದದ ಹಸ್ತಪ್ರತಿ ಇದಾಗಿದೆ.

೩. ಪಿ. ೨೦೦: ಭಗವದ್ಗೀತೆ: ಈ ಕೃತಿಯು ಬಣ್ಣದ ಚಿತ್ರಗಳಿಂದ ಕೂಡಿದೆ

೪. ಪಿ. ೩೩೦: ವಿಷ್ಣು ಪಂಜರ ಸ್ತೋತ್ರ: ಈ ಕೃತಿಯ ಉದ್ದವು ೭.೫. ಸೆಂ.ಮೀ. ಮತ್ತು ಅಗಲ ೬ ಸೆಂ.ಮೀ. ಇದೆ.

೫. ಶ್ರೀ ಜಯಚಾಮರಾಜ ಕೃತ: ಚಾಮರಾಜೋಕ್ತಿ ವಿಲಾಸ ಸಟೀಕಾ ೫೭೭ ಪ್ರತಿಗಳಿಂದ ಕೂಡಿದ ಬೃಹತ್ ಗ್ರಂಥ. ಹಲಗೆಯ ಮೇಲೆ ದಂತದ ಅಲಂಕಾರವಿರುವುದು ಕಂಡುಬಂದಿದೆ.

೬. ಕವಿವರ ಭಾಗ ಚಂದ್ರರಚಿತ ಮಹಾವೀರ ಅಷ್ಟಕ, ಜಿನಾಲಯ ಸ್ತುತಿ ಮತ್ತು ವಾದಿರಾಜ ಕವಿಕೃತ ಏಕೀಭಾವ ಸ್ತೋತ್ರ ದೇವನಾಗರಿ ಲಿಪಿಯಲ್ಲಿರುವ ಏಕೈಕ ತಾಡೋಲೆ ಗ್ರಂಥ.

೭. ಮಲಯಾಳ ಲಿಪಿಯಲ್ಲಿರುವ 'ವಾಲ್ಮೀಕಿ ರಾಮಾಯಣ' ರಕ್ಷಣಾ ಕವಚದಂತಹ ಹಲಗೆಯಿಂದ ಸಿದ್ಧಗೊಂಡಿದೆ.

೮. ತುಳುರಾಮಾಯಣ(ಶ್ರೀ ಮದ್ಭಾಗವತಾಂತರ್ಗತ ಕಾವ್ಯ) ತುಳುಲಿಪಿ–ತುಳು ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಇದರ ಕಾಲ ಸುಮಾರು ಕ್ರಿ.ಶ.೧೮೪೫–೧೮೬೦ ಎಂದಿದೆ.

೯. ಕಾ.೩೬, ರಾಘವಾಂಕನ ಕಾವ್ಯವು ಕೈಯಲ್ಲಿ ಸಿದ್ಧಪಡಿಸಲಾದ ಕಾಗದದ ಹಸ್ತಪ್ರತಿ ಬಣ್ಣದ ಹಲಗೆಗಳಿಂದ ಕೂಡಿದ ರಕ್ಷಣಾ ಕವಚ)ವನ್ನು ಒಳಗೊಂಡಿದೆ.

ಪ್ರಸ್ತುತ ಸಂದರ್ಭದಲ್ಲಿ **'ಕರ್ಣಾಭರಣ ಸೂರಿ' ಸನ್ಮತನಾಥ ಚರಿತೆ'** ಪ್ರಕಟಣೆಗಾಗಿ ವಿ.ವಿಘ್ನರಾಜ ಅವರು ತಯಾರಿ ನಡೆಸುತ್ತಿದ್ದಾರೆ. ಇದರಿಂದ ಇಡೀ ಭಂಡಾರ ವ್ಯವಸ್ಥಿತವಾಗಿ ಅಚ್ಚುಕಟ್ಟಾಗಿ ರೂಪುಗೊಂಡಿದೆ ಎನ್ನಬಹುದು.

ಹೊಸ ಯೋಜನೆ

ಸುತ್ತಮುತ್ತ ಮಠದ, ದೇವಸ್ಥಾನದ ಮನೆಗಳಲ್ಲಿರುವ ಹಸ್ತಪ್ರತಿಗಳನ್ನು ಉಚಿತವಾಗಿ ಸ್ವಚ್ಛಗೊಳಿಸಿ ಸಂರಕ್ಷಣೆಯ ವಿಧಿ–ವಿಧಾನಗಳನ್ನು ತಿಳಿಸಿಕೊಡುವುದರ ಜೊತೆಗೆ ಸೂಕ್ತ ಮಾರ್ಗದರ್ಶನ ನೀಡುವ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಇದು ಧರ್ಮಾಧಿಕಾರಿ ವೀರೇಂದ್ರ ಹೆಗಡೆಯವರ ನೇತೃತ್ವದಲ್ಲಿ ನಡೆಯುತ್ತಿದೆ. ನಾಡಿನಲ್ಲಿರುವ ಎಲ್ಲಾ ಹಸ್ತಪ್ರತಿ ಭಂಡಾರಗಳಿಗೆ ಮಾದರಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಒಟ್ಟಾರೆಯಾಗಿ ಜೈನ ಧರ್ಮೀಯರ ಶಾಸ್ತ್ರದಾನ, ಕರ್ಮೋಪಶಮನ, ನೋಂಪಿ ವ್ರತಾಚರಣೆಗಳಿಂದಾಗಿ ಜೈನಮಠಗಳಲ್ಲಿ ಸುವ್ಯವಸ್ಥಿತವಾಗಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಸೂಚೀಕರಣ ಆಗಿರುವುದು ಇಲ್ಲಿ ಕಂಡುಬರುತ್ತದೆ.

೩.೩.೨. ವೀರಶೈವ ಮಠಗಳು

ಕರ್ನಾಟಕದಲ್ಲಿ ಜೈನರಂತೆ ವೀರಶೈವರು ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿಸಿ ಪ್ರಕಟಿಸುವ ಕಾರ್ಯ ಮೆಚ್ಚುವಂತಹದ್ದಾಗಿದೆ. ವೀರಶೈವರು ೧೨ನೆಯ ಶತಮಾನದಿಂದ ೧೫ನೆಯ ಶತಮಾನದ ವರೆಗೆ ಇದ್ದರೆಂದು ತಿಳಿದುಬರುತ್ತದೆ. ಆದರೂ ವೀರಶೈವರಿಗಿಂತ ಮುಂಚೆ ಬಂದಿದ್ದ ಕಾಳಾಮುಖಯತಿಗಳು ಬಹುದೊಡ್ಡ ವಿದ್ವಾಂಸರಾಗಿದ್ದರು. ಅವರ ಮಠಗಳು ವಿದ್ಯಾಕೇಂದ್ರಗಳಾಗಿದ್ದ ಕಾರಣ ಅಲ್ಲಿ ದೊಡ್ಡ ಗ್ರಂಥ ಭಂಡಾರಗಳಿರುವುದು ಗಮನಾರ್ಹ.

ಬಳ್ಳಿಗಾವಿಯ ಕೇದಾರೇಶ್ವರ ಮಠ

'ಋಗ್ಯಜಸ್ಸಾಮಥರ್ವ ಚತುರ್ವೇದ ಸ್ವಾಧ್ಯಾಯ ಸ್ಥಾನಮುಂ ಕೌಮಾರ ಪಾಣಿನೀಯ ಶಾಕಟಾಯನ ಶಬ್ದಾನುಶಾಸನಾದಿ ವ್ಯಾಕರಣ ವ್ಯಾಖ್ಯಾನ ಸ್ಥಾನಮುಂ ಅಷ್ಟಾದಶ ಪುರಾಣ ಧರ್ಮಶಾಸ್ತ್ರ ಸಕಳ ಕಾವ್ಯ ನಾಟಕ ನಾಟಿಕಾದಿ ವಿವಿಧ ವಿದ್ಯಾಸ್ಥಾನಮುಂ...'[೨೬] ಎಂಬ ಹೇಳಿಕೆ ಅಂದಿನ ಕಾಳಾಮುಖ ಮಠಗಳ ವಿದ್ವತ್ತಿನ ಸ್ವರೂಪವನ್ನು ತಿಳಿಸುತ್ತದೆ. ಈ ಬಗೆಯ ಘನತೆಯುಳ್ಳ ಮಠಗಳು ಕರ್ನಾಟಕದ ತುಂಬಾ ಹರಡಿದ್ದವು. ಇವುಗಳನ್ನು ಬಿಟ್ಟರೆ ಶಿವಶರಣರ ಅನುಭವ ಮಂಟಪದಲ್ಲಿ ಓಲೆ ಭಂಡಾರವಿದ್ದಿತೆಂದು, ಭಂಡಾರಿ ಶಾಂತರಸನೆಂಬ ಶರಣ ಅದರ ವ್ಯವಸ್ಥಾಪಕನಾಗಿದ್ದನೆಂದು ತಿಳಿದುಬರುತ್ತದೆ. ಜೈನರಂತೆ ವೀರಶೈವರಲ್ಲಿಯೂ ಗ್ರಂಥದಾನ ಸಂಪ್ರದಾಯ ಅಸ್ತಿತ್ವದಲ್ಲಿದ್ದಿತು. ಇದಕ್ಕೆ ಆಧಾರವೆಂಬಂತೆ "ಕೆಳದಿಯ ಅರಸು ಬಸವರಾಜ ಗ್ರಂಥದಾನವನ್ನು ಇಲ್ಲಿ ಉಲ್ಲೇಖಿಸಬಹುದು.'

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಮೂರ್ತಿಗಳಿಗೆ ನಾನಾ ವಿಧ **'ಭಕ್ಷ್ಯ ಭೋಜ್ಯ ರಸಾಯನ ಫಲಂಗಳ್ ಮುಂತಾದ ಇಚ್ಛಾ ಪದಾರ್ಥಂಗಳಂ ನೀಡಿಸಿ'**, ಸಂತುಷ್ಟಿಪಡಿಸಿಯವರಿಗೆ ನಾನಾವಿಧ ವಿಚಿತ್ರ ತರವಸ್ತ್ರ, ಕಂಬಳಿ ಕಂಥೆ, ಶಿವದಾರ, ವಿಭೂತಿಯಾಧಾರ, ಭಸ್ಮರುದ್ರಾಕ್ಷಿ, ಆಗಮಶಿವಶಾಸ್ತ್ರ, ಲಿಖಿತ ಪುಸ್ತಕ, ಪವಾಡ ಛತ್ರ ಪಾದುಕೆ ಹಸ್ತಾಧಾರ ದಂಡ ಮುಂತಾದ ಇಚ್ಛಾಪದಾರ್ಥಗಳಂ ಕೊಡಿಸಿ, ಪೇಟೆಯಲ್ಲಿ ಆರಾಧನಾ ಪೂರ್ವಕಂ ಮಹೋತ್ಸವ ಮೆರವಣಿಗೆಗಳಂ ಮಾಡಿಸಿ, "ಶಾಶ್ವತಧರ್ಮಕೀರ್ತಿಗಳಂ ಸಮಪಾದಿಸಿ, ರಾಜ್ಯಂಗೆಯ್ಯುತಿರ್ದ ಬಸವನಕೇಂದ್ರಂ"[೨೬] ಎಂಬಲ್ಲಿ ಆಗಮಶಾಸ್ತ್ರ ಲಿಖಿತ ಪುಸ್ತಕಗಳ ದಾನ ಮುಖ್ಯವಾದುದು. ಅದರಲ್ಲಿಯೂ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮ ಮೂರ್ತಿಗಳಿಗೆ ಎಂಬುದು ಗಮನ ಸೆಳೆಯುವ ಅಂಶವಾಗಿದೆ. ಹಾಗೆಯೇ ವೀರಶೈವ ಮಠಾಧೀಶರಿಗೆ ದೀಕ್ಷಾಪ್ರಸಂಗದಲ್ಲಿ ಕೆಲವು ಧಾರ್ಮಿಕ ಗ್ರಂಥಗಳನ್ನು ಕೊಡುವುದು ಆಚರಣೆಯ ಒಂದು ಭಾಗವಾಗಿದ್ದಿತೆಂದು ತಿಳಿದುಬರುತ್ತದೆ.

ವಿಜಯನಗರದ ಪ್ರಸಿದ್ಧ ದೊರೆ ಪ್ರೌಢದೇವರಾಯನ ಆಶ್ರಯದಲ್ಲಿದ್ದ ನೂರೊಂದು ವಿರಕ್ತರು ಹಾಗೂ ಧರ್ಮಾಧಿಕಾರಿ ಎಡೆಯೂರು ತೋಂಟದ ಸಿದ್ಧಲಿಂಗ ಯತಿಗಳ ಶಿಷ್ಯ-ಪ್ರಶಿಷ್ಯರು ಶರಣರ ವಚನಗಳನ್ನು ಶರಣರ ಕುರಿತಾದ ಸಾಹಿತ್ಯ ಸಂಪತ್ತನ್ನು ಸಂಗ್ರಹಿಸಿ ಸಂರಕ್ಷಿಸುವುದರ ಮೂಲಕ ಸಂಪಾದನ ಸಾಹಿತ್ಯ ಎಂಬ ಪರಂಪರೆಯನ್ನು ಹುಟ್ಟು ಹಾಕಿ ಮುನ್ನಡೆಸಿದರು. ಹೀಗೆ ರಾಜರ ಆಶ್ರಯ ಧರ್ಮಾಧಿಕಾರಿಗಳ ಪ್ರೋತ್ಸಾಹ ಮಾರ್ಗದರ್ಶನ, ಶಿಷ್ಯ-ಪ್ರಶಿಷ್ಯರ ವಿದ್ವತ್ತು ಮತ್ತು ಪರಿಶ್ರಮದಿಂದಾಗಿ ವಿವಿಧೆಡೆ ಚದುರಿ ಹೋಗಿದ್ದ ಹಸ್ತಪ್ರತಿಗಳನ್ನು ಸಂಗ್ರಹ ಮಾಡಲಾಗಿದೆ.

ವೀರಶೈವ ಧರ್ಮದ ಪ್ರಸಾರಕ್ಕಾಗಿ ನಾಡಿನಲ್ಲಿ ಹಲವು ಮಠಗಳು ಸ್ಥಾಪನೆಗೊಂಡವು. ಈ ಮಠಗಳ ಮೂಲಕ ವೀರಶೈವ ಗ್ರಂಥಗಳ ರಚನೆ, ಅವುಗಳ ನಕಲು-ಪ್ರತಿ ನಕಲು ಕಾರ್ಯವು ನಾಡಿನಾದ್ಯಂತ ವ್ಯಾಪಕವಾಗಿ ನಡೆದಿದೆ. ಹಾಗೆಯೇ ಹಸ್ತಪ್ರತಿ ಪ್ರಶಸ್ತಿಗಳು ಕುತೂಹಲಕಾರಿಯಾಗಿ ವಿವರಗಳನ್ನು ನೀಡುತ್ತವೆ. ಜೈನರ ಬಸದಿಗಳಲ್ಲಿಯಂತೆ ಲಿಂಗಾಯತ ಮಠಗಳಲ್ಲಿಯೂ ಮಠಾಧಿಪತಿಗಳು, ಭಕ್ತರು, ಲಿಪಿಕಾರರು ಮತ್ತು ಆಸಕ್ತರು ಹಸ್ತಪ್ರತಿಗಳನ್ನು ಸಿದ್ಧಗೊಳಿಸುತ್ತಿದ್ದರು. ಅಂಥ ಕೆಲವು ಉದಾಹರಣೆಗಳನ್ನು ಗಮನಿಸಬಹುದಾಗಿದೆ.

* **'ಕೆಂಬಾವಿ ಹಿರಿಮಠದ ಪಟದ ಘನಲಿಂಗ ಚಕ್ರವರ್ತಿಗಳಾದಂಥ ಕಂತ್ಯಪ್ಪದೇವರು ಬರದ ದಸ್ತೂರವು'.**[೨೮]
* **'ಮಹಾ ಮಲ್ಲನಕೆರೆ ಚನ್ನಬಸವೇಶ್ವರ ಸ್ವಾಮಿಗಳವರಿಗೆ ತತ್ ಶಿಷ್ಯನಾದ ಅಳವುಂಡಿಲಿರುವ ಕುಡುತಿನಿ ಮಠದ ಹಂಪಯ್ಯ'**[೨೯]
* ಇನ್ನೊಂದು ಮಹತ್ವದ ಸಂಗತಿಯೆಂದರೆ ವೀರಶೈವ ಹಸ್ತಪ್ರತಿಗಳು ಅಧಿಕವಾಗಿ ದೊರೆಯುವುದಕ್ಕೆ ಪ್ರಮುಖ ಕಾರಣ ಕರ್ನಾಟಕದ ಜೈನರ ಧರ್ಮ ಭಾಷೆ, ಪ್ರಾಕೃತ, ಮಾತೃಭಾಷೆ ಕನ್ನಡ.
* ಬ್ರಾಹ್ಮಣರ ಧರ್ಮ ಭಾಷೆ ಸಂಸ್ಕೃತ, ಮಾತೃ ಭಾಷೆ ಕನ್ನಡ ಹೀಗಾಗಿ ವೀರಶೈವ ಧರ್ಮ ಭಾಷೆ ಹಾಗೂ ಮಾತೃಭಾಷೆ ಕನ್ನಡ ತನ್ನ ಲೌಕಿಕ, ಧಾರ್ಮಿಕ ಎರಡೂ ಕ್ಷೇತ್ರಗಳ ಅಭಿವ್ಯಕ್ತಿಗಾಗಿ

ಕನ್ನಡವನ್ನೆ ಅವಲಂಬಿಸಿತು. ಇದರಿಂದಾಗಿ ಕನ್ನಡ ಕೃತಿಗಳು, ಪ್ರತಿಗಳು ವಿಪುಲ ಪ್ರಮಾಣದಲ್ಲಿ ರಚನೆಯಾಗಿವೆ. ಹಾಗೆಯೇ ಕರ್ನಾಟಕದ ತುಂಬ ವ್ಯಾಪಿಸಿದ ಈ ಜನಾಂಗ ಅಲ್ಲಲ್ಲಿ ಮಠ ಸಂಸ್ಥೆಯ ವ್ಯವಸ್ಥೆಯನ್ನು ರೂಪಿಸಿಕೊಂಡು ಬಂದಿರುವುದರಿಂದಲೂ ಸಣ್ಣಪುಟ್ಟ ಹಸ್ತಪ್ರತಿ ಭಂಡಾರಗಳು ವೀರಶೈವ ಮಠಗಳಲ್ಲಿ ಅದರಲ್ಲಿಯೂ ವಿರಕ್ತಮಠಗಳಲ್ಲಿ ಬೆಳೆದುಬಂದವು. ಹೀಗೆ ಮಠಾಧಿಪತಿಗಳು ಭಕ್ತರು ಲಿಪಿಕಾರರು ಹಸ್ತಪ್ರತಿಗಳನ್ನು ಬರೆದು, ಬರೆಸಿದ್ದರಿಂದ ಅವುಗಳ ಸಂರಕ್ಷಣೆ ಹಾಗೂ ಸಂಗ್ರಹಣಕ್ಕಾಗಿ ವೀರಶೈವ ಮಠಗಳಲ್ಲಿ ಹಸ್ತಪ್ರತಿ ಭಂಡಾರಗಳು ತಲೆಯೆತ್ತಿದವು.

ನಾಡಿನ ವೀರಶೈವ ಮಠಗಳು

೧. ಶಿವಯೋಗ ಮಂದಿರದ ವಿಜಯ ಮಹಾಂತೇಶ ಗ್ರಂಥಾಲಯ, ಬದಾಮಿ

೨. ಚಿತ್ರದುರ್ಗದ ಮುರಘರಾಜೇಂದ್ರ ಬೃಹನ್ಮಠ

೩. ಬೆಳಗಾವಿಯ ನಾಗನೂರು ರುದ್ರಾಕ್ಷಿಮಠ

೪. ಗದುಗಿನ ತೋಂಟದಾರ್ಯಮಠ

೫. ಹುಬ್ಬಳ್ಳಿಯ ಮೂರುಸಾವಿರಮಠ

೬. ಹೊಸಪೇಟೆಯ ಕೊಟ್ಟೂರುಸ್ವಾಮಿಮಠ

೭. ಹೊಳಗುಂದಿಯ ಶ್ರೀ ಶಂಕರಮಠ

೮. ಇತರೆ ಮಠಗಳು

ಮೇಲಿನ ಮಠಗಳ ಕಾರ್ಯ ಚಟುವಟಿಕೆಗಳ ಸ್ಥಿತಿಗತಿ ಅವಲೋಕಿಸಿ ಈ ಕೆಳಗೆ ವಿವರಿಸಲಾಗಿದೆ.

೧. ಶಿವಯೋಗ ಮಂದಿರದ "ವಿಜಯ ಮಹಾಂತೇಶ ಗ್ರಂಥಾಲಯ"

ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ಮಾತು ಭೌತಿಕ ಸಂಪತ್ತು ನಶ್ವರವಾದದ್ದು ಜ್ಞಾನ ಸಂಪತ್ತಿಗೆ ನಾಶವಿಲ್ಲ ಎಂಬುದನ್ನು ಸೂಚಿಸುತ್ತದೆ. ಜ್ಞಾನವನ್ನು ಯಾರೂ ಕದಿಯಲಾರರು, ಕಸಿದುಕೊಳ್ಳಲಾರರು, ಪಾಲು ಕೇಳಲಾರರು. ಜ್ಞಾನ ಭಂಡಾರವು ನಮ್ಮ ಹಿಂದಿನ-ಇಂದಿನ ಸಂಸ್ಕೃತಿಯನ್ನು ತಿಳಿಸಬಲ್ಲದು. ಆಚಾರ ಹಾಗೂ ವಿಚಾರಗಳು ಧರ್ಮದ ಎರಡು ಮುಖವಿದ್ದಂತೆ ಶಿವಯೋಗ ಮಂದಿರದಲ್ಲಿ ಅದು ಪಾಠಶಾಲೆಯ ರೂಪದಲ್ಲೂ ಗ್ರಂಥಾಲಯದ ಸ್ವರೂಪದಲ್ಲೂ ಕಾಣಬಹುದಾಗಿದೆ.

ಧಾರ್ಮಿಕ ಕ್ರಾಂತಿಯಾಗಬೇಕಾದರೆ ತಪಸ್ಸು ಎಷ್ಟು ಅತ್ಯವಶ್ಯಕವೋ ಶೈಕ್ಷಣಿಕ ಕ್ರಾಂತಿಯಾಗ ಬೇಕಾದರೆ ಗ್ರಂಥಾಲಯವೂ ಅಷ್ಟೇ ಅವಶ್ಯವಾಗಿದೆ. ಹಾನಗಲ್ಲ ಕುಮಾರಸ್ವಾಮಿಗಳು ಒಂದು ಕಡೆ ಧಾರ್ಮಿಕ ಕ್ರಾಂತಿ, ಇನ್ನೊಂದು ಕಡೆ ಶೈಕ್ಷಣಿಕ ಕ್ರಾಂತಿ ಇವೆರಡೂ ಇರದಿದ್ದರೆ ಸಮಾಜದ ಹಾಗೂ ಭಕ್ತರ ಉದ್ಧಾರ ಸಾಧ್ಯವಿಲ್ಲವೆಂಬ ಸತ್ಯದ ತಿರುಳನ್ನರಿತವರಾಗಿದ್ದರು. ಕ್ರಿ.ಶ.೧೯೦೯ರಲ್ಲಿ ಶಿವಯೋಗ ಮಂದಿರ ಸಂಸ್ಥೆಯನ್ನು ಸ್ಥಾಪಿಸಿ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯ ಕೈಗೊಂಡರು. ತಾವು ಹೋದ ಕಡೆಯಲ್ಲೆಲ್ಲ ಭಕ್ತರು ನೀಡಿದ ಧನಸಹಾಯವನ್ನು ಹೆಚ್ಚು ಬಯಸದೆ ತಮ್ಮ ಮನೆಯಲ್ಲಿ

ಹಾಗೂ ಮಠದಲ್ಲಿ ಗತಕಾಲದಿಂದ ಮೂಟೆ ಕಟ್ಟಿ ಪೆಟ್ಟಿಗೆಯೊಳಗೆ ಹುಳ ಹತ್ತಿದ ಪುಸ್ತಕ ಕಾಗದಪ್ರತಿ, ತಾಡೋಲೆ, ಹಸ್ತಪ್ರತಿಗಳನ್ನು ಕೇಳಿ ಪಡೆಯುತ್ತಿದ್ದರು. ಈ ನಿಟ್ಟಿನಲ್ಲಿ ಜನರಲ್ಲಿ ಜಾಗೃತಿ ಮೂಡಿಸಿದರು. 'ನಿಜವಾದ ಗ್ರಂಥಗಳು ನಮ್ಮ ಬಾಳಿಗೆ ಬೆಳಕು, ಗ್ರಂಥಗಳ ಸಾಮರ್ಥ್ಯ ಘನತೆ ಅಷ್ಟಿಷ್ಟಲ್ಲ' ಎಂಬ ಸತ್ಯದರ್ಶನಕ್ಕಾಗಿ ನಾಡಿನ ಉದ್ದಗಲಕ್ಕೂ ಸಂಚರಿಸಿ, ಕಾರ್ಯಕ್ರಮ ಪ್ರಾರಂಭಿಸಿ ಅದಕ್ಕಾಗಿ ತುಂಬಾ ಪರಿಶ್ರಮ ಪಟ್ಟಿದ್ದಾರೆ. ಇಂದು ಶಿವಯೋಗ ಮಂದಿರದಲ್ಲಿ ಸಂಗ್ರಹವಾಗಿರುವ ಹಸ್ತಪ್ರತಿಗಳನ್ನು ಭಂಡಾರದಲ್ಲಿ ಗಮನಿಸಿದಾಗ ಅವರಿಗಿದ್ದ ಹಸ್ತಪ್ರತಿ ಸಂಗ್ರಹದ ಮಹತ್ವವು ಎಷ್ಟಿತ್ತೆಂದು ತಿಳಿದುಬರುತ್ತದೆ.

ಶಿವಯೋಗ ಮಂದಿರದಲ್ಲಿ ಒಂದು ಗ್ರಂಥಾಲಯ ಸ್ಥಾಪಿಸುವುದು, ಗ್ರಂಥಗಳ ಸಂಗ್ರಹ ಮಾಡುವುದು, ಆ ಮೂಲಕ ಶಿವಯೋಗ ಮಂದಿರವನ್ನು ಪರಿಚಯಿಸುವುದಾಗಿದೆ. ಇದನ್ನು ನೆರವೇರಿಸಲೆಂದೇ ಶಿವಯೋಗ ಮಂದಿರದಲ್ಲಿ ಇಲಕಲ್ಲ ಶ್ರೀ ವಿಜಯ ಮಹಾಂತೇಶನ ಸ್ಮರಣಾರ್ಥಕವಾಗಿ ಅವರು ಲಿಂಗೈಕ್ಯರಾದ ವರ್ಷದಲ್ಲಿ(೧೯೧೦ರಲ್ಲಿ) ಶ್ರೀ ವಿಜಯ ಮಹಾಂತೇಶ್ವರ ಗ್ರಂಥಾಲಯವನ್ನು ಆರಂಭಿಸಲಾಗಿದೆ. ಪ್ರಪ್ರಥಮವಾಗಿ ಈ ಗ್ರಂಥಾಲಯಕ್ಕೆ ಶ್ರೀ ಕುಮಾರಸ್ವಾಮಿಗಳೇ ತಮ್ಮ ಹಾನಗಲ್ಲ ಮಠದ ಅನೇಕರು ಇಲ್ಲಿಗೆ ಪುಸ್ತಕಗಳನ್ನು ತಾಡವೋಲೆ, ಕೋರಿಕಾಗದ, ಗ್ರಂಥವನ್ನು ದಾನವಾಗಿ ನೀಡಿದ್ದಾರೆ. ಹೀಗೆ ಇಲ್ಲಿ ಸಂಗ್ರಹವಾದ ಗ್ರಂಥಗಳಲ್ಲಿ ಕನ್ನಡಕ್ಕೆ ಸಂಬಂಧಿಸಿದವು–೩೨೭೦, ಮರಾಠಿ–೧೩೭, ಇಂಗ್ಲಿಷ್–೪೮, ಸಂಸ್ಕೃತ–೫೯೦, ಹಿಂದಿ–೭೫. ಇವು ಕೇವಲ ದಾಖಲುಗೊಂಡವು ಹೀಗೆ ದಾಖಲೆಯಾಗದ ನೂರಾರು–ಸಾವಿರಾರು ಹಸ್ತಪ್ರತಿಗಳಿವೆ ಎಂದು ಗ್ರಂಥಾಲಯದ ಸಹಾಯಕ ಸಿಬ್ಬಂದಿಯೋರ್ವರು ತಿಳಿಸಿದ್ದಾರೆ.

ಮೈಸೂರು ಪ್ರಾಚ್ಯ ಸಂಶೋಧನೆ ಸಂಸ್ಥೆಯವರು ತಮ್ಮ ಪ್ರಕಟಣೆಯ ಪುಸ್ತಕಗಳು ಹಾಗೂ ಸಂಸ್ಥೆಗೆ ಬಂದ ಪುಸ್ತಕಗಳನ್ನು ಉಚಿತವಾಗಿ ಒದಗಿಸಿದ್ದಾರೆ. ಹೀಗೆ ಗ್ರಂಥಾಲಯದಲ್ಲಿ ನಾಲ್ಕು ಸಾವಿರಕ್ಕೂ ಅಧಿಕ ಅಚ್ಚಾದ ಗ್ರಂಥಗಳು–೪೦೦೦ದಿಂದ ೫೦೦೦ಕ್ಕೂ ಹೆಚ್ಚು ಓಲೆಗರಿ, ಕೋರಿ ಕಾಗದ, ತಾಡೋಲೆಗಳ ಸಂಗ್ರಹವಿದೆ. ಈಗ ಅವುಗಳ ಆರೈಕೆ ಇಲ್ಲದೆ ಹುಳುಗಳಿಗೆ ಆಹಾರವಾಗಿರುವುದು ಕಂಡುಬಂದಿದೆ.

ಸುಕುಮಾರ ಪ್ರತಿಕೆಯ ಸಂಪಾದಕರಾಗಿದ್ದ ಪಂ. ಉಮಾಪತಿಶಾಸ್ತ್ರಿಗಳು ಅನಂತಪುರ, ಸಖರಾಯ ಪಟ್ಟಣ, ಕಂಚಕಲ್ಲು, ಬಿದರೆ, ಹಾರನಹಳ್ಳಿ, ಹಾವೇರಿ, ಮುಳ್ಳುಳ್ಳು, ಗದಗ, ಬಾಗಲಕೋಟೆ, ಕೆರೂರು, ಚಿಕ್ಕಮಂಗಳೂರು, ಗುಳೇದಗುಡ್ಡ, ಸವದತ್ತಿ, ಕರವತ್ತಿಯಂತಹ ನಗರ, ಗ್ರಾಮಗಳನ್ನು ಸುತ್ತಿ ಸುಮಾರು ಐದು ನೂರು ಹಸ್ತಪ್ರತಿ, ತಾಳೆಗರಿ, ಕೋರಿಕಾಗದ ಮೊದಲಾದ ಗ್ರಂಥಗಳನ್ನು ಸಂಗ್ರಹಿಸಿದ್ದಾರೆ. ಅವುಗಳ ಸಂರಕ್ಷಣೆಗಾಗಿ ಸಿದ್ಧೇಶ್ವರ ಉಕ್ಕಿನ ಕಂಪನಿಯವರು ಕಪಾಟು ಮತ್ತು ಡಬ್ಬಿ(box)ಗಳನ್ನು ಪೂರೈಸಿದ್ದಾರೆ ಎಂದು ಮಂದಿರದ ಸ್ಮಾರಕ ಕೃತಿ 'ಬೆಳಗು' ಪುಸ್ತಕದಲ್ಲಿ ಬರೆದಿದ್ದಾರೆ. ಆದರೆ ಅಂತಹ ಯಾವ ದಾಖಲೆಯೂ ಕ್ಷೇತ್ರಕಾರ್ಯಕ್ಕಾಗಿ ತೆರಳಿದಾಗ ಗ್ರಂಥಾಲಯದಲ್ಲಿ ದೊರೆತಿಲ್ಲ. ಅವುಗಳನ್ನು ಪರಮತದವರಿಗೆ ಮಾರಿಕೊಂಡಿದ್ದಾರೆ ಎಂಬ ಆಪಾದನೆಗಳು ಕೇಳಿಬಂದಿವೆ. ಆದರೆ ಈ ಬಗ್ಗೆ ಅಂತಹ ಪಾಪದ ಕಾರ್ಯ ಮಾಡಿಲ್ಲವೆಂದು ವಾದಿಸಿದ್ದಾರೆ.

ಈ ಗ್ರಂಥಾಲಯವು ನಾಡಿನ ಹಲವಾರು ಸಂಶೋಧಕರಿಗೆ, ಸಾಹಿತಿಗಳಿಗೆ, ಅಧ್ಯಯನಕಾರರಿಗೆ ಗ್ರಂಥ ಪ್ರಕಟಣೆಯಲ್ಲಿ ಸಾಕಷ್ಟು ಮಾಹಿತಿಯನ್ನು ಒದಗಿಸಿದೆ. ಅದಕ್ಕೆ ಕೆಲವೊಂದು ಉದಾಹರಣೆಗಳನ್ನು ಈ ಕೆಳಗಿನಂತೆ ಗಮನಿಸಬಹುದಾಗಿದೆ.

೧. ಪ.ಗು.ಹಳಕಟ್ಟಿಯವರ ಶೂನ್ಯ ಸಂಪಾದನೆ, ವಚನಶಾಸ್ತ್ರ,

೨. ಶಿ.ಶಿ.ಬಸವನಾಳರ ಚನ್ನಬಸವಪುರಾಣ

೩. ಶ್ರೀ ಉತ್ತಂಗಿ ಚೆನ್ನಪ್ಪನವರ ಸಿದ್ಧರಾಮನ ಕೃತಿಗಳು

೪. ಆರ್.ಸಿ.ಹಿರೇಮಠ ಅವರ ಪದ್ಮಣಾಂಕ ಪುರಾಣ

೫. ಎಸ್.ಎಸ್.ಭೂಸನೂರಮಠರ ಶೂನ್ಯ ಸಂಪಾದನೆ

೬. ಎಂ.ಎಸ್. ಸುಂಕಾಪುರ ಅವರ ಹಮ್ಮೀರ ಕಾವ್ಯ

೭. ಎಚ್.ದೇವೀರಪ್ಪ, ಮೈಸೂರು, ಪ್ರಾಚ್ಯ ಸಂಶೋಧನೆ ಸಂಸ್ಥೆಯ ಕ್ರಿಯಾಸಾರ(ಸಂಸ್ಕೃತ)

೮. ಜಿ.ಎಂ.ಉಮಾಪತಿ ಶಾಸ್ತ್ರಿಯವರ ಪಾರಮಾರ್ಥ ಪ್ರಕಾಶನ ಕೃತಿಗಳು ಪ್ರಕಟಗೊಂಡಿವೆ.

ಈ ಗ್ರಂಥಾಲಯವು ಒಂದು ಮಾದರಿ ಸಂಶೋಧನಾ ಕೇಂದ್ರವಾಗಿತ್ತು. ಪಂಡಿತರು, ವಿದ್ವಾಂಸರು ಉತ್ತಮೋತ್ತಮ ಕೃತಿಗಳ ಸಂಪಾದನೆಗೆ, ಪರಿಷ್ಕರಣೆ ಹಾಗೂ ಪ್ರಕಟಣೆಗಾಗಿ ಈ ಗ್ರಂಥಾಲಯವು ವಿಶಿಷ್ಟವಾದ ಕೊಡುಗೆ ನೀಡಿದೆ.

ಇನ್ನು ಹಾನಗಲ್ಲು ಶ್ರೀಗಳನ್ನು ಮೊದಲುಗೊಂಡು ಅನೇಕ ಅಭಿಮಾನಿಗಳು ಹಾಗೂ ಬೇರೆ ಬೇರೆ ಸ್ವಾಮೀಜಿಯವರು ಶಾ. ಶಕೆ.೧೮೩೨ರಿಂದ ೧೮೭೭ರ ಅವಧಿಯಲ್ಲಿ ಸಂಗ್ರಹಗೊಂಡ ಉಪಯುಕ್ತ ಗ್ರಂಥಗಳನ್ನು ಹಾಗೂ ಕೊಟ್ಟವರ ಹೆಸರುಗಳೊಂದಿಗೆ ದೇಣಿಗೆ ರೂಪದಲ್ಲಿ ಕೊಡುಗೆಯಾಗಿ ಸಾವಿರಾರು ಗ್ರಂಥಗಳನ್ನು ದಾನದ ರೂಪದಲ್ಲಿ ನೀಡಿದ್ದಾರೆಂಬ ಮಾಹಿತಿಯನ್ನು ಪಟ್ಟಿ ಮಾಡಲಾಗಿದೆ. ಅವುಗಳೆಂದರೆ ಈ ಗ್ರಂಥಾಲಯವು ಕಣ್ಣರಿಕೆಯ ಕಾಲದಲ್ಲಿ ಬೆಳೆಯಿತು. ವೀರಶೈವ ಧರ್ಮದ ಜ್ಞಾನ ನಿಧಿಯಿಂದ ವಿವಿಧ ಭಾಷೆಗಳಲ್ಲಿ ರಚಿಸಲ್ಪಟ್ಟ ಸಾವಿರ–ಸಾವಿರ ತಾಡವೋಲೆ ಗ್ರಂಥಗಳು, ಮುದ್ರಿತ ಗ್ರಂಥಗಳು, ವೀರಶೈವ ಧರ್ಮ ತತ್ವಗಳನ್ನು ಕುರಿತ ವಿವಿಧ ಭಾಷೆಗಳಲ್ಲಿ ಬರೆಯಲ್ಪಟ್ಟ ಕೃತಿಗಳು ಇಲ್ಲಿ ಸಂಗ್ರಹಗೊಂಡಿವೆ. ಇಲ್ಲಿ ತರಬೇತಿ ಪಡೆಯುತ್ತಿದ್ದ ಸಾಧಕರಿಗೆ ಅವು ಜ್ಞಾನ ದೀವಿಗೆಯಂತೆ ಉಪಯೋಗವಾಗಿವೆ. ವಚನ ಪಿತಾಮಹ ಫ.ಗು.ಹಳಕಟ್ಟಿ, ಪದ್ಮಶ್ರೀ ಕೀರ್ತನ ಕೇಸರಿ ಬಿ. ಶಿವಮೂರ್ತಿಶಾಸ್ತ್ರಿ, ಶರಣ ಜೀವಿ ಶಿರಾಳಕೊಪ್ಪದ ಚನ್ನಮಲ್ಲಿಕಾರ್ಜುನ ಮಾಸ್ತರು, ಸರ್ವಜ್ಞ ಸಾಹಿತಿ ರೆ. ಉತ್ತಂಗಿ ಚನ್ನಪ್ಪ, ಶಿ.ಶಿ.ಬಸವನಾಳ, ಆರ್.ಸಿ.ಹಿರೇಮಠ, ಸಂ.ಶಿ.ಭೂಸನೂರಮಠ ಮೊದಲಾದವರು ಈ ಗ್ರಂಥಾಲಯದಿಂದ ಉಪಯುಕ್ತ ಮಾಹಿತಿ ಪಡೆದು ಉತ್ಕೃಷ್ಟ ಗ್ರಂಥಗಳ ರಚನೆ ಹಾಗೂ ಇತಿಹಾಸದ ಐತಿಹ್ಯ ಗ್ರಂಥಗಳ ಸಂಶೋಧನೆ ಮಾಡಿದ್ದಾರೆ. ಹೀಗೆ ಈ ಗ್ರಂಥಾಲಯವು ವೀರಶೈವ ಮಠಾಧಿಪತಿಗಳಿಗೆ, ಸಂಶೋಧಕರಿಗೆ ಆಸಕ್ತರಿಗೆ ಸ್ಫೂರ್ತಿಯ ಕೇಂದ್ರವಾಗಿ ಅವಿಸ್ಮರಣೀಯ ಸೇವೆಯನ್ನು ನಾಡಿನ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದೆ.

* **ವಿಶೇಷ ಹಸ್ತಪ್ರತಿ**

ಗ್ರಂಥಾಲಯದ ಹಸ್ತಪ್ರತಿ ಭಂಡಾರದಲ್ಲಿ 'ಎಲ್ಲಾ ಪುರಾತನರ ಕಾಲಜ್ಞಾನ'ವೆಂಬ ಹಸ್ತಪ್ರತಿಯು ಶಿವಯೋಗ ಮಂದಿರದ ಇತಿಹಾಸವನ್ನು ತಿಳಿಸುವುದರ ಜೊತೆಗೆ ೧೨ನೇ ಶತಮಾನದಲ್ಲಿನ ಕೆಲವು ಅಂಶಗಳು ಹಾಗೂ 'ಘಟ್ಟಿವಾಳಯ್ಯನ ಕಾಲಜ್ಞಾನ' ಎಂಬ ಈ ಗ್ರಂಥಗಳನ್ನು ಉತ್ತಮ ರೀತಿಯಲ್ಲಿ ಸಂರಕ್ಷಿಸಲಾಗಿದೆ.

* **ಗೋಡೆಯೊಳಗೆ ದೊರತಿರುವ ಹಸ್ತಪ್ರತಿ**

ಶಿವಯೋಗ ಮಂದಿರದ ಗ್ರಂಥಾಲಯದಲ್ಲಿ ನಂ:೧೯೫ ಶ್ರೀ ತಾಳೆ 'ಕನ್ನಡ ಲೀಲಾವತಿ ಗಣಿತ'ವೆಂಬ ಹಸ್ತಪ್ರತಿಯಲ್ಲಿ ಒಟ್ಟು ೬೦ ಗರಿಗಳಿರುತ್ತವೆ. ಇದು ಗೋಡೆಯೊಳಗೆ ದೊರೆತಿರುವ ಮಹತ್ವದ ಗ್ರಂಥವಾಗಿದೆ. ಜೊತೆಗೆ ಅಂದಿನ ಕಾಲದಲ್ಲಿ ಸಂರಕ್ಷಣೆಗಾಗಿ ಕಂಡುಕೊಂಡಿರುವ ಮತ್ತೊಂದು ಕ್ರಮವೆಂಬ ಅಂಶ ಬೆಳಕಿಗೆ ಬಂದಿದೆ. ಭಂಡಾರದಲ್ಲಿ 'ಅ'ಕಾರ ಪ್ರಕಾರವಾಗಿ ಕೆಲವು ಪುಸ್ತಕಗಳನ್ನು ಜೋಡಿಸಲಾಗಿದೆ. ಕೆಲವು ಹಸ್ತಪ್ರತಿ ಕಟ್ಟುಗಳಿಗೆ ನಂಬರನ್ನು ಕೊಡಲಾಗಿದೆ. ಕೆಲವು ಹಸ್ತಪ್ರತಿಗಳನ್ನು ಕೆಂಪು ವಸ್ತ್ರದಿಂದ ಸುತ್ತಿ ಇಡಲಾಗಿದೆ. ಆದರೆ ಉಳಿದ ಎಲ್ಲ ಹಸ್ತಪ್ರತಿಗಳನ್ನು ಜೋಪಾನವಾಗಿ ಸಂರಕ್ಷಿಸಬೇಕಾಗಿದೆ. ಜೊತೆಗೆ ವಿವರಣಾತ್ಮಕ ಹಸ್ತಪ್ರತಿ ಸೂಚಿಯನ್ನು ಸಿದ್ಧಪಡಿಸಬೇಕಾಗಿದೆ. ಜೊತೆಗೆ ಗ್ರಂಥಾಲಯಕ್ಕೆ ಅನುಭವ ಹೊಂದಿರುವ ಸಿಬ್ಬಂದಿಯನ್ನು ನೇಮಕ ಮಾಡಬೇಕಾಗಿದೆ. ಜೊತೆಗೆ ಆಧುನಿಕ ಸಂರಕ್ಷಣಾಕ್ರಮಗಳನ್ನು ಅನುಸರಿಸುವ ಅಗತ್ಯವಿದೆ. ಬಹಳಷ್ಟು ಹಸ್ತಪ್ರತಿಗಳು ಹುಳುಗಳಿಗೆ ಆಹಾರವಾಗುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗೋಚರಿಸಿದೆ.

೨. ಬೆಳಗಾವಿಯ ನಾಗನೂರು ರುದ್ರಾಕ್ಷಿಮಠ

ಶ್ರೀ ಸಿದ್ಧರಾಮ ಮಹಾಸ್ವಾಮಿಗಳವರ ಸಂಸ್ಕೃತಿ ಪ್ರೀತಿ ಮತ್ತು ಸಾಹಿತ್ಯಿಕ ಮನೋಭಾವನೆಯ ಅಪಾರ ಒಲವಿನಿಂದಾಗಿ ೧೯೫೮ರಲ್ಲಿ 'ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯವು" ಸ್ಥಾಪನೆಗೊಂಡಿದೆ. ಲಿಂಗಾಯತ ಧರ್ಮ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಸುಮಾರು ಆರು ಸಾವಿರ ಗ್ರಂಥಗಳು, ವಿಶ್ವಕೋಶಗಳು, ನಿಯತಕಾಲಿಕಗಳು, ಅಧ್ಯಯನಕಾರರ ಗಮನ ಸೆಳೆಯುತ್ತವೆ. ಗ್ರಂಥಾಲಯ ತಜ್ಞ ಎಸ್.ಆರ್.ಗುಂಜಾಳ ಅವರು ಈ ಗ್ರಂಥಾಲಯದ ನಿರ್ದೇಶಕರಾಗಿದ್ದರು. ಗ್ರಂಥಾಲಯ ವಿಜ್ಞಾನದಲ್ಲಿ ಅಪಾರ ಅನುಭವವುಳ್ಳ ಗುಂಜಾಳರು ಈ ಗ್ರಂಥಾಲಯ ಪುಸ್ತಕಗಳ ಜೋಡಣೆ, ಕ್ಯಾಟಲಾಗ್ ವ್ಯವಸ್ಥೆ ಮಾಡಿರುವುದು ಅತ್ಯಂತ ವಿನೂತನವಾಗಿದೆ. ಇದರಿಂದ ಅಭ್ಯಾಸಿಗಳಿಗೆ, ಸಂಶೋಧಕರಿಗೆ ಸುಲಭವಾಗಿ ಮಾಹಿತಿ ದೊರೆಯುತ್ತದೆ ಹಾಗೂ 'ಲೇಖನಗಳ ಕ್ಯಾಟಲಾಗ್ ಇರುವುದು ಇಲ್ಲಿನ ವಿಶೇಷತೆ.' ಬಹುಶಃ ಇಂದು ಕರ್ನಾಟಕದಲ್ಲಿ ಲಿಂಗಾಯತ ಧರ್ಮ, ಸಾಹಿತ್ಯಕ್ಕೆ ಸಂಬಂಧಿಸಿದ ಸಮಗ್ರ ಗ್ರಂಥಗಳು ಸಿಗುವ ಏಕೈಕ ಗ್ರಂಥಾಲಯವಿದೆಯೆಂದು ಹೇಳಬಹುದು.

೨೦೦೨ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ ಹಾಗೂ ಶಿವಯೋಗ ಮಂದಿರದ ಸಹಯೋಗದಲ್ಲಿ ಪದವಿ ಕಾಲೇಜು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ನಾಲ್ಕು

ದಿನಗಳ ಕಾಲ ಹಸ್ತಪ್ರತಿ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿತ್ತು. ಜೊತೆಗೆ ಹಸ್ತಪ್ರತಿ ಭಂಡಾರದ ನಿರ್ವಹಣೆಗಾಗಿ ಸರಕಾರದಿಂದ ಅನುದಾನ ಮಂಜೂರಾಗಿದೆ. ಇದರ ಜೊತೆಯಲ್ಲಿ "ಪತ್ರಾಗಾರ ಇಲಾಖೆ–ಬೆಂಗಳೂರಿನ ಹಸ್ತಪ್ರತಿತಜ್ಞರಾದ ಜಯಸಿಂಹ ಎಂಬುವರಿಂದ ೨ರಿಂದ ೩ ದಿನಗಳ ಕಾಲ ಟ್ರೆನಲ್ ಆಯಿಲ್ ಲೇಪಿಸುವ ಬಗ್ಗೆ ಹಾಗೂ ಸಂರಕ್ಷಣೆ ಪದ್ಧತಿಗಳ ಬಗ್ಗೆ ವಿಶೇಷ ಉಪನ್ಯಾಸ ತರಬೇತಿ ನೀಡಲಾಗಿದೆ.

ಹಸ್ತಪ್ರತಿ ಗ್ರಂಥಾಲಯ ಸ್ಥಾಪನೆಗೆ ಒಂದಲ್ಲ ಒಂದು ರೀತಿಯಿಂದ ತಮ್ಮ ಶ್ರಮವನ್ನು ಮುಡುಪಾಗಿಟ್ಟು ಶ್ರೀ ಸಿದ್ಧರಾಮ ಮಹಾಸ್ವಾಮಿಗಳು ಫ.ಗು.ಹಳಕಟ್ಟಿಯವರ ಬೆಂಬಲವಾಗಿ ನಿಂತು ಕೈಜೋಡಿಸಿದ್ದಾರೆ. ಇವರ ಜೊತೆಯಲ್ಲಿ ಎಸ್.ಶಿವಣ್ಣ, ಬಿ.ವ್ಹಿ.ಶಿರೂರ, ಎಂ.ಎಂ.ಕಲಬುರ್ಗಿ, ಎನ್.ಬಸವಾರಾಧ್ಯ ಇತ್ಯಾದಿ ಹಸ್ತಪ್ರತಿತಜ್ಞರು ಇಲ್ಲಿಯ ಹಸ್ತಪ್ರತಿಗಳ ಪ್ರಯೋಜನ ಪಡೆದಿದ್ದಾರೆ. ಎಸ್.ಶಿವಣ್ಣನವರು ಗ್ರಂಥಾಲಯಕ್ಕೆ ತುಂಬಾ ಅಗಾಧವಾದ ಶ್ರಮವನ್ನು ಸೇವೆಯ ಮೂಲಕ ಸಲ್ಲಿಸಿದ್ದಾರೆ. ಇವರು 'ಲಿಂಗಾಗಮ'ವೆಂಬ ಹೊಸ ಶಬ್ದ ಈ ಭಂಡಾರದಿಂದಲೇ ಪರಿಚಯವಾಗಿದೆ ಎಂಬುದನ್ನು ನಾಡಿಗೆ ತಿಳಿಸಿಕೊಟ್ಟಿದ್ದಾರೆ.

* **ಭಂಡಾರದಲ್ಲಿರುವ ಹಸ್ತಪ್ರತಿಗಳು:** ೧೯೯೮ರಿಂದ ಸುಸಜ್ಜಿತ ಕಟ್ಟಡದಲ್ಲಿ ನೆಲೆಗೊಂಡಿರುವ ಈ ಗ್ರಂಥಾಲಯದ ಮತ್ತೊಂದು ಶಾಖೆ 'ಹಸ್ತಪ್ರತಿ ಭಂಡಾರ'. ಈ ಭಂಡಾರದ ವಿಶೇಷತೆಯನ್ನು ಹೀಗೆ ಗುರುತಿಸಬಹುದು. ೩೦೦ ಹಸ್ತಪ್ರತಿ ಕಟ್ಟುಗಳನ್ನೊಳಗೊಂಡ ಈ ಭಂಡಾರದಲ್ಲಿ ಹೆಚ್ಚು ಸಂಖ್ಯೆಯ ತಾಳೆಪ್ರತಿಗಳಿವೆ. ಜೊತೆಗೆ ಕೋರಿ ಕಾಗದ, ಆಧುನಿಕ ಕಾಗದ, ಕಡತಗಳೂ ಇವೆ. ಹೊಸದಾಗಿ ೨೦ರಿಂದ ೨೫ ತಾಳೆಪ್ರತಿಯ ಕಟ್ಟುಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಸಚಿತ್ರ ಹಸ್ತಪ್ರತಿಗಳಲ್ಲಿ 'ಉದ್ಧರಣೆ ಪಟಲ' ವಿಶೇಷವಾಗಿದೆ. ಹಾಗೆಯೇ ವೈಯಕ್ತಿಕ ಸಂಗ್ರಹದಿಂದ ಸುಮಾರು ೯೫ ತಾಳೆಪ್ರತಿಗಳ ಕಟ್ಟುಗಳನ್ನು ಸಂಗ್ರಹಿಸಲಾಗಿದೆ. ೩ ಮಾತ್ರ ತೆಲುಗು ಲಿಪಿಯಾದರೆ ಉಳಿದವು ಕನ್ನಡ ಹಾಗೂ ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಹಸ್ತಪ್ರತಿಗಳಿರುವುದನ್ನು ಕಾಣಬಹುದು.

* **ವಿಶೇಷ ಹಸ್ತಪ್ರತಿ:** ಬೋಳ ಬಸವೇಶ್ವರ ದೇವರು ಸಂಗ್ರಹಿಸಿದ 'ಸರ್ವಪುರಾತನ ವಚನಗಳು' ಹಸ್ತಪ್ರತಿಯಲ್ಲಿ ೧೦೦೮ ವಚನಗಳಿವೆ. ಇದರ ಜೊತೆಯಲ್ಲಿ ಅಜಗಣ್ಣನ ಹೊಸ ೧೧ ವಚನಗಳು ದೊರತಿವೆ. ಹಾಗೆಯೇ ಶರಣಲೀಲಾಮೃತ, ಚೋರಬಸವಚಾರಿತ್ರ, ಬಸವಶಿಖಾಮಣಿ ಶೀಲವಂತಯ್ಯನ ತ್ರಿವಿಧಿ, ಬಸವಪುರಾಣ, ಅನುಭವಶಿಖಾಮಣಿ, ರಟ್ಟಮತ, ಪ್ರಭುಲಿಂಗಲೀಲೆ, ಪ್ರೌಢರಾಯನ ಕಾವ್ಯ ಮುಂತಾದವು ಅಧಿಕ ಪ್ರಮಾಣದಲ್ಲಿವೆ. ಅಲ್ಲದೆ ಶಬ್ದಮಣಿದರ್ಪಣ, ಜ್ಯೋತಿಷ್ಯದಂತಹ ಶಾಸ್ತ್ರಕೃತಿಗಳೂ ಇಲ್ಲಿವೆ. ಈ ಹಸ್ತಪ್ರತಿಗಳಲ್ಲಿ ವೈವಿಧ್ಯಮಯವಾದ ೬೦೦ ಕೃತಿಗಳು ಅಡಕಗೊಂಡಿದ್ದರೂ ಬಹಳಷ್ಟು ಕೃತಿಗಳು ಅಸಮಗ್ರವಾಗಿವೆ. ಇದಕ್ಕೆ ಮುಖ್ಯಕಾರಣ ಹಸ್ತಪ್ರತಿಗಳು ತುಂಬ ತ್ರುಟಿತಗೊಂಡಿವೆ. ಆದರೂ ಈ ತಾಳೆಪ್ರತಿಗಳನ್ನು ಸಿಟ್ರೆನಲ್ ಆಯಿಲ್, ಬೇವಿನ ಎಲೆಯ ಔಷಧಿಯಿಂದ ಸಂರಕ್ಷಿಸಲಾಗುತ್ತಿದೆ. ೨೦೦ ಹಸ್ತಪ್ರತಿ ಕಟ್ಟುಗಳ ವಿವರಣಾತ್ಮಕ

ಸೂಚಿ ಸಂಪುಟವನ್ನು ಪಿ.ಕೆ.ರಾಠೋಡ ಅವರು ಸಿದ್ಧಪಡಿಸಿ ೧೯೯೮ರಲ್ಲಿ ಶ್ರೀಮಠದ ಮೂಲಕ ಪ್ರಕಟಿಸಿದ್ದಾರೆ. ಕನ್ನಡ ಲಿಪಿಯಲ್ಲಿರುವ ಕನ್ನಡ ಮತ್ತು ಸಂಸ್ಕೃತ ಭಾಷೆಯ ೫೮೭ ಕೃತಿಗಳ ವಿವರಗಳು ಇದರಲ್ಲಿವೆ. ಆದರೂ ಸಹ ಸಮಗ್ರ ರೂಪದ ಸೂಚಿಸಂಪುಟವನ್ನು ಹೊರತರಬೇಕಾದ ಅವಶ್ಯಕತೆ ಇದೆ. ಡಾ.ಎಫ್.ಟಿ. ಹಳ್ಳಿಕೇರಿಯವರು ಹಸ್ತಪ್ರತಿ ಭಂಡಾರವನ್ನು ಸಮಗ್ರವಾಗಿ ಪರಿಶೀಲಿಸಿ ಉಲ್ಲೇಖಿತ ಪ್ರಶಸ್ತಿಗಳಿಂದ **ಲಿಪಿಕಾರರ ಚರಿತ್ರೆಯ** ಸಂಪ್ರಬಂಧವೊಂದರಲ್ಲಿ ದಾಖಲಿಸಿದ್ದಾರೆ. ಗ್ರಂಥಾಲಯದಲ್ಲಿ ಡಿಜಿಟಲ್ ತಂತ್ರಜ್ಞಾನಕ್ಕಾಗಿ ಯೋಜನೆಯ ಸಿದ್ಧತೆ ನಡೆಯುತ್ತಿರುವುದು ಕಂಡುಬಂದಿದೆ.

ಪ್ರಸ್ತುತ ಸಂದರ್ಭದಲ್ಲಿ ಎಲ್ಲ ಮಠಗಳಲ್ಲಿ ಹಸ್ತಪ್ರತಿಗಳು ಕರಗಿ ಹೋಗಿದ್ದರೂ ನಾಗನೂರು ರುದ್ರಾಕ್ಷಿಮಠದ ಹಸ್ತಪ್ರತಿ ಭಂಡಾರದ ಹಸ್ತಪ್ರತಿಗಳನ್ನು ಉತ್ತಮ ರೀತಿಯಲ್ಲಿ ಸಂರಕ್ಷಣೆ ಮಾಡಲಾಗುತ್ತಿರುವುದು ಹಾಗೂ ನುರಿತ ಸಿಬ್ಬಂದಿಯ ಕೊರತೆ ಅನುಭವಿಸುತ್ತಿರುವುದು ಕಂಡುಬಂದಿದೆ.

ಗದುಗಿನ ತೋಂಟದಾರ್ಯಮಠ

ಕನ್ನಡ ಜಗದ್ಗುರುವೆಂದೇ ಪ್ರಸಿದ್ಧರಾಗಿರುವ ಶ್ರೀಗಳು ಹಮ್ಮಿಕೊಂಡ ಹತ್ತು ಹಲವಾರು ಯೋಜನೆಗಳಲ್ಲಿ ಹಸ್ತಪ್ರತಿ ಸಂಗ್ರಹವೂ ಒಂದಾಗಿದೆ. ನಾಡಿನ ಮೂಲೆ-ಮೂಲೆಗಳಲ್ಲಿ ಸಂಚರಿಸಿ ಭಕ್ತ ಸಮೂಹವನ್ನು ಹಾರೈಸುತ್ತಾ ಪ್ರಾಚೀನ ಕಾಲದ ಆಕರಗಳಾದ ಹಸ್ತಪ್ರತಿಗಳನ್ನು ಸಂಗ್ರಹಿಸುತ್ತಾ ಬಂದಿದ್ದಾರೆ. ಈ ಕಾರಣವಾಗಿ ಹಸ್ತಪ್ರತಿ ಭಂಡಾರವಾಗಿ ರೂಪುಗೊಂಡಿದೆ. ಈ ಮೊದಲು ಶ್ರೀ ಮಠದ ಪೂರ್ವದ ಜಗದ್ಗುರುಗಳಿಗೆ ನೀಡಿದ ದಾನ-ದತ್ತಿ ಇನಾಮುಗಳ ಕಾಗದ ಪತ್ರಗಳನ್ನು ಸಂರಕ್ಷಿಸುತ್ತಾ ಬಂದಿದ್ದಾರೆ. ಅವುಗಳನ್ನೆಲ್ಲ ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹಾಗೆಯೇ ನಾಲ್ಕುನೂರು ವರ್ಷಗಳ ಇತಿಹಾಸವನ್ನು ಹೊಂದಿದ ಗದುಗಿನ ತೋಂಟದಾರ್ಯ ಮಠವು ಹಸ್ತಪ್ರತಿಗಳ ಸಂಗ್ರಹ ಮತ್ತು ಪ್ರಕಟಣೆಯಲ್ಲಿ ವಿಶಿಷ್ಟವಾದ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದೆ. ಮಠ ೫೦೦ ತಾಡವೋಲೆ ಮತ್ತು ಕೋರಿಕಾಗದ ಹಸ್ತಪ್ರತಿಗಳನ್ನೊಳಗೊಂಡ ಸುಸಜ್ಜಿತ ಭಂಡಾರವನ್ನು ಹೊಂದಿದೆ. ಆದರೆ ಆಧುನಿಕ ತಂತ್ರಜ್ಞಾನ ಹಾಗೂ ಸಂರಕ್ಷರಣೆಯು ತುಂಬಾ ಮಂದಗತಿಯಲ್ಲಿರುವುದು ಕಂಡುಬಂದಿದೆ. ಬಸವಣ್ಣ, ಚನ್ನಬಸವ, ಅಕ್ಕಮಹಾದೇವಿ, ಪ್ರಭುದೇವ, ಹಡಪದ ಅಪ್ಪಣ್ಣರಂಥ ಶಿವಶರಣರ ವಚನಗಳು, ಭೀಮಕವಿ, ವಿರೂಪಾಕ್ಷಪಂಡಿತ, ಗುಬ್ಬಿಮಲ್ಲಣಾರ್ಯರಂಥ ವೀರಶೈವ ಕವಿಗಳ ಕಾವ್ಯ ಪುರಾಣಗಳು, ಕಸ್ತೂರದೇವ, ಗುರು ಬಸವಾರ್ಯ, ಹಾಗಲವಾಡಿ ಮುದ್ವೀರ ಸ್ವಾಮಿಗಳಂಥ ಸ್ವರವಚನಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ಇಲ್ಲಿವೆ. ಅಲ್ಲದೇ ತಾರಾವಳಿ, ಅಷ್ಟಕ, ಕಂದ, ತ್ರಿಪದಿ, ಕಾಲಜ್ಞಾನ, ದಂಡ ಲಘುಕೃತಿಗಳ ಕೆಲವು ಹಸ್ತಪ್ರತಿಗಳು ಈ ಭಂಡಾರದಲ್ಲಿರುವುದು ವಿಶಿಷ್ಟವಾಗಿವೆ. ಜೊತೆಗೆ ಕೆಳದಿ ಅರಸರಿಗೆ ಮತ್ತು ಇತರೆ ಸಣ್ಣಪುಟ್ಟ ಸಂಸ್ಥಾನಿಕರಿಗೆ ಸಂಬಂಧಿಸಿದ ಕಾಗದ ಪತ್ರಗಳಂಥ ದಾಖಲೆಗಳು ಅಧಿಕ ಪ್ರಮಾಣದಲ್ಲಿವೆ.

ಮಠವು ವೀರಶೈವ ಲಿಂಗಾಯತ ಅಪ್ರಕಟಿತ ಸಾಹಿತ್ಯ ಪ್ರಕಟಣ ಮಾಲೆಯಲ್ಲಿ ವಚನ, ಸ್ವರವಚನ, ವೀರಶೈವ ಕಾವ್ಯ ಪುರಾಣಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಸಂಪಾದನೆಯ ಸಾರಾಮೃತ,

ಶಿವಯೋಗ ಚಿಂತಾಮಣಿ, ಶೀಲಸಂಪಾದನೆ, ಎಳಮಲೆಯ ಗುರುಶಾಂತ ದೇವರ ವಚನಗಳು, ಸೋಮೇಕಟ್ಟೆ ಚೆನ್ನವೀರಸ್ವಾಮಿಗಳ ಕೃತಿಗಳು, ವೀರಶೈವ ತಾರಾವಳಿ ಸಂಪುಟ, ವೀರಶೈವ ಅಷ್ಟರ ಸಂಪುಟಗಳಂಥ ನೂರಾರು ಕೃತಿಗಳನ್ನು ಪ್ರಕಟಿಸಿ ವಚನ ಹಾಗೂ ವೀರಶೈವ ಸಾಹಿತ್ಯ ಪ್ರಕಟಣೆಯಲ್ಲಿ ಗಮನಾರ್ಹ ಸಾಧನೆಯನ್ನು ಮಾಡಲಾಗಿದೆ. ಪುಸ್ತಕ ಸ್ವಾಮೀಜಿ ಎಂದೇ ಹೆಸರಾದ ಈಗಿನ ಪೀಠಾಧಿಪತಿಗಳಾದ ಸಿದ್ಧಲಿಂಗ ಮಹಾಸ್ವಾಮಿಗಳವರ ಆಸಕ್ತಿ ಮತ್ತು ಚೈತನ್ಯಶೀಲ ಶಕ್ತಿಯೇ ಈ ಸಾಧನೆಗೆ ಮೂಲ ಪ್ರೇರಣೆಯಾಗಿದೆ.

* **ಭಂಡಾರದ ವರ್ಣನಾತ್ಮಕ ಸೂಚಿಗಳು**
  * ವೀರಶೈವ ಅಪ್ರಕಟಿತ ಗ್ರಂಥಸೂಚಿ(ಸಂ. ಎಸ್.ಶಿವಣ್ಣ, ೧೯೮೨).
  * ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಹಸ್ತಪ್ರತಿಸೂಚಿ ಸಂ.೧ (ಸಂ. ಎಸ್.ಶಿವಣ್ಣ, ೧೯೮೫).
  * ವೀರಶೈವ ಹಸ್ತಪ್ರತಿ ಪುಷ್ಟಿಕೆಗಳು (ಸಂ. ಎಸ್.ಶಿವಣ್ಣ, ೧೯೯೪).
  * ಗದಗ ತೋಂಟದಾರ್ಯಮಠದ ಹಸ್ತಪ್ರತಿಸೂಚಿ (ಸಂ. ಪಂಡಿತ ಕೆ. ರಾಠೋಡ, ೨೦೦೪). ಹೀಗೆ ನಾಲ್ಕು ಕೃತಿಗಳನ್ನು ಈ ಮಠದಿಂದ ಪ್ರಕಟಿಸಲಾಗಿದೆ. ಇದರಿಂದ ಅಧ್ಯಯನಕಾರರಿಗೆ ಸಂಶೋಧಕರಿಗೆ ಅನುಕೂಲ ಕಲ್ಪಿಸಲಾಗಿದೆ.
  * ಭಂಡಾರದಿಂದ 'ದಾಖಲು ಸಾಹಿತ್ಯವನ್ನು ಎರಡು ಸಂಪುಟಗಳಲ್ಲಿ' ಪ್ರಕಟಿಸಿದ್ದು ಅಧ್ಯಯನಕ್ಕೆ ಹೆಚ್ಚಿನ ಅನುಕೂಲವಾಗಿದೆ.

ಹಾಗೆಯೇ ಸುಮಾರು ೨೦೦೦ದಿಂದ ೨೫೦೦ ಕಾಗದ ಪ್ರತಿಗಳನ್ನು ಹೊಂದಿರುವ 'ವೀರಶೈವ ಹಸ್ತಪ್ರತಿ ಪುಷ್ಟಿಕೆಗಳು' ಸಂಪುಟ-೧) ಎಸ್.ಶಿವಣ್ಣನವರು ೧೯೯೪ರಲ್ಲಿ ಸಂಪಾದಿಸಿದ್ದಾರೆ. ಇದರಲ್ಲಿ ಒಟ್ಟು ೨೩೧೬ ಕೃತಿಗಳ ಉಲ್ಲೇಖಗಳಿವೆ. ಈ ಕೃತಿಗಳನ್ನು 'ಅ'ಕಾರಾದಿ ಕ್ರಮದಲ್ಲಿ ಅಳವಡಿಸಲಾಗಿದೆ. ನಂತರ ಪಿ.ಕೆ.ರಾಠೋಡ ಅವರು ಗದುಗಿನ ತೋಂಟದಾರ್ಯ ಮಠದ ಹಸ್ತಪ್ರತಿಸೂಚಿಯನ್ನು ೨೦೦೫ರಲ್ಲಿ ಸಂಪಾದಿಸಿದ್ದಾರೆ. ಈ ಸೂಚಿಯಲ್ಲಿ ಸುಮಾರು ೨೮೬ ಕಾಗದ ಕಟ್ಟುಗಳಲ್ಲಿ ಸುಮಾರು ಅರನೂರಕ್ಕೂ ಹೆಚ್ಚಿನ ಕೃತಿಗಳನ್ನು ಈ ವರ್ಣನಾತ್ಮಕ ಸೂಚಿಯು ಒಳಗೊಂಡಿದೆ.

ವಿಶೇಷ ಹಸ್ತಪ್ರತಿಗಳು: ಭಂಡಾರದಲ್ಲಿ ಹೆಚ್ಚಾಗಿ ಹಾಡುಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ಹೆಚ್ಚಾಗಿ ಸಂಗ್ರಹಿಸಲಾಗಿದೆ. ಇದು ಪ್ರತ್ಯೇಕ ಅಭ್ಯಾಸದ ವಿಷಯವೆನಿಸಿದೆಯೆಂದು ಅಭಿಪ್ರಾಯಪಡುತ್ತಾರೆ.

ಭಂಡಾರಕ್ಕೆ ಆಗಮಿಸಿದ ಗಣ್ಯರು: ನಾಡಿನ ವಿವಿಧ ಕ್ಷೇತ್ರದ ಗಣ್ಯರು, ಅಧ್ಯಯನಕಾರರು, ಆಸಕ್ತರು, ಸಂಶೋಧಕರು, ಗ್ರಂಥಾಲಯದಿಂದ ಒಂದಲ್ಲ ಒಂದು ರೀತಿಯಲ್ಲಿ ನೆರವು ಪಡೆದಿದ್ದಾರೆ. ಅದೇ ರೀತಿಯಾಗಿ ನಾಡಿನ ವಿವಿಧ ಸಾಹಿತಿಗಳಾದ ಎಂ.ಎಂ.ಕಲಬುರ್ಗಿ, ಎಸ್.ಶಿವಣ್ಣನವರು ಹಾಗೂ ಇನ್ನಿತರ ಹಲವು ಸಾಹಿತಿಗಳು ಇಲ್ಲಿಗೆ ಭೇಟಿ ನೀಡಿ ಕೆಲವು ಸಲಹೆ ಸೂಚನೆ ನೀಡಿ 'ಲಿಂಗಾಯತ ಅಭಿವೃದ್ಧಿ ಸಂಸ್ಥೆ'ಯನ್ನು ಹುಟ್ಟು ಹಾಕಿರುವುದನ್ನು ಕಾಣಬಹುದು. ಆದರೆ ಈಗ ಭಂಡಾರವು ಆಧುನಿಕ ತಂತ್ರಜ್ಞಾನ ಅಳವಡಿಕೆ ಹಾಗೂ ಸಂಗ್ರಹ ಸಂರಕ್ಷಣೆಗೆ ಹೆಚ್ಚಿನ ಗಮನ ಹರಿಸಬೇಕಾದ ಅಗತ್ಯತೆಯಿದೆ.

ವಿವಿಧ ಕಾರ್ಯಕ್ರಮಗಳು

೨೦೦೪ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಸಹಯೋಗದೊಂದಿಗೆ ಪದವಿ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ನಾಲ್ಕು ದಿನಗಳ ಕಾಲ ಹಸ್ತಪ್ರತಿ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಓದುವ ವಿಧಾನಗಳ ಬಗ್ಗೆ ಪ್ರಾಯೋಗಿಕವಾಗಿ ತರಬೇತಿ ನೀಡಿದ್ದು ಈ ಮಠದ ಮತ್ತೊಂದು ಶೈಕ್ಷಣಿಕ ಸಾಧನೆಯಾಗಿದೆ.

ಮಠದ ಹಸ್ತಪ್ರತಿ ಭಂಡಾರದಲ್ಲಿ ತಾಳೆ ಹಸ್ತಪ್ರತಿ ಕಟ್ಟುಗಳನ್ನು ಕೆಂಪುವಸ್ತ್ರದಿಂದ ಹಾಗೂ ಕಾಗದ ಪ್ರತಿಗಳನ್ನು ಹಳದಿ ಬಟ್ಟೆಯಿಂದ ಸುತ್ತಿ ಸಂರಕ್ಷಣೆ ಮಾಡದೆ ಒಂದು ಬ್ಯೂರೋದಲ್ಲಿ ನಿರ್ಜೀವ ವಸ್ತುಗಳಂತೆ ಕೂಡಿಹಾಕಲಾಗಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಬೆಳಕಿಗೆ ಬಂದಿದೆ.

೪. ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠ

ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಒಂದು ಉಜ್ವಲ ಹೆಸರು ಮತ್ತು ಗೌರವವು ಈ ಮಹಾಸಂಸ್ಥಾನಕ್ಕೆ ಇದೆ. ಜೊತೆಯಲ್ಲಿ ಕರ್ನಾಟಕದ ಪ್ರಮುಖ ಐತಿಹಾಸಿಕ ಸ್ಥಳಗಳಲ್ಲಿ ಒಂದಾಗಿದೆ. ಸಾಮಾಜಿಕ ಕಾರ್ಯಚಟುವಟಿಕೆಯಲ್ಲಿ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡ ಏಕೈಕ ಮಠವು ಇದಾಗಿದೆ.

೧೨ನೇ ಶತಮಾನದಲ್ಲಿ ಸ್ಥಾಪಿತಗೊಂಡ ಈ ಮಠವು ಹನ್ನೆರಡನೆಯ ಶತಮಾನದ ಬಸವಾದಿ ಶಿವಶರಣರ ತತ್ವಾದರ್ಶಗಳ ಅಡಿಗಲ್ಲಿನ ಮೇಲೆಯೇ ತನ್ನ ಪರಂಪರೆಯನ್ನು ಮುಂದುವರಿಸಿಕೊಂಡು ಸಾಗಿದೆ. ಈ ಮಠದ ಸ್ಥಾಪನೆಗೆ ಕಾರಣಕರ್ತರಾದ ಶ್ರೀ ಮುನಿಸ್ವಾಮಿಗಳಿಂದ ಹಿಡಿದು ಡಾ. ಶಿವಮೂರ್ತಿ ಮುರುಘಾಶರಣರವರೆಗೆ ಒಟ್ಟು ಇಪ್ಪತ್ತು ಜನ ಸ್ವಾಮಿಗಳು ಮಠದ ಧಾರ್ಮಿಕ ಸಿಂಹಾಸನ ಅಲಂಕರಿಸಿದ್ದಾರೆ. ಅಲ್ಲದೆ ಅರಿವಿನ ಗುರುಗಳಾಗಿ ಸಮಾಜದ ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ. ಆದರೆ ಹಸ್ತಪ್ರತಿಗಳ ಸಂರಕ್ಷಣೆಯಲ್ಲಿ ಮಾತ್ರ ನಿರಾಸಕ್ತಿಯನ್ನೊಂದಿರುವುದು ಬೇಸರದ ಸಂಗತಿಯಾಗಿದೆ.

* ಅಲ್ಲಮಪ್ರಭು ಸಂಶೋಧನಾ ಕೇಂದ್ರ

ಸಮಕಾಲೀನ ಶರಣರನ್ನು ಕುರಿತು ಸಂಶೋಧನೆ ಕೈಗೊಳ್ಳುವವರಿಗೆ ಹಾಗೂ ವಚನ ಸಾಹಿತ್ಯವನ್ನು(ಬೆಡಗಿನ ವಚನಗಳನ್ನು ಒಳಗೊಂಡಂತೆ) ಅರ್ಥೈಸಿ ಸರಳ ರೂಪದಲ್ಲಿ ಜನ ಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಸಾಹಿತ್ಯ ಸೃಷ್ಟಿಸುವುದು ಮತ್ತು ಸಾಹಿತ್ಯವನ್ನು ದೇಶದ ವಿವಿಧ ಭಾಷೆಗಳಿಗೆ ಭಾಷಾಂತರಿಸುವ ಕಾರ್ಯ ಶ್ಲಾಘನೀಯ. ಬೃಹನ್ಮಠದ ಉದ್ದೇಶವನ್ನು ಈಡೇರಿಸುವ ಸಲುವಾಗಿಯೇ 'ಅಲ್ಲಮಪ್ರಭು ಸಂಶೋಧನಾ ಕೇಂದ್ರವನ್ನು' ಸ್ಥಾಪಿಸಲಾಗಿದೆ.

* ಬೃಹನ್ಮಠದ ವಸ್ತುಸಂಗ್ರಹಾಲಯ

ಶ್ರೀ ಮಠದ ವಸ್ತು ಸಂಗ್ರಹಾಲಯದಲ್ಲಿ ಒಟ್ಟು ೭೦ಕ್ಕಿಂತಲೂ ಹೆಚ್ಚಿನ ಕಟ್ಟುಗಳಿವೆ. ಇದರಲ್ಲಿ ಒಟ್ಟು ೪೬೦೦ಕ್ಕಿಂತಲೂ ಹೆಚ್ಚಿನ ಕೃತಿಗಳಿರುವುದನ್ನು ನೋಡಬಹುದು.

ಈ ಕೃತಿಗಳನ್ನು ಶಾಸ್ತ್ರೀಯವಾಗಿ ವಿಂಗಡಿಸಿದ ವಿದ್ವಾಂಸರಲ್ಲಿ ಒಬ್ಬರಾದ ಎಸ್. ಶಿವಣ್ಣನವರು ಆಸಕ್ತಿಯಿಂದ 'ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ-ಸಂಪುಟ-೧' ಪ್ರಕಟಿಸಿದ್ದಾರೆ. ಉಳಿದ ಹಸ್ತಪ್ರತಿ ಕಟ್ಟುಗಳನ್ನು ಸಂಪುಟ-೨ರಲ್ಲಿ ಸೇರಿಸುವ ಕಾರ್ಯ ನಡೆಯುತ್ತಿದೆ. ಶ್ರೀ ಮಠದಲ್ಲಿರುವ ೭೧೫ ಹಸ್ತಪ್ರತಿ ಕಟ್ಟುಗಳಲ್ಲಿ ಕನ್ನಡ ಲಿಪಿ-ಸಂಸ್ಕೃತ ಭಾಷೆಯ-೧೦೩೭, ಕನ್ನಡ-೩೬೦೦, ತೆಲುಗು ಭಾಷೆ-ಕನ್ನಡ ಲಿಪಿಯ-೧೨ ಪ್ರತಿಗಳಂತೆ ಒಟ್ಟಿನಲ್ಲಿ ೪೬೬೧ ಪ್ರತಿಗಳಿರುವುದನ್ನು ಕಾಣಬಹುದಾಗಿದೆ.

ಜನಪ್ರಿಯ ಕಾವ್ಯಗಳ ಜೊತೆ ಸ್ವರವಚನ ಸಾಹಿತ್ಯ ಇಲ್ಲಿ ಲಭ್ಯವಿದೆ. ಎಸ್. ಶಿವಣ್ಣನವರು ೬೫ ಜನ ಹೊಸ ಹಾಗೂ ೨೫ ಜನ ಹಳೆಕವಿಗಳ ಕೃತಿಗಳು ಹಾಗೂ ೮೨ ಹೊಸ ಕೃತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪರಿಚಯಿಸಿದ್ದಾರೆ.

*** ಹಸ್ತಪ್ರತಿಗಳಲ್ಲಿರುವ ಕೃತಿಗಳ ಪರಿಚಯ**

ಬೃಹನ್ಮಠದ ವಸ್ತುಸಂಗ್ರಹಾಲಯದಲ್ಲಿರುವ ಹಸ್ತಪ್ರತಿಗಳು ಅನೇಕ ವಿಷಯಗಳು ಹಾಗೂ ಘಟನೆಗಳಿಗೆ ಸಂಬಂಧಿಸಿವೆ. ಕನ್ನಡ, ತೆಲುಗು, ಸಂಸ್ಕೃತ ಮತ್ತು ದೇವನಾಗರಿಯ ತಾಡವೋಲೆ, ಕೋರಿಕಾಗದದ ಹಸ್ತಪ್ರತಿಗಳನ್ನು ಕಾಣಬಹುದು. ಬಸವ, ಅಲ್ಲಮ, ಚನ್ನಬಸವ ಅಕ್ಕಮಹಾದೇವಿ ಮೊದಲಾದ ಶರಣರ ವಚನ-ಸ್ವರವಚನಗಳು ಹಾಗೂ ಹರಿಹರ, ರಾಘವಾಂಕ, ಭೀಮಕವಿ ಮುಂತಾದ ಶಿವಕವಿಗಳ ಕಾವ್ಯ ಪುರಾಣಗಳು ಮತ್ತು ವಿವಿಧ ಕವಿಗಳ ಲಘುಕೃತಿಗಳು, ಶಾಸ್ತ್ರಗ್ರಂಥಗಳ ಸಂಗ್ರಹವು ಅಧ್ಯಯನಕ್ಕೆ ಯೋಗ್ಯವಾಗಿವೆ. ಜೊತೆಗೆ ಜನಪ್ರಿಯ ಕಾವ್ಯಗಳು, ಸ್ವರವಚನಗಳು, ಹಾಡುಗಳ ಪ್ರತಿಗಳು ಅಧಿಕ ಸಂಖ್ಯೆಯಲ್ಲಿವೆ. ಕರ್ನಾಟಕ ಕವಿಚರಿತೆಯಲ್ಲಿ ಉಕ್ತವಾಗದ ಅಕ್ಷರಾಂಕನ ಗದ್ಯ, ಛಂದಸ್ಸಿನ ಗಣನೆಯ ವಾರ್ಧಿಕ, ನಕ್ಷತ್ರ ಚೂಡಾಮಣಿಗಳಂಥ ಅನೇಕ ಕೃತಿಗಳು, ನೂರೊಂದು ಸ್ಥಲದ ವ್ಯಾಖ್ಯಾನ, ಶ್ರೀ ರುದ್ರಭಾಷ್ಯದ ಟೀಕು ಮೊದಲಾದ ಅಪ್ರಕಟಿತ ಕೃತಿಗಳ ಹಸ್ತಪ್ರತಿಗಳಿರುವುದು ಕಂಡುಬಂದಿವೆ. ಈ ಮಠದ ಪರಂಪರೆಯಲ್ಲಿ ಬರುವ 'ಇಮ್ಮಡಿ ಮುರುಘಾ ಗುರುಸಿದ್ಧನ' ಅನೇಕ ಕೃತಿಗಳು ಇಲ್ಲಿರುವುದು ಚಿತ್ರದುರ್ಗ ಪರಿಸರದ ವಿಶೇಷತೆಯಾಗಿದೆ.

ಇಲ್ಲಿ ಹಸ್ತಪ್ರತಿಗಳನ್ನು ಕೆಂಪು ವಸ್ತ್ರದಿಂದ ಸುತ್ತಿ ಬ್ಯೂರೋದಲ್ಲಿ ಇಡಲಾಗಿದೆ. ಅವುಗಳನ್ನು ನೋಡುವುದಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ನಾಲ್ಕು ಗೋಡೆಗಳ ಮಧ್ಯದಲ್ಲಿ ಬಂಧಿಯಾಗಿಸಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಕ್ಕೆ ಬಂದಿದೆ. ಶಿವಮೂರ್ತಿ ಮಹಾಸ್ವಾಮಿಗಳ ಆಸಕ್ತಿ ಹಾಗೂ ಗಮನವನ್ನು ಹಸ್ತಪ್ರತಿಗಳ ಕಡೆ ಹೊರಳಿಸಬೇಕಾಗಿದೆ. ಅಲ್ಲದೆ ಅವುಗಳ ಸೂಚಿ ಸಂಪುಟ ತಯಾರಿಸುವ ಹಾಗೂ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಸಂರಕ್ಷಣೆ ಹಾಗೂ ಇನ್ನಿತರ ಕಾರ್ಯ ಚಟುವಟಿಕೆಯನ್ನು ಜರೂರಾಗಿ ಮಾಡಬೇಕಾಗಿರುವ ಅಗತ್ಯ ಇದೆ ಎಂಬುದು ಕ್ಷೇತ್ರಾಧ್ಯಯನದಿಂದ ತಿಳಿದುಬಂದ ಸಂಗತಿಯಾಗಿದೆ.

೫. ಹುಬ್ಬಳ್ಳಿಯ ಮೂರುಸಾವಿರ ಮಠ

ಹುಬ್ಬಳ್ಳಿಯ ಶ್ರೀ ಜಗದ್ಗುರು ಮೂರುಸಾವಿರ ಮಠವು ಭಾರತದಲ್ಲಿಯೇ ಪ್ರಮುಖ ವೀರಶೈವ ಮಠಗಳಲ್ಲಿ ಒಂದಾಗಿದೆ. ಈ ಮಠದ ಆಶ್ರಯದಲ್ಲಿದ್ದ ಓಲೆಮಠದಲ್ಲಿ ಅಪಾರ ಪ್ರಾಚೀನ ಹಸ್ತಪ್ರತಿಗಳಿರುವ ಬಗ್ಗೆ ಡಾ. ಸರೋಜಿನಿ ಚವಲಾರ ಅವರು ನಿರೂಪಿಸಿದ್ದಾರೆ. ಅವಶೇಷಗಳಂತಿರುವ ಈ ಕಲಾ ಸೌರಭದ ಓಲೆಮಠವನ್ನು ಪುನರುಜ್ಜೀವಗೊಳಿಸಿ, ಸಂಶೋಧಕರಿಗೆ, ಅಧ್ಯಯನಕಾರರಿಗೆ, ವಿದ್ವಾಂಸರಿಗೆ ಹಲವು ಸೌಲಭ್ಯವನ್ನು ಕಲ್ಪಿಸಿದ ಪೂಜ್ಯ ಶ್ರೀಗಳು ಅನೇಕ ಯೋಜನೆಯನ್ನು ಕೈಗೊಂಡಿರುವುದು ಗಮನಾರ್ಹ.

ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಆಸಕ್ತಿಯಿಂದ ಮಠದಲ್ಲಿ ಹಸ್ತಪ್ರತಿಗಳ ಸಂರಕ್ಷಣಾಕೇಂದ್ರ ಜನ್ಮ ತಾಳಿತ್ತು. ಇಲ್ಲಿ ಪ್ರಾಚೀನ ಹಸ್ತಪ್ರತಿಗಳು ವೈವಿಧ್ಯತೆಯಿಂದ ಏಕತೆಯನ್ನು ಪ್ರತಿಪಾದಿಸುವಲ್ಲಿ ವೈಶಿಷ್ಟ್ಯಪೂರ್ಣವಾಗಿವೆ. ಅದ್ವೈತ, ದ್ವೈತ, ಶಕ್ತಿ ವಿಶಿಷ್ಟಾದ್ವೈತ ಹಾಗೂ ಜೈನ ಕೃತಿಗಳು, ವರ್ಣಚಿತ್ರಗಳು, ಸುಂದರ ಲಿಪಿಗಳು, ಮಂಡಲ ರೇಖಾಚಿತ್ರಗಳು ಇತ್ಯಾದಿ ಆಕರಗಳು ಸಂಶೋಧಕರಿಗೆ, ಅಧ್ಯಯನಕಾರರಿಗೆ ತುಂಬಾ ಸಹಕಾರಿಯಾಗಿರುವುದು ಕಂಡುಬಂದಿದೆ. ಇದರ ಜೊತೆಗೆ ಕನ್ನಡ ಲಿಪಿಯ ಹಸ್ತಪ್ರತಿಗಳು ಸಮೃದ್ಧವಾಗಿರುವುದನ್ನು ಕಾಣಬಹುದು. ಹಾಗೇಯೆ 'ಕರ್ನಾಟಕ ಕವಿಚರಿತೆ'ಯಲ್ಲಿ ಅನುಪಲಬ್ಧದ ಹಲವು ಕೃತಿಗಳು ಈ ಮಠದ ಭಂಡಾರದಲ್ಲಿ ಸಂರಕ್ಷಿಸಲಾಗಿದೆ.

ಕೆಳದಿ ಸಂಸ್ಥಾನದ ಪ್ರಧಾನಿ ನಿರ್ವಾಣಮಂತ್ರಿಯ(ಕ್ರಿ.ಶ.೧೭೫೫) ಹಾಗೂ ಇದೇ ಆಸ್ಥಾನದ ಇತರ ಕೃತಿಗಳು, ಉದ್ಧರಣ ಪಟಲದಲ್ಲಿರುವ ಸಶಾಸ್ತ್ರೀಯ ಮಂಡಲಗಳು, ಉದ್ದರಣೆಗಳು, ಸರ್ವಜ್ಞ ವಚನಗಳು, ಛಂದೋ-ಅಲಂಕಾರ, ಶಾಸ್ತ್ರ ಗ್ರಂಥಗಳಿರುವುದು ಗಮನಾರ್ಹ.

ಮಠದಲ್ಲಿರುವ ಪ್ರಾಚೀನ ಹಸ್ತಪ್ರತಿಗಳಲ್ಲಿ ವೇದ, ಆಗಮ, ಉಪನಿಷತ್ತು, ಪುರಾಣ, ಚರಿತ್ರೆ, ಕಾವ್ಯ, ನಾಟಕ, ವ್ಯಾಕರಣ, ಛಂದಸ್ಸು, ವೀರಶೈವಾಗಮಾದಿ ವೇದಾಂತ ಧರ್ಮಶಾಸ್ತ್ರಗಳು, ಸಂಪಾದನೆ, ಶತಕ, ರಗಳೆ, ತ್ರಿಪದಿ, ಕಂದ, ಗದ್ಯ, ವಚನವಾಙ್ಮಯ ಗ್ರಂಥಗಳು ವಿಪುಲವಾಗಿವೆ. ಜೊತೆಗೆ ಕ್ರಿ.ಶ.೧೧೫೦ರಿಂದ ಆರಂಭಿಸಿ ೧೮೦೦ರವರೆಗಿನ ಕೃತಿಗಳು ಹಾಗೆಯೇ ೧೬೪೩ರಿಂದ ೫.೯.೧೯೧೭ ರವರೆಗಿನ ಪ್ರತಿಕಾರರ ಹಸ್ತಪ್ರತಿಗಳು ಇಲ್ಲಿ ಸಂಗ್ರಹವಾಗಿವೆ.

ರಾ. ನರಸಿಂಹಾಚಾರ್ಯರು "ಬಿಡಿ ಓಲೆಯಲ್ಲಿ ಗ್ರಂಥನಾಮವಿದ್ದರೂ ಅವುಗಳನ್ನು ದಾಖಲಿಸುವುದು ಸೂಕ್ತ" ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ೧೯೮೯ರಲ್ಲಿ ೭೫೮ ಕಟ್ಟುಗಳ ಶ್ರೀ ಜಗದ್ಗುರು ಮೂರುಸಾವಿರ ಮಠದ ವರ್ಣನಾತ್ಮಕ ಸೂಚಿಯನ್ನು ಕೆಳದಿ ಗುಂಡಾ ಜೋಯಿಸರು ಸಂಪಾದಿಸಿರುವುದನ್ನು ಕಾಣಬಹುದು. ಸೂಚಿಯಲ್ಲಿರುವ ವಿವರಣೆ ಈ ಕೆಳಗಿನಂತೆ ಇದೆ.

* ಕನ್ನಡ ತಾಳೆಯೋಲೆ ಹಸ್ತಪ್ರತಿಗಳು – ೩೭೯
* ಕನ್ನಡ ಕಾಗದ ಹಸ್ತಪ್ರತಿಗಳು – ೧೯೦

* ಪ್ರಾಚೀನ ಮುದ್ರಿತ ಕನ್ನಡ ಗ್ರಂಥಗಳು	–	೧
* ಸಂಸ್ಕೃತ ಗ್ರಂಥಗಳು	–	೭೮
* ಸಂಸ್ಕೃತ ಹಸ್ತಪ್ರತಿಗಳು	–	೬
* ಗ್ರಂಥಲಿಪಿ ತಾಳೆಯೋಲೆ ಹಸ್ತಪ್ರತಿ	–	೨
* ತೆಲುಗು ತಾಳೆಯೋಲೆ ಹಸ್ತಪ್ರತಿ	–	೨
ಒಟ್ಟು	–	೬೫೮

ಪ್ರಸ್ತುತ ಮಠದಲ್ಲಿ ಉಳಿದುಬಂದಿರುವ ಕೆಲವು ಹಸ್ತಪ್ರತಿಗಳು ಅವಶೇಷಗಳಂತೆ ಕಾಣಿಸುತ್ತವೆ. ಈ ಹಸ್ತಪ್ರತಿ ಸಂಪತ್ತು ಈಗ ಕೇವಲ ೧೮೦ರಿಂದ ೨೦೦ ಕಟ್ಟುಗಳು ಮಾತ್ರ. ಇವುಗಳನ್ನು ಕೆಂಪುವಸ್ತ್ರ ಹಾಗೂ ಹಳದಿ ವಸ್ತ್ರಗಳಿಂದ ಸುತ್ತಿ ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ಇಡಲಾಗಿದೆ. ಹಲವು ಮುಖ್ಯ ಹಸ್ತಪ್ರತಿಗಳು ಕರಗಿ ಹೋಗಿರುವುದನ್ನು ಕಾಣಬಹುದು. ಇಲ್ಲಿರುವ ಹಸ್ತಪ್ರತಿಗಳನ್ನು ಸಂರಕ್ಷಣೆ ಹಾಗೂ ಸೂಚೀಕರಣದ ಕೆಲಸ ಆಗುವುದರೊಂದಿಗೆ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ.

ನಾಡಿನ ಹಲವು ವಿದ್ವಾಂಸರಾದ ಕೆಳದಿ ಗುಂಡಾಜೋಯಿಸರು, ಡಾ. ಎಂ.ಎಂ.ಕಲಬುರ್ಗಿ ಹಾಗೂ ಡಾ. ಗುಂಜಾಳ ಮತ್ತಿತ್ತರ ಗಣ್ಯ ವಿದ್ವಾಂಸರು ಇಲ್ಲಿಗೆ ಭೇಟಿ ನೀಡಿ, ಹಲವು ಸಲಹೆ ಸೂಚನೆಗಳನ್ನು ನೀಡುವುದರ ಜೊತೆಗೆ ಇಲ್ಲಿನ ಹಸ್ತಪ್ರತಿಗಳಿಂದ ನೆರವು ಪಡೆದಿರುವುದನ್ನು ಕಾಣಬಹುದಾಗಿದೆ.

೬. ಹೊಸಪೇಟೆಯ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಮಠ

ಕ್ರಿ.ಶ.೧೫೧೮ರಲ್ಲಿ ಶ್ರೀ ಕಪ್ಪಿನ ಚೆನ್ನಬಸವ ಶಿವಯೋಗಿಗಳಿಂದ ಈ ಮಠ ಸ್ಥಾಪಿತವಾಗಿದೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿರುವ 'ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಮಠ ಅಲ್ಲಮಪ್ರಭು ಪರಂಪರೆಯ ಬಸವತತ್ವ ಹಿನ್ನೆಲೆಯಲ್ಲಿ 'ಶ್ರೀ ಹೇಮಕೂಟ ಸಿಂಹಾಸನ' ಎಂಬ ಅಭಿದಾನದಲ್ಲಿ ಚಾರಿತ್ರಿಕ ಮನ್ನಣೆ ಪಡೆದು ಇಪ್ಪತ್ತೊಂದಕ್ಕೂ ಹೆಚ್ಚಿನ ಶಾಖಾಮಠಗಳನ್ನು ಹೊಂದಿದೆ. ಪೀಠ ಪರಂಪರೆಯಂತೆ ೧೯೭೭ರಲ್ಲಿ ೧೯ನೆಯ ಪೀಠಾಧಿಪತಿಗಳಾಗಿ ಬಂದ ಜಗದ್ಗುರು ಶ್ರೀ ಸಂಗನಬಸವ ಮಹಾಸ್ವಾಮಿಗಳು ಯಾವುದೇ ಆದಾಯವಿಲ್ಲದ ಮಠದಲ್ಲಿ ೧೯೭೭ರಲ್ಲಿಯೇ ಬಸವ ಪ್ರಸಾದ ನಿಲಯ ಹಾಗೂ ಹಲವು ವಿದ್ಯಾಕೇಂದ್ರಗಳನ್ನು ಮತ್ತು ಹಸ್ತಪ್ರತಿ ಗ್ರಂಥಾಲಯವನ್ನು ಸ್ಥಾಪಿಸಿರುವುದನ್ನು ಕಾಣಬಹುದಾಗಿದೆ.

ಮಠದ ಹಸ್ತಪ್ರತಿ ಗ್ರಂಥಾಲಯದ ಸಂರಕ್ಷಣೆ ಕೇಂದ್ರದಲ್ಲಿ ಸುಮಾರು ಎರಡು ನೂರು ತಾಡವೋಲೆ ಮತ್ತು ಕೋರಿಕಾಗದ ಹಸ್ತಪ್ರತಿಗಳು ಸಂರಕ್ಷಿತಗೊಂಡಿವೆ. ಶಿವಶರಣರ ವಚನ ಕಟ್ಟುಗಳು, ಹರಿಹರ, ರಾಘವಾಂಕ, ಭೀಮಕವಿ, ಷಡಕ್ಷರದೇವ ಮೊದಲಾದ ಲಿಂಗಾಯತ ಕವಿಗಳ ಕೃತಿಗಳು, **ವಿಶೇಷವಾಗಿ ಶಿವಶರಣರ ವಚನೇತರ ಸಾಹಿತ್ಯಕ್ಕೆ** ಸಂಬಂಧಿಸಿದ ಲಘುಕೃತಿಗಳು ಇಲ್ಲಿನ ಸಂಗ್ರಹದಲ್ಲಿವೆ. ಪಿ.ಎಂ.ಗಿರಿರಾಜು ಅವರು ಸಾಮಾನ್ಯ ಸೂಚಿಯನ್ನು ಸಿದ್ಧಪಡಿಸಿದ್ದಾರೆ. ವಿವರಣಾತ್ಮಕ ಸೂಚಿಯನ್ನು

ಪ್ರಕಟಿಸಲು ಕೆ.ರವೀಂದ್ರನಾಥ ಹಾಗೂ ಎಫ್.ಟಿ.ಹಳ್ಳಿಕೇರಿಯವರು ಕಾರ್ಯ ಕೈಗೊಂಡಿರುವರು. ಆದರೆ ಸ್ವಾಮೀಜಿಯ ನಿರಾಸಕ್ತಿಯಿಂದ ಯೋಜನೆ ಅರ್ಧದಲ್ಲಿ ಸ್ಥಗಿತಗೊಂಡಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಿದೆ.

೭. ಹೊಳಗುಂದಿಯ ಶ್ರೀ ಶಂಕರ ಮಠ

ಹಡಗಲಿ ತಾಲೂಕಿನ ಹೊಳಗುಂದಿಯ ಶ್ರೀ ಶಂಕರ ಮಠವು ಈ ಭಾಗದಲ್ಲಿ ತುಂಬ ಪ್ರಸಿದ್ಧವಾದ ಮಠ. ಉತ್ತಂಗಿ, ಉಜ್ಜಯಿನಿ, ಕೊಟ್ಟೂರು, ಹನಸಿ, ಎಂ.ಬಿ.ಅಯ್ಯನಹಳ್ಳಿ ಗ್ರಾಮಗಳಲ್ಲಿ ಶಾಖಾಮಠಗಳನ್ನು ಹೊಂದಿದ ಸಂಸ್ಥಾನಮಠ ಇದಾಗಿದೆ. ಈ ಮಠಗಳ ಇಂದಿನ ಪೀಠಾಧಿಪತಿಗಳಾದ ತರೀಕೆರೆ ಚರವರೇಣ್ಯ ಶ್ರೀ ಶಂಕರ ಸ್ವಾಮಿಗಳು ಸಾಹಿತ್ಯ-ಸಂಸ್ಕೃತಿ ಪೋಷಕರು. ಬಸವಾದಿ ಶಿವಶರಣರ ವಚನ ಕಟ್ಟುಗಳು, ಗಿರಿಜಾ ಕಲ್ಯಾಣ, ಪ್ರಭುಲಿಂಗಲೀಲೆ, ಬಸವ ಪುರಾಣ, ಚನ್ನಬಸವ ಪುರಾಣ, ಭೈರವೇಶ್ವರ ಕಾವ್ಯ, ಲಿಂಗಾಲೀಲಾ ವಿಲಾಸ ಚಾರಿತ್ರ ಹಾಗೂ ನಡುಗನ್ನಡ ಸಾಹಿತ್ಯದ ಪ್ರಮುಖ ಕಾವ್ಯಗಳು, ರಗಳೆ, ಕಂದ, ಸ್ತೋತ್ರ, ತ್ರಿವಿಧ, ಗದ್ಯ ಟೀಕು ಸ್ವರವಚನ, ವ್ಯಾಖ್ಯಾನಗಳಂಥ ವೀರಶೈವ ಲಘುಸಾಹಿತ್ಯ ಕೃತಿಗಳ ಹಸ್ತಪ್ರತಿಗಳು ಈ ಸಂಗ್ರಹದಲ್ಲಿವೆ. ಒಂದೇ ಕಟ್ಟಿನಲ್ಲಿ ೪೭ ಕೃತಿಗಳಿರುವುದು ಕಂಡುಬಂದಿದೆ. **ಸಿದ್ಧಲಿಂಗ ಮುನಿಯ ಜಯಸಿದ್ಧಲಿಂಗ ರಗಳೆ** ಎಂಬ ಸ್ತುತಿರೂಪದ ಅಪ್ರಕಟಿತ ಕೃತಿಯಿರುವುದು ಈ ಸಂಗ್ರಹದ ಮತ್ತೊಂದು ವಿಶೇಷವಾಗಿದೆ.

'ಚಿಕ್ಕಮಗಳೂರು ಜಿಲ್ಲೆ ತರೀಕೆರೆ ಶ್ರೀ ಶಂಕರ ಮಠದ ಸ್ಥಳವಾಗಿದ್ದು ಈಗಲೂ ಅದು ಅಸ್ತಿತ್ವದಲ್ಲಿದೆ. ಹೀಗಾಗಿ ಈ ಹಸ್ತಪ್ರತಿಗಳು ಐತಿಹಾಸಿಕ ದೃಷ್ಟಿಯಿಂದಲೂ ನಮಗೆ ಮಹತ್ವದ್ದಾಗಿ ಕಂಡುಬರುತ್ತವೆ. ೧೯೯೮ರಲ್ಲಿ ಎಫ್.ಟಿ.ಹಳ್ಳಿಕೇರಿ ಹಾಗೂ ಕೆ.ರವೀಂದ್ರನಾಥ ಹಸ್ತಪ್ರತಿಶಾಸ್ತ್ರ ವಿಭಾಗದ ಸಾಂಸ್ಥಿಕ ಯೋಜನೆಯಡಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಉತ್ತಂಗಿ ಮಠಕ್ಕೆ ಭೇಟಿ ನೀಡಿದ್ದರು. ಆಗ ಶ್ರೀ ಶಂಕರ ಶ್ರೀಗಳು ತಾವು ಸಂಗ್ರಹಿಸಿಕೊಂಡು ಬಂದಿದ್ದ ಎಲ್ಲಾ ಹಸ್ತಪ್ರತಿಗಳನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ದಾನವಾಗಿ ಕೊಟ್ಟಿದ್ದಾರೆ. ಪ್ರಸ್ತುತ ಮಠದಲ್ಲಿ ಯಾವುದೇ ಸಂಗ್ರಹವಿರುವುದಿಲ್ಲ'.[೨೦]

೮. ಇತರೆ ವೀರಶೈವ ಮಠಗಳು

ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿ ಶ್ರೀ ಸಿದ್ಧರಾಮ ಪೀಠದಲ್ಲಿ ನೂರಕ್ಕೂ ಹೆಚ್ಚು ತಾಡವೋಲೆ, ಕೋರಿಕಾಗದದ ಹಸ್ತಪ್ರತಿಗಳು ಇವೆ. ಅವುಗಳಲ್ಲಿ ಅಮರಕೋಶ ಟೀಕು, ನೀಲಕಂಠಾಚಾರ್ಯನ 'ಪಂಡಿತಾರಾಧ್ಯ ಚರಿತ್ರೆ', ಅದೃಶ್ಯ ಕವಿಯ 'ಪ್ರೌಢರಾಯನ ಕಾವ್ಯ', ಭೀಮಕವಿಯ 'ಬಸವಪುರಾಣ'ದ ಹಸ್ತಪ್ರತಿಗಳನ್ನು ಸ್ವ-ಆಸಕ್ತಿಯಿಂದ ಕನ್ನಡ ವಿಶ್ವವಿದ್ಯಾಲಯಕ್ಕೆ ಅಂದಿನ ಪೀಠಾಧಿಕಾರಿಗಳಾದ ಜಗದ್ಗುರು ಶ್ರೀ ಮರುಳಸಿದ್ಧ ಶಿವಾಚಾರ್ಯ ಮಹಾಸ್ವಾಮಿಗಳು ಕೊಡುಗೆಯಾಗಿ ನೀಡಿದ್ದಾರೆ. ಹಾಗೆಯೇ ಕೊಪ್ಪಳದ ಗವಿಸಿದ್ಧೇಶ್ವರ ಶಾಖಾಮಠವು ಹಗರಿಬೊಮ್ಮನಹಳ್ಳಿ ತಾಲೂಕಿನ ಕಡ್ಲಬಾಳು ಗ್ರಾಮದಲ್ಲಿದೆ. ಈ ಗ್ರಾಮ ಕೋಗಳಿಯಿಂದ ಎಂಟು ಕಿ.ಮೀ.ಗಳ ಅಂತರದಲ್ಲಿದೆ. ಇಲ್ಲಿ ಸಂಗ್ರಹಗೊಂಡಿದ್ದ ಎಲ್ಲ ಹಸ್ತಪ್ರತಿಗಳನ್ನು ಜಗದ್ಗುರು ಶ್ರೀ ಶಶಿಧರ ಮಹಾಸ್ವಾಮಿಗಳು ಕನ್ನಡ ವಿಶ್ವವಿದ್ಯಾಲಯಕ್ಕೆ ಹಾಗೂ ಧಾರವಾಡ ವಿಶ್ವವಿದ್ಯಾಲಯಕ್ಕೆ ನೀಡಿದ್ದು, ಈಗಿನ ಗವಿಸಿದ್ಧೇಶ್ವರ ಮಹಾಸ್ವಾಮಿಗಳು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮಾಹಿತಿ ನೀಡಿದ್ದಾರೆ. ಹೀಗೆ ಕೋಗಳಿ ಸಮೀಪದ

ಅಂಬಳಿ ಗ್ರಾಮದಲ್ಲಿರುವ ನಗರಗಡ್ಡಿ ಮಠದಲ್ಲಿದ್ದ ಕೆಲವು ತಾಡವೋಲೆ ಪ್ರತಿಗಳನ್ನು ಸಹ ಕನ್ನಡ ವಿಶ್ವವಿದ್ಯಾಲಯಕ್ಕೆ ನೀಡಿರುವುದು ಇಲ್ಲಿ ಗಮನಿಸಲಾಗಿದೆ. ಅಲ್ಲದೇ ನಾಡಿನಾದ್ಯಂತವಿರುವ ವೀರಶೈವ ಮಠಗಳಾದ ಹುಲಿಯ ಪಂಚವಟ್ಟಿಗೆ ಮಠ, ಬ್ಯಾಡಗಿಯ ಮುಪ್ಪಿನನಾರ್ಯ ಮಠ, ಆನಂದಪುರದ ಮುರುಘರಾಜೇಂದ್ರ ಮಠ, ಮಹಲಿಂಗಪುರದ ಮಹಲಿಂಗೇಶ್ವರ ಮಠ, ಗುಳೇದಗುಡ್ಡದ ಮುರುಘಾಮಠ, ಮುಳಗುಂದದ ಕರಿಬಸಯ್ಯನ ಮಠ, ಧಾರವಾಡದ ಮುರುಘಮಠ, ಹುಮ್ನಾಬಾದಿನ ಮುರುಘಾಮಠ, ಕಮಲಾಪುರದ ಸಿದ್ಧರಾಮೇಶ್ವರ ಮಠ, ಗುಲ್ಬರ್ಗಾದ ಗುರುಬಸವ ಮಠ, ಉದ್ಗೀರಣದ ಚೌಕಿಮಠ, ಭಾಲ್ಕಿಯ ಹಿರೇಮಠ, ಸುತ್ತೂರು ಮಠ, ನಿಡುಮಾಮಿಡಿ ಮಠ, ಶ್ರೀ ಉಜ್ಜಯನೀ ಪೀಠ, ವಿಜಾಪುರದ ಷಣ್ಮುಖಸ್ವಾಮಿ ಮಠ, ಬಾಗಲಕೋಟೆಯ ಟೀಕಿನಮಠ, ರಾವೂರು ಸಿದ್ಧೇಶ್ವರ ಮಠ, ರಟಿಗಲ್ ವಿರಕ್ತಮಠ, ಹುಲುಸೂರು ವಿರಕ್ತಮಠ, ನರಗುಂದದ ವಿರಕ್ತಮಠ, ಜಮಖಂಡಿಯ ಓಲೆಮಠ, ಸ್ವಾದಿಮಠಗಳಲ್ಲದೆ ಇನ್ನೂ ಅನೇಕ ನಾಡಿನ ಹಲವು ಮಠಗಳಲ್ಲಿ ಕನ್ನಡ ಹಸ್ತಪ್ರತಿಗಳ ಭಂಡಾರಗಳಿದ್ದು ಹಾಗೂ ಹಸ್ತಪ್ರತಿ ಸಂಪತ್ತು ಇದ್ದ ಕುರುಹುಗಳಿರುವುದನ್ನು ಕಾಣಲಾಗಿದೆ. ಹಾಗೆಯೇ ಕೆಲವು ಲಿಂಗಾಯತ ಮಠಗಳು ಹಸ್ತಪ್ರತಿ ಸಂರಕ್ಷಣೆಗೆ, ಕಾರ್ಯಸೂಚಿ ಹಾಗೂ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ. ಪ್ರಾಚೀನ ಜ್ಞಾನಸಂಪತ್ತುಗಳ ಕಡೆ ಗಮನಹರಿಸುವ ಅಗತ್ಯತೆ ಕ್ಷೇತ್ರಕಾರ್ಯ ಅಧ್ಯಯನದಿಂದ ತಿಳಿದುಬಂದಿದೆ.

೩.೩.೩. ವೈದಿಕ ಮಠಗಳ ಹಸ್ತಪ್ರತಿ ಭಂಡಾರಗಳು

ಈ ಧರ್ಮದಲ್ಲಿ ಘಟಿಕಾಸ್ಥಾನ ಮತ್ತು ಮಠಗಳು ಪುಸ್ತಕಗಳನ್ನು ಸಂಗ್ರಹಿಸುತ್ತಾ ಬಂದವು. ಇವುಗಳಲ್ಲಿ ಘಟಿಕಾಸ್ಥಾನಗಳು ಸಾರ್ವಜನಿಕ ವಿದ್ಯಾಕೇಂದ್ರಗಳಾಗಿದ್ದು ಇಲ್ಲಿ ಧಾರ್ಮಿಕ ಗ್ರಂಥಗಳು, ವ್ಯಾಕರಣಾದಿ ಶಾಸ್ತ್ರಗಳ, ಸುಪ್ರಸಿದ್ಧ ಕಾವ್ಯಗಳ ಪ್ರೌಢ ಅಧ್ಯಯನಕ್ಕೆ ಅವಕಾಶವಿತ್ತು. ಅದರಲ್ಲೂ ಸಂಸ್ಕೃತ ಕೃತಿಗಳ ಅಭ್ಯಾಸವೇ ಇಲ್ಲಿ ಮುಖ್ಯವಾಗಿ ನಡೆಯುತ್ತಿದ್ದಿತು. ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನ ನಾಗಾವಿಯ ಘಟಿಕಾಸ್ಥಾನದಲ್ಲಿ ಓದುವ 'ವೇದಾಧ್ಯಾಯಿಗಳಿನ್ನೂರ್ವರ್ಗಂ, ಶಾಸ್ತ್ರಾಧ್ಯಾಯಗಳ ಯ್ವದಿಂಬರ್ಗಂ, ತದುಪಾಧ್ಯಾಯಿಗಳು ೩ ಭಟ್ಟದರ್ಶನ ನ್ಯಾ(ಸ) ಪ್ರಭಾಕರ ವ್ಯಾಖ್ಯಾತೃಗಳ್ಮೂವರ್ಗ್ಗಂ ವೇದಮನೋದಿಸುಪಾಧ್ಯಾಯಮ್ಮೂವರ್ಗ್ಗಂ ಶಾಲೆಯ ಸರಸ್ವತೀ ಭಣ್ಡಾರಿಗರಾ(ರ್ರೂ) ವ್ವರ್ಗ್ಗಮನ್ತು ೨೫೭ ಮಾನಸ' ರಿಗೆ ದತ್ತಿಬಿಟ್ಟ ವಿಷಯ ಶಾಸನದಲ್ಲಿದೆ.[೨೧] ಇಲ್ಲಿಯ ವಿಷಯ ವೈವಿಧ್ಯಕ್ಕನುಗುಣವಾಗಿ ಗ್ರಂಥಸಂಗ್ರಹ ಮಾಡಲಾಗಿದೆ. ಈ ಸಂಗ್ರಹವನ್ನು 'ಸರಸ್ವತೀ ಭಂಡಾರ' ಎಂದು ಕರೆದಿದ್ದು ಈ ಭಂಡಾರ ನೋಡಿಕೊಳ್ಳಲು ಒಬ್ಬ ಗ್ರಂಥಪಾಲಕನಿದ್ದನೆಂದು ತಿಳಿದುಬಂದಿದೆ. 'ಭಾಟ್ಟದರ್ಶನ ವ್ಯಾಖ್ಯಾತೃ, ನ್ಯಾಸವ್ಯಾಖ್ಯಾತೃ, ಪ್ರಭಾಕರ ವ್ಯಾಖ್ಯಾತೃಗಳಿಗೆ ಸಮಾನವಾಗಿ ೩೦ ಮತ್ತರು ಭೂಮಿಯನ್ನು ನೀಡಲಾಗುತ್ತಿತ್ತು' ಎಂದು ಶಾಸನದಲ್ಲಿ ಉಲ್ಲೇಖವಾಗಿದೆ. ಕರ್ನಾಟಕದಲ್ಲಿ ಸಾಲೋಟಗಿ, ಹೂವಿನಬಾಗೆ, ಹೆಂಜೇರು, ಹೊಟ್ಟೂರು ಮೊದಲಾದವು ಇಂಥ ಘಟಿಕಾಸ್ಥಾನಗಳಾಗಿದ್ದವು.

ಘಟಿಕಾಸ್ಥಾನಗಳನ್ನು ಬಿಟ್ಟರೆ ವೈದಿಕ ಮಠಗಳು ಹಸ್ತಪ್ರತಿ ಉತ್ಪಾದನೆ, ಪ್ರಸಾರಕಾರ್ಯ ಹಾಗೂ ಸಂಗೋಪನೆಯನ್ನು ಪೂರೈಸುತ್ತಿದ್ದರು. ಆದರೆ ಬ್ರಾಹ್ಮಣರಿಗೆ ಕನ್ನಡ ಅಸ್ಪೃಶ್ಯ ಭಾಷೆಯಾಗಿದ್ದುದರಿಂದ

ಇವರು ಮೊದಲು ಕನ್ನಡ ಹಸ್ತಪ್ರತಿಗಳನ್ನು ನಕಲು ಮಾಡಿಸಲಿಲ್ಲವೆಂದು ಹಿರಿಯ ವಿದ್ವಾಂಸರ ಅಭಿಪ್ರಾಯವಾಗಿದೆ. ಹೀಗಾಗಿ ವೈದಿಕ ಮಠಗಳಲ್ಲಿ ಸಂಸ್ಕೃತ ಹಸ್ತಪ್ರತಿಗಳೇ ಹೆಚ್ಚು ಸಂಗ್ರಹವಾಗಿವೆ. ಮಠಗಳನ್ನು ಹೊರತುಪಡಿಸಿದರೆ ಸಾಮಾನ್ಯರ ವಶದಲ್ಲಿ ದಾಸರ ಕೀರ್ತನೆಗಳು, ಕುಮಾರವ್ಯಾಸ ಭಾರತದಂಥ ಕಾವ್ಯಗಳನ್ನು ಆಗಾಗ ನಕಲು ಮಾಡಿಸುತ್ತ ಬರುತ್ತಿದ್ದರೆಂದು ತಿಳಿದುಬಂದಿದೆ.

ಮಠಗಳಲ್ಲಿ ಸಂಗ್ರಹಿತವಾದ ಸಂಸ್ಕೃತ ಹಸ್ತಪ್ರತಿಗಳನ್ನು ವಿದ್ಯಾಪ್ರೇಮಿಗಳಾದ ಇವರು ತುಂಬ ಹೆಚ್ಚು ಗೌರವದಿಂದ ಕಂಡು ಸಂರಕ್ಷಿಸಲು ಮುಂದಾಗುತ್ತಿದ್ದರು. ಇದಕ್ಕೆ ನಿದರ್ಶನವಾಗಿ ಶೃಂಗೇರಿ ವೈದಿಕ ಧರ್ಮದ ಕೇಂದ್ರಪೀಠ, ನರಸಿಂಹ ಭಾರತಿ ಒಡೆಯರ ಆದೇಶದ ಮೇರೆಗೆ ಇಲ್ಲಿ ಪುಸ್ತಕ ಭಂಡಾರದ ಸಂರಕ್ಷಣಾರ್ಥವಾಗಿ ಬೆಳಂಜಿ ಗ್ರಾಮದ ಉತ್ಪನ್ನವನ್ನು ಕವಿ ಕೃಷ್ಣಭಟ್ಟನಿಗೆ ದತ್ತಿಯಾಗಿ ಕೊಟ್ಟರೆಂದು ಪೆರ್ದೂರಿನ ಒಂದು ಶಾಸನ ತಿಳಿಸುತ್ತದೆ. ಬುಕ್ಕರಾಯನ ಆಳ್ವಿಕೆಗೆ ಸಂಬಂಧಪಟ್ಟ ಈ ಶಾಸನದ ಕಾಲ ಕ್ರಿ.ಶ.೧೪೦೬. ಇದಲ್ಲದೆ ಮೇಲುಕೋಟೆಯ–ಶ್ರೀ ವೈಷ್ಣವಮಠ, ಉಡುಪಿಯ ಅಷ್ಟಮಠ, ಸ್ವಾದಿಯ ವಾದಿರಾಜ ಮಠ, ಮುಳುಬಾಗಿಲು ಶ್ರೀ ಪಾದರಾಯರ ಮಠದಲ್ಲಿ ಅನೇಕ ಹಸ್ತಪ್ರತಿಗಳ ಸಂಗ್ರಹವಿದೆ. ಇವೆಲ್ಲ ಸಾಮಾನ್ಯವಾಗಿ ಸಂಸ್ಕೃತ ಹಸ್ತಪ್ರತಿಗಳು. ಇವುಗಳನ್ನು ಬಿಟ್ಟರೆ ಬಳ್ಳಾರಿ, ಲಿಂಗಸೂರು, ಮಾನ್ವಿ, ರಾಯಚೂರುಗಳಲ್ಲಿ ಹರಿದಾಸರ ಕೀರ್ತನ ಸಾಹಿತ್ಯ ಸಿಗುವುದು ಸರ್ವವಿದಿತವಾಗಿದೆ.

ಹಾಗೆಯೇ ನಾಡಿನ ಯಾವುದೇ ವೈದಿಕ ಮಠಗಳಿಗೆ ಹೋದರೆ ಅಲ್ಲಿ ನಮಗೆ ಅಧಿಕವಾಗಿ ಸಂಸ್ಕೃತ ಹಸ್ತಪ್ರತಿಗಳು ಸಿಗುತ್ತವೆ. ಉಡುಪಿಯ ಅಷ್ಟಮಠಗಳು, ನಂಜನಗೂಡು ರಾಘವೇಂದ್ರಸ್ವಾಮಿಮಠ, ಸೋದೆಮಠ, ಸೋಸಲೆಮಠ, ಸಿಂದಗಿಯ ಶ್ರೀ ಭೀಮಾಶಂಕರ ಮಠ, ಕೂಡಲಿ ಶೃಂಗೇರಿ ಮಹಾಸಂಸ್ಥಾನಮಠ, "ಶ್ರೀ ಶೃಂಗೇರಿಯ ಶ್ರೀ ಶಂಕರಾಚಾರ್ಯ ಶಾರದಾಪೀಠ" ಮೊದಲಾದೆಡೆಗಳಲ್ಲಿ ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆಗೊಂಡದ್ದನ್ನು ಕಾಣಬಹುದು. ಹಾಗೆಯೇ ಮಠದಲ್ಲಿ ಹೆಚ್ಚಾಗಿ ಕಡತಗಳು ಇರುವುದನ್ನು ಕಾಣಬಹುದು. ಅಂದು ಕೇವಲ ಲೆಕ್ಕವನ್ನಷ್ಟೆ ಬರೆಯುವುದಕ್ಕೆ ಉಪಯೋಗಿಸುವುದರ ಜೊತೆಗೆ ರಾಜನ ಕೆಲವೊಂದು ದಿಗ್ವಿಜಯಗಳನ್ನು ಕಡತದಲ್ಲಿ ದಾಖಲಿಸುವ ವಿಷಯವು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಬೆಳಕಿಗೆ ಬಂದಿದೆ. ಜೊತೆಗೆ ನಾಡಿನ ವೈದಿಕ ಮಠಗಳಲ್ಲಿ ಸಂಸ್ಕೃತ ಸಾಹಿತ್ಯದ ವೇದ, ವ್ಯಾಕರಣ, ತರ್ಕ, ಮೀಮಾಂಸೆ, ಪುರಾಣ, ಆಗಮ, ಸ್ಮೃತಿ, ಆಯುರ್ವೇದ, ಯೋಗ, ಜೋತಿಷ್ಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳಿವೆ. ಆದರೆ ಅವುಗಳನ್ನು ವ್ಯವಸ್ಥಿತವಾಗಿ ಸಂರಕ್ಷಿಸುವುದಾಗಲಿ, ಸೂಚಿಗಳನ್ನು ತಯಾರಿಸುವುದಾಗಲಿ ಈವರೆಗೂ ಪರಿಣಾಮಕಾರಿಯಾಗಿ ಕೈಗೊಂಡಿಲ್ಲ. ಹೀಗಾಗಿ ವೈದಿಕ ಮಠಗಳಲ್ಲಿರುವ ಹಸ್ತಪ್ರತಿಗಳ ಸೂಚಿಯನ್ನು ಪ್ರಕಟಿಸುವವರೆಗೂ ಅವುಗಳ ಮಹತ್ವ ಎಷ್ಟೆಂದು ತಿಳಿಯುವುದಿಲ್ಲ.

೩.೩.೪. ವೈಯಕ್ತಿಕ ಹಸ್ತಪ್ರತಿ ಸಂಗ್ರಹಕಾರರು

ಆಧುನಿಕ ತಂತ್ರಜ್ಞಾನಗಳ ಆವಿಷ್ಕಾರ, ಔದ್ಯಮೀಕರಣ, ಗ್ರಾಮೀಣಾಭಿವೃದ್ಧಿ ನಗರೀಕರಣ ಮತ್ತು ನೈಸರ್ಗಿಕ ವಿಕೋಪದಿಂದಾಗಿ ಹಲವು ಜ್ಞಾನದ ಪರಿಕರಗಳಲ್ಲಿ ಒಂದಾಗಿರುವ ಹಸ್ತಪ್ರತಿಗಳು

ದಿನದಿಂದ ದಿನಕ್ಕೆ ನಶಿಸಿಹೋಗುತ್ತಿವೆ. ಅನಿವಾರ್ಯ ಕಾರಣದಿಂದ ಜ್ಞಾನಪೂರ್ವಕವಾದ ಹಲವು ಅಕರಗಳನ್ನು ಸಂಗ್ರಹಿಸುವ ಪ್ರವೃತ್ತಿ ನಮ್ಮಲ್ಲಿ ಬೆಳೆಸಿಕೊಳ್ಳುವ ಅನಿವಾರ್ಯತೆ ಇದೆ. ಯಾಕೆಂದರೆ ಹಸ್ತಪ್ರತಿಗಳ ಅಕರಗಳಲ್ಲಿ ಸಾಹಿತ್ಯ ಮಾತ್ರ ಅಡಗಿರುವುದಿಲ್ಲ. ಅದರಲ್ಲಿ ಸಮಾಜದ ಹತ್ತು ಹಲವು ಸಂಗತಿಗಳು, ಶಾಸ್ತ್ರ, ಭಿನ್ನಧಾರ್ಮಿಕ ಪರಿಸರದ ಅಧ್ಯಯನ, ಜಾನಪದದ ಅಧ್ಯಯನ, ಸಾಂಸ್ಕೃತಿಕ, ಸಂಪ್ರದಾಯ ಹೀಗೆ ಹತ್ತು ಹಲವು ಜ್ಞಾನದ ಸಂಗತಿಗಳನ್ನು ಒಳಗೊಂಡಿರುತ್ತವೆ. ಈ ಹಸ್ತಪ್ರತಿಗಳು ಬಹುಮುಖಿ ಅಧ್ಯಯನವಾಗಿರುವುದರಿಂದ ಹಲವು ವ್ಯಕ್ತಿಗಳು ಅದರಲ್ಲಿರುವ ವಿಷಯ ತಿಳಿಯಲಿ, ಇಲ್ಲವೇ ತಿಳಿಯದಿರಲಿ ಅವುಗಳನ್ನು ಸಂಗ್ರಹಿಸುವುದರಿಂದ ಪುಣ್ಯ ಪ್ರಾಪ್ತಿಯಾಗುತ್ತದೆಯೆಂಬ ಕಲ್ಪನೆಯಿಂದ ಹಲವು ಹಸ್ತಪ್ರತಿಗಳನ್ನು ಸಂಗ್ರಹಿಸುತ್ತಾ ಬಂದಿರುತ್ತಾರೆ. ಅಂತಹವರ ಸಾಲಿನಲ್ಲಿ ನಮ್ಮ ವೈಯಕ್ತಿಕ ಸಂಗ್ರಹಕಾರರು ಸೇರುತ್ತಾರೆ.

ಕಾಲ ಸರಿದಂತೆ ಅವುಗಳಲ್ಲಿರುವ ವಿಷಯದ ಮಹತ್ವ ಅರಿತು ಇನ್ನು ಹೆಚ್ಚಿನ ರೀತಿಯಲ್ಲಿ ಹಸ್ತಪ್ರತಿಗಳನ್ನು ಸಂಗ್ರಹಿಸುತ್ತಾ ಬಂದಿರುವುದು ಕಾಣುತ್ತೇವೆ. ಇದಕ್ಕೆ ಪೂರಕವೆಂಬಂತೆ ಪ್ರಾಚೀನ ಕಾಲದಲ್ಲಿ ವೈಯಕ್ತಿಕ ಸಂಗ್ರಹ ಯಾವ ರೀತಿಯಲ್ಲಿ ಬೆಳೆದುಬಂದಿದೆ ಎಂಬ ವಿಚಾರವನ್ನು ಈ ರೀತಿಯಾಗಿ ಗಮನಿಸಬಹುದು. ಮಹಾರಾಜರು, ರಾಣಿವರ್ಗ, ನಾಡಪ್ರಭುಗಳು, ರಾಜವಂಶಸ್ಥರು, ಅರಮನೆಯ ಪರಿವಾರದವರಾದ ಹೆಗ್ಗಡೆ, ಟಂಕಸಾಲೆ ಅಧಿಕಾರಿಗಳು, ಸುಭೇದಾರರು, ರಾಯಸದವರು, ಸೇರುವೆಗಾರರು, ಗುರಿಕಾರರು, ಸುಂಕದವರು, ಬೊಕ್ಕಸದವರು, ಗೌಡರು, ಚೌದ್ರಿಗಳು, ನಾಯಕವರ್ಗದವರು, ಪಾರುಪತ್ಯಗಾರರು, ಶಾನುಭೋಗರು ಇವರೆಲ್ಲಾ ಅಧಿಕಾರದ ಭಿನ್ನ ಭಿನ್ನ ಹುದ್ದೆಯಲ್ಲಿದ್ದುಕೊಂಡು ಹಸ್ತಪ್ರತಿಗಳನ್ನು ಸಂಗ್ರಹ ಮಾಡುತ್ತ, ಪೋಷಿಸುತ್ತ, ಅವುಗಳ ಪ್ರಸರಣ ಮಾಡುತ್ತ ಬಂದಿದ್ದಾರೆ. ಇವರಲ್ಲಿ ಪ್ರಮುಖವಾಗಿ ಮಹಮದ್ ಗವಾನನು ಜಗತ್ತಿನಲ್ಲೇ ಸು. ೩೦೦೦ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದನು ಎಂದು ಚರಿತ್ರೆಯಿಂದ ತಿಳಿದುಬರುತ್ತದೆ.

ಬಸದಿ, ಮಠಗಳ ಒಡೆಯರು, ಧರ್ಮಾಧಿಕಾರಿಗಳು, ಸ್ವಾಮಿವರ್ಗ, ಶಿಷ್ಯವರ್ಗ, ಶೂನ್ಯ ಸಿಂಹಾಸನಸ್ಥರು, ಷಟ್‌ಸ್ಥಲ ಬ್ರಹ್ಮಿಗಳು, ವಿರಕ್ತರು, ಚರಮೂರ್ತಿಗಳು, ಇಂದ್ರವರ್ಗ(ಪೂಜಾರಿಗಳು) ಉಪಾಧ್ಯಾಯರು, ಪಂಡಿತರು, ಅರ್ಚಕರು, ಮಠಪತಿಗಳು, ಪುರಾಣಿಕರು ಮೊದಲಾದವರಲ್ಲದೆ ಓದಿಸುವವರು, ಬರೆಯುವವರು, ವಸ್ತ್ರದವರು, ಜವಳಿಯವರು, ವಾಲೆಯವರು, ಚಿಪ್ಪಲಿಗರು, ಬಳೆಶೆಟ್ಟಿಯರು, ದೇವಾಂಗದವರು, ಗಾಣಿಗರು, ಗೌಳಿಗರು, ಅಕ್ಕಸಾಲೆ, ಪಸಾರದವರು, ತುಪ್ಪದವರು, ಭೋಗಾರರು, ಸಂಬ್ರಾಣಿಯವರು ಹಾಗೂ ಅನೇಕ ಕಾಯಕಗಳನ್ನಾಶ್ರಯಿಸಿದ ವ್ಯಕ್ತಿಗಳು ಸಂಗ್ರಹಕಾರರಾಗಿ, ಪೋಷಕರಾಗಿ ಕನ್ನಡ ಹಸ್ತಪ್ರತಿಗಳ ಬಾಹುಳ್ಯವನ್ನು ಹೆಚ್ಚಿಸಿದ್ದಾರೆ.

ನಾಡಿನ ಧಾರ್ಮಿಕ ಚರಿತ್ರೆಯಲ್ಲಿ ಮತೀಯವಾದ ವಿವಾದಗಳು ನಡೆದ ಸಂದರ್ಭಗಳಲ್ಲಿಯೂ ಗ್ರಂಥಭಂಡಾರಗಳಲ್ಲಿ ಹಸ್ತಪ್ರತಿಗಳ ಸಮೃದ್ಧಿಯು ಬೆಳಕಿಗೆ ಬಂದ ನಿದರ್ಶನಗಳಿವೆ. ಸಮಯ ಶ್ರೇಷ್ಠತೆಯನ್ನು ಪ್ರತಿಷ್ಠಾಪಿಸಬೇಕಾದಾಗ ಸಾಮಾನ್ಯವಾಗಿ ಓಲಗಗಳಲ್ಲಿ ಅರಸನ ಸಮ್ಮುಖದಲ್ಲಿ ವಾದ–

ವಿವಾದಗಳು ನಡೆಯುತ್ತಿದ್ದವು. ಆಗ ವಾದಿ-ಪ್ರತಿವಾದಿ ಪಂಡಿತರು ತಮ್ಮದೇ ಪರಮದೈವ, ತಮ್ಮ ಧರ್ಮಗ್ರಂಥಗಳೇ ಸರ್ವೋತ್ಕೃಷ್ಟ ಎಂಬುದನ್ನು ತುಂಬಿದ ಸಭೆಯಲ್ಲಿ ಸಾದರಪಡಿಸಬೇಕಾದಾಗ ಅವರು ತಮ್ಮ ವಾದವನ್ನು ಸ್ಥಿರೀಕರಿಸಲು ಗ್ರಂಥಾಧಾರಗಳನ್ನು ಕೊಡಬೇಕಾದುದು ಅನಿವಾರ್ಯವಾಗಿತ್ತು. ಅಂಥ ಸಂದರ್ಭಗಳಲ್ಲಿ ತಮ್ಮ ಅಮೂಲ್ಯವಾದ ಹಸ್ತಪ್ರತಿ ಸಂಗ್ರಹವನ್ನೇ ಇರಿಸಿಕೊಂಡು ತೆರಳುತ್ತಿದ್ದರೆಂಬ ನಿದರ್ಶನಗಳಿವೆ. ಪದ್ಮಣಾಂಕನ ಪದ್ಮರಾಜ ಪುರಾಣದಲ್ಲಿ ಅಂಥ ನಿದರ್ಶನವೊಂದು ಉಲ್ಲೇಖಗೊಂಡಿದೆ. "ಕೆರೆಯ ಪದ್ಮರಸನನ್ನು ವಾದದಲ್ಲಿ ಗೆಲ್ಲುವ ಹಮ್ಮಿನಿಂದ ತ್ರಿಭುವನ ತಾತಾನೆಂಬ ಆಂಧ್ರದ ವೈಷ್ಣವನು ಬರುತ್ತಾನೆ. ಅವನು ಮಹಾದ್ವಾರಕ್ಕೆ ತನ್ನದೆ ಪರಮ ದೈವ ಎಂದು ಬರೆದ ಓಲೆಯನ್ನು ಕಟ್ಟಿಸುತ್ತಾನೆ. ಅಲ್ಲದೇ ವಾದಕ್ಕಾಗಿ ಆಸ್ಥಾನಕ್ಕೆ ಬರುವಾಗ ಆನೆಯ ಮೇಲೆ ತನ್ನ ಸಂಗ್ರಹದ ಗ್ರಂಥರಾಶಿಯನ್ನು ಹೇರಿಸಿಕೊಂಡು ಬಂದಿರುತ್ತಾನೆ."[೨] ಆ ಮೇಲೆ ಅರಸನ ಸಮ್ಮುಖದಲ್ಲಿ ವಾದ-ಪ್ರತಿವಾದಗಳು ನಡೆದಾಗ ಇಬ್ಬರೂ ಗ್ರಂಥಾಧಾರವಿಡಿದು ವಾದಿಸುವ ರೀತಿಯು ಗಮನಿಸಿದಾಗ ಆಯಾ ವಿದ್ವಾಂಸರ ವೈಯಕ್ತಿಕ ಹಸ್ತಪ್ರತಿ ಸಂಗ್ರಹದ ಮಹತ್ವ ನಮಗೆ ಗೋಚರಿಸುತ್ತದೆ.

ವೈಯಕ್ತಿಕ ಹಸ್ತಪ್ರತಿ ಭಂಡಾರಕ್ಕೆ ಸಂಬಂಧಿಸಿದಂತೆ ಕನ್ನಡನಾಡಿನ ಅನೇಕ ಅರಸರ, ಸಂಕಲನಕಾರರ, ಸಂಪಾದನಕಾರರ, ವೈಯಾಕರಣಿಗಳ ಹಾಗೂ ಶಾಸ್ತ್ರ ಸಿದ್ಧಾಂತಕಾರರ ಸಂಗ್ರಹಗಳು ಅತ್ಯಧಿಕವಾಗಿ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಕವಿರಾಜಮಾರ್ಗಕ್ಕೆ ಪ್ರೇರಕ ಶಕ್ತಿಯಾಗಿ ನಿಂತ ನೃಪತುಂಗ, ಅಭಿಷಿತಾರ್ಥ ಚಿಂತಾಮಣಿ ಕರ್ತೃ ೩ನೆಯ ಸೋಮೇಶ್ವರ, ಸೂಕ್ತಿ ಸುಧಾರ್ಣವಕಾರನಾದ ಮಲ್ಲಿಕಾರ್ಜುನ, ಶಬ್ದಮಣಿ ದರ್ಪಣಕಾರನಾದ ಕೇಶಿರಾಜ, ಶೂನ್ಯ ಸಂಪಾದನಕಾರನಾದ ಶಿವಗಣ ಪ್ರಸಾದಿ ಮಹಾದೇವಯ್ಯ, ಕೆಂಚವೀರಣ್ಣೊಡೆಯ, ಗುಮ್ಮಳಾಪುರ ಸಿದ್ಧಲಿಂಗದೇವರು, ಗೂಳೂರು ಸಿದ್ಧವೀರಣ್ಣೊಡೆಯರು, ವಿವೇಕ ಚಿಂತಾಮಣಿಯ ಕರ್ತೃವಾದ ನಿಜಗುಣರು ಇವರೆಲ್ಲರ ವೈಯಕ್ತಿಕ ಸಂಗ್ರಹ ತುಂಬಾ ಶ್ರೀಮಂತಿಕೆಯಿಂದ ವ್ಯವಸ್ಥಿತವಾಗಿ ಕೂಡಿರುವುದನ್ನು ಕಾಣುತ್ತೇವೆ. ಅಂದಿನ ಅರಸರು, ಮಂತ್ರಿಗಳು ಆಸ್ಥಾನದಲ್ಲಿ ಕವಿಗಳಿಗೆ ಆಶ್ರಯ ನೀಡುವುದರ ಜೊತೆಗೆ ವೈಯಕ್ತಿಕ ಆಸಕ್ತಿಯಿಂದ ವಿವಿಧ ಬಗೆಯ ಹಸ್ತಪ್ರತಿಗಳನ್ನು ಸಂಗ್ರಹಿಸುವ ಹಾಗೂ ಗ್ರಂಥಭಂಡಾರಗಳನ್ನು ತೆರೆದಿದ್ದರು. ಇದಕ್ಕೆ ಸ್ಪಷ್ಟ ನಿದರ್ಶನವೆಂಬಂತೆ ಆಕಾಶ ಭೈರವ ಕಲ್ಪ(೧೫ನೆಯ ಶತಮಾನ) ಹೆಸರಿನ ಹಸ್ತಪ್ರತಿಯ ೩೦ನೆಯ ಪಟಲದಲ್ಲಿ ಅರಮನೆಯಲ್ಲಿರಬೇಕಾದ ಹಸ್ತಪ್ರತಿ ಭಂಡಾರದ ನೆಲೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತದೆ.

ಮೇಲಿನ ಪ್ರಾಚೀನರ ಎಲ್ಲಾ ಹೇಳಿಕೆ, ಕೇಳಿಕೆಗಳನ್ನು ಗಮನಿಸಿದಾಗ ಅವರಲ್ಲಿ ಜ್ಞಾನದ ಹಸಿವು ಯಾವ ರೀತಿ ಇತ್ತು, ಇರುವ ಹಸ್ತಪ್ರತಿಗಳು ಅವರ ಜ್ಞಾನದ ಹಸಿವನ್ನು ಯಾವ ರೀತಿ ನೀಗಿಸುತ್ತಿದ್ದವು ಎಂಬ ವಿಚಾರ ಮೇಲಿನ ಅಂಶಗಳಿಗೆ ಪುಷ್ಟಿ ನೀಡುತ್ತದೆ. ಹಾಗೆಯೇ ಹಸ್ತಪ್ರತಿಗಳನ್ನು ಖಾಸಗಿ ಆಸ್ತಿಗಳೆಂದು, ಅಮೂಲ್ಯ ನಿಧಿಗಳೆಂದು ಭಾವಿಸಿದ್ದರು. ಮೂಢಬುದ್ಧಿಯಿಂದ ನಾಡಿನ ಸಾಂಸ್ಕೃತಿಕ ಸಂಪತ್ತನ್ನು ಹಾಳು ಮಾಡುತ್ತಿದ್ದ ಜನರ ಕೈಯಿಂದ ಬಿಡಿಸಿ ಅವುಗಳನ್ನು ಸಂರಕ್ಷಿಸಿ,

ಸಂಗ್ರಹಿಸಿ, ಅವುಗಳ ವಿಚಾರಗಳ ಮೇಲೆ ಬೆಳಕು ಚೆಲ್ಲಿದ ಹಾಗೂ ವೈಯಕ್ತಿಕ ದುರಾಸೆಗಳಿಂದ ದೂರ ಸರಿದು ಸಮಷ್ಟಿ ಪ್ರಜ್ಞೆಯಿಂದ ಅವುಗಳನ್ನು ಕಾಪಾಡಿದ ಹಲವು ಮಹನೀಯರುಗಳಲ್ಲಿ ಬಹುಮುಖ್ಯರಾದವರು. ಫ.ಗು.ಹಳಕಟ್ಟಿ, ಗೊರೆಬಾಳು ಹನುಮಂತರಾಯರು, ಬಿ. ಶಿವಮೂರ್ತಿಶಾಸ್ತ್ರಿಗಳು, ಶಿ.ಶಿ. ಬಸವನಾಳರು, ವಿದ್ವಾನ್ ವೆಂಕಟಾಚಾರ್ಯ, ಸಿರಿಯಾಕೊಪ್ಪದ ಮಲ್ಲಿಕಾರ್ಜುನ, ಉತ್ತಂಗಿ ಚನ್ನಬಸಪ್ಪ, ಮೈಸೂರು ಭಾಗದಲ್ಲಿ ಎ. ರಾಮಾನುಜಯ್ಯಂಗಾರ್, ಎಸ್.ಜಿ. ನರಸಿಂಹಾಚಾರ್ಯ, ಆರ್. ನರಸಿಂಹಾಚಾರ್ಯ, ಪಿ.ಆರ್. ಕರಿಬಸವಶಾಸ್ತ್ರಿಗಳು, ಉಮಾಪತಿಶಾಸ್ತ್ರಿಗಳು. ಹಾಗೆಯೇ ಮೂಡುಬಿದಿರೆಯ ನೇಮಿರಾಜಶೆಟ್ಟಿ, ದೇವರಾಜಶೆಟ್ಟಿ, ಪದ್ಮನಾಭಶಾಸ್ತ್ರಿ, ಶಾಂತಿರಾಜ, ಇಂದ್ರ ಹೊಸ ಬಸದಿ, ಬೈಕೋತಿಕಾರಿ ಬಸದಿ, ಅನರಾಜು ಇಂದ್ರ, ಪಡುಬಸದಿ, ಚೌಟಾರ ಧರ್ಮ ಗುರುಗಳು ಇತ್ಯಾದಿ ಹಲವು ಮಹನೀಯರು ವಿಭಿನ್ನ ವಿಷಯಗಳುಳ್ಳ ಗಣನೀಯ ಪ್ರಮಾಣದ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದರು. ಇವರಲ್ಲಿ ಕೆಲವರು ಸ್ವ–ಅಧ್ಯಯನಕ್ಕೆ ತಮ್ಮಲ್ಲಿಟ್ಟುಕೊಂಡಿದ್ದರೆ, ಕೆಲವರು ಬೇರೆ ಬೇರೆ ವಿಶ್ವವಿದ್ಯಾಲಯಕ್ಕೆ ಮಠಗಳಿಗೆ, ಸಂಸ್ಥೆಗಳಿಗೆ ಕೊಡುಗೆ ರೂಪದಲ್ಲಿ ನೀಡಿದ್ದಾರೆ. ಆದರೂ ಸಹ ಪ್ರಸ್ತುತ ಸಂದರ್ಭದಲ್ಲಿ ನಾಡಿನ ವಿವಿಧ ಪ್ರದೇಶದಲ್ಲಿನ ವ್ಯಕ್ತಿಗಳಲ್ಲಿ ಹಸ್ತಪ್ರತಿಗಳಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಿದೆ. ಹಾಗೆಯೇ 'ಸರ್ ಹಾನ್ಸ್ ಸ್ಲೋಯನ್' ಎಂಬುವರ ವೈಯಕ್ತಿಕ ಸಂಗ್ರಹವೇ ದೊಡ್ಡ ವಸ್ತುಸಂಗ್ರಹಾಲಯವಾಗಿ ರೂಪುಗೊಂಡಿದೆ. ಇವರು ಸುಮಾರು ಆರೂವರೆ ಕೋಟಿಯಷ್ಟು ವಿವಿಧ ವಸ್ತುಗಳು, ಹತ್ತುಲಕ್ಷ ಪುಸ್ತಕಗಳು ಮೂರೂವರೆ ಲಕ್ಷ ಮೂಲಚಿತ್ರ ಕೃತಿಗಳು, ಎಪ್ಪತ್ತೊಂದು ಸಾವಿರ ಭೂಪಟಗಳು, ಹತ್ತು ಸಾವಿರ ಹಸ್ತಪ್ರತಿಗಳು ಸುರಕ್ಷಿತವಾಗಿ ಸಂಗ್ರಹಿಸಲಾಗಿತ್ತು ಎಂದು ತಿಳಿದುಬಂದಿದೆ. ಹೀಗೆ ವೈಯಕ್ತಿಕ ಸಂಗ್ರಹಗಳಿಂದ ೩೩ ಹಸ್ತಪ್ರತಿ ಗ್ರಂಥಾಲಯಗಳಾಗಿ ಬೆಳೆದಿರುವುದನ್ನು ಕಾಣಬಹುದಾಗಿದೆ.

ಪ್ರಾಚೀನ ಕಾಲದಲ್ಲಿ ಅರಸರು ಮಂತ್ರಿಗಳ ಇನ್ನಿತರ ಮಹನೀಯರ ವೈಯಕ್ತಿಕ ಸಂಗ್ರಹದಂತೆ ನಾಡಿನ ಬೇರೆ ಬೇರೆ ಭಾಗದಲ್ಲಿ ಆಸಕ್ತಿಯಿಂದ, ಅಧ್ಯಯನದ ದೃಷ್ಟಿಯಿಂದ ತಮ್ಮಲ್ಲಿ ಹಸ್ತಪ್ರತಿಗಳನ್ನು ವೈಯಕ್ತಿಕವಾಗಿ ಸಂಗ್ರಹಿಸಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಿದೆ. ಅವರಲ್ಲಿ ಇರುವ ಹಸ್ತಪ್ರತಿಗಳು ಬೇರೆ ಬೇರೆ ವಿಷಯಗಳನ್ನು ಹೊಂದಿರುವ ಹಸ್ತಪ್ರತಿಗಳಾಗಿವೆ. ಆದರೂ ಕೆಲವು ಹಸ್ತಪ್ರತಿಗಳು ತುಂಬಾ ತ್ರುಟಿತಗೊಂಡಿವೆ.

*** ಕರಾವಳಿ ಕರ್ನಾಟಕದ ವೈಯಕ್ತಿಕ ಹಸ್ತಪ್ರತಿ ನೆಲೆಗಳು**

*** ಪ್ರಾದೇಶಿಕ ವೈಶಿಷ್ಟ್ಯಗಳು**

ಕನ್ನಡನಾಡಿನ ಹಸ್ತಪ್ರತಿ ಇತಿಹಾಸದಲ್ಲಿ ಕರಾವಳಿ ಜಿಲ್ಲೆಯ ಹಸ್ತಪ್ರತಿಗಳಿಗೆ ಒಂದು ವಿಶಿಷ್ಟವಾದ ವಾತಾವರಣವಿದೆ. ಇದು ದಕ್ಷಿಣ ಭಾರತದ ಸಾಂಸ್ಕೃತಿಕ ಬದುಕಿನ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿದೆ. ಇಲ್ಲಿನ ಭೌಗೋಳಿಕ ಸಾಮ್ಯತೆ ಈ ಪ್ರದೇಶಕ್ಕಿದ್ದರೂ ಇಲ್ಲಿನ ಜನರ ಭಾಷೆಗಳಲ್ಲಿ ವಿವಿಧತೆ ಇದೆ. ಅದರಿಂದಾಗಿ ಈ ವಿಭಿನ್ನ ಸಂಸ್ಕೃತಿಗಳು ಬೆಳೆದುಬಂದಿವೆ. ಕನ್ನಡ ತುಳು, ಕೊಂಕಣಿ ಮತ್ತು

ಮಲಯಾಳ ಇಲ್ಲಿ ಪ್ರಧಾನ ಭಾಷೆಗಳಾಗಿವೆ. ಈ ಭಾಷೆಗಳಲ್ಲಿ ತುಳು ಭಾಷೆ ಮತ್ತು ಇವರು ನೆಲೆಸಿದ ಪ್ರದೇಶ ತುಳುನಾಡು(ತಾಳವ) ಎಂದು ಪ್ರಸಿದ್ಧವಾಗಿದೆ.

ಕರಾವಳಿ ಕನ್ನಡ ಜಿಲ್ಲೆಯು ಎತ್ತರವಾದ ಬೆಟ್ಟ, ಗುಡ್ಡ, ನದಿ, ತೊರೆ, ಅಡಿಕೆ, ತೆಂಗಿನ ತೋಟಗಳಿಂದ ಸುಂದರವಾಗಿ ಕಂಗೊಳಿಸುವ ಪ್ರದೇಶವಾಗಿದೆ. ಇಲ್ಲಿಯ ಜನರು ಶ್ರಮಜೀವಿಗಳು ಈ ತುಳುನಾಡಿನಲ್ಲಿ ವೈದಿಕ, ಜೈನ, ಶೈವ, ವೈಷ್ಣವ ಇತ್ಯಾದಿ ಸರ್ವಧರ್ಮೀಯರಿದ್ದು ಆಧ್ಯಾತ್ಮಿಕ, ಲೌಕಿಕ ವೈಚಾರಿಕ, ಛಂದಸ್ಸು, ಜಾನಪದ, ತೋಟಗಾರಿಕೆ, ಧರ್ಮಗಳಿಗೆ ಸಂಬಂಧಿಸಿದ ಸಂಸ್ಕೃತಿಗಳು ವಸ್ತು, ಭಾಷೆ, ಬರವಣಿಗೆಯ ವಿನ್ಯಾಸ, ಸೌಂದರ್ಯಪ್ರಜ್ಞೆ ಮೊದಲಾದ ಆಕರಗಳನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ಈ ತುಳುನಾಡಿನ ಪರಿಸರ, ಜನರ ಆಸಕ್ತಿ, ಜೀವನವಿಧಾನಗಳು ಸಾಕಷ್ಟು ಪ್ರಭಾವ ಬೀರಿರುವುದನ್ನು ಗ್ರಂಥಗಳ ವೀಕ್ಷಣೆಯಿಂದ ತಿಳಿದುಬಂದಿದೆ. ವೈದಿಕ ಮತ್ತು ಜೈನರ ಪರಂಪರೆಯ ಮನೆ, ಮಠ, ದೇವಾಲಯ, ಬಸದಿಗಳನ್ನು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದು. ಇಲ್ಲಿನ ಬಹುತೇಕ ವಿದ್ವಾಂಸರು ತುಳುನಾಡಿನ ಸಂಸ್ಕೃತಿಯಲ್ಲಿ ಹುಟ್ಟಿದ ಪದಗಳನ್ನು ಉಪಯೋಗಿಸಿಕೊಂಡು ಹೆಚ್ಚಿನ ಕಾವ್ಯಗಳನ್ನು ರಚಿಸಿದ್ದಾರೆ.

ತುಳುನಾಡಿನ ಉದ್ದಗಲಕ್ಕೂ ತುಳುಲಿಪಿಯ ಸಾವಿರಾರು ಗ್ರಂಥಗಳು ಲಭ್ಯವಾಗಿವೆ. ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನವೊಂದರಲ್ಲಿ ಸುಮಾರು ೧೫೦೦ ತಾಡವೋಲೆ ಹಾಗೂ ಕಾಗದದ ಹಸ್ತಪ್ರತಿಗಳು ಇವೆ. ವಿಶೇಷವಾಗಿ ವೇದ ಉಪನಿಷತ್, ತಂತ್ರಾಗಮ, ಜ್ಯೋತಿಷ್ಯ, ಸ್ಮೃತಿ, ಶಾಂತಿ, ಮಂತ್ರ ಇತಿಹಾಸ, ಪುರಾಣ, ಕಾವ್ಯ ವೈದ್ಯ ಮೊದಲಾದ ಸಂಸ್ಕೃತ ಭಾಷೆಯ ಶಾಸ್ತ್ರಗ್ರಂಥಗಳು ಒಳಗೊಂಡಿವೆ. ಇವುಗಳಲ್ಲಿ ಆಚಾರ್ಯ ಮಧ್ವರ ಗ್ರಂಥಗಳನ್ನು ಅವರ ಮೊದಲ ಶಿಷ್ಯ ಶ್ರೀ ಹೃಷಿಕೇಶ ತೀರ್ಥರು ಸ್ವಹಸ್ತಾಕ್ಷರದಿಂದ ಬರೆದ 'ಸರ್ವಮೂಲ' ಗ್ರಂಥವಾಗಿದೆ. ಇದರ ಕಾಲ ಸುಮಾರು ಕ್ರಿ.ಶ.೧೩ನೇ ಶತಮಾನವಾಗಿದ್ದು ಉಡುಪಿಯ ಅಷ್ಟ ಮಠಗಳಲ್ಲೊಂದಾದ ಪಾಲಿಮಾರು ಮಠದಲ್ಲಿ ಸಂರಕ್ಷಿಸಲಾಗಿದೆ. ತುಳು ಹಸ್ತಪ್ರತಿಗಳಲ್ಲಿ ಕೆಲವೊಂದು ಲಿಪಿ ತುಳುವಾಗಿದ್ದು ವ್ಯಾಖ್ಯಾನ ಭಾಷೆ ಕನ್ನಡದಲ್ಲಿದೆ. ತಾಳವ ದೇಶದ ಗ್ರಾಮಪದ್ಧತಿ, ಅಮರಕೋಶ ಟೀಕಾ, ಕೊಕ್ಕೋಕಶಾಸ್ತ್ರ, ಶಾರದಾತಿಲಕ, ವಿದ್ಯಾಮಾಧವೀಯ ಭಜನೆಗಳು, ದಾಸರ ಕೀರ್ತನೆಗಳು, ಯಕ್ಷಗಾನ ಇತ್ಯಾದಿ ವಿಷಯಗಳುಳ್ಳ ಗ್ರಂಥಗಳು ಇವೆ.

ಕರಾವಳಿ ಭಾಗದಲ್ಲಿ ಹೆಚ್ಚಾಗಿ ತಂಪು ವಾತಾವರಣವಿದೆ. ಇಲ್ಲಿ ಕೊಂಕಣಿ ಭಾಷೆ ಹೆಚ್ಚು ಬಳಕೆಯಾಗುವುದರ ಜೊತೆಗೆ ಇಲ್ಲಿ ಯಕ್ಷಗಾನಕ್ಕೆ ಸಂಬಂಧಿಸಿದ ಹಸ್ತಪ್ರತಿಗಳು ಹೆಚ್ಚಾಗಿ ಕಂಡುಬರುತ್ತವೆ. ಇಲ್ಲಿ ತಾಳೆಪ್ರತಿಗಳು ಪ್ರಥಮ ಸ್ಥಾನ ಅಲಂಕರಿಸಿದರೆ, ಕಾಗದದ ಪ್ರತಿಗಳು ಎರಡನೆಯ ಸ್ಥಾನದಲ್ಲಿ ನಿಲ್ಲುತ್ತವೆ. ಕಡತಗಳು ಮೂರನೆಯ ಸ್ಥಾನದಲ್ಲಿವೆ. ಕೋರಿಕಾಗದ ಬಿಳಿಕಾಗದ ಮತ್ತು ನೀಲಿ ಕಾಗದಗಳನ್ನು ಸಹ ಬರವಣಿಗೆಗೆ ಬಳಸಿಕೊಂಡಿದ್ದನ್ನು ಕಾಣಬಹುದು. ಇಂತಹ ಹಲವಾರು ಕೃತಿಗಳನ್ನು ಪ್ರತಿಗಳಲ್ಲಿ ಲಿಪಿ ಮಾಡಿಸುತ್ತ ಜ್ಞಾನಪರಂಪರೆಯನ್ನು ಮುಂದುವರಿಸಿಕೊಂಡು ಸಂಗ್ರಹಿಸುತ್ತ

ಕಾಪಾಡುತ್ತ ಇಂದಿನ ಪೀಳಿಗೆಗೂ ಅವುಗಳ ಜ್ಞಾನ ಸಿಗಲಿ ಎಂಬ ಅವರ ಮುಂದಾಲೋಚನಾ ಕ್ರಮ ಮೆಚ್ಚತಕ್ಕದ್ದಾಗಿದೆ.

*** ಹಸ್ತಪ್ರತಿಗಳ ವೈಶಿಷ್ಟ್ಯ**

ಕರಾವಳಿ ಭಾಗದ ಹಸ್ತಪ್ರತಿಗಳಿಗೆ ಅವುಗಳದೇ ಆದ ಒಂದು ಮಹತ್ವದ ಸ್ಥಾನವಿದೆ. ಸಾಮಾನ್ಯವಾಗಿ ಒಂದು ಪ್ರದೇಶದ ಹಸ್ತಪ್ರತಿಗಳಿಗೂ ಮತ್ತೊಂದು ಪ್ರದೇಶದ ಹಸ್ತಪ್ರತಿಗಳಿಗೂ ಕೆಲವೊಂದು ವ್ಯತ್ಯಾಸಗಳು ಇದ್ದೇ ಇರುತ್ತವೆ. ಕರಾವಳಿ ಪ್ರದೇಶದ ಗ್ರಂಥರಾಶಿಗಳಲ್ಲಿ ಅಲ್ಲಿಯ ಪರಿಸರ, ಜನರ ಆಸಕ್ತಿ, ಜೀವನ ವಿಧಾನಗಳು, ಇತ್ಯಾದಿ ಅಂಶಗಳು ಕಂಡುಬರುತ್ತವೆ. ಕರ್ನಾಟಕದ ಜೈನ, ಶೈವ, ವೈದಿಕ ಪರಂಪರೆಯ ಲೌಕಿಕ, ಆಧ್ಯಾತ್ಮಿಕ, ವೈಚಾರಿಕ, ಸಾಹಿತ್ಯ ಕೃತಿಗಳು ಇಲ್ಲಿಯ ಹಸ್ತಪ್ರತಿಗಳಲ್ಲಿ ದಾಖಲಾಗಿವೆ. ಜೊತೆಗೆ ಕೃಷಿ, ತೋಟಗಾರಿಕೆ, ಶಿಲ್ಪ, ವೈದ್ಯ, ಸಸ್ಯ, ಪ್ರಾಣಿಶಾಸ್ತ್ರ, ರಸಶಾಸ್ತ್ರ, ಪಾಕಶಾಸ್ತ್ರ, ತಂತ್ರ, ಮಂತ್ರ, ಯೋಗ, ಜ್ಯೋತಿಷ್ಯ, ನಿಘಂಟು, ವ್ಯಾಕರಣ, ಛಂದಸ್ಸು ಹೀಗೆ ಹಲವಾರು ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ಈ ಭಾಗದಲ್ಲಿ ಕಂಡುಬರುತ್ತವೆ.

* ಮುಖ್ಯವಾಗಿ ಕರಾವಳಿ ಭಾಗದ ಜನರ ಜೀವನಾಡಿಯಾದ 'ಯಕ್ಷಗಾನ ಕಲೆಗೆ' ಸಂಬಂಧಿಸಿದ ಸಾವಿರಾರು ಯಕ್ಷಗಾನ ಪ್ರಸಂಗಗಳು ಹಸ್ತಪ್ರತಿಗಳಲ್ಲಿ ದೊರೆತಿರುವುದು ಗಮನಿಸಬಹುದು.
* ಈ ಪರಿಸರದ ವೈಶಿಷ್ಟ್ಯವೆನಿಸಿದ ಹಾಗೂ ಗೌಪ್ಯ ಲಿಪಿಯೆಂದು ಗುರುತಿಸಲ್ಪಟ್ಟ ತಿಗಳಾರಿ ಅಥವಾ ತುಳುಭಾಷೆಯ ಕನ್ನಡ ಲಿಪಿಯಲ್ಲಿ ರಚನೆಗೊಂಡ ಸಂಸ್ಕೃತ, ಕನ್ನಡ ಭಾಷೆಗಳ ಆಗಮ, ತಂತ್ರ, ಮಂತ್ರ, ಯೋಗ, ಜ್ಯೋತಿಷ್ಯ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ಈ ಭಾಗದಲ್ಲಿ ಹೇರಳವಾಗಿ ದೊರಕುತ್ತವೆ.
* ಈ ಭಾಗದಲ್ಲಿ ಜೈನ ಮತ್ತು ವೈದಿಕ ಪರಂಪರೆಯ ಮನೆ, ಮಠ ಮಂದಿರಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಕಾರಣ ಈ ಪರಂಪರೆಯ ಹಸ್ತಪ್ರತಿಗಳು ಅಧಿಕ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಜೈನ ಪರಂಪರೆಯ ಗ್ರಂಥಗಳು, ಕನ್ನಡ, ಸಂಸ್ಕೃತ, ಪ್ರಾಕೃತ ಭಾಷೆಗಳಲ್ಲಿದ್ದು ಬರವಣಿಗೆಯಲ್ಲಿ ಹೆಚ್ಚಾಗಿ ಕನ್ನಡ ಲಿಪಿಯನ್ನೇ ಬಳಸಲಾಗಿದೆ. ಆದರೆ ವೈದಿಕ ಪರಂಪರೆಯ ಧಾರ್ಮಿಕ ಗ್ರಂಥಗಳೆಲ್ಲವೂ ಸಂಸ್ಕೃತ ಭಾಷೆಯಲ್ಲಿದ್ದು ತಿಗಳಾರಿ ಅಥವಾ ತುಳು ಲಿಪಿಯಲ್ಲಿ ಬರೆಯಲಾಗಿದೆ.

*** ವೈಯಕ್ತಿಕ ನೆಲೆಗಳು**

೧. ಕುಂದಾಪುರದ ಉಪ್ಪುಂದದ ಕೃಷ್ಣಕಾರಂತರು

ಕನ್ನಡ ಸಂಸ್ಕೃತ ಹಸ್ತಪ್ರತಿಗಳ ಜೊತೆಗೆ ತಿಗಳಾರಿ ಲಿಪಿಯ ಗ್ರಂಥಗಳನ್ನು ವಿಶೇಷವಾಗಿ ಸಂಗ್ರಹಿಸಿದ್ದಾರೆ. ಆ ಲಿಪಿಯನ್ನು ಅವರು ಸರಾಗವಾಗಿ ಓದಿ ಬರೆಯಬಲ್ಲರು. ಇವರು ಪ್ರತಿ ತೆಗೆಯುವ ಹವ್ಯಾಸವನ್ನು ಇಟ್ಟುಕೊಂಡಿದ್ದರು. ಇವರ ಸಂಗ್ರಹದಲ್ಲಿ ವೈದಿಕ, ಪುರಾಣ, ಸ್ಥಳ ಮಹಾತ್ಮ, ಆಯುರ್ವೇದ, ಜ್ಯೋತಿಷ್ಯಕ್ಕೆ ಸಂಬಂಧಿಸಿದ ಅಮೂಲ್ಯ ಗ್ರಂಥಗಳಿವೆ.

೨. ಎನ್.ಕೆ. ಹೆಗಡೆಯವರು

ಇವರ ಬಳಿ ನೂರಕ್ಕೂ ಹೆಚ್ಚು ಗ್ರಂಥಗಳಿವೆ. ಹಸ್ತಪ್ರತಿ ಸಂಗ್ರಹ ಕಾರ್ಯದಲ್ಲಿ ವಿಶೇಷ ಆಸಕ್ತಿಯನ್ನು ಇಟ್ಟುಕೊಂಡಿದ್ದಾರೆ. ಇವರು ಮನೆ ಮನೆಗೆ ತೆರಳಿ ಹಲವು ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಸಂಗ್ರಹಿಸಿದ್ದಾರೆ. ಇವರ ವೈಯಕ್ತಿಕ ಸಂಗ್ರಹದಲ್ಲಿ ಯಕ್ಷಗಾನ ಕಾವ್ಯ, ಆಯುರ್ವೇದ ಪುರಾಣ, ವ್ಯಾಖ್ಯಾನ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳಿವೆ.

ಇವರಲ್ಲದೆ ಮುಂಡಾಜೆಯ ನಾರಾಯಣ, ಬಾಲಕೃಷ್ಣ ಕಾಕತ್‌ಕರ್, ವಾಸುದೇವ ತಾಮನ್‌ಕರ್, ನೀಲಕಂದ ಲೋಂಟೆ, ರಮೇಶಭಾಡೆ, ಇವರಲ್ಲಿ ವೈದಿಕ ಪರಂಪರೆಯ ಹಸ್ತ ಲಿಖಿತ ೫೦ರಿಂದ ೧೦೦ರಷ್ಟು ಗ್ರಂಥಗಳು ಇವರ ಸಂಗ್ರಹದಲ್ಲಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಮೂಂಡೆಬೈಲು ರಾಮಕೃಷ್ಣಶಾಸ್ತ್ರಿ, ಖಂಡಿಗೆ ಶ್ಯಾಮ್‌ಭಟ್ಟ, ಬಾರಕೂರು ಗಣಪಯ್ಯ ಅಡಿಗ, ಉಳ್ಳೂರು ರಾಜಗೋಪಾಲ ಹೆಗ್ಡೆ, ಕೊಡೇರಿ ಚಂದ್ರಶೇಖರ ಕಾರಂತ, ಕಟೀಲಿನ ಶ್ರೀನಿವಾಸ ಭಟ್ಟರು ಇವರ ಸಂಗ್ರಹದಲ್ಲಿ ಹಲವು ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳಿವೆ.

* ಮೂಡುಬಿದಿರೆ ಚಾಟರ ಅರಮನೆಯಲ್ಲಿ ೭ರಿಂದ ೮ ಹಸ್ತಪ್ರತಿಗಳಿವೆ

* ಬಂಗಾಡಿ ಅರಮನೆಯಲ್ಲಿ ೭ ಹಸ್ತಪ್ರತಿಗಳಿವೆ

* ನಡ ಬೀಡಿನಲ್ಲಿ ೨೫ರಿಂದ ೩೦ ಗ್ರಂಥಗಳಿವೆ.

* ಶ್ರಾವಕರ ಮನೆಗಳಲ್ಲಿ ೧ರಿಂದ ೨ ತಾಳೆ ಗ್ರಂಥಗಳನ್ನು ಪೂಜೆಗಾಗಿ ಇಟ್ಟುಕೊಂಡಿರುವುದು ಕಂಡುಬಂದಿದೆ.

* ಹೊನ್ನಾವರದ ಹತ್ತಿರ ಶ್ರಾವಕರ ಮನೆಯಲ್ಲಿ ಸುಮಾರು ೫೬ ಗ್ರಂಥಗಳಿವೆ. ಇವುಗಳಲ್ಲಿ ವಿಜಯದಶಮಿ ಚರಿತೆ, ಜೈನಾಚಾರ್, ತ್ರಿಭಂಗಿ, ಜ್ವಾಲಾಮಾಲಿನೀಕಲ್ಪ, ಪಾರ್ಶ್ವಕವಿಯ ಯೋಗರತ್ನಾವಳಿ, ಕರ್ಣಾಭರಣ ಸೂರಿಯ ಸನ್ಮತಿ, ಕುಮಾರಚರಿತೆ, ವಾದಿಭಸಿಂಹ ಸೂರಿಯ ಗದ್ಯಚಿಂತಾಮಣಿ, ಅಕಳಂಕ ಬ್ರಹ್ಮನ ಚಂದ್ರ ಸೂಧಾಕೋನೆ ಮುಂತಾದ ಹಲವು ಮಹತ್ವದ ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿ ಕಾಣಬಹುದಾಗಿದೆ.

*** ಉತ್ತರ ಕರ್ನಾಟಕದ ವೈಯಕ್ತಿಕ ಹಸ್ತಪ್ರತಿ ನೆಲೆಗಳು**

ಬಳ್ಳಾರಿ ಕೊಪ್ಪಳ, ಗದಗ, ಹಾವೇರಿ, ಬೆಳಗಾವಿ, ರಾಯಚೂರು, ಧಾರವಾಡ ಹಾಗೂ ಗುಲ್ಬರ್ಗಾ, ಬೀದರ, ಬಿಜಾಪುರ, ಬಾಗಲಕೋಟೆ ಜಿಲ್ಲೆಗಳನ್ನೊಳಗೊಂಡ ಉತ್ತರ ಕರ್ನಾಟಕದ ಹಸ್ತಪ್ರತಿಗಳ ವೈಯಕ್ತಿಕ ನೆಲೆಗಳನ್ನು ಗುರುತಿಸುವುದು ತುಂಬಾ ಪ್ರಯಾಸದ ಕೆಲಸ. ಆದರೂ ಮಾಹಿತಿಯನ್ನು ಕ್ಷೇತ್ರಕಾರ್ಯದ ಮೂಲಕ ಹಾಗೂ ಆ ಭಾಗದ ಹಸ್ತಪ್ರತಿ ವಿದ್ವಾಂಸರು, ಹಸ್ತಪ್ರತಿ ಒಡೆಯರ ಮನೆಗಳಿಗೆ ಭೇಟಿ ನೀಡುವುದರ ಮೂಲಕ ಹಾಗೂ ವಿದ್ವಾಂಸರ ಲೇಖನಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

* **ಉತ್ತರ ಕರ್ನಾಟಕದ ಹಸ್ತಪ್ರತಿಗಳ ವಿಶೇಷತೆ(ವೈಶಿಷ್ಟ್ಯತೆ)**

ಉತ್ತರ ಕರ್ನಾಟಕದಲ್ಲಿ ಧಾರ್ಮಿಕವಾಗಿ ವೀರಶೈವ ಮಠ–ಮಾನ್ಯಗಳು ಹೆಚ್ಚು ಸಂಖ್ಯೆಯಲ್ಲಿರುವ ಭಾಗವಾಗಿದೆ. ಹೀಗಾಗಿ ವಚನ, ಸ್ವರವಚನ, ವೀರಶೈವ ಪುರಾಣ, ಕಾವ್ಯಗಳು ಹೆಚ್ಚು ಲಭ್ಯವಾಗಿವೆ. ಇದರ ಜೊತೆಗೆ ಕೊಪ್ಪಳದ ಬಸವರಾಜ ಬಿಸರಳ್ಳಿ, ಬನ್ನಿಕೊಪ್ಪದ ತೋಟನಗೌಡ ಮಾಲಿಪಾಟೀಲರು, ಕಂಪ್ಲಿಯ ಕಲ್ಗುಡಿ ಸಿದ್ದಪ್ಪ ಮುಂತಾದವರ ಕಡೆ ಉದ್ಧರಣೆ ಪಟಲಗಳ ಜೊತೆಗೆ ಶಾಸ್ತ್ರ ಹಾಗೂ ಬೆಡಗಿನ ವಚನಗಳಿಗೆ ಟೀಕು ವ್ಯಾಖ್ಯಾನ ಬರೆದ ಹಲವು ಹಸ್ತಪ್ರತಿಗಳು ಹೇರಳವಾಗಿ ದೊರಕಿವೆ. ಹಾಗೆಯೇ ಮೇಟಿ ಮನೆತನದಲ್ಲಿ ವಿವಿಧ ವಿಷಯಕ್ಕೆ ಸಂಬಂಧಿಸಿದ ವಿವಿಧ ಬಗೆಯ ಹಸ್ತಪ್ರತಿಗಳಿವೆ. ಚಂದ್ರಶೇಖರ ವಸ್ತ್ರದ ಇವರ ಮನೆ ಹಾಗೂ ಕಟ್ಟೀಮನಿಯವರ ಮನೆಯಲ್ಲಿ ಹಲವು ಹಸ್ತಪ್ರತಿಗಳಿವೆ. ಗಜೇಂದ್ರಗಡದ ಅಜ್ಜಪ್ಪ ಹುಳಿಯಪ್ಪರಲ್ಲಿ ಹರಿಶ್ಚಂದ್ರನ ಬಯಲಾಟದ ಹಸ್ತಪ್ರತಿಗಳು ದೊರಕಿವೆ. ರುದ್ರಮುನಿ ಶಿವಚಾರರಲ್ಲಿ ಲೇಖನ ಪದ್ಧತಿಯ ಕೃತಿ, ವೀರೇಂದ್ರಸ್ವಾಮಿ ಶಿರಹಟ್ಟಿಯವರಲ್ಲಿ–ಬ್ರಹ್ಮೋತ್ತರಕಾವ್ಯ, ವೃಷಭೇಂದ್ರರಲ್ಲಿ ಕಪೋತಚರಿತ್ರೆಯ ೧ ಹಸ್ತಪ್ರತಿಯಲ್ಲಿ ೨೦ಕ್ಕೂ ಹೆಚ್ಚು ಕೃತಿಗಳಿರುವವು. ಬಸವ ಮಹಾಸ್ವಾಮಿಗಳು ಕೊಪ್ಪ ಇವರ ಸಂಗ್ರಹದಲ್ಲಿ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ವಿವಿಧ ಹಸ್ತಪ್ರತಿಗಳಿವೆ. ಇವರಷ್ಟೆ ಅಲ್ಲದೆ ಪ್ರಸ್ತುತ ಸಂದರ್ಭದಲ್ಲಿ ಹಲವು ವ್ಯಕ್ತಿಗಳ ಸಂಗ್ರಹದಲ್ಲಿ ವಿವಿಧ ಬಗೆಯ ಹಸ್ತಪ್ರತಿಗಳನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗುರುತಿಸಲಾಗಿದೆ. ಇದರಲ್ಲಿ ಲಿಪಿಕಾರರಾಗಿ, ಲೇಖಕರಾಗಿ ಹಾಗೂ ಸಂರಕ್ಷಕರಾಗಿ ಹಲವು ವ್ಯಕ್ತಿಗಳು ಆಸಕ್ತಿಯಿಂದ ಹವ್ಯಾಸಕ್ಕಾಗಿ ಸಂಗ್ರಹಿಸಿಟ್ಟುಕೊಂಡಿರುವುದು ಕಂಡುಬಂದಿದೆ. ಇದಕ್ಕೆ ಸಂಬಂಧಿಸಿದ ಒಂದೆರಡು ನಿದರ್ಶನಗಳನ್ನು ನೋಡಬಹುದು.

'ಶಾಲಿವಾಹನ ಶಕ ವರ್ಷಂಗಳ ೧೭೭೩ನೆಯ ವಿರೋಧಿಕೃತು ಸಂವತ್ಸರ ಕಾರ್ತಿಕ ಶುದ್ಧ ೧೨ಯಲ್ಲು ಬಳ್ಳಾರಿ ಮಿಶ್ಯೋನ್ ಮುನಿಷಿಗಳಾದ ಚಿಂತ ಕುಂಟೆ ಚಲಮಯ್ಯ ಮಹಾದೇವಪ್ಪನವರಿಂದ ಕರ್ನಾಟಕ ಭಾಷೆಯಲ್ಲಿ ಅಮರ ಪುಸ್ತಕ ಅಚ್ಚು ಹಾಕಿಸಿದ ಕ್ರಮವು'[೩೩]

* ಸಿರುಗುಪ್ಪ ಬಸವಂಣನ ಕುಮಾರ ಬಸವಪ್ಪಗೆ ಸಂಕಿಘಟ್ಟ ಪುರವರಾಧಿಶರಾಯಪ್ಪಾತ್ಮಜ ಕಮಲಾಖನು ಬರಕೊಟ್ಟಂಥಾ ಧರ್ಮಪರೀಕ್ಷೆ ಗ್ರಂಥ[೩೪]

* ಸಂಡೂರಿನ ಸಿದ್ಧಾಂತಿಕೊಂಡು ಭಟ್ಟ ಬರದ ಅನುಭವಾ ಮ್ರುತವೂ[೩೫]

* ಹಸ್ತಾಕ್ಷರ ಬಾಳಾಜೀ ದತ್ತಾತ್ರಯ ಮೇರಥಿಗೀ ವಾಸ್ತವ್ಯ ಸುರಪುರ[೩೬]

ಹೀಗೆ ಮನಃಪ್ರೀತಿಯಿಂದ ಉಪಜೀವನಕ್ಕಾಗಿ, ಧರ್ಮಾರ್ಥ ಸಿದ್ಧಿಗಾಗಿ ಬರೆದ ಲಿಪಿಕಾರರು ಈ ಭಾಗದಲ್ಲಿ ಕಂಡುಬಂದಿದ್ದು ಪ್ರಾಯಶಃ ಅವರ ಪರಿಸರದಲ್ಲಿ ಹಸ್ತಪ್ರತಿಗಳು ಉತ್ಪಾದಾನೆಯಾಗುತ್ತಾ ಪರಿಚಲನೆಗೊಂಡಿರುವ ಸಾಧ್ಯತೆಗಳು ಹೆಚ್ಚಾಗಿದೆ. ದ್ಯಾಂಪುರದ ಕಲ್ಲಿನಾಥ(೧೮೯೦) ಕಿತ್ತೂರು ಬಸವಾರ್ಯ, ಹಾಗೆಯೇ ಹಿರೇಹಡಗಲಿ ಪುರಾಣಿಕ ಮಠದ ಶ್ರೀ ವಿರೂಪಾಕ್ಷಶಾಸ್ತ್ರಿ ಏಳುಬೆಂಚಿ, ನಾಗೇಶಶಾಸ್ತ್ರೀ, ನಲವಡಿ ಶ್ರೀ ಕಂಠಶಾಸ್ತ್ರಿ, ಮಾಗಳದ ಚಂದ್ರಶೇಖರಶಾಸ್ತ್ರಿ ನವಲಗುಂದದ ಕಾಶೀನಾಥ

ಶಾಸ್ತ್ರಿ, ನಾಲವಾರದ ಪಂ. ಜಗದೀಶ ಶಾಸ್ತ್ರಿ, ಮಹಾಗಾಂದ ರುದ್ರರಾಧ್ಯಶಾಸ್ತ್ರಿ, ಬನ್ನಿಕೊಪ್ಪದ ಅಮರನಾಥಶಾಸ್ತ್ರಿ, ಮಸ್ಕಿಯ ಬಸವರಾಜಶಾಸ್ತ್ರಿ ಮುಂತಾದವರು ಸ್ವಂತ ರಚಿತ ಹಸ್ತಪ್ರತಿಗಳಲ್ಲದೆ ಇತರೆ ಹಲವು ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳನ್ನು ಸಂಗ್ರಹಿಸಿಕೊಂಡು ಸಂರಕ್ಷಿಸುತ್ತಾ ಬಂದಿದ್ದಾರೆ. ಇವರಲ್ಲದೆ ಇನ್ನೂ ಕೆಲವರು ಅವರಲ್ಲಿರುವ ಹಸ್ತಪ್ರತಿಗಳು ಹಾಗೂ ಅವರ ಪ್ರದೇಶಗಳನ್ನು ಕೆಳಗಿನಂತೆ ದಾಖಲು ಮಾಡಲಾಗಿದೆ.

೧. ಸಿ.ಎಂ. ವೀರಭದ್ರಯ್ಯ ಹಾಗೂ ನೆಗಳೂರು ಮಠ

ಇವರು ಮೂಲತಃ ಬಳ್ಳಾರಿ ಜಿಲ್ಲೆಯವರು. ಇವರಿಗೆ ಬ್ಯಾಡಗಿ ತಾಲ್ಲೂಕು ಕುಂದರಗಿ ಗ್ರಾಮದವರಾದ ಶ್ರೀಮತಿ ಸಂಪತ್‌ಕುಮಾರಿ ಇವರಿಂದ ಹಲವು ಬಗೆಯ ತಾಳೆಪ್ರತಿಗಳು ಲಭಿಸಿವೆ. ಅವುಗಳೆಂದರೆ

೧. ತಾರಾವಳಿ ಹಸ್ತಪ್ರತಿ

೨. ಕೆಳದಿ ಸಂಸ್ಥಾನಕ್ಕೆ ಸಂಬಂಧಿಸಿದ ಹಸ್ತಪ್ರತಿ

೩. ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಹಸ್ತಪ್ರತಿ

೪. ನಾಟಕಕ್ಕೆ ಸಂಬಂಧಿಸಿದ ಹಸ್ತಪ್ರತಿಗಳು

೫. ಕಾಗದದ ವಿವಿಧ ಹಸ್ತಪ್ರತಿಗಳಿವೆ. ಇವು ಹೆಚ್ಚಾಗಿ ವೀರಶೈವ ಧರ್ಮಕ್ಕೆ ಸಂಬಂಧಿಸಿದವುಗಳಾಗಿವೆ.

೨. ಎಂ.ಕೆ. ಶಿವಪ್ಪ(ಎಂ.ಕೆ. ರುದ್ರೇಶ್)

ಇವರು ಮೂಲತಃ ಹುಬ್ಬಳ್ಳಿಯವರು. ಇವರು ಆಸಕ್ತಿಯಿಂದ ಹಳೇ ಕಾಲದ ನಾಣ್ಯಗಳು, ತಾಳೆಗರಿಗಳು, ಕಾಗದಪ್ರತಿಗಳು ಇನ್ನಿತರ ಸಾಮಗ್ರಿಗಳನ್ನು ಸಂಗ್ರಹಿಸುವುದರ ಜೊತೆಗೆ ನಾಡಿನ ವಿವಿಧ ವಿಶ್ವವಿದ್ಯಾಲಯಗಳು, ಸಂಘ, ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಇವುಗಳನ್ನು ಪ್ರದರ್ಶನಕ್ಕೆ ಇಡುತ್ತಾರೆ. ಇವರ ಸಂಗ್ರಹದಲ್ಲಿರುವ ಹಸ್ತಪ್ರತಿಗಳ ವಿವರ ಈ ಕೆಳಗಿನಂತೆ ಇರುತ್ತವೆ.

ತಾಳೆಪ್ರತಿಯ ಹಸ್ತಪ್ರತಿಗಳು ೪

೧. ಹರಿಶ್ಚಂದ್ರನ ಗಿರಿಜಾಕಲ್ಯಾಣ

೨. ಮೈದುನಾರಾಮಯ್ಯನ ಸುವ್ವಿಪದ

೩. ಶಬ್ದಮಣಿದರ್ಪಣ

೪. ಸಂಸ್ಕೃತ ಶ್ಲೋಕಕ್ಕೆ ಸಂಬಂಧಿಸಿದ ಹಸ್ತಪ್ರತಿಗಳು

೫. ವಚನ ಮಿಶ್ರಾರ್ಪಣ, ಚನ್ನಬಸವಣ್ಣನ ಪದಮಂತ್ರಗೋಪ್ಯ, ಸೃಷ್ಟಿಯ ವಚನಗಳು, ಇನ್ನಿತರ ಹಲವು ಕೃತಿಗಳನ್ನೊಳಗೊಂಡ ಹಲವು ಪ್ರತಿಗಳು ಇವರ ಸಂಗ್ರಹದಲ್ಲಿವೆ.

ಕಾಗದದ ಹಸ್ತಪ್ರತಿಗಳು ೮

* ಈ ಪ್ರತಿಗಳಲ್ಲಿ ರಾಗಿ ಮಸಿಯಿಂದ ಅಕ್ಷರಗಳನ್ನು ಬರೆಯಲಾಗಿದೆ.
* ಶಂಕರ ದಾಸಿಮಯ್ಯನ ಚೋರ ಬಸವೇಶ್ವರ ಚರಿತ್ರೆ
* ೧೮೮೩ರ ವಿವಿಧ ಲಿಪಿಗಳ ಬಗ್ಗೆ ವಿವರಣೆಗೆ ಸಂಬಂಧಿಸಿದ ಮಾಹಿತಿ ಒಳಗೊಂಡಿರುತ್ತದೆ.
* ವಿವಿಧ ಬಗೆಯ ಹಳೆಯ ಕಾಲದ ತಾಮ್ರ, ಬೆಳ್ಳಿ, ಬಂಗಾರದ ನಾಣ್ಯಗಳು ಇವರ ಸಂಗ್ರಹದಲ್ಲಿವೆ.

ಸಿರಿಭೂವಲಯ. ಇದರಲ್ಲಿ ೭೧೮ ಭಾಷೆಗಳು ಹಾಗೂ ೬೪ ವಿದ್ಯೆಗಳು ವಿವಿಧ ಅಂಕಿಗಳಲ್ಲಿ ನಮೂದಿಸಲಾಗಿದೆ. ೭ನೇ ಶತಮಾನದ ಈ ಹಸ್ತಪ್ರತಿಯನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲಾಗಿದೆ.

ಹಳೇ ಕಾಲದ ವಿವಿಧ ಕಾಗದಪತ್ರಗಳು

ಇವರು ಆಸಕ್ತಿಯಿಂದ ಹವ್ಯಾಸಕ್ಕಾಗಿ ವೈಯಕ್ತಿಕವಾಗಿ ಸಂಗ್ರಹಿಸಿ ಸಂರಕ್ಷಣೆ ಮಾಡುತ್ತಿದ್ದಾರೆ.

ದೊಡ್ಡ ಹನುಮಂತಪ್ಪ ಹೂಗಾರ, ಗುಂಡೂರು

ಗಂಗಾವತಿ ತಾಲೂಕಿನ ಒಂದು ಚಿಕ್ಕ ಗ್ರಾಮ ಗುಂಡೂರು ಇವರು ಮೂಲತಃ ಬಯಲಾಟದ ಕಲಾವಿದರಾಗಿರುವುದರಿಂದ ಇವರ ಸಂಗ್ರಹದಲ್ಲಿ ಹೆಚ್ಚಾಗಿ ಬಯಲಾಟಕ್ಕೆ ಸಂಬಂಧಿಸಿದ ಹಸ್ತಪ್ರತಿಗಳಿವೆ.

೧. ರಾಮಾಯಣ(೧೯೦೦ರಲ್ಲಿ ಪ್ರತಿ ಮಾಡಿದ್ದು)

೨. ಅಬಿಮನ್ಯುವಿನ ಕತೆ(೧೯೦೪ರಲ್ಲಿ ಪ್ರತಿ ಮಾಡಿದ್ದು)

೩. ಕರಿರಾಯನ ಕತೆ

೪. ತ್ರಿಪುರ ಸಂಹಾರ

೫. ಶ್ರೀದೇವಿ ಕತೆ

ಕುರುಗೋಡು ಚನ್ನಪ್ಪ, ಗಂಗಾವತಿ

ಇವರು ತಮ್ಮ ವೈಯಕ್ತಿಕ ನೆಲೆಯಲ್ಲಿ

* ದಕ್ಷಬ್ರಹ್ಮನ ಕತೆ
* ಪಾರ್ಥವಿಜಯ
* ಚಿತ್ರಸೇನನ ಕಾಳಗ

ಇತ್ಯಾದಿ ಹಲವು ಮಹತ್ವದ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ.

ಈರಣ್ಣ ಗೊಬ್ಬರಕಲ್

ಇವರ ವೈಯಕ್ತಿಕ ನೆಲೆಯಲ್ಲಿ

* ಬಾಲ ಭಿಕ್ಷರಾಜ
* ಚಿತ್ರಪತಿರಾಜ
* ಸಣ್ಣಾಟಗಳ ಹಸ್ತಪ್ರತಿಗಳು

ಇತ್ಯಾದಿ ಹಲವು ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿವೆ.

ಶರಣಪ್ಪಗೌಡ ಸಾಯಬಣ್ಣವರ್ ಗುರುಸಲಂ

ಗುಲ್ಬರ್ಗಾ ಜಿಲ್ಲೆಯ ಶಹಾಪೂರ ತಾಲೂಕಿನ ಸಣ್ಣ ಊರು ಗುರುಸಲಂ. ಇವರು ಹವ್ಯಾಸದಿಂದ ಹಲವು ಕೃತಿಗಳ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ.

* ಶ್ವೇತ ಮಹಾರಾಜ
* ವೀರೋಚನ
* ಜರಾಸಂದ(ಸ್ವಂತ ಕೃತಿ)
* ಕಾಳಾಸುರ
* ಕೀಚಕವಧೆ
* ಮಣಿಮಲ್ಲಾಸುರ
* ಚಿತ್ರಸೇನ ಗಂಧರ್ವ
* ಕರ್ಣಾರ್ಜುನರ ಕಾಳಗ
* ಬಕಾಸುರನ ಕತೆ
* ಶತಕಂಠ ರಾವಣ
* ಇಂದ್ರಜಿತ್ ಕಾಳಗ
* ಕನಕಾಂಗಿ ಕಲ್ಯಾಣದ ಅನೇಕ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ.

೩. ಚನ್ನಕೇಶವಯ್ಯ

ಇವರು ಮೂಲತಃ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ನಲಗತೇನ ಹಟ್ಟಿ' ಗ್ರಾಮದ ನಿವಾಸಿಗಳು. ಇವರು ಅವುಗಳನ್ನು ಓದುವ ಜ್ಞಾನವನ್ನು ಹೊಂದಿದ್ದಾರೆ. ಇವರಿಗೆ ೫೫ ವರ್ಷ. ಸದ್ಯ ಇವರ ವೃತ್ತಿ ಮೇಳಗಾರಿಕೆಯಾಗಿದೆ.

ಇವರ ಸಂಗ್ರಹದಲ್ಲಿರುವ ವಿವಿಧ ಹಸ್ತಪ್ರತಿಗಳು

ಶಿವಜಲಂಧರ, ಮಧುಕೈಟಭರಕಥೆ, ಸೌಗಂದಿಕಾಪುಷ್ಪ, ಚಿತ್ರಕೇತು ಮಹಾರಾಜ, ಗಿರಿಜಾಕಲ್ಯಾಣ, ಕರೀಭಂಟನ ಕಾಳಗ, ಶಶಿರೇಖಾ ಪರಿಣಯ.

ಈ ಮೇಲಿನ ಎಲ್ಲಾ ಪ್ರತಿಗಳನ್ನು ಚನ್ನಕೇಶವಯ್ಯರವರು ಸಂಗ್ರಹಿಸಿದ್ದಾರೆ. ಇವರು ಬಯಲಾಟ ಕಲಿಸುವ ಭಾಗವತರು ಹಾಗೂ ಕಲಾವಿದರು. ಹಾಗಾಗಿ ಅನೇಕ ಬಯಲಾಟದ ವಿಭಿನ್ನ ಕೃತಿಗಳನ್ನು ಸ್ವತಃ ತಾವೇ ರಚಿಸಿದ್ದಾರೆ.

೪. ಕಲ್ಲಪ್ಪ ಎಲಿಗಾರ

ಕೊಪ್ಪಳ ತಾಲ್ಲೂಕು ಅಳವಂಡಿಯಲ್ಲಿ ಕೃಷಿಕ ಕುಟುಂಬದಲ್ಲಿ ಕ್ರಿ.ಶ.೧೯೫೩ರಲ್ಲಿ ಗವಿಸಿದ್ಧಪ್ಪ ಈರಮ್ಮನವರ ಮಗನಾಗಿ ಹುಟ್ಟಿದರು. ಇವರು ಬಯಲಾಟದಲ್ಲಿ ಉತ್ತಮವಾಗಿ ಪಾತ್ರಗಳನ್ನು

ನಿರ್ವಹಿಸಿದ್ದಾರೆ. ಆದಕಾರಣ ಇವರು ಹೆಚ್ಚಾಗಿ ಬಯಲಾಟಕ್ಕೆ ಸಂಬಂಧಿಸಿದ ಹಸ್ತಪ್ರತಿಗಳನ್ನು ಸಂಗ್ರಹಿಸಿರುತ್ತಾರೆ.

ಇವರ ಸಂಗ್ರಹದಲ್ಲಿ ಕುರುಕ್ಷೇತ್ರ, ರಾಮಾಯಣ, ಸುಗಂಧ ಪುಷ್ಪಹರಣ, ಗಿರಿಜಾಕಲ್ಯಾಣ, ರತಿಕಲ್ಯಾಣ, ಬಬ್ರುವಾಹನ, ಕಿರಾತಾರ್ಜುನ ಕಾಳಗ, ಸುಭದ್ರಾಕಲ್ಯಾಣ, ಪ್ರಮೀಳಾ ದರ್ಬಾರ, ಕೃಷ್ಣಾರ್ಜುನರ ಕಾಳಗ, ವಿರಾಟಪರ್ವ, ಅರಣ್ಯಪರ್ವ, ದೇವಿಕತೆ, ಲವ–ಕುಶ ಕಾಳಗ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಹಲವು ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿವೆ.

೫. ಬಿ.ಎಂ. ಗುರುನಾಥ

ಚಿತ್ರದುರ್ಗ ಜಿಲ್ಲೆಯ ಬೆಳಗಟ್ಟೆ ಗ್ರಾಮದಲ್ಲಿ ಬಿ.ಎಂ.ಗುರುನಾಥರು ಜನಿಸಿದ್ದಾರೆ. ಇವರು ಚಿಕ್ಕಂದಿನಿಂದಲೂ ಬಯಲಾಟದ ಬಗ್ಗೆ ಆಸಕ್ತಿಯನ್ನು ಹೊಂದಿದ್ದು, ಅನೇಕ ನಾಟಕಗಳಲ್ಲಿ ಪಾತ್ರಗಳನ್ನು ಮಾಡಿ ನಾಟಕಗಳ ಬಗ್ಗೆ ಅಪಾರ ಶ್ರದ್ಧೆಯನ್ನು ಬೆಳೆಸಿಕೊಂಡಿದ್ದಾರೆ. ಇವರ ಸಂಗ್ರಹದಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳಿವೆ. ಅವು

ತಾಮ್ರಧ್ವಜನ ಕಥೆ

ಕಾಳಿಂಗರಾಜನ ಕಥೆ

ಭೋಜಕಾಳಿದಾಸ ವಿಲಾಸ

ಲಕ್ಷ್ಮಿ ಸ್ವಯಂವರ

ಶತ್ರುವಿಜಯ ಕಥೆ

ಜಗನ್ಮೋಹಿನಿ ನಾಟಕ

ರಾಮಾಯಣದೊಳಗಣ ಚಿತ್ರಪಟ ಸಂಧಿ

ಇವರ ಸಂಗ್ರಹದಲ್ಲಿರುವ ಎಲ್ಲಾ ಪ್ರತಿಗಳು ಕಾಗದದ ಪ್ರತಿಗಳಾಗಿವೆ. ಕೆಲವೊಂದು ಪ್ರತಿಗಳು ತುಂಬಾ ತ್ರುಟಿತಗೊಂಡಿವೆ. ಕೆಲವೊಂದು ಪ್ರತಿಗಳಲ್ಲಿನ ಅಕ್ಷರಗಳು ಸ್ಪಷ್ಟವಾಗಿ ಕಾಣಿಸುತ್ತಿಲ್ಲ. ಇರುವ ಹಸ್ತಪ್ರತಿಗಳು ಈಗಲೂ ಪ್ರದರ್ಶನಗೊಳ್ಳುತ್ತಿರುವುದನ್ನು ಗಮನಿಸಲಾಗಿದೆ.

೬. ಸಣ್ಣಹುಸೇನ ಸಾಹೇಬ, ಹಿರೇಮನ್ನಾಪೂರ

ಇವರು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಹಿರೇಮನ್ನಾಪೂರ ಗ್ರಾಮದವರು. ಇವರು ಓದಿರುವುದು ಎರಡನೆಯ ತರಗತಿ. ಇವರು ಊರೂರು ಅಲೆದು ಬಯಲಾಟ ಕಲಿಸುತ್ತಾ ಅಭಿರುಚಿ ಬೆಳೆಸಿಕೊಂಡು ಇಂದು ಅದನ್ನೇ ತಮ್ಮ ಮೂಲ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಆದಕಾರಣ ಹೆಚ್ಚಾಗಿ ಬಯಲಾಟಕ್ಕೆ ಸಂಬಂಧಿಸಿದ ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿವೆ.

ಕೀಚಕ ವಧಾ

ಕರ್ಣಾರ್ಜುನರ ಕಾಳಗ

ಲವಕುಶ

ಅಹಿರಾವಣ–ಮಹಿರಾವಣ

ಸಂಪೂರ್ಣ ರಾಮಾಯಣ

ಕುರುಕ್ಷೇತ್ರ

ವೀರಮಾಳಿಂಗ ರಾಯ

ಇತ್ಯಾದಿ ಹಲವು ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳನ್ನು ತಮ್ಮ ಸಂಗ್ರಹದಲ್ಲಿಟ್ಟುಕೊಂಡಿದ್ದಾರೆ.

ಶಿವಲಿಂಗಯ್ಯ

ಇವರು ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಇಂಗಳಗಿ ಗ್ರಾಮದವರು. ಇವರು ಆಸಕ್ತಿಯ ಜೊತೆಗೆ ದೈವದ ಹಿನ್ನೆಲೆಯಲ್ಲಿ ವಿವಿಧ ವಿಷಯಕ್ಕೆ ಸಂಬಂಧಿಸಿದ ಹಲವು ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ.

ಸುಕುಮಾರಚರಿತ್ರೆ ಕಾವ್ಯ– ಕಾಗದಹಸ್ತಪ್ರತಿ

ಸಹಸ್ರನಾಮ

ವೈದ್ಯಕೀಯ ಹಸ್ತಪ್ರತಿ

ಇತ್ಯಾದಿ ವಿಷಯಕ್ಕೆ ಸಂಬಂಧಿಸಿದ ಹಲವು ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿವೆ.

ಭೀಮಶಂಕರ ದೇಶಪಾಂಡೆ

ಇವರು ಗುಲ್ಬರ್ಗಾ ಜಿಲ್ಲೆಯ ಆಳಂದದಲ್ಲಿ ನೆಲೆಸಿದ್ದಾರೆ. ಇವರು ಹೆಚ್ಚಾಗಿ ಮಿಶ್ರಭಾಷೆಯ ಪದಗಳನ್ನು ಒಳಗೊಂಡ ಹಲವು ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಇದಕ್ಕೆ ಒಂದು ಸ್ಪಷ್ಟ ನಿದರ್ಶನ.

ಪೃಥ್ವಿ ಅಫ್ ತೇಜ್ ವಾಯು ಪ್ರಕಾಶ ಬಸವನೇ

ನಿರ್ಗುಣ ಬಸವ ಸಗುಣ್ ಬಸವ ಮಾಣಿಕೆ ಬಸವನೇ

ಅರ್ಥ: ಭೂಮಿ ಆಕಾಶ ಗಾಳಿ ಬೆಳಕು ಎಲ್ಲಾ ನೀನೆ ಬಸವ

ಸದ್ಗುಣಗಳಿಂದ ಕೂಡಿದ ಭಕ್ತ ಬಸವನೇ ಎಂದು.

ಇಲ್ಲಿ ಮೊದಲ ಸಾಲಿನಲ್ಲಿ: ಪೃಥ್ವೀ ಅಫ್ ತೇಜ್, ಹಿಂದಿ

ವಾಯು, ಪ್ರಕಾಶ್, ಮರಾಠಿ, ಪದಗಳು

ಬಸವನೇ ಕನ್ನಡ ಪದ

ಗುರು ಸಿದ್ದಯ್ಯ ಕಂಠಿ

ಇವರು ಮೂಲತಃ ಚಿಂಚೋಳಿ ತಾಲ್ಲೂಕಿನವರು. ಇವರ ಸಂಗ್ರಹದಲ್ಲಿ ಕಾಗದ ಪ್ರತಿ ಹಾಗೂ ತಾಳೆಪ್ರತಿಗಳು ಸೇರಿ ಒಟ್ಟು ೩೮ ಕಟ್ಟುಗಳಿವೆ.

ಬಸವಪ್ರಭು ಕೋಳ್ಳೂರು

ಇವರು ಜೇವರ್ಗಿ ತಾಲೂಕಿನವರು. ಇವರ ಸಂಗ್ರಹದಲ್ಲಿ ಒಟ್ಟು ೫೪ ಕಟ್ಟುಗಳಿವೆ.

ತುರುವನೂರು ಏಕಾಂತಪ್ಪ

ಇವರು ಚಿತ್ರದುರ್ಗ ತಾಲ್ಲೂಕಿನ ತುರುವನೂರು ಹೋಬಳಿಯಲ್ಲಿ ನೆಲೆಸಿದ್ದರು. ಇವರ ವೃತ್ತಿಯೇ ಮೇಳಗಾರಿಕೆಯಾಗಿದೆ. ಆದಕಾರಣ ಇವರಲ್ಲಿ ಹೆಚ್ಚಾಗಿ ಬಯಲಾಟಕ್ಕೆ ಸಂಬಂಧಿಸಿದ ಹಸ್ತಪ್ರತಿಗಳು ಸಂಗ್ರಹದಲ್ಲಿವೆ. ಅವುಗಳೆಂದರೆ:

ಕುರುಕ್ಷೇತ್ರ

ಕಾಳಾಸುರನ ಕಥೆ

ಮಧುಕೈಟಭರ ಸಂಹಾರ

ಕಂಸಾಸುರನ ಕಥೆ

ದ್ರೌಪದಿಯ ಸ್ವಯಂವರ

ಕರಿಭಂಟನ ಕಥೆ

ಇತ್ಯಾದಿ ವಿಷಯಗಳಿಂದ ಸಂಬಂಧಿಸಿದ ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿವೆ.

ಬೆಳಗಾವಿ ಭಾಗ

ಇದು ಉತ್ತರ ಕರ್ನಾಟಕದ ಗಡಿ ಭಾಗವಾಗಿರುವುದರಿಂದ, ಇಲ್ಲಿ ಮರಾಠಿ ಪ್ರಭಾವ ಹೆಚ್ಚಾಗಿರುವುದರಿಂದ ಕನ್ನಡದ ಜೊತೆಗೆ ಮರಾಠಿ ಮಿಶ್ರಿತ ವಿವಿಧ ವಿಷಯಕ್ಕೆ ಸಂಬಂಧಿಸಿದ ಕಾಗದ ಹಸ್ತಪ್ರತಿಗಳು ಹಾಗೂ ತಾಳೆಪ್ರತಿಗಳು ದೊರೆತಿವೆ. ಜಿಲ್ಲೆಯ ಹುಕ್ಕೇರಿ, ಚಿಕ್ಕೋಡಿ, ರಾಯಭಾಗ ಅಥಣಿ ಮತ್ತು ಗೋಕಾಕ ಬೆಳಗಾವಿ, ಸವದತ್ತಿ, ಸತ್ತಿ, ಬೈಲಹೊಂಗಲ ತಾಲ್ಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯ ಜೈನ ಹಸ್ತಪ್ರತಿಗಳು ಲಭಿಸಿವೆ. ಜಿಲ್ಲೆಯ ಮತ್ತೊಂದು ಭಾಗಗಳಾದ ತೊರಗಲ್, ಕಡಕೋಳ, ಮೊದಲೂರು, ಮುರಗೋಡ, ಮೂಗುಬಸವ, ನಾಗಲಾಪುರ, ಹುಣಸೀಕಟ್ಟಿ, ತುರಮರಿ, ಕಾದರವಳ್ಳಿ, ಕಿತ್ತೂರು ಮುಂತಾದೆಡೆಗಳಲ್ಲಿ ವಚನ ಸಾಹಿತ್ಯದ ಹಸ್ತಪ್ರತಿಗಳು ದೊರೆತಿವೆ. ಈ ಕಾರಣದಿಂದ ಜಿಲ್ಲೆಯಲ್ಲಿ ಜೈನ ಸಾಹಿತ್ಯ ಹಾಗೂ ವಚನಸಾಹಿತ್ಯದ ವಿಶಿಷ್ಟ ಹಸ್ತಪ್ರತಿಗಳು ದೊರೆಕಿವೆ. ಈ ಭಾಗದಲ್ಲಿ ಸಹ ಹೆಚ್ಚಿನಸಂಖ್ಯೆಯಲ್ಲಿ ವೈಯಕ್ತಿಕ ಸಂಗ್ರಹಕಾರರು ಕಾಣಿಸುತ್ತಾರೆ. ಆದರೆ ಅವರು ಸಂಗ್ರಹಿಸಿದ ಹಲವು ಹಸ್ತಪ್ರತಿಗಳು ನಾಡಿನ ವಿಶ್ವವಿದ್ಯಾಲಯಗಳಿಗೆ ಕೊಡುಗೆ ರೂಪದಲ್ಲಿ ನೀಡಿದ್ದಾರೆ. ಬಿ.ಎಸ್. ಕುಲಕರ್ಣಿಯವರು ಮೂರು ಹಸ್ತಪ್ರತಿಗಳನ್ನು ಆಧಾರವಾಗಿಟ್ಟುಕೊಂಡು ೧೯೭೭ರಲ್ಲಿ ಚಾವುಂಡರಾಯ ಪುರಾಣವನ್ನು ಸಂಪಾದಿಸಿದ್ದು, ಪ್ರತಿಯನ್ನು ಬೆಳಗಾವಿ ಜಿಲ್ಲೆಯ ಹೊಸೂರಿನ ಸಾಗರದತ್ತ ಭರಮಪ್ಪ ಪಾಟೀಲರು ಕೊಟ್ಟಿದ್ದಾರೆ.

ಬೈಲಹೊಂಗಲ ತಾಲೂಕಿನ ಗುರುರಾಚಯ್ಯ, ಬಾಳಂಭಟ್ಟ, ಬಸವಣ್ಣೆಪ್ಪ, ವೀರಭದ್ರಶಾಸ್ತ್ರಿ, ದುರದುಂಡೇಶ್ವರ, ನೀಲಕಂಠಪ್ಪ ಮಾಸ್ತರ, ಬೈಲವಾಡದ ಪತ್ತಾರ ಮಾಸ್ತರ, ಕುರುಗುಂದದ ಆನಂದಕವಿ, ಶಿಮನೇವಾಡಿಯ ದೇವೇಂದ್ರ ತನಯ, ಹುಕ್ಕೇರಿ ತಾಲೂಕಿನ ಅಮ್ಮಣಗಿಯ ಮಲ್ಲಿನಾಥಶಾಸ್ತ್ರಿ ಬೆಲ್ಲದ ಬಾಗೇವಾಡಿಯ ಬಾಳಗೋಪಾಲ, ರಾಮದುರ್ಗ ತಾಲ್ಲೂಕು ಹುನಗುಂದದ ಶಿವಲಿಂಗ

ಕವಿ, ಭೀಮಕವಿ, ಗೋಕಾಕ ತಾಲ್ಲೂಕು ಕುಲಗೋಡದ ತಮ್ಮಣ್ಣ, ಭೀಮಾಜಿ ಕುಲಕರ್ಣಿ, ಕದ್ರೊಳ್ಳಿ ನೀಲಕಂಠ ಪತ್ತಾರ, ರಾಯಭಾಗ ತಾಲ್ಲೂಕು ಹಾರೂಗೇರಿಯ ಕವಿ ಅಲಭ್ಯೆರಿ, ಮುಗಳಖೋಡದ ರಾಚಯ್ಯ, ಜಲಾಲಪುರದ ರಾಚೋಟಿ, ಪರಮಾನಂದವಾಡಿಯ ಕಲಸಿದ್ದ, ದಿಗ್ಗೇವಾಡಿಯ ಬಾಬಾಜಿ ಜಮಾದಾರ, ಅಥಣಿ ತಾಲ್ಲೂಕು ತಾಂವಶಿವಯ್ಯ ಶಿವಪ್ಪ ರಣಧೀರ, ಮುಲಾಬಾದದ ಮಲ್ಲಪ್ಪ ಕುಂಬಾರ, ಬಾಳಗೇರಿಯ ಅಪ್ಪಣ ಸನದಿ, ಬೆವನೂರಿನ ಯಮನಪ್ಪ ಕಾಂಬಳೆ ಮೊದಲಾದ ನೂರಾರು ಜನಪದ ಸಾಹಿತಿಗಳ ತತ್ವಪದ, ಲಾವಣಿ, ಡೊಳ್ಳಿನ ಹಾಡು, ಮೊಹರಂ ಪದ, ಚೌಡಕಿ ಪದ. ಬಯಲಾಟಗಳ ಹಸ್ತಪ್ರತಿಗಳು, ಕಾಗದದ ಪ್ರತಿಗಳು ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಹರಡಿಕೊಂಡಿವೆ. ಇವುಗಳನ್ನು ವೈಯಕ್ತಿಕ ನೆಲೆಯಿಂದ ಸಾಂಸ್ಥಿಕ ನೆಲೆಗೆ ತರುವ ಕೆಲಸ ಜರೂರು ಆಗಬೇಕಾಗಿದೆ.

ಬಿಜಾಪುರ ಜಿಲ್ಲೆ

ವಚನ ಪಿತಾಮಹ ಫ.ಗು. ಹಳಕಟ್ಟಿ ಹಾಗೂ ಅನೇಕ ಆಸಕ್ತ ವಿದ್ವಾಂಸರು, ಅಧ್ಯಯನಕಾರರು ಜಿಲ್ಲೆಯಲ್ಲಿರುವ ವಿವಿಧ ಬಗೆಯ ಹಸ್ತಪ್ರತಿಗಳನ್ನು ತಮ್ಮ ಸಂಗ್ರಹದಲ್ಲಿ ಇಟ್ಟುಕೊಂಡಿದ್ದರು. ಇದಕ್ಕೆ ಗ್ರಂಥಗಳ ಮೇಲಿರುವ ಪ್ರೀತಿ, ಸಾಹಿತ್ಯದ ಆಸಕ್ತಿಯೇ ಕಾರಣವಾಗಿದೆ. ಪ್ರಾಚೀನ ದಾಖಲೆಗಳ ಪೋಷಣೆ, ವಾತ್ಸಲ್ಯ ಮುಂತಾದ ಕಾರಣಗಳಿಂದ, ಇವರಲ್ಲಿ ಕೆಲವರು ತಮ್ಮಲ್ಲಿಟ್ಟುಕೊಂಡರೆ ಕೆಲವರು ನಾಡಿನ ವಿವಿಧ ವಿಶ್ವವಿದ್ಯಾಲಯಗಳಿಗೆ ಕೊಡುಗೆಯಾಗಿ ನೀಡಿದ್ದಾರೆ. ಹಾಗೆ ತಮ್ಮ ಸಂಗ್ರಹದಲ್ಲಿ ಹಸ್ತಪ್ರತಿಗಳನ್ನು ಇಟ್ಟುಕೊಂಡವರಲ್ಲಿ ಪ್ರಮುಖರಾದವರು ಸಿರಗುಪ್ಪದ ಭೀಮರಾವ್, ಜೈನಾಪುರದ ಜಿ.ಜಿ. ಹಿರೇಮಠ, ಬಿಜಾಪುರದ ಜಿ.ವಿ. ಹಿಪ್ಪರಗಿ, ಹಿರೇಲೋಣಿಯ ಶ್ರೀಶೈಲ ಪಾಟೀಲ, ಲೂಟಗಿಯ ಸೋಮಶೇಖರ ಹಿರೇಮಠ, ದೇವಣಗಾಂವದ ಕಲ್ಲಪ್ಪ ನಡುವಿನಕೇರಿ ಹಾಗೂ ಗುಳೇದಗುಡ್ಡದಲ್ಲಿ ಕೆಲವು ಅಧ್ಯಯನಕಾರರಲ್ಲಿ ಹಲವು ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳಿರುವುದನ್ನು ಗಮನಿಸಲಾಗಿದೆ.

ಗುರುಲಿಂಗೇಶ್ವರ: ಇವರ ಸಂಗ್ರಹದಲ್ಲಿ ಅನೇಕ ಆಟ–ಬಯಲಾಟಕ್ಕೆ ಸಂಬಂಧಿಸಿದ ಹಸ್ತಪ್ರತಿಗಳಿದ್ದವು. ಇವರೇ ಬರೆದ ಭೀಮವಿಲಾಸ ಅರ್ಥಾತ್ ಕೀಚಕನ ವಧೆ, ಶಬರಶಂಕರ, ದಕ್ಷಬ್ರಹ್ಮ, ಮದನಸುಂದರಿ, ಕುರುಕ್ಷೇತ್ರ, ರಾಜನಿಷ್ಠೆ ಮುಂತಾದ ಹಸ್ತಪ್ರತಿಗಳು ದೇವಣಗಾಂವದ ಕಲ್ಲಪ್ಪ ನಡುವಿನ ಕೇರಿಯವರ ಸಂಗ್ರಹದಲ್ಲಿ ಇವೆ.

ದಕ್ಷಿಣ ಕರ್ನಾಟಕದ ವೈಯಕ್ತಿಕ ನೆಲೆಗಳು

ದಕ್ಷಿಣ ಕರ್ನಾಟಕದ ಮೈಸೂರು, ಬೆಂಗಳೂರು, ತುಮಕೂರು ಹಾಗೂ ಶಿವಮೊಗ್ಗ ಇನ್ನಿತರ ಹಲವು ಪ್ರದೇಶಗಳಲ್ಲಿ ಅನೇಕ ವಿದ್ವಾಂಸರು, ಅಧ್ಯಯನಕಾರರು, ಆಸಕ್ತರು ಹಾಗೂ ಇನ್ನಿತರ ಹಲವರ ಸಂಗ್ರಹದಲ್ಲಿರುವ ಹಸ್ತಪ್ರತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಹಾಗೂ ವಿದ್ವಾಂಸರನ್ನು ಸಂದರ್ಶಿಸುವ ಮೂಲಕ ಮಾಹಿತಿಯನ್ನು ಕಲೆಹಾಕಲಾಗಿದೆ. ದಕ್ಷಿಣ ಕರ್ನಾಟಕದ ವೈಯಕ್ತಿಕ ಸಂಗ್ರಹವನ್ನು ಗುರುತಿಸುವುದು ಬಹಳ ಪ್ರಯಾಸದ ಕೆಲಸ. ಆದರೂ ದೊರೆತಿರುವ ಮಾಹಿತಿಯನ್ನು ದಾಖಲಿಸಲಾಗಿದೆ.

ದಕ್ಷಿಣ ಕರ್ನಾಟಕದ ಹಸ್ತಪ್ರತಿಗಳ ವೈಶಿಷ್ಟ್ಯ

ದಕ್ಷಿಣ ಕರ್ನಾಟಕದ ತುಂಬಾ ಸಾಕಷ್ಟು ಹಸ್ತಪ್ರತಿಗಳು ದೊರೆತಿವೆ. ಆದರೆ ಅದರಲ್ಲಿ ಹೆಚ್ಚಾಗಿ ಶ್ರೀವೈಷ್ಣವ, ರಾಜವಂಶಾವಳಿ, ಪ್ರಾದೇಶಿಕಕ್ಕೆ ಸಂಬಂಧಿಸಿದ ಹಸ್ತಪ್ರತಿಗಳಿವೆ. ಇಡೀ ದಕ್ಷಿಣ ಕರ್ನಾಟಕದಲ್ಲಿ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಸಂಗ್ರಹಿಸಿದ ಹಸ್ತಪ್ರತಿಗಳು ಮತ್ತ್ಯಾವ ಸಂಸ್ಥೆಯೂ ಸಂಗ್ರಹಿಸಿಲ್ಲ.

ವೈಯಕ್ತಿಕ ನೆಲೆಗಳು

*** ಎಸ್.ವಿ. ಸೌಧರ್ಮಯ್ಯ**

ಇವರು ಮೈಸೂರು ಜಿಲ್ಲೆಯ ಸಾಲಿಗ್ರಾಮದ ನಿವಾಸಿಗಳಾಗಿದ್ದಾರೆ. ಆಸಕ್ತಿಯಿಂದ ಹವ್ಯಾಸಕ್ಕಾಗಿ ಸಂಗ್ರಹಿಸಿದ ಹಲವು ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿ ಕಾಣಬಹುದು.

* ಸಮ್ಯಕ್ತಕೌಮುದಿ ನೇಮಿಜಿನೇಶ ಸಂಗತಿ.
* ಜೀನೇಂದ್ರಮಾಲೆ, ನರಪಿಂಗಲಿ, ಸಕಲಾಗಮಸಾರ ವೃತ್ತಿ
* ಚಾವುಂಡರಾಯ ಪುರಾಣ, ಶಾಂತಿಪುರಾಣ
* ಧರ್ಮಾಮೃತದ ಕಥೆ
* ಸುದಮಾಶನ ಕಥೆ
* ಚಂದನಾಂಬಿಕೆಯ ಕಥೆ
* ಕೌಮುದಿ ಕಥೆ
* ಪಂಚ ಪರಮೇಷ್ಠಿಗಳ ಸ್ವರೂಪ ವ್ಯಾಖ್ಯಾನ

ಧರ್ಮಪರೀಕ್ಷೆ, ಪಂಚತಂತ್ರ, ಸಮ್ಯಕ್ತ ಕೌಮುದಿ, ಗಣಿತ, ಲೆಕ್ಕ, ನಿಘಂಟು ಮುಂತಾದ ಕೃತಿಗಳನ್ನು ಒಳಗೊಂಡ ಹಲವು ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿವೆ.

ಸಾಲಿಗ್ರಾಮದ ಬ್ರಹ್ಮಸೂರಿ ಪಂಡಿತರ ಮನೆಯಲ್ಲಿ

* ಜಿನದತ್ತ ರಾಯನ ಚರಿತ್ರೆ
* ನೇಮಿಜನೇಶ ಸಂಗತಿ

ವೈದ್ಯ, ಷೋಡಶಕ್ತಿಯೆ, ದ್ವಾದಶಾನುಪ್ರೇಕ್ಷೆ ಇತ್ಯಾದಿ ವಿಷಯಕ್ಕೆ ಸಂಬಂಧಿಸಿದ ಹಸ್ತಪ್ರತಿಗಳು ಇವರ ಒಡೆತನದಲ್ಲಿವೆ.

ಕೆ.ಪಿ. ನಂಜುಂಡಾರಾಧ್ಯರು

ಇವರು ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ವಾಸವಾಗಿದ್ದರು. ಇವರ ಸಂಗ್ರಹದಲ್ಲಿ ಮನ್ಮಥವಿಜಯ, ಹಲವು ಗಾದೆಗಳು, ಆರಾಧ್ಯ ಕೈಪಿಡಿ, ಶ್ರೀಕರಭಿಕ್ಷ್ಯ ಮುಂತಾದ ವಿಷಯಗಳನ್ನು ಹೊಂದಿರುವ ಹಸ್ತಪ್ರತಿಗಳು ಇವೆ.

ಚಿಕ್ಕ ಕಬ್ಬೂರ ಲಿಂಗಪ್ಪ ಶರಣ

ಇವರು ಶಿವಮೊಗ್ಗ ಜಿಲ್ಲೆಯ ಸೊರಬದ ತಾಲ್ಲೂಕಿನವರು. ಇವರು ಆಸಕ್ತಿಯಿಂದ ಸಂಗ್ರಸಿರುವ ಹಸ್ತಪ್ರತಿಗಳು ಈ ರೀತಿ ಇವೆ.

* ಪುರಾತನ ದೇವಿಯರ ವಾರ್ಧಕ
* ಗುರುಸ್ತೋತ್ರ ತ್ರಿವಿಧಿ
* ಸಿದ್ಧೇಶ್ವರನ ವಚನ
* ಮುಕ್ತ್ಯಾಂಗನಾ ಕಂಠಮಾಲೆ

ಗುರು ಶಂಕರೇಶ್ವರ ಶತಕ ಇತ್ಯಾದಿ ಸಾಹಿತ್ಯ ಪ್ರಧಾನವಾದ ಕೆಲವು ಕೃತಿಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿವೆ.

ಎಸ್.ಪಿ. ಪಾರ್ಶ್ವನಾಥ

ಇವರು ಮೈಸೂರು ಜಿಲ್ಲೆಯ ಸಾಲಿಗ್ರಾಮವರು, ಇವರು ಮೂಲತಃ ಕೃಷಿ ಕುಟುಂಬದಿಂದ ಬಂದವರು. ಇವರು ಆಸಕ್ತಿಯಿಂದ ಹವ್ಯಾಸಕ್ಕಾಗಿ ಸಂಗ್ರಹಿಸಿದ ವಿವಿಧ ವಿಷಯಗಳಿಗೆ ಸಂಬಂಧಿಸಿದ ಹಲವು ಹಸ್ತಪ್ರತಿಗಳು ಇವರಲ್ಲಿವೆ.

* ಆಗಮಸಾರ
* ಕರ್ಮಸಂಹಾರ ಚರಿತೆ
* ನಾಗಕುಮಾರ ಚರಿತೆ
* ಚಾವುಂಡರಾಯ ಪುರಾಣ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ಇವರ ಬಳಿ ಇವೆ.

ಶಾನುಭೋಗ ನಾಗೇಶರಾಯರು

ಇವರು ಮೂಲತಃ ತುಮಕೂರಿನಲ್ಲಿ ನೆಲೆಸಿದ್ದಾರೆ. ಇವರ ಸಂಗ್ರಹದಲ್ಲಿ ಕನ್ನಡ ಲಿಪಿ ತೆಲುಗು ಭಾಷೆಯ ಹಸ್ತಪ್ರತಿ ಇದರ ಜೊತೆಗೆ ವಾಲ್ಮೀಕಿ ರಾಮಾಯಣದ ಕಾಗದದ ಪ್ರತಿಗಳಿವೆ.

ಬಿ.ನಂ. ಚಂದ್ರಯ್ಯ

ಇವರು ತುಮಕೂರಿನ ಕೆಸ್ತೂರಿನ ಗ್ರಾಮದಲ್ಲಿ ನೆಲೆಸಿದ್ದರು. ಇವರ ಸಂಗ್ರಹದಲ್ಲಿ ಏಕೋತ್ತರಶತಸ್ಥಲ ಮತ್ತು ಇತರ ಕೃತಿಗಳು

ಅದೇ ಕಟ್ಟಿನಲ್ಲಿ ಮೂರು ಬಿಡಿಗರಿಗಳಲ್ಲಿ ಚನ್ನಬಸವಣ್ಣನವರ ವಚನ ಹಾಗೂ ನಾಲ್ಕು ಬಿಡಿಗರಿಗಳಲ್ಲಿ ವರ್ತೇಸೋಮಣ್ಣನ ಪಂಚೀಕರಣ ಕೃತಿಗೆ ಸಂಬಂಧಿಸಿದ ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿವೆ.

ತುಮಕೂರು ತಾಲ್ಲೂಕು ಸೊರೆಕುಂಟೆ ಹತ್ತಿರ ಇರುವ ಮಲ್ಲೇನಹಳ್ಳಿ ಚಿಕ್ಕ ಕಣ್ಣಾಪಾಜಿ ಅರಸರು(ಕೋರಾ ಪಾಳೇಗಾರ ವಂಶಸ್ಥರು) ಇವರ ಸಂಗ್ರಹದಲ್ಲಿ

* ಶರಣ ಲೀಲಾಮೃತ
* ನಿಜಲಿಂಗಶತಕ
* ಧನ್ವಂತರಿ ನಿಘಂಟು
* ವೈದ್ಯಸಾರ ಸಂಗ್ರಹ
* ಹಾವು–ಚೇಳಿಗೆ ಮಂತ್ರ
* ಕಾಲಜ್ಞಾನ ಪಾರ್ವತಿಕಲ್ಪಂ
* ಪಂಚೀಕರಣ, ಅಕ್ಕನ ಸೃಷ್ಟಿವಚನಗಳು

ಇತ್ಯಾದಿ ಕೃತಿಗಳನ್ನು ಒಳಗೊಂಡಿರುವ ವಿವಿಧ ಬಗೆಯ ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿವೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹುಣಸಮಾರನಹಳ್ಳಿ ಮಠದಲ್ಲಿ ಸಂಗ್ರಹಗೊಂಡಿರುವ ಹಸ್ತಪ್ರತಿಗಳ ವಿವರ ಈ ಕೆಳಗಿನಂತೆ ಇವೆ.

* ಪ್ರಭುಚರಿತ್ರೆ, ಯಕ್ಷಗಾನ
* ಸುಜ್ಞಾನ ಬೋಧೆ
* ಬತ್ತೀಸ ಪುತ್ಥಳಿ ಕಥೆ
* ಪ್ರಭುಲಿಂಗಲೀಲೆ
* ಕರ್ಣಾಟ ಭಾರತ ಕಥಾಮಂಜರಿ
* ಶಿವಾಧಿಕ್ಯ ಶಿಖಾಮಣಿ

ಇತ್ಯಾದಿ ಹಲವು ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿರುವುದು ಕಂಡುಬಂದಿದೆ.

ಗುಬ್ಬಿ ನಗರದ ಬ್ರಾಹ್ಮಣರ ಬೀದಿಯ ದಿವಂಗತ ವಾಸುದೇವರಾವ್ ಅವರ ಸಂಗ್ರಹದಲ್ಲಿರುವ ಹಸ್ತಪ್ರತಿಗಳು

* ವಿಷ್ಣುಸ್ತೋತ್ರ
* ರಾಮಾಯಣ, ಮಹಾಭಾರತ ಅಸಮಗ್ರ
* ಅಧ್ಯಾತ್ಮರಾಮಾಯಣ

ಹೀಗೆ ಹಲವು ಅಸಮಗ್ರ ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿವೆ.

ನಿಟ್ಟೂರಿನ ಜೈನ ಶ್ರಾವಕರ ಮನೆಯಲ್ಲಿ ನೋಂಪಿಗಳ ಕಥೆಗೆ ಸಂಬಂಧಿಸಿದ ಹಸ್ತಪ್ರತಿ ಇವರ ಸಂಗ್ರಹದಲ್ಲಿದೆ.

ದಾನಿವಾಸ ವೀರಭದ್ರಸ್ವಾಮಿ ಹಾಗೂ **ನಿಟ್ಟೂರು ಬಸವೇಶ್ವರಸ್ವಾಮಿ** ಅರ್ಚಕರು. ಇವರು **ಚಿಕ್ಕಮಗಳೂರು** ಜಿಲ್ಲೆಯ ನರಸಿಂಹ ರಾಜಾಪುರದ ನಿವಾಸಿಗಳಾಗಿದ್ದರು. ಇವರ ಮನೆಯಲ್ಲಿ ಬಹಳ ಶಿಥಿಲವಾದ ಪ್ರಭುಲಿಂಗಲೀಲೆ ಹಸ್ತಪ್ರತಿ ಕಂಡುಬಂದಿದೆ.

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ಆದಿಯೂರು ವೈದ್ಯೇಶ್ವರ ಅರ್ಚಕರ ಸಂಗ್ರಹದಲ್ಲಿ ಹಲವು ಹಸ್ತಪ್ರತಿಗಳಿವೆ.

* ಶರಣ ಲೀಲಾಮೃತ

* ಸಕಲಾಗಮ ಶಿಖಾಮಣಿ

* ದೀಪದಕಲಿ ಸಾಂಗತ್ಯ

* ದೀಕ್ಷಾ ವಿಧಿ

* ಇತ್ಯಾದಿ ಹಲವು ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ಇವರಲ್ಲಿವೆ.

ತಿಪಟೂರು ಪಲ್ಲಾಗಟ್ಟ ಅಡಿವೆಪ್ಪನವರ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ **ಸದಾಶಿವಯ್ಯನವರ** ಸಂಗ್ರಹದಲ್ಲಿ

* ರಾಘವಾಂಕ ವಿರಚಿತ ಸಿದ್ಧರಾಮ ಚರಿತಂ

* ಬೆಂಗಳೂರು ಜಿಲ್ಲೆಯ ನೆಲಮಂಗಲ ನಿವಾಸಿ **ಲಿಂ. ಕಪ್ಪಂಣಶಾಸ್ತ್ರಿಗಳ** ಪುತ್ರ **ತೀ.ಲಿಂ. ಸದಾಶಿವಯ್ಯನವರ** ಸಂಗ್ರಹದಲ್ಲಿ

* ಶರಣ ಲೀಲಾಮೃತ, ಜೈಮಿನಿ ಭಾರತ, ಸ.ಪ್ರಮಾಣ ಚೋಳರೇಣುಕ ಸಂವಾದ ಶಿವಾಧಿಕ್ಯ ರೇಖಾಮಣಿ

* ವೀರಶೈವ ಆಚಾರ ದೀಪಿಕಾ, ಷಣ್ಮುಖಸ್ವಾಮಿಗಳು ನಿರೂಪಿಸಿದ ಅಖಂಡೇಶ್ವರ ವಚನ. ಶಿವಭಕ್ತಾದಿಕ್ಕನ ರತ್ನಾವಳಿ, ಜೈಮಿನಿ ಭಾರತ, ನಾನಾಥರತ್ನಮಾಲಾ, ಮಹಾಭಾರತ, ಸಾರಂಗ ಕಥನ ಕಥೆ, ಲವಕುಶರ ಕಥೆ, ಬಿಡಿಪದಗಳು, ಗಣಭಾಷ್ಯ ರತ್ನಮಾಲೆ, ಶರಣ ಲೀಲಾಮೃತ ಹೀಗೆ ಹಲವು ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿವೆ.

ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲ್ಲೂಕು ಕಂಬಾರು ಗ್ರಾಮದ ಹಿರಿಯ ವಿದ್ವಾಂಸರಾದ **ಕಂಬಾಳು ಸಿದ್ಧಲಿಂಗಯ್ಯನವರ** ಸಂಗ್ರಹದಲ್ಲಿ ಶರಣ ಲೀಲಾಮೃತ, ಪ್ರಭುಚರಿತ್ರೆ, ದೀಪದಕಲಿ ಪುಸ್ತಕ, ವಾತುಲಾಗಮ ಟೀಕು, ಜೀತಾಳ ಪಂಚತಂತ್ರಕಥೆ, ಗಿರಿಜಾಕಲ್ಯಾಣದ ನುಡಿ, ನೀಲಮ್ಮನವರ ನಾಂದ್ಯ, ಚೋರಕಥೆ, ಬಸವಣ್ಣನವರ ವಚನ, ತೋಂಟದ ಸಿದ್ಧಲಿಂಗೇಶ್ವರರ ವಚನ, ಭೈರವೇಶ್ವರ ಕಥಾಸೂತ್ರ, ಸುಭದ್ರಾಕಲ್ಯಾಣ, ಪ್ರಭುಲಿಂಗಲೀಲೆ, ಕುಮಾರವ್ಯಾಸ ಭಾರತ, ಪಾಂಡುವಿಜಯ, ಹನುಮಂತ ವಿಜಯ, ನಂಜುಂಡೇಶ್ವರ ಶತಕದ ಕಾಗದದ ಹಸ್ತಪ್ರತಿ ಹಾಗೂ ಪ್ರಾಚೀನ ನಾಣ್ಯಗಳು, ತಾಮ್ರ ಪತ್ರಗಳು ಇವರ ಸಂಗ್ರಹದಲ್ಲಿವೆ.

ಶಿವಮೊಗ್ಗ ಜಿಲ್ಲೆಯ ಬಿದಲೂರು ಕಾರ್ಗಲ್ಲು ಅಂಚೆ ಜೈನ ಮನೆತನದವರ ಸಂಗ್ರಹದಲ್ಲಿರುವ ಓಲೆಗರಿ ಕಟ್ಟಿನಲ್ಲಿ ಅಮರಕೋಶ, ನಾಮಲಿಂಗಾನುಶಾಸನ, ಪುರಂದರಹಾಡು, ಕೃಷ್ಣಾರ್ಜುನರ ಕಾಳಗ, ನೀತಿಪದ ಪದ್ಯ ಸುಜನೋಕಂಪ ಬೊಪ್ಪಣ್ಣ ಪಂಡಿತ, ಸುಭಾಷಿತ ಗ್ರಂಥ, ವಿಭೂತಿದಂಡೆ, ಸೋಮೇಶ್ವರ ಶತಕ ಹೀಗೆ ಹಲವು ಕೃತಿಗಳನ್ನು ಒಳಗೊಂಡ ಹಸ್ತಪ್ರತಿ ಇವರ ಸಂಗ್ರಹದಲ್ಲಿವೆ.

ಬೆಂಗಳೂರು ನಿವಾಸಿ ದೇವರಕೊಂಡಾರೆಡ್ಡಿಯವರ ಸಂಗ್ರಹದಲ್ಲಿ ಕೆಳದಿ ಬಸವರಾಜ ವಿರಚಿತ ಕಾಳಿಕಾ ಕಾಂಡದ ಹಸ್ತಪ್ರತಿ ಇವರ ಸಂಗ್ರಹದಲಿದೆ. ಈ ಹಸ್ತಪ್ರತಿಯನ್ನು ಅನುವಾದಿಸಿದ್ದಾರೆ. ೧೭೩ ಅಧ್ಯಾಯ ೭೧೫೦ ಸಮಾನವಾಗಿದ್ದು ಇನ್ನೂ ಹಲವು ಸಂಧಿಗಳಷ್ಟು ಭಾಗ ಶಿಥಿಲವಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾಗಿದ್ದ ಎನ್. ಬಸವಾರಾಧ್ಯರ ಸಂಗ್ರಹದಲ್ಲಿ ಕರಿಯ ಸಿದ್ಧೇಶ್ವರ ರಚಿಸಿದ ಪ್ರಭೋದ ಚಂದ್ರೋದಯ(೧೧ ಸಂಧಿ, ಪದ್ಯ ೧೧೯೨) ಮತ್ತು ೧೯ನೆಯ ಶತಮಾನದಲ್ಲಿ ರಚನೆಯಾದ ಕನ್ನಡ ಕಿರಾತಾರ್ಜುನೀಯ ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿವೆ.

ಕೊನೆಟಿಪ್ಪಣಿಗಳು

೧. ಬೇನಾಳ ಎಚ್.ಎಸ್., ೨೦೦೨, ಗ್ರಂಥಾಲಯಗಳು ಮತ್ತು ಗಣಕೀಕರಣ ನಡೆದುಬಂದ ದಾರಿ, ಪುಟ ೧೪೯.

೨. ರಾಜೇಗೌಡ ಹ.ಕಾ., ೨೦೦೮, ಸಾಹಿತ್ಯಶೋಧ, 'ಕರ್ನಾಟಕದಲ್ಲಿ ಹಸ್ತಪ್ರತಿ ಗ್ರಂಥಾಲಯಗಳು' ಪುಟ ೧೯೧.

೩. ರಾಜೇಗೌಡ ಹ.ಕಾ., ೨೦೦೮, ಸಾಹಿತ್ಯಶೋಧ, 'ಸಂಶೋಧನಾ ಲೇಖನಗಳ ಸಂಗ್ರಹ' ಪ್ರಕಟಣೆ, ಪುಟ ೧೯೨.

೪. ಅದೇ, ಪುಟ ೧೯೬.

೫. ರವೀಂದ್ರನಾಥ ಕೆ., ಎಫ್.ಟಿ.ಹಳ್ಳಿಕೇರಿ, ಹಸ್ತಪ್ರತಿ ವ್ಯಾಸಂಗ-೫, ಪುಟ ೬೩.

೬. ಅದೇ, ಪುಟ ೭೨.

೭. ಗುಂಜಾಳ ಎಸ್.ಆರ್., ಶ್ರೀ ಶೈಲ ಎಸ್.ಪಾಟೀಲ, ೨೦೦೨, 'ದಕ್ಷಿಣ ಭಾರತದಲ್ಲಿಯ ಹಸ್ತಪ್ರತಿ ಗ್ರಂಥಾಲಯಗಳು', ಪುಟ ೭೬.

೮. ನಾರಾಯಣ ಪ್ರಸಾದ್ ಕೆ.ಜಿ., ೨೦೧೨, ವಿವರಣಾತ್ಮಕ ಹಸ್ತಪ್ರತಿ ಸೂಚಿ, ಪುಟ

೯. ಸಾಹಿತ್ಯಕೋಶ ಸಂಶೋಧನಾ ಲೇಖನಗಳ

೧೦. ರಾಜೇಗೌಡ ಹ.ಕ., ೨೦೦೮, ಸೂಚಿ ಸಂಪುಟಗಳು-೧-೨-೩-೪-೫, ಪುಟ ೨೦೩.

೧೧. ರಾಜೇಗೌಡ ಹ.ಕ., ೨೦೦೮, ಸಾಹಿತ್ಯ ಕೋಶ, ಸಂಶೋಧನಾ ಲೇಖನಗಳ ಸಂಗ್ರಹ ಪ್ರಕಟಣೆ, ಪುಟ ೨೦೫.

೧೨. ಹಳ್ಳಿಕೇರಿ ಎಫ್.ಟಿ., ೨೦೧೪, ಕಂಠಪತ್ರ-೨, ಪುಟ ೧೦೩.

೧೩. ಅದೇ, ಪುಟ ೧೦೩.

೧೪. ಅದೇ, ಪುಟ ೧೦೩.

೧೫. ಅದೇ, ಪುಟ ೧೦೪.

೧೬. ಕಲಬುರ್ಗಿ ಎಂ.ಎಂ., ೧೯೯೩, ಕನ್ನಡ ಹಸ್ತಪ್ರತಿಶಾಸ್ತ್ರ, ಪುಟ ೪೩.

೧೭. ಅದೇ, ಪುಟ ೪೪.

೧೮. ಅದೇ, ಪುಟ ೪೪.

೧೯. ಅದೇ, ಪುಟ ೪೪.

೨೦. ಅದೇ, ಪುಟ ೪೪.

೨೧. ಅದೇ, ಪುಟ ೪೪.

೨೨. ಅದೇ, ಪುಟ ೪೫.

೨೩. ಹಳ್ಳಿಕೇರಿ ಎಫ್.ಟಿ., ೨೦೧೪, ಕಂಠ ಪತ್ರ–೨, ಪುಟ ೧೦೬.

೨೪. ರವೀಂದ್ರನಾಥ ಕೆ. ಹಾಗೂ ಹಳ್ಳಿಕೇರಿ ಎಫ್.ಟಿ., ೨೦೦೨, ಹಸ್ತಪ್ರತಿ ವ್ಯಾಸಂಗ–೨, ಪುಟ ೮೬.

೨೫. ಹಳ್ಳಿಕೇರಿ ಎಫ್.ಟಿ., ೨೦೧೪, ಕಂಠ ಪತ್ರ–೩, ಪುಟ ೧೦೭.

೨೬. ಕಲಬುರ್ಗಿ ಎಂ.ಎಂ., ೨೦೧೦, ಕನ್ನಡ ಹಸ್ತಪ್ರತಿಶಾಸ್ತ್ರ, ಪುಟ ೪೬.

೨೭. ಅದೇ, ಪುಟ

೨೮. ಹಳ್ಳಿಕೇರಿ ಎಫ್.ಟಿ., ೨೦೧೪, ಕಂಠಪತ್ರ –೨, ಪುಟ ೧೧೨.

೨೯. ಅದೇ, ಪುಟ ೧೧೨.

೩೦. ಅದೇ, ಪುಟ ೧೧೯.

೩೧. ಹಿರೇಮಠ ಬಿ.ಕೆ., ೧೯೯೨, ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ, ಪುಟ ೧೩೫.

೩೨. ಅದೇ, ಪುಟ ೧೨೭.

೩೩. ನಾವಡ ಎ.ವಿ. ಹಾಗೂ ಅಂಗಡಿ ಎಸ್.ಎಸ್., ೨೦೦೨, ಹಸ್ತಪ್ರತಿ ವ್ಯಾಸಂಗ–೧, ಪುಟ ೧೦೪.

೩೪. ಅದೇ, ಪುಟ ೧೦೪.

೩೫. ಅದೇ, ಪುಟ ೧೦೪.

೩೬. ಅದೇ, ಪುಟ ೧೦೫.

* * *

ಅಧ್ಯಾಯ ನಾಲ್ಕು

ಹಸ್ತಪ್ರತಿ ಭಂಡಾರಗಳಲ್ಲಿ ಸಂರಕ್ಷಣೆ ಪ್ರಕ್ರಿಯೆ

೪.೧. ಹಸ್ತಪ್ರತಿಗಳಿಗೆ ಒದಗುವ ಅಪಾಯಗಳು

೪.೨. ಹಸ್ತಪ್ರತಿಗಳ ಪ್ರಾಥಮಿಕ ಸಂರಕ್ಷಣೆ

೪.೨.೧. ಪೂರ್ವಸಿದ್ಧತೆ

೪.೨.೨. ದಾಖಲೀಕರಣ(ರಿಜಿಸ್ಟರ್)

೪.೨.೩. ದಾನಿಗಳ ಸಂಪೂರ್ಣ ವಿವರಣೆ

೪.೨.೪. ಜೋಡಣೆ

೪.೨.೫. ನಿರಂತರ ಉಪಚಾರ

೪.೨.೬. ರಸಾಯನಿಕ ಪ್ರಧೂಮ್ನಕಾರ್ಯ

೪.೨.೭. ಬಳಕೆ ವಿಧಾನ

೪.೩. ಪ್ರಾಚೀನ ಸಂರಕ್ಷಣೆ

೪.೩.೧. ರಕ್ಷಾಕವಚ

೪.೩.೨. ಅರಿವೆ ಸುತ್ತುವುದು

೪.೩.೩. ಸಂದೂಕ(ಪೆಟ್ಟಿಗೆ)

೪.೩.೪. ಹೊಗೆ ಗೂಡು

೪.೩.೫. ಜಗಲಿ ಮೇಲಿರಿಸುವುದು/ಸರಸ್ವತಿ ಪೂಜೆ

೪.೪. ಆಧುನಿಕ ಸಂರಕ್ಷಣೆ

೪.೪.೧. ಮೈಕ್ರೋಫಿಲ್ಮಿಂಗ್

೪.೪.೨. ಕಂಪ್ಯೂಟರ್

೪.೪.೩. ಸ್ಕ್ಯಾನಿಂಗ್

೪.೪.೪. ಓ.ಸಿ.ಆರ್.

೪.೪.೫. ಝೆರಾಕ್ಸ್ ಯಂತ್ರ (ನೆರಳಚ್ಚು)

೪.೪.೬. ಫೋಟೋಸಾಫ್
೪.೪.೭. ವಿಡಿಯೋಗ್ರಫಿ/ಹ್ಯಾಂಡಿ ಕ್ಯಾಂ
೪.೪.೮. ಎಲೆಕ್ಟ್ರಾನಿಕ್ ದಾಖಲೀಕರಣ
೪.೪.೯. ನಕಲು ಕಾರ್ಯ
೪.೪.೧೦. ಸೂಚೀಕರಣ
೪.೪.೧೧. ಆನ್‌ಲೈನ್ ಅಧ್ಯಯನ

ಅಧ್ಯಾಯ ನಾಲ್ಕು

ಹಸ್ತಪ್ರತಿ ಭಂಡಾರಗಳಲ್ಲಿ ಸಂರಕ್ಷಣೆ ಪ್ರಕ್ರಿಯೆ

ನಿಸರ್ಗದಿಂದ ಮನುಷ್ಯ ಅಪಾರವಾದ ಜ್ಞಾನರಾಶಿಯನ್ನು ಪಡೆದಿದ್ದಾನೆ. ಅಲ್ಲದೇ ಸಾವಿರಾರು ವರ್ಷಗಳಿಂದ ಈ ನಿಸರ್ಗದ ರಹಸ್ಯವನ್ನು ಭೇದಿಸುತ್ತಲೇ ಬಂದಿದ್ದಾನೆ. ಇನ್ನೂ ಅದು ಮುಗಿದಿಲ್ಲ; ಮುಗಿಯುವಂಥದೂ ಅಲ್ಲ, ತಲೆಮಾರಿನಿಂದ ತಲೆಮಾರಿಗೆ ಅಪಾರವಾದ ಜ್ಞಾನಸಂಪತ್ತು ಬೆಳೆದಿದೆ. ಈ ಜ್ಞಾನವನ್ನು ಗಳಿಸಲು ಈಗಿನ ಸಂದರ್ಭಕ್ಕೆ ಅನುಕೂಲತೆಗಳು ಹೆಚ್ಚಾಗಿವೆ. ಆದ್ದರಿಂದ ಗಳಿಸಿದ ಜ್ಞಾನ ಸ್ಥಾಯಿಯಾಗಿ ನಿಲ್ಲುವುದು ಸಾಧ್ಯವಿಲ್ಲ. ಶ್ರಮದಿಂದ ಗಳಿಸಿದ್ದು ಮಾತ್ರ ದೀರ್ಘಕಾಲ ನಿಲ್ಲುವಂಥದು. ಭಾರತ ದೇಶ ಪ್ರಾಚೀನ ಕಾಲದಿಂದಲೂ ಜ್ಞಾನಪೀಠವೆನಿಸಿದೆ. ದೇಶ ವಿದೇಶಗಳಿಂದ ಜನರು ಬಂದು, ಇಲ್ಲಿಯೇ ನೆಲೆಯಾಗಿ ನಿಂತು, ಇಲ್ಲಿಂದಲೇ ಜ್ಞಾನ ಸಂಪತ್ತನ್ನು ಗಳಿಸಿಕೊಂಡು ಹೋಗುತ್ತಿದ್ದರು. ಆಗ ಪ್ರಾಚೀನ ಕಾಲದಲ್ಲಿ ಅನೇಕ ವಿಶ್ವವಿದ್ಯಾನಿಲಯಗಳು ಜೊತೆಗೆ ಬೃಹತ್ ಗ್ರಂಥಾಲಯಗಳು ಇದ್ದವು. ಇದರಲ್ಲಿ ಆಯಾ ಶಾಸ್ತ್ರಗಳಿಗೆ ಸಂಬಂಧಿಸಿದ ಗ್ರಂಥಗಳು ತಾಳೆಗರಿಯಲ್ಲೋ, ಭೂರ್ಜಪತ್ರಗಳಲ್ಲೋ ಲಿಖಿತವಾಗಿರುತ್ತಿದ್ದವು. ಅವುಗಳಲ್ಲಿ ಅಪೂರ್ವವಾದ ದಾಖಲೆಗಳೂ ಇರುತ್ತಿದ್ದವು. ಇಂತಹ ಎಷ್ಟೋ ಗ್ರಂಥಗಳು ಈಗ ಮಣ್ಣು ಪಾಲಾಗಿವೆ. ಇಂತಹ ಪ್ರಾಚೀನರ ಅಮೂಲ್ಯವಾದ ಜ್ಞಾನರಾಶಿಯನ್ನು ಸಂರಕ್ಷಿಸುವುದು ಇಂದು ಮಹತ್ವದ ಸಂಗತಿಯಾಗಿದೆ.

ಹೀಗೆ ಒಂದು ಪ್ರದೇಶದ ಜನಾಂಗೀಯ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನಗಳ ಸಂದರ್ಭದಲ್ಲಿ ಪ್ರಾಚೀನ 'ಅವಶೇಷಗಳ ವಸ್ತುಸಂಗ್ರಹಾಲಯ' ಹಾಗೂ 'ಹಸ್ತಪ್ರತಿಗಳ ಗ್ರಂಥಾಲಯ' ಅತಿ ಮಹತ್ವದ ಪಾತ್ರ ವಹಿಸುತ್ತವೆ. ಆದಕಾರಣ ಪ್ರಾಚೀನ ಕಾಲದ ಕೈ ಬರವಣಿಗೆಯ ಅಮೂಲ್ಯ ಸಾಧನಗಳಾದ 'ಹಸ್ತಪ್ರತಿಗಳ' ಸಿದ್ಧತೆ ಮತ್ತು ಬರವಣಿಗೆ ಅಂದು ಅಷ್ಟು ಸುಲಭ ಸಾಧ್ಯವಾಗುತ್ತಿರಲಿಲ್ಲ. ಅದು ಹೆಚ್ಚು ಶ್ರಮವನ್ನು ಬಯಸುತ್ತಿತ್ತು.

ಹಸ್ತಪ್ರತಿ ತಯಾರಕರು ಹಾಗೂ ಲಿಪಿಕಾರರು ಇವುಗಳನ್ನು ತಯಾರಿಸಲು ತಿಂಗಳಾನುಗಟ್ಟಲೆ ಶ್ರಮಪಡುತ್ತಿದ್ದರು. ಡಾ. ವೀರೇಶ ಬಡಿಗೇರ ಅವರು ಹೇಳುವಂತೆ "ದೇಹ ಮತ್ತು ಮನಸ್ಸುಗಳ

ಏಕಾಗ್ರತೆಯಿಂದ ನಡೆಯುವ ಬರವಣಿಗೆಯನ್ನು ಇಂದು ನಾಗರಿಕತೆ ಬರಡಾಗಿಸುತ್ತಿದೆ. ಕನ್ನಡ ಲಿಪಿ, ಲಿಪಿಕಾರರ ಪರಂಪರೆಗಳಂತಹ ಸಾಂಸ್ಕೃತಿಕ ಭಿನ್ನತೆಗಳನ್ನು ಇಂದು ಉಪೇಕ್ಷಿಸಲಾಗುತ್ತಿದೆ. ಇಂದು ಸಾಹಿತ್ಯ ಸಂಸ್ಕೃತಿ ಆಳುವವರೊಂದಿಗೆ ಅನುಸಂಧಾನಗೊಳ್ಳುತ್ತಿದೆ. ವ್ಯಕ್ತಿಪ್ರತಿಷ್ಠೆ ಮತ್ತು ಸಾಹಿತ್ಯಿಕ ರಾಜಕಾರಣ ತಾಂಡವಾಡುತ್ತಿದೆ"[೧] ಎಂಬುದು ಸಮರ್ಥನೀಯ. ಓದು ಬರಹ ಅಭ್ಯಾಸ ಆಸ್ವಾದ, ಸಂವಹನದಂತಹ ಬಹುಮುಖ ಮಜಲುಗಳಲ್ಲಿ ಸಂಸ್ಕೃತಿನಿಷ್ಠವಾಗಿ ವ್ಯವಹರಿಸುತ್ತಿದ್ದು ತಿಳುವಳಿಕೆ ಯಾಂತ್ರೀಕೃತ ಸಾಹಿತ್ಯ ಸಂಸ್ಕೃತಿಗಳ ಏಕಸೂತ್ರೀಕರಣದಿಂದಾಗಿ ತನ್ನ ಬಹುಸಾಧ್ಯತೆಗಳನ್ನು ಕಳೆದುಕೊಳ್ಳುತ್ತಿದೆ. ಇಂಥ ವಿನಾಶಕಾರಿ ಜ್ಞಾನಮಾದರಿಗಳು ಉಸಿರುಗಟ್ಟಿ ಸಾಯದಂತೆ ಸಂರಕ್ಷಿಸಿಕೊಳ್ಳುವ ಜರೂರು ಇದೆ. ಅದಕ್ಕೆ ಆಧುನಿಕ ವಿದ್ಯಮಾನಗಳೊಡನೆ ಪ್ರತಿಸ್ಪರ್ಧಿಯಾಗಿ ನಿಲ್ಲುವ ತಾಕತ್ತನ್ನು ನಾವಿಂದು ತುಂಬಬೇಕಾಗಿದೆ, ಉಪಯುಕ್ತಗೊಳಿಸಬೇಕಿದೆ ಎನ್ನುವುದು ವಾಸ್ತವ ಸಂಗತಿಯಾಗಿದೆ. ಪ್ರಸ್ತುತ ಆಧುನಿಕ ಶಿಕ್ಷಣ, ವೈಜ್ಞಾನಿಕ ಬದಲಾವಣೆಯಿಂದಾಗಿ ಇಂಥ ಹಸ್ತಪ್ರತಿಗಳನ್ನು ಕೀಳು ಭಾವನೆಯಿಂದ ಮೂಲೆಗುಂಪು ಮಾಡಿರುವುದನ್ನು ನಾನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹಲವಾರು ಕಡೆಗಳಲ್ಲಿ ಗಮನಿಸಿದ್ದೇನೆ.

ಭಾರತ ದೇಶದ ಇತಿಹಾಸವನ್ನು ನೋಡಿದರೆ ಅನೇಕ ಅತ್ಯುತ್ತಮ ಗ್ರಂಥರಾಶಿಗಳು ಮಣ್ಣು ಪಾಲಾಗಿರುವುದು ತಿಳಿದುಬರುತ್ತದೆ. ಕನ್ನಡ ಸಾಹಿತ್ಯದಲ್ಲಿ ಭುವನೈಕ ರಾಮಾಭ್ಯುದಯದಂತಹ ಹಲವಾರು ಮಹತ್ವದ ಗ್ರಂಥಗಳು ಇಂದು ನಮಗೆ ದೊರೆಯದಾಗಿವೆ. ಇಂತಹ ಸ್ಥಿತಿ ಮತ್ತೆ ಬರಬಾರದೆಂಬ ಉತ್ಕಟೇಚ್ಛೆ ಇಂದು ಎಲ್ಲರಿಗೂ ಉಂಟಾಗಿದೆ.

ಹೀಗಿದ್ದರೂ ಅತ್ಯಂತ ಉಪಯುಕ್ತವಾದ ಅನೇಕ ಹಳೆಯ ಗ್ರಂಥಗಳು ಇಂದು ಕೂಡ ಹುಳುಗಳ, ಕೆರೆ, ನದಿಗಳ ಪಾಲೂ ಆಗುತ್ತಿವೆ. ಇದಕ್ಕೆ ಪ್ರಮುಖ ಕಾರಣ ನಮ್ಮ ಜನಸಮುದಾಯಗಳು. ನಮ್ಮ ಜನರೇ ಹಲವು ಓಲೆ ಗ್ರಂಥಗಳನ್ನು ಕಟ್ಟಿಗೆಗಳಾಗಿ ಉಪಯೋಗಿಸಿರುವುದು ತಿಳಿದುಬಂದಿದೆ. ಇಂದಿಗೂ ಹಲವು ಮನೆಗಳಲ್ಲಿ ಓಲೆಕಟ್ಟುಗಳು ಪೂಜಾಗೃಹವನ್ನು ಸೇರಿ ಹುಳುಗಳ ಆಹಾರವಾಗುತ್ತಿರುವುದು ಅತ್ಯಂತ ಶೋಚನೀಯವಾಗಿದೆ. ಇದಕ್ಕೆ ಕಾರಣ ಅವರಲ್ಲಿ ಬೆಳೆದುಬಂದಿರುವ ಅಂಧಶ್ರದ್ಧೆ. ಇದು ಪೂರ್ವಜರಿಂದ ಬಂದ ಪವಿತ್ರ ಆಸ್ತಿ, ಇವುಗಳನ್ನು ಹೊರಗೆ ಕೊಡಕೂಡದೆಂಬ ಅಂಶ ಅವರನ್ನು ಅಂಧಕಾರದಲ್ಲಿಟ್ಟಿದೆ. ಈ ಅಂಧಶ್ರದ್ಧೆಯು ಕಪಿಮುಷ್ಟಿಯ ಹಿಡಿತದಿಂದ ಬಿಡಿಸಿಕೊಳ್ಳಲಾರದ ಅವರು, ಅಪಾರ ಜ್ಞಾನರಾಶಿಯನ್ನೇ ತಮ್ಮ ಹಿಡಿತಕ್ಕೆ ಸಿಕ್ಕದ ಜಿರಲೆ, ಬೆಳ್ಳಿಮೀನು (Silver Fish), ಗೆದ್ದಲು ಮೊದಲಾದ ಕ್ರಿಮಿಕೀಟಗಳ ಪಾಲಿಗೆ ಬಿಟ್ಟಿದ್ದಾರೆ. ಹಲವಾರು ದೇವಮಂದಿರಗಳಲ್ಲಿ, ಮಠಗಳಲ್ಲಿ, ಧರ್ಮಶಾಲೆಗಳಲ್ಲಿ, ಗ್ರಂಥರಾಶಿಗಳನ್ನು ಕಟ್ಟುಗಳಲ್ಲಿ ಕಟ್ಟಿ ಒಂದೆಡೆ ಒಟ್ಟಿರುವುದೂ ಉಂಟು. ಹಲವು ಗ್ರಂಥಗಳನ್ನು ಹಲವು ದಶಕಗಳವರೆಗೆ ಬಿಚ್ಚದೆ ಅವು ಅಲ್ಲಿಯೇ ಪುಡಿ ಪುಡಿಯಾಗುವಂತಹ ಸ್ಥಿತಿಯನ್ನು ತಲುಪಿವೆ. ನಮ್ಮ ಜನಸಮುದಾಯಗಳು ಯಾವಾಗ ಎಚ್ಚೆತ್ತು ಈ ಅಪಾರ, ಅಮೂಲ್ಯ ಜ್ಞಾನರಾಶಿಯನ್ನು ಕಾಪಾಡುತ್ತೇವೆಂಬ ಮಾತು ಬಿಡಿಸಲಾರದ ಕಗ್ಗಂಟಾಗಿದೆ.

ಹೀಗೆ ಪುರಾತನಕಾಲದಿಂದ ಬಂದಿರುವ ಹಳೆಯ ಗ್ರಂಥಗಳೇ ಅಲ್ಲದೆ ಪ್ರತಿ ನಿತ್ಯವೂ ಪ್ರಕಟವಾಗುತ್ತಿರುವ ಸಹಸ್ರಾರು ಗ್ರಂಥಗಳು ನಿಯತಕಾಲಿಕೆಗಳು ಮತ್ತು ದಾಖಲೆಪತ್ರಗಳನ್ನು ಕಾಪಾಡುವುದು ಇಂದು ಮಹತ್ವದಾಗಿದೆ. ಇವು ಇಂದಿನ ಜನಾಂಗಕ್ಕೆ ಮಾತ್ರವಲ್ಲದೆ ಮುಂದಿನ ಪೀಳಿಗೆಗೆ ಅತ್ಯಂತ ಅವಶ್ಯಕವಾಗಿ ಬೇಕಾದ ಬೌದ್ಧಿಕ ಸಾಮಗ್ರಿಗಳು. ಇವುಗಳನ್ನು ಕ್ರಿಮಿಕೀಟಗಳಿಂದ ಸಂರಕ್ಷಿಸಿ ಅವುಗಳ ಅಪಾರಜ್ಞಾನ ಎಲ್ಲರಿಗೂ ಒದಗುವಂತೆ ಮಾಡಬೇಕಾದರೆ ವ್ಯವಸ್ಥಿತವಾದ ಸಂರಕ್ಷಣಾಯೋಜನೆಯ ಕಾರ್ಯಕ್ರಮಗಳು ಕೈಗೊಳ್ಳಬೇಕಾದ ಅವಶ್ಯಕತೆ ಇದೆ.

ಹೀಗೆ ಸಂರಕ್ಷಿಸುವ ಬಗ್ಗೆ ಹಲವು ದೇಶಗಳು ಅಭ್ಯಾಸ ನಡೆಸಿವೆ. ಅದರ ಫಲಿತಾಂಶವಾಗಿ ಅನೇಕ ಹೊತ್ತಗೆಗಳೂ ಪ್ರಬಂಧಗಳೂ ಪ್ರಕಟವಾಗಿವೆ, ಪ್ರಕಟವಾಗುತ್ತಿವೆ. ಈ ದಿಸೆಯಲ್ಲಿ ಲೈಡನ್ ಬರ್ಗ್ ಜಾನ್, ಆಲ್ಡೇನ್ ಡಬ್ಲ್ಯೂ, ಜೆ.ಪ್ಲಮ್ಬ್ ಮೊದಲಾದ ಮಹನೀಯರು ಕೆಲಸ ಮಾಡಿದ್ದಾರೆ., ಭಾರತದಲ್ಲಿ ನ್ಯಾಷನಲ್ ಆರ್ಕಿವ್ಸ್ ಆಫ್ ಇಂಡಿಯಾ ಸಂಸ್ಥೆಯು ಕೆಲಸ ಮಾಡಿ ಅನೇಕ ಸಂರಕ್ಷಣಾ ಸಾಧನಗಳನ್ನು, ರೀತಿ ನೀತಿಗಳನ್ನು ನಿರೂಪಿಸಿದೆ.

ಹೀಗೆ 'ಕಷ್ಟೇನ ಲಿಖಿತಂ ಮಯಾ ಯತ್ನೇನ ಪರಿಪಾಲಯೇತ್'[1] ಎಂದು ನಮ್ಮ ಹಸ್ತಪ್ರತಿ ಲಿಪಿಕಾರರು ಆಗಾಗ ಹೇಳಿದುದುಂಟು. 'ಕಷ್ಟಪಟ್ಟು ಬರೆದಿದ್ದೇನೆ, ಪ್ರಯತ್ನಪೂರ್ವಕವಾಗಿ ರಕ್ಷಿಸಿರಿ' ಎಂದು ಸಮಸ್ತ ಲಿಪಿಕಾರರ ಪ್ರತಿನಿಧಿಯಾಗಿ ಈ ಲಿಪಿಕಾರರು ಇಲ್ಲಿ ಹೇಳಿದ್ದಾರೆ. ಇವರಂತೆ ಕೃತಿಕಾರರೂ ಸಹ 'ಬರೆದಂಗೆ ಬರೆದಂತೆ ಬಾಚಿಪಂ ಗುರುತರಾನಂದದಿಂದಿದರ ತಾತ್ಪರ್ಯಮಂ ವಿಸ್ತರಿಸಿ ಪೇಳ್ದವರಿಗೆ ಪರಮಪದ್ಭಕ್ತಿಯಿಂದಾದರಿಸಿ ಕೇಳ್ದಂಗೆ ಸಕಲ ಸೌಭಾಗ್ಯಗಳು ಒದಗಿ ಬರಲಿ'[2] ಎಂದು ಹಾರೈಸಿದ್ದಾರೆ. ಪ್ರತಿಗಳ ರಕ್ಷಣೆಯೆಂದರೆ ಕೃತಿಗಳ ರಕ್ಷಣೆ, ಕೃತಿಗಳ ರಕ್ಷಣೆಯೆಂದರೆ ಅಕ್ಷರ ರೂಪದಲ್ಲಿ ಸಂಸ್ಕೃತಿಯನ್ನು ಸಂರಕ್ಷಿಸುವುದಾಗಿದೆ. ಹೀಗಾಗಿ ದೇಶದ ತುಂಬಾ ಚದುರಿ ಹೋಗಿರುವ ಹಸ್ತಪ್ರತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸುವುದಷ್ಟೇ ಮುಖ್ಯವಾದುದಾಗಿದೆ. ಅವುಗಳ ವ್ಯವಸ್ಥಾಪನಾ ಹಾಗೂ ಸಂರಕ್ಷಣ ಇಂದು ಭಾರತದಲ್ಲಿ ೨೦೦ಕ್ಕೂ ಮಿಕ್ಕಿದ ಪೌರ್ವಾತ್ಯ ಸಂಶೋಧನಾ ಸಂಸ್ಥೆಗಳ ಹಾಗೂ ಇನ್ನಿತರ ಸಾಂಸ್ಕೃತಿಕ ಸಂಸ್ಥೆಗಳ ಗ್ರಂಥಾಲಯಗಳಲ್ಲಿ ೧೦ ಲಕ್ಷಕ್ಕೂ ಮಿಕ್ಕಿ ಹಸ್ತಪ್ರತಿಗಳಿವೆ ಎಂದು ಅಂದಾಜು ಮಾಡಲಾಗಿದೆ. ಹೀಗಾಗಿ ಈ ಅಪೂರ್ವ ಸಂಪತ್ತಿನ ಸಂರಕ್ಷಣೆಯ ಜವಾಬ್ದಾರಿ ಬಹುಮುಖ್ಯವಾದುದೆಂದು ಸ್ಪಷ್ಟವಾಗುತ್ತದೆ.

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ನಮಗೆ ಸ್ಪಷ್ಟವಾಗಿ ಗೋಚರಿಸುವ ಪ್ರಮುಖ ವಿಚಾರ ಗ್ರಂಥಗಳು ಮಕ್ಕಳಿದ್ದಂತೆ, ಮಕ್ಕಳನ್ನು ಎಷ್ಟು ಎಚ್ಚರಿಕೆಯಿಂದ ನೋಡಿಕೊಳ್ಳುತ್ತೇವೆಯೋ ಅಷ್ಟೇ ಆಸ್ಥೆಯಿಂದ ಗ್ರಂಥಗಳನ್ನು ಕಾಪಾಡಿಕೊಂಡು ಬಂದರೆ ಹೆಚ್ಚು ಲಾಭಕರ. ಒಳ್ಳೆಯ ಮಕ್ಕಳಿಂದ ನಾಡು–ನುಡಿಗೆ ಹೇಗೆ ಉಪಕಾರವಾಗುತ್ತದೆಯೋ ಅಂತೆಯೇ ಗ್ರಂಥಗಳಿಂದಲೂ ಲಾಭ ಲಭಿಸುತ್ತದೆ. ಉತ್ತಮ ಕಾಗದದಿಂದ ಒಳ್ಳೆಯ ಮಸಿಯಿಂದ ಅಚ್ಚುಕಟ್ಟಾದ ಹೊದಿಕೆಯಿಂದ ಸುಂದರವಾದ ಅಚ್ಚಿನಿಂದ ಕೂಡಿದ ಗ್ರಂಥವು ಸರಿಯಾಗಿ ಕಾಪಾಡಿಕೊಂಡರೆ ಎಷ್ಟೋ ಜನರ ಬಾಳನ್ನು ಬೆಳಗಿಸಬಲ್ಲುದು. ಗ್ರಂಥವನ್ನು ಹೊಂದಿದವರಿಗೆ ಮಾತ್ರವಲ್ಲದೆ, ಅವರ ಸಂಸಾರಕ್ಕೆ, ಸ್ನೇಹಿತರಿಗೆ, ಮುಂದಣ ಪೀಳಿಗೆಯವರಿಗೆ

ಉಪಯೋಗವಾಗುತ್ತವೆ. ನಮ್ಮಲ್ಲಿ ಬಹುಜನರು ಗ್ರಂಥಗಳನ್ನು ತಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗ ಎಂದು ಭಾವಿಸಬೇಕಾಗಿದೆ.

ಹಾಗೆಯೇ ಸಂಗ್ರಹಕಾರ್ಯ ಎಷ್ಟು ಶ್ರಮಪೂರ್ಣವೋ, ರಕ್ಷಣೆಯೂ ಅಷ್ಟೇ ಕಷ್ಟಸಾಧ್ಯವಾದ ಕೆಲಸವಾಗಿದೆ. ಇವುಗಳನ್ನು ಎಚ್ಚರಿಕೆಯಿಂದ ಕಾಪಾಡದಿದ್ದಲ್ಲಿ ಎಲ್ಲಿಯೋ ಹಾಳಾಗುತ್ತಿದ್ದ ಗ್ರಂಥಗಳು ಮತ್ತೆಲ್ಲಿಯೋ ನಶಿಸಿಹೋಗುವ ಸಂಭವವಿದೆ. ಆದುದರಿಂದ ವಿವಿಧ ವಸ್ತುಗಳ ಹಸ್ತಪ್ರತಿಗಳಿಗೆ ಆಯಾ ವಸ್ತುವಿಗೆ ತಕ್ಕ ಉಪಚಾರ ಮಾಡಿ ದುರಸ್ತಿ ಕಾರ್ಯಗಳನ್ನು ಕೈಗೊಂಡು ರಕ್ಷಣೆ ಮಾಡಬೇಕಾಗುತ್ತದೆ. ಹಸ್ತಪ್ರತಿಗಳ ಲಿಪಿಕಾರರು ಪುಸ್ತಕಗಳನ್ನು ಪರಿಪಾಲಿಸಿಕೊಂಡು ಬರಬೇಕೆಂಬುದನ್ನು ಹೀಗೆ ಹೇಳಿದ್ದಾರೆ

"ಪುಸ್ತಕಂ ವನಿತಾ ವಿತ್ತಂ ಪರ ಹಸ್ತಂಗತಂಗತಂ
ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾಚ ಖಂಡಶ ॥
ತೈಲಾದ್ರಕ್ಷೇಜ್ಜಲಾದ್ರಕ್ಷೇತ್ ರಕ್ಷೇಚ್ಛಿಥಿಲ ಬಂಧನಾತ್
ಮೂರ್ಖಹಸ್ತೇ ನದಾತವ್ಯಮೇವಂ ವದತಿ ಪುಸ್ತಕಂ॥"

'ಪುಸ್ತಕ ವನಿತೆ ವಿತ್ತ' ಈ ಮೂರು ಇತರರ ಕೈಗೆ ಸೇರಿದರೆ ಅವು ಹೋದ ಹಾಗೆಯೇ ಬರುವುದಿಲ್ಲ. ಒಂದು ವೇಳೆ ಅವು ಮರಳಿ ಬಂದರೆ ಜೀರ್ಣವಾಗಿ, ಭ್ರಷ್ಟವಾಗಿ ಬರುತ್ತವೆ. ಇಲ್ಲವೇ ಅರ್ಧಮರ್ಧವಾಗಿ ಬರುತ್ತವೆ. ಎಣ್ಣೆ, ನೀರುಗಳು ಸೋಂಕದ ಹಾಗೆ ಪುಸ್ತಕವನ್ನು ರಕ್ಷಿಸಬೇಕು. ಅವುಗಳನ್ನು ಸಡಿಲವಾಗಿ ಕಟ್ಟಬಾರದು. ಮೂರ್ಖರ ಕೈಗೆ ಅವನ್ನು ಕೊಡಕೂಡದು. ಹೀಗೆಂದು ಅಂದಿನ ಸಂದರ್ಭದಲ್ಲಿ ಲಿಪಿಕಾರರು ಪದೇ ಪದೇ ಎಚ್ಚರಿಸಿರುವುದನ್ನು ಸೂಕ್ಷ್ಮವಾಗಿ ಅವಲೋಕಿಸಬಹುದು. ಈ ಮಾತುಗಳಲ್ಲಿ ಬಹು ಭಾಗವನ್ನು ಒಪ್ಪವುದಾದರೂ ಬೇರೆಯವರ ಹಸ್ತಪ್ರತಿ ಕೊಡಬಾರದೆಂಬುದನ್ನು ಪ್ರಸ್ತುತ ಸಂದರ್ಭದಲ್ಲಿ ಒಪ್ಪಲು ಸಾಧ್ಯವಾಗದೇ ಇರಬಹುದು. ಹಸ್ತಪ್ರತಿಗಳ ಉಪಯೋಗವನ್ನು ಹೆಚ್ಚು ಹೆಚ್ಚು ಆಸಕ್ತರು ಮಾಡಿಕೊಳ್ಳಲು ಸಹಾಯ ಕಲ್ಪಿಸುವುದು ಗ್ರಂಥಪಾಲಕರ ಪ್ರಮುಖ ಕರ್ತವ್ಯವಾಗಿದೆ. ಆದರೆ ಹೀಗೆ ಕೊಡುವಲ್ಲಿ ಮೂರ್ಖರಿಗೆ ಕೊಡಬಾರದೆಂಬುದನ್ನು ಅಕ್ಷರಶಃ ಪಾಲಿಸಬೇಕಾಗುತ್ತದೆ. ಆದರೆ ಇವರನ್ನು ಗುರುತಿಸುವುದು ಸುಲಭ ಸಾಧ್ಯವಿಲ್ಲ.

೪.೧. ಪ್ರಾಥಮಿಕ ಸಂರಕ್ಷಣೆ

ಯಾವುದೇ ಹಸ್ತಪ್ರತಿ ಗ್ರಂಥಾಲಯಕ್ಕೆ ಹಸ್ತಪ್ರತಿಗಳು ಬಂದನಂತರ ಪ್ರಾಥಮಿಕವಾಗಿ ಸಂರಕ್ಷಿಸಲು ಕೈಗೊಳ್ಳಬೇಕಾದ ಹಲವಾರು ಉಪಾಯದ ಅಂಶಗಳನ್ನು ಕಾಣಬಹುದು. ಅವುಗಳೆಂದರೆ

೪.೧. ಪೂರ್ವಸಿದ್ಧತೆ

೪.೨. ಜೋಡಣೆ

೪.೩. ದಾಖಲೀಕರಣ

೪.೪. ದಾನಿಗಳ ಸಂಪೂರ್ಣ ವಿವರಣೆ

೪.೫. ನಿರಂತರ ಉಪಚಾರ

೪.೬. ರಾಸಾಯನಿಕ ಪ್ರಧೂಮ್ನ ಕಾರ್ಯ

೪.೭. ಬಳಕೆಯ ವಿಧಾನ (ಹಸ್ತಪ್ರತಿಗಳ) ಇತ್ಯಾದಿ.

೪.೧. ಪೂರ್ವಸಿದ್ಧತೆ

ದಾನಿಗಳೇ ನೇರವಾಗಿ ತಂದುಕೊಟ್ಟ ಹಸ್ತಪ್ರತಿಗಳನ್ನು ಸಂಗ್ರಹಕಾರನು ಮೊದಲು ಭೌತಿಕವಾಗಿ ಪರಿಶೀಲಿಸಬೇಕು. ಅವುಗಳಿಗೆ ಅಂಟಿದ ಧೂಳನ್ನು, ಬೂಸ್ಟನ್ನು, ಹೊಗೆಯ ಗಟ್ಟಿ ಲೇಪನವನ್ನು ರಾಸಾಯನಿಕ ಆಮ್ಲವನ್ನು ಉಪಯೋಗಿಸಿ ನೈಲಾನ್ ಬ್ರಶ್‌ನಿಂದ ಶುದ್ಧೀಕರಣ ಮಾಡಬೇಕು ಹಾಗೆಯೇ ಪ್ರತಿ ಪಾನುಗಳ ಮೇಲೆ ಸಿಟ್ರೆನೆಲ್ ರಾಸಾಯನಿಕ ತೈಲವನ್ನು ಅಥವಾ ಕೆಲವು ಹಸ್ತಪ್ರತಿ ಗ್ರಂಥಾಲಯಗಳು ತಯಾರಿಸುವ ಸೂಕ್ತವಾದ ರಾಸಾಯನಿಕ ತೈಲವನ್ನು ಲೇಪಿಸಿ ಸ್ವಲ್ಪ ಸಮಯ ನೆರಳು ಗಾಳಿಯಲ್ಲಿ ಒಣಗಿಸಬೇಕು.

೪.೨. ದಾಖಲೀಕರಣ

ಹಸ್ತಪ್ರತಿಗಳಿಗೆ ಪ್ರಾಥಮಿಕ ಸಂರಕ್ಷಣೆ ಚಿಕಿತ್ಸೆ ನೀಡಿದ ನಂತರ 'ಪರಿಗ್ರಹಣ ಸಂಖ್ಯೆ ನೋಂದಣಿ' ಪುಸ್ತಕದಲ್ಲಿ ದಾಖಲಿಸಿಕೊಳ್ಳಬೇಕು. ಇಂಥ ಕಟ್ಟಿನಲ್ಲಿರುವ ಪ್ರತಿಗಳನ್ನು ಅವಲೋಕಿಸಿ ಪ್ರತಿಗಳ ಸಂಖ್ಯೆ ಹಾಗೂ ಕಟ್ಟಿನ ಸಂಖ್ಯೆಯನ್ನು ಅದೇ ಕಟ್ಟಿಗೆ ಪಟ್ಟಿಯ ಮೇಲೆ ನಮೂದಿಸಬೇಕು. ಕಾಗದ ಹಸ್ತಪ್ರತಿಗಳಿಗೆ ರಟ್ಟು ಕಟ್ಟುವಿಕೆ ವ್ಯವಸ್ಥೆ ಮಾಡಿಕೊಳ್ಳಬೇಕು. ಇಂಥ ಕಡೆ ಪರಿಣಿತ ದುರಸ್ತಿಗಾರರನ್ನು ನೇಮಿಸುವುದು ಉತ್ತಮ.

೪.೩. ಜೋಡಣೆ

ಹಸ್ತಪ್ರತಿಗಳ ಸಲುವಾಗಿಯೇ ಕಬ್ಬಿಣದ ಶೆಲ್ಫುಗಳು ಮಾಡಿಸಬೇಕು. ಅಲ್ಲಿ ಲಿಪಿ, ಭಾಷೆ, ವಿಷಯಪ್ರಕಾರ ಹೊಂದಿಸಬಹುದು. ಹಸ್ತಪ್ರತಿ ಗ್ರಂಥಾಲಯ ವ್ಯವಸ್ಥೆಗೆ ಅನುಗುಣವಾಗಿ ಹೊಂದಿಸುವುದು ಉತ್ತಮವಾಗಿದೆ. ಸಂಸ್ಕೃತ, ಕನ್ನಡ, ತಮಿಳು, ತೆಲುಗು ಮುಂತಾದ ಲಿಪಿಗಳಲ್ಲಿ ರಚಿತಗೊಂಡ ಕೃತಿಗಳು ಬಹಳವಿರುವುದರಿಂದ ಅದಕ್ಕಾಗಿ ಭಾಷೆಗನುಗುಣವಾಗಿ ವಿಭಜಿಸಿ ಜೋಡಣೆ ಮಾಡಬೇಕು. ಕಪಾಟುಗಳಲ್ಲಿ ಒಂದರ ಮೇಲೊಂದರಂತೆ ಇಡದೆ ಗಾಳಿಯಾಡುವಂತೆ ವ್ಯವಸ್ಥೀಕರಿಸಬೇಕು. ಇತ್ತೀಚೆಗೆ ನಾಡಿನ ವಿವಿಧ ಹಸ್ತಪ್ರತಿ ಗ್ರಂಥಾಲಯಗಳಲ್ಲಿ ಕೆಂಪು ಮತ್ತು ನೀಲಿ ಬಣ್ಣದ ಬಟ್ಟೆಗಳಿಂದ ಕಟ್ಟುಗಳನ್ನು ಸುತ್ತುವರಿದಿರುವುದನ್ನು ಹಾಗೂ ವ್ಯವಸ್ಥಿತವಾಗಿ ಜೋಡಿಸಿರುವುದನ್ನು ಕಾಣಬಹುದು.

೪.೪. ದಾನಿಗಳ ಹೆಸರು, ದಾಖಲೀಕರಣ

ಯಾವುದೇ ಗ್ರಂಥಾಲಯಕ್ಕೆ ಹಸ್ತಪ್ರತಿಗಳನ್ನು ನೀಡಿದವರ ಹೆಸರು, ಸ್ಥಳ, ದಿನಾಂಕ ಇತ್ಯಾದಿ ವಿವರವನ್ನು ರಿಜಿಸ್ಟರ್‌ನಲ್ಲಿ ದಾಖಲಿಸುವುದು ಉತ್ತಮ. ಮುಂದೆ ಕೆಲವು ವಿಶಿಷ್ಟ ಸಂದರ್ಭದಲ್ಲಿ ಅಂಕಿ ಸಂಖ್ಯೆಯನ್ನು ಕ್ರೋಢೀಕರಿಸುವ ಸಂದರ್ಭದಲ್ಲಿ ತುಂಬಾ ಉಪಯುಕ್ತ.

೪.೧.೫. ನಿರಂತರ ಉಪಚಾರ

ಕಪಾಟಿನ ಪ್ರತಿ ಭಾಗಗಳಲ್ಲಿ ಡಾಂಬರ ಗುಳಿಗೆಗಳನ್ನು ಹಾಗೂ ಸಾಂಬಾರ ಪದಾರ್ಥಗಳನ್ನು ಅಲ್ಲಲ್ಲಿ ಇಡಬೇಕು. ಆಗಾಗ ಧೂಳನ್ನು ಜಾಡಿಸುವ ಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ವೈಜ್ಞಾನಿಕವಾಗಿ ಸಿದ್ಧಪಡಿಸಿದ ಯಂತ್ರದ ಬಳಕೆ ಅಗತ್ಯ. ಗೋಡೆಗೆ, ನೆಲಕ್ಕೆ ಮತ್ತು ಬಿರುಕುಗಳಲ್ಲಿ ಡಿಡಿಟಿ ಸಿಂಪಡಿಸುತ್ತಿರಬೇಕು. ಗ್ಯಾಮಕ್ಸಿನ್ ಮರ್ಕ್ಯೂರಿಕ್ ಕ್ಲೋರೈಡ್, ಪೆಂಟಾ ಕ್ಲೋರೋಫೆನಲ್ ಮುಂತಾದವುಗಳನ್ನು ಉಪಯೋಗಿಸುವುದರಿಂದ ಪರಿಣಾಮಕಾರಿಯಾಗಿ ಪ್ರಭಾವ ಬೀರುವುದು. ವಿಶೇಷವಾಗಿ ಕಟ್ಟುಗಳ ಮಧ್ಯದಲ್ಲಿ ಸಿಂಪಡಿಸುವಾಗ ಪಾನುಗಳಿಗೆ ಅಪಾಯವಾಗದಂತೆ ಎಚ್ಚರಿಕೆ ವಹಿಸಬೇಕು ಅಥವಾ ಚಿಕ್ಕ ಚಿಕ್ಕ ಉಂಡೆಯಾಕಾರ ಮಾಡಿ ಇಡಬೇಕು. ಪ್ರಸ್ತುತ ಸಂದರ್ಭದಲ್ಲಿ ನಾಡಿನ ಹಲವು ಹಸ್ತಪ್ರತಿ ಗ್ರಂಥಾಲಯಗಳಲ್ಲಿ ಪ್ರಾದೇಶಿಕತೆಗೆ ಅನುಗುಣವಾಗಿ ತಮ್ಮದೇ ರೀತಿಯಲ್ಲಿ ಔಷಧ ಪುಡಿಯನ್ನು ತಯಾರಿಸಿಕೊಂಡು ಹಸ್ತಪ್ರತಿಗಳನ್ನು ಕಾಪಾಡುತ್ತಿರುವುದನ್ನು ಗಮನಿಸಬಹುದಾಗಿದೆ.

೪.೬. ರಾಸಾಯನಿಕ ಪ್ರಧೂಮ್ನಕಾರ್ಯ

ಪ್ರಧೂಮ್ನಕಾರ್ಯ ಮುಖ್ಯವಾಗಿ ರಾಸಾಯನಿಕ ಹೊಗೆ ಹಾಕುವುದಾಗಿದೆ. ಹಸ್ತಪ್ರತಿಗಳ ಇಡೀ ಕೋಣೆಗೆ ಆಗಾಗ ರಾಸಾಯನಿಕ ಹೊಗೆ ಎಬ್ಬಿಸುವುದು ಒಂದು ರೀತಿಯ ಪ್ರಧೂಮ್ನಗೊಳಿಸಿದಂತೆಯೇ ಸರಿ. ಇಲ್ಲಿ ವಿಶೇಷವಾಗಿ ಪ್ರಧೂಮ್ನ ಕಪಾಟು ಉಪಯೋಗಿಸಿ ಕ್ರಮವಾಗಿ ಕಟ್ಟುಗಳಲ್ಲಿರುವ ಸೂಕ್ಷ್ಮ ಕೀಟಗಳನ್ನು ಹೋಗಲಾಡಿಸಬಹುದಾಗಿದೆ. ಪ್ರಧೂಮ್ನ ಕಪಾಟನ್ನು ಕಟ್ಟಿಗೆಯಿಂದ ಅಥವಾ ಕಬ್ಬಿಣದಿಂದ ಎಲ್ಲಿಯೂ ರಂಧ್ರ ಉಂಟಾಗದಂತೆ ಹಾಗೂ ಒಳಗಿನ ಹೊಗೆ ಹೊರಬರದಂತೆ ಬಹುದುರಸ್ತಿಯಿಂದ ಸಿದ್ಧಪಡಿಸಿರಬೇಕಾಗುವುದು ಅವಶ್ಯ.

೪.೭. ಬಳಕೆಯ ವಿಧಾನ

ಹಸ್ತಪ್ರತಿಗಳ ಬಳಕೆ ಅಥವಾ ಪರಿಚಲನೆಯು ಮುದ್ರಿತ ಗ್ರಂಥದಂತೆ ಇರುವುದಿಲ್ಲ. ಹಸ್ತಪ್ರತಿಗಳನ್ನು ಕಡ್ಡಾಯವಾಗಿ ಗ್ರಂಥಾಲಯದಲ್ಲಿಯೇ ಉಪಯೋಗಿಸಬೇಕು. ಯಾರೇ ಇದ್ದರೂ ಹೊರಗಡೆ ಕೊಡುವುದು ಅನುಚಿತ ಕ್ರಮವಾಗಿದೆ. ನವೀನ ಬಳಕೆದಾರರು ಬಂದಾಗ ಜಾಗರೂಕತೆಯಿಂದ ಲಕ್ಷ್ಯ ಇಟ್ಟಿರಬೇಕು. ಏಕೆಂದರೆ ಕೆಲವರಿಗೆ ಉಪಯೋಗಿಸುವ ವಿಧಾನದ ಅನುಭವವಿರುವುದಿಲ್ಲ. ತಾಳೆಗರಿಗಳನ್ನು ಓದಲು ಸೂಕ್ಷ್ಮದರ್ಪಣ, ರಾವುಗನ್ನಡಿ ಬಳಸುವುದು ಯೋಗ್ಯವಾಗಿದೆ. ಅಧ್ಯಯನಕಾರರಿಗೆ ವಿಶೇಷ ಪೀಠೋಪಕರಣಗಳನ್ನು ಸಿದ್ಧಪಡಿಸುವುದು ಉತ್ತಮ. ಇದಲ್ಲದೆ ಯೋಗ್ಯದರದಲ್ಲಿ ಫೋಟೋ ಸ್ಟ್ಯಾಟ್ ಜೆರಾಕ್ಸ್ ಪ್ರತಿಗಳನ್ನು ಮಾಡಿಕೊಡುವುದು ಒಳ್ಳೆಯದು. ಇದರಿಂದ ಮೂಲಪ್ರತಿಯನ್ನು ಮತ್ತಷ್ಟು ರಕ್ಷಣೆ ಮಾಡಿದಂತಾಗುತ್ತದೆ.

* ಪ್ರಸ್ತುತ ಸಂದರ್ಭದಲ್ಲಿ ಬಹುತೇಕ ಹಸ್ತಪ್ರತಿ ಭಂಡಾರಗಳಲ್ಲಿ 'ತಾಳೆಗರಿಯ' ಕಟ್ಟುಗಳ ಮೇಲೆ ಬಿಳಿಯ ಬಣ್ಣದ ಫೈಬರ್ ಶೀಟ್ ಬಳಸುತ್ತಿರುವುದನ್ನು ಕಾಣಬಹುದು. ಇದನ್ನು ಬಳಸುವುದರಿಂದ ಹಸ್ತಪ್ರತಿ ಕಟ್ಟುಗಳ ಮೇಲೆ ಹೆಚ್ಚಿನ ಭಾರ ಬೀಳುವುದಿಲ್ಲ ಜೊತೆಗೆ ಬೇಗ ಹುಳು ಹಿಡಿಯುವುದಿಲ್ಲ.

ಆದಕಾರಣ ಇದನ್ನು ಹಲವು ಭಂಡಾರಗಳಲ್ಲಿ ಬಳಸುತ್ತಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ.

ಹಸ್ತಪ್ರತಿಗಳನ್ನು ಬರವಣಿಗೆಗೆ ಸಿದ್ಧಪಡಿಸುವಾಗ ಸಾಂಪ್ರದಾಯಿಕ ಕ್ರಮದ ಜೊತೆಗೆ ನೈಸರ್ಗಿಕವಾಗಿ ಸಿಗುವ ವಸ್ತುಗಳನ್ನು ಹಸ್ತಪ್ರತಿಗಳ ಸಂರಕ್ಷಣೆಯ ದೃಷ್ಟಿಯಿಂದ ಅವುಗಳ ತಯಾರಿಕೆಯ ಹಂತದಲ್ಲಿಯೇ ಬಳಸುತ್ತಿದ್ದರು.

ಇತರ ಸಂರಕ್ಷಣಾ ವಿಧಾನಗಳು

ಹಸ್ತಪ್ರತಿಗಳ ಸಂರಕ್ಷಣಾ ವಿಧಾನದಲ್ಲಿ ಪ್ರಧಾನವಾಗಿ ಇನ್ನೂ ಅನೇಕ ವಿಧಾನಗಳು ಕಂಡು ಬರುತ್ತವೆ. ಸಾಂಬಾರ ಪದಾರ್ಥಗಳ ಬಳಕೆ, ಬಣ್ಣದ ಬಟ್ಟೆಗಳ ಬಳಕೆ, ತೈಲಲೇಪನ, ಧೂಮ್ರ ಚಿಕಿತ್ಸೆ, ಸೂರ್ಯ ಶಾಖದ ಚಿಕಿತ್ಸೆ, ಸಸ್ಯಜನ್ಯ ಔಷಧಗಳ ಬಳಕೆ, ಕ್ರಿಮಿಕೀಟಗಳ ಪ್ರವೇಶವನ್ನು ತಡೆಗಟ್ಟಲು ಅರಿಷಿಣದ ಪುಡಿಯನ್ನು ಅಥವಾ ಅದರ ನೀರನ್ನು ಗರಿಗಳಿಗೆ ಲೇಪಿಸಲಾಗುತ್ತಿತ್ತು. ಸ್ಥಳೀಯವಾಗಿ ದೊರೆಯುತ್ತಿದ್ದ ತಂಬಾಕು, ಕರ್ಪೂರ, ಕರೆಜೀರಿಗೆ, ಸಿಹಿಜಂಬು, ಹಾವಿನ ಪೊರೆ ಮತ್ತು ನವಿಲು ಗರಿಗಳನ್ನು ಅದಕ್ಕಾಗಿ ಉಪಯೋಗಿಸಲಾಗುತ್ತಿತ್ತು. ಇವತ್ತಿಗೂ ಈ ಸ್ಥಳೀಯ ಸಾಮಗ್ರಿಗಳನ್ನು ಭಾರತದ ಕೆಲವು ಗ್ರಂಥಾಲಯ ಮತ್ತು ವಸ್ತುಸಂಗ್ರಹಾಲಯಗಳಲ್ಲಿ ಉಪಯೋಗಿಸಲಾಗುತ್ತಿದೆ. ಕೆಲವು ಮಠಗಳಲ್ಲಿರುವ 'ಹಸ್ತಪ್ರತಿ' ಗ್ರಂಥಾಲಯಗಳಲ್ಲಿ ಕರ್ಪೂರ, ಮೆಣಸು, ಕರೆಜೀರಿಗೆ, ಇತ್ಯಾದಿ ಪದಾರ್ಥಗಳನ್ನು ಸಂರಕ್ಷಣಾ ದೃಷ್ಟಿಯಿಂದ ಇಟ್ಟಿರುವುದು ಗಮನಾರ್ಹ.

೪.೨. ಹಸ್ತಪ್ರತಿಗಳಿಗೆ ಬರುವ ಅಪಾಯಗಳು

ಹಸ್ತಪ್ರತಿಗಳಿಗೆ ಬರುವ ಅಪಾಯಗಳು ವಿವಿಧ ರೀತಿಯಾಗಿವೆ. ಕೆಲವು ಹುಳು ಹುಪ್ಪಟೆಗಳಿಂದ ಮತ್ತೆ ಕೆಲವು ಗಾಳಿ ಬೆಳಕು ಬೆಂಕಿಗಳಿಂದ ಆಗಬಹುದು. 'ಗಾಳಿಯ ಅತಿ ಉಷ್ಣತೆಯಿಂದಾಗಲಿ, ಅತಿ ಶೀತದಿಂದಾಗಲಿ ಕೂಡಿದ್ದರೆ ಹಸ್ತಪ್ರತಿಗಳು ಹಾಳಾಗುವುದುಂಟು. ಗಾಳಿಯಲ್ಲಿ ಅದರಲ್ಲಿಯೂ ಪಟ್ಟಣಗಳ ಗಾಳಿಯಲ್ಲಿ ಹಲವಾರು ಅನಿಲಗಳು ಸೇರಿದ್ದು ಹಸ್ತಪ್ರತಿಗಳ ಮೇಲೆ ಪರಿಣಾಮ ಬೀರುವುದು ಸಹಜವಾಗಿದೆ. ಶೀತ ಹೆಚ್ಚಾದರೆ ಬೂಷ್ಟು ಬರುತ್ತದೆ: ಉಷ್ಣತೆ ಅಧಿಕವಾದರೆ ಹಾಳೆಗಳು ಒರಟಾಗುತ್ತವೆ. ಹೀಗೆ ಅಪಾಯ ಒದಗಿಬರುವ ವಿವಿಧ ರೀತಿಗಳನ್ನು ಇಲ್ಲಿ ಗಮನಿಸಬಹುದು.

* **ಧೂಳು:** ಇದು ನೋಡಲು ಅಲ್ಪವಾದುದಾದರೂ ಇದರಿಂದ ಆಗುವ ಅನಾಹುತ ಅಲ್ಪವಲ್ಲ. ಈ ಧೂಳಿನ ಕಣಗಳ ಮೂಲಕವಾಗಿಯೇ ಕ್ರಿಮಿ ಕೀಟಗಳ ಅಂಡಾಣುಗಳು ಬಂದು ಹಸ್ತಪ್ರತಿಗಳಲ್ಲಿ ಸೇರುತ್ತವೆ. ಮುಂದೆ ಈ ಅಂಡಾಣುಗಳಿಂದ ಹುಳುಗಳು ಹೆಚ್ಚುತ್ತಾ ಹೋಗಿ ಗ್ರಂಥಾಲಯವನ್ನೇ ಆಕ್ರಮಿಸಿಕೊಳ್ಳುತ್ತವೆ.

* **ಕೀಟಗಳು:** ಜನರು ದೇಶದಿಂದ ದೇಶಕ್ಕೆ ಹೋಗುವುದು ಹಾಗೂ ಗ್ರಂಥಗಳ ಪ್ರಸಾರ ಹೆಚ್ಚಿದಂತೆಲ್ಲ ಕೀಟಗಳ ಹಾವಳಿಯೂ ಹೆಚ್ಚುತ್ತಾ ಹೋಯಿತು. ಒಂದೆಡೆಯಿಂದ ಮತ್ತೊಂದೆಡೆಗೆ ಕೀಟಗಳು ಹರಡಲು ಇದು ಸಹಕಾರಿಯಾಯಿತು. ಆದುದರಿಂದಲೇ ವಿಶ್ವದ ಎಲ್ಲ ಭಾಗಗಳಲ್ಲಿಯೂ

ವಿವಿಧ ರೀತಿಯ ಎಲ್ಲ ಕ್ರಿಮಿ ಕೀಟಗಳೂ ಕಂಡುಬರುತ್ತವೆ. ಪೂರ್ವ ಏಷಿಯಾ, ಕಾನ್‌ಸ್ಟಾಂಟಿನೋಪಲ್, ಗ್ರೀಸ್ ಮತ್ತು ಬ್ರಿಟನ್ ದೇಶದ ಮಠಗಳಲ್ಲಿನ ಗ್ರಂಥಾಲಯಗಳು ಗ್ರಂಥಹುಳುಗಳ ಹಾವಳಿಗೆ ತುತ್ತಾಗಿವೆ. ರೆಮೆಡಿಯಮ್ ಕಾಂಟ್ರವರ್ಮ್ಸ್ ಲಿಬ್ರೊರಮ್(Rehudivm contra virhos Librorum) ಎಂಬ ೧೩ನೇ ಶತಮಾನದ ಒಂದು ಹಸ್ತಪ್ರತಿ ಇದ್ದಿತು ಎಂದು ತಿಳಿದುಬರುವುದರಿಂದ ಆ ಕಾಲಕ್ಕೆ ಗ್ರಂಥಗಳಿಗೆ ಕೀಟಗಳ ಹಾವಳಿ ಬಹಳವಾಗಿದ್ದಿತೆಂದು ಊಹಿಸಬಹುದು. ಸಿ.ಎಂ.ಇ.ಟೋನ್ ಎಂಬಾತನು ೧೯೩೫ರಲ್ಲಿ ಪ್ರಕಟವಾದ 'ಆಟೋ ಬಯಾಗ್ರಫಿ ಆಫ್ ಮಾಸ್ಟರ್ ಬುಕ್ ವರ್ಮ್' ಎಂಬ ತನ್ನ ಗ್ರಂಥದಲ್ಲಿ ಅಜಿ ಆಫ್ ಮಾಮ್ಸ್ ಬರಿಯಲ್ಲಿನ ಆಂಥಾಲಜಿ ಆಫ್ ಕಾಫಲಸ್ ಗ್ರಂಥದಲ್ಲಿ ಹುಟ್ಟಿದ ಒಂದು ಗ್ರಂಥಹುಳು ಕೊನೆಗೆ ಮಿಚಿಗನ್ ಸ್ಟೇಟ್ ವಿಶ್ವವಿದ್ಯಾನಿಲಯದ ಸ್ಯಾಮ್ಯುಯಲ್ ಜಾನ್‌ಸನ್ 'ಅರ್ಥಕೋಶದ ಮೊದಲನೆಯ ಮುದ್ರಣದಲ್ಲಿ ಬದುಕಿರಬಹುದು' ಎಂದು ಹೇಳಿರುವ ಮಾತು ಅರ್ಥಪೂರ್ಣವಾಗಿದೆ. ಇತ್ತೀಚೆಗೆ ಕಂಡುಹಿಡಿದ ಗ್ರಂಥಪಾಲಕರ ದೃಷ್ಟಿಗೆ ಬೀಳದೆಯೇ ಪುಸ್ತಕಗಳು ಮತ್ತು ಕಪಾಟುಗಳನ್ನು ತಿನ್ನುವ ಜೀರುಂಡೆ ಮರಿ(Beetle Carval)ಯು ಇತರ ಎಲ್ಲಾ ಗ್ರಂಥ ವೈರಿಗಳಿಂತಲೂ ಹೆಚ್ಚು ಆತಂಕಕಾರಿಯಾಗಿದೆ.

ಈ ಕೀಟಗಳ ಬೆಳವಣಿಗೆಯನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಒಂದು ಪೂರ್ಣವಾಗಿ ಬೆಳೆಯದ ಪೊರೆಹುಳುಗಳು. ಇವು ನೋಡುವುದಕ್ಕೆ ಎಲ್ಲಾ ವಿಧದಿಂದಲೂ ಪೂರ್ಣವಾಗಿ ಬೆಳೆದ ಹುಳುಗಳಂತೆಯೇ ಕಂಡರೂ ರೆಕ್ಕೆಗಳು ಪೂರ್ಣವಾಗಿ ಬಂದಿರುವುದಿಲ್ಲ. ಈ ಗುಂಪಿಗೆ ಸೇರುವ ಕೀಟಗಳೆಂದರೆ ಜಿರಲೆ, ಗೆದ್ದಲು, ಬುಕ್‌ಲೈಸ್ ಮತ್ತು ಸಿಲ್ವರ್‌ಫಿಷ್. ಎರಡನೆಯ ಗುಂಪಿಗೆ ಸೇರುವ ಕೀಟಗಳೆಂದರೆ, ತಮ್ಮ ಜೀವಿತ ವೇಳೆಯಲ್ಲಿ ಗಮನಿಸಬಹುದಾದ ರೂಪಾಂತರಗಳನ್ನು ಹೊಂದುವ ಜೀರುಂಡೆ ಮರಿ ಅಥವಾ ಸಾಮಾನ್ಯವಾಗಿ ಕರೆಯುವ ಪುಸ್ತಕಕ್ರಿಮಿ. ಚೆನ್ನಾಗಿ ಬೆಳೆದ ಜೀರುಂಡೆ ಮರಿಯು ವಯಸ್ಸಾದ ಹುಳುವನ್ನು ಯಾವ ರೀತಿಯಲ್ಲಿಯೂ ಹೋಲುವುದಿಲ್ಲ. ಇದರಲ್ಲಿ 'ನಿತೊದ್ರಿಪ ಪನಿಸಿಯಮ್' ಎಂಬ ಜಾತಿಯದು ಯುರೋಪ್ ಮತ್ತು ಅಮೆರಿಕ ದೇಶಗಳಲ್ಲಿ ಕಂಡುಬರುತ್ತದೆ. ಭಾರತದಲ್ಲಿ ಮತ್ತೊಂದು ಜಾತಿಯ 'ಗ್ಯಾಸ್ಟ್ರಲಿಸ್ ಇಂಡಿಕಸ್' ಎಂಬುದು ಸಾಮಾನ್ಯವಾಗಿದೆ.'[೫] ಇದು ಎಲ್ಲ ವಿಧವಾದ ವಸ್ತುವನ್ನು ತಿಂದು ಅರಗಿಸಿಕೊಳ್ಳುವ ಶಕ್ತಿಯನ್ನು ಪಡೆದುದಾಗಿದೆ. ಇದು ಮಾಡುವ ಮತ್ತೊಂದು ಕೆಡುಕೆಂದರೆ ತನಗೆ ದೊರೆತುದನ್ನು ತಿಂದು ಮುಗಿಸುವುದಲ್ಲದೆ ಗ್ರಂಥಗಳ ಅಂಚುಗಳಲ್ಲಿ ಮೊಟ್ಟೆಗಳನ್ನಿಡುತ್ತದೆ. ಈ ಮೊಟ್ಟೆಗಳು ೫–೧೦ ದಿನಗಳಲ್ಲಿ ಮರಿಗಳಾಗಿ ತಮ್ಮ ತಾಯಿಯ ಕೆಲಸವನ್ನು ಮುಂದುವರಿಸುತ್ತವೆ. ಇವು ಗ್ರಂಥಗಳ ಒಂದು ಪಕ್ಕದಿಂದ ಹಾಳೆಗಳನ್ನು ಕೊರೆದು ತಿನ್ನುತ್ತಾ ಹೋಗಿ ಮತ್ತೆ ಮೇಲೆ ಬಂದು ತಮ್ಮ ಕಾರ್ಯವನ್ನು ಪ್ರಾರಂಭಿಸುತ್ತವೆ. ಹೀಗೆ ಸುಮಾರು ೧೫ ದಿನಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ನಡೆಸಿದ ಮೇಲೆ ಪ್ರಾಪ್ತ ವಯಸ್ಸಿನವಾಗಿ ಬೆಳೆದು ಮೊಟ್ಟೆ ಇಡಲು ಪ್ರಾರಂಭಿಸುತ್ತವೆ ಎಂಬ ಮಾತು ಸಮರ್ಥನೀಯ.

* **ನುಸಿ:** ಇದಕ್ಕೆ ಸಿಲ್ವರ್‌ಫಿಷ್ ಅಥವಾ ಬೆಳ್ಳಿಮೀನು ಎಂಬ ಹೆಸರಿದೆ. ಇದು ಹುಳುವಿನ ಬಣ್ಣ ಮತ್ತು ಆಕಾರದಿಂದಲೇ ಬಂದುದಾಗಿದೆ. ಸಮಶೀತೋಷ್ಣ ಹವಾಗುಣವು ಯಾವ ಕೀಟಗಳ ಬೆಳವಣಿಗೆಗೂ ಸಹಕಾರಿಯಾಗಿರುವುದಿಲ್ಲ. ಆದರೂ ಇಂತಹ ಹವಾಗುಣದಲ್ಲಿಯೂ ಅಪರೂಪವಾಗಿ ಈ ಹುಳುವನ್ನು ನಾವು ನೋಡಬಹುದು. ಇವು ಪುಸ್ತಕದ ರಟ್ಟುಕಟ್ಟುವಿಕೆಗೆ ಉಪಯೋಗಿಸುವ ಅಂಟು ಪದಾರ್ಥಗಳಿಂದಲೂ ಕಾಗದದ ನುಣುಪಿಗಾಗಿ ಉಪಯೋಗಿಸುವ 'ಜಿಲಟನ್ ಮತ್ತು ಪಿಷ್ಟ ಪದಾರ್ಥಗಳಿಂದಲೂ ಆಕರ್ಷಿತವಾಗುತ್ತವೆ.

ಬೆಳ್ಳಿ ಬೂದು ಮಿಶ್ರ ಬಣ್ಣದಿಂದ ಕೂಡಿದ ಈ ನುಸಿ ಹುಳುವು ಅರ್ಧ ಅಂಗುಲಕ್ಕಿಂತ ಹೆಚ್ಚು ಉದ್ದವಾಗಿರುವುದಿಲ್ಲ. ಇದು ತನ್ನ ಎರಡೂ ತುದಿಗಳಲ್ಲಿ ಉದ್ದವಾಗಿ ಚೂಪಾಗಿರುವ ಸ್ಪರ್ಶಾಂಗಗಳನ್ನು ಹೊಂದಿದೆ. ಈ ಅಂಗಗಳಿಂದ ಗ್ರಂಥಗಳಿಗೆ ಹಾನಿಯುಂಟು ಮಾಡುತ್ತದೆ. ಕಾಗದದಲ್ಲಿ ರಂಧ್ರವನ್ನು ಕೊರೆಯುತ್ತದೆ. ಇದು ರಾತ್ರಿ ವೇಳೆಯಲ್ಲಿ ತನ್ನ ಕೆಲಸವನ್ನು ಚುರುಕಾಗಿ ಮಾಡಿದರೂ ಕತ್ತಲು ಪ್ರದೇಶದಲ್ಲಿ ಹಗಲಿನಲ್ಲೂ ತನ್ನ ಕೆಲಸವನ್ನು ಮುಂದುವರಿಸುತ್ತದೆ. ಇವುಗಳನ್ನು ಗ್ರಂಥಾಲಗಳಲ್ಲಿಯೇ ಅಲ್ಲದೆ ಅಡಿಗೆ ಮನೆಗಳಲ್ಲಿಯೂ ಕಾಣಬಹುದು.

* **ಜಿರಲೆ:** ಇದನ್ನು ಕಾಕ್‌ಕ್ರೋಚ್ ಎನ್ನುವರು. ಈ ಪದವನ್ನು ಒಟ್ಟು ಬ್ಲಾಟಿಡೆ ಕೀಟಗಳ ಗುಂಪಿಗೆ ಉಪಯೋಗಿಸುವುದು ಸಾಮಾನ್ಯವಾಗಿದೆ. ಈ ಜಾತಿಯಲ್ಲಿ ಅನೇಕ ವಿಧಗಳಿವೆ. 'ಕಪ್ಪು ಜೀರುಂಡೆಯನ್ನೇ' ಜಿರಲೆ ಎಂದು ಕರೆಯುವುದು ರೂಢಿಯಲ್ಲಿದೆ. ಇದಕ್ಕೆ ಗೋಡೆಯ ಸುಣ್ಣದಿಂದ ಹಿಡಿದು ಕಾಲಿನ ಬೂಟುಗಳವರೆಗೆ ಎಲ್ಲವೂ ಆಹಾರವಾಗಬಹುದು. ಇವು ಕಣ್ಣಿಗೆ ಕಾಣದಂತೆ ಸಂದುಗೊಂದುಗಳಲ್ಲಿ ಆಶ್ರಯ ಪಡೆಯುತ್ತವೆ. ಇವುಗಳ ಹತ್ತಿಕೊಂಡಂತಿರುವ ಮೈ ಸುಲಭವಾಗಿ ಅಡಗಿಕೊಳ್ಳಲು ಸಹಾಯಕವಾಗಿದೆ. ಸಾಮಾನ್ಯವಾಗಿ ಕಕ್ಕಸುಗಳ ಮೂಲಕವೂ, ಕೊಳಾಯಿಗಳ ಮೂಲಕವೂ ಕಟ್ಟಡದ ತಳಹದಿಯಿಂದಲೊ ಬಂದು ಗ್ರಂಥಾಲಯವನ್ನು ಸೇರುತ್ತವೆ. ಗಂಡು ಜಿರಲೆಗಳು ಪರದೆಯಿಲ್ಲದ ಕಿಟಕಿಗಳ ಮೂಲಕ ಹಾರಿ ಬರುವುದೂ ಉಂಟು. ಕತ್ತಲಾಗುತ್ತಿದ್ದಂತೆಯೇ ತಾವು ಅಡಗಿದ್ದ ಸ್ಥಳದಿಂದ ಹೊರಬಂದು ತಮ್ಮ ಆಡಳಿತವನ್ನು ಆರಂಭಿಸುತ್ತವೆ.

ಜಿರಲೆಗಳನ್ನು ಗ್ರಂಥಗಳ ಶತ್ರುಗಳೆಂದು ೧೬೦೨ರಲ್ಲಿಯೇ ಯೂಲಿಸಿಸ್ ಆಲ್ಡ್ರೊವಾಂಡಸ್ ಎಂಬಾತನು ಹೇಳಿದ್ದಾನೆ. ೧೭೪೪ರಲ್ಲಿ ಬಹುದ್ವೀಪಗಳಲ್ಲಿ ಇವುಗಳನ್ನು ಉಪದ್ರವ ಜೀವಿಗಳೆಂದು ಕರೆದಿದ್ದಾರೆ. ೧೮೩೭ರಲ್ಲಿ ವೆಸ್ಟ್ ಇಂಡೀಸ್ ದೇಶದಲ್ಲಿ ಜಿರಲೆಗಳು ಹೆಚ್ಚು ಸಂಖ್ಯೆಯಲ್ಲಿದ್ದು ಅನೇಕ ಗ್ರಂಥಗಳನ್ನು ನಾಶ ಮಾಡಿದುದಲ್ಲದೆ, ರೋಗಿಗಳನ್ನು ಸತ್ತವರನ್ನು ಮುತ್ತುತ್ತಿದ್ದುವು ಎಂದು ತಿಳಿಸಿದ್ದಾರೆ.

* **ಗ್ರಂಥಹುಳು(Book-worut)**

ಈ ಹುಳು ಪುಸ್ತಕದಲ್ಲಿಯೇ ಹುಟ್ಟಿ ಅಲ್ಲಿಯೇ ಬದುಕುವುದರಿಂದ ಪುಸ್ತಕಕ್ರಿಮಿ ಅಥವಾ ಬುಕ್‌ವರ್ಮ್ ಎಂಬ ಹೆಸರು ಅನ್ವರ್ಥಕವಾಗಿ ಬಂದಿದೆ. ಪುಸ್ತಕಕ್ರಿಮಿ ಎಂದಾಗ ಹಲವಾರು ಪುಸ್ತಕಗಳಲ್ಲಿ ಕಂಡುಬರುವ ಎಲ್ಲ ಹುಳುಗಳಿಗೂ ಈ ಹೆಸರು ಇರಬಹುದೆಂದು ಭಾವಿಸುತ್ತಾರೆ.

ಆದರೆ ಗ್ರಂಥಗಳಲ್ಲಿ ಕಂಡುಬರುವ ಎಲ್ಲ ಹುಳುಗಳಿಗೂ ಈ ಹೆಸರಿಲ್ಲ. ಅವುಗಳಲ್ಲಿ ಇದೂ ಒಂದಾಗಿದೆ.

ಇವು ಗ್ರಂಥ ಹುಟ್ಟಿದಾಗಿನಿಂದಲೂ ಇವೆ. ಈಜಿಪ್ಟ್ ದೇಶದಲ್ಲಿ ಪಪೆರಿಗೂ ಭಾರತದಲ್ಲಿ ಓಲೆಗಳಿಗೂ ಹಾನಿಯನ್ನುಂಟು ಮಾಡಿವೆ. ಈಗಲೂ ಎಲ್ಲ ವಿಧವಾದ ಗ್ರಂಥಗಳಿಗೂ ಕೆಡಕನ್ನುಂಟು ಮಾಡುತ್ತವೆ. ಇವು ಸಮಶೀತೋಷ್ಣ ವಲಯದಲ್ಲಿ ಅಲ್ಪವಾಗಿದ್ದರೂ ಉಷ್ಣವಲಯ ಮತ್ತು ಅದರ ಪರಿಸರ ಪ್ರದೇಶಗಳಲ್ಲಿ ಹೆಚ್ಚಾಗಿವೆ. ಅರಿಸ್ಟಾಟಲ್ ತತ್ವಜ್ಞಾನಿಯು ಇದನ್ನು 'ಉಪದ್ರವಕಾರಿ' ಎಂದು ಕರೆದಿದ್ದಾನೆ. ಪಿ.ಬ್ರೂಕ್ಸ್ ಎಂಬಾತನು ತನ್ನ ಲೇಖನದಲ್ಲಿ 'ಪುಸ್ತಕಗಳಿಗೆ ಕಾಲ, ಗಾಳಿ, ಹವಾಮಾನ ಬೆಂಕಿ ಮತ್ತು ಪ್ರವಾಹಗಳಿಂದ ಆಗುವ ಅನಾಹುತವನ್ನು ಈ ಪುಸ್ತಕ ಕ್ರಿಮಿಯಿಂದ ಆಗುವ ಅನಾಹುತಕ್ಕೆ ಹೋಲಿಸಿದರೆ ಮೊದಲನೆಯದರಿಂದ ಆಗುವ ಹಾನಿ ಅತ್ಯಲ್ಪವೆಂದೇ' ಹೇಳಬೇಕಾಗುತ್ತದೆ ಎಂದಿದ್ದಾನೆ.[೬]

ಈ ಹುಳುಗಳು ಓಲೆ ಕಾಗದ ಎರಡರಲ್ಲಿಯೂ ಕಂಡುಬರುತ್ತವೆ. ಇವು ಹಾಳೆಗಳು ಅಥವಾ ಪತ್ರಗಳಲ್ಲಿ ರಂಧ್ರಗಳನ್ನು ಕೊರೆದು ಗ್ರಂಥಗಳನ್ನು ಹಾಳು ಮಾಡುತ್ತವೆ. ಇವು ಹೆಚ್ಚು ಕಾಲ ಗ್ರಂಥದಲ್ಲಿಯೇ ನಿಂತರೆ ಓಲೆ ಗ್ರಂಥಗಳಾದಿಯಾಗಿ ಎಲ್ಲವೂ ಮುಟ್ಟಿದರೆ ಪುಡಿಯಾಗುವಂತಹ ಸ್ಥಿತಿಯನ್ನು ತಲುಪುತ್ತವೆ. ಕೆಲವು ಹಸ್ತಪ್ರತಿಗಳಲ್ಲಿ ಕೊರೆದಿರುವ ನೂರಾರು ನೇರವಾದ ಮತ್ತು ಚಿತ್ರ ವಿಚಿತ್ರವಾದ ರಂಧ್ರಗಳನ್ನು ನೋಡಿದರೆ ಯಾರಿಗಾದರೂ ಆಶ್ಚರ್ಯ ಉಂಟಾಗುವುದು ಸಹಜವಾಗಿದೆ. ಇವು ಕೊರೆದಿರುವ ಭಾಗಗಳಲ್ಲಿ ಕೆಲವು ಕೊರೆತಗಳು ಯಾವುವೋ ಅಕ್ಷರ ಭ್ರಾಂತಿಯನ್ನುಂಟು ಮಾಡುತ್ತವೆ. ಆದುದರಿಂದಲೇ 'ಘಣಾಕ್ಷರ ಪ್ರಾಯ'ವೆಂಬ ಪದವೇ ರೂಢಿಗೆ ಬಂದಿದೆ. ಇಷ್ಟು ಸಣ್ಣಹುಳು ಇಷ್ಟು ತೀವ್ರ ಹಾನಿಯನ್ನು ಮಾಡಬಲ್ಲುದೇ ಎಂಬ ಸಂದೇಹಕ್ಕೆ ಎಡೆ ಮಾಡಿಕೊಡುತ್ತದೆ.

ಗೆದ್ದಲು: ಇವುಗಳಲ್ಲಿ ೧೮೬೧ ಪ್ರಭೇದಗಳಿವೆ ಎಂದು ತಿಳಿದುಬರುತ್ತದೆ. ಇದರಿಂದ ವಿಶ್ವದ ಹಲವೆಡೆ ತೊಂದರೆಗಳಾಗಿವೆ. ಹುಲ್ಲು ಕಸಕಡ್ಡಿ ಒಣಗಿದ ಗಿಡಗಳು ಮತ್ತು ಮರ, ಕಟ್ಟಡಗಳಿಗೆ ಮರ ಮುಟ್ಟುಗಳು, ಗ್ರಂಥಗಳು, ಕಾಗದ ಪತ್ರಗಳು ಎಲ್ಲವೂ ಇದಕ್ಕೆ ಆಹಾರವಾಗುತ್ತವೆ. ಇವು ಒಂದು ಗ್ರಂಥಾಲಯವನ್ನು ಸೇರಿದರೆ ಒಂದು ರಾತ್ರಿಯಲ್ಲಿ ಮತ್ತೆ ತುಂಬಲಾರದಂತಹ ನಷ್ಟವನ್ನುಂಟು ಮಾಡಬಹುದು. ಯಾವುದಾದರೂ ಗ್ರಂಥಾಲಯಕ್ಕೆ ಗೆದ್ದಲು ಬರುವ ಸಾಧ್ಯತೆ ಇದ್ದರೆ ಅದನ್ನು ನಿತ್ಯವೂ ಪರೀಕ್ಷಿಸಿ ಎಚ್ಚರಿಕೆ ವಹಿಸುವುದು ಅತ್ಯವಶ್ಯಕ. ಮರದ ಕಪಾಟುಗಳನ್ನು ಗೋಡೆಗೆ ಒರಗಿಸಿಡುವುದನ್ನು ಆದಷ್ಟು ಮಟ್ಟಿಗೆ ಬಿಡುವುದು ಉಚಿತವಾಗಿದೆ.

ಫೈರ್ ಬ್ರ್ಯಾಟ್ಸ್(Fire Brats): ಇವು ನುಸಿಹುಳುಗಳನ್ನೇ ಹೋಲುತ್ತವೆ. ಇವುಗಳನ್ನು ಗ್ರಂಥಾಲಯಗಳಲ್ಲಿ ಕಾಣುವುದು ಅಪರೂಪ. ಆದರೂ ಇವು ಹೆಚ್ಚು ಪರಿಣಾಮಕಾರಿಯಾಗಿ ಗ್ರಂಥಗಳನ್ನು ನಾಶಗೊಳಿಸುತ್ತವೆ.

ಸೋಸಿಡ್ಸ್(Psocids): ಈ ಹುಳುಗಳನ್ನು ಸಾಮಾನ್ಯವಾಗಿ 'ಬುಕ್‌ಲೈಸ್' ಎಂದು ಕರೆಯುತ್ತಾರೆ. ಇವು ಬೂದು ಇಲ್ಲವೇ ನಸುಹಳದಿ ಬಣ್ಣವುಳ್ಳವಾಗಿವೆ. ಇವುಗಳಿಗೆ ಮೃದುವಾದ ಮೈಯೂ ಚೆನ್ನಾಗಿ

ಬೆಳದ ದವಡೆಗಳೂ ಇವೆ. ಬೆಳೆದ ದವಡೆಗಳಿರುವುದರಿಂದ ಅಗಿಯಲು ಅನುಕೂಲವಾಗಿರುತ್ತದೆ. ಈ ಹುಳುಗಳು ಹೆಚ್ಚಾಗಿ ಶೀತವೇರಿದ, ಉಪಯೋಗಿಸದೆ ಇರುವ ಹಳೆಯ ಗ್ರಂಥಗಳಲ್ಲಿರುತ್ತವೆ. ಇವು ಪುಸ್ತಕದ ರಟ್ಟಿನ ಭಾಗವನ್ನು ಅದಕ್ಕೆ ಉಪಯೋಗಿಸಿದ ಅಂಟನ್ನೂ ತಿಂದು ಪುಸ್ತಕವನ್ನು ಹಾಳು ಮಾಡುತ್ತವೆ. ಕಾಗದದ ಹಸ್ತಪ್ರತಿಗಳಿಗೆ ಇವುಗಳಿಂದ ಅಪಾಯವಾಗಬಹುದಾದರೂ ಓಲೆ ಗ್ರಂಥಗಳಿಗೆ ಇದರ ಉಪಟಳ ಅಷ್ಟೊಂದು ಇಲ್ಲವೆಂದೇ ಹೇಳಬಹುದು.

ಇದೇ ಅಲ್ಲದೆ ಕಂದು ಬಣ್ಣದ ಹಾರುಕೀಟ, ಮಣ್ಣಿನ ಕಣಜಗಳು, ಗ್ರಂಥ ಚೇಳುಗಳಿಂದ ಅಲ್ಪಸ್ವಲ್ಪ ನಷ್ಟ ಸಂಭವಿಸಬಹುದಾದರೂ ಇವುಗಳಿಂದ ಸುಲಭವಾಗಿ ಅಲ್ಪಸ್ವಲ್ಪ ಗ್ರಂಥ ಸಂರಕ್ಷಣೆ ಮಾಡಬಹುದು.

ಬೂಷ್ಟು: ಕ್ರಿಮಿ ಕೀಟಗಳಲ್ಲದೆ ಸಸ್ಯವರ್ಗಕ್ಕೆ ಸೇರಿದ ಬೂಷ್ಟಿನಿಂದ ಹಸ್ತಪ್ರತಿಗಳಿಗೆ ಸಾಕಷ್ಟು ಹಾನಿ ಆಗುವುದು ಸಂಭವನೀಯ. ತೇವಾಂಶದಿಂದ ಉತ್ಪತ್ತಿಯಾಗುವ ಈ ಬೂಷ್ಟಿನ ಬೆಳವಣಿಗೆ ಅತಿ ಹೆಚ್ಚಾಗಿರುತ್ತದೆ. ಇದು ಒಂದು ಗ್ರಂಥಕ್ಕೆ ಹಿಡಿದರೆ, ಉಳಿದವಕ್ಕೂ ಹರಡುವುದು ಸಾಮಾನ್ಯ. ಆದುದರಿಂದ ಬೂಷ್ಟು ಬರುವುದನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದು ಬಂದ ಕೂಡಲೇ ಅವುಗಳನ್ನು ಬೇರ್ಪಡಿಸಿ ಅಗತ್ಯವಾದ ಉಪಚಾರ ಮಾಡುವುದು ಮತ್ತು ಉಳಿದವುಗಳಿಗೆ ಹರಡದಂತೆ ನೋಡಿಕೊಳ್ಳುವುದು ತುಂಬಾ ಅತ್ಯವಶ್ಯಕ.

೪.೩. ಪ್ರಾಚೀನ ಸಂರಕ್ಷಣೆಗಳು

ಹಸ್ತಪ್ರತಿ ಕಟ್ಟುಗಳು ಕವಿ, ಲಿಪಿಕಾರ, ಬರೆಸಿದ ದಾನಿ, ಬರವಣಿಗೆಗೆ ಹಸ್ತಪ್ರತಿ ಕಟ್ಟುಗಳನ್ನು ಅಣಿಗೊಳಿಸಿದ ಕುಶಲಕರ್ಮಿ ಸಮುದಾಯ ಇವರೆಲ್ಲರ ಪರಿಶ್ರಮದ ಮೊತ್ತವಾಗಿ ರೂಪುಗೊಳ್ಳುತ್ತಿವೆ. (ಪ್ರಾಚೀನರು ಇಂತಹ ಕಟ್ಟುಗ್ಗಳನ್ನು 'ಕವಳಿಗೆ' ಎಂದು ಕರೆದಿರುವುದು ಉಂಟು) ಅವುಗಳನ್ನು ರಕ್ಷಿಸಿಕೊಂಡು ಮುಂದಿನ ಪೀಳಿಗೆಗೆ ಬಳುವಳಿ ನೀಡಬೇಕಾದುದು ಆಯಾ ಕಾಲದ ಸಾಮಾಜಿಕ ಹೊಣೆ. ಏಕೆಂದರೆ ಒಂದೊಂದು ಹಸ್ತಪ್ರತಿಯೂ ವ್ಯಕ್ತಿ, ಸಂಸ್ಥೆ, ಸಮಾಜದ ಭೂತ, ವರ್ತಮಾನ ಹಾಗೂ ಭವಿಷ್ಯತ್ತಿನ ಸಾಂಸ್ಕೃತಿಕ ಬುತ್ತಿ. ಅದು ಕೆಡದಂತೆ, ಅಪಹೃತವಾಗದಂತೆ, ಅಯೋಗ್ಯರಿಗೆ ದೊರಕದಂತೆ ಆಕಸ್ಮಿಕ ಅಪಾಯಗಳಿಗೆ ಒಳಗಾಗದಂತೆ, ದೀರ್ಘಕಾಲ ಬಾಳುವಂತೆ ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಪ್ರಕ್ರಿಯೆಗಳನ್ನು ಇಲ್ಲಿ ಗಮನಿಸಬಹುದಾಗಿದೆ.

"ಅಗ್ನಿ ಮೂಶಿಕ ಚೋರೇಭ್ಯೋಶಿವೋ ರಕ್ಷಂತು ಪುಸ್ತಕಂ
ತೈಲಾದ್ರಕ್ಷೇಜ್ಜಲಾದ್ರಕ್ಷೇಚ್ಛಿಥಿಲ ಬಂಧನಾತ್
ಮೂರ್ಖಹಸ್ತೇನ ದಾತವ್ಯಮೇಯಂ ವದತಿ ಪುಸ್ತಕಂ"[೭]

ಅಗ್ನಿ, ಮೂಷಕ, ತೈಲ, ಜಲ, ಚೋರ, ಶಿಥಿಲಬಂಧನ ಮೂರ್ಖಹಸ್ತದಿಂದ ಹಸ್ತಪ್ರತಿಗಳನ್ನು ರಕ್ಷಿಸಿ ಎಂಬುದು ಈ ಪದ್ಯದ ಸಾರಾಂಶ. ಇವೆಲ್ಲ ಅಂಶಗಳು ಹಸ್ತಪ್ರತಿಗಳ ವಿನಾಶಕ್ಕೆ ಕಾರಣವಾಗಿವೆ. ಈ ಏಳು ಆಪತ್ತುಗಳಲ್ಲಿ ಮೊದಲೈದು 'ಆಕಸ್ಮಿಕ', ಉಳಿದ ಎರಡು ನಿವಾರಕಗಳೆಂದು ಹೇಳಬಹುದು.

ವಿಧಾನಗಳ ಸ್ಥೂಲ ವಿಂಗಡಣೆ

ರೂಢಿಯಲ್ಲಿರುವ ಹಸ್ತಪ್ರತಿ ರಕ್ಷಣಾವಿಧಾನಗಳನ್ನು ಪ್ರಾಚೀನ ಹಾಗೂ ಆಧುನಿಕವೆಂಬುದಾಗಿ ವಿಂಗಡಿಸಿಕೊಳ್ಳಬಹುದು. ಪ್ರಾಚೀನ ವಿಧಾನಗಳು ತಮ್ಮ ಅರಿವು, ಅನುಕೂಲತೆ, ಲಭ್ಯಾಲಭ್ಯತೆ ಸಲಕರಣೆ ಇವುಗಳನ್ನಾಧರಿಸಿ ಬಹುದಿನಗಳ ಅನುಭವದಿಂದ ಪರಂಪರಾಗತವಾಗಿ ಬಂದ ವಿಧಾನಗಳಾದರೆ, ಆಧುನಿಕ ವಿಧಾನಗಳು ಹಸ್ತಪ್ರತಿಯ ಆಯಾ ಸಾಮಗ್ರಿಗಳು ನಶಿಸಲು ಕಾರಣವಾಗುವ ಸಮಯ, ಸನ್ನಿವೇಶಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಕಂಡುಕೊಂಡವುಗಳಾಗಿವೆ.

ಇಲ್ಲಿ ಪ್ರಾಚೀನ ರಕ್ಷಣಾವಿಧಾನಗಳು ಎಷ್ಟು? ಯಾವುವು? ಅವುಗಳ ಕಾರ್ಯವಿಧಾನಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

೪.೩.೧. ರಕ್ಷಾಕವಚ

ಹಸ್ತಪ್ರತಿ ಕಟ್ಟುಗಳಲ್ಲಿಯ ಗರಿಗಳನ್ನು ಅನುಕ್ರಮವಾಗಿ ಜೋಡಿಸಿ ಅದರ ಮೇಲೆ ಕೆಳಗೆ ಅಂದರೆ ಗರಿಗಳ ಎರಡೂ ಭಾಗದಲ್ಲಿ ಮರದ ಹಲಗೆಗಳನ್ನು(ಫಳಿಗಳನ್ನು) ಇಟ್ಟು ಕಟ್ಟುತ್ತಿದ್ದರು. ಗರಿಗಳು(Folis) ಅಸ್ತವ್ಯಸ್ತವಾಗದಂತೆ, ಅದರ ಅಂಚುಗಳು ಮುರಿಯದಂತೆ ಓಲೆಗರಿಯ ಆಕೃತಿಗೆ (ಅಳತೆಗನುಗುಣವಾಗಿ) ಕೊರೆದು, ಆ ಫಳಿಗಳ ನಡುವೆ ಎರಡೂ ಬದಿಗೆ ರಂಧ್ರ ಕೊರೆದು, ಅದರ ಮೂಲಕ ದಾರ ಪೋಣಿಸಿ ಕಟ್ಟುಗಳನ್ನು ಬಿಗಿಯಾಗಿ ಕಟ್ಟುತ್ತಿದ್ದರು. ದಾರ ಜಗ್ಗುವಿಕೆಯಿಂದ ಗರಿಗೆ ಪೆಟ್ಟು ತಾಗಿ ರಂಧ್ರಗಳು ದಿನದಿಂದ ದಿನಕ್ಕೆ ದೊಡ್ಡದಾಗದಂತಿರಲೆಂಬ ಉದ್ದೇಶದಿಂದ ಅವುಗಳಿಗೆ ಬೆಳ್ಳಿಯ ಉಂಗುರ ಮಾಡಿಸಿ ಹಾಕಿರುವ ಪ್ರತಿಗಳೂ ಇವೆ. ಇಂಥ ಉಂಗುರಗಳನ್ನು ಅಳವಡಿಸಿರುವ ಹಸ್ತಪ್ರತಿಗಳು ವಿರಳವೆಂದೇ ಹೇಳಬಹುದು. ಈ ರೀತಿಯ ಹಸ್ತಪ್ರತಿಯು ಕುಮಾರವ್ಯಾಸ ಭಾರತದ ಒಂದು ಪ್ರತಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರಿನಲ್ಲಿದೆ. ಇದೊಂದು ಅಪರೂಪದ ದರ್ಶನ. ಇದರಂತೆ ಬೆಳ್ಳಿಯ ಉಂಗುರದ ಬದಲಾಗಿ ಕಬ್ಬಿಣದ ರಿಂಗುಗಳನ್ನು ಅಳವಡಿಸಿರುವ ಹಸ್ತಪ್ರತಿಗಳೂ ಲಭ್ಯವಾಗಿವೆ. ಇನ್ನೊಂದು ವಿಶೇಷವೆಂದರೆ ಕೆಲವೊಮ್ಮೆ ಗರಿಗಳ ಸಂಖ್ಯೆ ಬಹಳವಿದ್ದರೆ ಕೈಯಲ್ಲಿ ಎತ್ತಿ ಹಿಡಿದು ಓದುವಾಗ ಗರಿ ಜಾರಬಾರದೆಂದು ರಂಧ್ರದಲ್ಲಿ ದಾರಕ್ಕೆ ಬದಲಾಗಿ ಕಬ್ಬಿಣದ ಅಥವಾ ಮರದ ಕಡ್ಡಿ ಬಳಸುತ್ತಿದ್ದರು. ಇದಕ್ಕೆ ಕಂಬಿಯೆಂದು ಕರೆಯುತ್ತಿದ್ದರು. ಹೆಚ್ಚಿನ ಸಂದರ್ಭದಲ್ಲಿ ಹುರಿಗೊಳಿಸಿಕೊಂಡ ಗದಿ ದಾರವನ್ನು ಬಳಸಲಾಗಿದೆ. 'ಕಾಮನ ಕಾರ್ಮುಕವ ಕತ್ತರಿಸಿ ಪುಸ್ತಕಕೆಸೆವ ಕಂಬಿ ಮಾಡಿ' ಎಂಬ ಭಾಸ್ಕರ ಕವಿಯ ಹೇಳಿಕೆಯನ್ನು ಇಲ್ಲಿ ಸೇರಿಸಬಹುದು.

ಹೀಗೆ ಕಾಗದ ರೂಪದಲ್ಲಿ ಸಿಗುವ ಹಸ್ತಪ್ರತಿಗಳಾದ ಕೋರಿಕಾಗದ, ತಿಳಿ ನೀಲಿಕಾಗದ ಕಟ್ಟುಗಳಿಗೂ ರಕ್ಷಾಕವಚಗಳಾಗಿ ಮರದ ಹಲಗೆಯ ಫಳಿಗಳನ್ನೇ ಜೋಡಿಸಿರುತ್ತಾರೆ. ಏಕೆಂದರೆ ಈ ಕಾಗದಗಳು ತಾಳೆಗರಿಗಳ ಹಾಗೆ ಬಿಡಿ ಬಿಡಿಯಾಗಿರುವ ಹಾಳೆಗಳು. ಆಕಾರದಲ್ಲಿ ಮಾತ್ರ ಇವು ಸ್ವಲ್ಪ ವ್ಯತ್ಯಾಸವಾಗಿರುತ್ತದೆ. ಸಾಮಾನ್ಯವಾಗಿ ಕೋರಿಕಾಗದ ಹಾಳೆಗಳು ದಪ್ಪವಾಗಿರುತ್ತದೆ. ತಿಳಿ ನೀಲಿ ಕಾಗದದ ಹಾಳೆಗಳು ತೆಳುವೂ ಆಗಿರುತ್ತವೆ. ಒಮ್ಮೊಮ್ಮೆ ಹಾಳೆಗಳನ್ನು ಎರಡು ಮೂರು ಕಾಗದಗಳಿಗೆ

ಅಂಟುಹಾಕಿ ಸಿದ್ಧಪಡಿಸಿರುವ ನಿದರ್ಶನಗಳೂ ಇವೆ. ಇನ್ನೊಂದು ವಿಶೇಷ ಸಂಗತಿ ಏನೆಂದರೆ ತೆಳು ಕಬ್ಬಿಣದ ಹಾಳೆಯ ಪಳಿಗಳನ್ನು ಕಾಗದದ ಪ್ರತಿಗಳಿಗೆ ರಕ್ಷಾಕವಚವನ್ನಾಗಿ ಬಳಸಿರುವ ನಿದರ್ಶನಗಳುಂಟು ಇಂಥ ಕವಚವುಳ್ಳ ಹಸ್ತಪ್ರತಿಗಳು ಸಿಗುವುದು ವಿರಳವೆಂದೇ ಹೇಳಬೇಕು. ನಾನು ಕ್ಷೇತ್ರಕಾರ್ಯ ಮಾಡುವ ಸಂದರ್ಭದಲ್ಲಿ ಗಮನಿಸಿದಂತೆ, ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿಯೂ ಇಂಥ ಹಸ್ತಪ್ರತಿಗಳಿದ್ದವು ಎಂಬ ಮಾಹಿತಿ ಲಭ್ಯವಾಗಿದೆ. ಖಾಸಗಿ ವ್ಯಕ್ತಿಗಳ ಒಡೆತನದಲ್ಲಿರುವವರ ಹತ್ತಿರ ಇಂಥ ಪ್ರತಿಗಳು ಇವೆ. ವಿಶೇಷವೆಂದರೆ ಮಾಟ, ಮಂತ್ರದ ಹಸ್ತಪ್ರತಿಗಳಿಗೆ ಮಾತ್ರ ಅಳವಡಿಸಿರುವುದು ಗಮನಾರ್ಹ ಸಂಗತಿಯಾಗಿದೆ.

ಹೀಗೆ ಸುರಳಿಯಾಕಾರದ ಅತ್ಯಂತ ಉದ್ದದ ಹಸ್ತಪ್ರತಿಗಳಿಗೆ ಅಂದರೆ ಉದ್ಧರಣೆ ಪಟಲಗಳಿಗೆ ಬಿದಿರಿನ ಬೊಂಬನ್ನು ಸಾಮಾನ್ಯವಾಗಿ ಬಳಸುತ್ತಿದ್ದರು. ಅಲ್ಲದೆ ವಿಶೇಷವಾಗಿ ಬಿದರಿನ ಬೊಂಬಿನ ಬದಲಾಗಿ ಕಬ್ಬಿಣದ ತಗಡಿನಿಂದ ಮಾಡಿದ ರಕ್ಷಾಕವಚ ಬಳಸುತ್ತಿರುವುದನ್ನು ಗಮನಿಸಬಹುದು. ಇದು ದವಸ ಧಾನ್ಯಗಳನ್ನು ಅಳೆಯುವ ಸೇರಿನಂತಿರುತ್ತವೆ. ಇಂಥದೊಂದು ಹಸ್ತಪ್ರತಿ ಗುಲ್ಬರ್ಗಾ ವಿಶ್ವವಿದ್ಯಾಲಯ ಹಸ್ತಪ್ರತಿಭಂಡಾರ ಹಾಗೂ ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ಭಂಡಾರಗಳಲ್ಲಿ ಕಾಣಬಹುದಾಗಿದೆ. ಉದ್ಧರಣೆ ಪಟಲಗಳು ವೀರಶೈವ ಧರ್ಮದ ಚರಿತ್ರೆ, ಸಿದ್ಧಾಂತಗಳಿಗೆ ಸಂಬಂಧಿಸಿದವುಗಳಾಗಿದ್ದು, ಅವುಗಳಿಗೆ ಈ ರೀತಿ ರಕ್ಷಾಕವಚವನ್ನು ಅಳವಡಿಸಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾಗಿದೆ.

೪.೩.೨. ಅರಿವೆ ಸುತ್ತುವುದು

ಹಸ್ತಪ್ರತಿಗಳ ಸಂರಕ್ಷಣೆಯಲ್ಲಿ ಕೆಂಪು, ಹಳದಿ, ಹಸಿರು ಬಟ್ಟೆಯ ಬಣ್ಣವು ಕ್ರಿಮಿ ಕೀಟಗಳಿಂದ ಮತ್ತು ತೇವಾಂಶದಿಂದ ಕಾಪಾಡುತ್ತವೆ. ರೋಗನಿರೋಧಕ ಗುಣವನ್ನು ಹೊಂದಿರುತ್ತವೆ. ಅಂತೆಯೇ ಪೂಜಾ ಪರಿಕರಗಳಾದ ಅರಿಶಿಣ, ಕುಂಕುಮದ ಬಣ್ಣಗಳನ್ನು ಇಲ್ಲಿ ಬೆರೆಸಬಹುದು. ವಸ್ತ್ರದ ಉಲ್ಲೇಖ ಭವಿಷ್ಯ ಪುರಾಣದಲ್ಲಿ ಹೀಗೆ ಬರುತ್ತದೆ.

"ವಸ್ತ್ರಯುಗ್ಮೈನ ಸಂವೀತಂ ಪುಸ್ತಕಂ ಪ್ರತಿಪಾದಯೇತ್
ಸಾಮಾನ್ಯಂ ಸರ್ವಲೋಕಾನಾಂ ಸ್ಥಾಪಯೋದದ ವಾ ಮಠೇ"

ಹಸ್ತಪ್ರತಿಗಳ ಸಂರಕ್ಷಣೆಯ ದೃಷ್ಟಿಯಿಂದ ವಸ್ತ್ರದ ಮನೆತನ ಒಂದು ರೂಪಗೊಂಡಿತು. ರೇಷ್ಮೆ, ಹತ್ತಿ ಬಟ್ಟೆಗಳನ್ನು ಹಸ್ತಪ್ರತಿಗಳ ಸಂರಕ್ಷಣೆಗೆ ಉಪಯುಕ್ತವಾಗಿ ಬಳಸಲಾಗುತ್ತದೆ.

ಮೇಲೆ ಹೇಳಲಾಗಿರುವ ಉಲ್ಲೇಖದನ್ವಯ ಯಾವುದೇ ತರಹದ ಪಳಿಗಳ ರಕ್ಷಾಕವಚವುಳ್ಳ ಹಸ್ತಪ್ರತಿಗಳಿಗೆ ಅವುಗಳ ಅಳತೆಗನುಗುಣವಾಗಿ ಕೆಂಪು ಅಥವಾ ನೀಲಿ ಹಾಗೂ ಹಳದಿ ಬಣ್ಣದ ಅರಿವೆಯಿಂದ ಸುತ್ತಿರುತ್ತಾರೆ. ರೇಷ್ಮೆ ಅರಿವೆಯನ್ನು ಸುತ್ತಿರುವ ಹಸ್ತಪ್ರತಿಗಳು ಇರುವ ನಿದರ್ಶನಗಳೂ ಇವೆ. ರಕ್ಷಾಕವಚಗಳು ಹಾಗೂ ಗರಿಗಳು ನಾಶವಾಗದಂತೆ ರಕ್ಷಣೆ ಒದಗಿಸಿದರೆ ಅದರ ಮೇಲೆ ಬಿಗಿಯಾಗಿ ಸುತ್ತಲ್ಪಟ್ಟ ಬಟ್ಟೆಯು ಧೂಳು, ಕ್ರಿಮಿಗಳು ಒಳಪ್ರವೇಶ ಮಾಡದಂತೆ ರಕ್ಷಣೆ ಮಾಡುತ್ತದೆ.

ಕೆಂಪು–ಹಳದಿ ಬಣ್ಣಗಳಿಂದ ಕ್ರಿಮಿ ಕೀಟಗಳು ಹತ್ತಿರ ಸುಳಿಯಲಾರವು ಎಂಬುದು ನಂಬಿಕೆ. ಪ್ರಸ್ತುತ ಸಂದರ್ಭದಲ್ಲಿ ಸಹ ಇಂಥ ಬಣ್ಣದ ಬಟ್ಟೆಗಳನ್ನು ಸುತ್ತುವುದು ರೂಢಿಯಲ್ಲಿದೆ. ಮಠಮಾನ್ಯಗಳ ಹಸ್ತಪ್ರತಿ ಭಂಡಾರಗಳಲ್ಲಿ, ಮನೆಗಳಲ್ಲಿರುವ ಹಸ್ತಪ್ರತಿಗಳಿಗೆ ಕೆಂಪು, ಹಳದಿ ಮತ್ತು ನೀಲಿ ಬಟ್ಟೆಯಿಂದಲೇ ಕಟ್ಟಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ. ಮೈಸೂರು ವಿ.ವಿ.ಯ ಹಸ್ತಪ್ರತಿ ಭಂಡಾರಗಳಲ್ಲಿ, ಶೃಂಗೇರಿಯ ಅದ್ವೈತ ಶೋಧ ಕೇಂದ್ರದ ಹಸ್ತಪ್ರತಿ ಭಂಡಾರಗಳಲ್ಲಿ, ಕೆಳದಿ ವಸ್ತುಸಂಗ್ರಹಾಲಯದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಹಸ್ತಪ್ರತಿ ಭಂಡಾರಗಳಲ್ಲಿ 'ಕೆಂಪು' ಬಟ್ಟೆಯಿಂದ ಹಸ್ತಪ್ರತಿ ಕಟ್ಟುಗಳನ್ನು ಸುತ್ತಿರುವುದನ್ನು ಗಮನಿಸಬಹುದು ಹಾಗೂ ಗದಗದ ಶ್ರೀ ತೋಂಟದಾರ್ಯಮಠ ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯ, ಹಸ್ತಪ್ರತಿ ಭಂಡಾರದಲ್ಲಿ ಕಾಗದದ ಹಸ್ತಪ್ರತಿಗಳಿಗೆ ಹಳದಿ ಬಣ್ಣದ ಬಟ್ಟೆಯಿಂದ ಸುತ್ತಿರುವುದನ್ನು ಹಾಗೂ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ನೀಲಿ ಬಣ್ಣದ ಬಟ್ಟೆಯಿಂದ ಹಸ್ತಪ್ರತಿ ಕಟ್ಟುಗಳನ್ನು ಸುತ್ತಿರುವುದನ್ನು ಗಮನಿಸಬಹುದು. ಇನ್ನೊಂದು ವಿಶೇಷ ಸಂಗತಿಯೆಂದರೆ ಕೆಂಪು ಅಥವಾ ನೀಲಿ ಬಣ್ಣದ ಅರಿವೆಗೆ ವ್ಯತಿರಿಕ್ತವಾಗಿ ಬಿಳಿಯ ಅರಿವೆಯನ್ನು ಹಸ್ತಪ್ರತಿಗಳಿಗೆ ಕಟ್ಟಿರುವುದನ್ನು ಗಮನಿಸಿದ್ದೇನೆ. ವಿಶೇಷವಾಗಿ ಜೈನ ಹಾಗೂ ಸಂಸ್ಕೃತ ಹಸ್ತಪ್ರತಿಗಳನ್ನು ಬಿಳಿಯ ಬಣ್ಣದ ಬಟ್ಟೆಯಿಂದ ಸುತ್ತಲಾಗಿದೆ. ಇದಕ್ಕೆ ಸ್ಪಷ್ಟವಾದ ನಿದರ್ಶನಗಳೆಂದರೆ ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಪಾರ್ಶ್ವನಾಥ ದಿಗಂಬರ ಜೈನಮಠ. ಗುಲ್ಬರ್ಗಾ ನಗರದಲ್ಲಿರುವ ಮೋಹನಭಟ್ಟ ಜೋಷಿ ಇವರಲ್ಲಿ ೧೧೮ ಕಟ್ಟುಗಳು, ಚಿತ್ತಾಪುರ ತಾಲೂಕಿನ ಹೊನಗುಂಟದ ಗುರುನಾಥಭಟ್ ಜೋಶಿಯವರಲ್ಲಿ ೧೧೬ ಕಟ್ಟುಗಳು ಬಿಳಿಯವಸ್ತ್ರದಿಂದ ಕಟ್ಟಿದ ಹಸ್ತಪ್ರತಿಗಳು ಇರುವುದು ಕಂಡುಬಂದಿದೆ. ಗುರುನಾಥಭಟ್ ಜೋಶಿಯವರು ಎಲ್ಲಾ ಹಸ್ತಪ್ರತಿಗಳನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ದಾನವಾಗಿ ಕೊಟ್ಟಿದ್ದಾರೆ. ಸದ್ಯ ಇವುಗಳ ಸಂರಕ್ಷಣಾ ಕಾರ್ಯ ನಡೆಯುತ್ತಿದೆ.

ಈ ಬಟ್ಟೆಗಳಲ್ಲಿ ಹಾಗೂ ಬಟ್ಟೆಯ ಒಳಗಡೆ ಕಟ್ಟುಗಳ ಸುತ್ತಲೂ ಒಣಗಿದ ಹೊಂಗೆಯ ಮತ್ತು ಬೇವಿನ ಎಲೆಯ ಪುಡಿಯನ್ನು ಉದುರಿಸುತ್ತಿದ್ದರು ಎಂಬುದು ಎಂ.ವಿ.ಸೀತಾರಾಮಯ್ಯನವರ ಅಭಿಪ್ರಾಯವಾಗಿದೆ. ಬಟ್ಟೆಯಲ್ಲಿ ಇಂಥ ವಸ್ತುಗಳನ್ನು ಇಟ್ಟಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಾನು ಖುದ್ದಾಗಿ ನೋಡಿ ಸ್ವಚ್ಛಗೊಳಿಸಿರುವೆ. ಹೊಂಗೆ ಹಾಗೂ ಬೇವಿನ ಎಲೆಗಳು ಕಹಿಯಾಗಿರುತ್ತವೆ. ಇದರಂತೆಯೇ 'ಬೋರೋ–ಬಾರೇ' ಗಿಡದ ಕಟ್ಟಿಗೆಯ ವಿಷಕಾರಿಯಾಗಿರುತ್ತದೆ. ಈ ಕಾರಣಕ್ಕಾಗಿ ಪ್ರಸ್ತುತ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರದಲ್ಲಿ ಸಂಗ್ರಹಿತಗೊಂಡ ಹಸ್ತಪ್ರತಿಗಳಿಗೆ ರಕ್ಷಾಕವಚವನ್ನಾಗಿ ಬಳಸಿರುವುದು ಕಂಡುಬರುತ್ತದೆ. ಈ ಕಾರ್ಯ ಈಗಲೂ ಮುಂದುವರಿದಿದೆ. ಒಟ್ಟಾರೆ ನಮ್ಮ ಪ್ರಾಚೀನರು ಹಸ್ತಪ್ರತಿಗಳ ಸಂರಕ್ಷಣೆಗಾಗಿ ಹಲವಾರು ಉಪಕ್ರಮಗಳನ್ನು ಬಳಸಿ ಸಂರಕ್ಷಣೆ ಮಾಡಿ, ಕನ್ನಡ ಸಾಹಿತ್ಯ ಚರಿತ್ರೆಯನ್ನು ಮರು ಸೃಷ್ಟಿಸುವುದಕ್ಕೆ ನಾಂದಿ ಹಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು.

೪.೩.೩. ಸಂದೂಕ(ಪೆಟ್ಟಿಗೆ)

ಹಸ್ತಪ್ರತಿಗಳನ್ನು ಸಂರಕ್ಷಿಸುವ ವಿಧಾನಗಳಲ್ಲಿ 'ಸಂದೂಕ' ಪೆಟ್ಟಿಗೆಯೂ ಒಂದು. ಬಂಗಾರದಂತಹ, ಬೆಳ್ಳಿಯಂತಹ ಮಕ್ಕಳಂತೆ ಹಸ್ತಪ್ರತಿಗಳನ್ನು ಧಾರ್ಮಿಕ ಸಂಪತ್ತು ಎಂದು ಭಾವಿಸಿರುವ ನಮ್ಮ ಪ್ರಾಚೀನರು ಒಂದು ಪೀಳಿಗೆಯಿಂದ ಬಹು ಪೀಳಿಗೆಯವರೆಗೆ ಹಸ್ತಪ್ರತಿಗಳನ್ನು ಉಳಿಸುವ, ಕಾಪಿಡುವ ದೂರದೃಷ್ಟಿಯುಳ್ಳವರಾಗಿದ್ದರು. ಹೀಗಾಗಿ ಅವುಗಳನ್ನು ಚಿಕ್ಕ ಮಕ್ಕಳಾದಿಯಾಗಿ ಅರಿಯದವರ ಕೈಗಳಿಗೆ ಸಿಗದಂತೆ, ಕ್ರಿಮಿಕೀಟಗಳಿಂದ ರಕ್ಷಿಸಲು ಹಲವು ಕ್ರಮಗಳನ್ನು ತಮ್ಮ ಅನುಭವದ ನೆಲೆಯಲ್ಲೇ ಕಂಡುಕೊಂಡಿದ್ದರು. ಇದಕ್ಕಾಗಿ ದುಬಾರಿ ವೆಚ್ಚ ಹಾಗೂ ಶ್ರಮವಾದರೂ ಹಿಂಜರಿಯುತ್ತಿರಲಿಲ್ಲವೆಂಬುದಕ್ಕೆ ಈ ಪೆಟ್ಟಿಗೆಗಳೇ ಪ್ರಮುಖ ನಿದರ್ಶನಗಳಾಗಿವೆ.

ಇಂತಾ ಪೆಟ್ಟಿಗೆಗಳನ್ನು ವಿವಿಧ ವಿನ್ಯಾಸಗಳಲ್ಲಿ ತಯಾರಿಸಿರುವುದು ಕಂಡುಬರುತ್ತದೆ. ಒಂದೇ ಅಳತೆಯಿಂದ ಹತ್ತು ಕಟ್ಟು ಹಸ್ತಪ್ರತಿಗಳಿಗಿಂತ ಹೆಚ್ಚು ಹಸ್ತಪ್ರತಿಗಳಿದ್ದರೆ ಅವುಗಳೆಲ್ಲವನ್ನು ಮರದ ಹಲಗೆಗಳ ಪೆಟಾರಿಯಲ್ಲಿ ಇಟ್ಟು ಭದ್ರಪಡಿಸುತ್ತಿದ್ದರು. ಹಸ್ತಪ್ರತಿಗಳನ್ನು ಇಡುವ ಸಲುವಾಗಿಯೇ ವಿಶೇಷವಾಗಿ ಈ ಪೆಟ್ಟಿಗೆಯನ್ನು ತಯಾರಿಸಲಾಗುತ್ತಿತ್ತು. ಈ ಪೆಟ್ಟಿಗೆಯೊಳಗೆ ಹಸ್ತಪ್ರತಿಗಳನ್ನು ಇಡುವ ಮುನ್ನ ಗ್ರಂಥಗಳನ್ನೆಲ್ಲಾ ಹೊರಗಡೆ ಸ್ವಚ್ಛಗೊಳಿಸಿ, ಅದರೊಳಗೆ ಒಂದೊಂದು ಎಲೆ, ತಂಬಾಕುಪುಡಿ ಕರ್ಪೂರಗಳನ್ನು ಇಡುತ್ತಿದ್ದರು ಇದಕ್ಕೆ ಒಂದು ಸ್ಪಷ್ಟವಾದ ನಿದರ್ಶನವೆಂದರೆ ಪ್ರಾಚೀನ ಪುರಾಣವೊಂದರಲ್ಲಿ ಹೀಗೆ ಉಲ್ಲೇಖಿಸಿರುವುದನ್ನು ಗಮನಿಸಬಹುದು.

"ಪತ್ತಳಿಕೆಯನಲು ಕಾಗದ ಮಕ್ಕು ದೌಲೆಮಸಿ
ಪಾತ್ರೆಯಕ್ಕು ಕಲಾಮು ಲೇಖನಿಯಕ್ಕೋಲೆ
ಪತ್ರಮದ ಲೇಖಮಕ್ಕಲ್ಲಿ ಕರತಾಳಿ ಹಿಂತಾಳಿ ತಾಳಿಯೆಸಿಕ್ಕುಂ
ಪ್ರತಿನಾರಾಚಮನೆ ಕಂಟಂ ಕುತ್ರಂ ಲೇಖಿಗೆ
ಬಿತ್ತಿಯೆನೆ ಪುಸ್ತಕಂ ರವಾನಿಕೆಮೆನಲ್ಕೆದಂ
ಪೊತ್ತಿರ್ಪ್ಪಕೋಲಕ್ಕು ಕಡಿತಮಂಬರಿಯಕ್ಕು ಬಳಪಮದು
ಶಭ್ಯೊಪಲ"[*]

ಮರದ ಪೆಟ್ಟಿಗೆಗಳಲ್ಲಿ ಭದ್ರವಾಗಿ ಮುಚ್ಚಿಟ್ಟು ತಾಳೆಗರಿಯ ಹಸ್ತಪ್ರತಿಗಳನ್ನು ಪರಂಪರಾಗತವಾಗಿ ಕಾಪಾಡಿಕೊಂಡು ಬರಲಾಗುತ್ತಿತ್ತು. ಸೂಕ್ತ ಸಂದರ್ಭಗಳಲ್ಲಿ ಸ್ವಚ್ಛಗೊಳಿಸಲಾಗುತ್ತಿತ್ತು. ನವರಾತ್ರಿ ಸಂದರ್ಭಗಳಲ್ಲಿ ಅವುಗಳನ್ನು ಆರಾಧಿಸಲಾಗುತ್ತಿತ್ತು. ಸಾಮಾನ್ಯವಾಗಿ ಪುರಾಣ, ಪ್ರವಚನ, ಹರಿಕಥೆ ಮೊದಲಾದವುಗಳು ನವರಾತ್ರಿ ಸಂದರ್ಭದಲ್ಲಿ, ಶ್ರಾವಣಮಾಸದಲ್ಲಿ ನಡೆಯುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಜೊತೆಗೆ ಹಸ್ತಪ್ರತಿಗಳ ವಿನಾಶಕ್ಕೂ ಇದು ಕಾರಣವಾಗುತ್ತಿತ್ತು. ತೊಳ್ಕಾಪಿಯಂ ಎಂಬ ಪ್ರಾಚೀನ ವ್ಯಾಕರಣ ಕೃತಿ ಜನ ಜೀವನಕ್ಕಾಗಿ ವ್ಯಾಕರಣವನ್ನು ಹೇಳುತ್ತದೆ. ತಮಿಳಿನಲ್ಲಿ ಬಳಸುವ ಬರವಣಿಗೆಯ ಸಾಧನಗಳು ಚಿನ್ನದ, ಬೆಳ್ಳಿಯ, ತಾಮ್ರದ ಪೆಟ್ಟಿಗೆಗಳು ಕಲ್ಲು ಬಂಡೆ, ತಾಳೆ ಎಲೆ ಮತ್ತು ಬಟ್ಟೆಗಳನ್ನು ಉಪಯೋಗಿಸುತ್ತಿದ್ದುದಕ್ಕೂ ಪುರಾವೆಯಾಗಿವೆ. ಅಲ್ಲದೆ ಆವೆಮಣ್ಣಿನ

ಹಲಗೆಗಳು, ಚರ್ಮ, ಮರದ ತೊಗಟೆ, ಮರದ ಹಲಗೆಗಳು, ಸೀಳಿದ ಬೊಂಬುಗಳನ್ನು ಸಹಾ ಉಪಯೋಗಿಸುತ್ತಿದ್ದರು ಎಂಬುದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಹಸ್ತಪ್ರತಿಗಳ ಸಂರಕ್ಷಣೆಗಾಗಿ ಬಳಸುವ ಇಂತಹ ಪೆಟಾರಿಗಳನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹಲವು ಮಠ-ಮಾನ್ಯಗಳಲ್ಲಿ, ಸಂಪ್ರದಾಯಸ್ಥರ ಮನೆಗಳಲ್ಲಿ ಗಮನಿಸಲಾಗಿದೆ. ಪ್ರಸ್ತುತ ಸಂದರ್ಭದಲ್ಲಿಯೂ ಹಸ್ತಪ್ರತಿಗಳನ್ನು ಪೆಟಾರಿಗಳಲ್ಲಿ ಇಟ್ಟಿರುವುದನ್ನು ನೋಡಬಹುದು. ಬಾದಾಮಿ ತಾಲೂಕಿನ ಬಾಗಲಕೋಟೆ ಜಿಲ್ಲೆಯ ಶಿವಯೋಗ ಮಂದಿರದ ಶ್ರೀಮಹಾಂತೇಶ್ವರ ಹಸ್ತಪ್ರತಿ ಭಂಡಾರದಲ್ಲಿ ಕಬ್ಬಿಣದಿಂದ ಮಾಡಿದ ಪೆಟಾರಿಗಳು ಇವೆ. ಇನ್ನು ಸಣ್ಣಗಾತ್ರದ ಪೆಟಾರಿಗಳು ಇರುವುದುಂಟು. ಒಂದೇ ಒಂದು ಹಸ್ತಪ್ರತಿಕಟ್ಟು ಹಿಡಿಸುವಂತೆ ಪೆಟಾರಿಗಳೂ ಇವೆ. ಅಂದರೆ ಒಂದು ಹಸ್ತಪ್ರತಿಕಟ್ಟಿನ ಅಳತೆಗನುಗುವಾಗಿ ಮರದ ಪೆಟಾರಿ ತಯಾರಿಸಿ ಆ ಪ್ರತಿಯನ್ನು ಇಟ್ಟು ಭದ್ರಪಡಿಸಲಾಗಿದೆ. ಇಂಥ ಪೆಟಾರಿಗಳನ್ನು ಆಳಂದ ತಾಲೂಕಿನ ರೇವಗ್ಗಿ ಗ್ರಾಮದ ದೇಶಗತಿಯವರ ಮನೆಯಲ್ಲಿದೆ. ಕಾಗದ ಪ್ರತಿಯಲ್ಲಿರುವ ಒಂದೇ ಹಸ್ತಪ್ರತಿಗೆ ಕ್ರಮವಾಗಿ ಕೆಂಪು, ಬಿಳಿ, ಹಳದಿ, ಬಣ್ಣದ ವಸ್ತ್ರದಿಂದ ಸುತ್ತಿ ಇಟ್ಟಿರುವುದು ವಿಶೇಷ. ಇದೊಂದು ಅಪರೂಪದ ನಿದರ್ಶನ. ಜೊತೆಗೆ ಈ ರೀತಿಯ ಸಂದೂಕವು(ಪೆಟಾರಿ) ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರದಲ್ಲಿರುವುದನ್ನು ಗಮನಿಸಬಹುದು.

ಮೇಲೆ ಹೇಳಿದಂತಹ ಪೆಟ್ಟಿಗೆಗಳನ್ನು ಸಾಮಾನ್ಯವಾಗಿ ರಹಸ್ಯ ಸ್ಥಳಗಳಲ್ಲಿ ಇಡುತ್ತಿದ್ದರು. ಇಂಥ ಪೆಟಾರಿಗಳನ್ನು ಪ್ರತ್ಯೇಕ ಕೋಣೆಯಲ್ಲೋ ಇಲ್ಲವೆ ದೇವರ ಕೋಣೆಯಲ್ಲೋ ಇಟ್ಟು ಬೀಗ ಜಡಿಯುತ್ತಿದ್ದರು. ಇನ್ನು ಮನೆಯ ಗೋಡೆಯ ಸಂದಿನಲ್ಲಿಟ್ಟು ಯಾರಿಗೂ ಕಾಣದಂತೆ ಗೋಡೆ ತುಂಬಾ ಗಾರೆ ಹಾಗೂ ಪ್ಲಾಸ್ಟಿಂಗ್ ಮಾಡಿಸುತ್ತಿದ್ದರು. ಇದಕ್ಕೆ ಸ್ಪಷ್ಟ ನಿದರ್ಶನ ಶಿವಯೋಗ ಮಂದಿರದಲ್ಲಿ ಗೋಡೆಯೊಳಗೆ ತಾಳೆಗರಿ ಹಸ್ತಪ್ರತಿ ಕಟ್ಟಿನ ಸಂಖ್ಯೆ ೧೨೯, ಲೀಲಾವತಿ ಗಣಿತ ಕಾಣಬಹುದಾಗಿದೆ. ಈ ಮಾಹಿತಿಯನ್ನು ಕ್ಷೇತ್ರಕಾರ್ಯದ ವೇಳೆ ಪಡೆಯಲಾಗಿದೆ.

೪.೩.೪. ಹೊಗೆಗೂಡು

> ಗೃಹೆಯಸ್ಯೆದಮಾಖ್ಯಾನ ಪುಸ್ತಕಂ ತಿಪ್ಪಲೆ ಧೃವಂ
> ತಸ್ಯೈಶ್ಚರ್ಯ ಸವೃದ್ಧಿಸ್ಯಾನ್ನಾಗ್ನಿ ಜೋರಭಯಂ ಭವೇತ್॥[೧೦]

ಯಾವ ಗೃಹದಲ್ಲಿ ಅಖ್ಯಾನ ಗ್ರಂಥವಿದೆಯೋ ಅಲ್ಲಿ ಐಶ್ವರ್ಯ ಸಮೃದ್ಧಿಗಳು ನೆಲೆಸಿರುತ್ತವೆ. ಆದರೆ ಅಗ್ನಿ, ಚೋರ ಭಯವೂ ಇರುವುದು ಎಂದು ಹೇಳಲಾಗಿದೆ.

ಈ ಅಂಶಗಳನ್ನು ಗಮನಿಸಿದಾಗ ಪ್ರಾಚೀನರು ಗ್ರಂಥಗಳು ಐಶ್ವರ್ಯದ ಪ್ರತೀಕಗಳಾಗಿರುವುದರಿಂದ ಹಸ್ತಪ್ರತಿಗಳ ಸಂರಕ್ಷಣೆಗೆ ತಮ್ಮದೇ ಆದ ಉಪಾಯಗಳನ್ನು ಕಂಡುಕೊಂಡಿದ್ದರು. ಅವುಗಳಲ್ಲಿ ಹೊಗೆಗೂಡು ಒಂದು. ಹಸ್ತಪ್ರತಿಗಳ ಸಂರಕ್ಷಣೆಯಲ್ಲಿ ಹೊಗೆಗೂಡು ಮಹತ್ವದ ಪಾತ್ರ ವಹಿಸುತ್ತದೆಂದು ಪ್ರಾಚೀನರು ನಂಬಿದ್ದರು. ಹಾಗಾಗಿ 'ಬೆತ್ತದ ಬುಟ್ಟಿಗಳನ್ನು ತಯಾರಿಸಿ' ಅದರಲ್ಲಿ ಹಸ್ತಪ್ರತಿಗಳನ್ನು ಇಟ್ಟು ಅಡಿಗೆ ಮನೆಯ ಒಲೆಯ ನೇರವಾಗಿಯೋ ಇಲ್ಲವೇ ಸ್ವಲ್ಪ ಆಚೆ ಈಚೆಯಾಗಿಯೋ ಮೇಲಕ್ಕೆ

ಎತ್ತರದಲ್ಲಿ ಹೊಗೆ ತಾಗುವ ಹಾಗೆ ನೇತು ಹಾಕಿ ಕಟ್ಟುತ್ತಿದ್ದರು. ಇಂಥ ವ್ಯವಸ್ಥೆಯನ್ನು ಮಲೆನಾಡ ಕರಾವಳಿ ಪ್ರದೇಶಗಳಲ್ಲಿ ಬಳಸಿಕೊಳ್ಳುತ್ತ ಬಂದಿದ್ದಾರೆ.[೧೧] ಹಳ್ಳಿಯ ಪ್ರಾಚೀನ ಮನೆಗಳಲ್ಲಿ ಈ ಉಪಕ್ರಮ ನಡೆದಿರುವುದನ್ನು ಈಗಲೂ ಕಾಣಬಹುದು. ಹೆಚ್ಚಾಗಿ ತಾಳೆಗರಿ ಕಟ್ಟುಗಳಿಗೆ ಈ ಮಿಶ್ರಣವನ್ನು ಬಳಸಲಾಗಿದೆ ಎಂಬುದು ಸ್ಪಷ್ಟ.

ಈ ವ್ಯವಸ್ಥೆಯಲ್ಲಿ ಅಡುಗೆ ಮಾಡುವಾಗ ಒಲೆಯಿಂದ ಹೊರಹೊಮ್ಮುವ ಹೊಗೆಯು ನೇರವಾಗಿ ಈ ಬುಟ್ಟಿಗಳಿಗೆ ತಾಕುತ್ತಿರುತ್ತದೆ. ಆದ್ದರಿಂದ ಹೊಗೆಯಿಂದಾಗಿ ಯಾವ ಕ್ರಿಮಿಕೀಟಗಳು ನುಸುಳುವುದಿಲ್ಲವೆಂದು ನಂಬಿದ್ದರು. ಪ್ರಾಚೀನರು ವೆಚ್ಚವಿಲ್ಲದ ಸುಲಭೋಪಾಯದ ವಿಧಾನದ ಪ್ರೇರಣೆಯಿಂದಾಗಿ ಇಂದು ಕೆಲ ಹಸ್ತಪ್ರತಿ ಭಂಡಾರಗಳಲ್ಲಿ ಯಂತ್ರಗಳ ಸಹಾಯದಿಂದ ಪ್ರಧೂಮ್ನ ಉಪಚಾರ ಮಾಡುತ್ತಿದ್ದಾರೆ. ಧರ್ಮಸ್ಥಳದ ಹಸ್ತಪ್ರತಿ ಭಂಡಾರದಲ್ಲಿ ಹಸ್ತಪ್ರತಿಗಳನ್ನಿಡುವ ಕಪಾಟುಗಳ ಕೆಳಗೆ **'ಫ್ಯೂಮಿಗೇಷನ್ ಛೇಂಬರ್'** ಅಳವಡಿಸಿ ಅದರಲ್ಲಿ ರಾಸಾಯನಿಕ ದ್ರಾವಣ ಹಾಕಿ ಹಬೆಯನ್ನು ಕೊಡಲಾಗುತ್ತಿದೆ. ಈ ಮಾಹಿತಿಯು ಕ್ಷೇತ್ರ ಕಾರ್ಯಸಂದರ್ಭದಲ್ಲಿ ತಿಳಿದುಬಂದಿದೆ.

ಪ್ರಾಚೀನರು ಬಿದಿರಿನ ಬೆತ್ತದ ಬುಟ್ಟಿಗಳಲ್ಲಿ ಇಡುವಾಗ ಹಸ್ತಪ್ರತಿಗಳು ಹೊಗೆಯಿಂದಾಗಿ ಧೂಳು ಆವರಿಸಿಕೊಂಡು ಕಪ್ಪಗಾಗುತ್ತಿದ್ದವು. ಅವುಗಳನ್ನು ವರ್ಷಕ್ಕೊಮ್ಮೆಯೋ ಎರಡು ವರ್ಷಕ್ಕೊಮ್ಮೆಯೋ ಕೆಳಗೆ ಇಳಿಸಿ ಸ್ವಚ್ಛ ಮಾಡಿ ಮತ್ತೆ ಅದೇ ಸ್ಥಾನದಲ್ಲಿ ಇಡಲಾಗುತ್ತಿತ್ತು. ಈ ಸಂರಕ್ಷಣ ವಿಧಾನದಲ್ಲಿ ಅಪಾಯವೂ ಆಗುವ ಸಂಭವವಿರುತ್ತದೆ. ಒಲೆಗೆ ಹಚ್ಚಿದ ಬೆಂಕಿ ಆಕಸ್ಮಿಕವಾಗಿ ತಗುಲಿ ಅಥವಾ ಕಿಡಿಗಳು ತಾಕಿ ಪ್ರತಿಗಳು ಸುಟ್ಟು ನಾಶವಾಗುವ ಅಪಾಯವು ಒದಗುತ್ತಿತ್ತು. ಅಲ್ಲದೆ ಉಷ್ಣತೆ ಹೆಚ್ಚಾದರೆ ಹಾಳೆಗಳು ಒರಟಾಗುತ್ತವೆ ಎಂದು ಭಾವಿಸಿದ್ದರು. ಹಿಂದಿನ ಕಾಲದ ವಾಸದ ಕಟ್ಟಡಗಳು(ಈಗಲೂ ಕರಾವಳಿ ಮಲೆನಾಡು ಹಳ್ಳಿಗಳಲ್ಲಿಯವು) ಅನಾಯಾಸವಾಗಿ ಬೆಂಕಿ ವ್ಯಾಪಿಸಬಹುದಾದ ಕಟ್ಟಿಗೆ, ಹುಲ್ಲು ಮುಂತಾದವುಗಳಿಂದ ಆಚ್ಛಾದಿತವಾದವು. ಅಡುಗೆಯೋ, ಪೂಜೆಯೋ, ಎಂತಹುದೋ ಒಂದು ಗಳಿಗೆಯಲ್ಲಿ ಅಲಕ್ಷ್ಯ ಅಗ್ನಿಗೆ ಆಹ್ವಾನವನ್ನಿತ್ತಂತೆ. ಆಗ ವಾಸದ ಕಟ್ಟಡದಲ್ಲಿರುವ ಹಸ್ತಪ್ರತಿಗಳಿಗೆ ಬಹುಶಃ ಉಳಿಗಾಲವಿರುತ್ತಿರಲಿಲ್ಲ.[೧೨] ಇಂತಹ ತೊಂದರೆಗೆ ಒಳಗಾಗದೆ ಇಂದು ಉಳಿದಿರುವ ಹಸ್ತಪ್ರತಿಗಳು ಸಾಮಾನ್ಯವಾಗಿ ಕಪ್ಪು ಬಣ್ಣದಾಗಿರುವುದನ್ನು ಗಮನಿಸಬಹುದು.

ಹೀಗೆ ಇದೇ ಮಾದರಿಯನ್ನು ಹೋಲುವ ಬಟ್ಟೆಯಿಂದ ಸುತ್ತಿದ ಹಸ್ತಪ್ರತಿಗಳ ಗಂಟುಗಳನ್ನು ಅಡುಗೆ ಮನೆಯ ನಾಗುಂದಿಯ ಮೇಲೆಯೂ ಇಡಲಾಗುತ್ತಿತ್ತು. ಅಲ್ಲದೆ ಈ ಗಂಟಿಗೆ ಹಗ್ಗದಿಂದ ಮಾಳಿಗೆಗೆ(ಚಾವಣಿ) ಕಟ್ಟಿ ನೇತು ಬಿಡುತ್ತಿದ್ದರು. ಬಹುಶಃ ಮಕ್ಕಳಾದಿಯಾಗಿ(ಅಜ್ಞಾನಿಗಳ) ಮೂರ್ಖರ ಕೈಗೆ ಸಿಗಬಾರದೆಂಬುದು ಇದರ ಹಿಂದಿನ ಉದ್ದೇಶವಾಗಿರಬೇಕು. ಈ ರೀತಿ ನೇತು ಹಾಕಿರುವ ಹಸ್ತಪ್ರತಿಗಳ ಗಂಟನ್ನು ನಾನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಿದ್ದೇನೆ.

ಇದಕ್ಕೆ ಒಂದು ಸ್ಪಷ್ಟ ನಿದರ್ಶನ ನೋಡುವುದಾದರೆ "ಯಾರೋ ಒಬ್ಬ ವ್ಯಕ್ತಿಯ ಮನೆಯಲ್ಲಿ ಹಸ್ತಪ್ರತಿಗಳನ್ನು ಬಟ್ಟೆಯಲ್ಲಿ ಕಟ್ಟಿ ನೇತು ಹಾಕಿರುವುದನ್ನು ಗಮನಿಸಿದ ನಮ್ಮ ಸ್ನೇಹಿತರು ಎತ್ತರದಲ್ಲಿ

ನೇತಾಡುತ್ತಿದ್ದ ಗಂಟನ್ನು ನೋಡಿದರು. ಅವರ ಕೈಗೆ ಅದು ತಾಕುತ್ತಿರಲಿಲ್ಲ. ಅಲ್ಲಿ ಸಹಾಯಕ್ಕಾಗಿ ಕುರ್ಚಿ, ಏಣಿ, ಬೆಂಚು ಏನೂ ಇರಲಿಲ್ಲ. ಆದರೆ ಸುಮ್ಮನೆಯಂತೂ ಬರಲು ಅವರ ಮನಸ್ಸು ಒಪ್ಪಲಿಲ್ಲಂತೆ. ಆ ಕ್ಷಣ ಅವರಿಗೆ ಹೊಳೆದಿದ್ದು ಒಬ್ಬನ ಮೇಲೆ ಒಬ್ಬನು ಏರಿ ಗಂಟನ್ನು ಇಳಿಸುವ ಪ್ರಯತ್ನ ಮಾಡಿ ಆ ಗಂಟನ್ನು ಬಿಚ್ಚಿ ಕೆಳಗಿಳಿಸಲಾಯಿತು. ನಂತರ ಅರಿವೆ ಸುತ್ತಿದ ಗಂಟನ್ನು ಬಿಚ್ಚಿ ನೋಡಿದಾಗ ಅದರಲ್ಲಿ ಕೋರಿಕಾಗದದ ಹಸ್ತಪ್ರತಿಗಳು ದೊರೆತವು. ಅದರಲ್ಲಿ ಸುಕುಮಾರ ಚರಿತ್ರೆ, ಜ್ಯೋತಿಷ್ಯ, ರಟ್ಟಮತ ಶಾಸ್ತ್ರ, ಮೂರು ಕಟ್ಟುಗಳಿದ್ದವಂತೆ. ಈ ರೀತಿಯ ಮಾನಸಿಕ ಭಯ ಹುಟ್ಟಿಸುವುದರ ಹಿಂದೆ ಸಂರಕ್ಷಣೆಯ ಉಪಾಯವೂ ಇರಬಹುದು. ಪ್ರಸ್ತುತ ಸಂದರ್ಭದಲ್ಲಿ ಹಲವು ಪ್ರಾಚೀನ ಮನೆತನಗಳಲ್ಲಿ ಈ ರೀತಿಯ ಹಸ್ತಪ್ರತಿಗಳು ಇರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡಿದ್ದಾರೆ.

೪.೩.೫. ಜಗಲಿ ಮೇಲಿರಿಸುವುದು/ಸರಸ್ವತಿ ಪೂಜೆ

ಪ್ರಾಚೀನರು ಹಸ್ತಪ್ರತಿ ಸಂರಕ್ಷಿಸುವ ಉಪಾಯಗಳಲ್ಲಿ ದೈವಿಭಾವನೆಯೂ ಒಂದು. ಅವುಗಳನ್ನು ದೇವರ ಮೇಲೆ ಇಟ್ಟು ಪ್ರತಿ ವರ್ಷ ಆಯುಧಪೂಜೆಯ ಮುನ್ನಾದಿನ ಸರಸ್ವತಿ ಪೂಜೆ ಮಾಡುತ್ತಿದ್ದರು. ಈ ಪೂಜೆ ಮೂಲತಃ ಹಸ್ತಪ್ರತಿಸಂರಕ್ಷಣೆಯ ಉದ್ದೇಶದಿಂದಲೇ ಹುಟ್ಟಿಕೊಂಡಿದ್ದು. ಈ ಧಾರ್ಮಿಕ ವಿಧಿಗಾಗಿ ಎಲ್ಲ ಓಲೆಗರಿ ಕಟ್ಟುಗಳನ್ನು ಧೂಳು ತೆಗೆದು ಸ್ವಚ್ಛ ಮಾಡಿ ಸ್ಫುಟವಾಗಿ ಓದಲು ತೈಲ, ಮಸಿಲೇಪನ ಮಾಡಿ ಇಡುತ್ತಿದ್ದು, ಇದೊಂದು ಧಾರ್ಮಿಕ ಶ್ರದ್ಧೆಯಾಗಿತ್ತು. ಆದರೆ ಇದುವೇ ಅಂಧಶ್ರದ್ಧೆಯಾದಾಗ ಹಸ್ತಪ್ರತಿಗಳಿಗೆ ಮುಳುವಾಗಿರುವುದೂ ಉಂಟು. ವಿಶೇಷ ಸಂಗತಿಯೆಂದರೆ ಪ್ರಾಚೀನ ಕಾಲದಲ್ಲಿ ವರ್ಷಕ್ಕೆ ಒಂದು ಸಾರಿ ಮಾತ್ರ ಪೂಜೆ ಮಾಡುತ್ತಿದ್ದರೆ, ಪ್ರಸ್ತುತ 'ನವಲಗುಂದ ನಾಗಲಿಂಗನಮಠ'ದಲ್ಲಿರುವ ಶ್ರೀಗಳಿಂದ(ಶ್ರೀ ವೀರೇಂದ್ರಸ್ವಾಮಿಗಳು) ಪ್ರತಿನಿತ್ಯ ಕ್ರೈಸ್ತರ ಪವಿತ್ರ ಧರ್ಮಗ್ರಂಥ ಬೈಬಲ್ ಹಸ್ತಪ್ರತಿಗೆ ಪೂಜೆ ಸಲ್ಲಿಕೆಯಾಗುತ್ತಿರುವುದನ್ನು ೨ನೇ ಜನವರಿ ೨೦೧೪ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿನ ಲೇಖನದಿಂದ ತಿಳಿದುಬಂದಿದೆ"[೧೩](ಈ ಬೈಬಲ್ ಹಸ್ತಪ್ರತಿಯು ೧೮೬೫ರಲ್ಲಿ ಮಂಗಳೂರು ಬಾಸೆಲ್‌ಮಿಶನ್ ಪ್ರೆಸ್ ಕನ್ನಡದಲ್ಲಿ ಪ್ರಕಟಿಸಿದ ಬೈಬಲ್‌ನ ಮೊದಲ ಪ್ರತಿ ಎಂಬುದು ಮತ್ತೊಂದು ವಿಶೇಷ).

ಹೀಗೆ ಪೂಜೆಯ ಭ್ರಾಂತಿಯಿಂದ ತೈಲ, ಜಲಗಳನ್ನು ಹಾಕಿ ಹಾಗೆಯೇ ಕಟ್ಟಿನ ಗರಿಗಳೆಲ್ಲ ಹಾಳಾಗಿರುವ ಹಸ್ತಪ್ರತಿಗಳು ಅನೇಕ ಇವೆ. ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ದೇವಾಲಯಗಳ ಜಗಲಿಕಟ್ಟೆಯಲ್ಲಿ ತಾಳೆಗರಿಯ ಕಟ್ಟುಗಳು ಅಲಂಕರಿಸಿರುವ ನಿದರ್ಶನಗಳಿವೆ. ರೈತರು ಮಳೆ ಬೆಳೆಯನ್ನು ನಿರ್ಧರಿಸಲು ಇವು ಸಹಾಯಕವಾಗುತ್ತಿದ್ದವಂತೆ. ರೈತರು ತಮ್ಮ ವೃತ್ತಿ ಆರಂಭಿಸುವ ಮೊದಲು ಗುಡಿಯಲ್ಲಿರುವ ಹಸ್ತಪ್ರತಿಯಲ್ಲಿನ ವಿಷಯ ತಿಳಿಯಲು ಭಕ್ತಿ ಭಯಗಳಿಂದ ಹಸ್ತಪ್ರತಿಯನ್ನು ಧೂಳು ತೆಗೆದು ಸ್ವಚ್ಛಗೊಳಿಸಿ ಪೂಜಾರಿಯು ನೆರೆದ ಜನರಿಗೆ ಒಂದೇ ಒಂದು ಗರಿಯಿಂದ ಓದಿ ವರ್ಷದ ಮಳೆ ಬೆಳೆ ಕುರಿತು ಜ್ಯೋತಿಷ್ಯ ಹೇಳುತ್ತಿದ್ದನೆಂದು ತಿಳಿದುಬಂದಿದೆ. ಹೀಗಾಗಿ ಪ್ರತಿವರ್ಷವೂ ಈ ನೆಪದಲ್ಲಿ ಹಸ್ತಪ್ರತಿಗಳು ಸ್ವಚ್ಛಗೊಂಡು ಸಂರಕ್ಷಿತಗೊಂಡಿವೆ. ಇದಕ್ಕೆ ಒಂದು ಸ್ಪಷ್ಟ ನಿದರ್ಶನವೆಂದರೆ

ಕೂಡ್ಲಿಗಿ ತಾಲೂಕಿನ ಕುಮತಿಗೆಯೆಂಬ ಗ್ರಾಮದಲ್ಲಿರುವ ಲಿಂಗಾಯತ ಕುಟುಂಬದವರ ಪ್ರತಿಯೊಂದು ಮನೆಯಲ್ಲೂ ರೇವಣಸಿದ್ಧೇಶ್ವರ ಚರಿತ್ರೆಯ ತಾಳೆಯೋಲೆ ಕಟ್ಟುಗಳು ಇವೆ. ಶ್ರೀ ರೇವಣಸಿದ್ಧೇಶ್ವರ ಜಾತ್ರೆಯ ದಿನ ಆ ಎಲ್ಲಾ ಹಸ್ತಪ್ರತಿಗಳನ್ನು ಆಯಾ ಮನೆಗಳಲ್ಲಿ ಸ್ವಚ್ಛಗೊಳಿಸಿ ಪೂಜೆ ಮಾಡುತ್ತಿರುವುದು ಗಮನಾರ್ಹ.

೪.೩.೬. ಇತರೆ

ಉತ್ತರ ಭಾರತದ ಕೆಲವು ಕಡೆ ಮರಳಿನಲ್ಲಿ ಹಸ್ತಪ್ರತಿಗಳನ್ನು ಹೂಳಿ ಇವನ್ನು ನಿಧಿಯಂತೆ ಜೋಪಾನವಾಗಿ ಜತನವಾಗಿರಿಸಿರುತ್ತಿದ್ದರಂತೆ. ಸಂರಕ್ಷಣೆಯ ವಿಧಾನಗಳಲ್ಲಿ ಇದೂ ಒಂದು. ಈ ವಿಧಾನದಲ್ಲಿ ಸಂರಕ್ಷಣೆಗಿಂತ ಅಪಾಯಗಳೇ ಹೆಚ್ಚು. ಕಾರಣ ಅತಿಯಾದ ಮಳೆಯಿಂದಾಗಿ ಮರಳು ತೇವಾಂಶ(ಜೌಗು) ಹಿಡಿದು ಹಸ್ತಪ್ರತಿಗಳು ನಾಶವಾಗುವುದು ಹೆಚ್ಚು. ಆದರೆ ಹಸ್ತಪ್ರತಿ ತಯಾರಿಸುವ ಪ್ರಕ್ರಿಯೆಯಲ್ಲಿ ತಾಳೆಗರಿಗಳನ್ನು ಮೂರು ತಿಂಗಳ ಕಾಲದವರೆಗೆ ಭೂಮಿಯಲ್ಲಿ ಹೂಳುತ್ತಾರೆ. ಏಕೆಂದರೆ ತಾಳೆಪ್ರತಿ ಒರಟಾಗಿರುತ್ತವೆ. ಒರಟಾಗಿದ್ದರೆ ದೀರ್ಘಕಾಲ ಬಾಳಿಕೆ ಬರಲಾರವು. ಅವುಗಳ ತಯಾರಿಕೆಯ ಕುರಿತ ಶ್ಲೋಕವೊಂದು ಹೀಗಿದೆ.

"ತಾಡಪತ್ರಂ ದೃಢಂ ಸೌಮ್ಯಂ ಋಜುಸಾಗ್ರಂ ದ್ವಿಧಾಕೃತಂ।
ಮೃದುಲಂ ಯತ್ಪ್ರಶಸ್ತಂ ತತ್ ಮತಂ ಲೇಖಾವಿಲೇಖನೇ॥
ಕರ್ಕಶಂ ಕಲ್ಮಷಂ ವಕ್ರಂ ಹೀನಾಗ್ರಂ ಸ್ಫುಟಿತಂ ಯುಗಂ।
ತಾಲಪತ್ರಂ ನತತ್ ಶ್ರೇಷ್ಠಂ ಮತಂ ಲೇಖಾವಿಲೇಖನೇ॥[೧೯]"

ಎಂಬ ಉಲ್ಲೇಖ ಈ ಮೇಲಿನ ಶ್ಲೋಕದಲ್ಲಿ ಉತ್ತಮ ಅನುತ್ತಮ ಗರಿಗಳ ಬಗ್ಗೆ ವಿವರಣೆ ನೀಡುತ್ತದೆ. "ತಾಳೆಯೋಲೆಗಳು ಭದ್ರವಾಗಿ ನಯವಾಗಿ, ನೇರವಾಗಿ, ಅಂಚು ತುದಿಗಳು ಸರಿಯಾಗಿರಬೇಕು ಮೃದುವಾಗಿರಬೇಕು, ಇಂತಹುವು ಲೇಖನಕ್ಕೆ ಪ್ರಶಸ್ತವಾದವು. ಒರಟೊರಟಾಗಿ ಕೊಳಕುಳ್ಳವಾಗಿ ಸೊಟ್ಟಸೊಟ್ಟವಾಗಿ ತುದಿ ಅಂಚುಗಳು ಸರಿಯಾಗಿಲ್ಲದ, ಸೀಳಿಕೊಂಡಿರುವ ತಾಳಪುಟಗಳು ಲೇಖನಕ್ಕೆ ಶ್ರೇಷ್ಠವಾದುವಲ್ಲ" ಎಂಬುದು ಶ್ಲೋಕದಿಂದ ಮನವರಿಕೆಯಾಗುವುದು.

ತಾಳೆಗರಿಗಳನ್ನು ಬರವಣಿಗೆಗೆ ಸಿದ್ಧಮಾಡುವ ವಿಧಾನದ ಬಗ್ಗೆ ಬರೋಡ ಓರಿಯಂಟಲ್ ಇನ್‌ಸ್ಟಿಟ್ಯೂಟ್‌ನ ಡೈರಕ್ಟರ್ ಬಿ.ಭಟ್ಟಾಚಾರ್ಯ ತಮ್ಮದೇ ಆದ ಅಭಿಪ್ರಾಯವನ್ನು ಪ್ರಸ್ತಾಪಿಸಿದ್ದಾರೆ. "ಮರದಿಂದ ಎಲೆಯ ಮೋತೆ ಹೊರಟು ಇನ್ನೇನು ಎಲೆ ಬಿಚ್ಚಿ ಹರಡಿಕೊಳ್ಳುತ್ತದೆ ಎನ್ನುವಷ್ಟರಲ್ಲಿ ಅವುಗಳನ್ನು ಕತ್ತರಿಸಿ ತಂದು ಒಂದು ವಾರಕಾಲ ಬಿಸಿಲಿನಲ್ಲಿ ಒಣಗಿಸುತ್ತಿದ್ದರು. ಅನಂತರ ಅವುಗಳನ್ನು ೪ರಿಂದ ೫ ತಿಂಗಳವರೆಗಾದರೂ ನೆಲದಲ್ಲಿ ಹೂಳಿ ಮತ್ತೆ ತೆಗೆದು ಶುದ್ಧಗೊಳಿಸಬೇಕಾದ ಅಳತೆಗೆ ತಕ್ಕಂತೆ ಕತ್ತರಿಸಿ, ಅಡುಗೆಮನೆಯ ಅಟ್ಟಗಳಲ್ಲಿ ಇಡುತ್ತಿದ್ದರು. ಅವು ಅಡುಗೆಮನೆಯ ಹೊಗೆಯಿಂದ ಹದಗೊಳ್ಳುತ್ತಿದ್ದವು. ಹೀಗೆ ಹದಗೊಂಡವನ್ನು ತಮಗೆ ಬೇಕಾದಾಗ ತೆಗೆದು ಉಪಯೋಗಿಸುತ್ತಿದ್ದರು" ಎಂದು ತಿಳಿಸಿದ್ದಾರೆ. "ಗರಿಗಳನ್ನು ಬಿಸಿಲಿನಲ್ಲಿ ಒಣಗಿಸಬೇಕು. ಅನಂತರ ಬಿಸಿ ನೀರಿನಲ್ಲಿ ಕುದಿಸಿ ಒಣಗಿಸಬೇಕು. ಅವು ಚೆನ್ನಾಗಿ ಒಣಗಿದ ಮೇಲೆ ಗಾರೆಯ ಕಲ್ಲಿನಿಂದಲೋ ಶಂಖದಿಂದಲೋ ಉಜ್ಜಿ

ನುಣುಪು ಮಾಡಬೇಕು. ಅನಂತರ ಅವನ್ನು ಅಳತೆಗೆ ತಕ್ಕಂತೆ ಕತ್ತರಿಸಬೇಕು" ಎಂದು ಬಿಮಲ್ ಕುಮಾರ ದತ್ತ ತಿಳಿಸಿದ್ದಾರೆ. ಅದೇನೇ ಇರಲಿ, ಬರವಣಿಗೆಗೆ ಹದ ಮಾಡಿದ ಪತ್ರವನ್ನು 'ಅಳಕ (ಅಲೇಖ)ವೆಂದೂ ಕರೆಯುತ್ತಿರಬಹುದು. ಪಂಪನಲ್ಲಿ ಬರುವ 'ನುಣ್ಣನಪ್ಪಳಕದ ಕೇಡು'(ಪಂ.ಭಾ. ೧-೧೨) ಎಂಬುದು ಇದನ್ನೇ ಸೂಚಿಸುತ್ತಿರಬಹುದು.

ಹೀಗೆ ಪ್ರಾಚೀನರು ಹಸ್ತಪ್ರತಿ ಸಂರಕ್ಷಣೆಗೆ ಹಲವಾರು ವಿಧಾನಗಳನ್ನು ಅಳವಡಿಸಿ ಕೊಂಡಿರುವುದರಿಂದ ಸುಮಾರು ೨೦೦ರಿಂದ ೮೦೦ ವರ್ಷಗಳವರೆಗೂ ಕಾಪಾಡಿಕೊಂಡು ಬಂದಿದ್ದಾರೆ.

೪.೪. ಆಧುನಿಕ ಸಂರಕ್ಷಣೆ

ಆಧುನಿಕ ತಂತ್ರಜ್ಞಾನದ ಫಲವಾಗಿ ಏರ್ಪಟ್ಟ ಅರಿವಿನ ಸ್ಫೋಟ ಜಗತ್ತಿನಾದ್ಯಂತ ಎಲ್ಲ ಶಾಸ್ತ್ರ ವಿಜ್ಞಾನಗಳ ಸ್ವರೂಪ ಹಾಗೂ ಬಳಕೆಯ ದಾರಿಯನ್ನೇ ಬದಲಾಯಿಸಿತು. ಈ ಬದಲಾವಣೆಯ ಪ್ರಕ್ರಿಯೆಗೆ ಹಸ್ತಪ್ರತಿಶಾಸ್ತ್ರವೂ ಹೊರತಲ್ಲ. ಮುದ್ರಣಯಂತ್ರದ ಶೋಧ ಹಸ್ತಪ್ರತಿಗಳ ಮೇಲೆ ಒಂದು ಪರಿಣಾಮ ಬೀರಿದರೆ, ಇದೀಗ ಆಧುನಿಕ ತಂತ್ರಜ್ಞಾನವು ಹಸ್ತಪ್ರತಿಗಳ ಸಂರಕ್ಷಣೆ, ಸಂಗೋಪನೆಗೆ ಅತಿ ಉತ್ತಮ ಬದಲಾವಣೆಯನ್ನು ತಂದಿದೆ. ಹಸ್ತಪ್ರತಿ ಎನ್ನುವುದು ನಿನ್ನೆಯ ಮಾಹಿತಿಕೋಶವಷ್ಟೇ ಅಲ್ಲ. ನಿನ್ನೆಯನ್ನು ಇಂದಿನ ಜತೆ ಬೆಸೆಯುವ ಕೊಂಡಿ ಎಂಬ ತಿಳುವಳಿಕೆ ಏರ್ಪಡುತ್ತದೆ. ಜಾಗತೀಕರಣ ನಮ್ಮ ಮನೆಯಂಗಳಕ್ಕೆ ಬಂದಿದೆ. ಅದು ನಮಗೆ ಆರ್ಥಿಕವಾಗಿ, ಔದ್ಯೋಗಿಕವಾಗಿ ಅನೇಕ ಸವಲತ್ತುಗಳನ್ನು ತಂದಿರುವುದು ನಿಜ. ಆದರೆ ಪ್ರಾಚೀನ ಧಾರ್ಮಿಕ ಹಾಗೂ ಲೌಕಿಕ ಗ್ರಂಥಗಳ ಕಡೆಗೆ ನಮ್ಮವರ ಆಸಕ್ತಿ ಕಮರಿದೆ. ಮುದ್ರಣ ತಂತ್ರಜ್ಞಾನ, ವಿದ್ಯುನ್ಮಾನ ಉಪಕರಣಗಳ ಮುನ್ನುಡಿಯಿಂದ ಓದಲು ಕಷ್ಟಸಾಧ್ಯವಾದ ಹಸ್ತಪ್ರತಿಗಳ ಕಡೆಗೆ ಉಪೇಕ್ಷೆ ಪ್ರಾಪ್ತವಾದಂತಾಗಿದೆ. ಹೀಗಾಗಿ ಒಂದು ಕಡೆಯಿಂದ ನಿರ್ಲಕ್ಷ್ಯ ಇನ್ನೊಂದು ಕಡೆಯಿಂದ ಪ್ರಾಕೃತಿಕ ವಿಕೋಪದ ಫಲವಾಗಿ ಅಳಿವಿನ ಅಂಚಿಗೆ ಸಾಗುತ್ತಿರುವ ಹಸ್ತಪ್ರತಿಗಳನ್ನು ಆಧುನಿಕ ತಂತ್ರಜ್ಞಾನದ ಮೂಲಕ ಸಂರಕ್ಷಿಸಿ, ಸಂವರ್ಧನೆಗೊಳಿಸುವ ಕೆಲಸ ಇಂದು ತುರ್ತಾಗಿ ನಡೆಯಬೇಕಾಗಿದೆ.

ಹಸ್ತಪ್ರತಿಗಳ ಸಂರಕ್ಷಣೆಗಾಗಿ ಆಧುನಿಕ ತಂತ್ರಜ್ಞಾನಗಳಾದ ಮೈಕ್ರೋಫಿಲ್ಮಿಂಗ್ ಶಾಪ್ ಮೈಕ್ರೋಫಿಶ್, ಗಣಕೀಕರಣ, ಝೆರಾಕ್ಸ್ ಯಂತ್ರ, ಪೋಟೋ, ವೀಡಿಯೋಗ್ರಫಿ, ಹ್ಯಾಂಡಿಕ್ಯಾಮ್, ಸ್ಕ್ಯಾನರ್, ಎಲೆಕ್ಟ್ರಾನಿಕ್ ದಾಖಲೀಕರಣ ತಂತ್ರಜ್ಞಾನಗಳನ್ನು ಪ್ರಸ್ತುತ ಸಂದರ್ಭದಲ್ಲಿ ನಾಡಿನಲ್ಲಿರುವ ಹಲವು ಹಸ್ತಪ್ರತಿ ಭಂಡಾರಗಳು ಅಳವಡಿಸಿಕೊಂಡು ಹಸ್ತಪ್ರತಿಗಳನ್ನು ಸಂರಕ್ಷಣೆಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿವೆ. ಮೇಲಿನ ಆಧುನಿಕ ಸಂರಕ್ಷಣೆಯ ಸಲಕರಣೆಗಳ ಕಿರು ಪರಿಚಯವು ಈ ರೀತಿಯಾಗಿದೆ.

೪.೪.೧. ಮೈಕ್ರೋಫಿಲ್ಮಿಂಗ್

ಹಸ್ತಪ್ರತಿಗಳ ಹೇಗಿರುತ್ತವೆಯೋ ಹಾಗೆಯೇ ದಾಖಲಿಸುವ ಕಾರ್ಯವನ್ನು ಮೈಕ್ರೋಫಿಲಂ ಮಾಡುತ್ತದೆ. ಅಂದರೆ ಹಸ್ತಪ್ರತಿಯ ಒಂದೊಂದೇ ಗರಿಗಳನ್ನು ಅನುಕ್ರಮವಾಗಿ ಸ್ಕ್ಯಾನ್ ಮಾಡಲಾಗುತ್ತದೆ. ಹಸ್ತಪ್ರತಿ ಇದ್ದಂಥವರು ಹೊರಗಡೆ ಕೊಡದೆ ಇರುವಾಗ ಮೈಕ್ರೋಫಿಲಂ ರೂಪದಲ್ಲಿ ಸಂಗ್ರಹಿಸಬಹುದು.

ಹಸ್ತಪ್ರತಿ ಭಂಡಾರದಲ್ಲಿರುವ ಏಕೈಕ ಹಸ್ತಪ್ರತಿಗಳನ್ನು ಮೈಕ್ರೋಫಿಲಂ ಮೂಲಕ ಸಿದ್ಧಪಡಿಸಿಕೊಂಡರೆ ಮೂಲಪ್ರತಿಯನ್ನು ಯಥಾವತ್ತಾಗಿ ಕಾಪಾಡಬಹುದು. ಒಂದು ವೇಳೆ ಭೌತಿಕ ಹಸ್ತಪ್ರತಿ ಯಾವುದೇ ರೀತಿಯಲ್ಲಿ ಹಾನಿಗೊಳಗಾದರೆ, ಮತ್ತೊಂದು ಪ್ರತಿಯಿಂದ ಸತ್ಯ ಸಂರಕ್ಷಣೆಗೊಳ್ಳುತ್ತದೆ. ರಕ್ಷಣಾ ದೃಷ್ಟಿಯಿಂದ ಈ ಎರಡೂ ಪ್ರತಿಗಳನ್ನು ಬೇರೆ ಬೇರೆ ಸ್ಥಳಗಳಲ್ಲಿಡುವುದು ಉತ್ತಮ. ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಭಂಡಾರದಲ್ಲಿ ಬಿ.ಎಸ್.ಸಣ್ಣಯ್ಯನವರು ಎರಡು ಮೈಕ್ರೋಫಿಲಂ ಸೂಚಿಗಳನ್ನು ಸಂಗ್ರಹಿಸಿರುವುದು ಬೆಳಕಿಗೆ ಬಂದಿದೆ.

೪.೪.೨. ಕಂಪ್ಯೂಟರ್

ಹಸ್ತಪ್ರತಿಗಳ ಒಂದು ಸುದೀರ್ಘ ಸಾಂಸ್ಕೃತಿಕ ಪರಂಪರೆ ಮುಗಿದೇ ಹೋಯಿತು ಎನ್ನುವ ಆತಂಕದಲ್ಲಿರುವಾಗಲೇ ಕನ್ನಡದಲ್ಲಿ ಕಂಪ್ಯೂಟರ್ ಮೂಲಕ ಹಸ್ತಪ್ರತಿಗಳನ್ನು ಸಂರಕ್ಷಿಸುವ ಹೊಸ ಸಾಧ್ಯತೆಗಳು ಸಾಧ್ಯವಾಗಿವೆ. ಕಂಪ್ಯೂಟರ್ ತೆರೆದಿಟ್ಟಿರುವ ಗುಣಾತ್ಮಕ ಸಾಧ್ಯತೆಗಳಿಂದ ವಿವಿಧ ರೀತಿಯ ಭಾಷೆ, ಸಾಹಿತ್ಯದ ಸಂಸ್ಕರಣ ಕೆಲಸವನ್ನು ನಿಭಾಯಿಸಬಹುದಾಗಿದೆ. ಹಸ್ತಪ್ರತಿ ಭಂಡಾರಗಳಲ್ಲಿರುವ ಸಾವಿರಾರು ಹಸ್ತಪ್ರತಿಗಳನ್ನು ಅದರಲ್ಲಿರುವ ಉದ್ದದ ಸಾಲುಗಳನ್ನು ಸಂಗ್ರಹಿಸಿ ಅದನ್ನು ಅತಿವೇಗವಾಗಿ ಪಸರಿಸುವ ಸಾಮರ್ಥ್ಯ ಕಂಪ್ಯೂಟರಿಗಿದೆ.

* ಒಂದು ಹಸ್ತಪ್ರತಿಯೊಳಗಿರುವ ಪಠ್ಯವನ್ನು ಮೂರು ರೀತಿಯಲ್ಲಿ ಕಂಪ್ಯೂಟರಿಗೆ ಅಳವಡಿಸಬಹುದಾಗಿದೆ.

೧. ಡಿ.ಟಿ.ಪಿ. ಸಾಫ್ಟ್‌ವೇರ್ ಬಳಸಿ ಅಥವಾ ಪದ ಸಂಸ್ಕಾರಕಗಳ ಮೂಲಕ ಕೀ ಇನ್ ಮಾಡುವುದು.

೨. ಸ್ಕ್ಯಾನರ್ ಮೂಲಕ ಸ್ಕ್ಯಾನ್ ಮಾಡಿ ಓಸಿಆರ್ ಮೂಲಕ ಸ್ಕ್ಯಾನ್ ಆದ ಪಠ್ಯವನ್ನು ಸಂಕಲಿಸುವುದು.

೩. ಮೈಕ್ರೋಫೋನ್ ಮೂಲಕ ಓದಿ Speech to text(ಮಾತಿನಿಂದ ಬರಹಕ್ಕೆ) ಸಾಫ್ಟ್‌ವೇರ್ ಮೂಲಕ ಪಠ್ಯವಾಗಿ ಪರಿವರ್ತಿಸಿಕೊಳ್ಳಬಹುದು.

ಮೊದಲನೇ ವಿಧಾನ ಹಸ್ತಪ್ರತಿಗಳನ್ನು ಅಕ್ಷರಗಳ ಮೂಲಕ ಪಠ್ಯವನ್ನಾಗಿ ಪರಿವರ್ತಿಸಿಕೊಂಡರೆ, ಮೂರನೇ ವಿಧಾನ ಮಾತಿನ ಮೂಲಕ ಪಠ್ಯವನ್ನು ಪರಿವರ್ತಿಸಿ ಕೊಡುತ್ತದೆ. ಈ ಎರಡೂ ಸಂಗತಿಗಳು ಒಂದು ಪಠ್ಯವನ್ನು ಅದರ ಮೂಲ ಸ್ವರೂಪದಲ್ಲಿ ಕಾಣಿಸದೆ, ಸಂಸ್ಕರಿತ ನೆಲೆಯಲ್ಲಿ ಅದನ್ನು ಕಟ್ಟಿಕೊಡುತ್ತವೆ. ಆದರೆ ಎರಡನೆಯ ವಿಧಾನ ಮಾತ್ರ ಹಸ್ತಪ್ರತಿಯೊಂದರ ಮೂಲರೂಪವನ್ನು ನಮಗೆ ಯಥಾವತ್ತಾಗಿ ಕಟ್ಟಿಕೊಡಲು ನೆರವಾಗುತ್ತದೆ.

೪.೪.೩. ಸ್ಕ್ಯಾನಿಂಗ್

ಕನ್ನಡ ಹಸ್ತಪ್ರತಿಗಳ ವಿಷಯದಲ್ಲಿ ಸ್ಕ್ಯಾನಿಂಗ್, ಮಾನಿಟರಿ ರೀಡಿಂಗ್, ಟೈಪಿಂಗ್, ಓ.ಸಿ.ಆರ್., ಇಂಟರ್‌ನೆಟ್‌ನಂತಹ ಅವಕಾಶಗಳು ಮಹತ್ವದ ದಾರಿಗಳನ್ನೇ ತೆರೆದಿಟ್ಟಿವೆ. ಗ್ರಾಫಿಕ್ ಸಾಫ್ಟ್‌ವೇರ್‌ನ ಸಹಾಯದಿಂದ ಕಂಪ್ಯೂಟರಿನಲ್ಲಿ ಹಸ್ತಪ್ರತಿಗಳನ್ನು ಸ್ಕ್ಯಾನಿಂಗ್ ಮಾಡಿ ಪುನರ್ ಮುದ್ರಿಸಿಕೊಳ್ಳ ಬಹುದಾಗಿದೆ. ಗ್ರಾಫಿಕ್ ಸಾಫ್ಟ್‌ವೇರ್‌ನಲ್ಲಿ ಎರಡು ವಿಧಗಳಿವೆ.

೧. ಗ್ರಾಫಿಕ್ ಮೋಡ್: ಇದನ್ನು ಹೆಚ್ಚಾಗಿ ರೇಖಾಚಿತ್ರಗಳ ರಚನೆಗೆ ಬಳಸಬಹುದಾಗಿದೆ.

೨. ಟೆಕ್ನಿಕ್ ಮೋಡ್: ಇದನ್ನು ಅಕ್ಷರ ಸಂಸ್ಕರಣೆಗೆ ಬರವಣಿಗೆಗೆ ಬಳಸುತ್ತಾರೆ.

ಹಸ್ತಪ್ರತಿಯೊಂದನ್ನು ಸ್ಕ್ಯಾನಿಂಗ್ ಸಹಾಯದಿಂದ ಗಣಕಕ್ಕೆ ಅಳವಡಿಸಿದಾಗ ಅದರ ಮೂಲ ರಚನೆ ಕಂಪ್ಯೂಟರ್ ಮಾನಿಟರ್ ಮೇಲೆ ಮೂಡುತ್ತದೆ. ಹಸ್ತಪ್ರತಿಯೊಂದು ಹೀಗೆ ಮೂಡಲು ಪೋಟೋಶಾಪ್ ಅಥವಾ ಫೋಟೋ ಫಿನಿಶಿಂಗ್ ಪ್ರೋಗ್ರಾಂಗಳು ಹೆಚ್ಚು ಸಹಾಯ ಮಾಡುತ್ತವೆ. ಹಸ್ತಪ್ರತಿಯೊಂದರ ಪ್ರತಿ ಪುಟಗಳನ್ನು ಇಮೇಜ್‌ಗಳ ರೂಪದಲ್ಲಿ ಸಂಗ್ರಹಿಸಿ ಇಡಬಹುದಾಗಿದೆ. ಸಂಗ್ರಹಿಸುವ ಮುನ್ನ ಕಂಪ್ಯೂಟರಿಗೆ ಅಳವಡಿಸಿದ ಹಸ್ತಪ್ರತಿಯು ತ್ರುಟಿತಗೊಂಡಿದ್ದರೆ, ಅಕ್ಷರಗಳು ಸ್ಫುಟವಾಗಿರದಿದ್ದರೆ ಅದನ್ನು ದುರಸ್ತಿಗೊಳಿಸುವ ಕಾರ್ಯವನ್ನು ಕಂಪ್ಯೂಟರ್ ಮೂಲಕ ಮಾಡಬಹುದಾಗಿದೆ. ಹಸ್ತಪ್ರತಿಯೊಂದರ ಪಠ್ಯದಲ್ಲಿ ಮಸಿ ಚೆಲ್ಲಿದ್ದರೆ ಅನಾವಶ್ಯಕ ಚುಕ್ಕೆ ಮತ್ತು ಗಲೀಜುಗಳಿದ್ದರೆ ಅದನ್ನು ಪದ ಸಂಸ್ಕಾರಕಗಳ ಸಹಾಯದಿಂದ ಸ್ವಚ್ಛಗೊಳಿಸಿ ಸರಿಪಡಿಸಬಹುದಾಗಿದೆ. ತ್ರುಟಿತಗೊಂಡ ಪದಗಳನ್ನು ಸರಿಪಡಿಸಲು 'ಸ್ಟೈಲಿಸ್' ಎನ್ನುವ ಉಪಕರಣ ಹೆಚ್ಚು ಉಪಯುಕ್ತವಾಗಿದೆ. 'ಸ್ಟೈಲಿಸ್' ಮೂಲಕ ಹೊಸ ಅಕ್ಷರವನ್ನು ಬರೆದು ವಾಕ್ಯವನ್ನು ಪೂರ್ಣಗೊಳಿಸಬಹುದು. ಅಲ್ಲದೆ ಕಂಪ್ಯೂಟರಿಗೆ ಅಳವಡಿಸಿದ ಪಠ್ಯದಲ್ಲಿಯೇ ತ್ರುಟಿತ ಅಕ್ಷರವನ್ನು ಸರ್ಚ್ ಮಾಡಲು ಕಂಪ್ಯೂಟರಿಗೆ ಆಜ್ಞೆ ಕೊಟ್ಟರೆ ನಿರ್ದಿಷ್ಟ ಜಾಗಕ್ಕೆ ಬೇಕಾಗುವ ನಿರ್ದಿಷ್ಟ ಅಕ್ಷರವನ್ನು ಆಯ್ಕೆ ಮಾಡಿಕೊಡುತ್ತದೆ. ಇದಕ್ಕೆ 'ಸ್ಪೆಲ್‌ಚೆಕ್' ಎಂದು ಕರೆಯುತ್ತಾರೆ. ಈ ರೀತಿ ಪದ ಸಂಸ್ಕಾರಗಳು(ವರ್ಡ್ ಪ್ರೊಸೆಸಿಂಗ್) ಇಂದು ಹೆಚ್ಚು ಜನಪ್ರಿಯಗೊಳ್ಳುತ್ತಿವೆ. ಇಂಥ ಆಧುನಿಕ ಸೌಲಭ್ಯವನ್ನು ಒದಗಿಸಿಕೊಂಡು "ಪೂರ್ಣಚಂದ್ರ ತೇಜಸ್ವಿಯವರು ಮೊಟ್ಟಮೊದಲ ಬಾರಿಗೆ ಕುವೆಂಪು ಅವರ ರಾಮಾಯಣದರ್ಶನಂ ಕೈಬರಹದ ಪ್ರತಿಯನ್ನು ಕಂಪ್ಯೂಟರ್ ಮೂಲಕ ಪುನರ್ ಮುದ್ರಿಸಿಕೊಟ್ಟಿದ್ದಾರೆ ಎಂಬುದು ಗಮನಾರ್ಹ ಸಂಗತಿಯಾಗಿದೆ."[೧೫]

೪.೪.೪. ಓ.ಸಿ.ಆರ್(Optical Character Recognition)

ಸ್ಕ್ಯಾನ್ ಮಾಡಿದ ಹಸ್ತಪ್ರತಿಗಳನ್ನು ಸಂಕಲಿಸುವ ದೃಷ್ಟಿಯಿಂದ ಈ ಸಾಫ್ಟ್‌ವೇರ್ ಬಹೂಪಯೋಗಿಯಾದದ್ದು. ಅಪಾರ ಹಸ್ತವೈವಿಧ್ಯವಿರುವ ಹಸ್ತಪ್ರತಿಗಳಿಗೆ ಈ ಘಟಕ ಪ್ರಯೋಜನವನ್ನು ತಂದುಕೊಟ್ಟಿದೆ. ಇದೂವರೆಗೂ ಸ್ಕ್ಯಾನಿಂಗ್‌ನಲ್ಲಿ ಫೋಟೋಗ್ರಫಿಯಂತೆ ಇಮೇಜ್ ರೂಪದಲ್ಲಿ ಯಥಾವತ್ತಾದ ಹಸ್ತಪ್ರತಿಯ ನಕಲೊಂದನ್ನು ನೋಡುವ ಸಂಗ್ರಹಿಸುವ ಸಾಧ್ಯತೆ ಮಾತ್ರ ಇತ್ತು. ಆದರೆ ಓ.ಸಿ.ಆರ್.ನ ಸಹಾಯದಿಂದ ಒಂದು ಹಸ್ತಪ್ರತಿಯಲ್ಲಿನ ಬರಹವನ್ನು ನಮಗೆ ಬೇಕಾದ ಹಾಗೆ ಬದಲಾಯಿಸಲು ಸಾಧ್ಯವಾಗುವಂತಾಗಿದೆ. ಪ್ಯಾರಾ ಮಾಡುವುದು, ಅಕ್ಷರಗಳನ್ನು ಬೋಲ್ಡ್ ಮಾಡುವುದು, ತಲೆಬರಹ ಕೊಡುವುದು, ಪಠ್ಯವನ್ನು ಹಿಗ್ಗಿಸುವ ಕುಗ್ಗಿಸುವಂತಹ ಸೌಲಭ್ಯಾಕಾಂಕ್ಷೆಗಳು ಇದರಿಂದ ಒದಗಿವೆ.

ಇದೂ ಅಲ್ಲದೆ ಹಸ್ತಪ್ರತಿಯೊಂದನ್ನು ಸ್ಕ್ಯಾನರ್ ಮೂಲಕ ಕಂಪ್ಯೂಟರಿಗೆ ಅಳವಡಿಸಿದಾಗ ಅದು ಕಂಪ್ಯೂಟರ್ ಮಾನಿಟರಿನ ಮೇಲೆ ಮೂಡುವ ಹೊತ್ತಿಗೆ ಶುದ್ಧಪ್ರತಿಯಾಗಿ ಪ್ರಕಟವಾಗುತ್ತದೆ.

ಅಂದರೆ ನಾವು ಬಳಸಬಹುದಾದ ಹಲವಾರು ಫಾಂಟ್‌ಗಳ ನಿಶ್ಚಿತ ರೂಪವೊಂದರಲ್ಲಿ ಟೈಪಿಂಗ್ ಸಹಾಯವಿಲ್ಲದೆ ನೇರವಾಗಿ ಮುದ್ರಿಸಿಕೊಳ್ಳಬಹುದಾಗಿದೆ. ಪತ್ರಿಕಾವಲಯದಲ್ಲಿ ಇದು ಹೆಚ್ಚು ಬಳಕೆಯಾಗುತ್ತಿದೆ. ವರದಿಗಾರರಿಂದ ಬರುವ ವರದಿಗಳನ್ನು ಬೆರಳಚ್ಚು ಮಾಡದೆ ನೇರವಾಗಿ ಮುದ್ರಿತ ಹಂತಕ್ಕೆ ಬದಲಾಯಿಸಿಕೊಳ್ಳುವುದರಿಂದ ಹಣ, ಸಮಯ, ಶ್ರಮ ಎಲ್ಲವೂ ಉಳಿಯುತ್ತದೆ. ಕನ್ನಡದಲ್ಲಿ ಇದನ್ನು ಸಾಧ್ಯವಾಗಿಸುವಲ್ಲಿ ಕೆಲವು ಸಾಫ್ಟ್‌ವೇರ್ ತಂತ್ರಜ್ಞರು, ಕನ್ನಡ ಗಣಕ ಪರಿಷತ್ತು ಮತ್ತು ಕನ್ನಡ ವಿಶ್ವವಿದ್ಯಾಲಯಗಳು ನಿರಂತರ ಶ್ರಮಿಸುತ್ತಿವೆ. ಹೀಗೆ ಆಧುನಿಕವಾದ ಪ್ರಬಲ ಮಾಧ್ಯಮಗಳ ಮೂಲಕ ಒಂದು ಹಸ್ತಪ್ರತಿ ಭಂಡಾರವನ್ನೇ ಜೇಬಿನಲ್ಲಿಟ್ಟುಕೊಂಡು ತಿರುಗಾಡುವ, ಎಲ್ಲಿ ಬೇಕೆಂದರೆ ಅಲ್ಲಿಗೆ ಕಡಿಮೆ ವೇಳೆ ಮತ್ತು ವೆಚ್ಚದಲ್ಲಿ ತಲುಪಿಸುವ ಕ್ರಮ ನಿಜಕ್ಕೂ ಸ್ತುತ್ಯರ್ಹವಾಗಿದೆ. ತಿಳುವಳಿಕೆಗೆ ವಿನಿಮಯವಾದಷ್ಟು ಜೀವಂತವಾಗುಳಿಯುತ್ತದೆ. ಹಾಗೆ ಅದರ ಭಾಷೆ ಸಂಸ್ಕೃತಿ, ಸಮುದಾಯಗಳು ಪರಿವರ್ತನೆ ಪ್ರಕ್ರಿಯೆಗೆ ತೆರೆದುಕೊಳ್ಳುತ್ತವೆ ಎನ್ನುವುದರಲ್ಲಿ ಅನುಮಾನವಿಲ್ಲ.

೪.೪.೫. ಝೆರಾಕ್ಸ್ ಯಂತ್ರ(ನೆರಳಚ್ಚು)

ಇದೂ ಕೂಡ ಮೈಕ್ರೋಫಿಲಂ ತರಹವೇ ಕಾರ್ಯ ನಿರ್ವಹಿಸುತ್ತದೆ. ಈ ಯಂತ್ರವನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ತೆಗೆದುಕೊಂಡು ಹೋಗಲು ಆಗುವುದಿಲ್ಲ. ಇದು ಹಸ್ತಪ್ರತಿ ಗ್ರಂಥಾಲಯದಲ್ಲೇ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ಕೆಲವೊಂದು ಸಂದರ್ಭದಲ್ಲಿ ಮಾತ್ರ ಪ್ರಯೋಜನಕ್ಕೆ ಬರುತ್ತದೆ. ಇದರಿಂದ ಹಸ್ತಪ್ರತಿಗಳಿಗೆ ಭೌತಿಕವಾಗಿ ಸ್ವಲ್ಪ ಬಾಧೆ ಉಂಟಾಗುವ ಸಾಧ್ಯತೆ ಇರುತ್ತದೆ.

೪.೪.೬. ಫೋಟೋಶಾಪ್

ಹಸ್ತಪ್ರತಿಗಳಲ್ಲಿನ ಬರಹವನ್ನು ಸಂರಕ್ಷಿಸುವ ವಿಧಾನದಲ್ಲಿ ಫೋಟೋಸ್ಟ್ಯಾಫ್ ಒಂದು. ಇದರ ಮೂಲಕ ಹಸ್ತಪ್ರತಿಗಳ ಪ್ರತಿಯೊಂದು ಪುಟಗಳನ್ನು ಅನುಕ್ರಮವಾಗಿ ಫೋಟೋಕ್ಲಿಕ್ ಮಾಡುತ್ತಾ ಹೋಗಬೇಕು. ಹಾಗೆ ಕ್ಲಿಕ್ ಮಾಡಿದವುಗಳನ್ನು ಫೋಟೋ ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಬೇಕು ಒಂದೇ ಪ್ರತಿಯನ್ನು ನಮಗೆ ಬೇಕಾದಷ್ಟು ಪ್ರಿಂಟ್ ಹಾಕಿಸಬಹುದಾಗಿದೆ. ಆ ಎಲ್ಲಾ ಕಾಪಿಗಳನ್ನು ಅಲ್ಬಮ್ ರೂಪದಲ್ಲಿ ಪುಸ್ತಕವನ್ನಾಗಿ ಸಿದ್ಧಪಡಿಸಿಕೊಳ್ಳಬಹುದು. ಇದಕ್ಕೆ ಹೆಚ್ಚು ಹಣ ಬೇಕಾಗುವುದರಿಂದ ಹೆಚ್ಚು ಉಪಯೋಗಿಸುತ್ತಿಲ್ಲ. ಪ್ರಸ್ತುತ ಸಂದರ್ಭದಲ್ಲಿ ತಂತ್ರಜ್ಞಾನ ಹೆಚ್ಚು ಸುಧಾರಿಸಿದೆ. ಡಿಜಿಟಲ್ ಕ್ಯಾಮರಾಗಳು ಒಂದೇ ಬಾರಿಗೆ ಸಾವಿರಾರು ಫೋಟೋಗಳನ್ನು ಶೇಖರಿಸಿಕೊಳ್ಳಬಲ್ಲವು ಮತ್ತು ಇಂಥ ಕ್ಯಾಮರಾಗಳಿಂದ ಯು.ಎಸ್.ಪಿ. ಮೂಲಕ ನೇರವಾಗಿ ಟಿ.ವಿ.ಯಲ್ಲಿ ಸಂಪರ್ಕ ಸಾಧಿಸಿ ಪರದೆಯಲ್ಲಿ ನೋಡಬಹುದು. ಆದರೆ ಫೋಟೋ ಮಾಡುವಾಗ ಅಚಾತುರ್ಯದಿಂದಾಗಿ ಫೋಟೋಗಳಲ್ಲಿ ಅಕ್ಷರಗಳು ಸ್ಪಷ್ಟವಾಗಿ ಗೋಚರಿಸದೇ ಹೋಗುವ ಸಂಭವವಿದೆ. ಈ ತಂತ್ರಜ್ಞಾನವು ಸೀಮಿತ ಪ್ರಮಾಣದಲ್ಲಿ ಹಸ್ತಪ್ರತಿಗಳಿದ್ದಾಗ ಮಾತ್ರ ಉಪಯುಕ್ತ. ಆದರೆ ಇದಕ್ಕೆ ಹೆಚ್ಚು ಖರ್ಚು ಹಾಗೂ ಶ್ರಮ ವಹಿಸಬೇಕಾಗುತ್ತದೆ.

೪.೪.೭. ವಿಡಿಯೋಗ್ರಫಿ/ಹ್ಯಾಂಡಿ ಕ್ಯಾಮ್

ಇದೊಂದು ದೃಶ್ಯಾವಳಿಗಳ ಚಿತ್ರೀಕರಣದ ಸಾಧನ. ವಿಶೇಷವಾಗಿ ಹಸ್ತಪ್ರತಿಗಳನ್ನು ಚಿತ್ರೀಕರಿಸುವ ಅತ್ಯಂತ ಸುಲಭದ ಉಪಕರಣವಾಗಿದೆ. ಇದರಲ್ಲಿ ಸೆರೆ ಹಿಡಿದಿರುವ ಚಿತ್ರಗಳು ಡಿಜಿಟಲ್ ಫೋಟೊ ತರಹವೇ ಮೆಮೊರಿ ಕಾರ್ಡಿನಲ್ಲಿ ಶೇಖರಣೆಗೊಳ್ಳುತ್ತವೆ. ಅತಿ ಚಿಕ್ಕದಾದ ಈ ಮೆಮೊರಿ ಕಾರ್ಡ್ ಒಂದಿದ್ದರೆ ಸಾಕು. ಇದನ್ನು ಕಂಪ್ಯೂಟರಿಗೆ ಅಳವಡಿಸಿ ಸೆರೆ ಹಿಡಿದ ದೃಶ್ಯಾವಳಿಗಳನ್ನು ನೋಡಬಹುದು. ಹ್ಯಾಂಡಿಕ್ಯಾಮ್ ಮೂಲಕ ಟಿ.ವಿ. ಪರದೆಯ ಮೇಲೂ ನೇರವಾಗಿ ವೀಕ್ಷಿಸಬಹುದು. ಈ ಕ್ರಿಯೆಗೆ ಪೂರಕವಾಗಿ ಕಂಪ್ಯೂಟರ್, ವಿದ್ಯುಚ್ಛಕ್ತಿ ಬೇಕಾಗುತ್ತದೆ. ಇದು ಹಸ್ತಪ್ರತಿಗಳ ಮೂಲಪ್ರತಿಗಳನ್ನು ಸಂರಕ್ಷಿಸಲು ಅತ್ಯಂತ ಮಹತ್ವ ವಿಧಾನವೆಂದು ಹೇಳಬಹುದಾಗಿದೆ.

೪.೪.೮. ಎಲೆಕ್ಟ್ರಾನಿಕ್ ದಾಖಲೀಕರಣ

ತಂತ್ರಜ್ಞಾನವು ಹಸ್ತಪ್ರತಿಗಳಿಗೆ ಸಂಬಂಧಿಸಿದ ಸ್ವರೂಪವನ್ನೊಳಗೊಂಡಂತೆ ಕವಿಯ ನಾಮ, ಉಪನಾಮ, ಕೃತಿನಾಮ, ಕಾಲ, ಬರವಣಿಗೆಯ ಕಾಲ, ಬರವಣಿಗೆಯ ವಿಷಯ, ಶಾಸ್ತ್ರ, ವೈದ್ಯ, ರಟ್ಟಮತ, ವೀರಶೈವ, ಜೈನ ಇತ್ಯಾದಿ, ಸಮಗ್ರ, ಅಸಮಗ್ರ, ಕಟ್ಟುಗಳ ಅನುಕ್ರಮ ಸಂಖ್ಯೆ, ಆ ಕಟ್ಟಿನಲ್ಲಿರುವ ಕೃತಿಗಳ ಸಂಖ್ಯೆ, ಪುಟ, ಗರಿಗಳ ಸಂಖ್ಯೆ, ಗರಿಗಳ ತ್ರುಟಿತವೋ, ಉತ್ತಮವೋ, ಒಟ್ಟು ಹಸ್ತಪ್ರತಿ ಮತ್ತು ಲಿಪಿಗಳ ಶುದ್ಧತೆಯನ್ನು ನಮೂದಿಸಲಾಗಿರುವ ನಮೂನೆಯಲ್ಲಿ ಹಸ್ತಪ್ರತಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ದಾಖಲಿಸಿದ ಮಾಹಿತಿಯನ್ನು ಇದರ ಮೂಲಕ ಕಂಪ್ಯೂಟರಿಗೆ ದಾಖಲಿಸುವುದು. ಎಲ್ಲ ಸಂಘ ಸಂಸ್ಥೆಗಳಲ್ಲಿ ಹಾಗೂ ವೈಯಕ್ತಿಕ ಒಡೆತನದಲ್ಲಿರುವ ಎಲ್ಲಾ ಹಸ್ತಪ್ರತಿಗಳನ್ನು ದಾಖಲಿಸುವುದು ಇದರ ಉದ್ದೇಶವಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಕೇಂದ್ರದ 'ನ್ಯಾಷನಲ್ ಮಿಷನ್ ಫಾರ್ ಮ್ಯಾನುಸ್ಕ್ರಿಪ್ಟ್' ಸಂಸ್ಥೆಯು ಇಡೀ ದೇಶದಲ್ಲಿರುವ ಹಸ್ತಪ್ರತಿಗಳ ಮಾಹಿತಿಯನ್ನು ಒಂದೆಡೆಗೆ ಕಲೆಹಾಕಿ ಸಂರಕ್ಷಿಸುವ ಉದ್ದೇಶ ಹೊಂದಿದೆ. ಈ ಸಂಸ್ಥೆಯ ಅನುದಾನದಡಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಕರ್ನಾಟಕದ ೧೧ ಜಿಲ್ಲೆಗಳಲ್ಲಿ ಮನೆಯಿಂದ ಮನೆಗೆ ತೆರಳಿ ಕ್ಷೇತ್ರಕಾರ್ಯ ಮಾಡಿ ಮಾಹಿತಿ ಸಂಗ್ರಹಿಸಿ, ಹಸ್ತಪ್ರತಿಗಳನ್ನು ಸಂಗ್ರಹ ಮಾಡುತ್ತಿದೆ. ಇದುವರೆಗೂ ೧೦.೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಹಾಗೂ ಒಂದು ಲಕ್ಷಕ್ಕೂ ಅಧಿಕ ಕೃತಿಗಳನ್ನು ಗುರುತಿಸಿ ದಾಖಲಿಸಲಾಗಿದೆ ಎಂಬುದು ಹೆಮ್ಮೆಯ ಸಂಗತಿಯೇ ಸರಿ. ಈಗಲೂ ಈ ಕಾರ್ಯ ಪ್ರಗತಿಯಲ್ಲಿದೆ. ಈ ಸ್ವರೂಪವು ಸಂಕ್ಷಿಪ್ತ ಸೂಚೀಕರಣದ ಮಾದರಿಯಲ್ಲಿದೆ. ಹಸ್ತಪ್ರತಿಯಲ್ಲಿರುವ ಸಂಪೂರ್ಣ ಪಠ್ಯ ಲಭ್ಯವಾಗುವುದಿಲ್ಲ. ಅಧ್ಯಯನಾಸಕ್ತರು ತಮಗೆ ಬೇಕಾದ ಹಸ್ತಪ್ರತಿಗಳಿರುವ ಇದರಿಂದ ವಿಳಾಸ ಪಡೆದು ಬೇಗನೆ ಹುಡುಕಿಕೊಂಡು ಅಧ್ಯಯನ ಮಾಡಬಹುದಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ International Fedaration of Library association ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದ್ದು, ಇದರ ಮುಖ್ಯಗುರಿ ನಮ್ಮ ವಿಶ್ವದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಒಂದು ಚೌಕಟ್ಟಿನಲ್ಲಿ ತರಬೇಕು ಎಂಬುದಾಗಿದೆ. '೧೯೨೭ರಲ್ಲಿ ಥೈಲ್ಯಾಂಡಿನಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಇದರಲ್ಲಿ ೪೪ ವಿಭಾಗಗಳನ್ನು ಮಾಡಿದ್ದಾರೆ. ಈ ವಿಭಾಗಗಳಲ್ಲಿ

Rare books and manuscript ಎಂದು ಹೆಸರಿಟ್ಟು ಹಸ್ತಪ್ರತಿಗಳನ್ನು ಇದರ ಮುಖಾಂತರ ಮುಖ್ಯವಾಹಿನಿಗೆ ತರುವ ಆಲೋಚನೆಯಲ್ಲಿದೆ'[೧೬] ಎಂಬುದು ಗಮನಾರ್ಹ.

೪.೪.೯. ನಕಲುಕಾರ್ಯ

ನಕಲುಕಾರ್ಯವೆನ್ನುವುದು ಮೂಲಪ್ರತಿಯನ್ನು ನೋಡಿ ಯಥಾವತ್ತಾಗಿ ಬರೆದಿಡುವುದು. ಬರೆದಿದ್ದನ್ನು Book Bonding ಮಾಡಿ ಕೋಶಾಗಾರದಲ್ಲಿ ಇಡುವುದು. ಆಸಕ್ತರಿಗೆ ಅಧ್ಯಯನಕ್ಕಾಗಿ ನಕಲುಪ್ರತಿಯನ್ನೇ ಅವರಿಗೆ ಒದಗಿಸುವುದು ಸೂಕ್ತ. ಇದರಿಂದ ಮೂಲಪ್ರತಿಯನ್ನು ಸಂರಕ್ಷಿತವಾಗಿಡಲು ಸಾಧ್ಯವಾಗುತ್ತದೆ. ಈ ಕಾರ್ಯವನ್ನು ಒಂದು ಕೃತಿಯ ಏಕೈಕ ಪ್ರತಿಯಿದ್ದಾಗ ಮಾಡುವುದು ಉತ್ತಮ. ಹಲವು ಪ್ರತಿಗಳು ಲಭ್ಯವಿದ್ದಾಗ ಇದರ ಅವಶ್ಯಕತೆ ಇರಲಾರದು. ನಕಲುಕಾರ್ಯ ಅಷ್ಟು ಸರಳವಲ್ಲ ಏಕೆಂದರೆ ಹಸ್ತಪ್ರತಿಗಳನ್ನು ಅದರಲ್ಲಿರುವ ಹಳಗನ್ನಡದ ಪಠ್ಯವನ್ನು, ಲಿಪಿಗಳನ್ನು ಗುರುತಿಸುವಂಥ ಪ್ರೌಢಿಮೆಯನ್ನು ಪಡೆದಿರಬೇಕು. ಇಲ್ಲವೆಂದರೆ ಗ್ರಂಥಸಂಪಾದನೆ ಸಂದರ್ಭದಲ್ಲಿ ಅಡಚಣೆ ಉಂಟಾಗುತ್ತದೆ. ಈ ಕಾರ್ಯದಲ್ಲಿ ಶ್ರಮ ಮತ್ತು ಸಂಯಮ, ತಾಳ್ಮೆ ಅತ್ಯವಶ್ಯಕ, ಜೊತೆಗೆ ಹೆಚ್ಚು ಸಮಯ ಬೇಕಾಗುವುದು. ಈ ಕಾರ್ಯ ಮಾಡಲು ಈ ಕ್ಷೇತ್ರದಲ್ಲಿ ನುರಿತ ಅನುಭವಸ್ಥರು ಅವಶ್ಯಕ. ನಮ್ಮ ಪ್ರಾಚೀನ ಲಿಪಿಕಾರರು ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಿಕೊಂಡು ಬಂದಿರುವುದು ಸ್ತುತ್ಯರ್ಹ ಸಂಗತಿಯಾಗಿದೆ.

೪.೪.೧೦. ಸೂಚೀಕರಣ

ಇದು ಪ್ರಸ್ತುತ ಸಂದರ್ಭದಲ್ಲಿ ಸಂರಕ್ಷಿತ ಹಸ್ತಪ್ರತಿಗಳ ವಿವರಗಳನ್ನು ಸ್ಥೂಲವಾಗಿ ತಿಳಿಸಿಕೊಡುವುದಾಗಿದೆ. ಇದರಲ್ಲಿ ಸೂಚಿ ಹಾಗೂ ವಿವರಣಾತ್ಮಕ ಸೂಚಿ ಎಂಬ ಎರಡು ಕ್ರಮಗಳನ್ನು ಕಾಣಬಹುದು. ಈ ಸೂಚಿಯಿಂದ ಹಸ್ತಪ್ರತಿಗಳು ಲಭ್ಯವಿರುವ ಸ್ಥಳಗಳನ್ನು, ಕೃತಿಗಳನ್ನು ಸುಲಭವಾಗಿ ಹುಡುಕಬಹುದು. ಒಂದೇ ಪ್ರಕಾರದ ಕೃತಿ, ಕವಿ, ನಾಮ, ಕಾಲ, ಹಸ್ತಪ್ರತಿ ಕಟ್ಟಿನ ಸಂಖ್ಯೆ ಇಷ್ಟು ಮಾತ್ರ ಇರುತ್ತದೆ. ಅಕಾರಾದಿಯಾಗಿ ಕ್ರಮವನ್ನು ಹೊಂದಿರುತ್ತದೆ. ಕನ್ನಡದಲ್ಲಿ ಬಂದಿರುವ ಸೂಚಿಗಳಲ್ಲಿ ವಿವರಣಾತ್ಮಕ ಸೂಚಿಗಳೇ ಹೆಚ್ಚು. ವಿವರಣಾತ್ಮಕ ಸೂಚಿ ಹಸ್ತಪ್ರತಿಯೊಂದರ ಸಮಗ್ರ ವಿವರವನ್ನು ನೀಡುವ ಕೈಪಿಡಿ ಇದ್ದಂತೆ. ಏಕೆಂದರೆ ಹಸ್ತಪ್ರತಿಯೊಂದರ ಪಠ್ಯವನ್ನು ಆದಿ ಮತ್ತು ಅಂತ್ಯಗಳನ್ನು ಯಥಾವತ್ ದಾಖಲಿಸಲಾಗುತ್ತದೆ(ಇನ್ನಿತರ ಸೂಚಿಗಳಲ್ಲಿ ಪಠ್ಯದ ಮಾಹಿತಿ ಇರುವುದಿಲ್ಲ). ವಿವರಣಾತ್ಮಕ ಸೂಚಿಯಲ್ಲಿ ಎರಡು ಭಾಗಗಳನ್ನು ಕಾಣಬಹುದು. ೧. **ಕೃತಿ ಪರಿಚಯ**, ೨. **ಪ್ರತಿ ಪರಿಚಯ**.

೧. **ಕೃತಿ ಪರಿಚಯದಲ್ಲಿ** ಕೃತಿಯ ಹೆಸರು, ಕೃತಿಯ ಕ್ರಮಸಂಖ್ಯೆ, ಕವಿಯ ಹೆಸರು ಮತ್ತು ಕಾಲ, ಕೃತಿಯ ಪ್ರಕಾರ, ಕೃತಿಯ ವಸ್ತು ವಿಷಯವನ್ನು ಒಳಗೊಂಡಿರುತ್ತದೆ.

೨. **ಪ್ರತಿಯ ಪರಿಚಯ:** ಪ್ರತಿಯ ಪರಿಚಯ ಭಾಗದಲ್ಲಿ ಕೃತಿ ಅಥವಾ ಕಟ್ಟಿನ ಬರವಣಿಗೆ ಮಾಧ್ಯಮವನ್ನು ಹೆಸರಿಸಲಾಗಿದೆ(ತಾಳೆಪ್ರತಿ, ಕಾಗದಪ್ರತಿ). ಅಲ್ಲದೇ ಕಟ್ಟಿನ ಕ್ರಮಸಂಖ್ಯೆಯನ್ನು ಇಲ್ಲಿಯೇ ನಮೂದಿಸಲಾಗಿದೆ. ನಂತರ ಹಸ್ತಪ್ರತಿಗಳ ಸ್ವರೂಪ, ಲಿಪಿಗಳ ಸ್ವರೂಪ, ಭಾಷಾ

ಸ್ವರೂಪ, ಪ್ರತಿಯಲ್ಲಿನ ಪಠ್ಯದ ಆರಂಭ ಆದಿಯೆಂದು, ಕೊನೆಯಲ್ಲಿ ಅಂತ್ಯವೆಂದು ಸ್ಥೂಲವಾಗಿ ವಿಂಗಡಿಸಿಕೊಳ್ಳಲಾಗಿದೆ. ಅಲ್ಲದೇ ವಿಶೇಷ ಎನ್ನುವ ಭಾಗದಲ್ಲಿ ಹಸ್ತಪ್ರತಿಯ ಸಮಗ್ರತೆ, ಗುಣಲಕ್ಷಣ ಚಿತ್ರಗಳ ಬಳಕೆಗಳಂತಹ ವಿಶೇಷ ನಮೂದುಗಳಿದ್ದರೆ, ಅವನ್ನು ಕೊಡಲಾಗಿದೆ. ಕಟ್ಟಿನಲ್ಲಿರುವ ಕೃತಿಗಳು ಎಂಬ ಭಾಗವನ್ನು ಕೊಡಲಾಗಿದೆ. ಅಂದರೆ ಒಂದೇ ಕಟ್ಟಿನಲ್ಲಿ ಹಲವು ಕೃತಿಗಳಿದ್ದರೆ ಪ್ರಥಮ ಕೃತಿಯ ಕೆಳಭಾಗದಲ್ಲಿ ಅದರೊಳಗಿರುವ ಎಲ್ಲ ಕೃತಿಗಳ ಹೆಸರನ್ನು ಸೂಚಿ ಸಂಖ್ಯೆ ಸಮೇತ ಕೊಡಲಾಗಿರುತ್ತದೆ.

ಇನ್ನು 'ಸಂಪುಟದ ಕೊನೆಯ ಭಾಗ ಅನುಬಂಧದಲ್ಲಿ ಕವಿ, ಸ್ಥಳನಾಮ, ಲಿಪಿಕಾರರು, ಬರೆಸಿದವರು, ಹಸ್ತಪ್ರತಿ ನೀಡಿದ ದಾನಿಗಳ ಕುರಿತ ಆಯಾ ಸೂಚಿಗಳ ಕ್ರಮಸಂಖ್ಯೆಗಳ ಸಮೇತ ವಿವರಗಳನ್ನು ಕೊಡಲಾಗಿದೆ. ಇದು ವಿವರಣಾತ್ಮಕ ಸೂಚಿಯ ಮಾದರಿ.'[೧೬] ಹಸ್ತಪ್ರತಿ ಸೂಚಿಗಳು ಅಧ್ಯಯನಕಾರರಿಗೆ ಹಾಗೂ ಆಸಕ್ತರಿಗೆ ದಾರಿದೀಪಗಳಿದ್ದಂತೆ. ಈ ಸಂಕ್ಷಿಪ್ತ ಸೂಚಿಗಳು ವ್ಯವಸ್ಥಿತ ನಿರ್ಮಿತಿಯಿಂದಾಗಿ ಸೂಚಿ ಸಾಹಿತ್ಯಕ್ಕೆ ಇಂದು ವಿಜ್ಞಾನದ ಮರ್ಯಾದೆ ಪ್ರಾಪ್ತವಾಗಿದೆ ಎಂಬ ಮಾತು ವಿವರಣಾತ್ಮಕ ಸೂಚಿಯ ಮಹತ್ವವನ್ನು ಹೇಳುತ್ತದೆ. ಅಂತೆಯೇ ಇದನ್ನು ಹಸ್ತಪ್ರತಿಯ ಸಂಕ್ಷಿಪ್ತ ಸಂರಕ್ಷಣೆ ಎಂದೇ ಭಾವಿಸಬಹುದು.

೪.೪.೧೧. ಆನ್‌ಲೈನ್ ಅಧ್ಯಯನ

ಆನ್‌ಲೈನ್ ಕಲಿಕೆಯ ಅಧ್ಯಯನವು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಅಭಿವೃದ್ಧಿಯ ಫಲವೆಂದು ಹೇಳಬಹುದು. ಇದರಿಂದ ಪ್ರಾಚೀನ ಗ್ರಂಥಗಳ ಕಲಿಕೆಯಲ್ಲಿ ವೈವಿಧ್ಯತೆ ಹಾಗೂ ಆಸಕ್ತಿಯನ್ನು, ಆಕರ್ಷಣೆಯನ್ನು ಹೆಚ್ಚಿಸುತ್ತದೆ. ಈ ಕಾರ್ಯಕ್ರಮವು ಪ್ರಸ್ತುತ ಸಂದರ್ಭದಲ್ಲಿ ಅತ್ಯಾವಶ್ಯಕ ಹಾಗೂ ಅನಿವಾರ್ಯವಾಗಿರುವುದು. ನಾಡಿನ ಹಸ್ತಪ್ರತಿ ಭಂಡಾರಗಳು ಈ ಕಾರ್ಯಕ್ರಮವನ್ನು ಅಳವಡಿಸಿ ಕೊಳ್ಳುವುದರಿಂದ ನಾಡಿನಲ್ಲಿ ಅಧ್ಯಯನಕಾರರನ್ನು ಹಾಗೂ ಆಸಕ್ತರನ್ನು(ಪ್ರಾಚೀನ ಗ್ರಂಥಗಳ ಬಗ್ಗೆ) ಸೃಷ್ಟಿಸುವುದರಲ್ಲಿ ಯಾವುದೇ ಸಂಶಯವಿಲ್ಲ. ಇದರ ಜೊತೆಯಲ್ಲಿ ಅಧ್ಯಯನಕಾರರ ಸಮಯ ಮತ್ತು ಶ್ರಮವನ್ನು ಸಹ ಉಳಿಸಬಹುದು.

ಈ ಕಾರ್ಯಕ್ರಮದ ಮೊದಲ ಹಂತ ಎಲ್ಲ ಅಧ್ಯಯನಕಾರರ ಇ-ಮೇಲ್ ಐಡಿಗಳನ್ನು ಪಡೆದುಕೊಳ್ಳಬೇಕು.

ಬಳಕೆಯ ಸಾಮಾನ್ಯ ತಿಳುವಳಿಕೆಗಳು

* ಕಂಪ್ಯೂಟರ್ ಬಗ್ಗೆ ಸಾಮಾನ್ಯ ತಿಳುವಳಿಕೆ ಇರಬೇಕು.
* ಟೈಪ್ ಮಾಡುವ ಜ್ಞಾನವನ್ನು ಸ್ವಲ್ಪ ಹೊಂದಿರಬೇಕು.
* ಅಂತರಜಾಲದ ಬಗ್ಗೆ ತಿಳುವಳಿಕೆ ಇರಬೇಕು.

ಮೇಲಿನ ಅಂಶಗಳನ್ನು ತಿಳಿದುಕೊಂಡ ನಂತರ "ಹಸ್ತಪ್ರತಿ ಭಂಡಾರದಲ್ಲಿನ ಸಿಬ್ಬಂದಿ (ತಜ್ಞರು) ಪಡೆದುಕೊಂಡಿರುವ ಅಧ್ಯಯನಕಾರರ 'ಇ-ಮೇಲ್' ಐಡಿಗಳಿಗೆ ಪ್ರಾರಂಭದಲ್ಲಿ ಸರಳವಾದ ಸುಲಭವಾದ ಗರಿಗಳನ್ನು ಕಳುಹಿಸಬೇಕು. ನಂತರ ನಿಗದಿತ ಕಾಲಾವಕಾಶವನ್ನು ನೀಡಬೇಕು.

ಅಧ್ಯಯನಕಾರರು ಹಾಗೂ ಆಸಕ್ತರು ಹಸ್ತಪ್ರತಿ ಗರಿಗಳಲ್ಲಿನ ವಿಷಯವನ್ನು ಓದಿ ನಂತರ ತಮ್ಮ ಅಭಿಪ್ರಾಯಗಳನ್ನು ಕಂಪ್ಯೂಟರ್ ಮುಖಾಂತರ ಟೈಪ್ ಮಾಡಿ ಸಂಬಂಧಿಸಿದ ತಜ್ಞರಿಗೆ ಕಳುಹಿಸಬೇಕು. ನಂತರ ನುರಿತ ತಜ್ಞರು ಈ ವಿಷಯಗಳನ್ನು ಗಮನಿಸಿ ಸಲಹೆ ಸೂಚನೆಗಳನ್ನು ನೀಡಿ ಅಧ್ಯಯನಕಾರರ ಸಮಸ್ಯೆಗಳನ್ನು ಕೂಡ ಚರ್ಚೆ ಮಾಡಬಹುದಾಗಿದೆ. ಇದರಿಂದ ಮೂಲಪ್ರತಿಗೆ ಯಾವುದೇ ಧಕ್ಕೆ ಬರುವುದಿಲ್ಲ. ಆಸಕ್ತ ಅಧ್ಯಯನಕಾರರು ತಾವು ಇರುವ ಸ್ಥಳದಿಂದಲೇ ಈ ಕಾರ್ಯವನ್ನು ಮಾಡಬಹುದು.

ಕಾರ್ಯಕ್ರಮವನ್ನು ಮೊಟ್ಟಮೊದಲ ಬಾರಿಗೆ ಬಿ.ಎಂ.ಶ್ರೀ. ಪ್ರತಿಷ್ಠಾನದ ನಿರ್ದೇಶಕರಾದ ಎಸ್.ಶೇಷಗಿರಿರಾವ್ ಪರಿಚಯಿಸಿದ್ದಾರೆ. ಆದಕಾರಣ ಪ್ರಸ್ತುತ ಸಂದರ್ಭ ಇವರಿಗೆ ದೇಶ ವಿದೇಶಗಳಿಂದ ಅಧ್ಯಯನಕಾರರು ಗರಿಗಳನ್ನು ಅಧ್ಯಯನ ಮಾಡಿ ಅಭಿಪ್ರಾಯ ತಿಳಿಸಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ. ಪ್ರಸ್ತುತ ಸಂದರ್ಭದಲ್ಲಿ ಇಂತಹ ಕಾರ್ಯಕ್ರಮಗಳನ್ನು ಸರಕಾರವು ಗುರುತಿಸಿ ಅಗತ್ಯವಾದ ನೆರವಿನೊಂದಿಗೆ ಜಾರಿಗೆ ತರುವುದರಿಂದ ಪ್ರಾಚೀನ ಗ್ರಂಥಪರಂಪರೆಗೆ ಪ್ರೋತ್ಸಾಹ ಹಾಗೂ ಬೆಂಬಲಗಳನ್ನು ನೀಡಿದಂತಾಗುತ್ತದೆ.

ಹಸ್ತಪ್ರತಿಗಳನ್ನು ಸಂರಕ್ಷಿಸುವುದೆಂದರೆ ಶಿಶುಗಳನ್ನು ಲಾಲಿಸಿದಂತೆ. ಹಸ್ತಪ್ರತಿಯನ್ನು ಹಿಡಿಯುವಾಗ, ಅನಿವಾರ್ಯ ಪ್ರಸಂಗಗಳಲ್ಲಿ ಪರ ಊರಿಗೆ ಕಳಿಸಿಕೊಡುವಾಗ, ಛಾಯಾಚಿತ್ರ ತೆಗೆಯುವಾಗ, ಡಿಜಿಟಲೈಜ್ ಮಾಡುವಾಗ ಹೆಚ್ಚಿನ ಕಾಳಜಿ ಮತ್ತು ತಜ್ಞತೆಯ ಅಗತ್ಯವಿದೆ. ಸ್ವಲ್ಪ ಉದಾಸೀನ ಮಾಡಿದರೂ ಅಪಾಯ ಉಂಟಾಗುವ ಸಂಭವವಿರುತ್ತದೆ. ಹಸ್ತಪ್ರತಿಗಳನ್ನು ಸಂಶೋಧಕರ ಮನವಿ ಮೇರೆಗೆ ತೆಗೆದುಕೊಂಡು ಹೋಗುವಾಗ ಅಥವಾ ಕಟ್ಟಡದ ಒಳಗೇ ಸ್ಥಳಾಂತರಿಸಬೇಕಾದ ಸಂದರ್ಭವಿದ್ದಾಗ ಪ್ರತಿಗಳನ್ನು ಟ್ರೇಯಲ್ಲಿಯೇ ಇಟ್ಟುಕೊಂಡು ಹೋಗಬೇಕು. ಹಾಗೆಯೇ ಊರಿಂದ ಊರಿಗೆ ಎರವಲು ರೂಪದಲ್ಲಿ ಹಸ್ತಪ್ರತಿಗಳನ್ನು ಕಳಿಸಬೇಕಾದ ಸಂದರ್ಭವಿದ್ದಲ್ಲಿ ಬಣ್ಣದ ಕಾಗದ ಬಳಸಿ ಪ್ಯಾಕ್ ಮಾಡಬಾರದು. ಈ ಮೇಲಿನ ಕೆಲವು ಸೂಕ್ಷ್ಮ ಅಂಶಗಳನ್ನು ಹಸ್ತಪ್ರತಿ ಭಂಡಾರದಲ್ಲಿ ಕೆಲಸ ನಿರ್ವಹಿಸುವವರು ತಿಳಿದುಕೊಳ್ಳಬೇಕು. ಒಟ್ಟಾರೆ ಹಸ್ತಪ್ರತಿ ಸಂರಕ್ಷಣೆಯಲ್ಲಿ ಸದೃಢ ಮನಸ್ಸುಳ್ಳವರು, ತಾಳ್ಮೆಯುಳ್ಳವರು, ಕ್ರಿಯಾಶೀಲರು ಆಗಿರಬೇಕಾದದ್ದು ಅತ್ಯಂತ ಅವಶ್ಯಕ.

ಇಂದು ಎಲ್ಲಾ ಜ್ಞಾನಶಾಖೆಗಳೂ ವೈಜ್ಞಾನಿಕ ಸ್ವರೂಪ ಪಡೆದುಕೊಳ್ಳುತ್ತಿವೆ. ಹಸ್ತಪ್ರತಿಗಳ ಕ್ಷೇತ್ರವೂ ಸ್ವತಂತ್ರ ಹಸ್ತಪ್ರತಿವಿಜ್ಞಾನವಾಗಿ ಆಧುನಿಕತೆಗೆ ಸಲ್ಲಬೇಕಾಗಿದೆ. ಮಾಹಿತಿ ತಂತ್ರಜ್ಞಾನದ ಕ್ಷಿಪ್ರಯುಗದಲ್ಲಿ ಹಸ್ತಪ್ರತಿಗಳನ್ನು ಕಂಪ್ಯೂಟರ್ ಹಾಗೂ ಇನ್ನಿತರ ಆಧುನಿಕ ತಂತ್ರಜ್ಞಾನಗಳೊಂದಿಗೆ ತಂತ್ರಾಂಶ ಸುರುಳಿಗಳಲ್ಲಿ ದಾಖಲಿಸಿ ಸಂರಕ್ಷಿಸುವ ಅನಿವಾರ್ಯತೆ ಎದುರಾಗಿದೆ. ಪ್ರಸ್ತುತ ನನ್ನ ಅಧ್ಯಯನದಲ್ಲಿ ಸಂರಕ್ಷಣೆಗೆ ಸಂಬಂಧಿಸಿದ ಕೆಲವು ಸೂಕ್ಷ್ಮ ಅತಿಸೂಕ್ಷ್ಮ ವಿಚಾರಗಳನ್ನು ಕುರಿತು ಚರ್ಚಿಸಲಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಸಂಗ್ರಹ ಮತ್ತು ಸರ್ವೇಕ್ಷಣೆಗೆ ಆಧುನಿಕ ಮಾಹಿತಿ ತಂತ್ರಜ್ಞಾನದಂಥ ಅನುಕೂಲಗಳು, ಅನುದಾನಗಳು, ಅವಕಾಶಗಳು ಹೆಚ್ಚಾಗಿವೆ. ಆದರೆ ಅವುಗಳನ್ನು ಜಾರಿಗೊಳಿಸುವ ಪ್ರಯತ್ನ ಜರೂರು ಆಗಬೇಕಾಗಿದೆ.

ಜಾಗತೀಕರಣದ ಸಂದರ್ಭದಲ್ಲಿ ಸಂಸ್ಕೃತಿಯ ಅಸ್ಮಿತೆಯನ್ನು ಉಳಿಸಿಕೊಳ್ಳಲು ಹಸ್ತಪ್ರತಿ ಮತ್ತು ಅವುಗಳಲ್ಲಿ ನಿಕ್ಷಿಪ್ತವಾಗಿರುವ ಜ್ಞಾನಪರಂಪರೆಯನ್ನು ಮುಂದಿನ ಪೀಳಿಗೆಗೆ ಮೇಲೆ ಚರ್ಚಿಸಲಾದ ಹಲವಾರು ತೊಂದರೆಗಳಲ್ಲಿ ರವಾನಿಸುವುದು, ಕಾಯ್ದಿಟ್ಟುಕೊಳ್ಳುವುದು ಒಂದು ತಲೆಮಾರಿನ ಸಾಂಸ್ಕೃತಿಕ ಜವಾಬ್ದಾರಿ ಎಂದೇ ಭಾವಿಸಬೇಕಾಗಿದೆ. ಇಂಥ ಹಸ್ತಪ್ರತಿ ರಕ್ಷಣೆ ಬಗ್ಗೆ ಆತಂಕ ನಮ್ಮಲ್ಲಿರಬೇಕು. ನಮ್ಮ ನಾಡಿನ ಹಸ್ತಪ್ರತಿ ಭಂಡಾರಗಳ ಸಂರಕ್ಷಣೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಬಹಳ ನಿಧಾನಗತಿಯಲ್ಲಿ ಸಾಗುತ್ತಿರುವುದು ಖೇದದ ಸಂಗತಿ. ಇದು ಜರೂರು ಆಗುವುದಕ್ಕೆ ತಜ್ಞರು ಕೈ ಜೋಡಿಸುವ ಅಗತ್ಯವಿದೆ. ಜೊತೆಗೆ ಸಂರಕ್ಷಣೆಗೆ ಸಾರ್ವಜನಿಕರ ಮತ್ತು ಸಂಶೋಧಕರ ಸಹಕಾರ ಅನಿವಾರ್ಯವಾಗಿರುತ್ತದೆ. ಸರಕಾರ ಕೂಡ ರಕ್ಷಣಾ ಕಾರ್ಯಕ್ಕಾಗಿಯೇ ನಿಗದಿತ ಹಣವನ್ನು ಮೀಸಲಿಡಬೇಕು. ಹಸ್ತಪ್ರತಿಗಳು ರಾಷ್ಟ್ರೀಯ ಸಂಪತ್ತೆಂದು ಜಾಹಿರಾತುಗಳ ಮೂಲಕ ಸಾರ್ವಜನಿಕರಿಗೆ ಮನದಟ್ಟು ಮಾಡಿಸಬೇಕಾಗಿದೆ. ಆದರೆ ನಾಡಿನ ಅನೇಕ ಹಸ್ತಪ್ರತಿ ಭಂಡಾರಗಳು ಪರಸ್ಪರ ವಿಷಯ ವಿನಿಮಯ ಹೊಂದಾಣಿಕೆಯ ಕೊರತೆಯಿಂದ ಕೆಲವೊಂದು ಸಂಗತಿಗಳನ್ನು ಹಂಚಿಕೊಳ್ಳಲು ಬಹಳಷ್ಟು ಮಂದಗತಿಯಲ್ಲಿರುವುದನ್ನು ಕಾಣಬಹುದು.

ಕೊನೆಟಿಪ್ಪಣಿಗಳು

೧. ವೀರೇಶ ಬಡಿಗೇರ, ೨೦೦೫, ಹಲಗೆ ಬಳಪ, ಪುಟ

೨. ಕಲಬುರ್ಗಿ ಎಂ.ಎಂ., ೧೯೯೩, ಕನ್ನಡ ಹಸ್ತಪ್ರತಿ ಇತಿಹಾಸ, ಪುಟ ೯೪.

೩. ಅದೇ, ಪುಟ ೯೪.

೪. ಸಣ್ಣಯ್ಯ ಬಿ.ಎಸ್., ೧೯೯೨, ಹಸ್ತಪ್ರತಿಶಾಸ್ತ್ರ ಪರಿಚಯ, ಪುಟ ೪೯.

೫. ಅದೇ, ಪುಟ ೫೨.

೬. ಡಿ.ಎಲ್.ಎನ್, ೧೯೭೦, ಕನ್ನಡ ಗ್ರಂಥಸಂಪಾದನೆ, ಪುಟ

೭. ಹಿರೇಮಠ ಬಿ.ಕೆ., ೧೯೯೨, ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ಪುಟ ೨೩೭.

೮. ಅದೇ, ಪುಟ ೪೮.

೯. ವೀರೇಶ ಬಡಿಗೇರ ಮತ್ತು ಚನ್ನವೀರಪ್ಪ(ಸಂ) ಎಸ್.ಆರ್., ೨೦೦೩, ಹಸ್ತಪ್ರತಿ ವ್ಯಾಸಂಗ, ಸಂಪುಟ ೪, ಪುಟ ೭೭.

೧೦. ಹಿರೇಮಠ ಬಿ.ಕೆ., ೧೯೯೨, ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ಪುಟ ೨೩೮.

೧೧. ಅದೇ, ಪುಟ ೨೩೦.

೧೨. ಕೇಶವಮೂರ್ತಿ ಕೆ.ಆರ್., ೨೦೧೦, ಹಸ್ತಪ್ರತಿ ಸಂರಕ್ಷಣೆ, ಪುಟ ೧೧.

೧೩. ವಿಜಯ ಕರ್ನಾಟಕದ ದಿನಪತ್ರಿಕೆ ದಿನಾಂಕ ೩ನೇ ಜನವರಿ ೨೦೧೪, ಪುಟ ೪(ಪ್ರಸ್ತುತ ಸಂದರ್ಭದಲ್ಲಿ ಸಹ ಪೂಜೆ ಮಾಡುತ್ತಿರುವ ಹಸ್ತಪ್ರತಿಗಳು).

೧೪. ಕಲಬುರ್ಗಿ ಎಂ.ಎಂ., ೧೯೯೩, ಕನ್ನಡ ಹಸ್ತಪ್ರತಿ ಇತಿಹಾಸ, ಪುಟ ೧೧.

೧೫. ವೀರೇಶ ಬಡಿಗೇರ, ೨೦೦೩, ಕನ್ನಡ ಹಸ್ತಪ್ರತಿಗಳ ಗಣಕೀಕರಣ, ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು, ಪುಟ ೧೬೦.

೧೬. ವೀರೇಶ ಬಡಿಗೇರ ಮತ್ತು ಚನ್ನವೀರಪ್ಪ(ಸಂ) ಎಸ್.ಆರ್., ೨೦೦೩, ಹಸ್ತಪ್ರತಿ ವ್ಯಾಸಂಗ, ಸಂಪುಟ ೪, ಪುಟ ೧೫೫.

೧೭. ವೀರೇಶ ಬಡಿಗೇರ ಮತ್ತು ಚನ್ನವೀರಪ್ಪ(ಸಂ) ಎಸ್.ಆರ್., ೨೦೦೬, ಮುನ್ನುಡಿ, ಹಸ್ತಪ್ರತಿಸೂಚಿ, ಸಂಪುಟ ೪.

* * *

ಅಧ್ಯಾಯ ಐದು

ಹಸ್ತಪ್ರತಿ ಭಂಡಾರಗಳ ಮಹತ್ವ ಮತ್ತು ವಿಶೇಷತೆ

ಅಧ್ಯಾಯ ಐದು

ಹಸ್ತಪ್ರತಿ ಭಂಡಾರಗಳ ಮಹತ್ವ ಮತ್ತು ವಿಶೇಷತೆ

ಹಸ್ತಪ್ರತಿಗಳ ಸಂಗ್ರಹಕ್ಕಾಗಿ ಆಯಾ ವಿದ್ವಾಂಸರ ಅನುಕೂಲಕ್ಕೆ ತಕ್ಕಂತೆ ತಮ್ಮ ತಮ್ಮ ಮನೆಗಳಲ್ಲಿಯೇ ವ್ಯವಸ್ಥೆ ಕಲ್ಪಿಸಲಾಗುತ್ತಿತ್ತು. ಆದರೆ ಇಂತಹ ಹಸ್ತಪ್ರತಿಗಳು ಕ್ರಮೇಣ ಆಸಕ್ತರ ಅಭಿರುಚಿ, ಅಧ್ಯಯನದ ಆಸಕ್ತಿ, ಓದುವ ಹವ್ಯಾಸಕ್ಕೆ ತಕ್ಕಂತೆ ಸಂಗ್ರಹವಾಗುತ್ತಿದ್ದವು. ಅವುಗಳನ್ನು ನೋಡುವವರಿರಲಿ, ಇಲ್ಲದಿರಲಿ, ಒಳಗಿನ ವಿಷಯ ತಿಳಿಯಲಿ ತಿಳಿಯದಿರಲಿ ಒಟ್ಟಿನಲ್ಲಿ ಸಂಗ್ರಹ ಮಾಡುವ ಒಂದು ಹವ್ಯಾಸವಾಗಿ ಕೆಲವರಲ್ಲಿ ಇತ್ತು. ಅದರಂತೆ ಕೆಲವು ಮಹನೀಯರು ಉದಾರವಾಗಿ ದೊರೆತ ಕಡೆ ಉಚಿತವಾಗಿ ಪಡೆದು, ದೊರೆಯದೆಡೆಗಳಲ್ಲಿ ಹಣವನ್ನು ಕೊಟ್ಟು ಪಡೆದಿರುವುದುಂಟು. ಒಂದು ವೇಳೆ ಅವರು ಹಾಗೆ ಮಾಡದಿದ್ದಲ್ಲಿ ಈಗ ದೊರೆಯುತ್ತಿರುವ ಹಸ್ತಪ್ರತಿಗಳಲ್ಲಿ ಹಲವು ಪ್ರಮುಖ ಗ್ರಂಥಗಳು ಹೇಳ ಹೆಸರಿಲ್ಲದೆ ಮರೆಯಾಗುತ್ತಿದ್ದವು. ಇಂತಹ ಕಾರ್ಯದಿಂದಲೇ ಕನ್ನಡ ಹಸ್ತಪ್ರತಿಗಳು ಭಾರತ ಹಾಗೂ ಇತರೆ ಹಲವು ದೇಶಗಳಲ್ಲಿ ಹೋಗಿ ತಂದಿರುವುದನ್ನು ಗಮನಿಸಬಹುದು. ಈ ಹಸ್ತಪ್ರತಿಗಳ ಸಂಗ್ರಹ ಇಂತಹ ಭಾಷೆಗೆಂದು ಮೀಸಲಾಗಿರಲಿಲ್ಲ. ಅವುಗಳಲ್ಲಿ ಆಯಾ ಪ್ರಾಂತೀಯ ಭಾಷೆಗಳು ಹೆಚ್ಚಾಗಿದ್ದವು. ಇತರೆ ಭಾಷೆಯ ಪ್ರತಿಗಳು ಕಡಿಮೆಯಿರಬಹುದು ಅಷ್ಟೆ. ಹಸ್ತಪ್ರತಿಗಳ ಸಂಗ್ರಹ ಮಾಡುವಾಗ ಇಂತಹ ಭಾಷೆಗೆ ಹೆಚ್ಚು ಗಮನ ಕೊಡಬೇಕೆಂಬುದು ಈಗ ರೂಢಿ ಆಗಿರುವುದನ್ನು ಕಾಣಬಹುದು. ಆಯಾ ಭಾಷೆಗಳಲ್ಲಿ ಪ್ರತ್ಯೇಕವಾದ ಸಂಶೋಧನೆ, ಸಂಪಾದನೆ, ಪ್ರಕಟನೆಗಳು ಪ್ರಾರಂಭವಾದ ಮೇಲೆ ತಮಗೆ ಬೇಕಾದುವನ್ನೇ ಸಂಗ್ರಹಿಸಿ ಸಂರಕ್ಷಿಸುವ ಹೊಣೆಯನ್ನು ಸಂಬಂಧಿಸಿದ ಸಂಸ್ಥೆಗಳು, ಸಂಘಗಳು ಹೊತ್ತಿರುವುದು ತೀರಾ ಇತ್ತೀಚಿನ ಸಂಗತಿಯಾಗಿದೆ. ಈ ರೀತಿಯಾಗಿ ಆಸಕ್ತರು, ಅಧ್ಯಯನಕಾರರು, ಸಂಗ್ರಹಕಾರರು ಕಾಲದಿಂದ ಕಾಲಕ್ಕೆ ಅಭಿರುಚಿ, ಆಸಕ್ತಿ ಬದಲಾಗುವುದರ ಜೊತೆಗೆ ಅಧ್ಯಯನದ ಆಸಕ್ತಿ ವೃದ್ಧಿಸುತ್ತಾ ಹೀಗೆ ಪ್ರಾಚೀನ ಕೃತಿಗಳನ್ನು ಹೊಂದಿರುವ ಹಸ್ತಪ್ರತಿಗಳ ಸಂಗ್ರಹವನ್ನು ಮಾಡತೊಡಗಿರುವುದು ಕಂಡುಬರುತ್ತದೆ. ಇದರಿಂದ ಕಾಲ ಸರಿದಂತೆ ಇವೆ. ಮುಂದೆ ಈ ಗ್ರಂಥಾಲಯಗಳಾಗಿ ಮಾರ್ಪಟ್ಟಿರುವುದನ್ನು ಕಾಣಬಹುದು.

ಹೀಗೆ ೧೮೧೭ರಲ್ಲಿ ಭಾರತದ ಪ್ರಪ್ರಥಮ ಸರ್ವೇಯರ್ ಜನರಲ್ ಆಗಿ ನೇಮಕಗೊಂಡು ಬಂದ ಕರ್ನಲ್ ಮೆಕೆಂಜಿಯೇ ಹಸ್ತಪ್ರತಿಗಳ ಸಂಗ್ರಹದ ಕೆಲಸ ಮಾಡಿದ ಮೊಟ್ಟಮೊದಲಿಗ. ಈತನ ಸಂಗ್ರಹದಲ್ಲಿ ಸೇರಿದ ಕನ್ನಡ ಹಸ್ತಪ್ರತಿಗಳು ೧೮೫೮ರಲ್ಲಿ ಸ್ಥಾಪಿತವಾದ ಮದರಾಸು ಸರಕಾರಿ ಹಸ್ತಪ್ರತಿ ಭಂಡಾರಕ್ಕೆ ಸೇರ್ಪಡೆಯಾದ ಮೆಕೆಂಜಿ ಸಂಗ್ರಹವೇ ಪ್ರಪ್ರಥಮ ಸಾರ್ವಜನಿಕ ಕನ್ನಡ ಹಸ್ತಪ್ರತಿ ಭಂಡಾರ"ವಾಗಿದೆ ಎಂದು ಎಚ್. ದೇವೀರಪ್ಪ ಅವರು ಹೇಳಿದ್ದಾರೆ.

ಹಸ್ತಪ್ರತಿ ಗ್ರಂಥಾಲಯಗಳು ನಮ್ಮ ಪ್ರಾಚೀನ ಪರಂಪರೆ ಹಾಗೂ ಇತಿಹಾಸಕ್ಕೆ ಪ್ರಮುಖ ಸಾಕ್ಷಿಗಳನ್ನು ಒದಗಿಸುತ್ತವೆ. ಇಂತಹ ಹಸ್ತಪ್ರತಿ ಗ್ರಂಥಾಲಯಗಳು ಪ್ರಸ್ತುತ ಸಂದರ್ಭದಲ್ಲಿ ತುಂಬಾ ನಿರ್ಲಕ್ಷ್ಯಕ್ಕೆ ಒಳಪಟ್ಟಿರುವುದು ಕಂಡುಬರುತ್ತದೆ. ಇವುಗಳಿಗೆ ಕಾಯಕಲ್ಪ ನೀಡಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ನಮ್ಮ ಪ್ರಾಚೀನ ಗ್ರಂಥಗಳ ಮೇಲೆ ಬೆಳಕು ಚೆಲ್ಲುವ ಕಾರ್ಯ ನಡೆಯಬೇಕಿದೆ. ಇದಕ್ಕೆ ನಾಡಿನ ಹಿರಿಯ ವಿದ್ವಾಂಸರು ಹಾಗೂ ಸಂಶೋಧಕರು, ಅಧ್ಯಯನಕಾರರು, ಕ್ಷೇತ್ರದ ಗಣ್ಯರ ಸಹಾಯ–ಸಹಕಾರ ಅಗತ್ಯವಾಗಬೇಕಾಗಿದೆ.

ಇದುವರೆಗೆ ದೊರೆತ ಹಸ್ತಪ್ರತಿಗಳು ವಿವಿಧೆಡೆಗಳಲ್ಲಿ ಸಂಗ್ರಹವಾಗಿ ಕೆಲವು ಉಪಯೋಗವಾದರೆ ಮತ್ತೆ ಕೆಲವು ಮೂಲೆಗುಂಪಾಗಿ ಹಾಳಾಗಿ ಹೋಗಿರುವುದುಂಟು. ಈಗ ಸದ್ಯ ದೊರೆಯುವಷ್ಟನ್ನಾದರೂ ಸಂಗ್ರಹಿಸಿ ಸಂರಕ್ಷಿಸಬೇಕೆಂಬ ಬಯಕೆಯಿಂದ ಹಲವು ಸಂಘ, ಸಂಸ್ಥೆಗಳು, ಮಠಗಳು ಆಸಕ್ತಿಯಿಂದ ಕೆಲಸ ಮಾಡುತ್ತಿವೆ. ಇವು ಈ ಕೆಲಸವನ್ನು ಹೆಚ್ಚು ಕಡಿಮೆ ಒಂದು ಶತಮಾನದಿಂದ ಮಾಡಿದರೂ ಎಲ್ಲ ಹಸ್ತಪ್ರತಿಗಳ ಸಂಗ್ರಹ ಬಯಸುವವರೆಲ್ಲರ ಕೈಗೆ ದೊರಕುವಂತೆ ಮಾಡುವುದು ಸಾಧ್ಯವಾಗಿಲ್ಲದಿರುವುದು ತುಂಬಾ ವಿಷಾದನೀಯ. ಈ ಕಾರಣದಿಂದ ಹಸ್ತಪ್ರತಿ ಗ್ರಂಥಾಲಯಗಳಿಗೆ ಕಾಯಕಲ್ಪ ನೀಡುವ ಕೆಲಸ ಆಗಬೇಕಿದೆ.

ಹಸ್ತಪ್ರತಿಗಳನ್ನು ಸಂಗ್ರಹ ಮಾಡುವಾಗ ಭಾಷೆ, ಧರ್ಮ, ಆರ್ಥಿಕ, ಸಾಮಾಜಿಕ, ಯಾವ ತಾರತಮ್ಯವೂ ಇಲ್ಲದೆ ಒಟ್ಟಿನಲ್ಲಿ ಸಂಗ್ರಹವಾಗಿರುವುದು ಕಂಡುಬರುತ್ತದೆ. ಕೆಲವೆಡೆ ಕನ್ನಡ ಹಸ್ತಪ್ರತಿಗಳನ್ನು ವರ್ಷಾನುಗಟ್ಟಲೆ ತೆರೆದು ನೋಡುವವರೂ ಇಲ್ಲದೆ ಹಾಗೇ ಉಳಿದಿರುವುದುಂಟು. ಸಂಗ್ರಹವಾದಾಗ ಇದ್ದವರ ಆಸ್ಥೆ ಆಸಕ್ತಿಗಳು ಕ್ರಮೇಣ ಬಂದವರಲ್ಲಿ ಇಲ್ಲದೆ ಅವು ಸಂಗ್ರಹಿಸಿದಲ್ಲಿಯೇ ನಶಿಸಿ ಹೋಗಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ. ಇಂತಹ ಎಲ್ಲ ಹಸ್ತಪ್ರತಿಗಳನ್ನು ಉಳಿಸಿ ಅಧ್ಯಯನಕ್ಕೆ ಒಳಪಡುವಂತೆ ಮಾಡುವ ಕಾರ್ಯವನ್ನು ಕೈಗೊಳ್ಳಬೇಕಿದೆ. ಈಗ ದೊರೆಯುವ ಹಸ್ತಪ್ರತಿಗಳನ್ನು ಒಂದೆಡೆ ಸೇರಿಸಿ ಹಸ್ತಪ್ರತಿ ಗ್ರಂಥಾಲಯಗಳನ್ನು ಸ್ಥಾಪಿಸುವುದು ತೀರಾ ಅಗತ್ಯವೂ ಯೋಗ್ಯವೂ ಆಗಿದೆ. ಈ ಹಸ್ತಪ್ರತಿ ಭಂಡಾರದಲ್ಲಿ ಕೈಫಿಯತ್ತುಗಳು, ಬಖೈರುಗಳು, ಶಾಸನಗಳು, ಹಸ್ತಪ್ರತಿಗಳು ಮೊದಲಾದವು ಸೇರಿವೆ. ಒಟ್ಟಾರೆ ಎಲ್ಲಾ ರೀತಿಯ ಹಸ್ತಪ್ರತಿಗಳ ಸಂಗ್ರಹ ಆಗಬೇಕಾಗಿರುವುದು ಕನ್ನಡ ಮನಸ್ಸುಗಳ(ಆಸಕ್ತಿಯಾಗಿದೆ) ಕಾಳಜಿಯಾಗಿದೆ.

ನಾಡಿನಲ್ಲಿರುವ ಹಸ್ತಪ್ರತಿ ಗ್ರಂಥಾಲಯಗಳಿಗೆ ಸರಕಾರ ಆರ್ಥಿಕ ಸಹಕಾರ ಕಲ್ಪಿಸಿದರೆ ಸಂಗ್ರಹವಾಗಿ ಹಾಳಾಗುತ್ತಿರುವ ಹಸ್ತಪ್ರತಿಗಳ ರಕ್ಷಣೆಗೆ ಜೀವ ತುಂಬಿದಂತಾಗುತ್ತದೆ. ಯಾವುದೇ ಹಸ್ತಪ್ರತಿಯನ್ನು

ಯಾವುದೇ ವ್ಯಕ್ತಿ ಬಯಸಿದರೆ ನೇರವಾಗಿ ಬಂದು ಅದರ ಸಹಾಯ ಪಡೆಯಬಹುದು. ಇಲ್ಲವೇ ಮೈಕ್ರೋಫಿಲಂ ಅಥವಾ ಫೋಟೋಗ್ರಫಿ ಸ್ಟ್ಯಾಟ್ ರೂಪದಲ್ಲಿ ಪಡೆದುಕೊಳ್ಳಬಹುದು. ನಾಡಿನಲ್ಲಿರುವ ಹಸ್ತಪ್ರತಿ ಗ್ರಂಥಾಲಯಗಳಿಗೆ ಸಹಾಯ, ಸಹಕಾರ ನೀಡಿದರೆ ನಿಜಕ್ಕೂ ಕನ್ನಡಿಗರ ಹೆಮ್ಮೆಯ ಕಾರ್ಯ ನೆರವೇರಿದಂತಾಗುತ್ತದೆ. ಹಸ್ತಪ್ರತಿಗಳು ಅನೇಕ ವಿದ್ವಾಂಸರ ಕಣ್ಮಣಿಯಾಗಿ ಮೆರೆಯುವುದರಲ್ಲಿ ಸಂಶಯವಿಲ್ಲ. ಹೀಗೆ ಹಸ್ತಪ್ರತಿ ಗ್ರಂಥಾಲಯಗಳ ಮಹತ್ವ ತಿಳಿಯಬಹುದಾಗಿದೆ.

೫.೧.೧. ಹಸ್ತಪ್ರತಿ ಗ್ರಂಥಾಲಯಗಳ ಮಹತ್ವ–ವಿದ್ವಾಂಸರ ದೃಷ್ಟಿಯಲ್ಲಿ

ಹಸ್ತಪ್ರತಿ ಗ್ರಂಥಾಲಯಗಳ ಮಹತ್ವ ತಿಳಿಯಬೇಕಾದರೆ ಗ್ರಂಥಾಲಯಗಳು ಸಾಹಿತ್ಯ ಮತ್ತು ಸಂಸ್ಕೃತಿಗಳ ಕೇಂದ್ರಗಳಾಗಿರುವುದನ್ನು ಗಮನಿಸಬೇಕು. ಗ್ರಂಥಾಲಯಗಳ ಬಗ್ಗೆ ಇಟ್ಟ ಆಸಕ್ತಿ ಮತ್ತು ಶ್ರದ್ಧೆಗಳ ಮೇಲೆ ರಾಷ್ಟ್ರದ ಪ್ರಗತಿಯು ಅವಲಂಬಿಸಿದೆ. ರಾಷ್ಟ್ರದ ಪ್ರಗತಿಗೆ ಹಸ್ತಪ್ರತಿ ಗ್ರಂಥಾಲಯಗಳು ಎಲೆಮರೆಕಾಯಂತೆ ನಿಂತ ಅಂಶ ಬೆಳಕಿಗೆ ಬಂದಿದೆ. ರಾಷ್ಟ್ರಗಳನ್ನು ನಿತ್ಯನೂತನ ಜ್ಞಾನದ ಬೆಳಕನ್ನು ನೀಡುವ ನಂದಾದೀಪಗಳೆಂದು ಪರಿಗಣಿಸಿ, ಅವು ನಂದದಂತೆ ನೋಡಿಕೊಳ್ಳುವಲ್ಲಿ ಪಟ್ಟ ಅಪಾರ ಪರಿಶ್ರಮದ ಪ್ರಮಾಣಕ್ಕನುಗುಣವಾಗಿ ರಾಷ್ಟ್ರದ ಪ್ರಗತಿ ಅವಲಂಬಿಸಿರುತ್ತದೆ. ಹಸ್ತಪ್ರತಿ ಗ್ರಂಥಾಲಯಗಳಿಗೆ ಸರಿಯಾದ ಸ್ಥಾನಮಾನ–ಮನ್ನಣೆ ದೊರಕಿಸಿಕೊಟ್ಟ ದೇಶ, ನಾಡುಗಳೆಲ್ಲವೂ ಇಂದು ಪ್ರಾಚೀನ ಜ್ಞಾನದ ಕೇಂದ್ರಗಳಾಗಿವೆ. ಜ್ಞಾನದ ಹೊಳೆಯ ತವರಾಗಿವೆ. ಹಸ್ತಪ್ರತಿ ಗ್ರಂಥಾಲಯಗಳನ್ನು ಕಡೆಗಣಿಸಿದ ದೇಶಗಳು ಹಿಂದುಳಿದ ದೇಶಗಳೆಂದು ಪರಿಗಣಿಸಲ್ಪಟ್ಟಿವೆ.

ಮನುಷ್ಯನ ಜೀವಿತಕ್ಕೆ ಪೂರಕವಾಗಿ ಬಂದ ಗ್ರಂಥಗಳು ಹಾಗೂ ಗ್ರಂಥಾಲಯಗಳ ಅಮೋಘ ಸೇವೆ ಶ್ಲಾಘನೀಯ. ಅಂತೆಯೇ ಜಗತ್ಪ್ರಸಿದ್ಧ ವ್ಯಕ್ತಿಗಳು ಗ್ರಂಥ ಹಾಗೂ ಗ್ರಂಥಾಲಯಗಳನ್ನು ಕುರಿತು ಅನುಭವಯುಕ್ತ ಮಾತುಗಳನ್ನು ತಮ್ಮ ಅನುಭವದ ಹಿನ್ನೆಲೆಯಲ್ಲಿ ಮಾತನಾಡಿದ್ದಾರೆ. ಅಂಥ ಜಗತ್ಪ್ರಸಿದ್ಧ ವ್ಯಕ್ತಿಗಳ ಅನುಭವದ ಮಾತುಗಳನ್ನು ಈ ಕೆಳಗೆ ಸೂಚಿಸಿದೆ. ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆಗೆ ಹೆಚ್ಚಿನ ಇಂಬು ನೀಡುವುದರ ಜೊತೆಗೆ, ಸಮಾಜದ ಮನುಷ್ಯನ ಬದುಕಿನ ಪ್ರತಿಯೊಂದು ಹಂತದ ಮಜಲುಗಳನ್ನು ತಿಳಿಯುವುದರ ಜೊತೆಗೆ ಪೂರಕವಾದ ಪರಿಹಾರದ ಸೂತ್ರಗಳು ಹೊರಹೊಮ್ಮಿವೆ. ಇಂತಹ ಹಸ್ತಪ್ರತಿಗಳು ನಮ್ಮನ್ನು ಕೀರ್ತಿವಂತರನ್ನಾಗಿ, ವಿದ್ವಾಂಸರನ್ನಾಗಿ, ಇನ್ನಿತರ ಜ್ಞಾನಕ್ಷೇತ್ರಗಳಿಗೆ ನಮ್ಮನ್ನು ಕೊಂಡೊಯ್ಯಬಲ್ಲ ಜ್ಞಾನದ ವಿಸ್ತರಣೆಗಳಾಗಿ ಕಂಡುಬರುತ್ತವೆ.

ಪಾಟೀಲ ಪುಟ್ಟಪ್ಪ

ಜಗತ್ತು ಬದಲಾಗಿದ್ದರೆ ಅದು ಗ್ರಂಥಗಳಿಂದ ಬದಲಾಗಿದೆ. ಗ್ರಂಥಗಳಲ್ಲಿರುವ ವಿಚಾರಗಳು ಮಾನವ ಕುಲದ ಮೇಲೆ ಪರಿಣಾಮ ಬೀರಿದೆ. ಗ್ರಂಥಗಳು ಹಾಗೂ ಪುಸ್ತಕಗಳು ಜಗತ್ತಿನ ಮೇಲೆ ಬೀರಿದ ಪ್ರಭಾವವು ಅಪರಿಮಿತವಾಗಿದೆ. ಅವು ಬಹು ಬಲಶಾಲೀ ಶಕ್ತಿಯೆನಿಸಿದೆ. 'ಪುಸ್ತಕಗಳು ಹಾಗೂ ಹಸ್ತಪ್ರತಿಗಳು ಮನುಷ್ಯನನ್ನು, ಜಗತ್ತನ್ನು ಬದಲಿಸುವ ಸಾಮರ್ಥ್ಯವನ್ನು ಒಳಗೊಂಡಿವೆ'.[೨] ಎಂಬ ಮಾತು ಮೆಚ್ಚತಕ್ಕದ್ದಾಗಿದೆ.

ಜಿ.ಪಿ. ರಾಜರತ್ನಂ

'ವಿದ್ಯಾರ್ಜನೆಯ ಹಾಗೂ ಜ್ಞಾನಾರ್ಜನೆಯ ತಪಸ್ಸು ಫಲದಾಯಕವಾಗಬೇಕಾದರೆ ಸಮರ್ಥವಾದ ಗ್ರಂಥಾಲಯಗಳು ಅಗತ್ಯ'[೬] ಎಂದಿದ್ದಾರೆ.

ಕರ್ನಾಟಕ ಗ್ರಂಥಾಲಯ ಪತ್ರಿಕೆ

(ಜನವರಿ ೧೯೭೧, ಪು ೩೭೦)

'ನಮ್ಮ ದೇಶದಲ್ಲಿ ಪ್ರಕಟವಾದ ಯಾವುದೊಂದು ಗ್ರಂಥವು ಸ್ವದೇಶದ ಗ್ರಂಥಾಲಯಗಳಲ್ಲಿ ಸಿಗುವುದು ದುಸ್ತರ. ಆದರೆ ವಿದೇಶಿ ಗ್ರಂಥಾಲಯಗಳಲ್ಲಿ ಸಿಗುವುದೆಂಬ ಭರವಸೆ ಇದೆ'[೪] ಎಂದು ತಿಳಿಸಿದ್ದಾರೆ.

ಆಲೂರು ವೆಂಕಟರಾಯರು

'ಕರ್ನಾಟಕವನ್ನೆಲ್ಲ ವಾಚನಾಲಯಗಳ ಜಾಳಿಗೆಯಿಂದ ತುಂಬಿ ಬಿಡಬೇಕು. ವಾಚನಾಲಯಗಳೆಂದರೆ ಕರ್ನಾಟಕತ್ವದ ವಿದ್ಯುಚ್ಛಕ್ತಿಯನ್ನೊಯ್ಯುವ ತಂತಿ ಕಂಬಗಳು'[೫] ಎಂದಿದ್ದಾರೆ.

ಎಸ್.ಆರ್. ರಂಗನಾಥನ್

(ಭಾರತದ ಗ್ರಂಥಾಲಯ ಪಿತಾಮಹ)

'ಗ್ರಂಥ ಹಾಗೂ ಇತರ ವಾಚನ ಸಾಮಗ್ರಿಗಳ ಮೂಲಕ ಸ್ಫೂರ್ತಿ, ವಿವರಣೆ, ಮನೋರಂಜನೆಗಳನ್ನೊದಗಿಸುವ ಮಹಾಮಣಿಹವನ್ನು ಹೊತ್ತ ಸಾಮಾಜಿಕ ಸಂಸ್ಥೆಯೇ ಗ್ರಂಥಾಲಯವಾಗಿದೆ'[೬] ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

Library is a social institution chargod with the work of providing inspiration information and recreation through book and other materials.

ಪೌಲ ಬಕ್

'ಗ್ರಂಥಾಲಯವು ಶಿಕ್ಷಣದ ಹೃದಯವಾಗಿದೆ ಯಾವುದೊಂದು ಶೈಕ್ಷಣಿಕ ಪ್ರಗತಿಯು ಉತ್ತಮ ಗ್ರಂಥಾಲಯದ ಮೇಲೆಯೇ ಹೆಚ್ಚಾಗಿ ಅವಲಂಬಿಸಿದೆ. ಈ ಪ್ರಗತಿಯನ್ನು ಗ್ರಂಥಾಲಯದ ಸತ್ವಯುತ ವಾಙ್ಮಯದ ಮೇಲೆ ಅಳೆಯಬೇಕಾಗುತ್ತದೆ. ಈ ಕಾರಣದಿಂದ ನಮ್ಮ ಶಿಕ್ಷಣ ಸಂಸ್ಥೆಗಳ ಅಂಗಳದಲ್ಲಿ ಮಂಗಳಕರವಾದ ಗ್ರಂಥಾಲಯಗಳಿರಬೇಕಾದುದು ಅಗತ್ಯ'[೭] ಎಂದು ತಿಳಿಸಿದ್ದಾರೆ.

ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದಾಗ ನಾಡಿನಲ್ಲಿರುವ ಗಮನಕ್ಕೆ ಬರುವ ಹಾಗೂ ಬರದೇ ಇರುವ ಎಷ್ಟೊ ಹಸ್ತಪ್ರತಿಗಳು ಗ್ರಂಥಾಲಯಗಳಲ್ಲಿ ಇರುವ ಹಸ್ತಪ್ರತಿಗಳಲ್ಲಿರುವ ಅನೇಕ ವಿಚಾರಗಳು ತಿಳಿಯದೇ ನಶಿಸಿ ಹೋಗಿರುವುದರಲ್ಲಿ ಸಂಶಯವಿಲ್ಲ. ಹಾಗಾಗಿ ಇಂಥ ಹಸ್ತಪ್ರತಿಗಳಲ್ಲಿ ಹುದುಗಿರುವ ಸಾಹಿತ್ಯ-ಸಂಸ್ಕೃತಿಯ ವಿಚಾರಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಿಕೊಡುವ ಮತ್ತು ಸಂಗ್ರಹಿಸಿ-ಸಂರಕ್ಷಿಸುವ ಅಗತ್ಯವಿದೆ.

ಹಸ್ತಪ್ರತಿಗಳ ಮಹತ್ವ

ಬಹಳ ಪ್ರಾಚೀನ ಕಾಲದಿಂದಲೂ ಸಾಹಿತ್ಯ, ಶಾಸ್ತ್ರ, ಧರ್ಮ, ತತ್ವ, ಆಚಾರ, ವಿಚಾರ ಇತ್ಯಾದಿ ಇನ್ನೂ ಹತ್ತು ಹಲವು ವಿಷಯಗಳಿಗೆ ಸಂಬಂಧಿಸಿದ ನಮ್ಮವರ ಜ್ಞಾನಸಂಪತ್ತನ್ನು ಅಂದರೆ ನಮ್ಮ ಶ್ರೀಮಂತ ಸಂಸ್ಕೃತಿಯನ್ನು ತಮ್ಮಲ್ಲಿ ಗರ್ಭೀಕರಿಸಿಕೊಂಡಿರುವ ಈ ಮೌಲಿಕ ಹಸ್ತಪ್ರತಿಗಳು ಅದೆಲ್ಲವನ್ನು ತಲೆಮಾರಿನಿಂದ ತಲೆಮಾರಿಗೆ ಸಂವಹನಗೊಳಿಸುತ್ತ ಬಂದಿರುವುದು ಅಭ್ಯಾಸಕ್ಕೆ ಯೋಗ್ಯವಾದ ವಿಷಯ. ಇಂದು ನಮ್ಮ ಮುಂದೆ ಹರಡಿಕೊಂಡಿರುವ ಅನೇಕ ಪ್ರಾಚೀನ ಮುದ್ರಿತ ಸಾಹಿತ್ಯ, ಶಾಸ್ತ್ರ ಗ್ರಂಥಗಳಿಗೆ ಈ ಹಸ್ತಪ್ರತಿಗಳೇ ಮುಖ್ಯ ಆಕರಗಳೆಂಬುದನ್ನು ಗಮನಿಸಿದಾಗ ನಮಗೆ ಅವುಗಳ ಮಹತ್ವ ಗೋಚರಿಸುವುದು.

ಹೀಗೆ ಜ್ಞಾನಸಂಪತ್ತು ಶ್ರವಣದ ಮೂಲಕ ಸಂವಹನವಾಗುತ್ತದೆ. ದಿನಗಳು ಕಳೆದಂತೆ ಜ್ಞಾಪಕಶಕ್ತಿ ಹ್ರಸ್ವವಾಗುತ್ತ ಹೋಗಿ ಅಂಗ ಮತ್ತು ಪುರಾಣಗಳು ಕೂಡ ನೆನಪಿನಲ್ಲುಳಿಯಲಾರವೆಂಬ ಕಾರಣದಿಂದ ಅವುಗಳನ್ನು ಬರೆದಿಡುವ ಅನಿವಾರ್ಯತೆಯುಂಟಾಯಿತು. ಇಂತಹ ಸಂದರ್ಭದಲ್ಲಿ ಅಂದಿನ ಕಾಲದಲ್ಲಿ ಹೆಚ್ಚು ಬಾಳಿಕೆ ಹಾಗೂ ಸ್ಪಷ್ಟವಾದ ಲಿಪಿ ಮೂಡುವಂತೆ ತಾಳೆಪ್ರತಿಗಳನ್ನು ತಯಾರಿಸುವ ಅಕ್ಷರಗಳನ್ನು ಕೊರೆಯುವ ಕೆಲಸ ಪ್ರಾರಂಭವಾಗಿ ಮುಂದೆ ಸಾಗುತ್ತಾ ಬಂದಿರುತ್ತದೆ. ಹೀಗೆ ಹಸ್ತಪ್ರತಿಗಳ ತಯಾರಿಕೆ ಬರವಣಿಗೆ ಹಾಗೂ ಸಂರಕ್ಷಣೆ ಇನ್ನಿತರ ಕಾರ್ಯಚಟುವಟಿಕೆ ಪ್ರಾರಂಭವಾಗಿ ಒಟ್ಟಾರೆ ಹಸ್ತಪ್ರತಿಗಳೆಂದರೆ ಮನುಷ್ಯನ ಮನಸ್ಸಿನಲ್ಲಿ ಆಲೋಚನೆಗಳನ್ನು ಹುಟ್ಟು ಹಾಕಬಲ್ಲ ಅರ್ಥಪೂರ್ಣ ಮಹತ್ವದ ಪಠ್ಯಗಳಾಗಿವೆ. ಅವು ಸಾಹಿತ್ಯ, ಧರ್ಮ, ಕಲೆ, ಆಚರಣೆಗಳ ಒಟ್ಟು ಮೊತ್ತಗಳೂ ಹೌದು. ಅವುಗಳಿಗೆ ಸಮುದಾಯ, ಪರಿಸರ, ಆರ್ಥಿಕ, ಸಾಮಾಜಿಕ, ರಾಜಕೀಯ ಪ್ರಕ್ರಿಯೆಗಳ ಸ್ಥಾನವಿದೆ. ಹೀಗೆ ಹಸ್ತಪ್ರತಿಗಳು ಓದು ಬರಹ ಅರಿವಿನ ವಿಸ್ತಾರಕ್ಕೆ ಸಾಧನಗಳಾಗುವ ಬದಲು ಸಾಮಾಜಿಕ ನಿಯಂತ್ರಣದ ವಿಧಾನಗಳಾಗಿ ಬೆಳೆದವು. ಕನ್ನಡ ಹಸ್ತಪ್ರತಿಗಳು ಆವರ್ತನ ಮತ್ತು ಪರಿವರ್ತನಶೀಲ ಗುಣವುಳ್ಳವುಗಳಾಗಿವೆ.

ಕನ್ನಡ ಹಸ್ತಪ್ರತಿಗಳು ಸಂಯೋಜನಮುಖಿಯಾಗಿವೆ. ಬಹುವಿದ ಶಿಸ್ತುಗಳನ್ನು ಗರ್ಭೀಕರಿಸಿ ಕೊಂಡಿವೆ. ಸಾಹಿತ್ಯವೆಂದು ಪರಿಗಣಿಸುವ ಪ್ರಧಾನ ವಿಷಯಗಳಿಂದ ಹಿಡಿದು ಪಶುವೈದ್ಯ, ಆಯುರ್ವೇದ, ಶಿಲ್ಪಶಾಸ್ತ್ರ, ಮಾಟ, ಮಂತ್ರ, ಹಾಡು, ಶಕುನ, ಲೆಕ್ಕಪತ್ರ, ರಸವಿದ್ಯೆ, ವಶೀಕರಣ, ಮಳೆ ಬೆಳೆ ಇಂಥ ಹಲವು ಸಂಗತಿಗಳನ್ನು ಒಳಗೊಂಡಿವೆ. ವಿಶೇಷವಾಗಿ ಇವೆಲ್ಲ ಜನರ ಅಗತ್ಯಗಳಿಗಾಗಿಯೇ ರೂಪಗೊಂಡಂಥವು. ಇವೆಲ್ಲವುಗಳಿಗೂ ಪ್ರಾದೇಶಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಹಾಗೂ ಲಿಂಗಜಾತಿ ಇತ್ಯಾದಿ ಆಯಾಮಗಳಿರುವುದನ್ನು ಮರೆಯಬಾರದು.

ಹಸ್ತಪ್ರತಿಗಳಲ್ಲಿ ಪ್ರಮುಖವಾಗಿ ಕುಮಾರವ್ಯಾಸ ಭಾರತ, ರಟ್ಟಮತ, ಕುಮಾರರಾಮನಂಥ ದೇಸಿ ಕಾವ್ಯಗಳು ದೇಸಿ ಸಂಸ್ಕೃತಿಯ ಅಪ್ಪಟ ಪ್ರತಿಬಿಂಬಗಳಾಗಿವೆ. ವ್ಯಾಸನ ಇತಿಹಾಸಪ್ರಜ್ಞೆ, ಪಂಪನ ಲೌಕಿಕ ಸಂವೇದನೆಗಳ ವೀರಪ್ರಜ್ಞೆ, ಕುಮಾರವ್ಯಾಸನ ಕಾವ್ಯ ಹಾಗೂ ಭಕ್ತಿಪ್ರಜ್ಞೆಯಲ್ಲಿ ಅರಳಿದ

ಮಹಾಭಾರತದ ಕಥೆಗಳು ಸಂಸ್ಕೃತಿ ಅಧ್ಯಯನ ದೃಷ್ಟಿಯಿಂದ ಮಹತ್ವವಾದಂಥವು. ವಿಶೇಷವಾಗಿ ಕುಮಾರವ್ಯಾಸನ ದರ್ಶನಪ್ರಜ್ಞೆ, ಪಾಪ–ಪುಣ್ಯ, ಸುಖ–ದುಃಖ, ಆತ್ಮ–ಪರಮಾತ್ಮಗಳ ಕುರಿತು ಚರ್ಚೆಗಳಿಂದಾಗಿ ಕುಮಾರವ್ಯಾಸ ಮಹಾಭಾರತವು ಲೌಕಿಕತೆಯಿಂದ ದೈವಿಕತೆಯತ್ತ ತಿರುಗುತ್ತದೆ. ಹಾಗಾಗಿಯೇ ಇದು ಹೆಚ್ಚು ಜನಪ್ರಿಯತೆಯನ್ನು ಪಡೆದಿರುವುದು. ಇಂತಹ ಮಹತ್ವದ ಸಂಗತಿಗಳು ಹಸ್ತಪ್ರತಿಗಳಿಂದ ಬೆಳಕಿಗೆ ಬಂದಿರುವುದನ್ನು ಮರೆಯಬಾರದು. ಇದರಿಂದ ಹಸ್ತಪ್ರತಿಗಳ ಮಹತ್ವದ ಬಗ್ಗೆ ನಮ್ಮ ಗಮನ ಹರಿಸಬೇಕಾಗಿದೆ.

ಹಸ್ತಪ್ರತಿಗಳ ಬರವಣಿಗೆ, ಪೋಷಣೆ, ವಾಚನ ಎಷ್ಟೇ ಧಾರ್ಮಿಕ ಚೌಕಟ್ಟುಗಳ ಮಧ್ಯೆ ಬೆಳೆದು ಬಂದಿದ್ದರೂ ಅದರ ಹಿಂದೆ ಇದ್ದ ಆಯುರಾರೋಗ್ಯ, ಸಂತಾನಪ್ರಾಪ್ತಿ, ಸಕಲೈಶ್ವರ್ಯ, ಜೀವನಸುಖ, ಮನೋಭಿಷ್ಟ ಕಾರ್ಯಸಿದ್ಧಿ, ಜ್ಞಾನಾರ್ಜನೆ, ಜ್ಞಾನರಕ್ಷಣೆ, ಅನಿಷ್ಟ ನಿವಾರಣೆ, ಕರ್ಮೋಪಶಮನ, ಸಂಪ್ರೀತಿ, ಸಮಯನಿಷ್ಠೆಯಂತಹ ಜೀವನಮೌಲ್ಯಗಳು ಅವನ್ನು ಹೆಚ್ಚು ಹೆಚ್ಚು ಜನಮುಖಿಗೊಳಿಸಿವೆ. ಹೀಗೆ ಬದುಕಿನ ವಿಭಿನ್ನ ದೃಷ್ಟಿಕೋನಗಳಲ್ಲಿ ಅರಳಿದ ಹಸ್ತಪ್ರತಿಗಳು ಬಹುಪಠ್ಯಗಳಾಗಿ ಸಂಸ್ಕೃತಿ ಸಂವರ್ಧನೆಯ ಸಾಧನಗಳಾಗಿವೆ. ಇಂತಹ ಅಂಶಗಳ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ.

"ಗ್ರಂಥಗಳು ಹಾಗೂ ಪುಸ್ತಕಗಳು ಜಗತ್ತನ್ನಾಳುತ್ತವೆ" ಎಂದು ವಾಲ್ಟೇರ್ ಹೇಳಿರುವುದು ಸುಳ್ಳಲ್ಲ. ಹೆಚ್ಚಿನ ಶ್ರಮ, ತಾಳ್ಮೆ, ಸೂಕ್ಷ್ಮತೆ ಬಯಸುವ ಹಸ್ತಪ್ರತಿಗಳನ್ನು ಇಂದಿಗೂ ಹಲವು ಹಳ್ಳಿಗಳಲ್ಲಿ, ನಗರ ಪ್ರದೇಶಗಳಲ್ಲಿ ಮತ್ತು ಕೆಲವು ಹಿರಿಯ ಮನೆತನಗಳಲ್ಲಿ ಇರುವುದನ್ನು ಕಾಣಬಹುದು. ಇವುಗಳನ್ನು ಸೂಕ್ಷ್ಮತೆಯಿಂದ ಅಧ್ಯಯನ ನಡೆಸಿ ಅವುಗಳಲ್ಲಿರುವ ವಿಷಯ ವಸ್ತುವನ್ನು ಸಮಾಜಕ್ಕೆ ಮುಟ್ಟಿಸುವುದು ನಮ್ಮೆಲ್ಲರ ಹೊಣೆ. ಬಡವ ಬಲ್ಲಿದರನ್ನು ಮುಟ್ಟುವ ಅತಿ ಪ್ರಮುಖ ಮಾಧ್ಯಮವೇ ಈ ಪ್ರಾಚೀನ ಕೈ ಬರಹ ಹಸ್ತಪ್ರತಿಗಳು. ಇಂತಹ ಹಸ್ತಪ್ರತಿಗಳನ್ನು ಒಂದೆಡೆ ಸಂಗ್ರಹಿಸಿ, ಸಂರಕ್ಷಿಸುವ ಸ್ಥಳವೇ ಹಸ್ತಪ್ರತಿ ಗ್ರಂಥಾಲಯವೆಂದು ಹೇಳಲಾಗುವುದು ಇವುಗಳ ಮಹತ್ವ ತಿಳಿಯುವ ಮೊದಲು ಹಸ್ತಪ್ರತಿಗಳ ಮಹತ್ವ ತಿಳಿಯುವ ಅನಿವಾರ್ಯತೆ ಇದೆ.

ಕನ್ನಡ ಹಸ್ತಪ್ರತಿಗಳ ಸಂರಕ್ಷಣೆ, ಸಂವರ್ಧನೆ, ಸಂಗೋಪನೆ, ಉತ್ಪಾದನೆಯಂತಹ ವಲಯದಲ್ಲಿ ವಿಸ್ತಾರಗೊಂಡು ಬಹುಮುಖಿ ಆಯಾಮದ ವಿಧಾನದಲ್ಲಿ ಸಂರಕ್ಷಣೆಗೊಳ್ಳುವುದು ಸಾಂಸ್ಕೃತಿಕ ಮಹತ್ವವಾಗಿದೆ. ಸಾಂಸ್ಕೃತಿಕ ಮಹತ್ವವೆಂಬುದು ಒಂದು ಕೃತಿಯನ್ನು ವಿವಿಧ ಮಗ್ಗುಲಲ್ಲಿ ನೋಡುವ ಹಾಗೂ ಪರಿಪೂರ್ಣವಾದ ವಿಷಯದ ಕಡೆ ತಲುಪಿಸುವ ಅಧ್ಯಯನದ ಉದ್ದೇಶವಾಗಿದೆ. ಕನ್ನಡ ಹಸ್ತಪ್ರತಿಗಳು ಯಾವ ವಿಷಯವನ್ನು ಒಳಗೊಂಡಿವೆ ಎನ್ನುವುದಕ್ಕಿಂತ ಯಾವ ವಿಷಯ ಬಿಟ್ಟಿಲ್ಲವೆಂಬುದನ್ನು ಗಮನಿಸಬೇಕು.

ವಿವಿಧ ಜ್ಞಾನ ಶಾಸ್ತ್ರಗಳಾದ ವೈದ್ಯಶಾಸ್ತ್ರ, ಕಲೆಗಳು(ಸಾಹಿತ್ಯ–ಸಂಸ್ಕೃತಿ), ಶಿಲ್ಪಶಾಸ್ತ್ರ, ಜ್ಯೋತಿಷ್ಯಶಾಸ್ತ್ರ ಅಶ್ವಶಾಸ್ತ್ರ, ಗಜಶಾಸ್ತ್ರ, ಮೋಡಿ, ಮುಂತಾದ ಶಾಸ್ತ್ರ ವಿಚಾರಗಳು ಹಸ್ತಪ್ರತಿಗಳ ಒಡಲೊಳಗಿವೆ.

ಹೀಗಾಗಿ ಇಂತಹ ಸಾಂಸ್ಕೃತಿಕ ಮಹತ್ವದ ಕೃತಿಗಳ ಅಧ್ಯಯನದಲ್ಲಿ ಹಸ್ತಪ್ರತಿಗಳು ಪ್ರಮುಖ ಪಾತ್ರ ವಹಿಸುತ್ತಾ ಬಂದಿವೆ.

ಕನ್ನಡ ಹಸ್ತಪ್ರತಿಗಳೆಂದರೆ ಮನುಷ್ಯನ ಮನಸ್ಸಿನಲ್ಲಿನ ಆಲೋಚನೆಗಳನ್ನು ಹುಟ್ಟು ಹಾಕಬಲ್ಲ ಅರ್ಥಪೂರ್ಣ ಪಠ್ಯಗಳಾಗಿವೆ. ಅವು ಸಾಹಿತ್ಯ, ಧರ್ಮ, ಕಲೆ, ಆಚರಣೆಗಳ ಒಟ್ಟು ಮೊತ್ತವೂ ಹೌದು. ಅವುಗಳಿಗೆ ಸಮುದಾಯ, ಪರಿಸರ, ಆರ್ಥಿಕ, ಸಾಮಾಜಿಕ, ರಾಜಕೀಯ ಪ್ರಕ್ರಿಯೆಗಳು ನೆಲೆಯಾಗಿವೆ. ಹೀಗಾಗಿ ಇಂಥ ಬಹುಮುಖಿ ಆಯಾಮವು ಕನ್ನಡ ಹಸ್ತಪ್ರತಿಗಳ ಜಗತ್ತಿಗಿದೆ. ಬಹುಮುಖ್ಯ ಗುಣವೇ ಪ್ರಯೋಜನಮುಖಿಯಾದದ್ದು. 'ಸಮಸ್ತ ಜಗಜ್ಜನೋಪಕಾರಾರ್ಥ ಪೇಳ್ದನ್'(ದುರ್ಗಸಿಂಹ, ೧೦೩೧), 'ಸಕಲ ಜಗಜ್ಜನ ಹಿತಾರ್ಥವಾಗಿ ಪೇಳಿದೆನು(ವೇದಾಮೃತ ಬರೆದ ಶ್ರೀಧರನೆಂಬ ಕವಿ ಕ್ರಿ.ಶ.೧೫೦೦), ಎಂದು ಕವಿಗಳು ಹೇಳುತ್ತಾರೆ. ಹೀಗೆ ಜನೋಪಕಾರಿಯಾಗ ಬೇಕೆನ್ನುವ ಬರಹದ ಆಶಯವೇ ಸಂಸ್ಕೃತಿಮುಖಿ ಸಂಕಥನದ ದೃಷ್ಟಿಯಿಂದ ಮುಖ್ಯವಾದುದು. ಹೀಗೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಹಸ್ತಪ್ರತಿಯ ಸಾಂಸ್ಕೃತಿಕ ನೆಲೆಗಳನ್ನು ಒಳಗೊಂಡಿವೆ'[೮] ಎಂಬುದು ಸಮರ್ಥನೀಯ.

'ಹಸ್ತಪ್ರತಿಗಳ ಸಾಂಸ್ಕೃತಿಕ ಆಯಾಮವು ಹಸ್ತಪ್ರತಿಗಳ ಬಹುಮುಖಿ ನೆಲೆಗಳನ್ನು ಒಳಗೊಂಡಿವೆ. ಹಸ್ತಪ್ರತಿಗಳಲ್ಲಿ ಬಹುಮುಖ್ಯವಾಗಿ ಕಾಣುವ ಕೃತಿ–ಪ್ರತಿ, ಇಹ–ಪರ, ಸ್ವರ್ಗ–ನರಕ, ಪಾಪ–ಪುಣ್ಯ, ಧರ್ಮ–ಕರ್ಮ, ಆಯುರಾರೋಗ್ಯ–ಅನಿಷ್ಟ, ಪ್ರವೃತ್ತಿ–ನಿವೃತ್ತಿ, ದೇಹ–ಆತ್ಮ, ಲೌಕಿಕ–ಅಲೌಕಿಕ, ವ್ಯಕ್ತಿ–ಸಮಾಜ, ಗಂಡು–ಹೆಣ್ಣು, ಹಿಂಸೆ–ಅಹಿಂಸೆ, ಇಂದ್ರಿಯಾನುಭವ–ಜಿತೇಂದ್ರಿಯತ್ವ, ಜ್ಞಾನ–ಅಜ್ಞಾನ, ಕ್ರಿಯೆ–ಜಡ, ಪ್ರಭು–ಪ್ರಜೆ, ದೇಶಿ–ಮಾರ್ಗ ಇತ್ಯಾದಿ ದ್ವಂದ್ವಗಳು ಹಸ್ತಪ್ರತಿಗಳ ಬಹುರೂಪಿ ಪರಿಚಲನಾ ಮಾದರಿಗಳನ್ನು ಕಟ್ಟಿಕೊಡುತ್ತವೆ. ಈ ರೀತಿಯ ಶ್ರೇಷ್ಠ–ಕನಿಷ್ಠದ ಜೊತೆಗೆ ಒಂದು ಸಾಂಸ್ಕೃತಿಕ ಆಯಾಮವನ್ನು ಕಟ್ಟಿಕೊಡುತ್ತದೆ'[೯] ಎಂಬ ಮಾತು ಸಮಂಜಸವಾಗಿದೆ. ಸಮಾಜ, ಸಮೂಹ, ಸಮುದಾಯ ಪಂಡಿತ ಪಾಮರರನ್ನು, ಕುಟುಂಬ, ಪರಿಸರ ಇತ್ಯಾದಿ ವಿಷಯಗಳನ್ನು ತಿಳಿಸುವ ಸಾಂಸ್ಕೃತಿಕ ನೆಲೆಗಟ್ಟಿನ ಕೇಂದ್ರಗಳಾಗಿವೆ ಈ ಹಸ್ತಪ್ರತಿ ಗ್ರಂಥಾಲಯಗಳು.

ಹಸ್ತಪ್ರತಿ ಗ್ರಂಥಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ಸಂಗ್ರಹ, ಸಂರಕ್ಷಣೆ, ಸಂವರ್ಧನೆ, ಸಂಗೋಪನೆ ಮಾಡುತ್ತ ಬರಲಾಗಿದೆ. ಈ ನೆಲೆಯಲ್ಲಿ ಪ್ರಾಚೀನ ಸಂಸ್ಕೃತಿಯನ್ನು ಕಟ್ಟಿಕೊಡುವ ಗ್ರಂಥಗಳು ಮಹತ್ವದ್ದಾಗಿವೆ. ಹಸ್ತಪ್ರತಿ ಮತ್ತು ಗ್ರಂಥ ಸಂಪಾದನೆಯನ್ನು ಬರೀ ಆಕರವನ್ನಾಗಿ ನೊಡುವ ಸ್ಥಗಿತ ಮಾದರಿಯನ್ನು ನಿರಾಕರಿಸಿ ಬಹುಮುಖಿ ಅಧ್ಯಯನ ಮಾದರಿಯಲ್ಲಿ ನೋಡುವ ಕ್ರಮ ಹೆಚ್ಚು ಪರಿಣಾಮಕಾರಿಯಾದುದು ಎಂದು ಹೇಳಬಹುದು. ಈ ರೀತಿಯ ಅಧ್ಯಯನ ಕ್ರಮವು ಕನ್ನಡ ಹಸ್ತಪ್ರತಿಗಳಲ್ಲಿ ಒಂದು ಹೊಸ ಸಾಂಸ್ಕೃತಿಕ ಸಂಚಲನೆಯನ್ನು ಹುಟ್ಟುಹಾಕಿರುವುದು ಕಂಡುಬರುತ್ತದೆ.

ಕನ್ನಡ ಹಸ್ತಪ್ರತಿಗಳು ಸಾಂಸ್ಕೃತಿಕವಾಗಿ ಜನಮುಖಿ ಸಂವೇದನೆ ಹೊಂದಿದಂತವು. ಧರ್ಮ, ಮತ, ಜಾತಿ ವಲಯವನ್ನು ಮೀರಿ ಬೆಳೆದಿರುವ ಅವುಗಳ ಜನಪ್ರಿಯತೆ ಮತ್ತು ಜನಾದರಣೀಯ

ಸತ್ವಗಳು ಈ ಕೃತಿಗಳು ಹುಟ್ಟಿದ ಮತ್ತು ವಿವಿಧ ಕಾಲಮಾನಗಳಲ್ಲಿ ಪಡೆದುಕೊಂಡ ಭಿನ್ನ ಸ್ವರೂಪಗಳನ್ನು ಗುರುತಿಸುವುದು ಕಷ್ಟ. ಈ ಕೃತಿಗಳು ರಚನೆಯಾದ ಕಾಲದಲ್ಲಿ ಅವುಗಳಿಗೆ ಪೂಜ್ಯತೆ, ಶ್ರೇಷ್ಠತೆ ಒದಗಿ ಬಂದಿರಲಾರದು. ನಂತರ ಇದು ಸಾಧ್ಯವಾಗಿರುವಂಥದ್ದು. ದಾನಕ್ಕಾಗಿ, ಓದಿಗಾಗಿ, ಕೇಳುವಿಕೆಗಾಗಿ, ಕೂಲಿಗಾಗಿ, ರೋಗ ನಿವಾರಣಾರ್ಥವಾಗಿ, ವಿದ್ಯಾರ್ಜನೆಗಾಗಿ, ಹವ್ಯಾಸಕ್ಕಾಗಿ, ಮೋಕ್ಷ ಸಂಪಾದನೆಗಾಗಿ, ಸಂಕಷ್ಟ ಪರಿಹಾರಾರ್ಥಕ್ಕಾಗಿ, ಕರ್ಮೋಪಶಮನಕ್ಕಾಗಿ ಸ್ವ-ಪರ ಬಳಕೆ ಮತ್ತು ಪ್ರಗತಿಗಾಗಿ, ಪುತ್ರ ಸಂತಾನಕ್ಕಾಗಿ ಹೀಗೆ ಹತ್ತು ಹಲವು ರೀತಿಯ ಫಲಾಪೇಕ್ಷೆಗಳು ಮತ್ತು ಜೀವನದೃಷ್ಟಿಗಳಿಗಾಗಿ ಹಸ್ತಪ್ರತಿಗಳು ಬರೆಸಿಕೊಂಡಂಥವು ಹಾಗೂ ಪ್ರತೀಕರಣಗೊಂಡಂಥವುಗಳಾಗಿವೆ. ಕೃತಿಯೊಂದು ಆಕೃತಿಗೊಳ್ಳುವ ಅಥವಾ ಪ್ರತೀಕರಣಗೊಳ್ಳುವುದರ ಹಿಂದೆ ಸಮುದಾಯಗಳ ನಿರ್ದಿಷ್ಟ ಉದ್ದೇಶಗಳಿರುವುದು ಸ್ಪಷ್ಟವಾಗುತ್ತದೆ ಅಥವಾ ಅಂಥ ಸಮುದಾಯಗಳ ಅಸ್ತಿತ್ವಕ್ಕಾಗಿಯೇ ಉಪಯೋಗವಾಗುವಂಥದ್ದು.

ಕನ್ನಡಿಗರ ಆಲೋಚನಾಕ್ರಮದ ರೂಪಾತ್ಮಕ ಪ್ರತಿನಿಧಿಗಳಾಗಿವೆ ಎಂದೇ ಹೇಳಬಹುದು. ಹಸ್ತಪ್ರತಿಗಳು ದೈನಂದಿನ ಬದುಕಿನ ತಾಕಲಾಟಗಳಲ್ಲೂ ಜನರನ್ನು ಓದಿಸುವ, ಕೇಳಿಸುವ, ಸಂಗತಿಗಳತ್ತ ಹುರಿದುಂಬಿಸುವ ಇವು ಮಾನವಮುಖಿ ಸಂಕಥನಗಳಾಗಿವೆ. ಹೀಗಾಗಿ ಬರೀ ಅಲೌಕಿಕ ಅಪೌರುಷೆಯ ನೆಲೆಗಳ ಮೂಲಕ ಹಸ್ತಪ್ರತಿಗಳನ್ನು ನೋಡುವುದು ಸರಿಯಲ್ಲ. ಹಸ್ತಪ್ರತಿಗಳನ್ನು ಬದುಕಿನ ಅಂಗವಾಗಿ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ನೋಡುವುದು ಉತ್ತಮ. ಅವರ ಸಾಂಸ್ಕೃತಿಕ ಮನೋಭಾವನೆಯನ್ನು ಗಮನಿಸುವುದರ ಜೊತೆಗೆ ಬಹು ಸಮುದಾಯಗಳು ಗ್ರಂಥಗಳ ಸಂವರ್ಧನೆಯಂತಹ ಸಾಂಸ್ಕೃತಿಕ ಸಂರಕ್ಷಣೆಗೆ ಹೆಚ್ಚಿನ ಮಹತ್ವ ಮತ್ತು ಬಹುದೊಡ್ಡ ಕಾಣಿಕೆಯನ್ನು ನೀಡುತ್ತಾ ಬಂದಿವೆ ಎನ್ನಬಹುದು.

ಹಸ್ತಪ್ರತಿಗಳ ಒಡಲಾಳದ ಉದ್ದೇಶ ಧರ್ಮಪ್ರತಿಪಾದನೆಯಾಗಿದ್ದರೂ ಅದರಲ್ಲಿನ ಕಾವ್ಯಾನುಭವ ಜಡ ಧರ್ಮವನ್ನೇ ಧಿಕ್ಕರಿಸಿ ಹೊರಬರುವಂತಹವಾಗಿವೆ ಮತ್ತು ಸಂಸ್ಕೃತಿಯ ಒಳಸೂಕ್ಷ್ಮಗಳನ್ನು ವಿಸ್ತರಿಸುವುದಾಗಿದೆ. ಹಸ್ತಪ್ರತಿ ಬರವಣಿಗೆ ಕ್ರಿಯೆ ಎನ್ನುವುದು ಅದು ಒಳಗಿನಿಂದಲೇ ಹಲವು ಅಂತಃ ಸಂಬಂಧಗಳೊಂದಿಗೆ, ಸಂಕೀರ್ಣತೆಗಳೊಂದಿಗೆ ಸಂರಚನೆಗೊಂಡಿರುವಂಥದ್ದು. ಬಹುಸಂಖ್ಯಾತ ಅನಕ್ಷರಸ್ಥ ಅಥವಾ ಅರಿವಿನ ಆಸಕ್ತಿ ಹೊಂದಿದ ಜನಮಾನಸವನ್ನು ತಲುಪಲು ಹಾತೊರೆದ ಸಂವಹನಶೀಲ ಗುಣವುಳ್ಳಂಥವು. ಇವು ಇಷ್ಟೊಂದು ಪ್ರಸರಣಕ್ಕೆ ಬಹು ಮುಖ್ಯ ಕಾರಣರಾದವರು ಹೆಚ್ಚಾಗಿ ಸಂಗ್ರಹಣಾಕಾರರೆಂಬುದು ತಿಳಿದ ವಿಚಾರವಾಗಿದೆ. ಪ್ರಾಚೀನ ಕಾಲದಲ್ಲಿ ರಾಜರು, ಸಾರ್ವಜನಿಕರು ಆಶ್ರಯ ನೀಡುವ ಮೂಲಕ ಅನೇಕ ಉಪಯಕ್ತ ಕೃತಿಗಳ ಸೃಷ್ಟಿಗೆ ಕಾರಣೀಕರ್ತರಾದ ಬಗ್ಗೆ ಉಲ್ಲೇಖನಾರ್ಹ. ಜೈನಕವಿಗಳಂತೂ ರಾಜಾಶ್ರಯದಲ್ಲಿಯೇ ಕೃತಿ ನಿರ್ಮಾಣ ಕಾರ್ಯವನ್ನು ಪೂರೈಸಿದರು. ರಾಜನು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಸಪ್ತಸಂತಾನವೆಂದು ಕರೆಯುತ್ತಿದ್ದರು. ಇವುಗಳಲ್ಲಿ 'ಗ್ರಂಥೋತ್ಪಾದನೆ'ಯೂ ಸೇರಿದ್ದರಿಂದ ರಾಜಕರ್ತವ್ಯದ ಭಾಗವೆಂಬಂತೆ ಕಂಡುಬರುತ್ತದೆ. ಕೆಲವು ಜನ ಮಂತ್ರಿಗಳೂ, ಸಾಮಂತರೂ ಈ ಕರ್ತವ್ಯವನ್ನು ನಿರ್ವಹಿಸಿದರು. ಸಾರ್ವಜನಿಕರಿಗೆ

ಸಂಬಂಧಿಸಿದಂತೆ ರನ್ನನಿಂದ ಅಜಿತಪುರಾಣ ಬರೆಸಿದ 'ಅತ್ತಿಮಬ್ಬೆ', ಮಲ್ಲಣಾರ್ಯನ ವೀರಶೈವಾಮೃತ 'ಮಹಾಪುರಾಣ' ತನ್ನ ಮನೆಯಲ್ಲಿ ರೂಪಗೊಳ್ಳಲು ಕಾರಣಳಾದ ಜ್ಯೋತಿಯಮ್ಮ ಮೊದಲಾದ ಮಹಿಳೆಯರನ್ನು ಇಲ್ಲಿ ಸ್ಮರಿಸಬಹುದು. ಇದಲ್ಲದೆ ಲಕ್ಷ್ಮಣ ದಣ್ಣಾಯಕ, ಭಂಡಾರಿ ಜಕ್ಕಪ್ಪ, ಕಲ್ಲೇಹದ ಕೇತಿಶೆಟ್ಟಿಗಳು ಲಕ್ಷ ಸಂಖ್ಯೆಯ ವಿತ್ತವನ್ನು ಸಾಹಿತ್ಯೋದ್ಧಾರಕ್ಕಾಗಿ ವೆಚ್ಚಿಸಿದ ವಿಷಯ ಗಮನಾರ್ಹವೇ ಸರಿ. ಹೀಗೆ ರಾಜಾಶ್ರಯ ರಾಜಕೀಯ ಪ್ರೇರಣೆಯೂ ಜ್ಞಾನಸಂರಕ್ಷಣೆ ಸಂಸ್ಕೃತಿಯ ಮಹತ್ವವನ್ನು ಬಿಂಬಿಸುತ್ತದೆ. ನಾಡಿನ ಹಲವು ಹಸ್ತಪ್ರತಿ ಗ್ರಂಥಾಲಯಗಳಲ್ಲಿ ಸಾರ್ವಜನಿಕ ಕಳಕಳಿ, ಸಮುದಾಯಗಳ ಹಿತ ಕಾಪಾಡಲು ಗ್ರಂಥಗಳ ರಚನೆ, ಸಂಗ್ರಹ, ಪ್ರತೀಕರಣ, ಸಂರಕ್ಷಣೆ ಸಂವರ್ಧನೆಯ ಕಾರ್ಯ ಸಾಗಿದೆ.

ಹಸ್ತಪ್ರತಿಗಳಿಗೆ ಹೆಚ್ಚಿನ ಮಹತ್ವ ನೀಡಲು ಕಾರಣವೇನು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಕೆಳಗಿನ ಕೆಲವು ಅಂಶಗಳನ್ನು ಚರ್ಚಿಸುವುದರ ಮೂಲಕ ಹಸ್ತಪ್ರತಿಗಳು ಹಾಗೂ ಹಸ್ತಪ್ರತಿ ಗ್ರಂಥಾಲಯಗಳ ಮಹತ್ವದ ಬಗ್ಗೆ ಸ್ಪಷ್ಟ ಚಿತ್ರಣ ಮೂಡುವುದನ್ನು ಕಾಣಬಹುದು.

೫.೩.೧. ಜ್ಞಾನಾರ್ಜನೆಗಾಗಿ

'...ಬಾಗಣವಾಡಿಯ ರಾಮಣ್ಣಗಳ ಮಗನು ಬೊಮ್ಮರಸನು ಶ್ರೀ ಮಲ್ಲಷೇಣಾಚಾರ್ಯರಿಗೆ ಮನ(ನೋ) ವಚನಕಾಯ ಶುದ್ಧಿಯಿಂ ನಮೋಸ್ತು ಮಾಡಿ ತಾನು ಓದುವುದಕ್ಕೆ ಈ ಸಜ್ಜನ ಚಿತ್ತವಲ್ಲಭ ಗ್ರಂಥಾರ್ಥವನ್ನು ಪ್ರತಿ ಸಮಾನವಾಗಿ ಬರೆದನು.'[೧೦]

೫.೩.೨. ದಾನಕ್ಕಾಗಿ

'ಚಿಕ್ಕೋಡಿ ಬಸಪ್ಪ ಚಮಕಲೆ ಪಂಚ ಕಲ್ಯಾಣ ಕೇವಲ ಜ್ಞಾನ ನಿಮಿತ್ತವಾಗಿ ಶಾಸ್ತ್ರದಾನ ಧರ್ಮ್ಮಾಡಿ ಸಾಗರವರ್ಣೀಗಳಿಗೆ ಮಾಘಣಾಂದಿ ಶ್ರಾವಕಾಚಾರ ಗ್ರಂಥ ಆಗಮ ಸ್ವರುವನು ಸುವಿಚಾರ ಚಾರಿತ್ರ ಅಮ್ಮನ ಚರಿತ್ರೆ ಸಹ ಶಾಸ್ತ್ರದಾನವನ್ನು ಮಾಡಿದನು.'[೧೧]

೫.೩.೩. ಕರ್ಮೋಪಶಮನಕ್ಕಾಗಿ

'ಶ್ರೀ ಮದಲಂಕ ದೇವರ ಶಿಷ್ಯರಾದ ಜಯಕೀರ್ತಿ ದೇವರ ಹನ್ನಾವರದ ಚಂದ್ರಕೀರ್ತಿ ದೇವರಿಗೆ ಜ್ಞಾನಾವರಣೀಯ ಕರ್ಮದುಪಶಮನ ನಿಮಿತ್ತವಾಗಿ.. ಬರೆದುಕೊಟ್ಟರು.'[೧೨]

ಕರ್ಮೋಪಶಮನ ಜ್ಞಾನವನ್ನು ಮುಚ್ಚಿ ಹಾಕುವ ಜ್ಞಾನಾವರಣೀಯ ಕರ್ಮವನ್ನು ನಾಶ ಮಾಡುವುದಕ್ಕಾಗಿ ಧಾರ್ಮಿಕ ಗ್ರಂಥಗಳನ್ನು ಪ್ರತಿ ಮಾಡುವ, ಮಾಡಿಸುವ ಸಾಂಸ್ಕೃತಿಕ ವಲಯ ಜೈನಕವಿಗಳಲ್ಲಿ ಜೈನ ಸಮುದಾಯದಲ್ಲಿ ಬೆಳೆದು ಬಂದಿರುವುದನ್ನು ಕಾಣಬಹುದು.

೫.೩.೪. ಆಯುರಾರೋಗ್ಯ ಭಾಗ್ಯಕ್ಕಾಗಿ

'.....ಮಹಾರಾಜ ಶ್ರೀ ಬಷಿರು ಬಸವರಾಜೇ ಅರಶಿನವರಿಗೆ ಮಹಿಶೂರ ಯಾದವ ಕುಲದ ವೈದ್ಯ ವೆಂಕಟದಾಸ್ಯೆಯ್ಯನವರ ಮಗ ವೆಂಕಟರಮಣನು ಬರೆದ ರಾಜಶೇಖರ ವಿಳಾಸಕ್ಕೆ ಶುಭಮಸ್ತು ಶೋಭನಮಸ್ತು ಆಯುರಾರೋಗ್ಯ ಆಯಿಶ್ಚರ್ಯಮಸ್ತು.'[೧೩]

ಹೀಗೆ ಸಂತಾನ ಆಯುರಾರೋಗ್ಯ, ಐಶ್ವರ್ಯ ಅಭಿವೃದ್ಧಿಗೆ ಪುಸ್ತಕಗಳನ್ನು ಬರೆಯುವ, ಬರೆಸುವ ಕ್ರಿಯೆ ಅಭ್ಯಾಸಾರ್ಹವಾದುದು.

೫.೩.೫. ಜ್ಞಾನ ರಕ್ಷಣೆಗಾಗಿ

'...ಗಂಡಸೆ ಸ್ಥಳದ ಶಾನುಭೋಗ ಮಟ್ಟಿಯನವರ ದ್ವಿತೀಯ ಕುಮಾರ ಬಾನಯ್ಯನು ತನ್ನ ಸಂಗ್ರಹ ನಿಮಿತ್ತಕ್ಕೋಸ್ಕರ ಸದಾದೇವಪುರ ಲಕ್ಷ್ಮೀಕಾಂತ ಸ್ವಾಮಿಯವರ ದಿವ್ಯ ಶ್ರೀಪಾದ ಪದ್ಮಂಗಳನ್ನು ಜಾಗ್ರುತ್ಸ್ವಪ್ನಸುಷುಪ್ತಿಯಲ್ಲಿಯೂ ಸ್ಮರಣೆ ಮಾಡಬೇಕು ಎಂದು ಜೈಮಿನಿ ಭಾರತ ಪುಸ್ತಕ ಬರೆಯುವ್ರುದಕ್ಕೆ ನಿರ್ವಿಘ್ನಮಸ್ತು'[೧೪] ಎಂಬ ಉಲ್ಲೇಖವಿದೆ.

೫.೩.೬. ವಂಶಾಭಿವೃದ್ಧಿಗಾಗಿ

'...ಮಾವಹಳ್ಳಿಯಲ್ಲಿಯಿರುವ ಹನುಮಂತಪ್ಪನ ಮಗ ಹನುಮಂತಪ್ಪಗೆ ಆಶೀರ್ವಾದ ಮಾಡಿ ಧನಕನಕ ವಸ್ತುವಾಹನ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿ ವಂಶಾಭಿವೃದ್ಧಿ ಆಗುವ ಹಾಗೆ ಆಶೀರ್ವಾದವನ್ನು ಮಾಡಿ ಬರೆದುಕೊಟ್ಟ ಐರಾವತ ಸಂಪೂರ್ನ್ನ'[೧೫] ಎಂದಿದೆ.

೫.೩.೭. ಪುತ್ರ ಸಂತಾನಕ್ಕಾಗಿ

'...ಶ್ರೀ ಗುರು ಸಚ್ಚಿದಾನಂದ ಪರಿಪೂರ್ಣ ಅವಿರಳ ಪರಂಜ್ಯೋತಿ ಜ್ಞಾನಾನಂದ ಮಯಾ ಸುಧಾರ್ನವ ಪೇನ್ತ್ರ ಭಾರತ್ನ ಪ್ರಕೀರ್ಣ ಮಂಜರಿತ ಮಹಂತ ಚಕ್ರೇಶ್ವರರಾದ ವಿರಕ್ತದೇವ ದೇಶಿಬಶಿರೋಮಣಿಗಳ ವರ ಪಾದಕಮಲ ಪರಾಗದ್ವಿರೇಭನಾದ ಬಸವ ಪೌರಾಣಿಕ ಬರೆದು ವಪ್ಪಿಸಿದ ಶಿಂಗಿರಾಜ ಪೌರಾಣಿ ಬಸವ ಲೀಲೆ ಬಸವಲಿಂಗಾಯನಮಃ(ಕೊನೆಯಲ್ಲಿ)... ಶಾಲಿವಾಹಶಕಾಬ್ದ ವರುಷಗಳು ಶುಕ್ಲ ಸಂವತ್ಸರದ ಮಾರ್ಗಶಿರ ಕೃಷ್ಣಪಕ್ಷ ಸೌಮ್ಯವಾರಕ್ಕೆ ಸಂಪೂರ್ಣ ಜಯ ಮಂಗಳಾಗಿ ಭವಂತು ಪುತ್ರಾಭಿವೃದ್ಧಿರಸ್ತು'[೧೬] ಎಂದಿದೆ.

೫.೩.೮. ಪಾಪಪುಣ್ಯಕ್ಕಾಗಿ

'ಈ ಕಥೆಯ ನೊಲವಿಂದ ಕೇಳ್ದರ್ಗೆ ಶೋಕಭಯ, ದುಃಖ ಸಂಪಾಪಮಂ ನೊರೆ ನಿರ್ಮಲತರ ಸುಬುದ್ದಿಯಂ ಸಿದ್ದಿಯಂ ಹರಿಕೊಡುತಿಹಂ ಕೃಪೆಯೊಳ್'[೧೭] ಎಂದು ಪ್ರಸ್ತಾಪವಾಗಿದೆ.

'ಭಂಡಾರಿದೇವರು ಸೆಟ್ಟಿ ತನಗೆ ಕೇವಲ ಜ್ಞಾನ ಪರಿಪ್ರಾಪ್ತಿ ನಿಮಿತ್ತವಾಗಿ ಕಾರ್ಕಳದ ಶಾಂತಿನಾಥ ಸ್ವಾಮಿಗಳ ಬಸ್ತಿಗೆ ಬರೆಸಿಕೊಟ್ಟ'[೧೮] ವಿವರವಿದೆ.

'...ಪಾಯಂಗಳು ತಮಗೆ ಪುಣ್ಯ ನಿಮಿತ್ತವಾಗಿ ಮಹಾಶ್ರೀಪಾಲ ಬರೆಸಿದರು ಭದ್ರ ಭೂಯಾತ್'.[೧೯]

ಹೀಗೆ ಹಸ್ತಪ್ರತಿಗಳಿಂದ ಪಾಪವು ಕೃತ್ಯವೆನಿಸಿದರೆ ಪುಣ್ಯವು ಅದರ ಪರಿಹಾರ ಸಾಧಕವಾಗಿ ಬಳಕೆಯಾಗಿದೆ. 'ಪುನರಪಿ ಜನನಂ ಪುನರಪಿ ಮರಣಂ' ಮನುಷ್ಯ ಜನನ ಮರಣದ ನಡುವೆ ಪಾಪ-ಪುಣ್ಯಗಳು ಬರುವುದು ಸಹಜ. ಪಾಪದಿಂದ ಮುಕ್ತರಾಗಲು ಪುಣ್ಯವನ್ನು ಪಡೆಯಲು ಹಸ್ತಪ್ರತಿಗಳ ಸಂವರ್ಧನೆ, ಉತ್ಪಾದನೆ, ಸಂಗ್ರಹಗಳಂತಹ, ಸಂಗೋಪನ ಕಾರ್ಯಗಳಲ್ಲಿ ಜ್ಞಾನಸಂರಕ್ಷಣೆಯೂ

ಪಾಪದಿಂದ ಮುಕ್ತಿ ಹೊಂದಲು ಹಸ್ತಪ್ರತಿಗಳಂತಹ ಕೃತಿಗಳು ಪ್ರತೀಕರಣ ಹೊಂದುತ್ತಾ ಪಾಪ ನಿವಾರಣೆಗಾಗಿ, ಪುಣ್ಯ ಸಂಪಾದನೆಗಾಗಿ ಹಸ್ತಪ್ರತಿಗಳ ಮಹತ್ವದ ಸಾಂಸ್ಕೃತಿಕ ವಲಯ ರೂಪಗೊಂಡಿತು. ಭಯ-ಭಕ್ತಿಯಿಂದ ಪಾಪ ನಿವಾರಣೆಗಾಗಿ ಆಹಾರಧಾನ್ಯಗಳ ದಾನದ ಜೊತೆಗೆ ಹಸ್ತಪ್ರತಿಗಳಂತಹ ಜ್ಞಾನಗ್ರಂಥಗಳನ್ನು ಪ್ರತೀಕರಣ ಮಾಡಿಸುವ ಕಾರ್ಯವನ್ನು ಕರ್ನಾಟಕದ ಜನ ಕೈಗೊಂಡಿರುವುದನ್ನು ಹಾಗೂ ಅವುಗಳಿಗೆ ಹೆಚ್ಚಿನ ಸಂಗ್ರಹ, ಸಂರಕ್ಷಣೆಗೆ ನಾಡಿನ ಹಲವು ಗ್ರಂಥಾಲಯಗಳ ಮಹತ್ವ ನೀಡಿರುವುದು ಕ್ಷೇತ್ರಾಧ್ಯಯನದಿಂದ ತಿಳಿದುಬಂದಿದೆ.

ಸ್ವ-ಪ್ರಯೋಜನ, ಪರ ಪ್ರಯೋಜನಕ್ಕಾಗಿ

'ಬರದಾತ ಮಹಿಶೂರ ನಗರದ ಲಕ್ಷ್ಮೀರಮಣಸ್ವಾಮಿಯವರ ದೇವಸ್ಥಾನದ ಸ್ಥಾನಿಕ ಲಕ್ಷ್ಮೀರಮಣಪ್ಪನವರ ಮಗ ಕೃಷ್ಣಯ್ಯನು ತಾನು ತನಗೆ ಬರೆದ ಭಾರತ ಪುಸ್ತಕ' ಇಲ್ಲಿ ಗ್ರಂಥಪ್ರೇಮಿ ಲಿಪಿಕಾರ ಸ್ವ-ಪ್ರಯೋಜನಾರ್ಥ ಲೇಖನ ಕಾರ್ಯ ಮಾಡಿದ್ದಾನೆ'[೨೦] ಎಂದು ಸೂಚಿಸುತ್ತದೆ.

'ಪುರಾಣದ ಕಲ್ಲಯ್ಯ ದೇವರ ಕುಮಾರನಾದ ಗುರುವರ್ಯ ದೇವರು ತಮ್ಮ ಸ್ವಹಸ್ತದಿಂದ ತಮ್ಮ ತಂದೆಗೆ ಈ ಶಾಸ್ತ್ರ ಬರೆದುಕೊಟ್ಟ.'[೨೧] ಪುರಾಣದ ವಿರುಪಾಕ್ಷ ದೇವರ ಮಗ ವೀರಣ್ಣೊಡೆಯ ದೇವರು ತಮಗೆ ಬರೆದ ಸೋನೆಯ ಪುಸ್ತಕ[೨೨] ಎಂದು ವಿವರವಿದೆ.

೫.೩.೧೦. ಸಕಲೈಶ್ವರ್ಯಕ್ಕಾಗಿ

'ಇದು ಬರೆದವರು ಯಾರುಯೆಂದರೆ ಸುಲ್ತಾನಪುರ ಮಟದ ಪಟ್ಟದ ಚಿಕ್ಕವೀರ ಸ್ವಾಮಿಯವರ ಶಿಷ್ಯರಾದ ಹಂಜಿಗೆ ಬೊರಿನಲಿಂಗ ದೇವರು ಪಾತ್ರಾರಾನಾದ ಕಂಬೂಸೆ ಪ್ಲಾಟೆಯೆಲ್ಲು ಯಿಹಾ ಹಂಜಿಗೆ ರುದ್ರಮುನಿ ದೇವರೂ ಚೆಂನರಾಯ ಪಟ್ಟಣದ ಹೊಂನಬಂಡಿ ಜಕ್ಕಪ್ಪನವರ ಪುತ್ರನಾದ ತಿಪ್ಪಂಣಗೆ ಧನಕನಕ ವಸ್ತು ವಾಹನ ಪುತ್ರರು ಸಮುದ್ರಿಯಾಗಿ ಸುಖದಲ್ಲಿ ವಾಳಲೊಂದು ಹರಸಿ ಬರಕೊಟ್ಟ ರಾಘವಾಂಕಯ್ಯಗಳ ಕಾವ್ಯಕ್ಕೆ ಮಂಗಳ ಮಹಾಶ್ರೀ'[೨೩] ಎಂದು ತಿಳಿಸುತ್ತದೆ.

ಹೀಗೆ ಮೇಲಿನ ಎಲ್ಲಾ ಅಂಶಗಳನ್ನು ಅವಲೋಕಿಸಿದಾಗ ವ್ಯಕ್ತಿಗಳ ಅಧ್ಯಯನಕ್ಕಾಗಿ, ಸಮುದಾಯದ ಪ್ರಯೋಜನಕ್ಕಾಗಿ ಹಸ್ತಪ್ರತಿಗಳನ್ನು ಬರೆದು ಕೊಟ್ಟಿದ್ದಾರೆ. ಕೈವಲ್ಯ ಜ್ಞಾನಕ್ಕಾಗಿ ಹಸ್ತಪ್ರತಿಗಳ ಇತಿವೃತ್ತವನ್ನು ತಿಳಿಸುವ ಸಂಸ್ಕೃತಿಯನ್ನು ಕಟ್ಟಿಕೊಟ್ಟಿರುತ್ತವೆ. ಸ್ವ ಮತ್ತು ಪರಫಲದ ನೆನಪಿಗಾಗಿ ಜೀವನದ ಸರ್ವ ಕಲ್ಯಾಣಕ್ಕಾಗಿ ಜ್ಞಾನವನ್ನು ಸಂರಕ್ಷಿಸುತ್ತಾ, ಸಂಗ್ರಹಿಸುತ್ತಾ ಬಂದಿದ್ದಾರೆ. ಬರಹ ಸಾಧನಾದ ಗ್ರಂಥಗಳನ್ನು ಸಾಂಸ್ಕೃತಿಕ ಮಹತ್ವದ ಮಾದರಿಯಲ್ಲಿ ಕಾಪಾಡಿಕೊಂಡು ಬಂದಿದ್ದಾರೆ. ಹೀಗೆ ಮಠಗಳು ಗ್ರಂಥೋತ್ಪಾದನೆ, ಗ್ರಂಥಸಂರಕ್ಷಣೆ, ಗ್ರಂಥಸಂವರ್ಧನೆಯ ಕೇಂದ್ರಗಳಾಗಿ ಧಾರ್ಮಿಕ ಉದ್ದೇಶ ಒಂದೇ ಅಲ್ಲದೆ ಸಾಮಾಜಿಕ, ಸಾಮುದಾಯಿಕ ಸಾಂಸ್ಕೃತಿಕ ವಲಯವನ್ನು ಸಮೃದ್ಧಿಗೊಳಿಸುವ ಮೂಲಕ ಜ್ಞಾನಸಂಗ್ರಹ, ಸಂರಕ್ಷಣೆಯನ್ನು ಸಮಾಜಮುಖಿಯಾಗಿ ಮಾಡಿದರು. ಈ ಕೆಳಗಿನ ಕೆಲವು ಉಲ್ಲೇಖ ತಿಳಿಸುವಂತೆ 'ಓದಿಸುವ ಬಿದರಹಳ್ಳಿ ಮಠದಲ್ಲಿ ಕುಳಿತು ಮುಗಿಯ ಬರಹ ಮಲ್ಲಪ್ಪ ದೇವರ ಹಸ್ತಾಂತರ'[೨೪] (ಹಸ್ತಾಕ್ಷರ) 'ಜಂಬ ಕಂಡಿಯ ಬದಿಯ ತೇರದಳವೆಂಬ ಗಾಳಿ ಪೆಟ್ಟೆಯಲ್ಲಿ ವಿರಕ್ತಮಠದಲ್ಲಿ.. ಬರೆದ ಪುಸ್ತಕವು.'[೨೫]

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

'ಮಂಗಳ ದೇಶದ ಲಕ್ಷ್ಮೇಶ್ವರ ತೋಟಸ್ವಾಮಿಗಳ ಮಠದಲ್ಲಿ ಬರೆದ ಬಸವೇಶ್ವರನ ಪುರಾಣ'[೨೬] ಎಂದು ನಮೂದಿಸಲಾಗಿದೆ.

ಪ್ರಾಚೀನ ಕಾಲದಲ್ಲಿ ಹಸ್ತಪ್ರತಿಗಳ ಸಂಗೋಪನೆಯ ಕೇಂದ್ರಗಳೆನಿಸಿರುವ ಮಠಗಳಲ್ಲಿ ಮೇಲಿನ ಉಲ್ಲೇಖದನ್ವಯ ಸಂಗೋಪನೆ, ಸಂವರ್ಧನೆ, ಅಧ್ಯಯನ, ಇನ್ನಿತರ ಕೆಲಸ ಕಾರ್ಯಗಳು ನಡೆಯುತ್ತಿರುವುದರ ಜೊತೆಗೆ ಜ್ಞಾನ ಪ್ರಸರಣ ಕಾರ್ಯ ಧಾರ್ಮಿಕ ಹಿನ್ನೆಲೆಯಲ್ಲಿ ನಡೆಯುತ್ತಿರುವುದನ್ನೂ ಕಾಣಬಹುದು. 'ಪೂಜ್ಯತೆ, ಶ್ರೇಷ್ಠತೆ ಒದಗಿ ಬಂದಿರಲಾರದು. ನಂತರ ಇದು ಸಾಧ್ಯವಾಗಿರುವಂಥದ್ದು.'[೨೭] ದಾನಕ್ಕಾಗಿ, ಓದಿಗಾಗಿ, ಕೇಳುವಿಕೆಗಾಗಿ, ಕೂಲಿಗಾಗಿ, ರೋಗ ನಿವಾರಣಾರ್ಥವಾಗಿ, ವಿದ್ಯಾರ್ಜನೆಗಾಗಿ, ಹವ್ಯಾಸಕ್ಕಾಗಿ, ಮೋಕ್ಷ ಸಂಪಾದನೆಗಾಗಿ, ಸಂಕಷ್ಟ ಪರಿಹಾರ್ಥವಾಗಿ, ಕರ್ಮೋಪಶಮನಕ್ಕಾಗಿ ಸ್ವ–ಪರ ಬಳಕೆ ಮತ್ತು ಪ್ರಗತಿಗಾಗಿ. ಪುತ್ರ ಸಂತಾನಕ್ಕಾಗಿ ಹೀಗೆ ಹತ್ತು ಹಲವು ರೀತಿಯ ಫಲಾಪೇಕ್ಷೆಗಳು ಮತ್ತು ಜೀವನ ದೃಷ್ಟಿಗಳಿಗಾಗಿ ಹಸ್ತಪ್ರತಿಗಳು ಬರೆಸಿಕೊಂಡಂಥವು ಹಾಗೂ ಪ್ರತೀಕರಣಗೊಂಡಂಥವು. ಹೀಗೆ ಕೃತಿಯೊಂದು ಆಕೃತಿಗೊಳ್ಳುವ ಅಥವಾ ಪ್ರತೀಕರಣಗೊಳ್ಳುವುದರ ಹಿಂದೆ ಸಮುದಾಯಗಳ ನಿರ್ದಿಷ್ಟ ಉದ್ದೇಶಗಳಿರುವುದು ಸ್ಪಷ್ಟವಾಗುತ್ತದೆ ಅಥವಾ 'ಅಂತ ಸಮುದಾಯಗಳ ಅಸ್ತಿತ್ವಕ್ಕಾಗಿಯೇ ಉಪಯೋಗವಾಗುವಂಥದ್ದು ಇದೆ.'[೨೮] ಇವೆಲ್ಲಾ ದೃಷ್ಟಿಕೋನಗಳಿಂದಾಗಿ ಹಸ್ತಪ್ರತಿಗಳ ಸಂಗ್ರಹ–ಸಂರಕ್ಷಣೆಗೆ ಹೆಚ್ಚಿನ ಮಹತ್ವ ನೀಡಿರುವುದನ್ನು ಗಮನಿಸಬಹುದಾಗಿದೆ.

ಹಸ್ತಪ್ರತಿಗಳು ಕನ್ನಡಿಗರ ಆಲೋಚನಾಕ್ರಮದ ರೂಪಾತ್ಮಕ ಪ್ರತಿನಿಧಿಗಳಾಗಿವೆ ಎಂದೇ ಹೇಳಬಹುದು. ದೈನಂದಿನ ಬದುಕಿನ ತಾಕಲಾಟಗಳಲ್ಲಿ ಜನರನ್ನು ಓದಿಸುವ, ಕೇಳಿಸುವ ಸಂಗತಿಗಳತ್ತ ಹುರುದುಂಬಿಸುವ ಇವು ಮಾನವಮುಖಿ ಸಂಕಥನಗಳಾಗಿವೆ. 'ಹೀಗಾಗಿ ಬರಿ ಅಲೌಕಿಕ ಅಪೌರುಷೇಯ ನೆಲೆಗಳ ಮೂಲಕ ಹಸ್ತಪ್ರತಿಗಳನ್ನು ನೋಡುವುದು ಸರಿಯಲ್ಲ.'[೨೯] ಹಸ್ತಪ್ರತಿಗಳನ್ನು ಕನ್ನಡ ಜನ ಬದುಕಿನ ಅಂಗವಾಗಿ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ನೋಡುವುದು ಅವರ ಸಾಂಸ್ಕೃತಿಕ ಮನೋಭಾವನೆಯನ್ನು ಹೇಳುತ್ತದೆ. ಅಕ್ಷರ ಕೇಂದ್ರದಾಚೆಯಿರುವ ಬಹುಸಮುದಾಯಗಳು ಗ್ರಂಥಸಂರಕ್ಷಣೆ ಹಾಗು ಸಂಗ್ರಹ ಸಂವರ್ಧನೆಯಂತಹ ಸಾಂಸ್ಕೃತಿಕ ಸಂರಕ್ಷಣೆಗೆ, ಸಂಗ್ರಹಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡುತ್ತಾ ಬಂದಿವೆ.

ಬಳಕೆ ಸಂಸ್ಕೃತಿ ಮತ್ತು ಮಹತ್ವ

ಭಾರತೀಯರದು ಕೊಡುಕೊಳ ಸಂಸ್ಕೃತಿಯಾಗಿದೆ. ಪ್ರಕೃತಿ ಮಾನವರಿಗೆ ಅವಿನಾಭಾವ ಸಂಬಂಧದಿಂದಾಗಿ ಭಾರತೀಯ ಪರಂಪರೆ ವಿಶಿಷ್ಟವಾದುದಾಗಿದೆ. ಪ್ರಕೃತಿಯನ್ನು ಮಾನವ ಬೇಕಾಬಿಟ್ಟಿಯಾಗಿ ಬಳಸಿಕೊಳ್ಳದೆ ಅದನ್ನು ದೈವೀನೆಲೆಯಲ್ಲಿ ಕಂಡಿರುವುದು ಗಮನಾರ್ಹ. ಮರ ಕಡಿಯಬೇಕಾದರೆ ಮೊದಲು ಮರದ ಹತ್ತಿರ ಹೋಗಿ ಹಾಲುಜೇನು ತುಪ್ಪ ಎರೆದು ಆಹ್ವಾನ ನೀಡಿ ಸಕಲ ದೇವತೆಗಳನ್ನು ನೆನೆದು ಮರದ ಕ್ಷಮೆ ಕೋರಿ ಬರಬೇಕು. ಹಾಗೆ ಕಡಿಯುವ, ಕೊಡಲಿ ಮತ್ತು ಬಾಚಿಗೆ ಉದಕ ಮತ್ತು ಜೇನುತುಪ್ಪ ಹಚ್ಚಿ ಕಡಿದರೆ ಮರ ಹದವಾಗಿ ಹರಿಯುವುದಲ್ಲದೆ

ಉಳಿಯದು ಮತ್ತು ಹುಳು ಹತ್ತದು. ಈ ವಿವರ ನಿಸರ್ಗಕ್ಕೂ ಜೀವವಿದೆ ಎಂತಲೂ ಅದರ ಬಳಕೆ ಮಾನವೀಯತೆಯಿಂದ ನಡೆಯಬೇಕೆನ್ನುವ ಜೀವಪರ ನಿಲುವನ್ನು ತೋರುತ್ತದೆ. ಇನ್ನೂ ಕುತೂಹಲದ ಸಂಗತಿಗಳೆಂದರೆ ಹಕ್ಕಿಗೂಡು ಕಟ್ಟಿದ ಮರವು, ಬಳ್ಳಿ ಸುತ್ತಿದ ಮರವು, ತಪಸ್ವಿಗಳಾಶ್ರಯದ ಮರವನ್ನು ಕಡಿಯಬಾರದು ಎನ್ನುವಲ್ಲಿ ವಾಸ್ತುವಿನ ಮಹೋನ್ನತ ಜೀವಪರ ಕಾಳಜಿ ಎದ್ದು ಕಾಣುತ್ತದೆ. ಹಾಗೆ ಫಲ ಬಿಡುವ ಹೂವು ಬಿಡುವ ಮರಗಳನ್ನು ಕಡಿಯಬಾರದು ಎಂದು ಹೇಳುವ ಮೂಲಕ ಜೀವ ವೈವಿಧ್ಯತೆಯನ್ನು ಗೌರವಿಸುವ ವಿವೇಕ ಹಾಗೂ ನಡವಳಿಕೆಯನ್ನು ಕಾಣುತ್ತೇವೆ[೬೦] ಎಂಬುದು ಸ್ಪಷ್ಟ.

ಹಸ್ತಪ್ರತಿಗಳಲ್ಲಿ ಖಗೋಳಶಾಸ್ತ್ರ, ಗಣಿತ, ವೈದ್ಯಕೀಯ, ಸಂಗೀತ, ಸಾಹಿತ್ಯ, ವ್ಯಾಕರಣ, ಇತಿಹಾಸ, ಜ್ಯೋತಿಷ್ಯಶಾಸ್ತ್ರ, ವಾಸ್ತುಶಾಸ್ತ್ರ, ಶಿಲ್ಪಶಾಸ್ತ್ರ, ಚಿತ್ರಕಲೆಗಳು, ಧರ್ಮಶಾಸ್ತ್ರ ಮುಂತಾದ ಅತ್ಯಮೂಲ್ಯವಾದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿವೆ. ಜನಮುಖಿ ಮತ್ತು ಸಮುದಾಯಮುಖಿ ಪರವಾದ ಪಠ್ಯಗಳು ಸಾಂಸ್ಕೃತಿಕ ಮಹತ್ವವನ್ನು ಕಟ್ಟಿಕೊಡುತ್ತವೆ. ರಟ್ಟಮತಗ್ರಂಥ ಮಳೆ, ಬೆಳೆ, ಭೂಮಿ, ರಾಶಿ, ನಕ್ಷತ್ರ, ಜ್ಯೋತಿಷ್ಯ ವಿವರಗಳನ್ನು, ಹಾಗೆಯೇ ಕುಮಾರವ್ಯಾಸನ ಗದುಗಿನ ವಿರಾಟಪರ್ವ ಮಳೆಗಾಗಿ ಮಾಡುವ ಸಾಮುದಾಯಿಕ ಪ್ರಾರ್ಥನೆ ಭಾಗವಾಗಿ ಬಿಂಬಿತವಾಗಿವೆ. ನಮ್ಮಲ್ಲಿ ಬಹುಮುಖಿ ಶಿಸ್ತುಗಳು ಹಸ್ತಪ್ರತಿಗಳಲ್ಲಿವೆ. ಅದರಲ್ಲಿ ಇತಿಹಾಸವಿದೆ, ಸಮಾಜ ವಿಜ್ಞಾನವಿದೆ, ಭಾರತೀಯ ವಿದ್ಯೆಗಳಾದ ವೈದ್ಯ, ಜ್ಯೋತಿಷ್ಯ, ಭವಿಷ್ಯ, ವಾಸ್ತುತಂತ್ರ ಸಾಹಿತ್ಯ ಮತ್ತು ಧರ್ಮಶಾಸ್ತ್ರಗಳಿವೆ. ವಿಶೇಷವಾಗಿ ಮಠಮಾನ್ಯಗಳು ಕೈ ತಮ್ಮ ಕತ್ತಲೆ ಕೋಣೆಯಲ್ಲಿ ಇದ್ದಂತಹ ಹಸ್ತಪ್ರತಿಗಳನ್ನೆಲ್ಲ ಹೊರಕ್ಕೆ ತೆಗೆದು ಅವುಗಳನ್ನು ಒಂದು ವ್ಯವಸ್ಥಿತವಾಗಿ ಜೋಡಿಸಿ, ಸಾರ್ವಜನಿಕವಾಗಿ ಅರಿವು ಮೂಡಿಸುವ ಉದ್ದೇಶವನ್ನು ಹೊಂದಿ ಅವುಗಳಿಗೆ ಸಂಬಂಧಿಸಿದಂತೆ ಸೂಚಿ ತಯಾರಿಕೆಯ ಕಡೆಗೆ ಹೆಚ್ಚಿನ ಗಮನ ಹರಿಸಿರುವುದು ಶ್ಲಾಘನೀಯ. ಇದರ ಜೊತೆಗೆ ಸಂಗ್ರಹ-ಸಂರಕ್ಷಣೆಯ ಬಗ್ಗೆ ವಿಶೇಷವಾದ ಗಮನ ಹರಿಸಿದ್ದು, ಧಾರ್ಮಿಕವಲ್ಲದೆ ಸಾಮಾಜಿಕ, ಸಾಂಸ್ಕೃತಿಕ ನೆಲೆಗಟ್ಟನ್ನು ಕಟ್ಟಿಕೊಡುತ್ತವೆ. ಅಷ್ಟೇ ಅಲ್ಲದೆ ಹಸ್ತಪ್ರತಿಗಳಂತಹ ಪ್ರಾಚೀನ ಸಾಹಿತ್ಯ ಗ್ರಂಥಗಳನ್ನು ಸಾಂಸ್ಕೃತಿಕ ಅಧ್ಯಯನದಲ್ಲಿ ಅಭ್ಯಸಿಸುವುದು ಅತ್ಯಂತ ಮಹತ್ವದ್ದಾಗಿದೆ.

ಕನ್ನಡ ಹಸ್ತಪ್ರತಿಗಳ ಸಾಂಸ್ಕೃತಿಕ ಸಂರಕ್ಷಣೆಯಲ್ಲಿ ಕುಶಲ ಕರ್ಮಿಗಳಾದ ಬಡಿಗ, ಕಮ್ಮಾರ, ಲೋಹಾರ, ವಸ್ತ್ರದ, ಓಲೆಯ, ಚಿತ್ರಗಾರ, ಲಿಪಿಕಾರ, ಬರೆಪಕಾರರಂತ ಹಲವು ರೀತಿಯ ಸಮುದಾಯಗಳು ಸಾಲಿಮಠ, ಓಲೆಮಠ, ಟೀಕಿನ ಮಠಗಳು, ಸಂಘ, ಸಂಸ್ಥೆಗಳು ಗೃಹ ಉದ್ಯಮಗಳು ಇಂಥ ಕುಶಲಗಾರರ ಕಲಿಕೆಯ ಮತ್ತು ಉಪಜೀವನದ ತಾಣಗಳಾಗಿದ್ದವು. ನಮ್ಮಲ್ಲಿ ಸಿಗುವ ಹಲವು ಪಠ್ಯಗಳು ಆಯಾಕಾಲದ ವೈವಿಧ್ಯಮಯ ಅಥವಾ ವೈರುಧ್ಯ ತುಂಬಿದ ಸಾಮಾಜಿಕ ರಚನೆಯ ಪ್ರತೀಕಗಳು. ಇವು ಎಲ್ಲವೂ ಬದುಕಿನ ಭಿನ್ನ ದೃಷ್ಟಿಕೋನಗಳಲ್ಲಿ ಅರಳಿದಂಥವು. ಪಾಂಡಿತ್ಯಕ್ಕಾಗಿ, ಆಶ್ರಯದಾತನ ಋಣ ತೀರಿಸಲಿಕ್ಕಾಗಿ, ಪ್ರಯೋಗಕ್ಕಾಗಿ, ಜ್ಞಾನಕ್ಕಾಗಿ, ದಾನಕ್ಕಾಗಿ, ಓದಿಗಾಗಿ, ಕೂಲಿಗಾಗಿ ರೋಗ ಪರಿಹಾರಾರ್ಥವಾಗಿ, ಹವ್ಯಾಸವಾಗಿ, ಮತೀಯ ಅಸ್ತಿತ್ವಕ್ಕಾಗಿ ರೂಪಗೊಂಡ ಹಲವು ಕೃತಿ

ಪ್ರತಿಗಳು ನಮಗೆ ದೊರೆಯುತ್ತವೆ. ಜ್ಞಾನಸಂರಕ್ಷಣೆ, ಸಂವರ್ಧನೆ, ಸಂಗೋಪನೆಯಲ್ಲಿ ಸಾಂಸ್ಕೃತಿಕ ಮಹತ್ವ ಬಹುಮುಖಿ ನೆಲೆಯಲ್ಲಿ ನೋಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ತತ್ವಪದಕಾರರು, ಅವಧೂತರು, ಸೂಫಿಗಳು ತಮ್ಮ ಅನುಭಾವದ ಹಾಡುಗಳಿಂದ ಸಾಂಸ್ಕೃತಿಕವಾಗಿ ಜ್ಞಾನಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ಮುಖ್ಯವಾಗಿ ಓಲೆಗರಿ, ತಾಮ್ರಪತ್ರ, ಕಾಗದಪತ್ರ ಒಳಗೊಂಡ ಗ್ರಂಥಗಳಿಂದ ಸಾಹಿತ್ಯ ಸಂಸ್ಕೃತಿ ರಕ್ಷಣೆ ಮಾಡಲಾಗಿದೆ. ಬಾಯಿಂದ ಬಾಯಿಗೆ ವ್ಯಕ್ತಿಯಿಂದ ವ್ಯಕ್ತಿಗೆ ಜನಾಂಗದಿಂದ ಜನಾಂಗಕ್ಕೆ ಹೇಳುವ ಮತ್ತು ಕೇಳುಗರ ನಡುವೆ ನಡೆಯುವ ಜ್ಞಾನದ ವಿನಿಮಯವಾಗಿದೆ. ಸಂವಹನ, ಸಾಮುದಾಯಿಕ ಜನಸಾಮಾನ್ಯರ ಪರವಾದ ಸಾಂಸ್ಕೃತಿಕ ವಲಯದ ಮೂಲಕ ಹಸ್ತಪ್ರತಿಗಳ ಮಹತ್ವ ನಿರಂತರವಾಗಿ ನಡೆಯುತ್ತಾ ಬಂದಿದೆ. ಇದಕ್ಕೆ ಪೂರಕವೆಂಬಂತೆ ಕೆಲವೊಂದು ನಿದರ್ಶನಗಳನ್ನು ಗಮನಿಸಬಹುದಾಗಿದೆ.

'...ಹರುದದಿ ಲಾಲಿಸಿದವರ್ಗೆ ದುರಿತವಿನಾಶದ ನೆರೆಕರ್ಮ ಹರಿವುದು'[೩೧]

'...ಲಿಂಗಲೀಲಾ ವಿಲಾಸ ಚಾರಿತ್ರ್ಯವನ್ನು ಬರದುವೋದಿ ಕೇಳಿದವರ್ಗೆಯಿಹಪರ ಸುಖಕೊಡುವ..'[೩೨] ಎಂದು ಪ್ರಸ್ತಾಪವಾಗಿದೆ.

ಮೇಲಿನ ಅಂಶಗಳನ್ನು ಅವಲೋಕಿಸಿದಾಗ ಹಸ್ತಪ್ರತಿಗಳ ಮಹತ್ವ ಎಷ್ಟು ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ದೊರೆಯುವುದರ ಜೊತೆಗೆ ಹಸ್ತಪ್ರತಿಗಳು ಮನುಷ್ಯನನ್ನು ವೈಯಕ್ತಿಕ ಹಾಗೂ ಸಾಮುದಾಯಿಕ ಬದುಕಿನ ಸಂದರ್ಭದಲ್ಲಿ ವಿಶ್ಲೇಷಿಸಿಕೊಳ್ಳುವುದಾಗಿವೆ. ಯಾವ ಕನ್ನಡ ಹಸ್ತಪ್ರತಿಯು ಕೇವಲ ಪೂಜನೀಯ ಮಟ್ಟದಲ್ಲಿ ಸ್ವೀಕೃತವಾಗಿಲ್ಲ. ಪಂಪಭಾರತ, ಆದಿಪುರಾಣ, ವಡ್ಡಾರಾಧನೆ, ಹರಿಶ್ಚಂದ್ರಕಾವ್ಯ, ಗದುಗಿನ ಭಾರತ, ಜೈಮಿನಿ ಭಾರತ, ಸರ್ವಜ್ಞನ ವಚನಗಳು, ಪಾರಮಾರ್ಥ ಪ್ರಕಾಶಿಕೆ, ದೇವೀ ಮಹಾತ್ಮೆ, ದಾಸರ ಕೀರ್ತನೆಗಳು ಇತ್ಯಾದಿ ಹಸ್ತಪ್ರತಿಗಳು, ಪ್ರತೀಕರಣ, ಓದು ಮತ್ತು ಅಧ್ಯಯನಗಳ ವ್ಯಾಪ್ತಿಯನ್ನು ಅಂದಿನಿಂದ ಇಂದಿನವರೆಗೂ ಗಮನಿಸಿದರೆ ಅವುಗಳ ಸಾರ್ವತ್ರಿಕತೆಯನ್ನು ಅರಿಯಲು ಸಾಧ್ಯವಾಗುತ್ತದೆ. ಓದುಗಾರಿಕೆ ಹೇಳುವ ಮತ್ತು ಕೇಳುವ ಮೂಲಕ ಜ್ಞಾನಸಂರಕ್ಷಣೆಯ ಬಹುದೊಡ್ಡ ಸಾಂಸ್ಕೃತಿಕ ಮಹತ್ವದ ವಲಯ ನಿರ್ಮಾಣವಾಗಿದೆ.

ಇಂತಹ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಸಂರಕ್ಷಿಸಿ ಬೇರೆ ಬೇರೆ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಸಂವರ್ಧನೆ, ಸಂಗೋಪನೆಯ ಜವಾಬ್ದಾರಿಯನ್ನು ಹೊತ್ತಿರುವ ಹಸ್ತಪ್ರತಿ ಗ್ರಂಥಾಲಯಗಳ ಮಹತ್ವದ ಬಗ್ಗೆ ಗಮನಿಸಬಹುದಾಗಿದೆ.

ಗ್ರಂಥಾಲಯಗಳನ್ನು ಸಾಮಾನ್ಯ ಮತ್ತು ವಿಶಿಷ್ಟ ಎಂದು ವರ್ಗೀಕರಿಸಿದರೆ ಹಸ್ತಪ್ರತಿ ಗ್ರಂಥಾಲಯವು ವಿಶಿಷ್ಟ ವರ್ಗಕ್ಕೆ ಒಳಪಡುವುದು. ಈ ವೈಶಿಷ್ಟ್ಯ ಕಾರಣವಾಗಿ ಹಸ್ತಪ್ರತಿಶಾಸ್ತ್ರದಲ್ಲಿ ಪರಿಣತರಾದ ಸಿಬ್ಬಂದಿ ವರ್ಗ, ವಿದ್ವಾಂಸವರ್ಗ ಇತ್ಯಾದಿಗಳು ಭಂಡಾರಕ್ಕೆ ನ್ಯಾಯ ಒದಗಿಸುತ್ತಾರೆ. ಹಸ್ತಪ್ರತಿ ಗ್ರಂಥಾಲಯಕ್ಕೆ ಆಗಮಿಸಿದ ಅಭ್ಯಾಸಿಗಳಿಗೆ ಪರಮಾವಧಿ ಸೇವೆ ಸಲ್ಲಿಸುವಲ್ಲಿಯೇ ತಮ್ಮ ವೃತ್ತಿಯ ಸಾರ್ಥಕತೆಯಿದೆಯೆಂಬ ಭಾವ ಸಿಬ್ಬಂದಿಯಲ್ಲಿ ಜಾಗೃತವಾಗಿದ್ದಷ್ಟೂ ಅವರ ಭಂಡಾರದ ಪ್ರಯೋಜನ

ವರ್ಧಿಸುತ್ತದೆ. ಈ ಹಿಂದೆ ಹೇಳಲಾದ ಹಸ್ತಪ್ರತಿ ಭಂಡಾರದ ಹನ್ನೆರಡು ವಿಭಾಗಗಳಲ್ಲಿ ತಾಂತ್ರಿಕ ವಿಭಾಗ, ಪರಿಚಲನ ವಿಭಾಗ, ಸಂಪಾದನ ವಿಭಾಗಗಳು ಮಾತ್ರ ಅಧ್ಯಯನಕಾರರಿಗೆ ನೇರವಾಗಿ ನೆರವಾಗುವ ನೆಲೆಗಳಾಗಿವೆ. ಇವುಗಳ ಜೊತೆಗೆ ಇನ್ನಷ್ಟು ವಿಭಾಗಗಳು ಜಾಗೃತವಾಗಿದ್ದು ಹಸ್ತಪ್ರತಿ ಗ್ರಂಥಾಲಯ ಬಳಕೆ ಹೆಚ್ಚುತ್ತಾ ಹೋಗುವುದು. ಹೀಗೆ ಅನ್ಯಸಂಸ್ಥೆ ಮತ್ತು ವ್ಯಕ್ತಿಗಳ ವಶದಲ್ಲಿರುವ ಅಪೂರ್ವ ಕೃತಿಗಳ ನಕಲುಪ್ರತಿಗಳ ಸಂರಕ್ಷಿಸುವುದು ಹಸ್ತಪ್ರತಿ ಕ್ಷೇತ್ರದ ಬಹುಮುಖ್ಯ ಅಂಶವಾಗಿದೆ. ಈ ಹಿಂದೆ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ಹಾಗೂ ಮೈಸೂರಿನ ಪ್ರಾಚ್ಯ ವಿದ್ಯಾಸಂಸ್ಥೆಗಳಲ್ಲಿ ಸಂಗ್ರಹಿಸಿದ ನೂರಾರು ಹಸ್ತಪ್ರತಿಗಳಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ. ಇಂಥ ಪ್ರತಿಗಳನ್ನು ಮುಂದಿನ ಪೀಳಿಗೆಗಾಗಿ ಅನಿವಾರ್ಯವಾಗಿ ಪ್ರಾಚೀನ ಜ್ಞಾನಸಂಪತ್ತನ್ನು ರಕ್ಷಿಸಬೇಕಾಗುತ್ತದೆ. ಈ ಕಾರ್ಯವನ್ನು ನಾಡಿನ ವಿವಿಧ ಹಸ್ತಪ್ರತಿ ಭಂಡಾರಗಳು ಮಾಡಬೇಕಾದ ಅಗತ್ಯವಿದೆ. ಈ ಕಾರಣದಿಂದ ಭಂಡಾರಗಳು ಪ್ರಾಚೀನ ಸಾಂಸ್ಕೃತಿಕ ವಲಯಕ್ಕೆ ಹೃದಯ ಭಾಗವಿದ್ದಂತೆ. ಇಂದಿನ ಶಿಕ್ಷಣಪದ್ಧತಿಯಲ್ಲಿ ಹಾಗೂ ಅಧ್ಯಯನಕ್ರಮದಲ್ಲಿ ಪ್ರಾಚೀನ ಜ್ಞಾನ ಆಕರಗಳಾದ ಹಸ್ತಪ್ರತಿಗಳು ತುಂಬಾ ಮಹತ್ವದ ಪಾತ್ರ ವಹಿಸುತ್ತವೆ. ಇವುಗಳನ್ನು ಸಂಗ್ರಹಿಸಿ ಸಂಗೋಪನೆಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಹಸ್ತಪ್ರತಿ ಭಂಡಾರಗಳ ಕಾರ್ಯ ಅತ್ಯಗತ್ಯ. ಪ್ರಸ್ತುತ ಮುದ್ರಿತ ಗ್ರಂಥಾಲಯಕ್ಕೂ ಮತ್ತು ಹಸ್ತಪ್ರತಿ ಗ್ರಂಥಾಲಯಕ್ಕೂ ಕಾರ್ಯಯೋಜನೆ ಹಾಗೂ ಚಟುವಟಿಕೆಯಲ್ಲಿ ತುಂಬಾ ವ್ಯತ್ಯಾಸವಿರುವುದು ಕಂಡುಬಂದಿದೆ. ಇಂದಿನ ಗ್ರಂಥಾಲಯಗಳು ಬರೀ ಮಾಹಿತಿಯನ್ನು ಒದಗಿಸುವ ಕೇಂದ್ರಗಳಾಗಿವೆ. ಆದರೆ ಹಸ್ತಪ್ರತಿ ಗ್ರಂಥಾಲಯಗಳು ಜ್ಞಾನ ಪರಿಕರಗಳ ಸಂಗ್ರಹ, ಸಂರಕ್ಷಣೆ, ಸಂಗೋಪನೆ, ಸಂವರ್ಧನೆಯಂಥ ಸಮಾಜದ ಹಾಗೂ ಮನುಷ್ಯನ ವ್ಯಕ್ತಿತ್ವದ ವಿಕಾಸಕ್ಕೆ ತುಂಬಾ ಸಹಕಾರಿ ಹಾಗೂ ಅನುಕೂಲ ಆಗಿರುವುದನ್ನು ಕಾಣಬಹುದಾಗಿದೆ. ಆದರೆ ಹಸ್ತಪ್ರತಿ ಭಂಡಾರಗಳಲ್ಲಿ ಪ್ರಾಚೀನ ಜ್ಞಾನ ಸಂಗ್ರಹವಾಗಿರುವ ಹಸ್ತಪ್ರತಿಗಳನ್ನು ಸಂಗ್ರಹ, ಸಂವರ್ಧನೆ ಹಾಗೂ ಸಂಗೋಪನೆ, ಪ್ರಕಟಣೆ, ಸೂಚೀಕರಣ ಇತ್ಯಾದಿ ಚಟುವಟಿಕೆಗಳು ನಡೆಯುವವು. ಒಟ್ಟಾರೆ ಹಸ್ತಪ್ರತಿ ಭಂಡಾರವು ಹೆಚ್ಚಿನ ಶ್ರಮ ಮತ್ತು ಏಕಾಗ್ರತೆ ಬಯಸುತ್ತದೆ. ಇಂದಿನ ಸಮಾಜದಲ್ಲಿರುವ ಎಲ್ಲಾ ಜೀವಿಗಳಿಗೆ ಬೇಕಾದ ಜ್ಞಾನದ ತಿಳುವಳಿಕೆಯನ್ನು ಮೂಡಿಸುವುದರ ಜೊತೆಗೆ ಆ ಮನುಷ್ಯನಿಗೆ ಬೌದ್ಧಿಕವಾಗಿ, ಭೌತಿಕವಾಗಿ ಬೇಕಾಗುವ ಸಮಗ್ರ ಚಿತ್ರಣವನ್ನು ಮೂಡಿಸುವುದರ ಜೊತೆಗೆ ಅವನು ಮಾನಸಿಕವಾಗಿ, ಬೌದ್ಧಿಕವಾಗಿ, ಶಾರೀರಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಸರ್ವಾಂಗೀಣ ಪ್ರಗತಿಯನ್ನು ಹೊಂದಿ ಉತ್ತಮ ನಾಗರಿಕನಾಗಿ, ವಿದ್ವಾಂಸನಾಗಿ ರೂಪಗೊಳ್ಳಲು ಹಸ್ತಪ್ರತಿಗಳು ನೆರವಾಗುತ್ತವೆ. ಇಂತಹ ಹಸ್ತಪ್ರತಿಗಳನ್ನು ಒಂದೆಡೆ ಸಂಗ್ರಹಿಸುವ ಜವಾಬ್ದಾರಿಯನ್ನು ಹೊಂದಿರುವ ಹಸ್ತಪ್ರತಿ ಭಂಡಾರಗಳ ಕಾರ್ಯ ತುಂಬಾ ಶ್ಲಾಘನೀಯವಾದುದಾಗಿದೆ. ಇಂತಹ ಹಸ್ತಪ್ರತಿಗಳು ನಾಡಿನ ಬೇರೆ ಬೇರೆ ಭಾಗಗಳಲ್ಲಿ ಮಠಗಳಲ್ಲಿ, ಸಂಸ್ಥೆಗಳಲ್ಲಿ ಸ್ಥಾಪನೆ ಆಗಿರುವುದರ ಜೊತೆಗೆ ಹಲವು ಪ್ರತಿಷ್ಠಾನಗಳು ಹಸ್ತಪ್ರತಿಗಳ ಕಾರ್ಯಚಟುವಟಿಕೆಯ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡಿರುವುದನ್ನು ಕಾಣಬಹುದು. ಈ ಸಂಸ್ಥೆಗಳು ದೇಶದ ಜನತೆಗೆ ಇವುಗಳ ಬಗ್ಗೆ ಅರಿವು

ಮೂಡಿಸುವ ಹಲವು ಜಾಗೃತ ಕಾರ್ಯಕ್ರಮಗಳು, ಸಮ್ಮೇಳನಗಳು, ಗೋಷ್ಠಿಗಳು ಇತ್ಯಾದಿ ಹತ್ತು ಹಲವು ವಿಭಿನ್ನ ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ನಾಡಿನಲ್ಲೇ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಮುಂಚೂಣಿಯಲ್ಲಿದೆ. ಇದರ ಜೊತೆಗೆ ಬೇರೆ ಬೇರೆ ಸಂಸ್ಥೆಗಳೊಂದಿಗೆ ಕೈ ಜೋಡಿಸುವುದು ನಿರಂತರವಾಗಿ ನಡೆದುಕೊಂಡು ಬರುತ್ತಲಿದೆ.

ಹೀಗೆ ಹಸ್ತಪ್ರತಿ ಭಂಡಾರಗಳಿಂದ ಮನುಷ್ಯನ ಬದುಕು ಚೈತನ್ಯದ ಚಿಲುಮೆಯಾಗಿದೆ. ಅಧ್ಯಯನಕಾರರಿಗೆ, ಸಂಶೋಧಕರಿಗೆ, ಸೃಜನಾತ್ಮಕ ಭಾವನೆ ಮತ್ತು ಆಲೋಚನಾ ಕ್ಷೇತ್ರದ ವಿಸ್ತರಣೆಯನ್ನು ಮೂಡಿಸುವುದರ ಜೊತೆಗೆ ಈ ಭಂಡಾರವು ಮಾಹಿತಿ ಮತ್ತು ವಿಜ್ಞಾನ ಶಾಖೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಗ್ರಂಥಗಳು ಜ್ಞಾನದ ಮಾಹಿತಿಯನ್ನು ಹಾಗೂ ವಿಷಯದ ಮೂಲವನ್ನು ತಿಳಿಸುತ್ತವೆ. ಹಸ್ತಪ್ರತಿ ಭಂಡಾರಗಳು ಪೀಳಿಗೆಯಿಂದ ಪೀಳಿಗೆಗೆ ದೇಶದಿಂದ ದೇಶಕ್ಕೆ ಜ್ಞಾನವನ್ನು ವಿಲೀನಗೊಳಿಸುವ ಪ್ರಮುಖ ಸಂಸ್ಥೆಗಳಾಗಿವೆ. ಈ ಭಂಡಾರಗಳು ಜ್ಞಾನವನ್ನು ಪಸರಿಸುವ ಭೂತಕಾಲದ ಸಂಸ್ಕೃತಿಯನ್ನು ಸಂರಕ್ಷಿಸಿ ಭವಿಷ್ಯತ್ಕಾಲಕ್ಕೆ ಕೊಂಡೊಯ್ಯುವ ಕಾರ್ಯ ಹಸ್ತಪ್ರತಿ ಭಂಡಾರಗಳ ಮುಖ್ಯ ಕಾಳಜಿಯಾಗಿದೆ. ಈ ಕಾರಣದಿಂದ ಹಸ್ತಪ್ರತಿ ಭಂಡಾರಗಳು ಮಾನವನ ಬದುಕಿಗೆ ಪ್ರಮುಖ ದಾರಿದೀಪಗಳಾಗಿವೆ. ಹಾಗೆಯೇ ಅವನ ಅಭಿವೃದ್ಧಿಗೆ ಸದಾ ಕಾಲ ಶ್ರಮಿಸುತ್ತಾ ಬಂದಿವೆ. ಇಂತಹ ಹಸ್ತಪ್ರತಿ ಭಂಡಾರಗಳು ನಾಡಿನ ಬೇರೆ ಬೇರೆ ಭಾಗದಲ್ಲಿ ವಿವಿಧ ಮಠಗಳಲ್ಲಿ ಹಾಗೂ ಸರಕಾರಿ ಸಂಸ್ಥೆಗಳಲ್ಲಿ ನೆಲೆಯೂರಿ ತಮ್ಮದೇ ಆದ ವ್ಯಾಪ್ತಿಯಲ್ಲಿ ಸಂಗ್ರಹ, ಸಂರಕ್ಷಣೆ, ಪ್ರಕಟಣೆ, ಸೂಚೀಕರಣ ಇತ್ಯಾದಿ ಚಟುವಟಿಕೆಗಳಿಗೆ ಶ್ರಮಿಸುತ್ತವೆ. ಆಧುನಿಕ ಸಲಕರಣೆಗಳು ಹಾಗೂ ತಜ್ಞರ ಸಲಹೆ ಸೂಚನೆಯನ್ನು ಹಾಗೂ ಸಂಶೋಧಕರ, ಅಧ್ಯಯನಕಾರರ ನೆರವನ್ನು ಪಡೆದು ತಮ್ಮದೇ ಆದ ವಿಶಿಷ್ಟತೆ ಹಾಗೂ ವಿಶೇಷತೆಯನ್ನು ಹೊಂದಿವೆ.

ಇಂದಿನ ಆಧುನಿಕ ಯುಗದಲ್ಲಿ ನಾಡಿನಲ್ಲಿರುವ ಕೆಲವು ಹಸ್ತಪ್ರತಿ ಗ್ರಂಥಾಲಯಗಳು ಸ್ಕ್ಯಾನಿಂಗ್, ಮೈಕ್ರೋಫಿಲಂ, ಜೆರಾಕ್ಸ್ ನಾನಾ ರೂಪದಲ್ಲಿ ಹಸ್ತಪ್ರತಿಗಳನ್ನು ಸಂಗ್ರಹಿಸಿಕೊಡುವುದರ ಮೂಲಕ ಸಂರಕ್ಷಿಸಿ ಅವುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುತ್ತಿದೆ. ಹೀಗೆ ಹಸ್ತಪ್ರತಿ ಗ್ರಂಥಾಲಯಗಳು ತನ್ನದೇ ಆದ ಮಹತ್ವವನ್ನು ಇಂದಿಗೂ ಹೊಂದಿರುವುದು ಈ ಕೆಳಗಿನ ಅಂಶಗಳಿಂದ ತಿಳಿಯಪಡಿಸಲಾಗುವುದು.

ಮನುಷ್ಯನಿಂದ ಮನುಷ್ಯ ಹುಟ್ಟುವ ಹಾಗೆಯೇ ಹಸ್ತಪ್ರತಿಗಳಿಂದ ಅನೇಕ ಹೊಸ ಹೊಸ ಗ್ರಂಥಗಳು ಹುಟ್ಟುತ್ತಿವೆ.

* ಉತ್ತಮ ಗ್ರಂಥಗಳು ನಾಡಿನ ಸಂಸ್ಕೃತಿಯ ಪ್ರತೀಕವಾಗಿವೆ.
* ಪುರಾತನ ಗ್ರಂಥಗಳನ್ನು ಸಂಗ್ರಹಿಸಿ, ಸದುದ್ದೇಶವನ್ನು ಮರೆತು ಹಸ್ತಪ್ರತಿಗಳನ್ನು ಹುಳು ತಿನ್ನಲುಕ್ಕೆ ಬಿಡುವುದು ಒಳ್ಳೆಯದಲ್ಲ.
* ಗ್ರಂಥಗಳು ಬಾಳನ್ನು ಬೆಳಗಿಸುವ ಅಮೃತ ಸಂಜೀವಿನಿ. ಜೀವಿಗಳಿಗೆ ಆಹಾರವಿದ್ದಂತೆ ಮನುಷ್ಯನಿಗೆ ಗ್ರಂಥಗಳು.

* ಗ್ರಂಥಗಳೇ ವಾಚಕನಲ್ಲಿ ಮನಶ್ಶಾಂತಿಯನ್ನು, ಪುಷ್ಟಿಯನ್ನು ಹೆಚ್ಚಿಸುವುದಕ್ಕೆ ಯೋಗ್ಯವಾದವು. ಗ್ರಂಥಗಳೇ ಸಮಾಜದ ಏಳಿಗೆಗೆ ಮೂಲ ಕಾರಣ.
* ಪ್ರಾಚೀನ ಗ್ರಂಥಗಳು ಜ್ಞಾನಾರ್ಜನೆಗೆ ನೆರವು ನೀಡುತ್ತವೆ.
* ಅಪ್ರಕಟಿತ ಕೃತಿಗಳು ಲಭ್ಯವಾಗುತ್ತವೆ.
* ಆದಿಕಾಲದ ಜೀವನಕ್ರಮ ಹಾಗೂ ಬದುಕಿನ ಪದ್ಧತಿಗಳು ಅವುಗಳಿಂದ ತಿಳಿಯುತ್ತವೆ.
* ಗ್ರಂಥಾಲಯದಲ್ಲಿರುವ ಹಸ್ತಪ್ರತಿಗಳು ಹಾಗೂ ಗ್ರಂಥಗಳ ಸುವ್ಯವಸ್ಥಿತವಾದ ಪದ್ಧತಿಯಲ್ಲಿ ವರ್ಗೀಕರಿಸಿ, ಅಂದವಾದ ಅಕ್ಷರಗಳಿಂದ ಸೂಚೀಪತ್ರಗಳಲ್ಲಿ ಬರೆದಿಡಲಾಗುತ್ತದೆ.
* ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಸಂರಕ್ಷಣೆಯ ಬಗ್ಗೆ ಸಿಬ್ಬಂದಿಗೆ ಹೆಚ್ಚಿನ ತರಬೇತಿ ನೀಡುವುದು.
* ಹಸ್ತಪ್ರತಿ ಗ್ರಂಥಾಲಯಗಳಿಗೆ ನುರಿತ ಹಸ್ತಪ್ರತಿ ಅಧ್ಯಯನಗಾರರನ್ನು, ಸಂರಕ್ಷಣಾಕಾರರನ್ನು ನೇಮಕ ಮಾಡಿಕೊಳ್ಳುವುದು.
* ನಾಡಿನಲ್ಲಿರುವ ಹಲವು ಹಸ್ತಪ್ರತಿ ಗ್ರಂಥಾಲಯಗಳಿಗೆ ಆರ್ಥಿಕ ಸಹಾಯ ಸಹಕಾರ ನೀಡುವುದು.
* ಮಠಗಳಲ್ಲಿರುವ ಅನೇಕ ಹಸ್ತಪ್ರತಿಗಳನ್ನು ಗುರುತಿಸಿ ಅವುಗಳಲ್ಲಿರುವ ವಿಷಯವನ್ನು ಪುಸ್ತಕದ ರೂಪದಲ್ಲಿ ಪ್ರಕಟಿಸುವುದು.
* ಹಸ್ತಪ್ರತಿಗಳ ಬಗ್ಗೆ ವಿವಿಧ ಹಸ್ತಪ್ರತಿ ಗ್ರಂಥಾಲಯಗಳೊಂದಿಗೆ ವಿಷಯದ ಹೊಂದಾಣಿಕೆ ವಿನಿಮಯ ಮಾಡಿಕೊಳ್ಳುವುದು.
* ಪ್ರಾಚೀನ ಬರವಣಿಗೆಗಳ ಸಂರಕ್ಷಣೆ.
* ನಾಡಿನ ಮಹತ್ವದ ವಿಚಾರಗಳ ಅವಲೋಕನ.
* ದೇಶದ ಸಂಸ್ಕೃತಿ ಪರಂಪರೆಯ ಶೋಧ.
* ನಾಡಿನ ಮಹಾನ್ ಸಾಧಕರನ್ನು ಗುರುತಿಸುವುದು.
* ಸಾಹಿತ್ಯ ಸಂಸ್ಕೃತಿಯ ಪರಂಪರೆ ಮೆಲುಕು ಹಾಕುವ ಪ್ರಯತ್ನ.
* ಕನ್ನಡ ಹಸ್ತಪ್ರತಿ ಭಂಡಾರಗಳು ಮೂರು ಮತ ಹಾಗೂ ಧರ್ಮದ ಕವಿಗಳಿಂದ ಅನೇಕ ವಿದ್ವಾಂಸರಿಂದ ನಿರ್ಮಿತವಾಗಿ ತ್ರಿವೇಣಿ ಸಂಗಮವೆನಿಸಿದೆ.
* ಹಸ್ತಪ್ರತಿ ಗ್ರಂಥಾಲಯದಲ್ಲಿ ದಿನದಿಂದ ದಿನಕ್ಕೆ ವಿಶಾಲತೆ ಹೆಚ್ಚಾಗಬೇಕು.
* ನಮ್ಮ ಪೂರ್ವಜರು ತಮ್ಮ ಜೀವಕ್ಕಿಂತ ಹೆಚ್ಚು ಹಲವು ಕೃತಿಗಳಿಗೆ, ಗ್ರಂಥಗಳಿಗೆ ಮಹತ್ವ ನೀಡುತ್ತಿದ್ದರು.

ಈ ಎಲ್ಲ ಅಂಶಗಳನ್ನು ಅವಲೋಕಿಸಿದಾಗ ಸಮಾಜಕ್ಕೆ ಹಸ್ತಪ್ರತಿಗಳ ಅವಶ್ಯಕತೆ ಎಷ್ಟು ಎಂಬುದು ಅರಿವಾಗುತ್ತದೆ. ಜೊತೆಗೆ ಇನ್ನಿತರ ಹಲವು ಕಾರಣಗಳಿಂದ ಹಸ್ತಪ್ರತಿ ಭಂಡಾರಗಳನ್ನು ಜೀರ್ಣೋದ್ಧಾರ ಮಾಡುವ ಅನಿವಾರ್ಯತೆ ಇದೆ. ತಜ್ಞರನ್ನು ಸೃಷ್ಟಿಸುವ ಕೆಲಸ ಆಗಬೇಕಾಗಿದೆ. ಕ್ಷೇತ್ರಕಾರ್ಯದ ಮೂಲಕ ನಾಡಿನ ಬೇರೆ ಬೇರೆ ಭಾಗಗಳಿಂದ ಹಸ್ತಪ್ರತಿಗಳನ್ನು ಸಂಗ್ರಹಿಸಿ ಸಂಗೋಪನೆ ಮಾಡುವ ಜವಾಬ್ದಾರಿಯನ್ನು ಹಸ್ತಪ್ರತಿ ಗ್ರಂಥಾಲಯಗಳು ಇನ್ನೂ ಮಾಡಬೇಕಿದೆ. ಇದರಿಂದ ಮರೆಯಾದ ಎಷ್ಟೋ ವಿಷಯಗಳ ಮೇಲೆ ಬೆಳಕು ಚೆಲ್ಲಿದಂತಾಗುತ್ತದೆ. ಇದರಿಂದ ಪ್ರಾಚೀನ ಕಾಲದಿಂದ ಇಂದಿನವರೆಗೆ ಹಸ್ತಪ್ರತಿ ಭಂಡಾರಗಳ ಕಟ್ಟುವ, ಬೆಳೆಸುವ ಕಾರ್ಯ ರಾಜರಿಂದ, ಮಂತ್ರಿಗಳಿಂದ, ನಡೆಯುತ್ತಾ ಬಂದಿದೆ. ಇಂದು ಈ ಕ್ಷೇತ್ರದಲ್ಲಿ ಅನೇಕ ಹೊಸ ಕೆಲಸಗಳನ್ನು ಸರ್ಕಾರದ ಮಟ್ಟದಲ್ಲಿ ಸೃಷ್ಟಿಸಿ, ಜನಮಾನಸದಲ್ಲಿ ಹಸ್ತಪ್ರತಿಗಳ ಬಗೆಗಿರುವ ಮೂಢನಂಬಿಕೆಯನ್ನು ಕಿತ್ತುಹಾಕಿ ಅದರೊಳಗಡೆ ಅಡಕವಾಗಿರುವ ಜ್ಞಾನವನ್ನು ಇಂದಿನ ಪೀಳಿಗೆಗೆ ಮುಟ್ಟಿಸುವ ಕಾರ್ಯವಾಗಬೇಕಿದೆ.

ನಾಡಿನ ಹಸ್ತಪ್ರತಿ ಭಂಡಾರಗಳ ವಿಶೇಷತೆ

ನಾಡಿನ ಬೇರೆ ಬೇರೆ ಭಾಗಗಳಲ್ಲಿ ಸ್ಥಾಪಿತವಾಗಿರುವ ಹಸ್ತಪ್ರತಿ ಭಂಡಾರಗಳು ತಮ್ಮದೇ ಆದ ರೀತಿಯಲ್ಲಿ ಕಾರ್ಯ ಚಟುವಟಿಕೆಯಿಂದ ಕೂಡಿರುವುದನ್ನು ಕಾಣುತ್ತೇವೆ. ಅದು ವಿಷಯದ ದೃಷ್ಟಿಯಿಂದ ಇಲ್ಲವೇ ಸಂರಕ್ಷಣೆಯ ಹಾಗೂ ಸಂಗ್ರಹಿಸುವ ದೃಷ್ಠಿಯಿಂದ ಆಗಿರಬಹುದು ಒಟ್ಟಾರೆ ಹಲವು ದೃಷ್ಟಿಯಿಂದ ವಿಶೇಷತೆಯನ್ನು ಮೈಗೂಡಿಸಿಕೊಂಡಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಿದ ಮಾಹಿತಿಯ ವಿಶೇಷತೆಯನ್ನು ಈ ಕೆಳಗಿನಂತೆ ನೋಡಬಹುದು.

- ವೀರಶೈವ ಮಠಗಳಿಗೆ ಮಹಾಮಠವೆನಿಸಿದ ಬಾಗಲಕೋಟ ಜಿಲ್ಲೆಯ ಬದಾಮಿ ತಾಲ್ಲೂಕಿನ ಶಿವಯೋಗ ಮಂದಿರಲ್ಲಿ ವಿಜಯ ಮಹಾಂತೇಶ ಗ್ರಂಥಾಲಯವಿದೆ. ಸುಮಾರು ೨೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳು ಇಲ್ಲಿ ಸಂಗ್ರಹಗೊಂಡಿವೆ. ಫ.ಗು.ಹಳಕಟ್ಟಿ, ಕೆ.ಜಿ. ಕುಂದಣಗಾರ, ಜಿ.ಎಂ.ಉಮಾಪತಿಶಾಸ್ತ್ರಿಯವರಂಥ ಅಧ್ಯಯನಕಾರರು ಈ ಸಂಗ್ರಹದ ಪ್ರಯೋಜನವನ್ನು ಸಾಕಷ್ಟು ಪಡೆದುಕೊಂಡಿದ್ದಾರೆ. ಈಗಲೂ ವೈವಿಧ್ಯಮಯ ತಾಡೋಲೆ, ಕೋರಿಕಾಗದ ಮತ್ತು ಕಾಗದ ರೂಪದ ಹಸ್ತಪ್ರತಿಗಳು ಇಲ್ಲಿವೆ. ಕಡತಗಳು ಜೊತೆಗೆ ವೀರಶೈವ ಕಾವ್ಯ ಪುರಾಣ, ಶಾಸ್ತ್ರ ಕೃತಿಗಳ ಹಲವು ಪ್ರತಿಗಳು ಅಧಿಕ ಸಂಖ್ಯೆಯಲ್ಲಿವೆ. ವಿಶೇಷವಾಗಿ ಕನ್ನಡ ಲೀಲಾವತಿ ಗಣಿತವೆಂಬ ತಾಳೆಕಟ್ಟಿನ ಸಂಖ್ಯೆ-೧೨೯ ಇದು ಗೋಡೆಯೊಳಗೆ ದೊರೆತಿರುವ ಹಸ್ತಪ್ರತಿಯಾಗಿರುವುದು ವಿಶೇಷ. ಇದರಲ್ಲಿ ಒಟ್ಟು ೬೦ ಗರಿಗಳಿವೆ. ಈ ಹಸ್ತಪ್ರತಿ ಕಬ್ಬಿಣದಿಂದ ತಯಾರಿಸಿದ ಹಸ್ತಪ್ರತಿ ಕಟ್ಟಿನ ಆಕಾರದ ಬಾಕ್ಸಿನಲ್ಲಿ ದೊರೆತಿದೆ. ಇದನ್ನು ಗಮನಿಸಿದರೆ ಪ್ರಾಚೀನರು ಹಸ್ತಪ್ರತಿ ಕಟ್ಟುಗಳನ್ನು ಸಂರಕ್ಷಣೆಯ ದೃಷ್ಟಿಯಿಂದ ಗೋಡೆಯೊಳಗಿಟ್ಟು ಯಾವುದೇ ಕಾಲದಲ್ಲಿಯಾದರೂ ಹಾಳಾಗಬಾರದು ಹಾಗೂ ಮುಂದಿನ ಪೀಳಿಗೆಯವರಿಗೆ

ಉಪಯೋಗವಾಗಲಿ ಎಂಬ ದೂರದೃಷ್ಟಿ ಹೊಂದಿದ್ದರು ಎಂಬುದನ್ನು ಈ ಮೂಲಕ ತಿಳಿಯಬಹುದು.

- ಗದುಗಿನ ತೋಂಟದಾರ್ಯ ಮಠವು ನಾಲ್ಕು ನೂರು ವರ್ಷಗಳ ಇತಿಹಾಸವನ್ನು ಹೊಂದಿದೆ. ಮಠವು ಹಸ್ತಪ್ರತಿಗಳ ಸಂಗ್ರಹ ಮತ್ತು ಸಂರಕ್ಷಣೆ, ಪ್ರಕಟಣೆಯಲ್ಲಿ ಅತೀವ ಕಾಳಜಿ ವಹಿಸಿ ವಿಶಿಷ್ಟವಾದ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದೆ. ಈ ಮಠ ಅಂದಾಜು ೫೦೦ಕ್ಕೂ ಅಧಿಕ ತಾಡೋಲೆ ಮತ್ತು ಕೋರಿಕಾಗದ ಹಸ್ತಪ್ರತಿಗಳನ್ನೊಗೊಂಡ ಸುಸಜ್ಜಿತ ಗ್ರಂಥಭಂಡಾರವನ್ನು ಹೊಂದಿದೆ. ಈ ಗ್ರಂಥಭಂಡಾರದಲ್ಲಿ ಬಸವ, ಚನ್ನಬಸವ, ಅಕ್ಕಮಹಾದೇವಿ, ಪ್ರಭುದೇವ, ಹಡಪದ ಅಪ್ಪಣ್ಣರಂಥ ಶಿವಶರಣರ ವಚನಗಳು, ಭೀಮಕವಿ, ವಿರೂಪಾಕ್ಷ ಪಂಡಿತ, ಗುಬ್ಬಿ ಮಲ್ಲಣಾರ್ಯರಂಥ ವೀರಶೈವ ಕವಿಗಳ ಕಾವ್ಯ ಪುರಾಣಗಳು, ಕೆಸ್ತೂರದೇವ, ಗುರುಬಸವಾರ್ಯ ಹಾಗವಾಡಿ ಮುದ್ವೀರಸ್ವಾಮಿಗಳಂಥ ಸ್ವರವಚನಕಾರರ ಸ್ವರವಚನಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ಇಲ್ಲಿವೆ. ಅಲ್ಲದೇ ತಾರಾವಳಿ, ಅಷ್ಟಕ, ಕಂದ, ತ್ರಿಪದಿ, ಕಾಲಜ್ಞಾನದಂಥ ಲಘುಕೃತಿಗಳ ಕೆಲವು ಹಸ್ತಪ್ರತಿಗಳು ಈ ಭಂಡಾರದಲ್ಲಿರುವುದು ವಿಶೇಷ. ಈ ಮಠವು ಹೆಚ್ಚು ವೀರಶೈವ ಹಸ್ತಪ್ರತಿಗಳ ಸಂಗ್ರಹ, ಪ್ರಕಟಣೆಗೆ ಒತ್ತುಕೊಟ್ಟಿರುವುದನ್ನು ಕಾಣುತ್ತೇವೆ.
- ಬಿ.ಎಂ.ಶ್ರೀ. ಪ್ರತಿಷ್ಠಾನವು ಹಸ್ತಪ್ರತಿ ಸಂರಕ್ಷಣೆಗೆ ವಿಶೇಷ ಆಸಕ್ತಿ ಮತ್ತು ಉತ್ಸುಕತೆ ಹೊಂದಿರುವುದನ್ನು ಕಾಣಬಹುದು. ಪದವಿ ಹಾಗೂ ವಿಶ್ವವಿದ್ಯಾಲಯ ವಿದ್ಯಾರ್ಥಿಗಳಿಗೆ ಹಸ್ತಪ್ರತಿಗಳ ಸಂರಕ್ಷಣೆಯ ಬಗ್ಗೆ ವಿಶೇಷ ತರಬೇತಿ ನೀಡುವುದು. ಹಸ್ತಪ್ರತಿಗಳ ಕಟ್ಟಿನ ಮೇಲೆ ಫೈಬರ್(ಬಿಳಿ) ಬಳಸುತ್ತಿರುವುದರ ಜೊತೆಗೆ ಶುಲ್ಕ ಪಡೆದು ಹಸ್ತಪ್ರತಿಗಳನ್ನು ಸ್ವಚ್ಛಗೊಳಿಸಿ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿಗಳನ್ನು ಪ್ರಕಟಿಸಿರುವುದು ಗಮನಾರ್ಹ.
- ರಾಜ್ಯ ಪತ್ರಾಗಾರ ಇಲಾಖೆ: ಸರಕಾರದ ಪ್ರಮುಖ ದಾಖಲೆಗಳನ್ನು, ಹಸ್ತಪ್ರತಿಗಳನ್ನು ಉತ್ತಮವಾಗಿ ಸಂರಕ್ಷಣೆ ಮಾಡುವುದರ ಜೊತೆಗೆ ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಸ್ಥಾಪಿತವಾಗಿರುವ ಹಸ್ತಪ್ರತಿ ಭಂಡಾರಗಳಲ್ಲಿ ಸಂರಕ್ಷಣಾ ತರಬೇತಿಯನ್ನು ನೀಡುತ್ತದೆ. ಇದರ ಜೊತೆಗೆ ಪ್ರಮುಖ ದಾಖಲೆಗಳನ್ನು ಬ್ಯಾಗಿನ ಆಕಾರದ ಚೀಲಗಳನ್ನು ತಯಾರಿಸಿ, ಅವುಗಳ ಮೂಲಕ ದಾಖಲೆಗಳನ್ನು ಸಂರಕ್ಷಿಸಲಾಗುತ್ತಿದೆ.
- ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿ ಸುಮಾರು ೫೦೦೦ ಕವಿ ಕೃತಿಗಳನ್ನು ಒಳಗೊಳ್ಳುವ ೧,೭೩೫ ಓಲೆಕಟ್ಟು ಮತ್ತು ಹಲವು ಕಾಗದಪ್ರತಿಗಳನ್ನು ಸಂಗ್ರಹಿಸಲಾಗಿದೆ. ಇಲ್ಲಿ ಎಸ್.ಶಿವಣ್ಣನವರು ಮಾಡಿದ ಕಾರ್ಯ ಮಹತ್ವಪೂರ್ಣವಾದುದು. ವಿಶೇಷವೆಂದರೆ 'ಮುದ್ದಣ್ಣನ ರಾಮೇಶ್ವಮೇಧದ ಸ್ವ-ಹಸ್ತಪ್ರತಿ' ಇಲ್ಲಿರುವುದು ಒಂದು ಮಹತ್ವದ ಸಂಗತಿಯಾಗಿದೆ.

- ಬೆಳಗಾವಿಯ ಲಿಂಗಾಯತ ಸಂಶೋಧನ ಕೇಂದ್ರ(ನಾಗನೂರು ಶ್ರೀ ರುದ್ರಾಕ್ಷಿಮಠ) ಸಂಶೋಧಕರಿಗೆ ಸಮಗ್ರ ಮಾಹಿತಿ ನೀಡುವ ಏಕಮೇವ ಸಂಶೋಧನ ಕೇಂದ್ರವಾಗಿದೆ. ಈಗಾಗಲೇ ದೇಶ ವಿದೇಶದಿಂದ ಸಂಶೋಧಕರು ಇಲ್ಲಿಗೆ ಬಂದು ತಮಗೆ ಬೇಕಾದ ಮಾಹಿತಿಯನ್ನು ಪಡೆದುಕೊಂಡಿದ್ದಾರೆ. ಗ್ರಂಥಾಲಯ ತಜ್ಞ ಡಾ.ಎಸ್.ಆರ್. ಗುಂಜಾಳ ಅವರು ಈ ಗ್ರಂಥಾಲಯದ ನಿರ್ದೇಶಕರು. ಗ್ರಂಥಾಲಯ ವಿಜ್ಞಾನದಲ್ಲಿ ಅಪಾರ ಅನುಭವವುಳ್ಳ ಗುಂಜಾಳರು ಈ ಗ್ರಂಥಾಲಯವನ್ನು ವ್ಯವಸ್ಥಿತಗೊಳಿಸಿದ್ದಾರೆ. ಇಲ್ಲಿನ ಹಸ್ತಪ್ರತಿ ಭಂಡಾರದ ವಿಶೇಷತೆಯನ್ನು ಹೀಗೆ ಗುರುತಿಸಬಹುದು. ೨೫೦ ಹಸ್ತಪ್ರತಿ ಕಟ್ಟುಗಳನ್ನೊಳಗೊಂಡ ಭಂಡಾರದಲ್ಲಿ ಹೆಚ್ಚು ಸಂಖ್ಯೆಯ ತಾಳೆಪ್ರತಿಗಳಿವೆ. ಜೊತೆಗೆ ಕೋರಿಕಾಗದ, ಆಧುನಿಕ ಕಾಗದ, ಕಡತಗಳೂ ಇವೆ. ಶರಣಲೀಲಾಮೃತ, ಚೋರಬಸವಚಾರಿತ್ರ್ಯ, ಬಸವಶಿಖಾಮಣಿ, ಶೀಲವಂತಯ್ಯನ ತ್ರಿವಿಧಿ, ಬಸವಪುರಾಣ, ಅನುಭವ ಶಿಖಾಮಣಿ, ರಟ್ಟಮತ, ಪ್ರಭುಲಿಂಗಲೀಲೆ, ಪ್ರೌಢರಾಯನ ಕಾವ್ಯ ಮುಂತಾದ ಅಧಿಕ ಪ್ರಮಾಣದ ಪ್ರತಿಗಳಿವೆ. ಅಲ್ಲದೆ ಶಬ್ದಮಣಿದರ್ಪಣ, ಜ್ಯೋತಿಷ್ಯದಂತಹ ಶಾಸ್ತ್ರಕೃತಿಗಳೂ ಇಲ್ಲಿವೆ. ಈ ಹಸ್ತಪ್ರತಿಗಳಲ್ಲಿ ವೈವಿಧ್ಯಮಯವಾದ ೬೦೦ ಕೃತಿಗಳು ಸೇರ್ಪಡೆಯಾಗಿವೆ.
- ತಾಳೆಪ್ರತಿಗಳನ್ನು ಸಿಟ್ರೆನಲ್ ಆಯಿಲ್, ಬೇವಿನ ಎಲೆಯ ಔಷಧಿಯಿಂದ ಸಂರಕ್ಷಿಸಲಾಗುತ್ತಿದೆ. ಲ್ಯಾಮಿನೇಷನ್ ಹಾಗೂ ಮೈಕ್ರೋಫಿಲಂ ಕಾರ್ಯಯೋಜನೆ ರೂಪಿಸಲಾಗಿದೆ.
- ೨೦೦ ಹಸ್ತಪ್ರತಿ ಕಟ್ಟುಗಳ ವಿವರಣಾತ್ಮಕಸೂಚಿ ಸಂಪುಟಗಳನ್ನು ಡಾ.ಪಿ.ಕೆ.ರಾಠೋಡ ಅವರು ಸಿದ್ಧಪಡಿಸಿ ೧೯೯೮ರಲ್ಲಿ ಶ್ರೀಮಠದ ಮೂಲಕ ಪ್ರಕಟಿಸಿದ್ದಾರೆ.
- ಕನ್ನಡ ಲಿಪಿಯಲ್ಲಿರುವ ಕನ್ನಡ ಮತ್ತು ಸಂಸ್ಕೃತ ಭಾಷೆಯ ೫೮೭ ಕೃತಿಗಳ ವಿವರಗಳು ಇಲ್ಲಿವೆ.
- ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯು ಐದು ಸೂಚಿ ಸಂಪುಟಗಳನ್ನು ಪ್ರಕಟಿಸಲಾಗಿದೆ. ಕನ್ನಡ ಹಸ್ತಪ್ರತಿಗಳ ಮೈಕ್ರೋಫಿಲ್ಮ್ ಸೂಚಿಯನ್ನು ಸಹ ಪ್ರಕಟಿಸಿರುವುದು ಈ ಭಂಡಾರದ ವಿಶೇಷತೆ. ಅಶ್ವಶಾಸ್ತ್ರಕ್ಕೆ ಸಂಬಂಧಿಸಿದ ವಿಶೇಷ ಹಸ್ತಪ್ರತಿ ಈ ಭಂಡಾರದಲ್ಲಿದೆ. ಇದರಲ್ಲಿ ಕುದುರೆಗಳಿಗೆ ಕಾಯಿಲೆ ಹಾಗೂ ರಾಜರು ಕುಳಿತುಕೊಳ್ಳುವ ಹಲವು ವಿಚಾರಗಳು ಇನ್ನಿತರ ಅಂಶಗಳು ಈ ಹಸ್ತಪ್ರತಿಯಲ್ಲಿ ದಾಖಲಾಗಿದೆ.
- ಈ ಭಂಡಾರದಲ್ಲಿ ೧,೩೨೪ ಕೃತಿಗಳ ಪರಿಚಯವನ್ನೊಳಗೊಂಡ ೧೨೦ ಪ್ರಾಚೀನ ಗ್ರಂಥಗಳನ್ನು ಪರಿಷ್ಕರಿಸಿ ಪ್ರಕಟಿಸಲಾಗಿದೆ.
- ಹಸ್ತಪ್ರತಿಗಳ ಸಂರಕ್ಷಣೆಗಾಗಿ ಬೇವಿನ ಎಣ್ಣೆ ಲೇಪನ ಮಾಡಲಾಗುತ್ತಿದೆ. ಇದನ್ನು ವಿಶೇಷವಾಗಿ ಮೇಲುಕೋಟೆಯಿಂದ ತರಿಸಿಕೊಳ್ಳಲಾಗುತ್ತಿದೆ.

- ಚಾಮರಾಜ ಒಡೆಯರ ಅನುಗ್ರಹದಿಂದ ೧೮೯೧ರಲ್ಲಿ ಗವರ್ನ್‌ಮೆಂಟ್ ಓರಿಯಂಟಲ್ ಲೈಬ್ರರಿ ಸ್ಥಾಪಿಸಲಾಯಿತು(Oreantal research institute of Mysore). ಈ ಸಂಸ್ಥೆಯು ಈ ಮೊದಲು ನಾಲ್ಕು ಸೂಚಿ ಸಂಪುಟಗಳನ್ನು ಪ್ರಕಟಿಸಿದೆ. ಇದರಲ್ಲಿ ಒಟ್ಟು ೨೫,೦೦೦ ಅಧಿಕ ಹಸ್ತಪ್ರತಿಗಳ ಸಂಗ್ರಹವಿರುವುದು ಕಂಡುಬರುತ್ತದೆ.
- ಇಲ್ಲಿಯವರೆಗೆ ೧೯ ವರ್ಣನಾತ್ಮಕ ಸೂಚಿಗಳನ್ನು ಪ್ರಕಟಿಸಲಾಗಿದೆ. ಇಲ್ಲಿ ಸಂಸ್ಕೃತಕ್ಕೆ ಸಂಬಂಧಿಸಿದ ಹಸ್ತಪ್ರತಿಗಳು ಅಧಿಕ ಸಂಖ್ಯೆಯಲ್ಲಿವೆ.
- ಇಲ್ಲಿ ವಿಶೇಷವಾಗಿ ಸಿಟ್ರೆನೆಲ್ ಆಯಿಲ್‌ನಿಂದ ಸಂರಕ್ಷಣೆ ಮಾಡಲಾಗುತ್ತಿದೆ. ಹಸ್ತಪ್ರತಿಗಳ ಕಣಜ ಇಲ್ಲಿದೆ.
- ಹಸ್ತಪ್ರತಿಗಳ ಒಳಗಿರುವ ವಿಷಯವನ್ನು ತಿಳಿದುಕೊಳ್ಳಲು ಇಲ್ಲಿಗೆ ವೈದ್ಯಕೀಯ ವಿದ್ಯಾರ್ಥಿಗಳು, ಇಂಜಿನಿಯರಿಂಗ್ ವಿದ್ಯಾರ್ಥಿಗಳು ಭೇಟಿ ನೀಡಿ ಮಾಹಿತಿ ಪಡೆದುಕೊಂಡಿದ್ದಾರೆ.
- ಈ ಭಂಡಾರದಲ್ಲಿ 'ವೀರ ಮಹೇಶ್ವರ ಚಾರು ಸಂಗ್ರಹ'ವೆಂಬ ಹಸ್ತಪ್ರತಿಯು ಒಂದು ಮೀಟರ್‌ಗಿಂತ ಸ್ವಲ್ಪ ಕಡಿಮೆ ಇದೆ. ಇದು ಅತಿ ಚಿಕ್ಕ ಹಸ್ತಪ್ರತಿ ಆಗಿರುವುದು. ಇದರಲ್ಲಿನ ೧ ವ್ಯಾಲ್ಯೂಮ್ ಮಾತ್ರ ಪ್ರಕಟಣೆಯಾಗಿದೆ.
- ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನವು ನಾಡಿನ ಪ್ರಾಚೀನ ಐತಿಹಾಸಿಕ ದಾಖಲೆಗಳ ಸಂಗ್ರಹ, ಸಂರಕ್ಷಣೆಗೆ ತನ್ನದೇ ಆದ ಕೊಡುಗೆ ನೀಡಿದೆ. ಈ ಹಸ್ತಪ್ರತಿ ಭಂಡಾರವು ರಾಜ್ಯದಲ್ಲಿಯೇ ಒಂದು ಮಾದರಿ ಹಸ್ತಪ್ರತಿ ಭಂಡಾರವಾಗಿ ರೂಪುಗೊಂಡಿದೆ. ಸಂರಕ್ಷಣೆಯ ದೃಷ್ಟಿಯಿಂದಲೂ ಭೌತಿಕವಾಗಿ ವಿನೂತನ ಕ್ರಮಗಳನ್ನು ಇಲ್ಲಿ ಅನುಸರಿಸಲಾಗುತ್ತಿದೆ. ಫ್ಯೂಮಿಗೇಷ್ ಛೇಂಬರ್‌ನಿಂದ ಹಸ್ತಪ್ರತಿಗಳನ್ನು ಸಂರಕ್ಷಣೆ ಮಾಡಲಾಗುತ್ತಿದೆ. ಇಲ್ಲಿ ಕನ್ನಡ, ಸಂಸ್ಕೃತ, ತುಳು, ತಿಗಳಾರಿ, ಮಲಯಾಳ, ತೆಲುಗು ಭಾಷೆಯ ತಾಡೋಲೆ, ಕೋರಿಕಾಗದ, ಕಡತ ಹಾಗೂ ದಾಖಲುರೂಪದ ೬೦೦೦ ಹಸ್ತಪ್ರತಿಗಳು ಇಲ್ಲಿ ಸಂಗ್ರಹಗೊಂಡಿವೆ.

ಈ ಭಂಡಾರದಲ್ಲಿನ ವಿಶೇಷತೆಗಳು

- ಕರ್ಣಾಭರಣಸೂರಿ- ಸನ್ಮತನಾಥ ಚರಿತ್ರೆ ಈ ಹಸ್ತಪ್ರತಿಯು ಪ್ರಕಟಣೆಗೆ ಸಿದ್ಧವಾಗುತ್ತಿದೆ.
- ಹಳೇದೇವಾಲಯಗಳ ಜೀರ್ಣೋದ್ಧಾರದಂತೆ ಹಳೆ ಹಸ್ತಪ್ರತಿಗಳನ್ನು ಜೀರ್ಣೋದ್ಧಾರ ಮಾಡಿಕೊಡಲಾಗುತ್ತಿದೆ.
- ಈ ಸಂಸ್ಥೆಯು ಸರಕಾರದಿಂದ ಯಾವುದೇ ಅನುದಾನವನ್ನು ಪಡೆದಿಲ್ಲ.

ಪ್ರಕಟಣೆಗೆ ಸಿದ್ಧವಾಗಿರುವ ಅಪರೂಪದ ಕೃತಿಗಳು

- ರಾಮಚಂದ್ರ ಚರಿತ್ರಪುರಾಣ, ಬಸವಪುರಾಣ, ಚನ್ನಬಸವ ಪುರಾಣ, ಅಮರಕೋಶ, ದೀಪದ ಕಲಿಯರ ಕಾವ್ಯ, ಅಂಕಗಣಿತ, ಸೋಮೇಶ್ವರ ವ್ಯಾಖ್ಯಾನ, ಚಿನ್ಮಯ ಚಿಂತಾಮಣಿ,

ಕನ್ನಡ ಗಾದೆಗಳು, ಸಿಂಹಾಸನ, ಬತ್ತೀಸ ಪುತ್ಥಳೀ ಕಥೆಗಳು, ರಾಮಚಂದ್ರನಾಮ ರತ್ನಾವಳಿ ಮುಂತಾದ ವೈವಿಧ್ಯಮಯ ವಿಷಯಗಳನ್ನೊಳಗೊಂಡ ೩೯ ಕಲ್ಲಚ್ಚಿನ ಕನ್ನಡ ಕೃತಿಗಳ ವಿವರಗಳು ಭಂಡಾರದಲ್ಲಿ ಸಂಗ್ರಹಿಸಲಾಗಿದೆ.

- ಹುಬ್ಬಳ್ಳಿಯ ಮೂರು ಸಾವಿರ ಮಠದ ಹಸ್ತಪ್ರತಿ ಭಂಡಾರವು ಸದ್ಯ ಯಾವುದೇ ಕಾರ್ಯ ನಿರ್ವಹಿಸುತ್ತಿಲ್ಲ. ಈ ಮೊದಲೇ ಇರುವ ಹಸ್ತಪ್ರತಿಗಳನ್ನು ಸಂರಕ್ಷಣೆ ಮಾಡುತ್ತಿರುವುದರ ಜೊತೆಗೆ ಕೆಳದಿ ಗುಂಡಾಜೋಯಿಸರ ಮುಖಾಂತರ ವರ್ಣನಾತ್ಮಕ ಸೂಚಿಯೊಂದನ್ನು ಸಿದ್ಧಪಡಿಸಲಾಗಿದೆ. ಈ ಮಠದಲ್ಲಿ ಲಭ್ಯವಿರುವ ಹಸ್ತಪ್ರತಿಗಳೆಂದರೆ ೨೨೭ ತಾಳೆಪ್ರತಿಗಳು, ೧೫೯ ಕಾಗದಪ್ರತಿಗಳಿವೆ. ಭಾಷೆಯ ದೃಷ್ಟಿಯಿಂದ ಕನ್ನಡ-೩೮೬, ಸಂಸ್ಕೃತ-೮೪, ಮಿಕ್ಕವು ೪ ಹೀಗೆ ಒಟ್ಟು ೬೫೮ ಕಟ್ಟುಗಳಿರುವುದನ್ನು ಕಾಣಬಹುದು. ವಿಶೇಷವಾಗಿ ಹಸ್ತಪ್ರತಿ ಭಂಡಾರದಲ್ಲಿ, ವೇದ, ಆಗಮ, ಉಪನಿಷತ್ತು ಪುರಾಣ, ಚರಿತ್ರೆ, ಕಾವ್ಯ, ನಾಟಕ, ವ್ಯಾಕರಣ, ಛಂದಸ್ಸು, ವೀರಶೈವಾಗಮ, ವೇದಾಂತ, ಧರ್ಮಶಾಸ್ತ್ರಗಳು, ಶತಕ, ರಗಳೆ, ತ್ರಿಪದಿ, ಕಂದ ಗದ್ಯ ವಚನವಾಙ್ಮಯ ಕುರಿತು ಭಿನ್ನ ಭಿನ್ನ ಹಸ್ತಪ್ರತಿಗಳಿರುವುದನ್ನು ನೋಡಬಹುದಾಗಿದೆ.
- ಚಿತ್ರದುರ್ಗದ 'ಮುರುಘರಾಜೇಂದ್ರ ಬೃಹನ್ಮಠ'ದಲ್ಲಿ ಹಸ್ತಪ್ರತಿಗಳನ್ನು ಚಿತ್ರದುರ್ಗದ ಸುತ್ತಮುತ್ತಲ ಕ್ಷೇತ್ರಕಾರ್ಯ ಹಾಗೂ ದಾನಿಗಳ ಕೃಪೆಯಿಂದ ಸಂಗ್ರಹಿಸಲಾಗಿದೆ. ಇವುಗಳ ಸಂರಕ್ಷಣೆಗಾಗಿ ಉತ್ತಮವಾಗಿರುವ ಭಂಡಾರವನ್ನು ನಿರ್ಮಿಸಲಾಗಿದೆ. ಜೊತೆಗೆ ದಾಖಲೆಗಳ ನಿರ್ವಹಣೆ, ಸಂರಕ್ಷಣೆಗೆ ಬೇಕಾಗುವ ಹೊಸ ಹೊಸ ಆಧುನಿಕ ಕ್ರಮಗಳನ್ನು ಅಳವಡಿಸಿಕೊಂಡಿದೆ. ಕಂಪ್ಯೂಟರಿನ ಬಳಕೆ ಮಾಡಲಾಗುತ್ತಿದೆ. ಸಂರಕ್ಷಣೆಗೆ ದೇಶೀಯ ಕ್ರಮ ಆಧುನಿಕ ಕ್ರಮಗಳನ್ನು ಅಳವಡಿಸಿಕೊಂಡಿರುವುದುನ್ನು ಕಾಣುತ್ತೇವೆ. ಈ ಮಠದ ಭಂಡಾರವು ಓದುಗರಿಗೆ, ಆಸಕ್ತರಿಗೆ ಅಧ್ಯಯನಕಾರರಿಗೆ, ಸಂಶೋಧಕರಿಗೆ ಪ್ರವೇಶ ಅಧ್ಯಯನದ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ಈ ಹಸ್ತಪ್ರತಿ ಭಂಡಾರದಲ್ಲಿ ಜನಪ್ರಿಯ ಕಾವ್ಯಗಳು, ಸ್ವರವಚನಗಳು, ಹಾಡುಗಳಿಗೆ ಸಂಬಂಧಿಸಿದ ಪ್ರತಿಗಳು ಅಧಿಕ ಸಂಖ್ಯೆಯಲ್ಲಿವೆ. ಕರ್ನಾಟಕ ಕವಿಚರಿತೆಯಲ್ಲಿ ಉಕ್ತವಾಗದ ಅಕ್ಷರಾಂಕನ ಗದ್ಯ, ಛಂದಸ್ಸಿನ ಗಣನೆಯ ವಾರ್ಧಿಕ, ನಕ್ಷತ್ರ ಚೂಡಾಮಣಿಗಳಂಥ ಅನೇಕ ಕೃತಿಗಳು, ನೂರೊಂದು ಸ್ಥಲದ ವ್ಯಾಖ್ಯಾನ, ಶ್ರಿ ರುದ್ರಭಾಷ್ಯದ ಟೀಕು ಮೊದಲಾದ ಅಪ್ರಕಟಿತ ಕೃತಿಗಳ ಹಸ್ತಪ್ರತಿಗಳಿವೆ. ಈ ಮಠದ ಪರಂಪರೆಯಲ್ಲಿ ಇಮ್ಮಡಿ ಮುರಾಘಾ ಗುರುಸಿದ್ಧನ ಅನೇಕ ಕೃತಿಗಳು ಇಲ್ಲಿವೆ. ಚಿತ್ರದುರ್ಗದ ಪಾಳೇಗಾರರಿಗೆ ಸಂಬಂಧಿಸಿದ ದಾಖಲೆಗಳಿವೆ. ೧೯೯೧ರಲ್ಲಿ ಎಸ್. ಶಿವಣ್ಣನವರ ಪರಿಶ್ರಮದಿಂದಾಗಿ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿಸೂಚಿಯ ಮೊದಲ ಸಂಪುಟ ಪ್ರಕಟಿಸಲಾಗಿದೆ. ಹೀಗೆ ಭಂಡಾರದಲ್ಲಿ ಹಸ್ತಪ್ರತಿಗಳನ್ನು ಜೋಪಾನವಾಗಿ ಕಾಪಾಡಿಕೊಂಡು ಬಂದಿರುವುದರ ಜೊತೆಗೆ ಇರುವ ಹಸ್ತಪ್ರತಿಗಳಲ್ಲಿ ಕೃತಿಗಳನ್ನು ಪ್ರಕಟಣೆ ಮಾಡುವುದರ ಜೊತೆಗೆ ಸೂಚೀಕರಣ ಇನ್ನಿತರ ಅಧುನಿಕ ಸಂರಕ್ಷಣೆಯನ್ನು ಮಾಡುವ ಜವಾಬ್ದಾರಿಯನ್ನು ಈ ಮಠವು ಹೊಂದಿದೆ.

- ಶ್ರವಣಬೆಳಗೊಳದ 'ಆಗಮದರ್ಶನ ಹಸ್ತಪ್ರತಿ ಭಂಡಾರ'ವನ್ನು ಚಾವುಂಡರಾಯನ ಗುರು ನೇಮಿಚಂದ್ರ ಭಟ್ಟಾರಕರು ಸ್ಥಾಪಿಸಿದರು. ಈ ಜೈನಮಠದಲ್ಲಿ ಅಧ್ಯಯನಕ್ಕಾಗಿ ಆಗಮದರ್ಶನ ಹೆಸರಿನ ಹಸ್ತಪ್ರತಿ ಭಂಡಾರವನ್ನು ಬಹು ಹಿಂದೆಯೇ ಆರಂಭಿಸಿದ್ದರು. ಭಂಡಾರದ ಭೌತಿಕ ಸ್ಥಿತಿಯ ಬಗ್ಗೆ ಹೇಳುವುದಾದರೆ ಸುಸಜ್ಜಿತವಾದ ಕಟ್ಟಡ ಹಾಗೂ ಸಂರಕ್ಷಣೆಗೆ ಬೇಕಾಗುವ ವಿವಿಧ ಸಲಕರಣೆಗಳ ಜೊತೆಗೆ ಸಿಟ್ರೆನಲ್ ಆಯಿಲ್ ಮತ್ತು ಕೆಂಪು, ಹಳದಿ ವಸ್ತ್ರವನ್ನು ಬಳಸುವುದರ ಜೊತೆಗೆ ಸಂರಕ್ಷಣೆ, ಸೂಚಿಗೆ ಸಂಬಂಧಿಸಿದಂತೆ ಕಂಪ್ಯೂಟರನ್ನು ಬಳಸಿಕೊಂಡು ಸಂರಕ್ಷಿಸುತ್ತಿರುವುದು ಶ್ಲಾಘನೀಯ. ಪ್ರಸ್ತುತ ಭಂಡಾರದ ಸಂಪೂರ್ಣ ಜವಾಬ್ದಾರಿಯು ಬಿ.ಎಸ್.ಸಣ್ಣಯ್ಯನವರ ನೇತೃತ್ವದಲ್ಲಿ ನಡೆಯುತ್ತಿದೆ. ಸಂಗ್ರಹ ಮತ್ತು ಸಂರಕ್ಷಣೆಗೆ ವಿಶೇಷ ತರಬೇತಿಗಳನ್ನು ನೀಡಲಾಗುತ್ತಿದೆ. ಭಂಡಾರದಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಭಾಷೆಯ ಹಸ್ತಪ್ರತಿಗಳು ಅಧಿಕ ಸಂಖ್ಯೆಯಲ್ಲಿವೆ. ಇಲ್ಲಿ ಕನ್ನಡ ಹಸ್ತಪ್ರತಿಗಳ ಸಂಖ್ಯೆ ಅತ್ಯಂತ ಕಡಿಮೆ ಇವೆ. ಕಾರಣ ಇದೊಂದು ಜೈನ ಧಾರ್ಮಿಕ ಕೇಂದ್ರವಾಗಿರುವುದರಿಂದ ಪ್ರಾಕೃತ ಮತ್ತು ಸಂಸ್ಕೃತ ಹಸ್ತಪ್ರತಿಗಳ ಸಂಗ್ರಹದತ್ತ ಹೆಚ್ಚು ಗಮನ ನೀಡಿರುವುದನ್ನು ಕಾಣಬಹುದು.
- ವಿಶೇಷವಾಗಿ ಜೈನ ಹಸ್ತಪ್ರತಿಗಳೇ ಹೆಚ್ಚು ಸಂಖ್ಯೆಯಲ್ಲಿವೆ. ಅವುಗಳೆಂದರೆ ಚಾವುಂಡರಾಯ ಪುರಾಣ, ಅಗ್ಗಳನ 'ಚಂದ್ರಪ್ರಭ ಪುರಾಣ', 'ನಯಸೇನನ ಧರ್ಮಾಮೃತ', ಪೊನ್ನನ 'ಶಾಂತಿಪುರಾಣ', ಪಾರ್ಶ್ವಪಂಡಿತನ 'ಪಾರ್ಶ್ವನಾಥ ಪುರಾಣ', ಬ್ರಹ್ಮಶಿವನ 'ಸಮಯಪರೀಕ್ಷೆ', ವೃತ್ತವಿಲಾಸನ 'ಧರ್ಮಪರೀಕ್ಷೆ', ನಾಗರಾಜನ 'ಪುಣ್ಯಾಶ್ರಮ ಕಥಾಕೋಶ', ರತ್ನಾಕರವರ್ಣಿಯ 'ಭರತೇಶ ವೈಭವ', ನಾಗಚಂದ್ರನ 'ಪಂಪರಾಮಾಯಣ', ಆಂಡಯ್ಯನ 'ಕಬ್ಬಿಗರ ಕಾವ', ಮೂರನೆಯ ಮಂಗರಸನ 'ನೇಮಿಜನೇಶ ಸಂಗತಿ' ಮುಂತಾದ ಅನೇಕ ಕೃತಿಗಳ ನೂರಾರು ಹಸ್ತಪ್ರತಿಗಳು ಇರುವುದು ವಿಶೇಷವಾಗಿದೆ.
- ಜೈನಧರ್ಮದ ದಕ್ಷಿಣಕಾಶಿಯೆಂದೇ ಪ್ರಸಿದ್ಧವಾಗಿರುವ ಮೂಡುಬಿದಿರೆಯ ದಿಗಂಬರ ಜೈನಮಠ ಮಠದಲ್ಲಿ ಹಸ್ತಪ್ರತಿಗಳಿರುವುದನ್ನು ಕಾಣಬಹುದು. ಮೂಡುಬಿದಿರೆ ಒಂದು ಅಪರೂಪದ ಊರು. ಮಠ–ಬಸದಿಗಳಲ್ಲಿ, ವ್ಯಕ್ತಿಗಳ ಸಂಗ್ರಹದಲ್ಲಿ ನೂರಾರು ಜೈನ ಹಸ್ತಪ್ರತಿಗಳಿವೆ. ಇವುಗಳಲ್ಲಿ ಮೂಡುಬಿದಿರೆಯ ಜೈನಮಠದ ಹಸ್ತಪ್ರತಿ ಭಂಡಾರ ತುಂಬಾ ಮಹತ್ವದ್ದಾಗಿದೆ. ಹಸ್ತಪ್ರತಿ ಸಂರಕ್ಷಣೆಗೆ ಅಗತ್ಯವಾದ ಕಟ್ಟಡವನ್ನು ನಿರ್ಮಿಸಲಾಗಿದೆ. ಜೊತೆಗೆ ಗರಿಗಳ ಕಟ್ಟುಗಳನ್ನು ಕೆಂಪು ಮತ್ತು ಹಳದಿ ವಸ್ತ್ರದಿಂದ ಸುತ್ತಿಡಲಾಗಿದೆ. ಇದರ ಜೊತೆಗೆ ಗರಿಗಳ ಸಂರಕ್ಷಣೆಗೆ ಸಿಟ್ರೆನಲ್ ಆಯಿಲ್ ಮತ್ತು ಬೇವಿನ ಎಣ್ಣೆಯನ್ನು ಬಳಸಲಾಗುತ್ತದೆ. ಸೂಚಿಕಾರ್ಯಕ್ಕೆ ಗಣಕಯಂತ್ರವನ್ನು ಬಳಸುವುದರ ಜೊತೆಗೆ ಅಗತ್ಯ ತರಬೇತಿಗಳನ್ನು ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ನೀಡಲಾಗಿದೆ. ಜೊತೆಗೆ ಹಲವು ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆಗೆ ಸಂಬಂಧಿಸಿದ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗಿದೆ. ಎಲ್ಲಾ ಕಾರ್ಯಗಳು

ಜೈನಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಸಾನಿಧ್ಯದಲ್ಲಿ ಜರುಗುವವು. ಹೀಗೆ ಮುಂದುವರಿದು ಪ್ರಾಚೀನ ಕಾಲದಿಂದಲೂ ಹಸ್ತಪ್ರತಿಗಳನ್ನು ಸಂಗ್ರಹಿಸುತ್ತ ಬರಲಾಗಿದೆ. ಪ್ರಕಟಿತ ಕನ್ನಡ ಪ್ರಾಂತೀಯ ತಾಡಪ್ರತಿಯ ಗ್ರಂಥಸೂಚಿಯ ಪ್ರಕಾರ ಹೀಗೆ ಒಟ್ಟು ೨೦೮೯ ಪ್ರತಿಗಳಿವೆ. ಅವುಗಳೆಂದರೆ ೧೬೪ ಅಧ್ಯಾತ್ಮ, ೧೧೯ ಧರ್ಮ, ೪೭೮ ಯೋಗಶಾಸ್ತ್ರ, ಪ್ರತಿಷ್ಠಾನ, ೨೪ ಭಜನಗೀತೆ, ೧೫ ಶಿಲ್ಪಶಾಸ್ತ್ರ, ೪ ಲಕ್ಷಣ ಕ್ರಿಯಾಕಾಂಡ, ೬೯, ೧೮೨ ಸ್ತೋತ್ರ ಹಸ್ತಪ್ರತಿಗಳಿರುವುದನ್ನು ಕಾಣಬಹುದು. ಈ ಕೇಂದ್ರಕ್ಕೆ ಜೈನಧರ್ಮಶಾಲಾ ಎಂಬುದು ಪರ್ಯಾಯನಾಮ. ಕೆಲವು ವರ್ಷಗಳ ಹಿಂದೆ ಇಮ್ಮಡಿ ನಾಗವರ್ಮನ ವರ್ಧಮಾನ ಪುರಾಣ ಈ ಸಂಸ್ಥೆಯಲ್ಲಿ ಲಭ್ಯವಾಗಿರುವುದು ಬಹುಶಃ ಜೈನ ಹಸ್ತಪ್ರತಿ ಭಂಡಾರಗಳಲ್ಲಿಯೇ ದೊಡ್ಡದೆಂದು ಹೇಳಬಹುದು.

- ಮೂಡುಬಿದಿರೆಯ ಇನ್ನೊಂದು ಜೈನ ಹಸ್ತಪ್ರತಿ ಭಂಡಾರ ಶ್ರೀ ವೀರವಾಣೀ ವಿಲಾಸ ಜೈನ ಸಿದ್ಧಾಂತ ಭವನ. ಇದು ೧೯೩೩ರಲ್ಲಿ ಶ್ರೀ ಲೋಕನಾಥಶಾಸ್ತ್ರಿ ಅವರಿಂದ ಸ್ಥಾಪಿಸಲ್ಪಟ್ಟಿತು. ತಮ್ಮ ವಶದಲ್ಲಿದ್ದ ಹಸ್ತಪ್ರತಿಗಳನ್ನಲ್ಲದೆ, ಅನ್ಯರಿಂದ ಪಡೆದವುಗಳನ್ನು ಸೇರಿಸಿ ಶ್ರೀ ಶಾಸ್ತ್ರಿಗಳು ಸಂಗ್ರಹಿಸಿರುವುದು ಕಾಣಸಿಗುತ್ತವೆ.
- ಈ ಸಿದ್ಧಾಂತ ಬಸದಿಯಲ್ಲಿ ವಿಶೇಷವಾಗಿ ಧವಲಾ, ಜಯಧವಲಾ, ಮಹಾಧವಲಾ, ಹೆಸರಿನ ಅಪೂರ್ವ ಸಿದ್ಧಾಂತ ಗ್ರಂಥಗಳಿವೆ. ಸಿದ್ಧಾಂತ ಗ್ರಂಥಗಳು ಬಸದಿಯಲ್ಲಿ ಪೂಜೆಗೊಳ್ಳುತ್ತಲಿರುವುದರಿಂದ ಈ ಬಸದಿಗೆ ಸಿದ್ಧಾಂತ ಬಸದಿ ಎಂದು ಕರೆಯಲಾಗುತ್ತಿದೆ.
- ಕಾರ್ಕಳದ ಜೈನಮಠದಲ್ಲಿ ಉತ್ತಮವಾದ ಹಸ್ತಪ್ರತಿ ಭಂಡಾರವಿದೆ. ಈ ಭಂಡಾರದಲ್ಲಿ ಹಸ್ತಪ್ರತಿಗಳಿಗೆ ಸೂಕ್ತವಾದ ಕಟ್ಟಡ ನಿರ್ಮಾಣ, ಸಂರಕ್ಷಣೆಗೆ ಅಗತ್ಯವಾದ ಸಲಕರಣೆಗಳು ಹಾಗೂ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಇಲ್ಲಿ ಸೀಮಿತ ಪ್ರಮಾಣದ ಹಸ್ತಪ್ರತಿ ಕಟ್ಟುಗಳು ಇವೆ. ಈ ಭಂಡಾರದ ಇನ್ನೊಂದು ವಿಶೇಷವೆಂದರೆ ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚಿ ಪ್ರಕಾರ ಸಿದ್ಧಾಂತ ೧೯, ಅಧ್ಯಾತ್ಮ ೧, ಧರ್ಮ ೨೫, ಪ್ರತಿಷ್ಠಿತ ೮, ಆರಾಧನಾ-ಪೂಜಾಪಾಠ-ವ್ರತವಿಧಾನ ೯, ನ್ಯಾಯದರ್ಶನ ೪, ವ್ಯಾಕರಣ ೧೦, ಕೋಶ ೮, ಕಾವ್ಯ ೧೮, ಅಲಂಕಾರ ೧, ನೀತಿ-ಸುಭಾಷಿತ ೩, ಪುರಾಣ ೧೦, ಚರಿತ್ರೆ ೨೦, ಕಥಾ ೧೧, ಇತಿಹಾಸ ೩, ಆಯುರ್ವೇದ ೫, ಜ್ಯೋತಿಷ್ಯ ೫, ಗಣಿತ ೪, ಮಂತ್ರಶಾಸ್ತ್ರ ೧೦, ಲೋಕವಿಜ್ಞಾನ ೯, ಲಕ್ಷಣ-ಸಮೀಕ್ಷಾ-ಪಾಕಶಾಸ್ತ್ರ ೪, ಕ್ರಿಯಾಕಾಂಡ ೧೦, ಸ್ತೋತ್ರ ೧೦, ಭಜನಾಗೀತ ೧೧, ಪ್ರಕೀರ್ಣ ೬, ಹೀಗೆ ಒಟ್ಟು ೨೨೪ ಪ್ರತಿಗಳು ಇಲ್ಲಿವೆ. ಈ ಭಂಡಾರದ ವಿಶೇಷತೆಯೆಂದರೆ ಮೈಸೂರಿನ ನೇಮಿಸಾಗರ ವರ್ಣಿಯವರ ಲಲಿತನೇಮಿ ಗ್ರಂಥ. ಈ ಸಂಗ್ರಹದ ಜೊತೆಗೆ ಇನ್ನಿತರೆ ಹಸ್ತಪ್ರತಿಗಳು ಇವೆ.

- ಡಾ.ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ: ಈ ಹಸ್ತಪ್ರತಿ ಭಂಡಾರವು ೧೯೬೨ರಲ್ಲಿ ವಚನ ಸಾಹಿತ್ಯ ಪ್ರಕಟನಾ ಯೋಜನೆಯ ಕೈಗೆತ್ತಿಕೊಂಡು ಅದರ ಅಂಗವಾಗಿ ಹಸ್ತಪ್ರತಿ ಸಂಗ್ರಹ ಕಾರ್ಯವನ್ನು ನಡೆಸಿರುವುದು ಕಂಡುಬರುತ್ತದೆ. ಈ ಭಂಡಾರದ ಕೆಲವು ವಿಶೇಷತೆಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.
- ಹಸ್ತಪ್ರತಿ ಸಂರಕ್ಷಣೆಗಾಗಿ ಪ್ರತ್ಯೇಕ ಕಟ್ಟಡವಿದೆ. ಇದನ್ನು ನೋಡಿಕೊಳ್ಳಲು ಒಬ್ಬ ಸಿಬ್ಬಂದಿ ಇದ್ದಾರೆ.
- ಹಸ್ತಪ್ರತಿ ಸಂರಕ್ಷಣೆಗಾಗಿ ನೀಲಿ ಮತ್ತು ಬಿಳಿ ವಸ್ತ್ರವನ್ನು ಸುತ್ತಲಾಗಿದೆ.
- ಸಿಟ್ರೆನಲ್ ಆಯಿಲ್ ಮತ್ತು ಗುಳಿಗೆ(ಡಾಂಬರು) ಬಳಸುವುದರ ಜೊತೆಗೆ ಪ್ರತ್ಯೇಕ ಕಪಾಟುಗಳನ್ನು ಬಳಸಲಾಗಿದೆ.
- ಹಸ್ತಪ್ರತಿಗಳನ್ನು ಕಾದಂಬರಿ, ನಾಟಕ ಇನ್ನಿತರ ವಿಷಯಗಳಿಗೆ ಅನುಗುಣವಾಗಿ ವರ್ಗೀಕರಿಸಲಾಗಿದೆ
- ಭಂಡಾರದಲ್ಲಿ ಒಟ್ಟು ೭೮೫೦ ಕಟ್ಟುಗಳು ಇವೆ. ಇದರಲ್ಲಿ ೩೦೪೩ ತಾಳೆಪ್ರತಿಗಳು ಹಾಗೂ ೪೭೯೭ ಕಾಗದ ಪ್ರತಿಗಳಿವೆ.
- ೪ ಹೊಸ ಕಾಗದ ಹಸ್ತಪ್ರತಿ ಸೂಚಿಗಳನ್ನು ತಯಾರಿಸುವ ಕಾರ್ಯ ಚಾಲ್ತಿಯಲ್ಲಿದೆ.
- ಭಂಡಾರದಲ್ಲಿರುವ ಬಹುತೇಕ ಹಸ್ತಪ್ರತಿಗಳು ಧರ್ಮಶಾಸ್ತ್ರ, ಜ್ಯೋತಿಷ್ಯ, ಸಾಹಿತ್ಯ, ವೈದ್ಯಕೀಯ, ವ್ಯಾಕರಣ, ಗಣಿತ, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದವುಗಳಾಗಿವೆ.
- ೨೦ರಿಂದ ೩೫ ಲಕ್ಷದ ಅನುದಾನವನ್ನು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದಕ್ಕೆ ತೆಗೆದಿಡಲಾಗಿದೆ.
- ಭಂಡಾರದಲ್ಲಿರುವ ವಿಶೇಷ ಹಸ್ತಪ್ರತಿಗಳೆಂದರೆ ಚಿತ್ರಸಹಿತ ಹಸ್ತಪ್ರತಿಗಳು, ವಿವಿಧ ತಾರಾವಳಿ, ಚನ್ನಬಸವಪುರಾಣ, ಕಿಟೆಲ್ ಅವರಿಗೆ ಸಂಬಂಧಿಸಿದ ಬರಹ ಇತ್ಯಾದಿ ವಿಷಯಕ್ಕೆ ಸಂಬಂಧಿಸಿದ ಹಸ್ತಪ್ರತಿಗಳಿವೆ.
- ಗುಲಬರ್ಗಾ ವಿಶ್ವವಿದ್ಯಾಲಯದ 'ಕನ್ನಡ ಅಧ್ಯಯನ ಸಂಸ್ಥೆಯ' ಹಸ್ತಪ್ರತಿ ಭಂಡಾರ: ೧೯೭೦ರಷ್ಟು ಪೂರ್ವದಲ್ಲಿ ಕನ್ನಡ ವಿಭಾಗ ಅಸ್ತಿತ್ವಕ್ಕೆ ಬಂದರೂ ಹಸ್ತಪ್ರತಿಗಳ ಸಂಗ್ರಹ ಕಾರ್ಯ ಪ್ರಾರಂಭವಾದುದು ೧೯೮೫ರಲ್ಲಿ. ಅಲ್ಲಿಂದ ಈಚೆ ಕೆಲವೇ ಕೆಲವು ವರ್ಷಗಳಲ್ಲಿ ಒಟ್ಟು ೬೦೦೦ ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದೆ. ಅವುಗಳಲ್ಲಿ ೧೮೦ರಿಂದ ೨೫೦ರ ವರೆಗೆ ತಾಳೆಪ್ರತಿಗಳು. ೨೦೦೦ಕ್ಕೂ ಅಧಿಕ ಕಾಗದಪ್ರತಿಗಳು, ಕಡತಗಳು ಹಾಗೂ ಸಚಿತ್ರ ಹಸ್ತಪ್ರತಿಗಳಾದ ಉದ್ಧರಣೆ ಪಟಲಗಳಿವೆ. ಜೊತೆಗೆ ಕಂಠಗಳು ಹಾಗೂ ತಾಮ್ರ ಪತ್ರಗಳು ಇರುವುದನ್ನು ಕಾಣಬಹುದು. ಆದರೆ ಸಂರಕ್ಷಣೆಯಲ್ಲಿ ಮಾತ್ರ ಸ್ವಲ್ಪ ಹಿಂದೆ ಇರುವುದನ್ನು

ಕಾಣಬಹುದು. ಈಗಾಗಲೇ ತಾಡೋಲೆ ಹಸ್ತಪ್ರತಿಗಳ ಸಂಪುಟ-೧, ಪ್ರಕಟಿಸಲಾಗಿದೆ. ಆದರೆ ತಾಡೋಲೆ ಹಸ್ತಪ್ರತಿಗಳ ಸಂಪುಟ-೨ ಪ್ರಕಟಣೆಯ ಸಿದ್ಧತೆಯಲ್ಲಿದೆ. ಇದರ ಜೊತೆಗೆ ೨೦೦೦ ಪ್ರತಿಗಳ ವಿವರಣಾತ್ಮಕ ಸೂಚಿ ಪ್ರಕಟಣೆಯ ಸಿದ್ಧತೆಯಲ್ಲಿದೆ. ಇಲ್ಲಿ ವಿಶೇಷವಾಗಿ **ಕುಮಾರವಿಜಯ ವಿಳಾಸ** ಹೆಸರಿನ ಕಾವ್ಯ ಸಂಪಾದಿಸಿ ಪ್ರಕಟಿಸಲಾಗಿದೆ. ಆದರೂ ಸಂಪಾದನಾ ವಿಭಾಗದ ಕಾರ್ಯ ಚುರುಕಾಗಿ ಸಬಲಗೊಳ್ಳಬೇಕಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ

೧೯೯೧ರ ಅಕ್ಟೋಬರ್ ೨೩ ಕರ್ನಾಟಕದ ಶೈಕ್ಷಣಿಕ-ಸಾಂಸ್ಕೃತಿಕ ಲೋಕದಲ್ಲಿ ಒಂದು ಮಹತ್ವದ ದಿನ. ಅಂದು ಕನ್ನಡ-ಕನ್ನಡಿಗ-ಕರ್ನಾಟಕದ ಸಮಗ್ರ ಸಂಸ್ಕೃತಿಯ ಶೋಧ ಮತ್ತು ಪ್ರಸಾರಗಳಿಗಾಗಿ ಕನ್ನಡ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂತು. ಕನ್ನಡ ವಿಶ್ವವಿದ್ಯಾಲಯ ಪ್ರಥಮ ಕುಲಪತಿಗಳಾಗಿದ್ದ ಡಾ. ಚಂದ್ರಶೇಖರ ಕಂಬಾರ ಅವರ ಹಲವು ಕನಸುಗಳ ಫಲವಾಗಿ ಹಾಗೂ ಅವರ ದೂರದೃಷ್ಟಿ ಕಾರಣವಾಗಿ ವಿಶ್ವವಿದ್ಯಾಲಯದಲ್ಲಿ ವಿನೂತನ ವಿಭಾಗಗಳು ತಲೆಯೆತ್ತಿದ್ದವು.. ಅವುಗಳಲ್ಲಿ ೧೯೯೩ರಲ್ಲಿ ಆರಂಭವಾದ ಹಸ್ತಪ್ರತಿಶಾಸ್ತ್ರ ವಿಭಾಗವೂ ಪ್ರಮುಖವಾಗಿದೆ. ಆದರೆ ಇದರ ಒಂದು ಪ್ರಧಾನ ಅಂಗವೇ ಹಸ್ತಪ್ರತಿ ಭಂಡಾರ. ಇದರ ಇನ್ನೊಂದು ಅಂಗ ಹಸ್ತಪ್ರತಿ ಸಂಪನ್ಮೂಲ ಕೇಂದ್ರವಾಗಿದೆ.

ಕರ್ನಾಟಕದಲ್ಲಿ ಹಸ್ತಪ್ರತಿ ಅಧ್ಯಯನಕ್ಕಾಗಿ ಪ್ರತ್ಯೇಕ ವಿಭಾಗವಾಗಿ ಅಸ್ತಿತ್ವಕ್ಕೆ ಬಂದಿರುವುದು ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ. ಹಸ್ತಪ್ರತಿ ಸಂಗ್ರಹ, ಸಂಪಾದನೆ, ಹೊಸ ರೀತಿಯ ಅಧ್ಯಯನ ಮತ್ತು ಪ್ರಕಟಣೆಗಳನ್ನು ಕೈಗೆತ್ತಿಕೊಂಡಿರುವುದು ಈ ವಿಭಾಗದ ಪ್ರಮುಖ ಕಾರ್ಯಗಳಲ್ಲಿ ಒಂದಾಗಿದೆ. ಆಧುನಿಕಪೂರ್ವ ಕರ್ನಾಟಕದ ಸಾಂಸ್ಕೃತಿಕ ವಿದ್ಯಮಾನಗಳನ್ನು ತಿಳಿದುಕೊಳ್ಳುವಲ್ಲಿ ಹಸ್ತಪ್ರತಿಗಳು ಪ್ರಮುಖ ಆಕರಗಳಾಗಿವೆ. ಇಂಥ ಆಕರ ಸಾಮಗ್ರಿಗಳ ಅಧ್ಯಯನ ಹಾಗೂ ಸಂಗ್ರಹಕ್ಕೆ ಹಲವು ದಶಕಗಳಿಂದ ವಿಭಾಗವು ಕಾರ್ಯ ನಿರ್ವಹಿಸುತ್ತಾ ಬರುತ್ತಿದೆ. ಇದಕ್ಕಾಗಿ ಕ್ಷೇತ್ರಕಾರ್ಯ, ವಿಚಾರಸಂಕಿರಣ, ತರಬೇತಿ ಶಿಬಿರ, ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನ ಮುಂತಾದ ರಚನಾತ್ಮಕ ಚಟುವಟಿಕೆಗಳನ್ನು ವಿಭಾಗ ಹಮ್ಮಿಕೊಂಡಿದೆ. ಈಗಾಗಲೇ ೫೦೦೦ಕ್ಕೂ ಹೆಚ್ಚಿನ ಹಸ್ತಪ್ರತಿಗಳನ್ನು ಸಂಗ್ರಹಿಸಿರುವ ವಿಭಾಗವು ೪೦೦ ಕಟ್ಟುಗಳಂತೆ ೫ ಹಸ್ತಪ್ರತಿ ಸೂಚಿ ಸಂಪುಟಗಳನ್ನು ಪ್ರಕಟಿಸಿದೆ. ಇದರಲ್ಲಿ ಒಟ್ಟು ೧೩ ಕೃತಿಗಳನ್ನು ಪ್ರಕಟಿಸಲಾಗಿದೆ. ಹಸ್ತಪ್ರತಿ ಭಂಡಾರದಲ್ಲಿ ಕನ್ನಡದ ಜೊತೆಗೆ ತೆಲುಗು, ತಮಿಳು, ಸಂಸ್ಕೃತ, ಮರಾಠಿ, ಮಲಯಾಳಿ ಹಸ್ತಪ್ರತಿಗಳಿರುವುದು ಕಂಡುಬಂದಿವೆ.

* **ಪುಸ್ತಕ ಪ್ರಕಟನೆಗಳು**

ಹಸ್ತಪ್ರತಿ ಭಂಡಾರದಲ್ಲಿಯ ಅಪ್ರಕಟಿತ ಹಸ್ತಪ್ರತಿಗಳನ್ನು ಪ್ರಕಟಿಸುವ ಹಿನ್ನೆಲೆಯಲ್ಲಿ ಈಗಾಗಲೇ ೩೫ರಿಂದ ೪೦ಕ್ಕೂ ಹೆಚ್ಚು ಮಹತ್ವದ ಕೃತಿಗಳು ಪ್ರಕಟವಾಗಿವೆ. ಅವುಗಳೆಂದರೆ ಕನ್ನಡ ದಾಖಲು ಸಾಹಿತ್ಯ, ಬಸವಯುಗದ ವಚನೇತರ ಸಾಹಿತ್ಯ, ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ, ಹಳೆಯ

ಲಾವಣಿಗಳು, ಬಸವಕಲ್ಪಧ್ರುವಂ ಹಾಗೂ ಹಸ್ತಪ್ರತಿಗಳ ಸಂಕಥನ ಹಾಗೂ ಕಂಠಪತ್ರ-೧-೨-೩ ಹಳೆಯ ಲಾವಣಿಗಳು, ಹಸ್ತಪ್ರತಿಗಳು: ಭಾಷಿಕ ಅಧ್ಯಯನ, ಸ್ವರವಚನ ತರಂಗ ಇತ್ಯಾದಿ ಹಲವು ಕೃತಿಗಳು ಬೆಳಕನ್ನು ಕಂಡಿವೆ.

ವಿಚಾರ ಸಂಕಿರಣಗಳು-ಕಾರ್ಯಾಗಾರ-ಸಮ್ಮೇಳನಗಳು

ವಿಭಾಗವು ಶೈಕ್ಷಣಿಕ ಯೋಜನೆಗಳ ಜೊತೆಗೆ ಹಸ್ತಪ್ರತಿಗಳ ಬಗ್ಗೆ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಅಭಿರುಚಿ ಮೂಡಿಸಲು ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ, ಕನ್ನಡ ಅಧ್ಯಾಪಕರಿಗೆ ಹಳಗನ್ನಡ ಸಾಹಿತ್ಯ ಅಧ್ಯಯನದ ಆಸಕ್ತಿಗಾಗಿ ಹಳಗನ್ನಡ ಬೋಧನ ತರಬೇತಿ ಶಿಬಿರ ಹಮ್ಮಿಕೊಂಡಿದೆ. ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ವಿದ್ವಾಂಸರನ್ನು ವಿಷಯ ವೈವಿಧ್ಯತೆಯನ್ನು ಪರಿಚಯಿಸುವ ಸಲುವಾಗಿ ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನಗಳನ್ನು ಜರುಗಿಸಲಾಗಿದೆ. ಹೀಗೆ ೧೩ ಸಮ್ಮೇಳನಗಳನ್ನು ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಹಸ್ತಪ್ರತಿತಜ್ಞರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ವಿಭಾಗವು 'ಹಸ್ತಪ್ರತಿ ಅಧ್ಯಯನ' ಹೆಸರಿನಲ್ಲಿ ನಿಯತಕಾಲಿಕೆಗಳನ್ನು ಹೊರಡಿಸುತ್ತಿದೆ. ಹಸ್ತಪ್ರತಿಗಳಂಥ ಐತಿಹಾಸಿಕ ರಾಷ್ಟ್ರೀಯ ಸಂಪತ್ತುಗಳ ಸಂರಕ್ಷಣೆಗಾಗಿ ಪ್ರತಿವರ್ಷ 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹವನ್ನು ಆಚರಿಸಲಾಗುತ್ತಿದೆ. ಇಷ್ಟೆಲ್ಲ ಕಾರ್ಯಕ್ರಮ ಹಾಗೂ ಯೋಜನೆಗಳನ್ನು ಹಾಕಿಕೊಂಡು ಪ್ರಾಚೀನ ಆಕರಗಳ ಮೇಲೆ ಬೆಳಕು ಚೆಲ್ಲುತ್ತಿರುವ ವಿಭಾಗ ಕರ್ನಾಟಕದಲ್ಲೇ ಪ್ರಪ್ರಥಮವೆಂದು ಹೇಳಿದರೆ ತಪ್ಪಾಗಲಾರದು.

*** ಭಂಡಾರದ ವಿಶೇಷತೆಗಳು**

ಈಗ ಸಂಗ್ರಹಿತವಾದ ಹಸ್ತಪ್ರತಿಗಳು ಕನ್ನಡ, ಸಂಸ್ಕೃತ, ದೇವನಾಗರಿ, ತೆಲುಗು, ತಮಿಳು ಮತ್ತು ಮೋಡಿಲಿಪಿಗಳನ್ನೊಳಗೊಂಡಿದ್ದು, ವೈವಿಧ್ಯಮವಾದ ವಿಷಯಗಳನ್ನು ಒಳಗೊಂಡಿವೆ. ವಿಶೇಷವಾಗಿ ಮಧ್ಯಕಾಲೀನ ಸಾಹಿತ್ಯದ ಹಲವು ಕೃತಿಗಳು ಇಲ್ಲಿ ಸಂಗ್ರಹಗೊಂಡಿವೆ.

ಸಂಗ್ರಹಗೊಂಡ ಹಸ್ತಪ್ರತಿಗಳಲ್ಲಿ ತಾಳೆಗರಿ ಮತ್ತು ಕೋರಿಕಾಗದ ಪ್ರತಿಗಳ ಪ್ರಮಾಣ ಪ್ರತಿಶತ ೬೦ ಮತ್ತು ೪೦. ಒಂದು ಇಂಚು ಅಗಲದಿಂದ ಹಿಡಿದು ೪ ಅಡಿ ಉದ್ದನೆಯ, ಒಂದೆರಡು ಪುಟಗಳಿಂದ ಹಿಡಿದು ಒಂದು ಸಾವಿರ ಪುಟಗಳನ್ನೊಳಗೊಂಡ ಕೃತಿಗಳು ಇಲ್ಲಿವೆ. ಉದಾಹರಣೆಗೆ ಅಮರಕೋಶ, ಬಸವಪುರಾಣ, ಬಸವರಾಜ ವಿಜಯ, ಭೈರವೇಶ್ವರನ ಕಾವ್ಯ, ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ರಾಜಶೇಖರ ವಿಳಾಸ, ಶಬರಶಂಕರ ವಿಳಾಸ, ಸ್ಥಲಕಟ್ಟಿನ ವಚನಗಳು, ಕರಣಹಸಿಗೆ, ಪದಮಂತ್ರಗೋಪ್ಯ, ತತ್ವಪದಗಳು, ಕೀರ್ತನೆಗಳಂಥ ಹಲವಾರು ಕೃತಿಗಳು ಲಭ್ಯವಾಗಿರುವುದು ವಿಶೇಷವಾಗಿದೆ. ಈ ಪ್ರದೇಶದಲ್ಲಿ ಚನ್ನಬಸವಣ್ಣನ ಕರಣಹಸಿಗೆ, ಪದಮಂತ್ರಗೋಪ್ಯ, ಚೆನ್ನಪ್ಪ ಕವಿಯ ಯಕ್ಷಗಾನ ರೂಪದ ಶರಣಲೀಲಾಮೃತ, ಗುರುಬಸವನ ಸಪ್ತಕಾವ್ಯಗಳು, ಚಿದಾನಂದವಧೂತರ ಜ್ಞಾನಸಿಂಧು, ಬಸವಕವಿಯ ಬಸವಕಲ್ಪ ಧ್ರುವಂ ಇತ್ಯಾದಿ ಕವಿಗಳ ಹಸ್ತಪ್ರತಿಗಳು ಅಧಿಕ ಸಂಖ್ಯೆಯಲ್ಲಿ ದೊರೆತಿವೆ. ಇವುಗಳ ಜೊತೆಗೆ ಹಲವಾರು ಲಘುಕೃತಿಗಳನ್ನು ಕಾಣಬಹುದು. ಯಂತ್ರ, ಮಂತ್ರ,

ಕುರುಬ ರಟ್ಟಮತ, ವೈದ್ಯ, ಸಮಾಧಿಕ್ರಿಯೆ, ಅಶ್ವ, ಜ್ಯೋತಿಷ್ಯ, ಗಾರ್ದಭ ಮುಂತಾದ ಲೌಕಿಕಶಾಸ್ತ್ರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೆಲವು ಕೃತಿಗಳ ತಾಳೆಗರಿ, ಕೋರಿಕಾಗದದ ಹಸ್ತಪ್ರತಿಗಳೂ ಇಲ್ಲಿವೆ. ವಿವಿಧ ನಮೂನೆಯ ಉದ್ಧರಣೆ ಪಟಲಗಳು, ದಾಖಲೆಗಳು, ಕಡತಗಳು, ಬರವಣಿಗೆಯ ಸಾಧನಗಳು ನೋಡುಗರ ಗಮನವನ್ನು ಸೆಳೆಯುತ್ತವೆ.

ಇತ್ತೀಚೆಗೆ ಕಟ್ಟಿನ ಸಂಖ್ಯೆ ೩೨೪೯ **'ವಾಲ್ಮೀಕಿ ರಾಮಾಯಣ'**ವು ಚಿತ್ರದುರ್ಗ ಜಿಲ್ಲೆಯ ಹರ್ತಿಕೋಟೆಯಲ್ಲಿ ದೊರೆತಿದೆ. ಇದನ್ನು ಗೋವರ್ಧನ ಹನುಮಂತರಾಯರು ಭಂಡಾರಕ್ಕೆ ದಾನವಾಗಿ ನೀಡಿದ್ದಾರೆ.

* ಭಂಡಾರದಲ್ಲಿ ಅತ್ಯಂತ ದೊಡ್ಡಗಾತ್ರದ ತಾಳೆಗರಿ ಹಸ್ತಪ್ರತಿ ಕ್ರಮ ಸಂಖ್ಯೆ: ೩೨೫೧ ಇದಾಗಿದೆ. ಈ ಕೃತಿಯ ಹೆಸರು ಜೈಮಿನಿ ಭಾರತ. ಇದನ್ನು ನಾಗರಾಳದ ದಿಗಂಬರೇಶ್ವರ ಮಠದವರು ನೀಡಿದ್ದಾರೆ.
* ಚಿಕ್ಕ ಹಸ್ತಪ್ರತಿಗಳು: ಶಿವಲಿಖಿತ, ಕಟ್ಟಿನ ಸಂಖ್ಯೆ: ೨೯೮೫, ಇದು ತಾಳೆಪ್ರತಿಯಾಗಿದೆ. ಕ್ರಮಸಂಖ್ಯೆ-೧೪ ಕೃತಿ ಜೋಗುಳ ಪದ. ಇದು ತಾಳೆಪ್ರತಿಯಲ್ಲಿ ರಚಿಸಲಾಗಿದೆ.
* ಭಂಡಾರದಲ್ಲಿ ಚಿತ್ರಸಾಹಿತ್ಯದ ಹಸ್ತಪ್ರತಿಗಳು, ಸುಂದರಲಿಪಿಯ ಹಸ್ತಪ್ರತಿಗಳು, ಸಣ್ಣ ಬರಹದ ಹಸ್ತಪ್ರತಿಗಳು ಹಾಗೂ ವಿಷಯ ವೈವಿಧ್ಯತೆಯ ಹಸ್ತಪ್ರತಿಗಳಿವೆ.
* ಶಾಸ್ತ್ರಸಾಹಿತ್ಯ ಹಾಗೂ ಇತಿಹಾಸ ಆಕರಗಳು ಇತ್ಯಾದಿ ಮಹತ್ವದ ಹಸ್ತಪ್ರತಿಗಳು ಗೋಚರಿಸುತ್ತವೆ.

ವಿಶೇಷವಾಗಿ ಇಡೀ ದೇಶದಲ್ಲಿ 'ಪ್ರಪ್ರಥಮ ಬಾರಿಗೆ ಹಸ್ತಪ್ರತಿಗಳನ್ನು ನೀಡಿರುವವರ ಹೆಸರು ಕಟ್ಟಿನ ಮೇಲೆ ದಾಖಲು ಮಾಡಲು ಪ್ರಾರಂಭಿಸಲಾದ ವಿಭಾಗ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವೆಂದು' ಹೇಳಿದರೆ ತಪ್ಪಾಗಲಿಕ್ಕಿಲ್ಲ.

*** ವಿಭಾಗದ ಅಪ್ರಕಟಿತ ಹಸ್ತಪ್ರತಿಗಳು**

ಭಂಡಾರದಲ್ಲಿ ಹೊಸಕುಮಾರನ ಸಾಂಗತ್ಯ, ಸಾಂಘಿಕಶಾಸ್ತ್ರ, ಕಂಚಿಪುರಾಣ, ಎಳಮಲೆ ಗುರುಶಾಂತದೇವನ ಬಸವಸ್ತೋತ್ರದ ವಚನಗಳು, ಕೊಟ್ಟೂರು ಬಸವೇಶ್ವರನ 'ತಾರಾವಳಿ', ಕುಮಾರಸ್ವಾಮಿ ತಾರಾವಳಿ, ವೀರಗೊಲ್ಲಾಳನ ಚಾರಿತ್ರ್ಯ, ಸಿಂಧುಬಲ್ಲಾಳನ ಚಾರಿತ್ರ್ಯ, ಹಿರಿಯಣ್ಣ ಕವಿಯ ಹಯರತ್ನಶ್ರೇಣಿ, ಕೈವಲ್ಯಸಾರ ಟೀಕು, ಮೋನಪ್ಪಯ್ಯನ ಚರಿತ್ರೆ, ಗುಂಡುಬ್ರಹ್ಮಯ್ಯಗಳ ದಾಖಲೆ, ಕೋರಿಶೆಟ್ಟಿ ಹಸುಬೆಶೆಟ್ಟಿ ನಿರ್ಣಯ, ಚಿದಾನಂದಾವಧೂತ ಚಾರಿತ್ರ್ಯ, ತತ್ವಪದಗಳು, ಲಾವಣಿಪದಗಳು, ಸ್ವರವಚನಗಳಾದಿಯಾಗಿ ಹಲವಾರು ದೊಡ್ಡ ಮತ್ತು ಲಘುಕೃತಿಗಳು ಹೊಸದಾಗಿ ಶೋಧಿಸಲ್ಪಟ್ಟಿದ್ದು, ಅವುಗಳ ಪರಿಷ್ಕರಣ ಕಾರ್ಯ ಪ್ರಗತಿಯಲ್ಲಿದೆ.

ಕಂಪ್ಲಿಯ ದೊಡ್ಡನಗೌಡರ ವಶದಲ್ಲಿದ್ದ ಹೊಸ ಕುಮಾರರಾಮನ ಸಾಂಗತ್ಯವು ದಪ್ಪನೆಯ ಕಾಗದದ ಪ್ರತಿಯಾಗಿದೆ. ೬. ೫X೬ ಅಳತೆಯನ್ನು ಹೊಂದಿದೆ. ಎಂ.ಎಂ.ಕಲಬುರ್ಗಿ ಹಾಗೂ ವೀರಣ್ಣ ರಾಜೂರ ಅವರು ಈ ಕೃತಿಯನ್ನು ಪರಿಷ್ಕರಿಸಿದ್ದಾರೆ(೨೦೦೦).

ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರಸಂಗ್ರಹ ಕೃತಿಯನ್ನು ವೀರೇಶ ಬಡಿಗೇರ ಮತ್ತು ಎಸ್.ಆರ್.ಚನ್ನವೀರಪ್ಪನವರು ೨೦೦೩ರಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ.

ಅಶ್ವಶಾಸ್ತ್ರಕ್ಕೆ ಸಂಬಂಧಿಸಿದ ಹಿರಿಯಣ್ಣ ಕವಿಯ ಹಯರತ್ನ ಶ್ರೇಣಿ ಒಂದು ಕಿರುಕೃತಿಯಾಗಿದೆ. ಹರಪನಹಳ್ಳಿ ಪಾಳೆಯಗಾರ ಬೂದಿ ಬಸಪ್ಪನಾಯಕನ ರಾಜಾಶ್ರಯದಲ್ಲಿ ರಚಿತವಾದ ಈ ಕೃತಿಯನ್ನು ಎಫ್.ಟಿ. ಹಳ್ಳಿಕೇರಿ(೨೦೦೩) ಸಂಪಾದಿಸಿ ಪ್ರಕಟಿಸಿದ್ದಾರೆ.

ಗುಂಡಬ್ರಹ್ಮಯ್ಯನಿಗೆ ಸಂಬಂಧಿಸಿದ ದಾಖಲೆಯೊಂದನ್ನು ಕೆ. ರವೀಂದ್ರನಾಥ ಅವರು, ಎಸ್.ಆರ್. ಚನ್ನವೀರಪ್ಪನವರು ಬಸವಕಲ್ಪಧೃವಂ(೨೦೧೪) ಇತ್ಯಾದಿ ಹಲವು ಅಪ್ರಕಟಿತ ಹಸ್ತಪ್ರತಿಗಳನ್ನು ವಿಭಾಗದ ವಿದ್ವಾಂಸರು ಪರಿಷ್ಕರಿಸಿದ್ದಾರೆ.

ಹಸ್ತಪ್ರತಿ ದಾನಿಗಳು(ಭಂಡಾರದ ಬೆಳವಣಿಗೆಗೆ ಕಾರಣರಾದವರು)

ಯಾವುದೇ ಒಂದು ಸಂಸ್ಥೆ, ಭಂಡಾರ ಇತ್ಯಾದಿ ಬೆಳವಣಿಗೆಗೆ ಅಧ್ಯಯನಕಾರರು, ಸಂಶೋಧಕರು, ಆಸಕ್ತರ ಸಹಾಯ ಸಹಕಾರದ ಜೊತೆಗೆ ನಾಡಿನ ಮಠಾಧಿಪತಿಗಳು, ವಿದ್ವಾಂಸರು ಮತ್ತು ಶ್ರೀ ಸಾಮಾನ್ಯರು ತಮ್ಮಲ್ಲಿ ಸಂರಕ್ಷಿಸಿಕೊಂಡಿದ್ದ ಹಸ್ತಪ್ರತಿಗಳನ್ನು ಭಂಡಾರಕ್ಕೆ ದಾನ ರೂಪದಲ್ಲಿ ನೀಡುವುದರ ಮೂಲಕ ಹಸ್ತಪ್ರತಿ ಭಂಡಾರ ಬೆಳವಣಿಗೆಗೆ ತುಂಬಾ ಸಹಕಾರವಾಗಿರುತ್ತದೆ. ಇದರಿಂದ ವಿಭಾಗವು ಕೂಡ ಇಡೀ ರಾಜ್ಯದಲ್ಲೇ ಪ್ರಥಮ ಬಾರಿಗೆ **ದಾನಿಗಳ ಹೆಸರನ್ನು ಹಸ್ತಪ್ರತಿ ಕಟ್ಟಿನ ಮೇಲೆ ದಾಖಲಿಸಿದೆ. ಇದು ಭಂಡಾರದ ವೈಶಿಷ್ಟ್ಯವಾಗಿದೆ.** ಇಂತಹ **ದಾನಿಗಳ** ವಿವರ ಈ ಕೆಳಗಿನಂತೆ ಇರುತ್ತವೆ. ಉತ್ತಂಗಿಯ ಶ್ರೀ ಶಂಕರಸ್ವಾಮಿಗಳು, ಗದುಗಿನ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು, ಹಂಪಿಯ ಗಾಯಿತ್ರಿ ಪೀಠದ ಶ್ರೀ ದಯಾನಂದಪುರಿ, ಸ್ವಾಮಿಗಳು, ಮಹದೇಶ್ವರ ಬೆಟ್ಟದ ಸಾಲೂರು ಮಠದ ಶ್ರೀ ಮಹದೇವಸ್ವಾಮಿಗಳು, ತಿಪಟೂರು ತಾಲೂಕು ಹೊನ್ನವಳ್ಳಿಯ ಶ್ರೀ ಕರಿಸಿದ್ಧೇಶ್ವರ ಮಠದ ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳು, ಅಂಬಳಿ ನಗರಗಡ್ಡಿ ಮಠದ ಶ್ರೀ ಶಾಂತಲಿಂಗ ಸ್ವಾಮಿಗಳು, ಗಂಗಾವತಿಯ ಅಂಕಲಿಮಠ, ಹೊಸಪೇಟೆಯ ಮಲ್ಲಿಕಾರ್ಜುನಮಠ, ಮುದ್ದಾಬಳ್ಳಿಯ ಶ್ರೀ ಗುರುನಾಥ ಸ್ವಾಮಿಗಳು, ಕಡ್ಲೆಬಾಳುವಿನ ಷ. ಬ್ರ.ಶಶಿಧರ ಮಹಾಸ್ವಾಮಿಗಳು, ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರು, ಬೈಲುವದ್ದಿಗೇರಿಯ ಶ್ರೀ ಜಡೆಸ್ವಾಮಿಗಳು, ಅಂಬಳಿಯ ಗುತ್ತಲನಾಗಮ್ಮ, ಸಾ.ಶಿ.ಮರುಳಯ್ಯ, ಬಿ.ವಿ. ಶಿರೂರ, ವೀರಣ್ಣ ರಾಜೂರ, ಇಟಗಿ ಈರಣ್ಣ, ಎಸ್. ಉಮಾಪತಿ, ಕುಂಚೂರಿನ ಪಿ. ಸತ್ತಾರಸಾಬ್, ಡಬ್ಲ್ಯೂ.ಎನ್. ಬಿಳಿಯಂಗಡಿ, ಹಿರೇಹಾಳದ ಶೆಟ್ಟರ ದೊಡ್ಡಪ್ಪ ಎಸ್. ಶಿವಣ್ಣ ಹೀಗೆ ನಾಡಿನ ಮಠಾಧಿಪತಿಗಳು, ಶ್ರೀ ಸಾಮಾನ್ಯರು ವಿದ್ವಾಂಸರು, ಅಧ್ಯಾಪಕರು ಮತ್ತು ಹಲವು ಗಣ್ಯರು ತಮ್ಮಲ್ಲಿ ಸಂಗ್ರಹಿಸಿಕೊಂಡು ಇಟ್ಟುಕೊಂಡಿರುವ ವಿಭಿನ್ನ ಬಗೆಯ ಹಸ್ತಪ್ರತಿಗಳನ್ನು ಭಂಡಾರಕ್ಕೆ ಉದಾರವಾಗಿ ಕೊಡುವುದರ ಮೂಲಕ ಭಂಡಾರದ ಅಭಿವೃದ್ಧಿ ಹಾಗೂ ಬೆಳವಣಿಗೆಗೆ ಕಾರಣರಾಗಿದ್ದಾರೆ.

ಹಸ್ತಪ್ರತಿ ಭಂಡಾರದ ಸಂರಕ್ಷಣೆಯ ವೈಶಿಷ್ಟ್ಯ

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಒಂದು ಭಾಗವಾಗಿರುವ ಹಸ್ತಪ್ರತಿ ಭಂಡಾರದಲ್ಲಿ ನಾಡಿನ ಬೇರೆ ಬೇರೆ ಭಾಗಗಳಿಂದ ವಿವಿಧ ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದೆ. ಸಂಗ್ರಹಿಸಿದ ಹಸ್ತಪ್ರತಿಗಳನ್ನು ಸಂರಕ್ಷಿಸಲು ಪ್ರಾಚೀನ ವಿಧಾನಗಳಲ್ಲಿನ ಕೆಲವು ವಿಧಾನಗಳನ್ನು ಅಳವಡಿಸಿಕೊಂಡು ಇದರ ಜೊತೆಯಲ್ಲಿ ಆಧುನಿಕ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ನಾಡಿನಲ್ಲಿ ಪ್ರಥಮ ಬಾರಿಗೆ ಹಸ್ತಪ್ರತಿ ಕಟ್ಟುಗಳಿಗೆ ಬಾರೆ ಕಟ್ಟಿಗೆಯ ಪಟ್ಟಿಯನ್ನು ಅಳವಡಿಸುವ ಪ್ರಯೋಗ ಮಾಡಲಾಗಿದೆ. ಕಾರಣ ಬಾರೆಕಟ್ಟಿಗೆ ವಿಷಯುಕ್ತವಾಗಿರುತ್ತದೆ. ಪಟ್ಟಿಗಳನ್ನು ತಯಾರಿಸುವ ಬಗೆ: ಮೊದಲು ಕಟ್ಟಿಗೆ(ಹ.ಪ್ರ) ಅನುಗುಣವಾಗಿ ಪಟ್ಟಿಗಳನ್ನು ಕತ್ತರಿಸಿಕೊಂಡು ಆ ಪಟ್ಟಿಯನ್ನು ಚೆನ್ನಾಗಿ ಪಾಲಿಷ್ ಮಾಡಲಾಗುತ್ತದೆ. ನಂತರ ಅದಕ್ಕೆ ವುಡ್‌ಫೌಡರ್ ಹಾಗೂ ಟರ್‌ಮನ್‌ಲೇಟರ್(ರಾಸಾಯನಿಕ) ಪಟ್ಟಿಗೆ ಲೇಪಿಸಲಾಗುತ್ತದೆ. ನಂತರ ಅದನ್ನು ನೆರಳಿನಲ್ಲಿ ಒಣಗಿಸಲಾಗುತ್ತದೆ. ಒಣಗಿದ ನಂತರ ಅದನ್ನು ಹಸ್ತಪ್ರತಿ ಕಟ್ಟಿಗೆ ಅಳವಡಿಸುತ್ತಾರೆ. ಇದರಿಂದ ಹಸ್ತಪ್ರತಿ ಕಟ್ಟಿನ ಹತ್ತಿರ ಯಾವುದೇ ಹುಳು ಕ್ರಿಮಿಕೀಟಗಳು ಸುಳಿಯುವುದಿಲ್ಲ. ಇದೇ ರೀತಿ ಹಸ್ತಪ್ರತಿ ಕಟ್ಟಿನ ಆಕಾರದ ಬಾಕ್ಸ್ ಡಬ್ಬಿಗಳನ್ನು ಇದೇ ಕಟ್ಟಿಗೆಯಿಂದ ತಯಾರಿಸಲಾಗಿದೆ. ಆದರೆ ಇಲ್ಲಿ ಕೆಂಪು-ಹಳದಿ ವಸ್ತ್ರವನ್ನು ಉಪಯೋಗಿಸದೇ ಹಸ್ತಪ್ರತಿಗಳನ್ನು ಭಂಡಾರದಲ್ಲಿ ಹಾಗೆಯೇ ಜೋಡಿಸಲಾಗಿದೆ.

ಹೀಗೆ ಪರಂಪರಾನುಗತ ವಿಧಾನಗಳ ಜೊತೆಗೆ ಭಂಡಾರದಲ್ಲಿರುವ ಎಲ್ಲಾ ಹಸ್ತಪ್ರತಿಗಳನ್ನು ಕಂಪ್ಯೂಟರ್, ಸ್ಕ್ಯಾನರ್, ಸಿ.ಡಿ. ಇತ್ಯಾದಿ ತಂತ್ರಜ್ಞಾನಗಳ ಮೂಲಕ ಸಂರಕ್ಷಿಸುವ ಕಾರ್ಯ ಕೈಗೊಂಡಿದೆ. ಈಗಾಗಲೇ ಸುಮಾರು ೧೦೦೦೦ಕ್ಕೂ ಹೆಚ್ಚು ಹಸ್ತಪ್ರತಿ ಕಟ್ಟುಗಳ ಸಾವಿರ ಪುಟ ಮತ್ತು ಗರಿಗಳನ್ನು ಇಮೇಜ್ ರೂಪದಲ್ಲಿ ಗಣಕೀಕರಣ ಮಾಡಲಾಗಿದೆ. ಮುರಿದ ತಾಳೆಗರಿಗಳನ್ನು, ಹರಿದ ಕಾಗದ ಪ್ರತಿಗಳನ್ನು ಕಂಪ್ಯೂಟರ್ ಇಮೇಜ್ ಮೂಲಕ ಅವುಗಳನ್ನು ಜೋಡಿಸಿ ದುರಸ್ತಿ ಮಾಡಲಾಗಿದೆ. ಇದರ ಜೊತೆಗೆ ವೈವಿಧ್ಯಮಯ ಬಣ್ಣಗಳಲ್ಲಿ ಮುದ್ರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಹೀಗೆ ಹಸ್ತಪ್ರತಿಗಳನ್ನು ವೆಬ್‌ಸೈಟ್ ಮೂಲಕ ವಿಶ್ವದಾದ್ಯಂತ ಬಳಸಿಕೊಳ್ಳುವ ಅವಕಾಶ ಮಾಡಿಕೊಡಲಾಗಿದೆ. ಇದು ಈ ಭಂಡಾರದ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಇದರ ಜೊತೆಗೆ ಭಂಡಾರದಲ್ಲಿ ಇನ್ನಿತರ ಹಲವು ತಂತ್ರಜ್ಞಾನವನ್ನು ಅಳವಡಿಸುವ ಯೋಜನೆ ರೂಪಿಸಲಾಗುತ್ತಿದೆ. ಇದರಿಂದ ಆಸಕ್ತರು, ಅಧ್ಯಯನಕಾರರು, ಸಂಶೋಧಕರು ಅಳವಡಿಸಿದ ತಂತ್ರಜ್ಞಾನದ ಮೂಲಕ ವಿವಿಧ ಬಗೆಯ ಹಸ್ತಪ್ರತಿಗಳ ಪ್ರಯೋಜನ ಪಡೆದುಕೊಂಡಿರುತ್ತಾರೆ.

ಹಸ್ತಪ್ರತಿ ವಿಭಾಗದಲ್ಲಿರುವ ಅಧ್ಯಾಪಕರು ವಿವಿಧ ಯೋಜನೆಗಳ ಮೂಲಕ ಒಟ್ಟು ಆರು ಸೂಚಿ ಸಂಪುಟಗಳನ್ನು ಪ್ರಕಟಿಸಲಾಗಿದೆ. ಜೊತೆಗೆ ಹಸ್ತಪ್ರತಿ ವ್ಯಾಸಂಗ-೧೪, ವೈಯಕ್ತಿಕ ಯೋಜನೆಗಳ ಮೂಲಕ-ಕನ್ನಡ ಹಸ್ತಪ್ರತಿಗಳು ಮತ್ತು ಸಾಫ್ಟ್‌ವೇರ್ ತಂತ್ರಜ್ಞಾನ, ವಿಷ್ಣುಶರ್ಮನ. ಪಂಚತಂತ್ರ

ಕಥೆಗಳ ಕನ್ನಡ ಸಾರಸಂಗ್ರಹವನ್ನು, ಅಪ್ರಕಟಿತ ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯವನ್ನು ಕ್ಷೇತ್ರೀಯ ಮತ್ತು ಕೇಂದ್ರಿಯ ನೆಲೆಯಿಂದ ಸಂಗ್ರಹಿಸಿ ಪರಿಷ್ಕರಿಸಲಾಗಿದೆ. ಕನ್ನಡ ದಾಖಲು ಸಾಹಿತ್ಯ, ನಾಗಲಿಂಗಸ್ವಾಮಿಯ ಅಪ್ರಕಟಿತ ತತ್ವ ಸಾಹಿತ್ಯವನ್ನು ಸಂಗ್ರಹಿಸಿ 'ನಾಗಲಿಂಗ ಸ್ವಾಮಿ ತತ್ವಪದಗಳು' ಎಂಬ ಹೆಸರಿನಲ್ಲಿ ಪರಿಷ್ಕರಿಸಿ ಸಂಪಾದಿಸಿದ್ದಾರೆ. ಜೊತೆಗೆ ಬಸವ ಕಲ್ಪಧೃವಂ ಪ್ರತಿಯನ್ನು ಪರಿಷ್ಕರಿಸಿ ಸಂಪಾದಿಸಿದ್ದಾರೆ.

ಹಸ್ತಪ್ರತಿಶಾಸ್ತ್ರ ವಿಭಾಗವು ತನ್ನ ಹಸ್ತಪ್ರತಿ ಭಂಡಾರದಲ್ಲಿ ಸಂಗ್ರಹಿಸಿರುವ ೫೦೦೦ಕ್ಕೂ ಹೆಚ್ಚಿನ ಹಸ್ತಪ್ರತಿಗಳನ್ನು ಆಧುನಿಕ ತಂತ್ರಜ್ಞಾನದ ಸಹಾಯದಿಂದ ಸಂರಕ್ಷಿಸುವ, ಪಸರಿಸುವ ಕೆಲಸವನ್ನು ಆರಂಭಿಸಿದೆ. ಹೀಗೆ ವಿಭಾಗವು ವಿಶೇಷ ಯೋಜನೆಗಳ ಮೂಲಕ ಹಾಗೂ ವಾಗ್ವಾದಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಕ್ಷೇತ್ರದಲ್ಲಿ ಹೊಸ ಹೊಸ ಪರಿಷ್ಕರಣೆ, ಪ್ರಕಟಣೆ, ಸೂಚೀಕರಣ ನಡೆಯುತ್ತಿರುವುದು ಗಮನಾರ್ಹ.

ಕೊನೆಟಿಪ್ಪಣಿಗಳು

೧. ಸೀತಾರಾಮಯ್ಯ ಎಂ.ವಿ. ಹಾಗೂ ಚಿದಾನಂದಮೂರ್ತಿ ಎಂ., ೧೯೮೩, ಹಸ್ತಪ್ರತಿಶಾಸ್ತ್ರ(ಸಂ)
೨. ಪಾಟೀಲ ಎಸ್.ಎಸ್., ೧೯೯೪, ಗ್ರಂಥ ಮತ್ತು ಗ್ರಂಥಾಲಯ ಮಹತ್ವ ಪುಟ ೪೧–೪೨.
೩. ಉಮೇಶ ಹಡಗಲಿ, ೨೦೧೨, ಕನ್ನಡ ಸಂಸ್ಕೃತಿ ಮತ್ತು ಗ್ರಂಥಸಂರಕ್ಷಣಾ ಪದ್ಧತಿಗಳು, ಪುಟ ೭೫, ಪಿಎಚ್.ಡಿ. ಪ್ರಬಂಧ.
೪. ಅದೇ, ಪುಟ ೭೫.
೫. ವೀರೇಶ ಬಡಿಗೇರ, ೨೦೦೬, ಕನ್ನಡ ಹಸ್ತಪ್ರತಿಗಳ ಬಹುಪರ್ಠ್ಯೀಯ ನೆಲೆಗಳು, ಪುಟ
೬. ಕಲಬುರ್ಗಿ ಎಂ.ಎಂ., ೧೯೯೩, ಕನ್ನಡ ಹಸ್ತಪ್ರತಿಶಾಸ್ತ್ರ, ಪುಟ ೧೩–೧೪.
೭. ಅದೇ, ಪುಟ ೧೭.
೮. ವೀರೇಶ ಬಡಿಗೇರ, ೨೦೦೮–೦೯, ಹಸ್ತಪ್ರತಿ ಅಧ್ಯಯನ,
೯. ಕಲಬುರ್ಗಿ ಎಂ.ಎಂ., ೧೯೯೩, ಕನ್ನಡ ಹಸ್ತಪ್ರತಿಶಾಸ್ತ್ರ, ಪುಟ ೭.
೧೦. ಹಿರೇಮಠ ಬಿ.ಕೆ., ೧೯೯೨, ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ, ಪು ೧೪೧.
೧೧. ಅದೇ, ಪುಟ ೧೪೧.
೧೨. ಕಲಬುರ್ಗಿ ಎಂ.ಎಂ., ೧೯೯೩, ಕನ್ನಡ ಹಸ್ತಪ್ರತಿಶಾಸ್ತ್ರ, ಪುಟ ೪೬.
೧೩. ಹಿರೇಮಠ ಬಿ.ಕೆ., ೧೯೯೨, ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ, ಪುಟ
೧೪. ಅದೇ, ಪುಟ ೧೪೫.
೧೫. ಅದೇ, ಪುಟ ೧೪೨.
೧೬. ಅದೇ, ಪುಟ ೧೪೭.

೧೭. ಅದೇ, ಪುಟ ೧೪೬.

೧೮. ವೀರೇಶ ಬಡಿಗೇರ, ೨೦೦೬, ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು, ಪುಟ ೧೦೩.

೧೯. ಅದೇ, ಪುಟ ೧೦೩.

೨೦. ಹಿರೇಮಠ ಬಿ.ಕೆ., ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ, ೧೯೯೨, ಪುಟ ೧೪೮, ಪ್ರಕಟಣೆ

೨೧. ಹಳ್ಳಿಕೇರಿ ಎಫ್.ಟಿ., ರವೀಂದ್ರನಾಥ ಕೆ., ೧೯೯೩, ಮೂರನೆಯ ಹಸ್ತಪ್ರತಿಸೂಚಿ, ಸಂಪುಟ, ಪುಟ ೪೧.

೨೨. ಅದೇ, ಪುಟ

೨೩. ವೀರೇಶ ಬಡಿಗೇರ, ೨೦೦೬, ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು, ಪು ೧೦೩.

೨೪. ಕಲಬುರ್ಗಿ ಎಂ.ಎಂ., ೧೯೯೩, ಕನ್ನಡ ಹಸ್ತಪ್ರತಿಶಾಸ್ತ್ರ, ಪುಟ ೯೯.

೨೫. ಅದೇ, ಪುಟ ೫೨.

೨೬. ಅದೇ, ಪುಟ ೫೨.

೨೭. ವೀರೇಶ ಬಡಿಗೇರ, ೨೦೦೬, ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು, ಪುಟ ೯೪.

೨೮. ಅದೇ, ಪುಟ ೧೫೭.

೨೯. ವೀರೇಶ ಬಡಿಗೇರ, ೨೦೦೫, ಹಲಗೆ ಬಳಪ, ಪುಟ ೧.

೩೦. ಅದೇ, ಪುಟ ೧.

೩೧. ವೀರೇಶ ಬಡಿಗೇರ, ೨೦೦೬, ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು, ಪುಟ ೧೦೯.

೩೨. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್(ಸಂ), ೧೯೫೮, ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ, ಅಧ್ಯಾಯ–೧, ಪೀಠಿಕಾ ಸಂಧಿ.

* * *

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಅಧ್ಯಯನದ ಫಲಿತಗಳು

'ಕರ್ನಾಟಕ ಹಸ್ತಪ್ರತಿ ಭಂಡಾರಗಳು: ಪರಂಪರೆ ಮತ್ತು ವರ್ತಮಾನ' ಎಂಬ ವಿಷಯವನ್ನು ಕುರಿತು ಸಂಶೋಧನೆಗೆ ಆಯ್ಕೆ ಮಾಡಿಕೊಂಡಿದ್ದು, ಪ್ರಸ್ತುತ ಸಂಶೋಧನೆಯಲ್ಲಿ ಕಂಡುಕೊಂಡ ಫಲಿತಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

- ಗ್ರಂಥಾಲಯದ ಮತ್ತು ಹಸ್ತಪ್ರತಿ ಭಂಡಾರ ಅರ್ಥ ಒಂದೇ ಆಗಿದ್ದರೂ ವಿಷಯದ ದೃಷ್ಟಿಯಿಂದ ಅವೆರಡೂ ಬೇರೆ ಬೇರೆಯಾಗಿವೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ. ಮುದ್ರಿತ ಪುಸ್ತಕಗಳನ್ನು ಸಂಗ್ರಹಿಸುವ/ಜೋಡಿಸುವ ಹಾಗೂ ಅಧ್ಯಯನ ಹಾಗೂ ಅಭ್ಯಾಸಗಾರರಿಗೆ ತಲುಪಿಸುವ ಸ್ಥಳವೇ ಗ್ರಂಥಾಲಯ. ಇದು ಅಧ್ಯಯನ ಹಾಗೂ ಏಕಾಗ್ರತೆ ಬಯಸುತ್ತದೆ. ಆದರೆ ಇತ್ತೀಚಿನ ಗ್ರಂಥತ್ವದ ಅಧ್ಯಯನ ಮತ್ತು ಪ್ರಯೋಜನದ ದೃಷ್ಟಿಯಿಂದ ಗ್ರಂಥಾಲಯ ಶಾಸ್ತ್ರ(library science) ಹೆಸರಿನ ಹೊಸ ಶಾಸ್ತ್ರವೇ ಆಗಿ ಆಕಾರ ಪಡೆದಿದೆ. ದೇಶ ವಿದೇಶಗಳ ಖ್ಯಾತ ವಿದ್ವಾಂಸರು ಹೊಸ ಹೊಸ ಸಿದ್ಧಾಂತಗಳನ್ನು ಶೋಧಿಸಿ ಗ್ರಂಥಾಲಯ ಶಾಸ್ತ್ರವನ್ನು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ(library and imformation science) ಎಂಬ ಅರ್ಥಕ್ಕೆ ಮುಟ್ಟಿಸಿದ್ದಾರೆ.
- ಕೈಯಿಂದ ರೂಪ ಪಡೆದ ಪ್ರಾಚೀನ ಬರವಣಿಗೆಗೆ ಹಸ್ತಪ್ರತಿ(Manuscript) ಎಂದು ಅರ್ಥ. ಇಂತಹ ಹಸ್ತಪ್ರತಿಗಳನ್ನು ಒಂದಡೆ ಸಂಗ್ರಹಿಸಿ ಆಸಕ್ತರಿಗೆ, ವಿದ್ವಾಂಸರಿಗೆ, ಅಧ್ಯಯನಕಾರರಿಗೆ ಸುಲಭವಾಗಿ ದೊರಕುವಂತೆ ವ್ಯವಸ್ಥೆ ಇರುವ ಸ್ಥಳಕ್ಕೆ ಹಸ್ತಪ್ರತಿ ಗ್ರಂಥಾಲಯ(ಹಸ್ತಪ್ರತಿ ಭಂಡಾರ)ವೆಂದು ಹೇಳಲಾಗಿದೆ. ಆದರೆ ಗ್ರಂಥಾಲಯ ಮತ್ತು ಹಸ್ತಪ್ರತಿ ಭಂಡಾರಕ್ಕೆ ತುಂಬಾ ವ್ಯತ್ಯಾಸವಿರುವುದನ್ನು ಗುರುತಿಸಲಾಗಿದೆ. ಹಸ್ತಪ್ರತಿ ಭಂಡಾರವು ತಾಳ್ಮೆ, ಸಹನೆ, ಏಕಾಗ್ರತೆ, ಅಧ್ಯಯನ, ಸಂಗ್ರಹಣೆ, ಪ್ರಕಟಣೆ, ಸೂಚೀಕರಣ, ಸಂರಕ್ಷಣೆ ಬಯಸುತ್ತದೆ. ಇಂತಹ ವ್ಯತ್ಯಾಸವನ್ನು ಅಧ್ಯಾಯದಲ್ಲಿ ಗುರುತಿಸಿ ವಿವರಿಸಲಾಗಿದೆ.

- ಈಗಾಗಲೇ ಭಂಡಾರಗಳಲ್ಲಿ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನು ಭೌತಿಕವಾಗಿ, ವೈಜ್ಞಾನಿಕ ಉಪಕ್ರಮಗಳಿಂದ ಸಂರಕ್ಷಿಸುವ ಪ್ರಯತ್ನ ನಡೆದಿದೆ. ಮುಂದಿನ ದಿನಗಳಲ್ಲಿ ಇಂತಹ ಸಂರಕ್ಷಣಾ ಉಪಕ್ರಮಗಳನ್ನು ಮತ್ತಷ್ಟು ಉನ್ನತೀಕರಿಸುವ ಅಗತ್ಯವಿದೆ. ಹೀಗಿರುವ ಬಹುತೇಕ ಹಸ್ತಪ್ರತಿ ಭಂಡಾರಗಳು ಆಧುನಿಕ ಸಂರಕ್ಷಣಾ ಉಪಕ್ರಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಅಗತ್ಯವಿದೆ ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ.
- ೧೫ನೆಯ ಶತಮಾನದಲ್ಲಿ ದೊರೆತ 'ಆಕಾಶಭೈರವಕಲ್ಪದ' ಎಂಬ ಹಸ್ತಪ್ರತಿಯಲ್ಲಿ ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದ ಕೆಲವು ಸಂಗತಿಗಳಿವೆ. ಈ ಕೃತಿಯ ೩೨ನೆಯ ಪಟಲದಲ್ಲಿ ಅರಮನೆಯ ಒಳಾಂಗಣ ಒಳಕೊಠಡಿಗಳು ಹೇಗಿರಬೇಕೆಂಬುದನ್ನು ತಿಳಿಸುವುದರ ಜೊತೆಗೆ ಹಸ್ತಪ್ರತಿ ಭಂಡಾರದ ಕಟ್ಟಡವು ಎಲ್ಲಿ, ಹೇಗಿರಬೇಕೆಂಬುದನ್ನು ಸಂಪೂರ್ಣವಾಗಿ ವಿವರಿಸಲಾಗಿದೆ. ಇಂತಹ ಮಹತ್ವದ ಸಂಗತಿಗಳನ್ನು ಈ ಅಧ್ಯಯನದಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.
- ಒಂದು ಹಸ್ತಪ್ರತಿ ಗ್ರಂಥಾಲಯದಲ್ಲಿ ೧೨ಕ್ಕೂ ಹೆಚ್ಚು ವಿಭಾಗಗಳು ಇರುತ್ತವೆ. ಅವುಗಳೆಂದರೆ ೧. ಆಕರಣ ವಿಭಾಗ, ೨. ತಾಂತ್ರಿಕ ವಿಭಾಗ, ೩. ಸಂರಕ್ಷಣಾ ವಿಭಾಗ, ೪. ಗ್ರಂಥಸಂಪಾದನೆಯ ವಿಭಾಗ, ೫. ಗ್ರಂಥ ಪರಿಚಲನೆಯ ವಿಭಾಗ, ೬. ಅಧ್ಯಯನ ವಿಭಾಗ, ೭. ಗ್ರಂಥಾಲಯ ವಿಭಾಗ, ೮. ಯಂತ್ರೋಪಕರಣ ವಿಭಾಗ, ೯. ಪ್ರದರ್ಶನ ವಿಭಾಗ, ೧೦. ಸಮಾಲೋಚನ ವಿಭಾಗ, ೧೧. ಸಭಾಗೃಹ ವಿಭಾಗ, ೧೨. ವಿಶ್ರಾಂತಿ ವಿಭಾಗ ಜೊತೆಗೆ ಹೊಸದಾಗಿ ಎರಡು ವಿಭಾಗಗಳನ್ನು ಸೇರಿಸಿದರೇ ಉತ್ತಮವೆಂದು ಹೇಳಬಹುದು. ೧. ಕ್ಷೇತ್ರಕಾರ್ಯದ ಬಗ್ಗೆ(ಸಂಗ್ರಹಿಸುವ) ತರಬೇತಿ ವಿಭಾಗ, ೨. ಮಾಹಿತಿ ವಿನಿಮಯ ವಿಭಾಗ ಇಂತಹ ಕೆಲವು ಸಂಗತಿಗಳನ್ನು ಈ ಅಧ್ಯಯನದಲ್ಲಿ ವಿವರಿಸಲಾಗಿದೆ.
- ಪ್ರಾಚೀನ ಕಾಲದ ಭಾರತದಲ್ಲಿ ಅನೇಕ ಪ್ರಸಿದ್ಧಿ ಪಡೆದ ವಿಶ್ವವಿದ್ಯಾಲಯಗಳು ಹಾಗೂ ಗ್ರಂಥಾಲಯಗಳ ಉಲ್ಲೇಖವನ್ನು ಚೀನಾದ ಪ್ರವಾಸಿಗರು ಹಾಗೂ ಭಾರತೀಯ ವಿದ್ವಾಂಸರು ಮಾಡಿದ್ದಾರೆ. ಅಂದಿನ ಸಂದರ್ಭದಲ್ಲಿ ಭಾರತದ ಕೆಲವು ವಿಶ್ವವಿದ್ಯಾಲಯಗಳು ಜಗತ್ಪ್ರಸಿದ್ಧವಾಗಿದ್ದವು. ಅವುಗಳೆಂದರೆ ನಲಂದ, ತಕ್ಷಶಿಲೆ, ವಿಕ್ರಮಶಿಲೆ, ವಲ್ಲಭಿ ವಿದ್ಯಾಕೇಂದ್ರ, ಉಜ್ಜಯಿನಿ, ಅಮರಾವತಿ, ಉದಯಾಂತಪುರ ಮೊದಲಾದ ಶಿಕ್ಷಣ ಸಂಸ್ಥೆಗಳಲ್ಲಿ ಹಸ್ತಪ್ರತಿ ಗ್ರಂಥಾಲಯಗಳಿದ್ದವೆಂದು ಅಧ್ಯಯನದಿಂದ ತಿಳಿದುಬಂದಿದೆ. ಪುನಃ ಕಾರ್ಯಚಟುವಟಿಕೆಗೆ ಆರಂಭಿಸಿರುವ ನಲಂದ ವಿಶ್ವವಿದ್ಯಾಲಯವು ಇಂದಿನ ಬಿಹಾರ ರಾಜ್ಯದ ಬಾರಾಗಾಂವ್ ಎಂಬ ಹಳ್ಳಿಯಲ್ಲಿದೆ. ಈ ವಿಶ್ವವಿದ್ಯಾಲಯದಲ್ಲಿ ರತ್ನೋದರ, ರತ್ನರಂಜಕ ಹಾಗೂ ರತ್ನಾಗಾರವೆಂಬ ಮೂರು ಭವ್ಯ ಭವನಗಳು ಹಸ್ತಪ್ರತಿ ಗ್ರಂಥಾಲಯಕ್ಕಾಗಿ ಮೀಸಲಿದ್ದವು ಎಂಬುದನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

- ಕರ್ನಾಟಕದಲ್ಲಿರುವ ಒಟ್ಟು ಹಸ್ತಪ್ರತಿ ಭಂಡಾರಗಳನ್ನು ಈ ರೀತಿ ವರ್ಗೀಕರಿಸಲಾಗಿದೆ. ಅವು ಇಂತಿವೆ.

  ೧. ಸರಕಾರಿ ಹಸ್ತಪ್ರತಿ ಭಂಡಾರಗಳು, ೨. ಅರೆಸರಕಾರಿ ಹಸ್ತಪ್ರತಿ ಭಂಡಾರಗಳು, ೩. ಖಾಸಗಿ ಹಸ್ತಪ್ರತಿ ಭಂಡಾರಗಳು. ಈ ಹಸ್ತಪ್ರತಿ ಭಂಡಾರಗಳಲ್ಲಿ ಪ್ರಸ್ತುತ ನಡೆಯುವ ಕಾರ್ಯಚಟುವಟಿಕೆ ಹಾಗೂ ಹಸ್ತಪ್ರತಿಗಳನ್ನು ಸಂಗ್ರಹಿಸುವ, ಸಂರಕ್ಷಿಸುವ, ಕಾರ್ಯಯೋಜನೆ ರೂಪಿಸಿಕೊಂಡಿರುವ ರೀತಿನೀತಿಗಳ ಬಗ್ಗೆ ಅಧ್ಯಯನದಲ್ಲಿ ಸಂಪೂರ್ಣವಾಗಿ ಅವಲೋಕಿಸಲಾಗಿದೆ.

- ಕರ್ನಾಟಕದಲ್ಲಿರುವ ಪ್ರಮುಖ ಮಠ, ಮಂದಿರಗಳಲ್ಲಿ ಧರ್ಮದ ಹಿನ್ನೆಲೆಯಲ್ಲಿ ಸ್ಥಾಪಿತವಾಗಿರುವ ಹಸ್ತಪ್ರತಿ ಸಂಗ್ರಹ, ಸಂರಕ್ಷಣೆಯ ಕೇಂದ್ರಗಳನ್ನು ಗುರುತಿಸಲಾಗಿದೆ. ಹಾಗೆಯೇ ಹಸ್ತಪ್ರತಿಗಳನ್ನು ಒಂದು ಕೋಣೆಯಲ್ಲಿ ಕೂಡಿಹಾಕಿ ಅವುಗಳನ್ನು ಸ್ಥಗಿತಗೊಳಿಸಿದ ಬಗ್ಗೆಯೂ ಚರ್ಚಿಸಿದೆ. ಜೊತೆಗೆ ನಾಡಿನ ಕೆಲವೇ ಕೆಲವು ಮಠಗಳಲ್ಲಿರುವ ಹಸ್ತಪ್ರತಿ ಗ್ರಂಥಾಲಯಗಳಲ್ಲಿ ನಡೆಯುತ್ತಿರುವ ಸಂಗ್ರಹ, ಸಂರಕ್ಷಣೆ, ಪ್ರಕಟಣೆ, ಸೂಚೀಕರಣ ಹಾಗೂ ಕಾರ್ಯಯೋಜನೆಯ ಬಗ್ಗೆ ಅಧ್ಯಯನದಲ್ಲಿ ವಿವರಿಸಲಾಗಿದೆ.

- ಕರ್ನಾಟಕದಲ್ಲಿರುವ ಹಸ್ತಪ್ರತಿ ಸಂರಕ್ಷಣಾ ಕೇಂದ್ರಗಳು ಹಾಗೂ ಹಸ್ತಪ್ರತಿ ಭಂಡಾರಗಳಲ್ಲಿಯ ಹಸ್ತಪ್ರತಿಗಳ ಸಂರಕ್ಷಣೆಯ ವೈವಿಧ್ಯತೆಯ ಬಗ್ಗೆ ಕ್ಷೇತ್ರಕಾರ್ಯ ಸಂದರ್ಭದಲ್ಲಿ ವೀಕ್ಷಿಸುವುದರ ಮೂಲಕ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಸಂರಕ್ಷಣೆಯ ಭಿನ್ನತೆಗಳನ್ನು ಗುರುತಿಸಲಾಗಿದೆ. ಉದಾಹರಣೆಗೆ ಬೇವಿನ ಎಣ್ಣೆ, ಸಿಟ್ರೆನಲ್ ಆಯಿಲ್, ಕೆಂಪು, ಹಳದಿ, ನೀಲಿವಸ್ತ್ರ, ಹಾಗೂ ಬಾರೆಕಟ್ಟಿಗೆ, ಫೈಬರ್ ಪ್ಲೇಟ್(ಬಿಳಿ). ಇತ್ಯಾದಿ ಸಂರಕ್ಷಣಾ ಪರಿಕರಗಳನ್ನು ಬಳಸಿಕೊಂಡಿದ್ದಾರೆ. ಇಂತಹ ಸಂರಕ್ಷಣಾ ವಿಧಿವಿಧಾನಗಳ ಬಗ್ಗೆ ಅಧ್ಯಯನದಲ್ಲಿ ವಿವರಿಸಲಾಗಿದೆ.

- ಹಸ್ತಪ್ರತಿಗಳ ಪ್ರಾಚೀನ ಸಂರಕ್ಷಣೆಯ ವಿಶೇಷತೆಗೆ ನಿದರ್ಶನವೆಂದು ಹೇಳಬಹುದಾದರೆ ನಾಡಿನ ವೀರಶೈವ ಮಠಗಳಿಗೆ ಮಹಾಮಠವೆನ್ನಿಸಿದ್ದ ಬದಾಮಿಯ ಶಿವಯೋಗ ಮಂದಿರದ ಶ್ರೀ ವಿಜಯ ಮಹಾಂತೇಶ ಗ್ರಂಥಾಲಯದಲ್ಲಿ ಹಸ್ತಪ್ರತಿ ಕಟ್ಟಿನ ಸಂಖ್ಯೆ – ೧೭೯ ಶ್ರೀತಾಳೆ 'ಕನ್ನಡ ಲೀಲಾವತಿಗಣಿತ'ವೆಂಬ ಹಸ್ತಪ್ರತಿಯಲ್ಲಿ ಒಟ್ಟು ೬೦ ಗರಿಗಳಿರುತ್ತವೆ. ಇದು ಗೋಡೆಯೊಳಗೆ ದೊರೆತಿರುವ ಮಹತ್ವದ ಹಸ್ತಪ್ರತಿಯಾಗಿದೆ. ಹೀಗೆ ಪ್ರಾಚೀನ ಕಾಲದಲ್ಲಿ ಮಹತ್ವದ ಹಸ್ತಪ್ರತಿಗಳನ್ನು ಗೋಡೆಯೊಳಗೆ ಗೌಪ್ಯವಾಗಿಟ್ಟು ಸಂರಕ್ಷಿಸುತ್ತಿದ್ದರು ಎಂಬ ಮಹತ್ವದ ಅಂಶ ಇದರಿಂದ ತಿಳಿದಿದೆ. ಇನ್ನೊಂದು ಮಹತ್ವದ ಸಂಗತಿಯೆಂದರೆ, ಕಬ್ಬಿಣದಿಂದ ಮಾಡಿದ ಕಟ್ಟಿನ ಆಕಾರದ ಡಬ್ಬಿಗಳನ್ನು ಗ್ರಂಥಾಲಯದಲ್ಲಿ ಗಮನಿಸಲಾಗಿದೆ. ಇದರಿಂದ ಹಸ್ತಪ್ರತಿಗಳನ್ನು ಅದರಲ್ಲಿ ಸಂರಕ್ಷಿಸುತ್ತಿದ್ದರು ಎಂಬ ಮಾಹಿತಿ ಲಭ್ಯವಾಗುತ್ತದೆ. ಆದರೆ

ಇಲ್ಲಿರುವ ಸಾವಿರಾರು ಮಹತ್ವದ ಹಸ್ತಪ್ರತಿಗಳು ಸಂರಕ್ಷಣೆಯಿಲ್ಲದೆ ಹುಳುಗಳಿಗೆ ಆಹಾರ ಆಗುತ್ತಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ. ಅವುಗಳನ್ನು ವ್ಯವಸ್ಥಿತವಾಗಿ ಸಂರಕ್ಷಿಸುವ ಕಾರ್ಯ ಜರೂರು ಆಗಬೇಕಾಗಿದೆ.

- ಕರ್ನಾಟಕದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿತವಾಗಿರುವ ಹಸ್ತಪ್ರತಿ ಭಂಡಾರಗಳಲ್ಲಿ ನಡೆಯುವ ಶೈಕ್ಷಣಿಕ ಚಟುವಟಿಕೆಗಳನ್ನು ಇಂದು ಕೆಲವೇ ಕೆಲವು ವಿಶ್ವವಿದ್ಯಾಲಯಗಳು ನಿರ್ವಹಿಸುತ್ತಿರುವುದನ್ನು ಬಿಟ್ಟರೆ, ಉಳಿದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಈ ಕಾರ್ಯ ಭಾಗಶಃ ಮಂದಗತಿಯಲ್ಲಿ ನಡೆಯುತ್ತಿರುವುದು ಕಂಡುಬರುತ್ತದೆ.
- ಕರ್ನಾಟಕದ ಕೆಲವು ಸಂಘ ಸಂಸ್ಥೆಗಳು, ಪ್ರತಿಷ್ಠಾನಗಳ ಅಡಿಯಲ್ಲಿ ಸ್ಥಾಪಿತವಾಗಿರುವ ಹಸ್ತಪ್ರತಿ ಭಂಡಾರಗಳಾದ ೧. ಬಿ.ಎಂ.ಶ್ರೀ. ಪ್ರತಿಷ್ಠಾನ ಬೆಂಗಳೂರು ೨. ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ ಹಾಗೂ ಮೂಡುಬಿದಿರೆಯಲ್ಲಿ ಸ್ಥಾಪಿತವಾಗಿರುವ ಜೈನಮಠದ ಹಸ್ತಪ್ರತಿ ಸಂಗ್ರಹಾಲಯ ಹಾಗೂ ಶ್ರವಣಬೆಳಗೊಳದ ಆಗಮದರ್ಶನ ಹಸ್ತಪ್ರತಿ ಭಂಡಾರಗಳು ಅತ್ಯಂತ ಉತ್ಸುಕ ರೀತಿಯಿಂದ ಹೊಸ ಹೊಸ ಯೋಜನೆಯನ್ನು ರೂಪಿಸಿಕೊಳ್ಳುವುದರ ಮೂಲಕ ಹಾಗೂ ನುರಿತ ಹಸ್ತಪ್ರತಿತಜ್ಞರ ಮುಂಚೂಣಿಯಲ್ಲಿ ಸಂಗ್ರಹ, ಸಂರಕ್ಷಣೆ, ಸೂಚೀಕರಣ ಹಾಗೂ ಅಪ್ರಕಟಿತ ಕೃತಿಗಳ ಪ್ರಕಟಣೆ ಇತ್ಯಾದಿ ಕಾರ್ಯಚಟುವಟಿಕೆಗಳು ಉತ್ತಮ ರೀತಿಯಲ್ಲಿ ನಡೆಯುತ್ತಿವೆ. ಆದರೆ ಮಠ, ಮಂದಿರಗಳ ಕೆಲವು ಭಂಡಾರಗಳಲ್ಲಿ ಇಂತಹ ಪ್ರಕ್ರಿಯೆಗಳು ಮಂದಗತಿಯಲ್ಲಿ ಸಾಗುತ್ತಿವೆ. ಭಂಡಾರದ ಅಭಿವೃದ್ಧಿಗಾಗಿ ಹಸ್ತಪ್ರತಿ ತಜ್ಞರ ಅವಶ್ಯಕತೆ ಇರುವುದನ್ನು ಕಂಡುಕೊಳ್ಳಲಾಗಿದೆ.
- ಕರ್ನಾಟಕದ ಪ್ರತಿ ಜಿಲ್ಲೆಗೊಂದರಂತೆ ಹಸ್ತಪ್ರತಿ ಸಂಗ್ರಹ ಸಂರಕ್ಷಣೆಯ ಕೇಂದ್ರವನ್ನು ಸ್ಥಾಪಿಸಿ, ಒಂದು ವಿಶ್ವವಿದ್ಯಾಲಯವನ್ನು ಕೇಂದ್ರವಾಗಿಟ್ಟುಕೊಂಡು ಅಲ್ಲಿ ಹೊಸ ಹೊಸ ಯೋಜನೆಯನ್ನು ರೂಪಿಸುವುದರಿಂದ ಮೂಲೆಗುಂಪಾಗಿರುವ ಅನೇಕ ಹಸ್ತಪ್ರತಿಗಳಿಗೆ ಪುನರ್‌ಜನ್ಮ ನೀಡಿದಂತೆ ಆಗುತ್ತದೆ. ಇದಕ್ಕಾಗಿ ಸರಕಾರ ಒಂದು ಪ್ರತ್ಯೇಕ ಹಸ್ತಪ್ರತಿ ಇಲಾಖೆಯನ್ನು ಸ್ಥಾಪಿಸಿಬೇಕು. ಹಾಗೆಯೇ ನಾಡಿನ ಹಸ್ತಪ್ರತಿತಜ್ಞರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿ ಇವರ ಮೂಲಕ ಹೊಸ ಹೊಸ ಕಾರ್ಯಯೋಜನೆಯನ್ನು ರೂಪಿಸುವುದರಿಂದ ರಾಜ್ಯದ ತುಂಬ ಚದುರಿಹೋಗಿರುವ ಹಸ್ತಪ್ರತಿಗಳು ಹೆಚ್ಚಿನ ರೀತಿಯಲ್ಲಿ ಸಂಗ್ರಹಗೊಳ್ಳುತ್ತವೆ ಎಂಬುದು ನನ್ನ ಆಶಯವಾಗಿದೆ.
- ಸಾಂಪ್ರದಾಯಿಕ ನೆಲೆಗಳಿಂದ ಹಿಡಿದು ಇಂದಿನ ಡಿಜಿಟಲ್ ತಂತ್ರಜ್ಞಾನದ ಆವಿಷ್ಕಾರಗಳವರೆಗೂ ವಿವಿಧ ಹಂತಗಳಲ್ಲಿ ಗ್ರಂಥಸಂರಕ್ಷಣಾ ನೆಲೆಗಳ ವೈಚಾರಿಕ ವಿಶ್ಲೇಷಣೆಗಳನ್ನು ಮಾಡಲಾಗಿದೆ. ಆ ಮೂಲಕ ಎರಡೂ ಪದ್ಧತಿಗಳಲ್ಲಿರುವ ಇತಿ–ಮಿತಿಗಳನ್ನು ಕಂಡುಕೊಳ್ಳಲಾಗಿದೆ. ಇದರ ಜೊತೆಗೆ ಕರ್ನಾಟಕದಲ್ಲಿ ಕೆಲವೇ ಕೆಲವು ಹಸ್ತಪ್ರತಿ ಭಂಡಾರಗಳು ಆಧುನಿಕ ಸಂರಕ್ಷಣಾ

ಕ್ರಮಗಳನ್ನು ಅಳವಡಿಸಿಕೊಂಡಿವೆ. ಉಳಿದ ಭಂಡಾರಗಳು ಸಹ ಆಧುನಿಕ ಸಂರಕ್ಷಣಾ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಅನಿವಾರ್ಯತೆಯಿರುವುದೆಂಬುದನ್ನು ಗುರುತಿಸಲಾಗಿದೆ.

- ಕರ್ನಾಟಕದ ಹಲವು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಆಗಿರುವ ಹಸ್ತಪ್ರತಿ ಭಂಡಾರಗಳು ಹಾಗೂ ಸಂರಕ್ಷಣಾ ಕೇಂದ್ರಗಳಲ್ಲಿ ಹಸ್ತಪ್ರತಿ ಸಂರಕ್ಷಣಾಕಾರರು, ಕಂಪ್ಯೂಟರ್ ಆಪರೇಟರ್ ಹಾಗೂ ಇನ್ನಿತರ ಸಿಬ್ಬಂದಿಗಳು ಸೇವಾಭದ್ರತೆ ಇಲ್ಲದೆ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಬಗ್ಗೆ ಸರಕಾರ ಹಾಗೂ ವಿಶ್ವವಿದ್ಯಾಲಯ ಮಟ್ಟದಲ್ಲಿ ಚರ್ಚೆ ಮಾಡಿ ಸೌಲಭ್ಯವನ್ನು ಕಲ್ಪಿಸಿಕೊಟ್ಟರೆ, ಹಸ್ತಪ್ರತಿಗಳ ಕಾರ್ಯನಿರ್ವಹಣೆಯಲ್ಲಿ ಆಸಕ್ತಿ ತೋರಿಸುವರೆಂಬ ಭಾವನೆ ನನ್ನದಾಗಿದೆ.
- ಬಹುತೇಕ ಹಸ್ತಪ್ರತಿ ಗ್ರಂಥಾಲಯಗಳಲ್ಲಿ ಪರಿಣತ ಸಿಬ್ಬಂದಿಯ ಕೊರತೆ ಇದೆ. ಇರುವ ಸಿಬ್ಬಂದಿಗೆ ಉತ್ತಮ ರೀತಿಯ ತರಬೇತಿ ನೀಡಿ ಸೂಕ್ತ ರೀತಿಯಲ್ಲಿ ಕಾರ್ಯನಿರ್ವಹಣೆಗೆ ಅವಕಾಶ ಕಲ್ಪಿಸುವ ಅನಿವಾರ್ಯತೆಯಿದೆ.
- ಭಾರತದಲ್ಲಿ ಸರ್ ವಿಲಿಯಂ ಜೋನ್ಸ್(೧೮೦೭) ಅವರಿಂದ ಸೂಚಿ ರಚಿಸುವ ಕಾರ್ಯ ಪ್ರಾರಂಭವಾಯಿತು. ಕನ್ನಡಕ್ಕೆ ಬಂದರೆ ೧೮೨೮ರಲ್ಲಿ ಮೆಕೆಂಝಿ ಕಲೆಕ್ಷನ್: ಎ ಡಿಸ್ಕ್ರಿಪ್ಟಿವ್ ಕ್ಯಾಟಲಾಗ್ ಆಫ್ ದಿ ಮ್ಯಾನ್ಯಸ್ಕ್ರಿಪ್ಟ್ಸ್ ಎಂಬುದು ಪ್ರಥಮ ಸೂಚಿಯಾಗಿದೆ. ಆದರೆ ನಾಡಿನಲ್ಲಿರುವ ಕೆಲವೇ ಕೆಲವು ಹಸ್ತಪ್ರತಿ ಗ್ರಂಥಾಲಯಗಳು ಹಾಗೂ ಸಂರಕ್ಷಣಾ ಕೇಂದ್ರಗಳು ಪ್ರತಿಷ್ಠಾನಗಳು ಸೂಚಿಯನ್ನು ತಯಾರಿಸಿವೆ. ಉಳಿದ ಕೇಂದ್ರಗಳು ಮಠ–ಮಂದಿರಗಳು, ವಿಶ್ವವಿದ್ಯಾಲಯಗಳು, ಸೂಚಿ ರಚಿಸುವ ಗೋಜಿಗೆ ಹೋಗಿಲ್ಲ. ಇದರಿಂದ ಹಸ್ತಪ್ರತಿಗಳಲ್ಲಿರುವ ಕೃತಿಗಳ ಬಗ್ಗೆ ಮಾಹಿತಿಯ ಕೊರತೆ ಉಂಟಾಗಿದೆ. ಈ ಕಾರಣದಿಂದ ಎಲ್ಲಾ ಸಂಸ್ಥೆಗಳು ವಿವರಣಾತ್ಮಕ ಸೂಚಿ ತಯಾರಿಸುವ ಅನಿವಾರ್ಯತೆಯಿದೆ. ಸೂಚಿ ತಯಾರಿಸುವುದರಿಂದ ಆಗುವ ಅನುಕೂಲತೆಗಳು ಬಹಳಷ್ಟಿವೆ. **ಉದಾಹರಣೆಗೆ** ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದಿಂದ ಒಟ್ಟು ೫ ವಿವರಣಾತ್ಮಕ ಸೂಚಿ ಸಂಪುಟಗಳನ್ನು ಪ್ರಕಟಿಸಲಾಗಿದೆ. ಈ ಕಾರ್ಯ ಈಗಲೂ ಪ್ರಗತಿಯಲ್ಲಿದೆ.

೧. ಸಂಪುಟ – ೧ರಿಂದ ೪೦೦ ಕಟ್ಟುಗಳಲ್ಲಿ ೭೨೩ ಕನ್ನಡ ಕೃತಿಗಳು.

೨. ಸಂಪುಟ – ೪೦೧ರಿಂದ ೮೦೦ ಕಟ್ಟುಗಳಲ್ಲಿ ೫೪೫ ಕನ್ನಡ ಕೃತಿಗಳು.

೩. ಸಂಪುಟ – ೮೦೧ರಿಂದ ೧೨೦೦ ಕಟ್ಟುಗಳಲ್ಲಿ ೫೯೫ ಕನ್ನಡ ಕೃತಿಗಳು.

೪. ಸಂಪುಟ – ೧೨೦೧ರಿಂದ ೬೦೦ ಕಟ್ಟುಗಳಲ್ಲಿ ೫೭೫ ಕನ್ನಡ ಕೃತಿಗಳು.

೫. ಸಂಪುಟ – ೨೪೦೦ರಿಂದ ೨೮೦೦ ಕಟ್ಟುಗಳಲ್ಲಿ ೬೬೮ ಕನ್ನಡ ಕೃತಿಗಳು.

ಒಟ್ಟು ೩೧೦೬ ಕನ್ನಡ ಕೃತಿಗಳನ್ನು ಗಮನಿಸಬಹುದು.

ಈ ರೀತಿಯಾಗಿ ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯದ ಡಾ.ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದಲ್ಲಿ ಸೂಚಿಗಳನ್ನು ತಯಾರಿಸಲಾಗಿದೆ. ಆದರೂ ಪ್ರಸ್ತುತ ಸಂದರ್ಭದಲ್ಲಿ ಇದರ ಬಗ್ಗೆ ಗಮನ ಹರಿಸಿರುವುದಿಲ್ಲ. ಆದ್ದರಿಂದ ಎಲ್ಲಾ ಸಂಸ್ಥೆಗಳು ವಿವರಣಾತ್ಮಕ ಸೂಚಿ ತಯಾರಿಸುವ ಕಾರ್ಯ ಶೀಘ್ರವೇ ನಡೆಯಬೇಕಾಗಿದೆ.

ಇಂದು ಜ್ಞಾನದ ನವೀಕರಣ ಮತ್ತು ಮುದ್ರಿತ ಪುಸ್ತಕಗಳ ಸೌಲಭ್ಯದಿಂದಾಗಿ ಹಸ್ತಪ್ರತಿಗಳ ಬಗ್ಗೆ ಜನರಲ್ಲಿ ಹಾಗೂ ಕೆಲವು ವಿದ್ವಾಂಸರಲ್ಲಿ ನಿರಾಸಕ್ತಿ ಬೆಳೆಯುತ್ತಲಿದೆ. ಈ ಬಗೆಯ ನಿರಾಸಕ್ತಿಯ ಕಾರಣವಾಗಿ, ಉಪೇಕ್ಷಿತ ವಸ್ತುಗಳಂತೆ ಸಾಮಾನ್ಯರ ವಶದಲ್ಲಿ ಹಸ್ತಪ್ರತಿಗಳು ಹಾಳಾಗುತ್ತಿವೆ.

ಇನ್ನು ವಿದ್ವಾಂಸರ ವಲಯಕ್ಕೆ ಬಂದರೆ ಹಸ್ತಪ್ರತಿಗಳನ್ನು ಓದುವವರ ಸಂಖ್ಯೆ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ಮುದ್ರಿತ ಪ್ರಸ್ತಕಗಳನ್ನು ಓದಿಯೇ ಬೆಳೆದ ಇವರಿಗೆ ರಾಷ್ಟ್ರೀಯ ಮಟ್ಟದಲ್ಲಿ ವಾಚನದ ತರಬೇತಿ ನೀಡುವ ಅನಿವಾರ್ಯತೆ ಎದುರಾಗಿದೆ. ಈ ಕಾರಣದಿಂದ ಈ ಕ್ಷೇತ್ರ ಅತ್ಯುತ್ತಮ ಸ್ಥಾನ ಹೊಂದಬೇಕಾದರೆ ಪದವಿ ಹಾಗೂ ಸ್ನಾತಕೋತ್ತರ ಮಟ್ಟದ ಪಠ್ಯಗಳಲ್ಲಿ ಹಸ್ತಪ್ರತಿ ಹಾಗೂ ಸಂರಕ್ಷಣೆಯ ಬಗ್ಗೆ ಪ್ರಾಥಮಿಕ ತಿಳುವಳಿಕೆಯನ್ನು ಅಳವಡಿಸುವುದರಿಂದ ಯುವಕರಲ್ಲಿ ಕುತೂಹಲ ಮೂಡುತ್ತದೆ.

- ೧೯೭೪ರಲ್ಲಿ ಪ್ರಕಟವಾಗಿರುವ ಕನ್ನಡ ಹಸ್ತಪ್ರತಿಗಳ ಇತಿಹಾಸ ಎಂಬ ಎಚ್.ದೇವೀರಪ್ಪನವರ ಈ ಕೃತಿ ಹಸ್ತಪ್ರತಿಗಳ ಜ್ಞಾನಭಂಡಾರವಾಗಿರುವುದು. ಇಂತಹ ಮಹತ್ವದ ಕೃತಿಗಳು ಹಾಗೂ ಹಸ್ತಪ್ರತಿಗಳಿಗೆ ಸಂಬಂಧಿಸಿದ ಹಲವು ಕೃತಿಗಳು ಮರುಮುದ್ರಣಗೊಳ್ಳಬೇಕಾಗಿದೆ.
- ಅಳಿವಿನಂಚಿನಲ್ಲಿರುವ ಪ್ರಮುಖ ಹಸ್ತಪ್ರತಿಗಳನ್ನು ಡಿಜಿಟಲೀಕರಿಸುವ ಮೂಲಕ, ಅಂತರ್ಜಾಲವನ್ನು ಬಳಸಿಕೊಳ್ಳುವುದರ ಮೂಲಕ ಎಲ್ಲರಿಗೂ ದೊರಕುವಂತೆ ಮಾಡುವುದು, ಸಂವಾದ, ಉಪನ್ಯಾಸ, ಪ್ರಕಟಣೆ ಹಾಗೂ ವಿವಿಧ ಕಾರ್ಯಕ್ರಮಗಳ ಮೂಲಕ ಹಸ್ತಪ್ರತಿ ಸಂರಕ್ಷಣೆಯಲ್ಲಿ ಸಮುದಾಯಗಳ ಸಹಭಾಗಿತ್ವ ಮಾಡಿಸುವ ಕಾರ್ಯ ಕೈಗೊಳ್ಳಬೇಕಾಗಿದೆ.
- ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿರುವ 'ಕನ್ನಡ ಶಾಸ್ತ್ರೀಯ ಭಾಷೆಯ ಅತ್ಯುನ್ನತ ಕೇಂದ್ರ'ವು ಹಳಗನ್ನಡ ಕಾಲದ ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿಸಿ ಡಿಜಿಟಲೀಕರಣ ಮಾಡುತ್ತಿರುವ ಕಾರ್ಯ ಈ ಕ್ಷೇತ್ರದ ಆಶಾದಾಯಕ ಬೆಳವಣಿಗೆ ಆಗಿದೆ.

* * *

ಪರಾಮರ್ಶನ ಗ್ರಂಥಗಳು

೧. ಅಂಗಡಿ ಎಸ್.ಎಸ್., ೨೦೧೦, ಹಸ್ತಪ್ರತಿ ವ್ಯಾಸಂಗ ಸಂಪುಟ-೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅಣ್ಣಿಗೇರಿ ಎಂ.ಎಂ., ೨೦೦೦, ಕರ್ನಾಟಕ ಇತಿಹಾಸ ಸಂಶೋಧಕರು, ಮನೋಹರ ಪ್ರೆಸ್, ಧಾರವಾಡ.

೩. ಉಮಾಪತಿಶಾಸ್ತ್ರಿ ಗೌ.ಮ., ೨೦೦೮, ಯಕ್ಷಗಾನ ಹಸ್ತಪ್ರತಿಗಳ ವಿವರಣಾಸೂಚಿ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

೪. ಕಲಬುರ್ಗಿ ಎಂ.ಎಂ., ೧೯೩೩, ಕನ್ನಡ ಹಸ್ತಪ್ರತಿಶಾಸ್ತ್ರ, ಸಪ್ನ ಬುಕ್ ಹೌಸ್, ಬೆಂಗಳೂರು.

೫. ಕಲಬುರ್ಗಿ ಎಂ.ಎಂ., ೧೯೭೩, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬. ಕಲಬುರ್ಗಿ ಎಂ.ಎಂ., ಹಿರೇಮಠ ಬಿ.ಆರ್., ಅಯ್ಯನಗೌಡರು(ಸಂ), ೧೯೮೮, ಕೊಲ್ಲಾಪುರ ಶ್ರೀ ಲಕ್ಷ್ಮಿಸೇನ ಭಟ್ಟಾರಕ ಜೈನ ಬಸದಿಯ ಹಸ್ತಪ್ರತಿಸೂಚಿ, ಪ್ರಕಾಶನ, ಕನ್ನಡ ಅಧ್ಯಯನ ಪೀಠ, ಧಾರವಾಡ.

೭. ಕಲಬುರ್ಗಿ ಎಂ.ಎಂ., ೨೦೦೬, ಸಂಸ್ಕೃತಿ-ವಿಕೃತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೮. ಕೃಷ್ಣರಾಯ ಅ.ನ., ೧೯೮೧, ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಪ್ರದೀಪ ಪ್ರಕಾಶನ, ವಿಜಯನಗರ, ಬೆಂಗಳೂರು.

೯. ಕೆಳದಿ ಗುಂಡಾಜೋಯಿಸ್, ೧೯೧೯, ಶ್ರೀ ಜಗದ್ಗುರು ಮೂರುಸಾವಿರ ಮಠದ ವರ್ಣನಾತ್ಮಕ ಹಸ್ತಪ್ರತಿ ಸೂಚಿ, ಪ್ರಕಾಶನ ಶ್ರೀ ಜಗದ್ಗುರು ಮೂರು ಸಾವಿರ ಮಠ, ಹುಬ್ಬಳ್ಳಿ.

೧೦. ಕೆಳದಿ ಗುಂಡಾ ಜೋಯಿಸ್, ನಾ.ಗೀತಾಚಾರ್ಯ(ಸಂ), ೧೯೮೭, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ-೧, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೧೧. ಕೇಶವಮೂರ್ತಿ ಕೆ.ಆರ್., ೨೦೧೦, ಹಸ್ತಪ್ರತಿ ಸಂರಕ್ಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಖಂಡೋಬಾ ಪಿ.ಕೆ. ಮತ್ತು ಡಾ.ಸಂಗಮೇಶ ಸವದತ್ತಿ ಮಠ, ೧೯೯೬, ಜೈನ ಸಂಸ್ಕೃತಿ ಮತ್ತು ಸಿದ್ಧಾಂತಗಳು, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

೧೩. ಗುಂಜಾಳ ಎಸ್.ಆರ್., ೨೦೦೨, ದಕ್ಷಿಣ ಭಾರತದಲ್ಲಿಯ ಹಸ್ತಪ್ರತಿ ಗ್ರಂಥಾಲಯಗಳು, ಸಂ.ಕೇಂ.ಗ್ರಂ., ಬೆಳಗಾವಿ.

೧೪. ಚಿದಾನಂದಮೂರ್ತಿ ಎಂ., ೨೦೦೮, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು.

೧೫. ತಿಪ್ಪೇರುದ್ರಸ್ವಾಮಿ ಎಚ್., ೨೦೦೭, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ, ಪ್ರಕಾಶನ, ಮೈಸೂರು.

೧೬. ದೇವೀರಪ್ಪ ಎಚ್., ೧೯೯೭, ಕನ್ನಡ ಹಸ್ತಪ್ರತಿಗಳ ಇತಿಹಾಸ, ಕ.ಸಾ.ಪ, ಬೆಂಗಳೂರು.

೧೭. ದೇವೇಂದ್ರಕುಮಾರ ಹಕಾರಿ, ೧೯೯೬, ಫ.ಗು. ಹಳಕಟ್ಟಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೮. ನಾಗರಾಜ್ ಡಿ.ಆರ್., ೨೦೦೨, ಸಂಸ್ಕೃತಿ ಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೯. ನಾವಡ ಎ.ವಿ. ಮತ್ತು ಅಂಗಡಿ ಎಸ್.ಎಸ್.(ಸಂ), ೨೦೦೨, ಹಸ್ತಪ್ರತಿ ವ್ಯಾಸಂಗ ಸಂ.೧, ಗ್ರಂಥಸಂಪಾದನೆಯ ವಿವಿಧ ವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦. ಪಾಟೀಲ ಬಿ.ಎಂ., ೨೦೦೬, ವಚನ ಗುಮ್ಮಟ, ಡಾ.ಫ.ಗು. ಹಳಕಟ್ಟಿಯವರ ಜೀವನ ಮತ್ತು ಸಾಹಿತ್ಯ, ಹಿತಚಿಂತಕ ಪ್ರಕಾಶನ, ಮಹಾಲಿಂಗಪುರ.

೨೧. ಪುಟ್ಟಸ್ವಾಮಿ ಬಿ.ಎಸ್., ೨೦೧೨, ಕರ್ನಲ್ ಮೆಕೆಂಝಿ ಮತ್ತು ಕೈಫಿಯತ್ತುಗಳು, ಮನೋಜ್ ಪಬ್ಲಿಕೇಷನ್, ಬೆಂಗಳೂರು.

೨೨. ಪೂಜಾರ ವ್ಹಿ.ಜಿ., ೧೯೯೧, ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು, ಪುಸ್ತಕ ಅಕಾಡೆಮಿ, ಕಲಬುರಗಿ

೨೩. ಪೆರುಮಾಳ್ ಸಿ.(ಮೂಲ) ಮೋಹನಕೃಷ್ಣ(ಅನು), ೨೦೦೫, ಲೇ: ತಾಳೆಗರಿ ಹಸ್ತಪ್ರತಿ ಸಂರಕ್ಷಣೆ(ಹಸ್ತಪ್ರತಿ ಅಧ್ಯಯನ (ಸಂ.) ಡಾ.ವೀರೇಶ ಬಡಿಗೇರ, ಸಂ.೨, ಜನವರಿ-ಜುಲೈ ೨೦೦೫), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೪. ಬರಗೂರು ರಾಮಚಂದ್ರಪ್ಪ(ಪ್ರ.ಸಂ.), ೧೯೮೯, ಸಂಸ್ಕೃತಿ, ಶ್ರಮ ಮತ್ತು ಸೃಜನಶೀಲತೆ (ಉಪಸಂಸ್ಕೃತಿ ಮಾಲೆ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೫. ಬೇನಾಳ ಎಚ್.ಎಸ್., ೨೦೧೨, ಗ್ರಂಥಾಲಯಗಳು ಮತ್ತು ಗಣಕೀಕರಣ ನಡೆದು ಬಂದ ದಾರಿ, ಸಹನಾ ಪ್ರಕಾಶನ, ಬೆಂಗಳೂರು.

೨೬. ಭಾನುಮತಿ ವೈ.ಸಿ.(ಸಂ), ೧೯೮೮೪, ಸಹ್ಯಾದ್ರಿ ಖಂಡ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೭. ರಮೇಶ ಚಿ.ಗೋ., ೧೯೯೯, ಭಾರತ ವಸ್ತುಸಂಗ್ರಹಾಲಯಗಳು, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು.

೨೮. ರವೀಂದ್ರನಾಥ ಕೆ., ಮತ್ತು ಎಫ್.ಟಿ.ಹಳ್ಳಿಕೇರಿ, ೨೦೦೨, ಹಸ್ತಪ್ರತಿ ಭಂಡಾರಗಳು, ಹಸ್ತಪ್ರತಿ ವ್ಯಾಸಂಗ(೨), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯. ರವೀಂದ್ರನಾಥ ಕೆ., ಮತ್ತು ಎಫ್.ಟಿ.ಹಳ್ಳಿಕೇರಿ(ಸಂ), ೨೦೦೬, ಹಸ್ತಪ್ರತಿಸೂಚಿ ಸಂಪುಟ–೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ರವೀಂದ್ರನಾಥ ಕೆ., ೨೦೧೨, ಹಸ್ತಪ್ರತಿ ವ್ಯಾಸಂಗ ಸಂಪುಟ–೧೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೧. ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು.

೩೨. ರಾಜಗೋಪಾಲಾಚಾರ್ಯ ಎಂ., ೧೯೯೧, ತಾಡವೋಲೆ ಗ್ರಂಥಸೂಚಿ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೩೩. ರಾಜೇಶ ಹ.ಕ., ೨೦೦೮, ಸಾಹಿತ್ಯ ಶೋಧ(ಸಂಶೋಧನಾ ಲೇಖನಗಳ ಸಂಗ್ರಹ), ಪ್ರಕಟಣೆ: ಪರಂಪರಾವಲೋಕನ ಸಮಿತಿ, ಮಂಡ್ಯ.

೩೪. ರಾಠೋಡ ಪಿ.ಕೆ., ೧೯೯೮, ನಾಗನೂರು ರುದ್ರಾಕ್ಷಿ ಮಠದ ಹಸ್ತಪ್ರತಿಸೂಚಿ, ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ, ಬೆಳಗಾವಿ.

೩೫. ರಾಠೋಡ ಪಿ.ಕೆ, ೨೦೦೪, ಗದಗ ತೋಂಟದಾರ್ಯ ಮಠದ ಹಸ್ತಪ್ರತಿಸೂಚಿ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

೩೬. ವೀರಣ್ಣ ರಾಜೂರ, ೧೯೯೨, ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿಸೂಚಿ ಸಂಪುಟ ೬ ಮತ್ತು ೭, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೭. ವೀರೇಶ ಬಡಿಗೇರ, ೨೦೦೦, ಕನ್ನಡ ಹಸ್ತಪ್ರತಿಗಳು ಮತ್ತು ಸಾಫ್ಟ್‌ವೇರ್ ತಂತ್ರಜ್ಞಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೮. ವೀರೇಶ ಬಡಿಗೇರ ಮತ್ತು ಡಾ.ಎಸ್.ಆರ್.ಚನ್ನವೀರಪ್ಪ(ಸಂ), ೨೦೦೧, ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ ಸಂಪುಟ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೯. ವೀರೇಶ ಬಡಿಗೇರ, ೨೦೦೩, ಹಸ್ತಪ್ರತಿ ವ್ಯಾಸಂಗ ಸಂಪುಟ-೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೦. ವೀರೇಶ ಬಡಿಗೇರ, ೨೦೦೪, ಹಸ್ತಪ್ರತಿ ವ್ಯಾಸಂಗ ಸಂಪುಟ-೧೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೧. ವೀರೇಶ ಬಡಿಗೇರ, ೨೦೦೫, ಹಲಗೆ ಬಳಪ, ಮಯ ಪ್ರಕಾಶನ, ಕಮಲಾಪುರ.

೪೨. ವೀರೇಶ ಬಡಿಗೇರ ಮತ್ತು ಡಾ.ಎಸ್.ಆರ್.ಚನ್ನವೀರಪ್ಪ(ಸಂ), ೨೦೦೬, ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ ಸಂಪುಟ-೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೩. ವೀರೇಶ ಬಡಿಗೇರ, ೨೦೧೩, ಹಸ್ತಪ್ರತಿಸೂಚಿ ಸಂಪುಟ-೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೪. ವೀರೇಶ ಬಡಿಗೇರ, ೨೦೧೪, ಹಸ್ತಪ್ರತಿ ವ್ಯಾಸಂಗ-೧೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೫. ವೀರೇಶ ಬಡಿಗೇರ, ೨೦೧೫, ಹಸ್ತಪ್ರತಿ ವ್ಯಾಸಂಗ-೧೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೬. ವೆಂಕಟೇಶ ಇಂದ್ವಾಡಿ, ೨೦೦೩, ದೇವಚಂದ್ರನ ರಾಜಾವಳಿ ಕಥೆ: ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೭. ಶಿವಣ್ಣ ಎಸ್., ೧೯೯೧, ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿಸೂಚಿ ಸಂಪುಟ ೧, ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ.

೪೮. ಶಿವಣ್ಣ ಎಸ್., ೧೯೯೪, ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಡಂಬಳ, ಗದಗ.

೪೯. ಶಿವಣ್ಣ ಎಸ್., ೧೯೯೫, ಕನ್ನಡ ಸಾಹಿತ್ಯ ಪರಿಷತ್ತಿನ(ತ್ರೈವಾರ್ಷಿಕ ಯೋಜನೆಯ) ಹಸ್ತಪ್ರತಿಸೂಚಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೫೦. ಶ್ರೀಮತಿ ಉಷಾ ಸುರೇಶ್, ೨೦೦೩, 'ತಾಳೆಗರಿಗಳು ಮತ್ತು ಕಾಗದ ದಾಖಲೆಗಳ ಸಂರಕ್ಷಣೆ ಏಕೆ? ಮತ್ತು ಹೇಗೆ? ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

೫೧. ಸಣ್ಣಯ್ಯ ಬಿ.ಎಸ್., ೧೯೮೮, ಕನ್ನಡ ಹಸ್ತಪ್ರತಿಗಳ ಮೈಕ್ರೋಫಿಲಂ ಸೂಚಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೫೨. ಸಣ್ಣಯ್ಯ ಬಿ.ಎಸ್., ೧೯೯೨, ಹಸ್ತಪ್ರತಿಶಾಸ್ತ್ರ ಪರಿಚಯ, ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು.

೫೩. ಸಣ್ಣಯ್ಯ ಬಿ.ಎಸ್., ೧೯೯೨, ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕಸೂಚಿ ಸಂಪುಟ–೧, (ಅ.ಚಾ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೫೪. ಸಣ್ಣಯ್ಯ ಬಿ.ಎಸ್., ೨೦೦೩, ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ(ಸಂಪುಟ–೩) ಪ್ರಕಾಶಕರು: ಶ್ರುತಕೇವಲಿ ಎಜುಕೇಷನ್ ಟ್ರಸ್ಟ್, ಶ್ರವಣಬೆಳಗೊಳ.

೫೫. ಸಿದ್ಧಲಿಂಗಯ್ಯ, ೨೦೦೭, 'ಜನಸಂಸ್ಕೃತಿ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೬. ಸೀತಾರಾಮಯ್ಯ ಎಂ.ವಿ ಹಾಗೂ ಚಿದಾನಂದಮೂರ್ತಿ ಎಂ., ೧೯೮೩, ಹಸ್ತಪ್ರತಿಶಾಸ್ತ್ರ ವಿಷಯಕ ಪ್ರಬಂಧಗಳ ಸಂಕಲನ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೫೭. ಸೀತಾರಾಮಯ್ಯ ಎಂ.ವಿ.(ಸಂ), ೨೦೧೧, ಶ್ರೀ ವಿಜಯಕೃತ ಕವಿರಾಜಮಾರ್ಗಂ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೫೮. ಹಳ್ಳಿಕೇರಿ ಎಫ್.ಟಿ., ಮತ್ತು ಕೆ. ರವೀಂದ್ರನಾಥ(ಸಂ), ೨೦೦೦, ಹಸ್ತಪ್ರತಿಸೂಚಿ ಸಂಪುಟ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೯. ಹಳ್ಳಿಕೇರಿ ಎಫ್.ಟಿ., ಮತ್ತು ಕೆ. ರವೀಂದ್ರನಾಥ(ಸಂ), ೨೦೦೨, ದಶಕದ ಕನ್ನಡ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೦. ಹಳ್ಳಿಕೇರಿ ಎಫ್.ಟಿ., ೨೦೦೬, ಹಸ್ತಪ್ರತಿ ಅಧ್ಯಯನ ಸಂಪುಟ–೪, ಸಂಚಿಕೆ–೧(ಜುಲೈ–ಡಿಸೆಂಬರ್–೨೦೦೬) ಡಾ.ಬಿ.ನಂಜುಂಡಸ್ವಾಮಿಯವರ ಲೇಖನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೧. ಹಳ್ಳಿಕೇರಿ ಎಫ್.ಟಿ., ೨೦೦೮, ಹಸ್ತಪ್ರತಿ ವ್ಯಾಸಂಗ ಸಂಪುಟ–೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೨. ಹಳ್ಳಿಕೇರಿ ಎಫ್.ಟಿ., ೨೦೧೪, ಕಂಠಪತ್ರ–೩, ವಿಕಾಸ ಪ್ರಕಾಶನ, ಹೊಸಪೇಟೆ.

೬೩. ಹಿರೇಮಠ ಬಿ.ಕೆ., ೧೯೯೨, ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ವೀರಶೈವ ಅಧ್ಯಯನ ವೇದಿಕೆ, ಶ್ರೀ ಹಿರೇಮಠ ಕಸಬಾ ಜಂಬಗಿ ತಾ. ಮುಧೋಳ, ಜಿ.ಬಾಗಲಕೋಟೆ.

೬೪. ಹಿರೇಮಠ ಬಿ.ಆರ್., ೧೯೯೨, ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿಸೂಚಿ ಸಂಪುಟ–೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೫. ಹಿರೇಮಠ ಬಿ.ಆರ್., ೧೯೯೩, ಕನ್ನಡ ಹಸ್ತಪ್ರತಿ ಲಿಪಿಕಾರರು, ಪ್ರಶಸ್ತಿಗಳು, ಅರುಣೋದಯ ಪ್ರಕಾಶನ, ಧಾರವಾಡ.

ಅನುಬಂಧ

ಸಾಂಸ್ಥಿಕ ಹಸ್ತಪ್ರತಿ ಭಂಡಾರಗಳು

ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರ,
ಬೆಂಗಳೂರು ವಿಶ್ವವಿದ್ಯಾಲಯ

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರ,
ಮೈಸೂರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ತಜ್ಞೆ ಕಾವ್ಯರಮಾ ಅವರೊಂದಿಗೆ



ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಒಳನೋಟ, ಮೈಸೂರು

ಪ್ರಾಚ್ಯ ವಿದ್ಯಾ ಸಂಶೋಧನಾಲಯ(ಓ.ಆರ್.ಐ), ಮೈಸೂರು

ಓ.ಆರ್.ಐ.ನ ಹಸ್ತಪ್ರತಿ ಭಂಡಾರದ ಒಳನೋಟ

ಹಸ್ತಪ್ರತಿ ಭಂಡಾರ, ಗುಲ್ಬರ್ಗಾ ವಿಶ್ವವಿದ್ಯಾಲಯ

ಪ್ರೊ. ನಾಗಾಬಾಯಿ ಬುಳ್ಳಾ ಅವರೊಂದಿಗೆ,
ಗುಲ್ಬರ್ಗಾ ವಿಶ್ವವಿದ್ಯಾಲಯ

ಹಸ್ತಪ್ರತಿ ಸಂರಕ್ಷಣಗಾರ ಡಾ. ಸುಪುತ್ರ ಅವರೊಂದಿಗೆ
ಗುಲ್ಬರ್ಗಾ ವಿಶ್ವವಿದ್ಯಾಲಯ

ಗುಲ್ಬರ್ಗಾ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿನ ಹಸ್ತಪ್ರತಿಗಳ
ಸಂರಕ್ಷಣೆಯ ಬಗೆ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು

ಪತ್ರಾಗಾರ ಇಲಾಖೆಯಲ್ಲಿ ದಾಖಲೆಗಳನ್ನು ಸಂರಕ್ಷಿಸಿರುವ ಬಗೆ

ಕೆಳದಿ ವಸ್ತುಸಂಗ್ರಹಾಲಯದಲ್ಲಿ ಹಸ್ತಪ್ರತಿ ತಜ್ಞರಾದ ಕೆಳದಿ
ಡಾ.ವೆಂಕಟೇಶ ಜೋಷಿ ಅವರೊಂದಿಗೆ

ಕೆಳದಿ ವಸ್ತುಸಂಗ್ರಹಾಲಯದ ಹಸ್ತಪ್ರತಿ ಭಂಡಾರದಲ್ಲಿನ
ಹಸ್ತಪ್ರತಿಗಳನ್ನು ಸಂರಕ್ಷಿಸುವ ಬಗೆ

ಕೆಳದಿ ವಸ್ತು ಸಂಗ್ರಹಾಲಯದಲ್ಲಿ ಕಡತಗಳ ಸಂಗ್ರಹ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿ ಬೃಹತ್ ಹಸ್ತಪ್ರತಿ ಹಾಗೂ
ಡಾ.ಶೇಷಗಿರಿರಾವ್ ಅವರೊಂದಿಗೆ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿನ ಅತ್ಯಂತ ಚಿಕ್ಕ ಹಸ್ತಪ್ರತಿ

ಹಸ್ತಪ್ರತಿಗಳಿಗೆ ಮಸಿಯನ್ನು ಹಚ್ಚುತ್ತಿರುವುದು

ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ.ಶಾಂತಾ ಇಮ್ರಾಪೂರ ಅವರೊಂದಿಗೆ, ಡಾ.ಆರ್.ಸಿ.ಹಿರೇಮಠ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರ

ಡಾ.ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದಲ್ಲಿನ
ಹಸ್ತಪ್ರತಿಗಳನ್ನು ಸಂರಕ್ಷಿಸಿರುವ ಬಗೆ

ಹಸ್ತಪ್ರತಿಶಾಸ್ತ್ರ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಸ್ತಪ್ರತಿ ಭಂಡಾರ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಸ್ತಪ್ರತಿ ಭಂಡಾರದ ಒಳನೋಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ



ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿ ಹಸ್ತಪ್ರತಿಗಳನ್ನು ಸ್ವಚ್ಛಗೊಳಿಸುತ್ತಿರುವುದು

ಹಸ್ತಪ್ರತಿ ಭಂಡಾರದಲ್ಲಿ ಹಸ್ತಪ್ರತಿಗಳನ್ನು ಜೋಡಿಸಿರುವ ಬಗೆ

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿರುವ ವಿವಿಧ ಹಸ್ತಪ್ರತಿಗಳು

ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ, ಧರ್ಮಸ್ಥಳದಲ್ಲಿ ಡಾ.ವಿಘ್ನರಾಜ ಹಾಗೂ ಪ್ರೊ.ಪಡಶೆಟ್ಟಿ ಅವರೊಂದಿಗೆ

ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನದಲ್ಲಿರುವ
ಹಸ್ತಪ್ರತಿಗಳ ಸಂರಕ್ಷಣೆಗಾಗಿ ಕೀಟ ನಿಯಂತ್ರಣ ಕೊಠಡಿ

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾದ ಡಾ.ರಾಮೇಗೌಡ
ಅವರೊಂದಿಗೆ

ಕನ್ನಡ ಸಾಹಿತ್ಯ ಪರಿಷತ್ತಿನ ಬಿ.ಎಂ.ಶ್ರೀ. ಅಚ್ಚುಕೂಟ

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಸ್ತಪ್ರತಿಗಳನ್ನು ಸಂರಕ್ಷಿಸಿರುವ ಬಗೆ

ಮಠದ ಸಂಸ್ಥೆಗಳ ಹಸ್ತಪ್ರತಿ ಭಂಡಾರಗಳು

ಶಿವಯೋಗ ಮಂದಿರದ ಶ್ರೀ ವಿಜಯ ಮಹಾಂತೇಶ ಗ್ರಂಥಾಲಯ, ಬದಾಮಿ

ಶಿವಯೋಗ ಮಂದಿರದ ಶ್ರೀ ವಿಜಯ ಮಹಾಂತೇಶ ಹಸ್ತಪ್ರತಿ ಭಂಡಾರದಲ್ಲಿ ಹಸ್ತಪ್ರತಿ ಕಟ್ಟುಗಳ ಸಂರಕ್ಷಣೆಗಾಗಿ ಕಬ್ಬಿಣದ ಪೆಟ್ಟಿಗೆಗಳನ್ನು ಬಳಸಿರುವುದು

ಗೋಡೆಯೊಳಗೆ ದೊರೆತಿರುವ ಕನ್ನಡ ಲೀಲಾವತಿ ಗಣಿತದ ಹಸ್ತಪ್ರತಿ,
ಶಿವಯೋಗ ಮಂದಿರ, ಬದಾಮಿ

ಶಿವಯೋಗ ಮಂದಿರದ ಹಸ್ತಪ್ರತಿ ಭಂಡಾರದ ಹಸ್ತಪ್ರತಿಗಳ ಸ್ಥಿತಿ

ನಾಗನೂರು ಶ್ರೀ ರುದ್ರಾಕ್ಷಿಮಠದ ಲಿಂಗಾಯತ ಸಂಶೋಧನ ಕೇಂದ್ರ, ಬೆಳಗಾವಿ

ನಾಗನೂರು ಶ್ರೀ ರುದ್ರಾಕ್ಷಿಮಠದ ಮಹಾಸ್ವಾಮಿಗಳು ಅವರೊಂದಿಗೆ

ನಾಗನೂರು ರುದ್ರಾಕ್ಷಿ ಮಠದಲ್ಲಿ ಹಸ್ತಪ್ರತಿಗಳ ಸಂರಕ್ಷಿಸಿರುವ ಬಗೆ

ಬೆಳಗಾವಿ-ನಾಗನೂರು ರುದ್ರಾಕ್ಷಿಮಠದ ಹಸ್ತಪ್ರತಿ ಭಂಡಾರದ ಬಗ್ಗೆ
ಮಾಹಿತಿ ಪಡೆಯುತ್ತಿರುವುದು

ನಾಗನೂರು ರುದ್ರಾಕ್ಷಿ ಮಠದಲ್ಲಿ ಪತ್ರಾಗಾರ ಇಲಾಖೆಯ
ಅಧಿಕಾರಿಗಳು ಹಸ್ತಪ್ರತಿ ಸಂರಕ್ಷಣೆ ಬಗ್ಗೆ ಮಾಹಿತಿ ನೀಡುತ್ತಿರುವುದು

ಹುಬ್ಬಳ್ಳಿಯ ಮೂರು ಸಾವಿರ ಮಠದ ಮಹಾಸ್ವಾಮಿಗಳು
ಅವರೊಂದಿಗೆ

ಹುಬ್ಬಳ್ಳಿಯ ಮೂರು ಸಾವಿರ ಮಠದ ಹಸ್ತಪ್ರತಿ ಭಂಡಾರದ
ಒಳನೋಟ

ಮೂರು ಸಾವಿರ ಮಠದ ಅಧಿಕಾರಿಗಳಿಂದ ವರ್ಣಾನಾತ್ಮಕ ಸೂಚಿ
ಪುಸ್ತಕವನ್ನು ಪಡೆಯುತ್ತಿರುವುದು

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮಹಾಸಂಸ್ಥಾನ,
ಚಿತ್ರದುರ್ಗ

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮಹಾಸಂಸ್ಥಾನದ
ಡಾ. ಮಲ್ಲಿಕಾರ್ಜುನ ಅವರಿಂದ ಮಾಹಿತಿ ಪಡೆಯುತ್ತಿರುವುದು



ಬೃಹನ್ಮಠ ಮಹಾಸಂಸ್ಥಾನ ಹಸ್ತಪ್ರತಿ ಭಂಡಾರದ ಒಳನೋಟ

ಶ್ರೀ ಮನ್ನಿರಂಜನ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಡಂಬಳ, ಗದಗ

ಶ್ರೀ ಮನ್ನಿರಂಜನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ
ಹಸ್ತಪ್ರತಿ ಭಂಡಾರದ ಸಂರಕ್ಷಣಾಗಾರ ಅವರೊಂದಿಗೆ

ಶ್ರೀ ಹೊಂಬುಜ ಜೈನಮಠ, ಹೊಂಬುಜ

ಶ್ರೀ ಶಂಕರ ಅದ್ವೈತ ಶೋಧ ಕೇಂದ್ರ, ಶೃಂಗೇರಿ

ವೈಯಕ್ತಿಕ ಹಸ್ತಪ್ರತಿ ಸಂಗ್ರಹಗಾರರು

ಹಸ್ತಪ್ರತಿ ತಜ್ಞರಾದ ಡಾ.ವೈ.ಸಿ.ಭಾನುಮತಿ ಅವರೊಂದಿಗೆ

ಹಸ್ತಪ್ರತಿ ತಜ್ಞರಾದ ಶ್ರೀ ನಂಜುಂಡಸ್ವಾಮಿ ಅವರೊಂದಿಗೆ

ಡಾ.ಕೆಳದಿ ಗುಂಡಾಜೋಯಿಸ ಅವರಿಂದ ಮಾಹಿತಿ
ಪಡೆಯುತ್ತಿರುವುದು

ಹಸ್ತಪ್ರತಿ ತಜ್ಞರಾದ ಡಾ. ಪಾದೇಕಲ್ಲು ವಿಷ್ಣುಭಟ್ಟರು

ಬಳ್ಳಾರಿಯ ಡಾ.ಕೆ.ಎಂ.ವೀರಭದ್ರಯ್ಯ ಅವರು ಸಂಗ್ರಹಿಸಿದ
ಹಸ್ತಪ್ರತಿಗಳು

ಹುಬ್ಬಳ್ಳಿಯ ಶ್ರೀ ಕೆ.ಎಂ.ಶಿವಪ್ಪ ಅವರು ಸಂಗ್ರಹಿಸಿದ ಹಸ್ತಪ್ರತಿಗಳು



ಶ್ರೀ ಕೆ.ಎಂ.ಶಿವಪ್ಪನವರು ಸಂಗ್ರಹಿಸಿದ ಪ್ರಮುಖ ಹಸ್ತಪ್ರತಿಗಳು

ಶ್ರೀ ಕೆ.ಎಂ.ಶಿವಪ್ಪ ಅವರು ಸಂಗ್ರಹಿಸಿದ ವಿವಿಧ ಬಗೆಯ ಹಸ್ತಪ್ರತಿಗಳು



ಶ್ರೀ ಕೆ.ಎಂ.ಶಿವಪ್ಪ ಅವರ ಸಂಗ್ರಹದಲ್ಲಿ ಕಾಗದ ಪ್ರತಿ

AKSHARA GRANTHALAYA
ACC.NO. 135131



ಹಸ್ತಪ್ರತಿಶಾಸ್ತ್ರ ವಿಭಾಗ